ವಿಷಯಾನುಕ್ರಮಣಿಕೆ

ಶ್ರೀ ಭಗವದ್ರಾಮಾನುಜಾಚಾರ್ಯವಿರಚಿತ

ವೇದಾರ್ಥಸಂಗ್ರಹ

ಅಸುವ್ವಾದಕರು :

ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ – 573211
ದೂ. : 08175 – 273820
2005

ಶ್ರೀಮದ್ಭಗವದ್ರಾಮಾನುಜರ ಕೊಡುಗೆ

ಶ್ರೀ ಭಗವದ್ರಾಮಾನುಜರು ಉಪನಿಷತ್ತುಗಳಲ್ಲಿರುವ ಅದ್ವೈತ, ದ್ವೈತ ವಾಕ್ಯಗಳ ಸಮನ್ವಯ ಮಾಡಲು ಪ್ರಯತ್ನಿಸಿರುವ ಮೂರನೆಯ ವಿಶಿಷ್ಟಾದ್ವೈತವು ವೇದಾಂತದರ್ಶನದ ಒಂದು ಪ್ರಮುಖ ಭಾಗ. ಬ್ರಹ್ಮ, ಜೀವ, ಜಗತ್ತು ಎಂದು ಮೂರು ತತ್ತ್ವಗಳು. ದ್ವೈತ ಮತದಲ್ಲಿ ಭಗವಂತ-ಜೀವ, ಜೀವ-ಪ್ರಕೃತಿ, ಜೀವ-ಜೀವ, ಪ್ರಕೃತಿ-ಪ್ರಕೃತಿ, ಪ್ರಕೃತಿ-ಭಗವಂತ ಎಂದು ಪಂಚಭೇದಗಳು ; ಇವೆಲ್ಲ ಬೇರೆ, ಬೇರೆ, ಸ್ವರೂಪವೂ ಬೇರೆ. ಈ ಮೂರು ತತ್ತ್ವಗಳೂ ಅಭೇದ, ಎಲ್ಲವೂ ಬ್ರಹ್ಮವೇ ಎನ್ನುವದು ಅದ್ವೈತ. ಜೀವ-ಜಗತ್ತು ಪರಮಾತ್ಮನಿಗೆ ಶೇಷಭೂತ, ಅವನ ಶರೀರದಂತೆ ಇವೆ ; ಸಕಲ ಜೀವಾತ್ಮ ವಸ್ತುಗಳಿಗೂ ಆವರಣವಾಗಿರುವ ಶರೀರಗಳು ಬೇರೆಯೇ ಹೊರತು, ಸ್ವರೂಪ ಒಂದೇ ಎನ್ನುವದು ವಿಶಿಷ್ಟಾದ್ವೈತ ಸಿದ್ಧಾಂತ,

ಭಗವಂತನು ಜಗತ್ತಿಗೆ ಉಪಾದಾನವೋ, ನಿಮಿತ್ತ ಕಾರಣನೋ ? ಎಂದರೆ ಎರಡೂ ಕಾರಣವೂ ಭಗವಂತನೇ, ಜೇಡ-ಜೇಡರ ಬಲೆಯಂತೆ ; ಜೇಡನೇ ಭಗವಂತ, ಜೇಡರ ಬಲೆಯೇ ಜಗತ್ತು ಎಂಬುದಾಗಿ ಅದ್ವೈತ, ವಿಶಿಷ್ಟಾದ್ವೈತಗಳೆರಡೂ ಹೇಳುತ್ತವೆ. ಶೃತಿಗಳಲ್ಲಿ 'ತತ್ತ್ವಮಸಿ' ' ಅಹಂಬ್ರಹ್ಮಾಸ್ಮಿ' ಮುಂತಾದ ವಾಕ್ಯಗಳು ಅದ್ವೈತವನ್ನೂ, 'ದ್ವಾಸುಪರ್ಣಾ' ಮುಂತಾದ ವಾಕ್ಯಗಳು ದ್ವೈತವನ್ನೂ ಹೇಳುತ್ತವೆ. ತಮ್ಮ ಸಮನ್ವಯದಿಂದ ಶ್ರೀ ರಾಮಾನುಜಾಚಾರ್ಯರು ಇವುಗಳಿಗೆ ವಿರೋಧವಾಗದಂತೆ, 'ಗೋಪಿಣ್ಯಾಕ'ನ್ಯಾಯದಿಂದ 'ಘಟಶೃತಿ'ಗಳ ಮೂಲಕ ಅವುಗಳನ್ನು ವಿವರಿಸಿ, ಈ ಎರಡೂ ಶೃತಿಗಳಿಗೂ ಸಮಾನ ಪ್ರಾಮುಖ್ಯವನ್ನು ಕೊಟ್ಟಿದ್ದಾರೆ ! ಪರಮಾತ್ಮನು ಸಗುಣನೋ, ನಿರ್ಗುಣನೋ ? ಈ ಎರಡನ್ನೂ ಹೇಳುವ ಶೃತಿಗಳಿವೆ -ನಿರ್ಗುಣ ಶೃತಿಗಳಿಗೆ ಭಗವಂತನಲ್ಲಿ ದುರ್ಗುಣಗಳಿಲ್ಲ ಎನ್ನುವದು ತಾತ್ಪರ್ಯ ; ಸಗುಣಶೃತಿಗಳಿಗೆ ಭಗವಂತನಲ್ಲಿ ಎಲ್ಲ ಕಲ್ಯಾಣ ಗುಣಗಳೂ ಇವೆ ಎನ್ನುವಲ್ಲಿ ತಾತ್ಪರ್ಯ ; ಈ ವಿವರಣೆಯ ಮೂಲಕ ಶ್ರೀರಾಮಾನುಜರು ಎರಡು ಶೃತಿಗಳನ್ನೂ ಸಮನ್ವಯ ಮಾಡಿದ್ದಾರೆ. ಆಚಾರ್ಯ ಶಂಕರರು 'ಬ್ರಹ್ಮಸತ್ಯಂ ಜಗನ್ಮಿಥ್ಯಾ' ಎಂದರೆ, ಆಚಾರ್ಯರಾಮಾನುಜರು ಬ್ರಹ್ಮ, ಜಗತ್ತು ಎರಡೂ ಸತ್ಯವೇ ಎನ್ನುತ್ತಾರೆ. ಶಂಕರರು 'ಭಕ್ತಿ'ಯನ್ನು ಹೇಳಿದರೂ, ಭಕ್ತಿ ಜ್ಞಾನಕ್ಕೆ ಮೆಟ್ಟಲು ಎಂದು ಪರಿಗಣಿಸಿದವರು, ಭಕ್ತಿಯೂ, ಶರಣಾಗತಿಯೂ ಮೋಕ್ಷಕ್ಕೆ ಸಾಧನವೆಂದೇ ಬೋಧಿಸಿದವರು, ದಕ್ಷಿಣದಲ್ಲಿ ಭಕ್ತಿಪಂಥವನ್ನು ಸ್ಥಾಪಿಸಿ ಪ್ರವರ್ಧಮಾನಕ್ಕೆ ತಂದವರು ಶ್ರೀರಾಮಾನುಜರು. ಎಲ್ಲ ಜೀವಿಗಳೂ ಸಮಾನವಾಗಿ ಜ್ಞಾನಾನಂದ ಸ್ವರೂಪಿಗಳೇ, ಆದುದರಿಂದ ಸಕಲ ಜೀವಾತ್ಮರೂ ಭಗವತ್ಸಾಕ್ಷಾತ್ಕಾರ-ಮೋಕ್ಷ ಸಾಮ್ರಾಜ್ಯವನ್ನು ಹೊಂದಬಹುದೆಂದು ಸ್ಥಾಪಿಸಿ, ಶ್ರೀ ಭಗವದ್ರಾಮಾನುಜರು ಪರಮಪದಕ್ಕೆ ಮಾರ್ಗದರ್ಶಿಗಳಾದರು. ಭಗವಂತನ ಮಾಯೆಯಿಂದ ಬಂಧನಕ್ಕೆ ಒಳಗಾಗಿರುವ ಜೀವರುಗಳು ಭಕ್ತಿ, ಪ್ರಪತ್ತಿ (ಶರಣಾಗತಿ)ಗಳ ಮೂಲಕ ಭಗವಂತನನ್ನು ಆರಾಧಿಸಿ ಆತನ ಅನುಗ್ರಹದಿಂದ ಮೋಕ್ಷವನ್ನು ಪಡೆಯುತ್ತಾರೆ, ಆದುದರಿಂದ ಪರಮಪುರುಷಾರ್ಥಪ್ರಾಪ್ತಿಗೆ ಪರಮಾತ್ಮನ ಪರಿಪೂರ್ಣಾನುಗ್ರಹವೇ ಕಾರಣವೆನ್ನುವದು ರಾಮಾನುಜರ ಮತ.

ರಕ್ಷಾಪುಟದ ಮರುಹಾಳೆಯಲ್ಲಿ ಮುಂದುವರೆದಿದೆ

ಅಧ್ಯಾತ್ಮಗ್ರಂಥಾವಳಿ

ಶ್ರೀಭಗವದ್ರಾಮಾನುಜಾಚಾರ್ಯವಿರಚಿತ

ವೇದಾರ್ಥಸಂಗ್ರಹ

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ

ಪ್ರಮಾಣ ವಚನಗಳ ಅನುಕ್ರಮಣಿಕೆ - ಮುಂತಾದವುಗಳೊಡನೆ

ಅನುವಾದಕರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ : 102

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ-573211

ದೂ : 08175-273820

2005

ಒಂದನೆಯ ಸಂಸ್ಕರಣ : 1959 (1000 ಪ್ರತಿಗಳು)
ಎರಡನೆಯ ಸಂಸ್ಕರಣ : 2005 (500 ಪ್ರತಿಗಳು)

ಪುಟಗಳು : 34 + 232

ಬೆಲೆ : ರೂ. 50/-

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರಜೋಡಣೆ
ಪ್ರಶಾಂತ್ ಎಂಟರ್‌ಪ್ರೈಸಸ್
ನಂ.45, ನಾಗಸಂದ್ರ
ತ್ಯಾಗರಾಜನಗರ ಪೋಸ್ಟ್
ಬೆಂಗಳೂರು-28
ದೂ. : 26764650

ಮುದ್ರಣಕಾರರು :
ಸ್ಟ್ಯಾಂಡರ್ಡ್ ಪ್ರಿಂಟರ್ಸ್
ನಂ. 111, ಶಂಕರಮಠ ರಸ್ತೆ
ಬೆಂಗಳೂರು - 560 004
✆ 26521527

ಪ್ರಕಾಶಕರ ಬಿನ್ನಹ
(ಮೊದಲನೆಯ ಮುದ್ರಣಕ್ಕೆ)

ಶ್ರೀಶಂಕರಾಚಾರ್ಯರಿಂದೀಚೆಗೆ ಹಲವು ವೇದಾಂತಭಾಷ್ಯಗಳು ವೇದಾಂತದ ವಿಷಯಕ್ಕೆ ಪ್ರಕಟವಾಗಿದ್ದರೂ ಭಗವದ್ರಾಮಾನುಜಾಚಾರ್ಯರವರ ಭಾಷ್ಯಗಳಷ್ಟು ಪ್ರಭಾವವನ್ನು ಅವು ಯಾವವೂ ಜನರಮೇಲೆ ಬೀರಿರುವದಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಸದ್ಯಕ್ಕೆ ದಕ್ಷಿಣದೇಶದಲ್ಲಿ ಪ್ರಚಾರದಲ್ಲಿರುವ ಶಾಂಕರೇತರಮತಗಳೆಂದರೆ **ಶ್ರೀರಾಮಾನುಜರ ವಿಶಿಷ್ಟಾದ್ವೈತ** ಮತ್ತು **ಶ್ರೀಮಧ್ವಾಚಾರ್ಯರ ದ್ವೈತ**- ಇವೆರಡೇ ಆಗಿವೆ. ಅವುಗಳಲ್ಲಿಯೂ ಶ್ರೀರಾಮಾನುಜಮತಕ್ಕೇ ಹೆಚ್ಚಿನ ಪ್ರಾಶಸ್ತ್ಯವಿದೆ.

ಕನ್ನಡದಲ್ಲಿ ಶ್ರೀರಾಮಾನುಜಾಚಾರ್ಯರ ವೇದಾಂತಗ್ರಂಥಗಳು ಈವರೆಗೂ ಸುಸಂಸ್ಕೃತವಾದ ರೂಪದಿಂದ ಹೊರಕ್ಕೆ ಬಂದಿರುವದಿಲ್ಲ ; ಬಂದಿರುವ ಒಂದೆರಡೂ ಆಗಲೆ ವಾಚಕರಿಗೆ ದುರ್ಲಭವಾಗಿಬಿಟ್ಟಿವೆ.

ಶ್ರೀಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಂತೆ ಶ್ರೀರಾಮಾನುಜಾಚಾರ್ಯರ ಗ್ರಂಥಗಳೂ ಹೊರಕ್ಕೆ ಬರಬೇಕಾದದ್ದು ಅತ್ಯವಶ್ಯವಾಗಿರುತ್ತದೆ. ಬ್ರಹ್ಮಸೂತ್ರಕಾರರ ಅಭಿಪ್ರಾಯಕ್ಕೆ ಶ್ರೀಶಂಕರಾಚಾರ್ಯರ ಭಾಷ್ಯಕ್ಕಿಂತಲೂ ಶ್ರೀರಾಮಾನುಜಾಚಾರ್ಯಭಾಷ್ಯವು ಹತ್ತಿರವಿದೆ ಎಂದೂ ವಿಶಿಷ್ಟಾದ್ವೈತಕ್ಕೂ ಪ್ರಾಚೀನವಾದ ಸಂಪ್ರದಾಯದ ಬೆಂಬಲವಿದೆಯೆಂದೂ ಕೆಲವು ವಿಮರ್ಶಕ ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಆ ವಾದವನ್ನು ವಿಮರ್ಶೆಮಾಡಬೇಕೆನ್ನುವ ವರಿಗೂ ರಾಮಾನುಜರ ಗ್ರಂಥಗಳ ಪರಿಶೀಲನವು ಅತ್ಯವಶ್ಯವಾಗಿರುತ್ತದೆ.

ಶ್ರೀರಾಮಾನುಜರ ಗ್ರಂಥಗಳಲ್ಲಿ **ವೇದಾರ್ಥಸಂಗ್ರಹ, ವೇದಾಂತಸಾರದ ಒಂದು ಭಾಗ, ಶ್ರೀಭಾಷ್ಯ** -ಈ ಮೂರನ್ನೂ ವಿಮರ್ಶಾತ್ಮಕವಾದ ಪೀಠಿಕೆ, ಟಿಪ್ಪಣಿ, ಪರಿಶಿಷ್ಟ - ಮುಂತಾದ ಸೌಕರ್ಯಗಳೊಡನೆ ಸದ್ಯಕ್ಕೆ ಹೊರಕ್ಕೆ ತಂದಿರುತ್ತೇವೆ. ಕ್ರಮಕ್ರಮವಾಗಿ ಮಿಕ್ಕ ಗ್ರಂಥಗಳನ್ನೂ ಹೀಗೆಯೇ ಶೋಧಿಸಿದ ಪಾಠಾಂತರ, ತಿಳಿಗನ್ನಡದ ಅನುವಾದ, ಉದಾಹರಣವಾಕ್ಯಗಳ ಸ್ಥಾನಸೂಚನೆ- ಮುಂತಾದ ಸಲಕರಣೆಗಳೊಂದಿಗೆ ಪ್ರಕಟಿಸಬೇಕೆಂಬ ಕಾರ್ಯಾಲಯದ ಪ್ರಯತ್ನಕ್ಕೆ ತಮ್ಮೆಲ್ಲರ ಪ್ರೋತ್ಸಾಹವು ಬೇಕಾಗಿರುತ್ತದೆ. ಶ್ರೀವೈಷ್ಣವಮಹಾಶಯರೂ, ತುಲನಾತ್ಮಕದೃಷ್ಟಿಯಿಂದ ವೇದಾಂತಗ್ರಂಥಗಳನ್ನು ಓದಬೇಕೆಂಬ ಇಚ್ಛೆಯುಳ್ಳ ವಿಮರ್ಶಕಬುದ್ಧಿಯ ವೇದಾಂತಜಿಜ್ಞಾಸುಗಳೂ, ಈ ಪ್ರಯತ್ನಕ್ಕೆ ಪೋಷಕರೂ ಪ್ರೋತ್ಸಾಹಕರೂ ಗ್ರಾಹಕರೂ ಆಗಿ ಒತ್ತಾಸೆಯನ್ನು ಕೊಡಬೇಕೆಂದು ಬೇಡಿಕೊಳ್ಳುತ್ತೇವೆ.

1959 **(ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು)**

ಪ್ರಕಾಶಕರ ಬಿನ್ನಹ
(ಎರಡನೆಯ ಮುದ್ರಣಕ್ಕೆ)

ಶ್ರೀಭಗವದ್ರಾಮಾನುಜಾಚಾರ್ಯರು ಸಾಮಾನ್ಯ ಜನರೂ ಮೋಕ್ಷಕ್ಕೆ ಅರ್ಹತೆ ಪಡೆಯಲು ಸುಲಭವಾದ ಸರಳವಾದ **ಪ್ರಪತ್ತಿ** ಮಾರ್ಗವನ್ನು ಎತ್ತಿ ಹಿಡಿದು ಅದರ ಪ್ರಸಾರದೊಡನೆ ಅತಿಶಯ ಲೋಕೋಪಕಾರವನ್ನು ಮಾಡಿದ ಮಹಾನುಭಾವರು. ವ್ಯಕ್ತಿ ಖಂಡನೆಗಿಂತ ವಿಷಯ ಮಂಡನೆಗೇ ಹೆಚ್ಚು ಇಂಬುಗೊಟ್ಟವರು. ಮೊದಲು ತಾವು ಒಪ್ಪದಿರುವ ವಿಷಯ, ಮತಗಳನ್ನು ಖಂಡಿಸಿ ಅನಂತರ ತಮ್ಮ ಪಕ್ಷವನ್ನು ಸ್ಥಾಪನೆ ಮಾಡುವ ಗಹನವಾದ ವೇದಾಂತ ವಿಷಯಗಳಲ್ಲಿ ತಮ್ಮ ಅಭಿಪ್ರಾಯ, ವಿಚಾರ, ವಾದವನ್ನು ನೇರವಾಗಿ ತರ್ಕಬದ್ಧ ಸರಣಿಯಲ್ಲಿ ಮುಂದಿಡುವ ಕೌಶಲ್ಯವನ್ನು ಪಡೆದವರು. ಧ್ಯಾನರೂಪಭಕ್ತಿಯೇ ಪರಮಾತ್ಮಪ್ರಾಪ್ತಿಗೆ ಸಾಧನ, ಶ್ರೀಮನ್ನಾರಾಯಣನೇ ಕರ್ಮ ಫಲದಾತನು, ಅವನೇ ಜಗತ್ಕಾರಣವಾದ ಪರಬ್ರಹ್ಮ ಎಂಬುದನ್ನು ಪ್ರತಿಪಾದಿಸಿದರು. ಹೀಗೆ ಭಕ್ತಿ, ಶರಣಾಗತಿಯ ಮಾರ್ಗಕ್ಕೆ ಮುಮುಕ್ಷು ಜನಸಮೂಹವನ್ನು ಸೆಳೆದು ಪರಮಾತ್ಮನನ್ನು ಕಾಣುವ, ಅವನ ಒಲವನ್ನು ಪಡೆಯುವ ಹಂಬಲದ ದಿಕ್ಕಿಗೆ ತಿರುಗಿಸಿ, ಸುಲಭಸಾಧನಾಮಾರ್ಗವನ್ನು ಜನರಿಗೆ ತೋರಿಸಿ ಪಂಡಿತಪಾಮರರ ಕೃತಜ್ಞತಾ ಪ್ರಶಂಸೆಯನ್ನು ಪಡೆದವರು. ಇವರ ಅಮೂಲ್ಯ ರಚನೆಗಳಲ್ಲಿ ದಶೋಪನಿಷತ್ತುಗಳ ಸಾರವನ್ನು ಮುಂದಿಡುವ ಈ ಉತ್ತಮ, ಅಗ್ರ ಗ್ರಂಥವೇ **ವೇದಾರ್ಥ ಸಂಗ್ರಹ.**

ಇದನ್ನು ತಮ್ಮದೇ ಆದ ವಿಶಿಷ್ಟರೀತಿಯ ಪ್ರಭಾವಪೂರ್ಣ, ನಿಷ್ಪಾಕ್ಷಿಕ ವಿಮರ್ಶಾತ್ಮಕ ಪೀಠಿಕೆ ಮತ್ತು ಉಪಯುಕ್ತ ಟಿಪ್ಪಣಿಗಳಿಂದ ಕೂಡಿದ ಯೋಗ್ಯ ಕನ್ನಡ ಅನುವಾದದಿಂದ ಕನ್ನಡ ವೇದಾಂತ ಪ್ರೇಮಿಗಳಿಗೆ, ಅದರಲ್ಲೂ ರಾಮಾನುಜಾಚಾರ್ಯರ ಶಿಷ್ಯಕೋಟಿಗೆ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು** ಅನುಗ್ರಹ ಮಾಡಿದ್ದಾರೆ. ತಾವೇ ಆದ್ವೈತಿಗಳಾಗಿ ಶ್ರೀಶಾಂಕವೇದಾಂತದ ಮೂಲತಿರುಳನ್ನು ಪ್ರಸರಿಸುವ ಮಹೋನ್ನತ ಕಾರ್ಯವನ್ನು ಕೈಗೊಂಡ ಶ್ರೀಶ್ರೀಗಳವರು, ಅದನ್ನು ಬಿಟ್ಟು ಬೇರೆಯದನ್ನೇ ನೋಡದ ಗಾಡಿಯ ಜಾಡಿನಲ್ಲಿ ನಡೆದವರಲ್ಲ. ಪ್ರಪಂಚದ ಎಲ್ಲ ಸಿದ್ಧಾಂತಗಳಲ್ಲಿನ ಕ್ರೈಸ್ತ, ಇಸ್ಲಾಂ ಮತಗಳೂ ಸೇರಿದಂತೆ- ಒಳಿತಿನ ಅಂಶಗಳನ್ನು ಗ್ರಹಿಸಿ ಸಾರಾಸಾರ ವಿಮರ್ಶೆಯಿಂದ ಅದನ್ನು ಒಪ್ಪಿಕೊಳ್ಳುವ ಗುಣಗ್ರಾಹಿಗಳಷ್ಟೇ ಅಲ್ಲದೆ, ಅಪರೂಪದ ವಿಶಾಲಮನೋಭಾವದ ಶ್ರೀಶ್ರೀಗಳವರ ಮೂಲ ಉದ್ದೇಶ ಜನತೆಯನ್ನು ಉತ್ತಮ ಮನೋಭೂಮಿಗೆ ಕೊಂಡೊಯ್ಯುವ ಎಲ್ಲ ವೇದಾಂತಸಾರಗಳನ್ನು ಪರಿಚಯಿಸುವುದು. ಅವರ

ವಿಸ್ತಾರವಾದ ಗ್ರಂಥ ಸಮೀಕ್ಷೆ, ಆಳವಾದ ಅಧ್ಯಯನದ ಜೊತೆಗೆ ತಮ್ಮ ಸಂಶೋಧನಾ ಪ್ರವೃತ್ತಿಯ ತೀಕ್ಷ್ಣತೆಯಿಂದ ಓದಿದ ವಿಷಯಗಳ ಗುಣ-ದೋಷ ಗಳನ್ನು ವಿಮರ್ಶಾತ್ಮಕವಾಗಿ ಬರೆಯುವ ಉಪಕಾರ ಮಾಡಿದರು. ಈ ಕಾರಣದಿಂದಲೇ ಅವರು ಪ್ರಕಟಿಸಿರುವ ಇತರ ಗ್ರಂಥಗಳಲ್ಲಿ ಪರಿಚಯಾತ್ಮಕ ಪೀಠಿಕೆಗಳು ಆ ಗ್ರಂಥಗಳ ಮೌಲ್ಯವನ್ನು ಹೆಚ್ಚಿಸಿವೆ. ಇಂತಹ ವೇದಾಂತ ಪ್ರಸರಣೆಯ ಔದಾರ್ಯವೇ ಈ ಕಾರ್ಯಾಲಯದ ಚೈತನ್ಯ.. ಅದರಲ್ಲೂ ಶ್ರೀರಾಮಾನುಜಾ ಚಾರ್ಯರ ಗ್ರಂಥಗಳಿಗೆ ತಮ್ಮಲ್ಲಿರುವ ಗೌರವ ಮತ್ತು ಗುಣ ಮೆಚ್ಚುಗೆ ಈ ಪೀಠಿಕೆಯಲ್ಲಿ ಎದ್ದು ಕಾಣುತ್ತದೆ.

ಈ ಗ್ರಂಥದ **ಎರಡನೆಯ** ಮುದ್ರಣಕ್ಕಾಗಿ **ಶ್ರೀಶ್ರೀರಂಗಪ್ರಿಯ ಮಹಾಸ್ವಾಮಿ**ಗಳು ಅಷ್ಟೇ ಉದಾರರೂಪದ ಸೊಗಸಿನ ಮುನ್ನುಡಿಯನ್ನೊದಗಿಸಿ, ಗ್ರಂಥದ ಈ ಮುದ್ರಣವನ್ನು ಹೆಚ್ಚು ಪ್ರಯೋಜನಕಾರಿಯಾಗಿ ಮಾಡಿದ್ದಾರೆ. ಅವರಿಗೆ ಕಾರ್ಯಾಲಯದ ಕೃತಜ್ಞತಾಪೂರ್ವಕ ಸಾಷ್ಟಾಂಗ ನಮಸ್ಕಾರಗಳು.

ಇಂತಹ ಗ್ರಂಥವನ್ನು- ತಾವು ಒಪ್ಪಿ ಅನುಸರಿಸಲು ಪ್ರಯತ್ನಿಸುತ್ತಿರುವ ಸಿದ್ಧಾಂತಕ್ಕಿಂತ ಭಿನ್ನಮತವೆಂದೆಣಿಸುವ ಉಳಿದೆರಡು ಮತಾನುಯಾಯಿಗಳೂ - ಶ್ರೀರಾಮಾನುಜ ಪಂಥದವರಂತೆಯೇ ಆದರದಿಂದ ಸ್ವೀಕರಿಸಿ ತಮ್ಮ ವೇದಾಂತ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುವರೆಂಬ ಆಶಯ ಕಾರ್ಯಾಲಯದ್ದು.

ಹಿರಿಮೆಯ ಗ್ರಂಥವನ್ನನುಗ್ರಹಿಸಿರುವ ಭಗವದ್ರಾಮಾನುಜಶ್ರೀಗಳವರಿಗೆ , ಸುಂದರ ಕನ್ನಡಾನುವಾದದ ಈ ಪುಸ್ತಕವನ್ನು ಸಿದ್ಧಗೊಳಿಸಿದ ಕಾರ್ಯಾಲಯದ ಸಂಸ್ಥಾಪಕ ಸಮರ್ಥ ಶ್ರೀಶ್ರೀಗಳವರಿಗೆ, ವಿನಮ್ರ ನಮಸ್ಕಾರಗಳು.

ಪಾರ್ಥಿವ ಸಂವತ್ಸರ
ಆಷಾಢ ಬಹುಳ ತ್ರಯೋದಶಿ
(2-08-2005)

ಪ್ರಕಾಶಕರು

ಶ್ರೀಃ

ಮುನ್ನುಡಿ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ
ಶ್ರೀ ಶ್ರೀರಂಗಪ್ರಿಯಮಹಾದೇಶಿಕರಿಂದ -

ಕರ್ನಾಟಕ ರಾಜ್ಯದ ಪ್ರಸಿದ್ಧ ಕ್ಷೇತ್ರಗಳಲ್ಲಿ ಒಂದಾದ ಮೇಲುಕೋಟೆ ತಿರುನಾರಾಯಣಪುರದ ಅಧಿಷ್ಠಾತೃದೇವತೆ ಶ್ರೀಮನ್ನಾರಾಯಣಸ್ವಾಮಿಯ ಶ್ರೀಧಾಮವನ್ನು ಅಲಂಕರಿಸಿರುವ ಶ್ರೀಭಗವದ್ರಾಮಾನುಜರ ಸನ್ನಿಧಿಯ ಭವನವು ಒಂಭತ್ತು ಸ್ತಂಭಗಳಿಂದ ನಿರ್ಮಿತವಾಗಿದೆ. ಇವುಗಳು ವಿಶಿಷ್ಟಾದ್ವೈತ ದರ್ಶನದ ಪ್ರವರ್ತಕರಾದ ಭಗವದ್ರಾಮಾನುಜರ ದರ್ಶನ, ಅನುಷ್ಠಾನ, ಅನುಭವಗಳಿಗೆ ಆಧಾರಸ್ತಂಭವಾಗಿರುವ ಒಂಭತ್ತು ಗ್ರಂಥಗಳ ಪ್ರತಿನಿಧಿಗಳಾಗಿವೆ - ಎಂದು ಕ್ಷೇತ್ರವಾಸಿಗಳಾದ ವಿದ್ವಾಂಸರು ಹೇಳುತ್ತಾರೆ. ಇಂತಹ ಆಧಾರಗ್ರಂಥಗಳಲ್ಲಿ ದರ್ಶನ ವಿಭಾಗಕ್ಕೆ ಸೇರಿದ ಒಂದು ಪ್ರಮುಖಗ್ರಂಥ **ವೇದಾರ್ಥಸಂಗ್ರಹ.** ವೇದಾಂತದರ್ಶನಕ್ಕೆ ಪ್ರಮಾಣವಾಗಿರುವ ಮೂರು ಪ್ರಸ್ಥಾನಗಳಲ್ಲಿ ಇದರ ನಾಮಕರಣವೇ ಹೇಳುವಂತೆ ಇದು ಶ್ರುತಿಪ್ರಸ್ಥಾನಕ್ಕೆ ಸೇರಿದ್ದು. ಆಚಾರ್ಯರು ಒಂದೊಂದು ಉಪನಿಷತ್ತಿಗೂ ಪ್ರತ್ಯೇಕವಾದ ಭಾಷ್ಯವನ್ನು ರಚಿಸದೇ ಇದ್ದರೂ ಉಪನಿಷತ್ತುಗಳಲ್ಲಿ ಬರುವ ಭಿನ್ನಾರ್ಥಗಳಿಗೆ ಎಡೆಗೊಡುವ ಎಲ್ಲಾ ಮುಖ್ಯವಾದ ವಾಕ್ಯಗಳಿಗೂ ವಿಮರ್ಶಾತ್ಮಕವಾದ ಅರ್ಥವನ್ನು ಇಲ್ಲಿ ಮಂಡಿಸಿರುವುದರಿಂದ ಇದು ಉಪನಿಷತ್‌ಪ್ರಸ್ಥಾನಕ್ಕೆ ಸೇರಿದ್ದು. ಆದುದರಿಂದ ಶ್ರೀಮದಾಚಾರ್ಯರು ಶ್ರುತಿಪ್ರಸ್ಥಾನಕ್ಕೆ ಭಾಷ್ಯ ಮಾಡಿಲ್ಲ ಎಂಬ ಬಾಲಿಶವಾದಕ್ಕೆ ಎಡೆಯಿಲ್ಲ- ಎಂಬ ಅಂಶವನ್ನು ಈ ಗ್ರಂಥದ ಪ್ರಕಾಶಕರಾದ ಶ್ರೀ ಶ್ರೀಸಚ್ಚಿದಾನೇಂದ್ರಸರಸ್ವತೀಸ್ವಾಮಿಗಳು ಅನುಮೋದಿಸಿದ್ದಾರೆ.

ಉಪನಿಷತ್ತುಗಳಲ್ಲಿ ''ತತ್ತ್ವಮಸಿ'', ''ಅಹಂ ಬ್ರಹ್ಮಾಸ್ಮಿ'', ''ಸರ್ವಂ ಖಲ್ವಿದಂಬ್ರಹ್ಮ'' ಮುಂತಾದ ವಾಕ್ಯಗಳು ಶುದ್ಧವಾದ ಅದ್ವೈತವನ್ನು ಉಪದೇಶಿಸುವಂತೆ ತೋರುತ್ತವೆ. ''ದ್ವಾ ಸುಪರ್ಣಾ'', ''ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ'' ಮುಂತಾದ ವಾಕ್ಯಗಳು ಸ್ಪಷ್ಟವಾಗಿ ದ್ವೈತವನ್ನು ಬೋಧಿಸುವಂತೆ ಕಾಣುತ್ತವೆ. ''ನಿರ್ಗುಣೋ ಹಿ ಪುರುಷಃ'', ''ಪರಾಸ್ಯ ಶಕ್ತಿಃ ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲಕ್ರಿಯಾ ಚ '' ಮುಂತಾದ ಶ್ರುತಿಗಳು ನಿರ್ಗುಣ ಸಗುಣ

ಬೋಧಕಗಳಾಗಿ ಪರಸ್ಪರ ವಿರುದ್ಧವಾಗಿರುವಂತೆ ಕಾಣುತ್ತವೆ. ಆದರೆ ಶ್ರುತಿ, ಸ್ಮೃತಿ, ಪುರಾಣಗಳಿಂದಲೂ ಮತ್ತು ಇವುಗಳಿಗೆ ಅನುಗುಣವಾದ ಗೋಪಿಣ್ಯಾಕ ನ್ಯಾಯ, ಸಾಮಾನ್ಯ ವಿಶೇಷ ನ್ಯಾಯ - ಮುಂತಾದ ಶಾಸ್ತ್ರೀಯ ಯುಕ್ತಿಗಳಿಂದಲೂ ಮತ್ತು ಅನುಭವದಿಂದಲೂ ಸಮಂಜಸವಾದ, ಅವಿರುದ್ಧವಾದ ಅರ್ಥವು ಬರುವಂತೆ ಭಾಷ್ಯಮಾಡಿ ಸವಿಶೇಷಾದ್ವೈತವನ್ನು ಶ್ರೀಭಗವದ್ರಾಮಾನುಜರು **ವೇದಾರ್ಥಸಂಗ್ರಹ** ದಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಶ್ರೀಶಂಕರಭಗವತ್ಪಾದರು ಪ್ರತಿಪಾದನೆ ಮಾಡಿದ ನಿರ್ವಿಶೇಷಾದ್ವೈತಕ್ಕೂ ವಿಶಿಷ್ಟಾದ್ವೈತಕ್ಕೂ ಕೆಲವು ವಿಷಯಗಳಲ್ಲಿ ಸಾಮ್ಯವಿದೆ. ಎರಡೂ ಸಿದ್ಧಾಂತಗಳಲ್ಲೂ ಈಶ್ವರನು ಜಗತ್ತಿಗೆ ಉಪಾದಾನಕಾರಣ ಮತ್ತು ನಿಮಿತ್ತ ಕಾರಣ ಎರಡೂ ಆಗಿದ್ದಾನೆ. ಎಲ್ಲಾ ಜೀವಿಗಳಿಗೂ ಬ್ರಹ್ಮಾನಂದಪ್ರಾಪ್ತಿಯುಂಟು. ಜೀವಬ್ರಹ್ಮಗಳ ಸ್ವರೂಪಾದ್ವೈತ ಮತ್ತು ಬ್ರಹ್ಮದ ನಿರ್ಗುಣತ್ವ ವಿಷಯಗಳಲ್ಲಿ ಅಭಿಪ್ರಾಯಭೇದಗಳುಂಟು. ಬ್ರಹ್ಮಸೂತ್ರದಲ್ಲಿ ವಿಮರ್ಶಿಸಲ್ಪಡುವ ಪ್ರಧಾನ ಶ್ರುತಿವಾಕ್ಯಗಳಲ್ಲಿ ಸಾಮಾನ್ಯವಾಗಿ ಎರಡೂ ಸಿದ್ಧಾಂತಗಳಲ್ಲೂ ಐಕಮತ್ಯವಿದೆ.

ವೇದಾರ್ಥಸಂಗ್ರಹವು ವಿಶಿಷ್ಟಾದ್ವೈತದ ಒಂದು ಅತಿಮುಖ್ಯ ಗ್ರಂಥವಾಗಿದೆ. ಭಗವದ್ರಾಮಾನುಜರ ಮೇರುಕೃತಿಯಾದ **ಶ್ರೀಭಾಷ್ಯ**ಕ್ಕೂ ಸಹಾಯಕ ಗ್ರಂಥವಾಗಿದೆ. ಹಾಗೆಯೇ ಇದು ವಿಶಿಷ್ಟಾದ್ವೈತಿಗಳಿಗೆ ಮಾತ್ರವಲ್ಲದೆ ಉಳಿದ ವೇದಾಂತಿಗಳಿಗೂ ಪೂರ್ವಪಕ್ಷದಜ್ಞಾನಕ್ಕೆ ಆವಶ್ಯಕವಾಗಿದೆ. ತುಲನಾತ್ಮಕ ಬುದ್ಧಿಯಿಂದ ಎಲ್ಲಾ ವೇದಾಂತಗ್ರಂಥಗಳನ್ನೂ ಪರಿಶೀಲನೆ ಮಾಡುವವರಿಗೂ ಈ ಗ್ರಂಥವು ಆವಶ್ಯಕವಾಗಿದೆ. ಈ ದೃಷ್ಟಿಯಿಂದ **ಅಧ್ಯಾತ್ಮಪ್ರಕಾಶಕಾರ್ಯಾಲಯವು** ವೈದುಷ್ಯಪೂರ್ಣವಾದ ಪೀಠಿಕೆ ಮತ್ತು ಸುಂದರವಾದ ಕನ್ನಡ ಅನುವಾದ ಮತ್ತು ಟಿಪ್ಪಣಿಗಳಿಂದ ಅಲಂಕೃತವಾದ ವೇದಾರ್ಥಸಂಗ್ರಹವನ್ನು ಪ್ರಕಾಶಪಡಿಸಿ ಅದರ ಮರುಮುದ್ರಣವನ್ನೂ ಮಾಡುತ್ತಿರುವುದು ತುಂಬಾ ಸಂತೋಷದ ವಿಷಯ.

ಈ ಗ್ರಂಥಕ್ಕೆ ಅನುವಾದ, ಟಿಪ್ಪಣಿ, ಪೀಠಿಕೆ, ಮುಂತಾದವುಗಳನ್ನು ಅನುಗ್ರಹಿಸಿ ಅದನ್ನು ಅಲಂಕರಿಸಿರುವವರು ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ **ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ**ಗಳವರು. ಇವರು ಜ್ಞಾನ ವೈರಾಗ್ಯನಿಧಿಗಳು. ಅಧ್ಯಾತ್ಮಗುಣಸಂಪನ್ನರಲ್ಲಿ ಅಗ್ರಗಣ್ಯರು. ''ಅಧೀತಿಬೋಧಾಚರಣಪ್ರಚಾರಣೈಃ'' ಎಂಬಂತೆ ಸರ್ವತೋಮುಖವಾಗಿ ಅಧ್ಯಾತ್ಮದ ತಿಳಿವಳಿಕೆಯನ್ನು ಜನರಿಗೆ ನೀಡಿದವರು. ಸ್ವಯಂ ವಿದ್ವನ್ಮಣಿಗಳು ಆಗಿದ್ದಂತೆಯೇ ಪಾಠ-ಪ್ರವಚನ, ಉಪನ್ಯಾಸ, ಗ್ರಂಥಲೇಖನ, ಶಿಷ್ಯಸಂಯೋಜನೆ, ಸಂಸ್ಥಾ ನಿರ್ಮಾಣವೇ ಮುಂತಾದ

ಮಹತ್ಕಾರ್ಯಗಳಲ್ಲೂ ಅದ್ಭುತ ಸಿದ್ಧಿಯನ್ನು ಪಡೆದ ಮಹಾಪುರುಷರು. ಶ್ರೀಶಾಂಕರಸಿದ್ಧಾಂತಕ್ಕೆ ಇವರ ಕೊಡುಗೆ ಅದ್ವಿತೀಯವಾದುದು. ಇವರ ಶಿಷ್ಯವೃಂದವೂ ಆಚಾರ್ಯರ ಸಿದ್ಧಾಂತದ ಪ್ರಚಾರಕ್ಕಾಗಿ ಸಾಧನೆ ಮಾಡುತ್ತಿರುವುದು ತುಂಬಾ ಸಂತೋಷದ ವಿಷಯ.

ಶ್ರೀಶ್ರೀಗಳವರು ಅತಿಸರಳ ಶೈಲಿಯಲ್ಲಿ ಅತ್ಯಂತ ಗಹನವಾದ ವಿಷಯಗಳನ್ನು ಬೋಧಿಸುವ ಕಲೆಯಲ್ಲಿ ನಿಷ್ಣಾತರಾಗಿದ್ದವರು. ಹಾಗೆಯೇ ಪರಿಮಿತ ಶಬ್ದಗಳಿಂದ ಅಗಾಧವಾದ ಭಾವಗಳನ್ನು ಸಮರ್ಥವಾಗಿ ಪ್ರತಿಪಾದಿಸುವ ಸಾರಸ್ವತಕಲಾ ಸಂಪನ್ನರು. ಮೂಲಗ್ರಂಥವನ್ನು ಭಾಷಾಂತರ ಟಿಪ್ಪಣಿಗಳ ಸಹಿತ ಒಪ್ಪವಾಗಿ, ಓರಣವಾಗಿ ಅಚ್ಚುಕಟ್ಟಾದ ರೀತಿಯಲ್ಲಿ ಪ್ರಕಾಶಪಡಿಸುವ ಕಲೆಯಲ್ಲಿ ಅದ್ವಿತೀಯರು. ಪೂರ್ವಸೂರಿಗಳು ರಚಿಸಿರುವ ಸಂಸ್ಕೃತ ವ್ಯಾಖ್ಯಾನ ಮತ್ತು ಆಂಗ್ಲ ಅನುವಾದಗಳನ್ನೂ ಆವಶ್ಯಕವಾದ ಎಡೆಗಳಲ್ಲಿ ಉಪಯೋಗಿಸಿಕೊಂಡು ಈ ಪ್ರಕಾಶನವನ್ನು ತಂದಿದ್ದಾರೆ. ಇಲ್ಲಿನ ಪ್ರಕರಣವಿಭಾಗ, ಶೀರ್ಷಿಕೆ, ಪರಿಶಿಷ್ಟ - ಮುಂತಾದವುಗಳು ತುಂಬಾ ಉಪಯೋಗಕರವಾಗಿವೆ. ''ಇಷ್ಟು ಸೌಕರ್ಯಗಳಿಂದ ಒಡಗೂಡಿದ ಅನುವಾದವು ಈವರೆಗೆ ಮತ್ತೆ ಯಾವ ಭಾಷೆಯಲ್ಲಿಯೂ ಆಗಿಲ್ಲವೆಂದು ನಮ್ಮ ನಂಬಿಕೆ'' ಎಂದು ಶ್ರೀಶ್ರೀಗಳವರು ಪೀಠಿಕೆಯಲ್ಲಿ ಹೇಳಿರುವುದು ಸತ್ಯಾರ್ಥದ ಘೋಷಣೆ, ಒಣ ಹೆಮ್ಮೆಯ ಮಾತಲ್ಲ - ಎಂದು ನಾವು ಸಾರುತ್ತೇವೆ.

ತಮಗೂ ಅರ್ಥವಾಗದೆ ಇತರರಿಗೂ ಅರ್ಥವಾಗದಂತೆ ವಿಷಯವನ್ನು ನಿರೂಪಿಸುತ್ತಾ, ವೇದಾಂತದಸ್ವರೂಪವೇ ಹೀಗೆಂದು ಭಾವನೆ ಉಂಟುಮಾಡುತ್ತಿರುವ ಬಹುಮಂದಿ ವೇದಾಂತಿ ಶಬ್ದವಾಚ್ಯ ವಿದ್ವಾಂಸರನ್ನು ನೋಡುತ್ತಿದ್ದೇವೆ.

ಸ್ವಸಿದ್ಧಾಂತ ಪ್ರತಿಪಾದನೆಯಲ್ಲಿ ಇರುವದಕ್ಕಿಂತ ಇತರ ಸಿದ್ಧಾಂತಗಳ ಖಂಡನೆಯಲ್ಲೇ ಹೆಚ್ಚು ಆಸ್ಥೆಯನ್ನು ಹೊಂದಿರುವ ಲೇಖಕರನ್ನೂ, ಉಪನ್ಯಾಸಕರನ್ನೂ, ವೇದಾಂತಿವಾಚ್ಯರಲ್ಲಿ ಕಾಣುತ್ತಿದ್ದೇವೆ. ಪೂರ್ವಪಕ್ಷದ ವಿದ್ವಾಂಸರಲ್ಲಿ ಯಾವುದೇ ಗುಣಭಾವವೂ ಇಲ್ಲ, ತಮ್ಮ ಮಂಡನೆಯಲ್ಲಿ ಯಾವ ದೋಷವೂ ಇಲ್ಲ - ಎಂಬ ಪೂರ್ವಗ್ರಹದಿಂದ ದೂಷಿತರಾಗಿರುವವರೇ ಹೆಚ್ಚು ಮಂದಿ. ''ಅಭಿನಿವೇಶ ವಶೀಕೃತ ಚೇತಸಾಂ ಬಹುವಿದಾಮಪಿ ಸಂಭವತಿ ಭ್ರಮಃ''. ಹಾಗೆಯೇ ತಮ್ಮ ಸಿದ್ಧಾಂತಕ್ಕೆ ಭಿನ್ನವಾದ ಇತರ ಸಿದ್ಧಾಂತ ಗ್ರಂಥಗಳನ್ನು ಓದುವದೇ ಮೈಲಿಗೆಯ ವಿಷಯ. ಅವುಗಳನ್ನು ಓದದೆಯೇ ಅವುಗಳ ವಿಷಯದಲ್ಲಿ ಟೀಕೆ ಮಾಡುವುದು

ನಮ್ಮ ಹಕ್ಕು - ಎಂಬ ನಂಬಿಕೆಯಿಂದ ಕೆಲಸಮಾಡುತ್ತಿರುವವರೂ ಇದ್ದಾರೆ. ಇಷ್ಟಲ್ಲದೆ ಇತರ ಸಿದ್ಧಾಂತದ ಆಚಾರ್ಯರುಗಳಿಗೆ ದೈತ್ಯಪಟ್ಟವನ್ನು ಕಟ್ಟುವ ವೇದಾಂತಿಗಳೂ ಉಂಟು. ಗ್ರಂಥಗಳಲ್ಲಿ ಪ್ರಕ್ಷಿಪ್ತಪಾಠವನ್ನು ಸೇರಿಸುವುದು, ಗ್ರಂಥಕ್ಕೆ ಸರಸ್ವತೀಪ್ರಾಣಪೀಡನಾ ರೂಪವಾದ ಕೃತಕ ವ್ಯಾಖ್ಯಾನಗಳನ್ನು ಮಾಡುವುದು, -ಇತ್ಯಾದಿ ದೋಷಗಳನ್ನೂ ಪಂಡಿತ ಶಬ್ದವಾಚ್ಯರಲ್ಲಿ ನೋಡುತ್ತಿದ್ದೇವೆ.

ಈ ಯಾವ ದೋಷಗಂಧವೂ ಇಲ್ಲದೆ, ಗುಣಪೂರ್ಣವಾದ ಬರವಣಿಗೆಯನ್ನು ಶ್ರೀಶ್ರೀಸ್ವಾಮಿಗಳ ಪ್ರಕಾಶನದಲ್ಲಿ ನೋಡುತ್ತೇವೆ.

ವಿಶಿಷ್ಟಾದ್ವೈತಕ್ಕೆ ಅನೇಕ ವಿಷಯಗಳಲ್ಲಿ ವಿರುದ್ಧವಾದ ಅಭಿಪ್ರಾಯಗಳನ್ನು ಮಂಡಿಸಿರುವ ಶ್ರೀಶಂಕರಭಗವತ್ಪಾದರ ಸಿದ್ಧಾಂತದಲ್ಲಿ ಶ್ರೀಸ್ವಾಮಿಗಳಿಗೆ ನಿಷ್ಠೆ; ಆದರೆ ವಿಶಿಷ್ಟಾದ್ವೈತ ಸಿದ್ಧಾಂತದವಿಷಯದಲ್ಲೂ ಮತ್ತು ಅದರ ಸ್ಥಾಪಕಾಚಾರ್ಯರಾದ ಶ್ರೀಭಗವದ್ರಾಮಾನುಜರ ವಿಷಯದಲ್ಲೂ ಅವರು ಗ್ರಂಥದ ಪೀಠಿಕೆಯಲ್ಲಿ ಮಂಡಿಸಿರುವ ಪ್ರಶಂಸಾವಾಕ್ಯಗಳು ಸಜ್ಜನರನ್ನು ತಲೆದೂಗಿಸುತ್ತವೆ.

''ಭಗವಂತನು ಅರ್ಜುನನಲ್ಲಿ ಪರಮಪ್ರೇಮವುಳ್ಳವನಾದ್ದರಿಂದಲೇ ಅವನಿಗೆ ಹಿತವನ್ನು ಬಯಸಿ ಸಗುಣೋಪಾಸನೆಯನ್ನು ಬೋಧಿಸಿರುತ್ತಾನೆ -ಎಂದು ಭಗವದ್ಗೀತಾಭಾಷ್ಯದ ಹನ್ನೊಂದನೆಯ ಅಧ್ಯಾಯದಲ್ಲಿ ಶ್ರೀಶಂಕರಾಚಾರ್ಯರು ಬರೆದಿರುತ್ತಾರೆ. ಹೀಗಿರುವಲ್ಲಿ ನಮ್ಮಂತಹವರು ಗರ್ವದಿಂದ ಸಗುಣೋಪಾಸನೆಯನ್ನು ಕಡೆಗಣಿಸುವದಕ್ಕೆ ಯಾವ ಕಾರಣವೂ ಇರುವುದಿಲ್ಲ. ಶ್ರೀಶಂಕರಾಚಾರ್ಯರೂ ಅವರ ಶಿಷ್ಯಪರಂಪರೆಗೆ ಸೇರಿದ ಸಂನ್ಯಾಸಿಗಳೂ ಇಂದಿಗೂ ನಾರಾಯಣ ಸ್ಮರಣೆಯನ್ನೇ ಮಾಡುತ್ತಿರುತ್ತಾರೆ. ಆದ್ದರಿಂದ ನಾರಾಯಣನೇ ಪರಬ್ರಹ್ಮ ಎಂಬ ಸಿದ್ಧಾಂತವಾಗಲೀ, ಸ್ತುತಿ, ನಮಸ್ಕಾರ, ನಾಮಸಂಕೀರ್ತನ, ಅರ್ಚನ, ಮುಂತಾದವುಗಳಿಂದ ಭಗವಂತನನ್ನು ಅತ್ಯಂತ ಪ್ರೇಮದಿಂದ ಧ್ಯಾನಮಾಡುವ ಪರಭಕ್ತಿಯನ್ನು ಸಂಪಾದಿಸಿಕೊಂಡು ಕೃತಾರ್ಥರಾಗಬೇಕೆಂಬ ಉಪದೇಶವಾಗಲೀ ಅದ್ವೈತಿಗಳಿಗೆ ಅಸಮ್ಮತವೆಂದು ಬಗೆಯುವುದು ತಪ್ಪೆಂಬುದು ಹಾಗಿರಲಿ , ಈಗಿನ ಕಾಲಕ್ಕೆ ನಮ್ಮಲ್ಲಿ ಬಹುಜನರಿಗೆ ಅತ್ಯಂತ ಅವಶ್ಯವಾಗಿರುವ ಸಾಧನವೆಂದರೆ ಅದೇ ಆಗಿರುತ್ತದೆ - ಎಂದು ನಾವೆಲ್ಲರೂ ನಿಶ್ಚಿತವಾಗಿ ನಂಬಬೇಕು. ಈ ದೃಷ್ಟಿಯಿಂದ ನೋಡಿದಾಗ **ವೇದಾರ್ಥಸಂಗ್ರಹ**ದಲ್ಲಿ ಶಂಕರಾನುಯಾಯಿಗಳಿಗೂ ಗ್ರಾಹ್ಯಾಂಶವು ಬಹಳವಿದೆ ಎಂದು ನಮ್ಮ ದೃಢವಾದ ನಂಬಿಕೆ.''

''ಶ್ರೀಶಂಕರಾಚಾರ್ಯರು ತಮ್ಮ ಉಪನಿಷದ್ಭಾಷ್ಯಗಳಲ್ಲಿಯೂ, ಗೀತಾಭಾಷ್ಯದಲ್ಲಿಯೂ ಉಪಾಸನೆಗೆ ತಕ್ಕಷ್ಟು ಪ್ರಾಧಾನ್ಯವನ್ನು ಕೊಟ್ಟೇ ವಿಸ್ತೃತವಾಗಿ ಬರೆದಿರುತ್ತಾರೆ. ಆದರೂ ಅವರ ವ್ಯಾಖ್ಯಾನ ಪ್ರಸ್ಥಾನಗಳಲ್ಲಿ ಜ್ಞಾನ ಪ್ರಾಮುಖ್ಯವನ್ನು ಹಿಡಿದು ತರ್ಕಪ್ರಧಾನವಾದ ವಿಚಾರಗಳನ್ನೇ ವಿಸ್ತರಿಸಲಾಗಿದೆ. ಇದರಿಂದ ಮುಮುಕ್ಷುಗಳಿಗೆ ಜ್ಞಾನಮಾರ್ಗವಾಗಲೀ, ಭಕ್ತಿಮಾರ್ಗವಾಗಲೀ ದಕ್ಕದೆ ಶುಷ್ಕ ತರ್ಕವೇ ವೇದಾಂತವೆಂಬ ಭ್ರಾಂತಿಯುಂಟಾಗುವಂತಾಗಿತ್ತು. ಭಾಸ್ಕರ ಭಾಷ್ಯದಲ್ಲಿಯೂ ಶಾಂಕರಮತವನ್ನು ಖಂಡಿಸಿದ್ದರೂ ಉಪಾಸನೆಯ ಸ್ಥಾನವನ್ನು ಪುನಃ ಪ್ರತಿಷ್ಠಾಪನೆಮಾಡಿದ ಕೀರ್ತಿಯು ಶ್ರೀರಾಮಾನುಜಾಚಾರ್ಯರವರಿಗೇ ಸಲ್ಲುತ್ತದೆ. ಉತ್ತರದೇಶದ ಸಾಧುಗಳೂ ಈ ಭಕ್ತಿಮಾರ್ಗವನ್ನು ಬೋಧಿಸಿದ್ದರೂ ವೇದಾಂತಸಿದ್ಧಾಂತದಲ್ಲಿ ಭಕ್ತಿಗೇ ಮುಖ್ಯಸ್ಥಾನವಿದೆಯೆಂದು ಮೊದಲು ತೋರಿಸಿದವರು ಈ ಆಚಾರ್ಯರೇ.''

''ಗ್ರಂಥವನ್ನು ಓದುವ ಶ್ರೀವೈಷ್ಣವರಿಗೇ ಅಲ್ಲದೆ ವಿಷ್ಣುಭಕ್ತರಾದ ದ್ವೈತಾದ್ವೈತ ಸಿದ್ಧಾಂತಗಳನ್ನು ಅನುಸರಿಸುವ ಉಪಾಸಕರಿಗೂ ಇಲ್ಲಿ ಅನೇಕ ಅನರ್ಘವಾದ ಉಪದೇಶಗಳು ದೊರಕುತ್ತವೆ. ಈಗಿನ ಕಾಲದಲ್ಲಿ ಯಾವ ಗ್ರಂಥವನ್ನೂ ಪರಿಶೀಲಿಸದೇ ಇದ್ದರೂ ಮತಾಂತರವನ್ನು ದೂಷಣೆ ಮಾಡುವ ಮತಾಂಧರು ಅನೇಕರು ಇರುತ್ತಾರೆ. ಅದು ಅವರ ಅಜ್ಞಾನ ಮಾತ್ರ ದರ್ಶಕವಾಗಿರುತ್ತದೆ.''

ಅಧ್ಯಾತ್ಮಪ್ರಕಾಶಕಾರ್ಯಾಲಯದ ಈ ಪ್ರಕಾಶನವು ಅತ್ಯಂತ ಹೃದಯಂಗಮವಾಗಿದೆ. ಅಧ್ಯಾತ್ಮವಿಮರ್ಶಕರಿಗೆ, 'ರಸ್ಯ', 'ಸ್ನಿಗ್ಧ', 'ಸ್ಥಿರ' 'ಹೃದ್ಯ' ವಾದ ಆಹಾರವಾಗಿದೆ,- ಎಂದು ಹೇಳಿ ಗ್ರಂಥದ ಮರುಮುದ್ರಣಮಾಡಿರುವ ಗುರುಭಕ್ತರಾದ ಪ್ರಕಾಶಕರನ್ನು ಕುರಿತು ನಾರಾಯಣಸ್ಮರಣೆ ಮಾಡುತ್ತೇವೆ.

ತಾರಣ ಸಂವತ್ಸರ, ಫಾಲ್ಗುಣ
ಕೃಷ್ಣ ಪಂಚಮಿ , ಬುಧವಾರ
30-3-2005, ಬೆಂಗಳೂರು

ಶ್ರೀಶ್ರೀರಂಗಪ್ರಿಯಶ್ರೀಪಾದಶ್ರೀಶ್ರೀಃ

ಪೀಠಿಕೆ

೧. ವಿಶಿಷ್ಟಾದ್ವೈತದ ಹಿನ್ನೆಲೆ

ಈಶ್ವರ, ಜೀವರುಗಳು, ಮತ್ತು ಅಚೇತನಪ್ರಪಂಚ- ಈ ಮೂರರ ತತ್ತ್ವ - ವನ್ನೂ ಇವುಗಳ ಪರಸ್ಪರಸಂಬಂಧವನ್ನೂ ಬೋಧಿಸುವದೇ ವೇದಾಂತದ ಉದ್ದೇಶ ವೆಂದು ಹೇಳಬಹುದು. **ವೇದಾಂತ**ವೆಂಬುದು ಉಪನಿಷತ್ತುಗಳಲ್ಲಿ ಅಡಗಿರುವ ಸಿದ್ಧಾಂತವು. ಶ್ರೀರಾಮಾನುಜಾಚಾರ್ಯರು ತಮ್ಮ **ವಿಶಿಷ್ಟಾದ್ವೈತ** ಸಿದ್ಧಾಂತವನ್ನು ಪ್ರಚಾರಮಾಡುವದಕ್ಕಿಂತ ಮುಂಚೆ ವೇದಾಂತವಿಚಾರದ ಇತಿಹಾಸವು ಎಲ್ಲಿಗೆ ಬಂದು ನಿಂತಿತ್ತು ? ಎಂಬುದನ್ನು ವಿಚಾರಮಾಡುವದು ಈ ಸಿದ್ಧಾಂತದ ವಿಕಾಸಕ್ಕೆ ಹಿನ್ನೆಲೆ ಯನ್ನು ಕಂಡುಕೊಳ್ಳಬೇಕೆನ್ನುವವರಿಗೆ ಅತ್ಯವಶ್ಯವಾಗಿರುತ್ತದೆ.

ಈಗ್ಗೆ ನಮಗೆ ದೊರಕುವ **ಅತ್ಯಂತಪ್ರಾಚೀನವೇದಾಂತಗ್ರಂಥ**ಗಳೆಂದರೆ ಶ್ರೀಗೌಡಪಾದಾಚಾರ್ಯರ ಮಾಂಡೂಕ್ಯಕಾರಿಕೆಗಳು ಮತ್ತು ಶ್ರೀಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳು. ಬ್ರಹ್ಮವು ಚೇತನಾಚೇತನರೂಪವಾದ ಪ್ರಪಂಚಕ್ಕೆಲ್ಲ ಆತ್ಮ(ನಿಜವಾದ ಸ್ವರೂಪ)ವಾಗಿರುವ ಪರಮಾರ್ಥವು. ತೋರುತ್ತಿರುವ ರೂಪದಿಂದ ಪ್ರಪಂಚವು ಮಾಯಿಕವು, ಅವಿದ್ಯಾಕಲ್ಪಿತವಾದದ್ದು. ಅವುಗಳ ನಿಜವಾದ ಸ್ವರೂಪ ವಾಗಿರುವ ಬ್ರಹ್ಮಕ್ಕಿಂತ ಬೇರೆಯಾದ ಚಿದಚಿತ್ತುಗಳು ನಿಜವಾಗಿಲ್ಲವೇ ಇಲ್ಲ - ಎಂಬ **ಅದ್ವೈತ**ಸಿದ್ಧಾಂತವನ್ನು ಆ ಇಬ್ಬರು ಆಚಾರ್ಯರುಗಳೂ ಬೋಧಿಸಿರುತ್ತಾರೆ.

ಶಂಕರಾಚಾರ್ಯರ ಭಾಷ್ಯಗಳಲ್ಲಿಯೂ ಗೌಡಪಾದರ ಕಾರಿಕೆಗಳಲ್ಲಿಯೂ ದ್ವೈತವು ಮಾಯಾಮಾತ್ರವೆಂದು ಒಪ್ಪದ ಅನೇಕ ವೇದಾಂತಿಗಳ ಮತಗಳನ್ನು ಖಂಡಿಸಿರುವದು ಕಂಡುಬರುತ್ತದೆ. ಬ್ರಹ್ಮರೂಪವೇ ಆಗಿರುವ ಜೀವನು (೧) ವೇದಾಂತ ವಾಕ್ಯಜ್ಞಾನವನ್ನು ಮಾಡಿಕೊಂಡಬಳಿಕ ಜ್ಞಾನಾಭ್ಯಾಸ ಅಥವಾ ಉಪಾಸನೆಯನ್ನು ಅಥವಾ ಮತ್ತೆ ಯಾವದಾದರೊಂದು ಸಾಧನವನ್ನು ಮಾಡಿಕೊಂಡು ಬ್ರಹ್ಮದಲ್ಲಿ ಸೇರಿ ಮುಕ್ತಿಯನ್ನು ಹೊಂದಬೇಕಾಗಿದೆ ಎನ್ನುತ್ತಿದ್ದವರು; (೨) ಬ್ರಹ್ಮಕ್ಕಿಂತ ಭಿನ್ನನಾಗಿರುವ ಜೀವನು ಬದುಕಿರುವವರೆಗೂ ಭಗವಂತನ ಆರಾಧನೆಯನ್ನು ಮಾಡಿಕೊಂಡಿದ್ದು ದೇಹವನ್ನು ಬಿಟ್ಟಬಳಿಕ ಆತನಲ್ಲಿ ಒಂದಾಗಬೇಕಾಗಿದೆ ಎನ್ನುತ್ತಿದ್ದವರು; (೩) ಜೀವನು ಬ್ರಹ್ಮದ ವಿಕಾರ ರೂಪನಾಗಿರುವದರಿಂದ ಬ್ರಹ್ಮಕ್ಕಿಂತ ಭಿನ್ನವೂ ಅಭಿನ್ನವೂ ಆಗಿರುವ ಸ್ವರೂಪದವನಾಗಿದ್ದು ಉಪಾಸನೆಯಿಂದ ದೇಹಪಾತವಾದ ಮೇಲೆ ಬ್ರಹ್ಮದಲ್ಲಿ ಒಂದಾಗಬೇಕಾಗಿದೆ ಎನ್ನುತ್ತಿದ್ದವರು - ಎಂಬ ಮೂರು ಪಂಗಡಗಳಲ್ಲಿ ಯಾವದಾದರೊಂದಕ್ಕೆ ಆ ಹಿಂದಿನ ವೇದಾಂತಿಗಳನ್ನೆಲ್ಲ ಸೇರಿಸಿಕೊಳ್ಳಬಹುದಾಗಿದೆ.

ಈ ಮೂವರೂ ಬ್ರಹ್ಮವು ಜಗದ್ರೂಪವಾಗಿ ಪರಿಣಮಿಸುತ್ತದೆ ಎಂದು ಹೇಳುತ್ತಿದ್ದದ್ದರಿಂದ ಜಗತ್ತುತೋರುವ ರೂಪದಲ್ಲಿ ಮಾಯಾಮಾತ್ರವೇ ಎಂಬ ಶಾಂಕರಸಂಪ್ರದಾಯದ ಮತವು ಅವರ ಮತಗಳಿಗೆಲ್ಲ ವಿರುದ್ಧವಾಗಿತ್ತು. ಆದ್ದರಿಂದ ಹಿಂದಿನ ವೇದಾಂತಿಗಳು ಅದ್ವೈತಿಗಳೇ ಆಗಿದ್ದರೂ ಶಂಕರಾಚಾರ್ಯರು ಅವರ ಮತಗಳನ್ನು ಖಂಡಿಸಿ ತಮ್ಮ ಮತವು ಉಪನಿಷತ್ತುಗಳು, ಭಗವದ್ಗೀತೆ, ಮತ್ತು ಬ್ರಹ್ಮಸೂತ್ರ - ಎಂಬ ಪ್ರಸ್ಥಾನತ್ರಯಕ್ಕೆ ಹೊಂದುಗಡೆಯಾಗಿದೆ ಎಂದು ತೋರಿಸುವದಕ್ಕೆ ತಮ್ಮ ಭಾಷ್ಯಗಳನ್ನು ಬರೆದಿದ್ದರು.

ಶಂಕರಾಚಾರ್ಯರ ಈ ಮತವನ್ನು ಒಪ್ಪದೆ **ಮಂಡನಮಿಶ್ರನು** ವಾಕ್ಯಜ್ಞಾನದ ಅಭ್ಯಾಸರೂಪವಾದ ಉಪಾಸನೆಯಿಂದ ದೊರೆಯುವ ಸಾಕ್ಷಾತ್ಕಾರದಿಂದಲೇ ಮೋಕ್ಷ ವಾಗುವದು ; ಜ್ಞಾನಕರ್ಮಸಮುಚ್ಚಯದಿಂದಲೇ ಮುಕ್ತಿಯಾಗುವದೇ ಹೊರತು ಶಂಕರರು ಹೇಳಿದ್ದಂತೆ ಜ್ಞಾನವೊಂದೇ ಮುಕ್ತಿಗೆ ನೇರಾದ ಸಾಧನವೆಂಬುದು ತಪ್ಪು ಎಂದು ಪ್ರತಿಪಾದಿಸಿದ್ದನು. ಶಾಂಕರಸೂತ್ರಭಾಷ್ಯಕ್ಕೆ ಟೀಕೆಯನ್ನು ಬರೆದ **ಪಂಚಪಾದಿಕಾಕಾರರು** ಆತ್ಮಾಶ್ರಿತವಾಗಿರುವ ಅವಿದ್ಯಾಶಕ್ತಿಯು ಅಥವಾ ಮಾಯೆಯು ಜಗತ್ತಿಗೆಲ್ಲ ಉಪಾದಾನವಾಗಿರುತ್ತದೆ. ಆ ಅವಿದ್ಯೆಯು ಜ್ಞಾನದಿಂದ ಹೋದ ಮೇಲೆಯೇ ಜೀವನು ಬ್ರಹ್ಮದಲ್ಲಿ ಒಂದಾಗುವನು ಎಂಬ ಅಭಿಪ್ರಾಯವನ್ನು ಹೊರಕ್ಕೆ ತಂದರು. ಈಚೆಗೆ **ಭಾಸ್ಕರಾಚಾರ್ಯ**ರೆಂಬುವರು ಶಂಕರರ ಹಿಂದೆ **ಭರ್ತೃಪ್ರಪಂಚರೇ** ಮೊದಲಾದವರು ಪ್ರತಿಪಾದಿಸಿದ್ದ ಭೇದಾಭೇದವಾದವನ್ನು ಸ್ವಲ್ಪಮಟ್ಟಿಗೆ ಮಾರ್ಪಡಿಸಿ ಮತ್ತೆ ಮುಂದಕ್ಕೆ ತಂದರು. ಶಾಂಕರಭಾಷ್ಯಕ್ಕೆ **ಭಾಮತೀಟೀಕೆ**ಯನ್ನು ಬರೆದ **ವಾಚಸ್ಪತಿಮಿಶ್ರನು** ಮಂಡನಮಿಶ್ರನ ಅನೇಕವಾದಗಳನ್ನು ಶಂಕರಸಿದ್ಧಾಂತಕ್ಕೆ ಬೆರೆಯಿಸಿ ರೂಪಾಂತರಗೊಳಿಸಿದ ಅದ್ವೈತಸಿದ್ಧಾಂತವನ್ನು ಹೊರಕ್ಕೆ ತಂದನು. **ಇಷ್ಟಸಿದ್ಧಿ**ಯನ್ನು ಬರೆದ ವಿಮುಕ್ತಾತ್ಮರೂ **ಪಂಚಪಾದಿಕಾವಿವರಣ**ವನ್ನು ಬರೆದ ಪ್ರಕಾಶಾತ್ಮರೂ ಪಂಚಪಾದಿಕೆಯಲ್ಲಿದ್ದ ಅವಿದ್ಯೋಪಾದಾನವಾದದ ಅದ್ವೈತವನ್ನು ಬಲಪಡಿಸಿದರು. ಶ್ರೀಹರ್ಷನು **ಖಂಡನಖಂಡಖಾದ್ಯ**ವೆಂಬ ತನ್ನ ಗ್ರಂಥದಲ್ಲಿ ದ್ವೈತಮಾತ್ರವನ್ನು ಖಂಡಿಸುವ ಯುಕ್ತಿಪ್ರಕಾರವನ್ನು ಹೊರಪಡಿಸಿ ಅದ್ವೈತಕ್ಕೆ ಬೆಂಬಲವನ್ನು ಕೊಟ್ಟನು. ಇನ್ನೂ ಕೆಲವರು ಆತನ ಕ್ರಮವನ್ನು ಅನುಸರಿಸಿ ದ್ವೈತಖಂಡನೆಯನ್ನು ಮಾಡಿ ಅವಿದ್ಯೋಪಾದಾನವಾದವನ್ನು ಗಟ್ಟಿಗೊಳಿಸಿದರು.

ಇದಿಷ್ಟೂ ಮುಕ್ತಿಯಲ್ಲಿ ಜೀವನು ಬ್ರಹ್ಮದಲ್ಲಿ ಸಂಪೂರ್ಣವಾಗಿ ಬೆರೆತು ಹೋಗುವನೆಂಬ ಅದ್ವೈತವೇದಾಂತಿಗಳ ವಿಚಾರದ ಇತಿಹಾಸದ ಸಂಕ್ಷೇಪವು.[1]

---

1. ಆಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟಿತವಾಗಿರುವ **'ವೇದಾಂತವಿಚಾರದ ಇತಿಹಾಸ'** ವೆಂಬ ಗ್ರಂಥದಲ್ಲಿ ಈ ವಿಷಯವನ್ನು ವಿಸ್ತಾರವಾಗಿ ತಿಳಿಸಿರುತ್ತದೆ.

ಇಲ್ಲಿಂದ ಮುಂದಕ್ಕೆ ಪ್ರಪಂಚಸತ್ಯತ್ವವಾದದ ಜೊತೆಗೆ ಜೀವಬ್ರಹ್ಮವೈಲಕ್ಷಣ್ಯವನ್ನು ಒತ್ತಿಹೇಳುವ ವೇದಾಂತದ ಉಪನದಿಯೊಂದು ಈ ವಿಚಾರಪ್ರವಾಹಕ್ಕೆ ಬಂದು ಸೇರಿಕೊಂಡಿತು. ಈ ಹೊಸ ವೇದಾಂತದಲ್ಲಿ ಉಪನಿಷತ್ತುಗಳು, ಬ್ರಹ್ಮಸೂತ್ರ, ಭಗವದ್ಗೀತೆ- ಇವುಗಳ ಆಧಾರವೇ ಅಲ್ಲದೆ ಸ್ಮೃತಿಪುರಾಣಾದಿಗಳ ಬೆಂಬಲವನ್ನೂ ವಿಶೇಷವಾಗಿ ಬಳಸಿಕೊಂಡ ಭಕ್ತಿಪ್ರಧಾನವಾದ ಪ್ರಕ್ರಿಯೆಯ ಆಧಾರವೂ ಇದ್ದದ್ದರಿಂದ ಅದು ಪಂಡಿತರಿಗೂ ಪಾಮರರಿಗೂ ಸಮಾನವಾಗಿಯೇ ಮನಮೆಚ್ಚಾಗುವ ಶಕ್ತಿಯುಳ್ಳದ್ದಾಗಿತ್ತು. ಈ ವೇದಾಂತದಲ್ಲಿ ಶ್ರೀರಾಮಾನುಜಾಚಾರ್ಯರಿಗೆ ಒಂದು ಉಚ್ಚಸ್ಥಾನವು ದೊರಕಿರುತ್ತದೆ.

೨. ರಾಮಾನುಜರ ಸಿದ್ಧಾಂತಕ್ಕೆ ಸಂಪ್ರದಾಯದ ಮೂಲಾಧಾರಗಳು

ರಾಮಾನುಜರು ತಮ್ಮ ವೇದಾಂತಗ್ರಂಥಗಳನ್ನು ನಿರ್ಮಿಸುವದಕ್ಕೆ ಮುಂಚೆಯೇ ದಕ್ಷಿಣಭಾರತದಲ್ಲಿ ಹಲವು ಭಕ್ತ್ಯುದ್ಬೋಧಕಘಟನೆಗಳು ನಡೆದಿದ್ದವು. ಅದ್ವೈತವನ್ನು ವೇದಾಧಿಕಾರಿಗಳಿಗೇ ಮುಖ್ಯವಾಗಿ ಬೋಧಿಸಬೇಕೆನ್ನುತ್ತಿದ್ದ ಬ್ರಾಹ್ಮಣರೇ ಅಲ್ಲದೆ, ಶಿವಭಕ್ತಿಯನ್ನೂ ವಿಷ್ಣುಭಕ್ತಿಯನ್ನೂ ಜನಸಾಮಾನ್ಯರಲ್ಲಿ ಹರಡುವದಕ್ಕೆ **'ಅಡಿಯಾರು'** ಗಳೆಂದೂ **'ಆಳ್ವಾರು'** ಗಳೆಂದೂ ಪ್ರಖ್ಯಾತರಾಗಿದ್ದ ಭಕ್ತರು ದೇಶದಲ್ಲೆಲ್ಲ ಸಂಚರಿಸುತ್ತಿದ್ದರು. ಅವರು ತಮಿಳಿನಲ್ಲಿ ರಚಿಸಿದ್ದ 'ತೇವಾರಮ್' ಮತ್ತು 'ಪ್ರಬಂಧ' ಗಳೆಂಬ ಸ್ತೋತ್ರಗ್ರಂಥಗಳು ವೇದಸಮಾನವೆಂದು ಭಾವಿಸಲ್ಪಟ್ಟು ದೇವಾಲಯಗಳಲ್ಲಿ ಅರ್ಚನೆಯ ಕಾಲದಲ್ಲಿ ಪಠನಕ್ಕೆ ಬಳಕೆಯಾಗುವ ಕಾಲವು ಬಂದಿತ್ತು. ಆಳ್ವಾರುಗಳ ಕಾಲವಾದ ಮೇಲೆ **'ಆಚಾರ್ಯರು'** ಗಳು ವೈಷ್ಣವ ಪಂಥವನ್ನು ಹರಡಿದರು. **ನಾಥಮುನಿ, ಯಾಮುನಾಚಾರ್ಯ** - ಎಂಬ ಇಬ್ಬರು ಆಚಾರ್ಯರುಗಳು ವಿಷ್ಣುಭಕ್ತಿಪ್ರಚಾರವನ್ನು ಮಾಡಿದ್ದರು. ನಾಥಮುನಿಗಳು ಪ್ರಬಂಧಗಳನ್ನು ದೇವಾಲಯಗಳಲ್ಲಿ ಗಾನಮಾಡುವ ಪದ್ಧತಿಯನ್ನು ಏರ್ಪಡಿಸಿದ್ದರು; ಯಾಮುನಾಚಾರ್ಯರು ಶ್ರೀರಂಗದಲ್ಲಿದ್ದುಕೊಂಡು ಆಗಮಪ್ರಾಮಾಣ್ಯ, ಸಿದ್ಧಿತ್ರಯ, ಗೀತಾರ್ಥಸಂಗ್ರಹ, ಚತುಃಶ್ಲೋಕೀ, ಸ್ತೋತ್ರರತ್ನ- ಮುಂತಾದ ಸಂಸ್ಕೃತಗ್ರಂಥಗಳನ್ನು ಬರೆದಿದ್ದರು.

ಯಾಮುನಾಚಾರ್ಯರು ಯಾಮುನಾಚಾರ್ಯ(ಆಳವಂದಾರ)ರ ಮೊಮ್ಮಗಳ ಹೊಟ್ಟೆಯಲ್ಲಿ ಕೇಶವಭಟ್ಟನೆಂಬಾತನ ಮಗನಾಗಿ ಹುಟ್ಟಿದರು. ಪ್ರಾಪ್ತವಯಸ್ಕರಾದ ಮೇಲೆ ಕಂಚಿಯಲ್ಲಿ **ಯಾದವಪ್ರಕಾಶ**ನೆಂಬಾತನ ಶಿಷ್ಯರಾಗಿ ಅದ್ವೈತಗ್ರಂಥಗಳ ಅಭ್ಯಾಸವನ್ನು ಮಾಡಿದರು. ಯಾದವನ ಬೋಧನಕ್ರಮವು ಅವರಿಗೆ ರುಚಿಸದೆ ಇದ್ದದ್ದರಿಂದ ಆ ಊರಿನಲ್ಲಿ ವರದರಾಜನ ಸಾಕ್ಷಾತ್ಕಾರವನ್ನು

ಪಡೆದುಕೊಂಡಿದ್ದವನೆಂದು ಪ್ರಸಿದ್ಧನಾಗಿದ್ದ **ತಿರುಕ್ಕಚ್ಚಿನಂಬಿ**(ಕಾಂಚೀಪೂರ್ಣ) ನೆಂಬ ವೈಶ್ಯನಿಗೆ[1] ಸಹಾಯಕರಾಗಿ ವರದರಾಜನ ಸೇವೆಗೆ ನಿಂತರು ; ಇಷ್ಟರಲ್ಲಿ ಯಾಮುನಾಚಾರ್ಯರು ಈ ಲೋಕವನ್ನು ಬಿಟ್ಟು ತೆರಳಿದರು. ಅವರು ಸಾಯುವ ಕಾಲದಲ್ಲಿ ರಾಮಾನುಜರನ್ನು ನೋಡಬೇಕೆಂದು ಬಯಸಿದ್ದರು ; ಆದರೆ ಅದು ನೆರವೇರಲಿಲ್ಲ. ಬ್ರಹ್ಮಸೂತ್ರಕ್ಕೆ ಒಂದು ಸರಳವಾದ ಭಾಷ್ಯವನ್ನು ಅವರಿಂದ ಬರೆಯಿಸಬೇಕಂಬ ಇಚ್ಛೆ ಯಾಮುನಾಚಾರ್ಯರಿಗೆ ಇತ್ತೆಂದು ತಿಳಿದುಬರಲು ತಾವು ಆ ಕೆಲಸವನ್ನು ಮಾಡುವದಾಗಿ ವಾಗ್ದಾನವಿತ್ತರು. ಕಂಚಿಯ ವರದರಾಜನಿಂದ ಸಿದ್ಧಾಂತದ ರಹಸ್ಯವನ್ನು ತಿಳಿದುಕೊಳ್ಳಬೇಕೆಂದು ಅದಕ್ಕಾಗಿ ತಿರುಕ್ಕಚ್ಚಿನಂಬಿಯನ್ನು ಪ್ರಾರ್ಥಿಸಲು ನಂಬಿಯ ಮೂಲಕವಾಗಿ ವರದರಾಜನು **ಆರು ಮಾತುಗಳನ್ನು** ಹೇಳಿ ಕಳುಹಿಸಿದನು : "(೧) ವರದರಾಜನೇ, ಶ್ರೀಮನ್ನಾರಾಯಣನೇ, ಪರತತ್ತ್ವವು ; (೨) ಭೇದವೇ ನಿಜವಾದ ದರ್ಶನವು ; (೩) ಪ್ರಪತ್ತಿಯೇ ಮುಖ್ಯ ಉಪಾಯವು ; (೪) ಮರಣ ಕಾಲದಲ್ಲಿ ಭಗವಂತನ ಸ್ಮರಣೆಯಿದ್ದರೇ ಮುಕ್ತಿಯೆಂಬ ನಿಯಮವಿಲ್ಲ; (೫) ಶರೀರಪಾತವಾದಮೇಲೆ ಮುಕ್ತಿ ; (೬) ಪೆರಿಯನಂಬಿಯನ್ನು (ಮಹಾಪೂರ್ಣರನ್ನು) ಆಚಾರ್ಯರಾಗಿ ಮಾಡಿಕೋ." ವರದರಾಜನ ಅಪ್ಪಣೆಯಂತೆ ರಾಮಾನುಜರು ಶ್ರೀರಂಗಕ್ಕೆ ಹೋಗಿ ಮಹಾಪೂರ್ಣರಿಂದ ದೀಕ್ಷೆಯನ್ನು ಪಡೆದರು. ಮುಂದೆ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಬೇರೆಬೇರೆಯ ಗುರುಗಳಿಂದ **ಪ್ರಬಂಧ**ಗಳನ್ನು ಪಡೆಸಿ **ರಹಸ್ಯತ್ರಯ**ವನ್ನು ಅರಿತುಕೊಂಡು ತಮ್ಮ ವಿಶಿಷ್ಟಾದ್ವೈತಗ್ರಂಥಗಳನ್ನು ಬರೆದರು.

ಮೇಲೆ ಕೊಟ್ಟಿರುವ ಸಂಕ್ಷಿಪ್ತಜೀವನಚರಿತ್ರೆಯಿಂದ ದ್ರಾವಿಡಪ್ರಬಂಧಗಳು, ಯಾಮುನಾಚಾರ್ಯರ ಗ್ರಂಥಗಳು, ಆ ಕಾಲದ ಶ್ರೀವೈಷ್ಣವರುಗಳ ಸಹಚರ್ಯದಿಂದ ಬಂದ ತಿಳಿವಳಿಕೆ - ಇವುಗಳೆಲ್ಲವೂ ಸೇರಿ ರಾಮಾನುಜರ ವೇದಾಂತದಲ್ಲಿ ವಿಷ್ಣುಭಕ್ತಿಗೆ ಕೇಂದ್ರಸ್ಥಾನವನ್ನು ಕಲ್ಪಿಸಿಕೊಟ್ಟವೆಂಬುದು ಸ್ಪಷ್ಟವಾಗುತ್ತದೆ. **ಪಾಂಚರಾತ್ರಾಗಮ**ವನ್ನು ಉಪಯೋಗಿಸಿಕೊಂಡು ಭಕ್ತಿಯೋಗವನ್ನು ಪ್ರಧಾನವಾಗಿ ಹಿಡಿದಿದ್ದ ಪ್ರಪಂಚಸತ್ಯತ್ವವಾದಿಗಳಾದ ಅದ್ವೈತಿಗಳೂ ಈ ಹಿಂದೆಯೇ ಆಗಿ ಹೋಗಿದ್ದರಾದರೂ **ಚಿದಚಿದೀಶ್ವರರ ಸ್ವರೂಪಸ್ವಭಾವಗಳನ್ನು ಒಂದರಲ್ಲೊಂದನ್ನು**

1. ಆ. ಗೋವಿಂದಾಚಾರ್ಯರು ಇಂಗ್ಲಿಷಿನಲ್ಲಿ ಬರೆದಿರುವ ರಾಮಾನುಜಚರಿತ್ರೆಯಲ್ಲಿ ಕಾಂಚೀಪೂರ್ಣನು ವೈಶ್ಯನೆಂದಿದೆ. ಆದರೆ ಪ್ರೊಫೆಸರ್ ದಾಸಗುಪ್ತರವರು ಬರೆದಿರುವ "History of Indian Philosophy " (Vol. III) ಎಂಬ ಗ್ರಂಥದಲ್ಲಿ (ಪುಟ ೯೮) ಅವನು ಶೂದ್ರನೆಂದಿದೆ. ನಾನು ಆಚಾರ್ಯರ ಅಭಿಪ್ರಾಯವನ್ನೇ ಇಟ್ಟುಕೊಂಡಿರುತ್ತೇನೆ. ಶ್ರೀರಾಮಾನುಜಾಚಾರ್ಯರ ಚರಿತ್ರೆಗೆ ದಿವ್ಯಸೂರಿಚರಿತೆ, ಪ್ರಪನ್ನಾಮೃತ- ಎಂಬ ಗ್ರಂಥಗಳು ಮುಖ್ಯಮೂಲಗ್ರಂಥಗಳು.

ಬೆರೆಯಿಸದೆ, ಆ ಮೂರಕ್ಕೂ ನಿತ್ಯಸಂಬಂಧವನ್ನೂ ಜೀವರಿಗೆ ಭಕ್ತಿಪ್ರಪತ್ತಿಗಳ ಮೂಲಕ ಪರಮಪುರುಷಾರ್ಥವು ದೊರೆಯುವದೆಂಬುದನ್ನೂ ಇತಿಹಾಸಪುರಾಣಗಳ ಮತ್ತು ಉಪನಿಷತ್ತುಗಳ ಆಧಾರದಮೇಲೆ ನಿಲ್ಲಿಸಿ ಶ್ರುತಿಸ್ಮೃತಿಪುರಾಣಾಗಮಗಳಿಗೆ ಸಾಮರಸ್ಯವನ್ನು ಮಾಡಿಕೊಟ್ಟ ಕೀರ್ತಿಯು ಮುಖ್ಯವಾಗಿ ಶ್ರೀರಾಮಾನುಜರಿಗೇ ಸಲ್ಲತಕ್ಕದ್ದಾಗಿರುತ್ತದೆ.

'ಭಗವದ್ಬೋಧಾಯನ-ಟಙ್ಕ-ದ್ರಮಿಡ-ಗುಹಾದೇವ-ಕಪರ್ದಿ-ಭಾರುಚಿ-ಪ್ರಭೃತ್ಯವಿಗೀತಶಿಷ್ಟಪರಿಗೃಹೀತಪುರಾತನವೇದವೇದಾನ್ತವ್ಯಾಖ್ಯಾನಸುವ್ಯಕ್ತಾರ್ಥ ಶ್ರುತಿನಿಕರದರ್ಶಿತೋಽಯಂ ಪನ್ಥಾಃ' (ಖಿಂ. ೬೩, ಪು.೧೧೭) ಎಂಬ ವಾಕ್ಯದಲ್ಲಿ ಬೋಧಾಯನ, ಟಂಕ, ದ್ರಮಿಡ, ಗುಹಾದೇವ, ಕಪರ್ದಿ, ಭಾರುಚಿ- ಮೊದಲಾದ ಶಿಷ್ಟರು ಒಪ್ಪಿದ ಅಭಿಪ್ರಾಯಾನುಸಾರವಾಗಿ ತಮ್ಮ ವೇದಾಂತದ ಮಾರ್ಗವಿದೆ ಎಂದು ಈ ಆಚಾರ್ಯರು ಹೇಳಿಕೊಂಡಿರುತ್ತಾರೆ. ಪ್ರಕೃತಗ್ರಂಥದಲ್ಲಿ ಗುಹಾದೇವ, ಕಪರ್ದಿ, ಭಾರುಚಿ- ಇವರ ವಾಕ್ಯಗಳನ್ನೇನೂ ಉದಾಹರಿಸಿರುವದಿಲ್ಲ. **ಟಂಕ** (ವಾಕ್ಯಕಾರರು), **ದ್ರಮಿಡ** (ಭಾಷ್ಯಕಾರರು) - ಇವರ ವಾಕ್ಯಗಳು ಅಲ್ಲಲ್ಲಿ ಕಾಣುತ್ತಿವೆ. **ಬೋಧಾಯನ**ರೆಂಬ ವೃತ್ತಿಕಾರರ ಮತವನ್ನು ಶ್ರೀಭಾಷ್ಯದಲ್ಲಿ ಉದಾಹರಿಸಿರುವದು ಕಾಣುತ್ತಿದೆ. ಈ ಪೂರ್ವಾಚಾರ್ಯರುಗಳು ಯಾರೆಂಬ ಬಗ್ಗೆ ಗ್ರಂಥವಿಮರ್ಶಕರಲ್ಲಿ ಮತಭೇದವಿರುತ್ತದೆ. ಶಂಕರಾಚಾರ್ಯರಿಗಿಂತಲೂ ಹಿಂದೆ ಇದ್ದ ಬ್ರಹ್ಮನಂದಿಯೇ ಟಂಕನೆಂಬ **ವಾಕ್ಯಕಾರ**ನೆಂದೂ ಆ ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಆಗಾಗ್ಗೆ ಉದಾಹರಿಸಿರುವ ದ್ರವಿಡಾಚಾರ್ಯರೇ **ದ್ರಮಿಡಭಾಷ್ಯಕಾರ**ರೆಂದೂ ಕೆಲವರು ಅಭಿಪ್ರಾಯಪಟ್ಟಿರುತ್ತಾರೆ. ಈ ಅಭಿಪ್ರಾಯವು ಸರಿಯಲ್ಲವೆಂದು ಅನೇಕ ಕಾರಣಗಳಿಂದ ನಾನು ಗೊತ್ತುಪಡಿಸಿಕೊಂಡಿರುತ್ತೇನೆ. ಇಂಥ ಕಾರಣಗಳಲ್ಲಿ ಮುಖ್ಯ ವಾದದ್ದು ಯಾವದೆಂದರೆ, **ಅದ್ವೈತಗ್ರಂಥಗಳಲ್ಲಿ ಉದಾಹರಿಸಿರುವ ಬ್ರಹ್ಮನಂದಿಯ ಮತ್ತು ದ್ರವಿಡಾಚಾರ್ಯರ ವಾಕ್ಯಗಳು ಶಾಂಕರಾದ್ವೈತಪರವೆಂಬುದು ಅತ್ಯಂತಸ್ಫುಟವಾಗಿರುತ್ತದೆ ; ರಾಮಾನುಜರು ಉದಾಹರಿಸಿರುವ ಟಂಕ ಮತ್ತು ದ್ರಮಿಡಾಚಾರ್ಯ (ದ್ರವಿಡಾಚಾರ್ಯರಲ್ಲ)- ಇವರಿಬ್ಬರೂ ಅದ್ವೈತವಿರೋಧಿಗಳೆಂಬುದೂ ಸ್ಫುಟವಾಗಿಯೇ ಇರುತ್ತದೆ.** ಈ ವಿಷಯದಲ್ಲಿ ವಿಸ್ತಾರವಾಗಿ ಬರೆಯತಕ್ಕದ್ದಿರುವದರಿಂದ ಇದನ್ನು **ಶ್ರೀಭಾಷ್ಯದ** ಅನುವಾದದ ಟೀಕೆಯಲ್ಲಿ ವಿಮರ್ಶೆಗೆ ಇಟ್ಟುಕೊಳ್ಳುವೆನು.

೩. ಯಾಮುನಾಚಾರ್ಯರ ಸಿದ್ಧಿತ್ರಯ

ಶ್ರೀರಾಮಾನುಜಾಚಾರ್ಯರು ವೇದಾರ್ಥಸಂಗ್ರಹವನ್ನು ಬರೆಯುವದಕ್ಕೆ ಆರಂಭಿಸಿದಾಗ ತಮ್ಮ ಮನಸ್ಸಿನಲ್ಲಿ ಏನನ್ನು ಲಕ್ಷ್ಯವಾಗಿಟ್ಟುಕೊಂಡಿದ್ದರೆಂಬುದನ್ನು

ಗ್ರಂಥದ **ಮಂಗಲಶ್ಲೋಕ**ಗಳಿಂದ ಗೊತ್ತುಪಡಿಸುವದಕ್ಕೆ ಬರುವಂತಿದೆ. 'ಪರಮಾತ್ಮನಾದ ವಿಷ್ಣುವು ಸಕಲ ಚಿದಚಿತ್ತುಗಳಿಗೂ ಶೇಷಿ, ನಿರ್ಮಲವಾದ ಅನನ್ತಕಲ್ಯಾಣಗಳ ನಿಧಿಯು'- ಎಂಬ ತಮ್ಮ ಸಿದ್ಧಾಂತವನ್ನು ಮೊದಲನೆಯ ಶ್ಲೋಕದಲ್ಲಿ ಸಂಗ್ರಹಿಸಿರುತ್ತಾರೆ. ಎರಡನೆಯ ಶ್ಲೋಕದಲ್ಲಿ (೧) ಬ್ರಹ್ಮವೇ ಭ್ರಾಂತಿಯಿಂದ ಸಂಸಾರವನ್ನು ಹೊಂದಿರುತ್ತದೆ- ಎಂಬ ಶಾಂಕರ ಮತ ; (೨) ಬೇರೊಂದು ಉಪಾಧಿಯ ನಿಮಿತ್ತದಿಂದ ಅದು ಸಂಸಾರಿಯಾಗಿರುತ್ತದೆ ಎಂಬ ಭಾಸ್ಕರಮತ ; (೩) ಚಿದಚಿತ್ತುಗಳಿಗೆ ಸೇರಿದ ಅಶುಭಕ್ಕೆ ಅದು ಆಶ್ರಯವಾಗಿರುತ್ತದೆ ಎಂಬ ಯಾದವಪ್ರಕಾಶಮತ- ಈ ಮೂರು ಮತಗಳನ್ನು ಅವರು ಪರಾಮರ್ಶಿಸಿರುತ್ತಾರೆ. ಈ ಮೂರು ಬಗೆಯ ತಮಸ್ಸನ್ನು ಯಾಮುನಮುನಿಗಳು ತೊಲಗಿಸಿರುತ್ತಾರೆಂದು ಹೇಳಿದೆ. ಗ್ರಂಥಾರಂಭದಲ್ಲಿ ಈ ಮೂರು ಮತಗಳನ್ನು ಒಂದೊಂದಾಗಿ ಖಂಡಿಸಿಯೇ ಸ್ವಪಕ್ಷಸ್ಥಾಪನೆಗೆ ಪ್ರಾರಂಭಿಸಿರುವದರಿಂದ ಯಾಮುನರು ಈ ಮತಗಳನ್ನು ಖಂಡಿಸಿ ವಿಶಿಷ್ಟಾದ್ವೈತವನ್ನು ಸ್ಥಾಪಿಸಿದ್ದರೆಂಬುದು ರಾಮಾನುಜರ ಅಭಿಪ್ರಾಯವೆಂದಾಗುತ್ತದೆ.

ಯಾಮುನಾಚಾರ್ಯರು ರಚಿಸಿರುವ **'ಸಿದ್ಧಿತ್ರಯ'**ವೆಂಬ ಗ್ರಂಥದಲ್ಲಿ ಅನುಭೂತಿಸ್ವರೂಪವೇ ಪರಮಾತ್ಮನೆಂಬ **ಇಷ್ಟಸಿದ್ಧಿಕಾರರ** ಮತವನ್ನೂ, ಲೌಕಿಕ ಜ್ಞಾನಗಳ ಫಲರೂಪವಾದ ಸಂವಿತ್ತೇ ವೇದಾಂತಪ್ರಮೇಯವಾದ ಪರಮಾತ್ಮನೆಂಬ ಸುರೇಶ್ವರಾಚಾರ್ಯರ ಮತವನ್ನೂ ಅನುವಾದಮಾಡಿಕೊಂಡು ತಿರಸ್ಕರಿಸಿದೆ (ಪು.೨೧) ; ಪಂಚಪಾದಿಕಾಸಂಮತವಾದ ಭಾವರೂಪಾಜ್ಞಾನವನ್ನು ಖಂಡಿಸಿದೆ ; ಆತ್ಮನು ಜ್ಞಾತೃವೆಂದೂ (ಪು.೨೬), ಮಾನಸಪ್ರತ್ಯಕ್ಷಗ್ರಾಹ್ಯನೆಂದೂ ಯೋಗಿ ಪ್ರತ್ಯಕ್ಷಗಮ್ಯನೆಂದೂ ಸಾಧಿಸಿದೆ (ಪು. ೪೨, ೫೫, ೬೮). 'ಏವಮಾತ್ಮಾ ಸ್ವತಃ ಸಿದ್ಧ್ಯನ್ನಾಗಮೇನಾನುಮಾನತಃ । ಯೋಗಾಭ್ಯಾಸಾನುಭವಾ ಸ್ವಷ್ಟಂ ಪ್ರತ್ಯಕ್ಷೇಣ ಪ್ರಕಾಶ್ಯತೇ ॥' (ಪು. ೬೯) ಎಂದು ಆತ್ಮಸಿದ್ಧಿಗೆ ಶಾಸ್ತ್ರ, ಅನುಮಾನ, ಯೋಗ- ಎಂಬ ಮೂರು ಪ್ರಮಾಣಗಳನ್ನು ಒಪ್ಪಿರುತ್ತದೆ. ಪ್ರಪಂಚವು ಕಾರ್ಯವಾಗಿರುವದರಿಂದ ಈಶ್ವರಕರ್ತೃಕವಾಗಿರಬಹುದು (ಪು. ೭೫), ಈಶ್ವರನು ಕರ್ತೃವಾದರೆ ಸಶರೀರನಾಗಿರಬೇಕೆಂಬ ನಿರ್ಬಂಧವಿಲ್ಲ (ಪು. ೭೭), ಜಗತ್ತನ್ನು ಸೃಷ್ಟಿಮಾಡುವ ಸಾಮರ್ಥ್ಯವುಳ್ಳ ನಿತ್ಯವಾದ ಮನಸ್ಸಿನಿಂದಲೇ ಸೃಷ್ಟ್ಯಾದಿಗಳನ್ನು ಮಾಡಬಹುದಾಗಿದೆ (ಪು. ೭೮, ೭೯) ; ಆದ್ದರಿಂದ ಚಿದಚಿತ್ತುಗಳಿಂದೊಡಗೂಡಿರುವ ಈ ಜಗತ್ತು - ದೇಶವು ಒಬ್ಬ ರಾಜನಿಂದ ಆಳಲ್ಪಡುತ್ತಿರುವಂತೆ ಒಬ್ಬ ಪ್ರಧಾನಪುರುಷನಿಂದ ಆಳಲ್ಪಡುತ್ತಿದೆ- ಎಂದು (ಪು.೮೦) ಈಶ್ವರಸಿದ್ಧಿಯನ್ನು ಮಾಡಿದೆ. ಹೀಗೆ ಸಿದ್ಧಿತ್ರಯದಲ್ಲಿ ವೇದಾರ್ಥಸಂಗ್ರಹಸಿದ್ಧಾಂತದ ಬೀಜರೂಪವಿತ್ತೆಂದು ಹೇಳಬಹುದಾದರೂ ಪರಮಾತ್ಮನು ಚಿದಚಿದ್ವಿಶಿಷ್ಟಚೈತನ್ಯರೂಪನಾಗಿ ಕಾರಣವೂ ಕಾರ್ಯವೂ ಆಗಿ ಲೀಲೆಯಿಂದ ತೋರಿ

ಕೊಳ್ಳುತ್ತಿರುತ್ತಾನೆ- ಎಂಬ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಧಾನ ಪ್ರಕ್ರಿಯೆಯು ಅಲ್ಲಿ ಕಾಣಬರುವದಿಲ್ಲ. ವೇದಾರ್ಥಸಂಗ್ರಹದಲ್ಲಿ ಬೆಳೆಯಿಸಿರುವ ಮಿಕ್ಕ ಅನೇಕ ಪ್ರಕ್ರಿಯೆಗಳೂ ಅಲ್ಲಿ ಕಾಣುವದಿಲ್ಲ. ಹೀಗಿರುವದರಿಂದ ರಾಮಾನುಜರಿಗೆ ಈ ವಾದಗಳು ಯಾರಿಂದ ಹೇಗೆ ದೊರೆತವು ಎಂಬುದನ್ನು ವಿಶಿಷ್ಟಾದ್ವೈತದ ಉಪಲಬ್ಧಗ್ರಂಥಗಳಿಂದ ನಿರ್ಣಯಿಸುವದು ಅಸಾಧ್ಯವಾಗಿದೆ.

೪. ರಾಮಾನುಜಗ್ರಂಥಗಳಲ್ಲಿ ವೇದಾರ್ಥಸಂಗ್ರಹದ ಅನುಕ್ರಮಸ್ಥಾನ

ಶ್ರೀರಾಮಾನುಜಾಚಾರ್ಯರು ಬರೆದಿರುವ ಗ್ರಂಥಗಳಲ್ಲಿ **"ವೇದಾಂತಸಾರ"**-ದ ಅನುವಾದದ ಒಂದು ಭಾಗವನ್ನು ಈವರೆಗೆ ಪ್ರಕಟಿಸಿದ್ದಾಗಿದೆ. ಅದರಲ್ಲಿ ಶ್ರೀಭಾಷ್ಯದಲ್ಲಿ ಹೇಳಿರುವದರ ಸಾರವಿದೆ. **"ವೇದಾಂತದೀಪ"ದಲ್ಲಿ** 'ಭಾಷ್ಯದಲ್ಲಿ ಹೇಳಿರುವ ಅಧಿಕರಣಗಳ ಅರ್ಥವನ್ನು ಸುಲಭವಾಗಿ ತಿಳಿಸುವದಕ್ಕಾಗಿ ಅದನ್ನು ಇಲ್ಲಿ ಸಂಕ್ಷೇಪದಿಂದ ಹೇಳಿದೆ' - ಎಂದು ಬರೆದಿರುವದರಿಂದ ಅದು ಭಾಷ್ಯವಾದ ಮೇಲೆಯೇ ಬರೆದದ್ದೆಂಬುದು ನಿರ್ವಿವಾದ. ಆಚಾರ್ಯರು ವೇದಾಂತಸಾರವನ್ನು ಮೊದಲು ಬರೆದು ಅದರ ಅಭಿಪ್ರಾಯವನ್ನು ಶ್ರೀಭಾಷ್ಯದಲ್ಲಿ ವಿಸ್ತರಿಸಿದ ಬಳಿಕ ಅಧಿಕರಣಾರ್ಥವನ್ನು ಸಂಕ್ಷೇಪವಾಗಿ ತಿಳಿಸುವದಕ್ಕೆಂದು ವೇದಾಂತದೀಪವನ್ನು ಬರೆದಿರಬಹುದು. ಗೀತಾಭಾಷ್ಯವನ್ನು ಸೂತ್ರಭಾಷ್ಯವಾದ ಮೇಲೆ ಬರೆದರೋ, ಅಥವಾ ಎಲ್ಲಕ್ಕೂ ಮೊದಲೇ ಬರೆದರೋ, ಹೇಳುವದು ಕಷ್ಟ. ಆದರೂ ಗೀತಾಭಾಷ್ಯದಲ್ಲಿ ವೇದಾರ್ಥಸಂಗ್ರಹದಲ್ಲಿ ಬರೆದಿರುವ ಅನೇಕವಿಷಯಗಳು ಅಲ್ಲಲ್ಲಿ ಅದೇ ಕ್ರಮದಲ್ಲಿ ಪ್ರತಿಪಾದಿತವಾಗಿರುವದು ಕಂಡುಬರುತ್ತದೆ. ಶ್ರೀಭಾಷ್ಯದಲ್ಲಿ ವೇದಾರ್ಥಸಂಗ್ರಹವನ್ನು ಪರಾಮರ್ಶಿಸಿಯೇ ಇರುತ್ತದೆ. ಆದ್ದರಿಂದ ಸಿದ್ಧಾಂತ ಪ್ರಧಾನವಾಗಿರುವ ಈ ಐದು ಗ್ರಂಥಗಳಲ್ಲಿ ವೇದಾರ್ಥಸಂಗ್ರಹವೇ ಮೊಟ್ಟಮೊದಲು ಬರೆದದ್ದೆಂದು ಗೊತ್ತಾಗುತ್ತದೆ. ಆದ್ದರಿಂದ ಸದ್ಯಕ್ಕೆ ಈ ಗ್ರಂಥಗಳ ಕಾಲಾನುಕ್ರಮವನ್ನು ಹೀಗೆಂದು ಇಟ್ಟುಕೊಂಡರೆ ತಪ್ಪಾಗಲಾರದು ; ವೇದಾರ್ಥಸಂಗ್ರಹ, ಗೀತಾಭಾಷ್ಯ, ವೇದಾಂತಸಾರ, ಶ್ರೀಭಾಷ್ಯ , ವೇದಾಂತದೀಪ, ಶರಣಾಗತಿಗದ್ಯ, ಶ್ರೀರಂಗಗದ್ಯ , ವೈಕುಂಠಗದ್ಯ , ನಿತ್ಯಗ್ರಂಥ- ಇವು ಆಚಾರ್ಯರ ಸಾಧನಪ್ರಧಾನವಾದ ಗ್ರಂಥಗಳು.

ಮೇಲಿನ ಅನುಕ್ರಮವನ್ನು ಅಂಗೀಕರಿಸಿದರೆ ಆಚಾರ್ಯರು ಉಪನಿಷತ್ಪ್ರಸ್ಥಾನ (ವೇದಾರ್ಥಸಂಗ್ರಹ), ಗೀತಾಪ್ರಸ್ಥಾನ (ಗೀತಾಭಾಷ್ಯ), ನ್ಯಾಯಪ್ರಸ್ಥಾನ (ವೇದಾಂತಸಾರ)- ಎಂಬ ಪ್ರಸ್ಥಾನತ್ರಯದ ತಾತ್ಪರ್ಯವನ್ನು ತಿಳಿಸುವ ಗ್ರಂಥ

ಗಳನ್ನು ಮೊದಲು ರಚಿಸಿ, ಆಮೇಲೆ ಅದನ್ನು ಶ್ರೀಭಾಷ್ಯ, ವೇದಾಂತದೀಪಗಳಿಂದ ಸ್ಪಷ್ಟಪಡಿಸಿದರೆಂದೂ ಆ ಬಳಿಕ ಶಿಷ್ಯರಿಗೆ ಉಪಯೋಗವಾಗುವ ಗ್ರಂಥಗಳನ್ನು ಬರೆದರೆಂದೂ ನಂಬಬಹುದಾಗುವದು.

ವೇದಾರ್ಥಸಂಗ್ರಹವನ್ನು ಬಿಟ್ಟರೆ ಉಪನಿಷತ್ತುಗಳ ಮೇಲೆ ಸ್ವತಂತ್ರವಾಗಿ ಬೇರೆ ಯಾವ ಭಾಷ್ಯಗಳನ್ನೂ ಆಚಾರ್ಯರು ಬರೆದಿರುವದಿಲ್ಲ. ಉಪನಿಷತ್ತುಗಳ ಅಭಿಪ್ರಾಯವನ್ನು ಹೇಗೆ ನಿರ್ಣಯಿಸಬೇಕೆಂಬುದನ್ನು ಈ ಗ್ರಂಥದಲ್ಲಿ ಸ್ಪಷ್ಟವಾಗಿ ತೋರಿಸಿ ಶ್ರೀಭಾಷ್ಯದಲ್ಲಿ ತಮ್ಮ ಅಭಿಪ್ರಾಯಕ್ಕೆ ಉಪಪತ್ತಿಯನ್ನು ಕೊಟ್ಟಿರುವದರಿಂದ ಬೇರೆಯಾಗಿ ಉಪನಿಷತ್ತುಗಳಿಗೆ ಭಾಷ್ಯವನ್ನು ಬರೆಯುವ ಅವಶ್ಯಕತೆಯು ಅವರಿಗೆ ಕಾಣಿಸಲಿಲ್ಲವೆನ್ನಬೇಕಾಗಿದೆ. **ಸುದರ್ಶನಸೂರಿಗಳು** ಬರೆದಿರುವ **ತಾತ್ಪರ್ಯದೀಪಿಕೆ** ಯಲ್ಲಿ : 'ಶ್ರೀಭಾಷ್ಯಕೃದುಪನ್ಯಸ್ತೋ ಯಃ ಶ್ರೀ ಶೈಲಪತೇಃ ಪುರಃ । ವೇದಾರ್ಥ ಸಂಗ್ರಹಸ್ಯಾಸ್ಯ ಕುರ್ಮಸ್ತಾತ್ಪರ್ಯದೀಪಿಕಾಮ್ ॥' ಎಂಬ ಶ್ಲೋಕದಲ್ಲಿ 'ಶ್ರೀಭಾಷ್ಯ ಕಾರರು ತಿರುಪತಿಯ ವೆಂಕಟೇಶ್ವರನ ಮುಂದೆ ಈ ಗ್ರಂಥವನ್ನು ನಿರೂಪಿಸಿದರೆಂದು ಹೇಳಿರುವದರಿಂದ ಇದನ್ನು ಆಚಾರ್ಯರು ಭಗವದಾರಾಧನರೂಪವಾಗಿ ರಚಿಸಿರು ತ್ತಾರೆಂದು ಹೇಳಬಹುದು. ಈ ಎಲ್ಲಾ ಕಾರಣಗಳಿಂದ ಉಪನಿಷತ್ಪ್ರಸ್ಥಾನದ ಸಾರವಾಗಿ ರುವ ಈ ಗ್ರಂಥಕ್ಕೆ ರಾಮಾನುಜರ ಗ್ರಂಥಗಳಲ್ಲಿ ಅಗ್ರಸ್ಥಾನವಿದೆ ಎನ್ನಬಹುದು. ಆದ್ದರಿಂದ ಜಿಜ್ಞಾಸುಗಳು ಇದನ್ನು ಮೊದಲು ಓದತಕ್ಕದ್ದು ಯುಕ್ತವಾಗಿದೆ.

೫. ಗ್ರಂಥಶರೀರ

ಈ ಗ್ರಂಥದಲ್ಲಿ ಅಧ್ಯಾಯವೇ ಮುಂತಾದ ವಿಭಾಗಗಳಿಲ್ಲವಾದರೂ ವ್ಯವಸ್ಥಿತವಾದ ಒಂದು ಕ್ರಮವನ್ನನುಸರಿಸಿಯೇ ಇದನ್ನು ಬರೆದಿದೆ. ಈ ಕನ್ನಡದ ಅನುವಾದದಲ್ಲಿ ವಿಷಯಾನುಸಾರವಾಗಿ (೧) ಸಿದ್ಧಾಂತದ ಮತ್ತು ಪೂರ್ವಪಕ್ಷಗಳ ಸಂಕ್ಷೇಪ, (೨) ಶಾಂಕರಮತನಿರಾಕರಣ, (೩) ಭಾಸ್ಕರಮತನಿರಾಕರಣ, (೪) ಯಾದವಪ್ರಕಾಶಮತನಿರಾಕರಣ, (೫) ಸ್ವಪಕ್ಷಪ್ರತಿಷ್ಠಾಪನ- ಎಂಬ ಐದು ಮುಖ್ಯ ಪ್ರಕರಣಗಳಿವೆ. ಪ್ರಕರಣಗಳನ್ನು ಬೇರೆಬೇರೆಯ ತಲೆಬರಹಗಳಿಂದ ವಿಭಾಗಗಳಾಗಿ ವಿಂಗಡಿಸಿ ತೋರಿಸಿದೇವೆ.

(೧) ಸ್ವಮತಸಂಕ್ಷೇಪ

ಜೀವಾತ್ಮಪರಮಾತ್ಮರ ನಿಜವನ್ನು ಅರಿತುಕೊಂಡು ವರ್ಣಾಶ್ರಮಧರ್ಮ ಗಳನ್ನು ಅನುಸರಿಸುತ್ತಾ ಪರಮಪುರುಷನ ಆರಾಧನೆಯನ್ನು ಮಾಡುತ್ತಿರುವದು ಯಾರಿಗೆ ಅತ್ಯಂತಪ್ರಿಯವಾಗಿರುವದೋ ಅವರಿಗೆ ಭಗವತ್ಪ್ರಾಪ್ತಿಯಾಗುವದು ; ವೇದಾಂತವಾಕ್ಯಸಮೂಹವು ದೇಹಾತಿರಿಕ್ತವಾಗಿರುವ ಜೀವನ ಸ್ವರೂಪಸ್ವಭಾವ

ಗಳನ್ನೂ ಅವನ ಅಂತರ್ಯಾಮಿಯಾಗಿರುವ ಪರಮಾತ್ಮನ ಸ್ವರೂಪಸ್ವಭಾವಗಳನ್ನೂ ಆತನ ಉಪಾಸನೆಯನ್ನೂ ಅದರಿಂದಾಗುವ ಆತ್ಮಸ್ವರೂಪಾವಿರ್ಭಾವ ಪೂರ್ವಕವಾಗಿ ನಿರತಿಶಯವಾಗಿ ಆನಂದರೂಪವಾಗಿರುವ ಬ್ರಹ್ಮಾನುಭವವನ್ನೂ ತಿಳಿಸುವದಕ್ಕೆ ಹೊರಟಿರುತ್ತದೆ (೧-೨).[1] ಜೀವಾತ್ಮನ ಸ್ವರೂಪವು ಪ್ರಕೃತಿಸಂಬಂಧವಿಲ್ಲದ ಜ್ಞಾನಾನಂದೈಕಗುಣವಾಗಿರುತ್ತದೆ ; ಇದು ಎಲ್ಲಾ ಆತ್ಮರುಗಳಿಗೂ ಸಮಾನವಾಗಿರುತ್ತದೆ. ಪರಮಾತ್ಮನು ಈ ಚಿದಚಿದಾತ್ಮಕಪ್ರಪಂಚಗಳ ಸೃಷ್ಟಿಸ್ಥಿತಿಲಯಗಳನ್ನೂ ಸಂಸಾರ ನಿವೃತ್ತಿಯನ್ನೂ ಮಾಡುವದಕ್ಕೆ ಕಾರಣನಾಗಿ ಹೇಯಗುಣರಹಿತವಾದ ಅನಂತ ಕಲ್ಯಾಣಗುಣಗಳಿಂದೊಡಗೂಡಿ ಮಿಕ್ಕೆಲ್ಲದ್ದಕ್ಕಿಂತಲೂ ವಿಲಕ್ಷಣಸ್ವರೂಪನಾಗಿರುತ್ತಾನೆ. ಚಿದಚಿದ್ವಸ್ತುಜಾತವೆಲ್ಲಕ್ಕೂ ಅಂತರಾತ್ಮನಾಗಿ ಎಲ್ಲವನ್ನೂ ನಿಯಮಿಸುತ್ತಾನೆಂಬ ಇವನ ವೈಭವವನ್ನು ಈತನ ಶಕ್ತಿ, ಅಂಶ, ವಿಭೂತಿ, ರೂಪ, ಶರೀರ- ಮುಂತಾದ ಶಬ್ದಗಳಿಂದಲೂ ಅವು ಇವನೇ ಎಂಬ ರೂಪದ ಸಮಾನಾಧಿಕರಣ್ಯದಿಂದಲೂ ಶ್ರುತಿಗಳು ಹೇಳುತ್ತವೆ (೩-೫).

ಇಷ್ಟನ್ನು ಹೇಳಿ ಈ ವಿಷಯದಲ್ಲಿ ಶಾಂಕರಮತ, ಭಾಸ್ಕರಮತ, ಮತ್ತು ಯಾದವಪ್ರಕಾಶರಮತ- ಎಂಬ ಮೂರು ಪೂರ್ವಪಕ್ಷಿಗಳ ಮತವನ್ನು ಇಲ್ಲಿ (೬-೮) ಸಂಗ್ರಹವಾಗಿ ತಿಳಿಸಿದೆ.

(೨) ಪರಮತನಿರಾಕರಣ

ಶಾಂಕರಮತವನ್ನು ಇಲ್ಲಿ ಅನುವಾದಮಾಡಿಕೊಂಡಿರುವದು ಸ್ವಲ್ಪ ಹೆಚ್ಚುಕಡಿಮೆಯಾಗಿ **'ಇಷ್ಟಸಿದ್ಧಿ'**ಯನ್ನೇ ಅನುಸರಿಸಿರುತ್ತದೆ. ಈ ಮತವನ್ನು ಯಾಮುನಾಚಾರ್ಯರೂ ಸಿದ್ಧಿತ್ರಯದಲ್ಲಿ ಖಂಡಿಸಿರುತ್ತಾರೆ. ರಾಮಾನುಜರು ವೇದಾರ್ಥಸಂಗ್ರಹದಲ್ಲಿಯೂ ಶ್ರೀಭಾಷ್ಯಾದಿಗಳಲ್ಲಿಯೂ ಖಂಡಿಸಿರುತ್ತಾರೆ. ಆದ್ದರಿಂದ ಆ ಕಾಲಕ್ಕೆ ಶಾರೀರಕವ್ಯಾಖ್ಯಾನಪ್ರಸ್ಥಾನಗಳಲ್ಲಿ ಇದೇ ಪ್ರಬಲವಾಗಿತ್ತೆಂದು ತಿಳಿಯಬೇಕಾಗಿದೆ. ಭಾವರೂಪವಾದ ಅನಿರ್ವಾಚ್ಯಾವಿದ್ಯೆಯು ಅಧ್ಯಾಸಕ್ಕೆ ಕಾರಣವೆಂದು ಪಂಚಪಾದಿಕೆಯಲ್ಲಿ ಮೊಳತ ಈ ವಾದವು ಇಷ್ಟಸಿದ್ಧಿಯಲ್ಲಿ ಬೆಳೆದು ಪಂಚಪಾದಿಕಾವಿವರಣದಲ್ಲಿ ಬಲಪಡಿಸಲ್ಪಟ್ಟಿದೆ. ಆದ್ದರಿಂದ ಇದನ್ನು **ವಿವರಣ ಪ್ರಸ್ಥಾನ**ವೆಂದು ಕರೆಯುತ್ತಾರೆ. ವಾಚಸ್ಪತಿಮಿಶ್ರರ ಅಥವಾ ಅವರಿಗೆ ಮೂಲವಾಗಿರುವ ಮಂಡನಮಿಶ್ರರ ಪ್ರಸ್ಥಾನವು ಇಷ್ಟಸಿದ್ಧಿಯಲ್ಲಿ ಸೂಚಿತವಾಗಿದ್ದರೂ ಇಲ್ಲಿ ಅದಕ್ಕೆ ಪ್ರಾಧಾನ್ಯವಿಲ್ಲ ; ಶ್ರೀಭಾಷ್ಯದಲ್ಲಿ ಅಲ್ಲಲ್ಲಿ ಅದರ ಪರಾಮರ್ಶವೂ ಇರುತ್ತದೆ.

ಈ ಮತವನ್ನು ಇಲ್ಲಿ **ಅನುವಾದ**ಮಾಡಿಕೊಂಡಿರುವ ಬಗೆ ಹೇಗಿದೆ ಎಂದರೆ :

---

1. ಇಲ್ಲಿ ಕಂಸದಲ್ಲಿ ತೋರಿಸಿರುವವು ಗ್ರಂಥಖಂಡಸಂಖ್ಯೆಗಳು ; ಈ ಖಂಡವಿಭಾಗವನ್ನು ವಿಷಯವಿಭಾಗದ ಸೌಕರ್ಯಕ್ಕಾಗಿ ನಾವು ಕಲ್ಪಿಸಿಕೊಂಡಿರುತ್ತೇವೆ.

ನಿರ್ವಿಶೇಷಜ್ಞಾನಮಾತ್ರವಾಗಿರುವ ಬ್ರಹ್ಮವು ನಿತ್ಯಮುಕ್ತಪ್ರಕಾಶವಾಗಿದ್ದರೂ ಅಜ್ಞಾನದಿಂದ ಬದ್ಧವಾಗಿದ್ದುಕೊಂಡು ಜ್ಞಾನದಿಂದ ಮುಕ್ತವಾಗುತ್ತದೆ. ನಿರ್ವಿಶೇಷ ವಾದ ಬ್ರಹ್ಮಕ್ಕಿಂತ ಬೇರೆಯಾಗಿರುವ ಈಶ್ವರಾದಿವಿಕಲ್ಪರೂಪವಾದ ಜಗತ್ತೆಲ್ಲವೂ ಮಿಥ್ಯೆಯೇ. ಒಂದೇ ಶರೀರದಲ್ಲಿ ಜೀವನಿರುವನು, ಮಿಕ್ಕವುಗಳಲ್ಲಿರುವದಿಲ್ಲ ; ಅದು ಯಾವ ಶರೀರವೆಂಬುದು ಗೊತ್ತಿಲ್ಲ. ಆಚಾರ್ಯ, ಪ್ರಮಾತೃ, ಶಾಸ್ತ್ರ, ಶಾಸ್ತ್ರಜ್ಞಾನ ಇವೆಲ್ಲವೂ ಮಿಥ್ಯೆಯೇ. ಹೀಗೆಂದು ಮಿಥ್ಯಾಭೂತವಾದ ಶಾಸ್ತ್ರದಿಂದಲೇ ತಿಳಿದು ಬರುತ್ತದೆ (ಖಂ. ೬).

ಈ ಮತದ **ಖಂಡನೆ**ಯಲ್ಲಿ ಎರಡು ಭಾಗಗಳಿವೆ. ನಿರ್ವಿಶೇಷಪರವೆಂದು ಈ ಮತದವರು ಎಣಿಸುವ ತತ್ತ್ವಮಸಿ ಮುಂತಾದ ಶ್ರುತಿಗಳೆಲ್ಲವೂ ವಿಶಿಷ್ಟಾದ್ವೈತಕ್ಕೇ ಅನುಗುಣವಾಗಿವೆಯೆಂಬುದನ್ನು ತಿಳಿಸಿ ಅವಕ್ಕೆ ಈ ಮತವು ವಿರುದ್ಧವೆಂದು ತೋರಿಸಿಕೊಡುವದು ಒಂದು ಭಾಗ (ಖಂ. ೯-೩೦). ನಿರ್ವಿಶೇಷಜ್ಞಾನ ಮಾತ್ರವಾದ ಬ್ರಹ್ಮವು ತನಗೆ ಮುಸುಕಾಗಿರುವ ಅವಿದ್ಯೆಯ ವಶದಿಂದ ಜೀವನಾಗಿ ನಾನಾತ್ವವನ್ನು ಕಾಣುತ್ತಿದೆ ಎಂಬ ಮತವು ಯುಕ್ತಿವಿರುದ್ಧವೆಂಬುದನ್ನು ತೋರಿಸಿ ಅವಿದ್ಯೆಯು ಮಿಥ್ಯಾದರ್ಶನಕ್ಕೆ ಮೂಲವಾಗಲಾರದು, ಅವಿದ್ಯೆಗೆ ನಿವರ್ತಕವೇ ಇಲ್ಲ, ಬ್ರಹ್ಮಾತಿರಿಕ್ತವು ಮಿಥ್ಯೆಯೆಂದು ಅರಿಯುವಾತನೇ ಇಲ್ಲ, ಭೇದನಿವರ್ತಕ ಜ್ಞಾನಕ್ಕೆ ಸಾಮಗ್ರಿಯಿಲ್ಲ, ಶಾಸ್ತ್ರವು ಪ್ರತ್ಯಕ್ಷಬಾಧಕವಾಗಲಾರದು- ಎಂಬ ಅನುಪಪತ್ತಿಗಳನ್ನು ತೋರಿಸಿರುವದು (ಖಂ. ೩೧ ರಿಂದ ೩೮) ಇನ್ನೊಂದು ಭಾಗ.

ಸೂತ್ರಭಾಷ್ಯದಲ್ಲಾಗಲಿ ಮಿಕ್ಕೆರಡು ಪ್ರಸ್ಥಾನಗಳ ಭಾಷ್ಯಗಳಲ್ಲಾಗಲಿ ಶಂಕರಾಚಾರ್ಯರು ಅಧ್ಯಾಸಕ್ಕೆ ಅವಿದ್ಯೆ ಎಂಬ ಮೂಲದೋಷವು ಬೇಕೆಂಬದನ್ನು ಎಲ್ಲಿಯೂ ಒಪ್ಪಿರುವದಿಲ್ಲ. ಮೂಲಭಾಷ್ಯವನ್ನೇ ನೇರಾಗಿ ತೆಗೆದುಕೊಳ್ಳದೆ ಈ ವ್ಯಾಖ್ಯಾನಪ್ರಸ್ಥಾನವನ್ನೇ ಮುಖ್ಯವಾಗಿ ರಾಮಾನುಜಾಚಾರ್ಯರು ತೆಗೆದುಕೊಳ್ಳು ವದಕ್ಕೆ ಆ ಕಾಲದಲ್ಲಿ ಶಾಂಕರಮತವು ಈ ರೂಪದಲ್ಲಿಯೇ ಪ್ರಬಲವಾಗಿದ್ದದ್ದು ಕಾರಣವಾಗಿರಬಹುದೆ? ಇದನ್ನು ವೇದಾಂತವಿಚಾರದ ಪುರಾತತ್ತ್ವಶೋಧಕರು ನಿರ್ಣಯಿಸಬೇಕಾಗಿದೆ.

(೩) ಭಾಸ್ಕರಾಚಾರ್ಯ ಮತ್ತು **(೪) ಯಾದವಪ್ರಕಾಶ** - ಇವರ ಮತಗಳನ್ನು ಮೂರುನಾಲ್ಕನೆಯ ವಿಭಾಗಗಳಲ್ಲಿ ಬಹುಸಂಕ್ಷೇಪವಾಗಿ ಖಂಡಿಸಿದೆ. ಇವರಿಬ್ಬರೂ ಒಂದೊಂದು ಬಗೆಯಲ್ಲಿ ಭೇದಾಭೇದವಾದಿಗಳು, ಬ್ರಹ್ಮಪರಿಣಾಮವಾದಿಗಳು. ಬ್ರಹ್ಮದ ಅಂಶವೇ ಉಪಾಧಿವಶದಿಂದ ಜೀವನಾಗಿರುವದರಿಂದ ಉಪಾಧಿಯ ದೋಷಗಳು ಬ್ರಹ್ಮಕ್ಕೆ ಅಂಟುವವು ಎಂಬುದು (ಖಂ. ೩೯-೪೩) **ಭಾಸ್ಕರಮತದ** ಮುಖ್ಯದೂಷಣೆ. ಬ್ರಹ್ಮವೇ ಜೀವಜಡಗಳಾಗಿ ಪರಿಣಮಿಸಿರುವದರಿಂದ ಜೀವನ ದೋಷಗಳು ಬ್ರಹ್ಮಕ್ಕೇ ಅಂಟುವವು ಎಂಬುದು **ಯಾದವಪ್ರಕಾಶಮತದ** ದೂಷಣೆ.

ಬ್ರಹ್ಮಪರಿಣಾಮಾಂಗೀಕಾರ, ಭೇದಾಭೇದಾಂಗೀಕಾರ - **ಇವು ಈ ಎರಡು ಮತಗಳಿಗೂ ಸಮಾನವಾಗಿರುವ ದೋಷಗಳು.**

(೫) ಸ್ವಪಕ್ಷಸ್ಥಾಪನ

ಈವರೆಗೆ ಹೇಳಿರುವ ಭಾಗದ ಸ್ವಲ್ಪ ಹೆಚ್ಚುಕಡಿಮೆ ಎರಡರಷ್ಟು ಗ್ರಂಥ ಭಾಗವನ್ನು ಸ್ವಪಕ್ಷಸ್ಥಾಪನೆಗೆ ಮೀಸಲಾಗಿರಿಸಿಕೊಂಡಿರುವದು ಸ್ವಾಭಾವಿಕವಾಗಿಯೇ ಇದೆ. ಸ್ವಪ್ರಕ್ರಿಯೆಯ ಪ್ರತಿಯೊಂದು ಭಾಗವನ್ನೂ ಹಿಂದೆ ಸಂಕ್ಷೇಪವಾಗಿ ಅಲ್ಲಲ್ಲಿ ತಿಳಿಸಿದ್ದು ಇಲ್ಲಿ ವಿಸ್ತಾರವಾಗಿ ತಿಳಿಸಿ ಶ್ರುತಿಸ್ಮೃತಿಪುರಾಣೇತಿಹಾಸಗಳ ಪ್ರಮಾಣವನ್ನೂ ಕೊಟ್ಟು ತಮ್ಮ ಅಭಿಪ್ರಾಯದಂತೆ ಉಪನಿಷತ್ಸಿದ್ಧಾಂತವು ಯಾವದೆಂಬುದನ್ನು ಈ ಆಚಾರ್ಯರು ಸ್ಪಷ್ಟಗೊಳಿಸಿರುತ್ತಾರೆ. ಈ ಭಾಗವನ್ನು ಈ ಅನುವಾದದಲ್ಲಿ ಮುಖ್ಯವಾದ ಆರು ವಿಭಾಗಗಳಲ್ಲಿ ವಿಂಗಡಿಸಿ ತೋರಿಸಿರುವೆವು.

ಶ್ರೀರಾಮಾನುಜಾಚಾರ್ಯರ ಮತದಂತೆ **ಸರ್ವಶಾಸ್ತ್ರಗಳ ಹೃದಯ** (ಖಂ.೫೫-೫೯) ವಿಷ್ಟು : ಜೀವರ **ಧರ್ಮಭೂತಜ್ಞಾನವು ಕರ್ಮರೂಪಾವಿದ್ಯೆಯಿಂದ ಸಂಕುಚಿತ**ವಾಗಿದ್ದು ಅದರಿಂದ ಸಂಸಾರವಾಗಿರುತ್ತದೆ. ಜೀವರೆಲ್ಲರೂ **ಜ್ಞಾನೈಕ ಸ್ವರೂಪ**ರೆಂದೂ, ಆ ಸ್ವರೂಪವು **ಭಗವಚ್ಛೇಷೈಕರೂಪ**ವೆಂದೂ **ಭಗವಂತನೇ ಇವರಿಗೆ ಆತ್ಮ**ನೆಂದೂ ಆತನು ಸಕಲೇತರವಿಲಕ್ಷಣನೆಂದೂ ಅನಂತಕಲ್ಯಾಣಗುಣ-ಗಣಾಕರನೆಂದೂ ಸಮಸ್ತಚಿದಚಿತ್ತುಗಳೂ ಆತನ ಸಂಕಲ್ಪದಿಂದಲೇ ಪ್ರವೃತ್ತವಾಗಿ-ರುವವೆಂದೂ ಅವನ ಉಪಾಸನೆಯೇ ಆತನ ಪ್ರಾಪ್ತಿಗೆ ಸಾಧನವೆಂದೂ ಎಲ್ಲಾ ಶಾಸ್ತ್ರಗಳೂ ತಿಳಿಸುವವು. ಇಷ್ಟು ವಿಷಯವನ್ನು ಸಪ್ರಮಾಣವಾಗಿ (೯೫-೯೯ನೆಯ ಪುಟಗಳಲ್ಲಿ) ಪ್ರತಿಪಾದಿಸಿದೆ.

೧. ತತ್ತ್ವಮಸಿ ಮುಂತಾದ ವಾಕ್ಯಗಳು (ಖಂ. ೪೯-೫೪)

ಪರಬ್ರಹ್ಮವೇ ಚಿದಚಿತ್ತುಗಳಿಗೆಲ್ಲ ಆತ್ಮನು, ಅವು ಆತನ ಶರೀರವು-ಎಂಬುದನ್ನೂ ಬ್ರಹ್ಮದ ವೈಭವವನ್ನೂ ಈ ವಾಕ್ಯಗಳು ಹೇಳುತ್ತವೆ. ತತ್ ಎಂದರೆ ಜಗತ್ಕಾರಣವಾದ ಬ್ರಹ್ಮ, ತ್ವಮ್ ಎಂದರೆ ಚೇತನಶರೀರನಾಗಿ ತತ್ಕಾರಕವಾದ ಬ್ರಹ್ಮ. ಇವೆರಡಕ್ಕೂ ಐಕ್ಯವನ್ನು ಹೇಳುವದರಿಂದ ಇಂಥ ವಾಕ್ಯಗಳು ಹೇಳುವ **ಸಾಮಾನಾಧಿಕರಣ್ಯವು** ಮುಖ್ಯವೃತ್ತವಾಗಿ ಈ ಮತದಲ್ಲಿ ಹೊಂದುತ್ತದೆ. ಏಕವಿಜ್ಞಾನ ದಿಂದ ಸರ್ವವಿಜ್ಞಾನವೆಂಬುದೂ ಈ ಮತದಲ್ಲಿಯೇ ಹೊಂದುತ್ತದೆ- ಎಂಬುದು ಶ್ರುತ್ಯಾದಿಪ್ರಮಾಣಗಳಿಂದ (೭೯-೯೫ನೆಯ ಪುಟಗಳಲ್ಲಿ) ಸ್ಥಾಪಿತವಾಗಿದೆ.

೨. ಬ್ರಹ್ಮದ ಸ್ವರೂಪ (ಖಂ. ೫೭-೬೦)

ಸರ್ವಶಕ್ತಿಯುಕ್ತವಾದ ಬ್ರಹ್ಮವು ತನ್ನ ಸ್ವಲ್ಪಾಂಶವಾದ ಜಗತ್ತನ್ನು ಆತ್ಮನಾಗಿ

ಒಳಹೊಕ್ಕು ನಾನಾರೂಪವಾಗಿದ್ದು ಸಗುಣವೂ ಸಾಕಾರವೂ ಆಗಿರುವದೆಂಬುದನ್ನು ಸಪ್ರಮಾಣವಾಗಿ ಹೊಂದಿಸಿ ಬಗೆಬಗೆಯ ಶ್ರುತಿಗಳನ್ನು ಇಲ್ಲಿ ಹೊಂದುಗಡೆಮಾಡಿ ತತ್ತ್ವಮಸಿ ಮುಂತಾದ ವಾಕ್ಯಗಳು ಸಗುಣಪರವೆಂಬುದನ್ನು ಸಪ್ರಮಾಣವಾಗಿ ತೋರಿಸಿಕೊಟ್ಟಿದೆ. ಬ್ರಹ್ಮಕ್ಕೆ ಸ್ವರೂಪಪರಿಣಾಮವಿಲ್ಲದ್ದರಿಂದ **ಅವಿಕಾರಶ್ರುತಿ**ಗಳು, ಹೇಯಗುಣಗಳಿಲ್ಲದ್ದರಿಂದ **ನಿರ್ಗುಣ**ಶ್ರುತಿಗಳು, ಬ್ರಹ್ಮವೇ ಸರ್ವಪ್ರಕಾರಕವಾಗಿ ರುವದೆನ್ನುವದರಿಂದ **ನಾನಾತ್ವನಿಷೇಧಕ**ಶ್ರುತಿಗಳು, ಬ್ರಹ್ಮವು ಸಗುಣವೆಂದೇ ಅಂಗೀಕರಿಸಿರುವದರಿಂದ **ಸತ್ಯಸಂಕಲ್ಪಾದಿವಾಕ್ಯಗಳು** ಜ್ಞಾನಾನಂದಾದಿಗಳನ್ನು ಸ್ವರೂಪನಿರೂಪಕಧರ್ಮಗಳಾಗಿ ಒಪ್ಪಿರುವದರಿಂದ **ಜ್ಞಾನಾನಂದಮಾತ್ರವಾಕ್ಯಗಳು,** ಶರೀರಾತ್ಮಭಾವವನ್ನಂಗೀಕರಿಸಿರುವದರಿಂದ **ಐಕ್ಯವಾದಿ**ಶ್ರುತಿಗಳು- ಎಲ್ಲಕ್ಕೂ ಹೊಂದುಗಡೆಯಾಗುತ್ತದೆ. **ಅಭೇದ, ಭೇದ, ಭೇದಾಭೇದ- ಎಲ್ಲವನ್ನೂ ಒಂದೊಂದು ದೃಷ್ಟಿಯಿಂದ ವೇದಾಂತಾರ್ಥವೆಂದು ಒಪ್ಪಿದಂತಾಗಿದೆ** (ಇಷ್ಟನ್ನು ಪು.೯೯-೧೧೪ರಲ್ಲಿ ಪ್ರತಿಪಾದಿಸಿದೆ).

೩. ಭಕ್ತಿ (ಖಂ. ೬೨-೬೪)

ಶಾಸ್ತ್ರಾಚಾರ್ಯರ ಉಪದೇಶದಿಂದುಂಟಾದ ತತ್ತ್ವಜ್ಞಾನ, ಶಮದಮಾದಿ ಗಳು, ವರ್ಣಾಶ್ರಮೋಚಿತಕರ್ಮದಿಂದ ಮಾಡಿದ ಪರಮಪುರುಷಾರಾಧನೆ, ತಾನು ತನ್ನದೆಂಬುದೆಲ್ಲವನ್ನೂ ಆತ್ಮನಲ್ಲಿಟ್ಟು ಸ್ತುತಿನಮಸ್ಕಾರಾದಿಗಳಿಂದ ಪ್ರೀತನಾದ ಭಗವಂತನ ಪ್ರಸಾದದಿಂದ ಆಜ್ಞಾನವನ್ನು ಕಳೆದುಕೊಂಡು ನಿರಂತರವಾಗಿ ಮಾಡುವ ಪ್ರತ್ಯಕ್ಷಾಕಾರತ್ವವನ್ನು ಹೊಂದಿರುವ ಧ್ಯಾನರೂಪಭಕ್ತಿಯೇ ಪರಮಾತ್ಮಪ್ರಾಪ್ತಿಗೆ ಸಾಧನವೆಂಬುದನ್ನು ಸಪ್ರಮಾಣವಾಗಿ (ಪು.೧೧೪-೧೨೦ರಲ್ಲಿ) ತೋರಿಸಿರುತ್ತದೆ.

೪. ನಾರಾಯಣನೇ ಪರಬ್ರಹ್ಮ (ಖಂ. ೬೫-೬೪)

ಮಾತ್ಸ್ಯಪುರಾಣದಲ್ಲಿ ಹೇಳಿರುವಂತೆ ಪುರಾಣಗಳು ಸಾತ್ತ್ವಿಕಾದಿಭೇದದಿಂದ ಮೂರು ಬಗೆಯಾಗಿವೆ. ಪರಮಸಾತ್ತ್ವಿಕಪುರಾಣವೆಂದು ಎಲ್ಲರೂ ಒಪ್ಪಿರುವ **ವಿಷ್ಣುಪುರಾಣ**ದಲ್ಲಿ ನಾರಾಯಣನೇ ಜಗತ್ಕಾರಣವಾದ ಬ್ರಹ್ಮವೆಂದು ತಿಳಿಸಿದೆ. ಅಥರ್ವಶಿಖಾ, ಅಥರ್ವಶಿರ, ಶ್ವೇತಾಶ್ವತರ- ಈ ಉಪನಿಷತ್ತುಗಳಲ್ಲಿ ಕೆಲವು ವಾಕ್ಯಗಳು ಶಿವನೇ ಸರ್ವೋತ್ತಮನೆಂದು ಹೇಳುವಂತೆ ಕಾಣಿಸುತ್ತಿವೆಯಾದರೂ ಅವುಗಳನ್ನು ಪೂರ್ವಾಪರಸಂದರ್ಭಕ್ಕೂ ಮಿಕ್ಕ ಶ್ರುತಿಗಳಿಗೂ ಹೊಂದಿಸಿನೋಡಿದರೆ, ಅದರಲ್ಲಿಯೂ ಮುಖ್ಯವಾಗಿ **ತೈತ್ತಿರೀಯದ ನಾರಾಯಣಾನುವಾಕಕ್ಕೆ** ಹೊಂದಿಸಿ ನೋಡಿದರೆ, ನಾರಾಯಣನೇ ಜಗತ್ಕಾರಣವಾದ ಪರಬ್ರಹ್ಮವೆಂಬುದು ವೇದಸಂಮತ ವೆಂದು ನಿರ್ಣಯವಾಗುತ್ತದೆ. ಅಕ್ಷರ, ಶಿವ, ಶಂಭು, ಪರಬ್ರಹ್ಮ, ಪರಜ್ಯೋತಿ,

ಪರತತ್ತ್ವ, ಪರಾಯಣ, ಪರಮಾತ್ಮ- ಎಂಬೀ ಶಬ್ದಗಳು ಆಯಾ ಗುಣಯೋಗ ದಿಂದ ನಾರಾಯಣನಿಗೇ ಹೊಂದುತ್ತವೆ. **ಶಿವಬ್ರಹ್ಮಾದಿಗಳೂ ನಾರಾಯಣನ ವಿಭೂತಿಗಳೇ ; ಅವರು ಕರ್ಮವಶರು,** ನಾರಾಯಣನೊಬ್ಬನೇ ಸ್ವತಂತ್ರನು. ಇದೆಲ್ಲವನ್ನೂ ಸಪ್ರಮಾಣವಾಗಿ (ಪು.೧೨೧-೧೫೪ರಲ್ಲಿ) ಪ್ರತಿಪಾದಿಸಿದೆ.

೫. ನಾರಾಯಣನೇ ಕರ್ಮಫಲದಾತನು (ಖಂ. ೭೫-೮೨)

ಮೀಮಾಂಸಕರಲ್ಲಿ ಪ್ರಾಭಾಕರರೆಂಬವರು ವಿಧಿ, ಮಂತ್ರ, ಅರ್ಥವಾದ- ಇವುಗಳ ರೂಪದಲ್ಲಿರುವ ವೇದವೆಲ್ಲವೂ ಕಾರ್ಯಪರವೆಂದೂ ವಸ್ತುವನ್ನು ಹೇಳು ವದಿಲ್ಲವೆಂದೂ ವಾದಿಸುತ್ತಿದ್ದರು. ಶಾಸ್ತ್ರೋಕ್ತಕರ್ಮವನ್ನು ಮಾಡಿದರೆ ಕಾರ್ಯ, ನಿಯೋಗ, ಅಪೂರ್ವ, ಅದೃಷ್ಟ- ಎಂಬ ಹೆಸರುಗಳಿಂದ ಒಂದು ಅಲೌಕಿಕ ಪದಾ- ರ್ಥವು ಉತ್ಪತ್ತಿಯಾಗುವದೆಂದೂ ಅದೇ ಕರ್ಮದ ಫಲವನ್ನು ಕೊಡುವದೆಂದೂ ಅವರ ಮತವಿತ್ತು. ಅದನ್ನು ಖಂಡಿಸಿ ಶ್ರೀಮನ್ನಾರಾಯಣನೇ ಕರ್ಮಕ್ಕೆ ಫಲದಾತ- ನೆಂದು ತೋರಿಸುವದು ಈ ಭಾಗದ ಉದ್ದೇಶವು. ಕಾರ್ಯವೆಂದರೇನು? - ಎಂಬ ಪ್ರಶ್ನೆಯನ್ನು ತೆಗೆದು ಅದರ ಬೇರೆಬೇರೆಯ ಲಕ್ಷಣಗಳನ್ನು ಖಂಡಿಸುವದು ; ಕಾರ್ಯದಲ್ಲಿಯೇ ವೇದಕ್ಕೆಲ್ಲ ತಾತ್ಪರ್ಯವೆಂಬುದನ್ನು ಒಪ್ಪಿದರೂ ಉಪಾಸನಾ- ವಿಧಿಗೆ ಶೇಷವಾಗಿ ಕಾರ್ಯೋಪಯೋಗಿಗಳಾಗಿಯೇ ಆರಾಧ್ಯದೇವತೆ, ಅದರ ಗುಣಗಳು- ಎಲ್ಲವೂ ಸಿದ್ಧವಾಗುತ್ತವೆ ಎಂದೂ ಇಲ್ಲಿ (ಪು. ೧೫೪-೧೮೨ರವರೆಗೆ) ಸಾಧಿಸಿದೆ.

೬. ಪರಮಾತ್ಮನ ನಿತ್ಯವಿಭೂತಿ (ಖಂ. ೮೩-೯೪)

ಪರಮಾತ್ಮನಿಗೆ ಜ್ಞಾನಾನಂದಾದಿಸ್ವರೂಪ, ಜ್ಞಾನಶಕ್ತ್ಯಾದಿಗುಣಗಳು, ತನಗೆ ನಿಯಾಮ್ಯವಾಗಿರುವ **ಚಿದಚಿತ್ತುಗಳು** - ಇವುಗಳಂತೆ ಅನಂತ**ಭೂಷಣಗಳು,** ಅನುರೂಪಳಾದ **ಮಹಿಷಿ, ಪರಿಜನರು,** ಅಸಾಧಾರಣವಾಗಿರುವ **ದಿವ್ಯಸ್ಥಾನ-** ಇವುಗಳೂ ಉಂಟೆಂದು ತೋರಿಸಿಕೊಡುವದು ಈ ವಿಭಾಗದ ಉದ್ದೇಶವು. **ಪರಮ- ಪದ**ವೆಂಬುದು ಭಗವಂತನ ಸ್ವರೂಪ, ಪ್ರಕೃತಿವಿಯುಕ್ತಾತ್ಮ ಮತ್ತು ದಿವ್ಯಸ್ಥಾನ- ಈ ಮೂರಕ್ಕೂ ಹೆಸರು. ಆ ದಿವ್ಯಸ್ಥಾನವನ್ನು **ಸೂರಿ**ಗಳೆಂಬ ಮಹಾತ್ಮರುಗಳು ಯಾವಾಗಲೂ ನೋಡುತ್ತಿರುವರು. ಈ ನಿತ್ಯವಿಭೂತಿಗೆ ಶ್ರುತಿಗಳು, ಇತಿಹಾಸ ಪುರಾಣಗಳು ಸೂತ್ರಕಾರರು, ವಾಕ್ಯಕಾರ, ದ್ರಮಿಡಭಾಷ್ಯಕಾರ- ಇವರುಗಳ ವಚನ- ಎಲ್ಲವೂ ಪ್ರಮಾಣವಾಗಿವೆ ಎಂದು ತೋರಿಸಿಕೊಟ್ಟು ಪ್ರಮಾಣವಾದ ವೇದಗಳು ಅಪೌರುಷೇಯವೆಂದೂ ಇತಿಹಾಸಪುರಾಣಗಳನ್ನು ಪರಮಪುರುಷನ ಅಪ್ಪಣೆಯಿಂದ ಪರಮರ್ಷಿಗಳು ಮಾಡಿರುತ್ತಾರೆಂದೂ ಲೌಕಿಕಶಬ್ದಗಳು ಕೂಡ ವೇದಗಳಿಂದಲೇ ಬಂದಿವೆಯೆಂದೂ ಇಲ್ಲಿ (ಪು. ೧೮೨ ರಿಂದ ೨೧೧ರವರೆಗೆ) ತಿಳಿಸಿಕೊಟ್ಟಿರುತ್ತದೆ.

೭. ಉಪಸಂಹಾರ (೩೦.೯೫-೧೦೨)

ಮೇಲೆ ಹೇಳಿರುವ ಆರು ಮುಖ್ಯವಿಷಯಗಳನ್ನು ವಿಸ್ತಾರವಾಗಿ ತಿಳಿಸಿಕೊಟ್ಟ ಬಳಿಕ ಒಟ್ಟುಗ್ರಂಥದ ಪ್ರಧಾನವಿಷಯಗಳಾದ ಬ್ರಹ್ಮದ ಸ್ವರೂಪಾದಿಗಳು, ಸರ್ವ ಪ್ರಕಾರಕತ್ವ, ಮುಕ್ತಿಗೆ ಕಾರಣವಾದ ಪರಭಕ್ತಿ, ಭಗವಚ್ಛೇಷತ್ವದ ತತ್ತ್ವ- ಇವುಗಳನ್ನು ಮತ್ತೆ ವಿಮರ್ಶಪೂರ್ವಕವಾಗಿ ಉಪಸಂಹಾರಮಾಡಿ (ಪು.೨೧೧-೨೨೪ರವರೆಗೆ) ಗ್ರಂಥಸಮಾಪ್ತಿಯನ್ನು ಮಾಡಿ ಶ್ರೀರಾಮಾನುಜಾಚಾರ್ಯರು 'ಈ ವೇದಾರ್ಥ ಸಂಗ್ರಹವನ್ನು ಸಾರಾಸಾರವಿವೇಕಜ್ಞರೂ, ಮಾತ್ಸರ್ಯವಿಲ್ಲದವರೂ ಪ್ರಮಾಣಾಧೀನ ರಾಗಿ ತತ್ತ್ವವಿಚಾರವನ್ನು ಮಾಡಬಲ್ಲವರೂ ಆದ ದೊಡ್ಡವರು ವಿಮರ್ಶಿಸಲಿ' ಎಂಬ ಅಭಿಪ್ರಾಯದ ಒಂದು ಶ್ಲೋಕವನ್ನು ಬರೆದಿರುತ್ತಾರೆ.

೬. ವೇದಾರ್ಥಸಂಗ್ರಹದ ಅಮೂಲ್ಯಭಾಗ

ಶ್ರೀಶಂಕರಾಚಾರ್ಯರು ತಮ್ಮ ಉಪನಿಷದ್ಭಾಷ್ಯಗಳಲ್ಲಿಯೂ ಗೀತಾಭಾಷ್ಯ ದಲ್ಲಿಯೂ ಉಪಾಸನೆಗೆ ತಕ್ಕಷ್ಟು ಪ್ರಾಧಾನ್ಯವನ್ನು ಕೊಟ್ಟೇ ವಿಸ್ತೃತವಾಗಿ ಬರೆದಿರುತ್ತಾ ರಾದರೂ ಅವರ ವ್ಯಾಖ್ಯಾನಪ್ರಸ್ಥಾನಗಳಲ್ಲಿ ಜ್ಞಾನಪ್ರಾಮುಖ್ಯವನ್ನು ಹಿಡಿದು ತರ್ಕ ಪ್ರಧಾನವಾದ ವಿಚಾರಗಳನ್ನೇ ವಿಸ್ತರಿಸಲಾಗಿದೆ. ಇದರಿಂದಾಗಿ ಮುಮುಕ್ಷುಗಳಿಗೆ ಜ್ಞಾನಮಾರ್ಗವಾಗಲಿ ಭಕ್ತಿಮಾರ್ಗವಾಗಲಿ ದಕ್ಕದೆ ಶುಷ್ಕತರ್ಕವೇ ವೇದಾಂತವೆಂಬ ಭ್ರಾಂತಿಯುಂಟಾಗುವಂತಾಗಿತ್ತು. **ಭಾಸ್ಕರಭಾಷ್ಯ**ದಲ್ಲಿಯೂ ಶಾಂಕರಮತವನ್ನು ಖಂಡಿಸಿದ್ದರೂ ಉಪಾಸನೆಯ ಸ್ಥಾನವನ್ನು ಪುನಃಪ್ರತಿಷ್ಠಾಪನೆಮಾಡಿದ ಕೀರ್ತಿಯು ಶ್ರೀರಾಮಾನುಜಾಚಾರ್ಯರವರಿಗೇ ಸಲ್ಲುತ್ತದೆ. ಉತ್ತರದೇಶದ ಸಾಧುಗಳೂ ಭಕ್ತಿಮಾರ್ಗವನ್ನು ಬೋಧಿಸಿರುತ್ತಾರಾದರೂ **ವೇದಾಂತಸಿದ್ಧಾಂತದಲ್ಲಿ ಭಕ್ತಿಗೇ ಮುಖ್ಯಸ್ಥಾನವಿದೆಯೆಂದು ಮೊದಲು ತೋರಿಸಿದವರು ಈ ಆಚಾರ್ಯರೇ.**

೭. ರಾಮಾನುಜಾಚಾರ್ಯರು ಉಪಯೋಗಿಸಿರುವ ಪ್ರಮಾಣಗ್ರಂಥಗಳು

ವೇದಾರ್ಥಸಂಗ್ರಹದಲ್ಲಿ ಅವರು ಪ್ರಸಿದ್ಧವಾದ ದಶೋಪನಿಷತ್ತುಗಳಲ್ಲದೆ, **ಮಹೋಪನಿಷತ್ತು, ಸುಬಾಲೋಪನಿಷತ್ತು, ಮಂತ್ರಿಕೋಪನಿಷತ್ತು-** ಇವುಗಳನ್ನೂ ಉಪಯೋಗಿಸಿರುತ್ತಾರೆ. ಇವುಗಳಲ್ಲಿ ಈಗ ನಿರ್ಣಯಸಾಗರ ಪ್ರೆಸ್ಸಿನಲ್ಲಿ ಮುದ್ರಿತ ವಾಗಿರುವ **'ಮಹೋಪನಿಷತ್ತು'** ಎಂಬ ಹೆಸರಿನ ಉಪನಿಷತ್ತಿನಲ್ಲಿರುವ ಆರು ಅಧ್ಯಾಯಗಳೂ ರಾಮಾನುಜಾಚಾರ್ಯರ ಕಾಲಕ್ಕೆ ಇರಲಿಲ್ಲವೆಂದೂ ಈಚೆಗೆ ಯಾರೋ ಅದ್ವೈತಿಗಳು ಐದು ಅಧ್ಯಾಯಗಳನ್ನು ಸೇರಿಸಿರಬೇಕೆಂದೂ ನಮ್ಮ

ಅಭಿಪ್ರಾಯವಿದೆ. **ಮಂತ್ರಿಕೋಪನಿಷತ್ತನ್ನು** ಈ ಆಚಾರ್ಯರಿಗಿಂತ ಮೊದಲು ಮತ್ತೆ ಯಾರೂ ಪ್ರಮಾಣವಾಗಿ ಹಿಡಿದಂತೆ ಕಾಣುವದಿಲ್ಲ. **ಸುಬಾಲೋಪನಿಷತ್ತು** ಮಹೋಪನಿಷತ್ತಿನಂತೆ ನಾರಾಯಣೋತ್ಕರ್ಷವನ್ನು ಹೇಳುವದೆಂಬ ಕಾರಣದಿಂದ ಈ ಆಚಾರ್ಯರು ಉದಾಹರಿಸಿಕೊಂಡದ್ದಾಗಿರಬೇಕು. ಇದರ ಏಳನೆಯ ಖಂಡದಲ್ಲಿ ನಾರಾಯಣಭಗವಂತನು ಸರ್ವಕ್ಕೂ ಅಂತರ್ಯಾಮಿಯಾಗಿರುತ್ತಾನೆ ಎಂಬ ಅಂಶ ವಿದೆ. ರಾಮಾನುಜಾಚಾರ್ಯರ ಕಾಲಕ್ಕೆ ಸುಬಾಲೋಪನಿಷತ್ತಿನ ಪರಿಮಾಣವು ಎಷ್ಟಿತ್ತು? ಈಗಿನ ಭಾಗವೆಲ್ಲವೂ ಆದರಲ್ಲಿದ್ದಿದ್ದರೆ ಎಂಟನೆಯ ಖಂಡದಲ್ಲಿರುವ **'ಶರೀರಮಧ್ಯೇಽತ್ಯನ್ತೋಪಹತೇ ಚಿತ್ರಭಿತ್ತಿ ಪ್ರತೀಕಾಶೇ ಗನ್ಧರ್ವನಗರೋಪಮೇ ಕದಲೀಗರ್ಭವನ್ನಿಃಸ್ಸಾರೇ ಜಲಬುದ್ಬುದವಚ್ಚಞ್ಚಲೇ ನಿಃಸ್ಸೃತಮಾತ್ಮಾನಮಚಿನ್ತ್ಯ ರೂಪಮ್...'** ಎಂಬ ವಾಕ್ಯಕ್ಕೂ ಒಂಬತ್ತನೆಯ ಖಂಡದಲ್ಲಿರುವ **'ಸರ್ವಸ್ಯಾತ್ಮಾ ಭವತಿ ಯ ಏವಂ ವೇದ'** ಎಂಬ ವಾಕ್ಯಕ್ಕೂ ಈ ಆಚಾರ್ಯರು ಯಾವ ತಾತ್ಪರ್ಯವನ್ನು ಕಲ್ಪಿಸಿದ್ದರು ?- ಎಂಬುದು ವಿಚಾರಣೀಯವಾಗಿರುತ್ತವೆ.

ಶಿವಪರವೆಂದು ತೋರುವ **ಅಥರ್ವಶಿಖಾ** ಮತ್ತು **ಅಥರ್ವಶಿರ-** ಈ ಎರಡು ಉಪನಿಷತ್ತುಗಳ ವಾಕ್ಯಗಳನ್ನು ಈ ಆಚಾರ್ಯರು ನಾರಾಯಣಪರವೆಂದೇ ಸಾಧಿಸುವದಕ್ಕೆ ಜಿಜ್ಞಾಸುಗಳ ಮುಂದಿಟ್ಟಿರುವ ಯುಕ್ತಿಗಳು ಮನನೀಯವಾಗಿವೆ. ಜಗತ್ಕಾರಣವಾದ ಬ್ರಹ್ಮವೇ ನಾರಾಯಣಶಬ್ದವಾಚ್ಯವಾದದ್ದೆಂದೂ ಶಿವಬ್ರಹ್ಮಾದಿ ಗಳು ನಾರಾಯಣನ ವಿಭೂತಿಗಳೆಂದೂ ಇವರು ಸ್ಪಷ್ಟಪಡಿಸಿರುತ್ತಾರೆ. ಜಗತ್ಕಾರಣ ವಾದ ಬ್ರಹ್ಮವು ಶಿವಶಬ್ದವಾಚ್ಯವೆಂದೂ ಶಿವನ ಚಿಚ್ಛಕ್ತ್ಯಂಶವೇ ನಾರಾಯಣನೆಂದೂ ವಾದಿಸುವ **ಶ್ರೀಕಂಠಾಚಾರ್ಯರು** ಇದೇ ಉಪನಿಷತ್ತುಗಳನ್ನು ಶಿವೋತ್ಕರ್ಷಪರ ವಾಗಿ ವ್ಯಾಖ್ಯಾನಮಾಡಿರುತ್ತಾರೆ. ಈ ಉಪನಿಷತ್ತುಗಳ ಪಾಠವು 'ನಿರ್ಣಯಸಾಗರ ಮುದ್ರಣಾಲಯ'ದಲ್ಲಿ ಅಚ್ಚಾಗಿರುವ ಕ್ರಮಕ್ಕಿಂತ ಬೇರೆಯಾಗಿ 'ಆನಂದಾಶ್ರಮ ಮುದ್ರಣಾಲಯ'ದಲ್ಲಿ ಅಚ್ಚಾಗಿರುವ **''ಉಪನಿಷದಾಂ ಸಮುಚ್ಚಯಃ''** ಎಂಬ ಸಂಗ್ರಹದಲ್ಲಿ ಮತ್ತೊಂದು ಕ್ರಮದಿಂದ ಕಾಣುತ್ತಿದೆ. ಶ್ರೀರಾಮಾನುಜಾಚಾರ್ಯರು ಯಾವ ಪಾಠವನ್ನು ಅನುಸರಿಸುತ್ತಿದ್ದರೆಂಬುದೂ ಶೋಧಿಸಿ ನಿಶ್ಚಯಿಸತಕ್ಕದ್ದಾಗಿ ರುತ್ತದೆ.

ರಾಮಾನುಜಾಚಾರ್ಯರು **ಮಾತ್ಸ್ಯಪುರಾಣದ** ಆಧಾರದಿಂದ ಪುರಾಣಗಳನ್ನು ಸಾತ್ತ್ವಿಕರಾಜಸತಾಮಸಗಳೆಂದು ವಿಂಗಡಿಸಿರುವರೆಂಬುದನ್ನು ಆಗಲೆ (ಪು.xiv) ಹೇಳಿ ಟ್ಟಿರುತ್ತೇವೆ ; ದಕ್ಷಿಣಭಾರತದಲ್ಲಿ ಶೈವವೈಷ್ಣವರಿಗೆ ತೀವ್ರ ಮತಭೇದವುಂಟಾಗಿದ್ದ ಕಾಲದಲ್ಲಿ ಈ ಆಚಾರ್ಯರು ಜನ್ಮವನ್ನು ತಳೆದವರಾದ್ದರಿಂದ ಈ ಅಭಿಪ್ರಾಯವನ್ನು ಅವರ ಮುಂದಿನ ಶೈವರು ಅಲ್ಲಗಳೆದರೆಂಬುದು ಸ್ವಾಭಾವಿಕವಾಗಿದೆ. ಶಿವಾಷ್ಟೋತ್ತ ರಕ್ಕೆ **ಶಿವತತ್ತ್ವರಹಸ್ಯ**ವೆಂಬ ವ್ಯಾಖ್ಯಾನವನ್ನು ಬರೆದಿರುವ **ನೀಲಕಂಠದೀಕ್ಷಿತರು** ಆ

ತಮ್ಮ ಗ್ರಂಥದ ಭೂಮಿಕೆಯಲ್ಲಿ ರಾಮಾನುಜರ ಅಭಿಪ್ರಾಯವನ್ನು ಬಲವಾಗಿ ಖಂಡಿಸಿರುತ್ತಾರೆ.

ಸ್ಮೃತಿಪುರಾಣೇತಿಹಾಸಗಳಲ್ಲಿ ಹೇರಳವಾಗಿರುವ ಭಕ್ತಿಪರವಾದ ವಚನಗಳನ್ನು ಶ್ರುತಿಯ ಸಿದ್ಧಾಂತಕ್ಕೆ ಉಪಬೃಂಹಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಮೊಟ್ಟಮೊದಲು ಬಳಸಿರುವ ಆಚಾರ್ಯರು ಇವರೇ ಎಂದು ತೋರುತ್ತದೆ. ಮನು, ಯಾಜ್ಞವಲ್ಕ್ಯ, ಆಪಸ್ತಂಬ- ಮುಂತಾದ ಸ್ಮೃತಿಗಳು ; ಭಾರತ, ರಾಮಾಯಣ, ವಿಷ್ಣುಪುರಾಣ- ಮುಂತಾದ ಇತಿಹಾಸಪುರಾಣಗಳು- ಇವುಗಳಿಗೂ ವೇದಾಂತಕ್ಕೂ ಏಕವಾಕ್ಯತೆಯನ್ನು ಶಂಕರಾಚಾರ್ಯರೂ ಮಾಡುವದಕ್ಕೆ ಹೊರಟಿದ್ದರಾದರೂ ಶ್ರೀರಾಮಾನುಜರಷ್ಟು ಹೇರಳವಾಗಿ ಅವರೂ ಆ ವಚನಗಳನ್ನು ಬಳಸಿರಲಿಲ್ಲ.

ಇಲ್ಲಿ ಉದಾಹರಿಸಿರುವ **ವಾಕ್ಯಕಾರರ** ಮತ್ತು **ದ್ರಮಿಡಾಚಾರ್ಯರ** ವಾಕ್ಯಗಳು ಯಾವ ಗ್ರಂಥದಿಂದ ಉದಾಹೃತವಾಗಿವೆ ಎಂಬುದು ಅನಿಶ್ಚಿತವಾಗಿಯೇ ಉಳಿಯಬೇಕಾಗಿದೆ. ಈ ವಾಕ್ಯಕಾರದ್ರಮಿಡಾಚಾರ್ಯರುಗಳು ಅದ್ವೈತ ವಾಕ್ಯಕಾರದ್ರವಿಡಾಚಾರ್ಯರಿಗಿಂತ ಭಿನ್ನರೆಂಬ ನಮ್ಮ ಅಭಿಪ್ರಾಯವನ್ನು ಆಗಲೆ ಹೇಳಿಟ್ಟಿರುತ್ತೇವೆ.

"ಜಿತಂತೇಸ್ತೋತ್ರ" ಎಂಬ ಗ್ರಂಥದಿಂದ ಒಂದು ವಾಕ್ಯವನ್ನು ರಾಮಾನುಜಾಚಾರ್ಯರು ಉದಾಹರಿಸಿರುತ್ತಾರೆ. ಬೆಳಗಾಮಿನಲ್ಲಿ ಅಚ್ಚಾಗಿರುವ ಈ ಹೆಸರಿನ ಸ್ತೋತ್ರದಲ್ಲಿ ಐದು ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದ ಕೊನೆಯಲ್ಲಿ 'ಇತಿ ಶ್ರೀಪಾಞ್ಚರಾತ್ರಾಗಮೇ ಜಿತಂತೇಸ್ತೋತ್ರೇ ಪ್ರಥಮೋಽಧ್ಯಾಯಃ' ಎಂದಿದೆ ಕೊನೆಯಲ್ಲಿ 'ಇತಿ ಶ್ರೀಮದಷ್ಟಾಕ್ಷರಕಲ್ಪೇ ಹಂಸಬ್ರಹ್ಮಸಂವಾದೇ ಜಿತಂತೇಸ್ತೋತ್ರೇ ಪಞ್ಚಮೋಽಧ್ಯಾಯಃ' ಎಂದಿದೆ. ಶ್ರೀ॥ ಸಿ.ಎಮ್. ವಿಜಯ ರಾಘವಾಚಾರ್ಯರವರು ಪ್ರಕಟಿಸಿರುವ 'ಸ್ತೋತ್ರರತ್ನಮಾಲಾ' ಎಂಬ ಸಂಗ್ರಹದಲ್ಲಿ ಈ ಸ್ತೋತ್ರವು ಆರು ಅಧ್ಯಾಯಗಳಿಂದೊಡಗೂಡಿದೆ. ರಾಮಾನುಜರು ಉದಾಹರಿಸಿರುವ (ಪುಟ. ೯೩) 'ಕಾರ್ಯಾಣಾಂ ಕಾರಣಂ ಪೂರ್ವಮ್' ಎಂಬ ಶ್ಲೋಕವು ಬೆಳಗಾಮಿನ ಪುಸ್ತಕದಲ್ಲಿ ನಾಲ್ಕನೆಯ ಅಧ್ಯಾಯದ ಏಳನೆಯ ಶ್ಲೋಕವಾಗಿದೆ. ಶ್ರೀ॥ ವಿಜಯ ರಾಘವಾಚಾರ್ಯರ ಸಂಗ್ರಹದಲ್ಲಿ ಒಂದನೆಯ ಅಧ್ಯಾಯದ ಏಳನೆಯ ಶ್ಲೋಕವಾಗಿರುತ್ತದೆ. ಈ ವೈಲಕ್ಷಣ್ಯಕ್ಕೆ ಕಾರಣವೇನೋ ತಿಳಿಯದು. ಈ ಸ್ತೋತ್ರದ ಪ್ರತಿಯೊಂದು ಅಧ್ಯಾಯದ ಮೊದಲಿನಲ್ಲಿರುವ **'ಜಿತಂ ತೇ ಪುಣ್ಡರೀಕಾಕ್ಷ ನಮಸ್ತೇ ವಿಶ್ವಭಾವನ । ನಮಸ್ತೇಽಸ್ತು ಹೃಷೀಕೇಶ ಮಹಾಪುರುಷ ಪೂರ್ವಜ ॥'** (ಮೋ. ಧ. ಕುಂ. ೩೪೪-೪೯) ಎಂಬ ಶ್ಲೋಕವು ಮಹಾಭಾರತದ ಮೋಕ್ಷಧರ್ಮದ **ನಾರಾಯಣೀಯ**ದಲ್ಲಿದೆ. ಈ ಶ್ಲೋಕವೂ ಸ್ತೋತ್ರವೂ ಪಾಂಚರಾತ್ರದಲ್ಲಿದೆಯೆ? ಇದ್ದರೆ ಸ್ತೋತ್ರದ ಅಧ್ಯಾಯಸಂಖ್ಯೆಯಲ್ಲಿ ಏತಕ್ಕೆ ಹೆಚ್ಚುಕಡಿಮೆಯಾಗಿದೆ?- ಎಂಬುದನ್ನು ತತ್ತ್ವಶೋಧಕರಾದ ವಿದ್ವಾಂಸರು ನಿರ್ಣಯಿಸಬೇಕಾಗಿದೆ.

ಮೇಲೆ ನಾವು ಉದಾಹರಿಸಿರುವ ಗ್ರಂಥಗಳನ್ನು ಬಿಟ್ಟರೆ ಶ್ರೀರಾಮಾನುಜಾಚಾರ್ಯರು ಬಲುಮಟ್ಟಿಗೆ ಸರ್ವಸಂಮತವಾದ ಶ್ರುತಿಸ್ಮೃತಿಪುರಾಣೇತಿಹಾಸಗಳ ವಚನಗಳನ್ನೇ ಉದಾಹರಿಸಿಕೊಂಡು ತಮ್ಮ ಸಿದ್ಧಾಂತವನ್ನು ಸ್ಥಾಪಿಸಿರುತ್ತಾರೆಂದು ಈ ಪುಸ್ತಕದಲ್ಲಿ ಕೊನೆಗೆ ಕೊಟ್ಟಿರುವ ಪ್ರಮಾಣವಚನಗಳ ಅನುಕ್ರಮಣಿಕೆಯಿಂದ ಗೊತ್ತಾಗುತ್ತದೆ. ಪ್ರತ್ಯಕ್ಷಾದಿಪ್ರಮಾಣಗಳಿಗೆ ಅಗೋಚರವಾಗಿರುವ ಅತೀಂದ್ರಿಯ ವಿಷಯವನ್ನು ಶಾಸ್ತ್ರದಿಂದಲೇ ತಿಳಿಯಬೇಕು- ಎಂಬ ಮೀಮಾಂಸಾ ನ್ಯಾಯವನ್ನು ಪಾಲಿಸಿಕೊಂಡೇ ಅವರು ವಿಷಯವನ್ನು ಪ್ರತಿಪಾದನೆ ಮಾಡಿರುತ್ತಾರೆ. ವಾಕ್ಯಗಳಿಗೆ ಅವರು ತೆಗೆಯುವ ಅರ್ಥವು ಮಿಕ್ಕ ಭಾಷ್ಯಕಾರರು ತೆಗೆದಿರುವದಕ್ಕಿಂತ ಕೆಲವು ಸಂದರ್ಭಗಳಲ್ಲಿ ಬೇರೆಯಾಗಿದೆ ಎಂಬುದು ಸ್ವಾಭಾವಿಕವೇ ಆಗಿದೆ.

ಸಗುಣನಿರ್ಗುಣವಿಚಾರ

ಉಪನಿಷತ್ತುಗಳಲ್ಲಿ ಬ್ರಹ್ಮವನ್ನು ಸಗುಣ, ನಿರ್ಗುಣ- ಹೀಗೆ ಎರಡು ಪ್ರಕಾರವಾಗಿ ವರ್ಣಿಸಿದೆಯೆಂಬ ಅದ್ವೈತಿಗಳ ಮತವನ್ನು ರಾಮಾನುಜಾಚಾರ್ಯರು ಒಪ್ಪಿರುವದಿಲ್ಲ. ಸಗುಣಸಾಕಾರಬ್ರಹ್ಮವನ್ನೇ ಶಾಸ್ತ್ರದಲ್ಲಿ ಹೇಳಿದೆ ; ಜ್ಞಾನಮಾತ್ರದಿಂದ ಅಜ್ಞಾನನಿವೃತ್ತಿಯ ದ್ವಾರದಿಂದ ಮುಕ್ತಿಯಾಗುವದೆಂದು ಅಲ್ಲಿ ಹೇಳಿಲ್ಲ; ಸಗುಣ ಬ್ರಹ್ಮದ ಉಪಾಸನೆಯಿಂದಲೇ ಪರಮಪುರುಷಾರ್ಥವು ದೊರಕುತ್ತದೆಯೆಂದೇ ಪ್ರತಿಪಾದಿಸಿದೆ- ಎಂಬುದು ಈ ಆಚಾರ್ಯರ ಮತವು.

ಗ್ರಂಥವನ್ನು ಓದುವ ಶ್ರೀವೈಷ್ಣವರಿಗೇ ಅಲ್ಲದೆ, ವಿಷ್ಣುಭಕ್ತರಾದ ದ್ವೈತಾ-ದ್ವೈತಸಿದ್ಧಾಂತಗಳನ್ನು ಅನುಸರಿಸುವ ಉಪಾಸಕರಿಗೂ ಇಲ್ಲಿ ಅನೇಕ ಅನರ್ಘವಾದ ಉಪದೇಶಗಳು ದೊರಕುತ್ತವೆ. ಈಗಿನ ಕಾಲದಲ್ಲಿ ಯಾವ ಗ್ರಂಥವನ್ನೂ ಪರಿಶೀಲಿಸದೆ ಇದ್ದರೂ ಮತಾಂತರವನ್ನು ದೂಷಣೆಮಾಡುವ ಮತಾಂಧರು ಅನೇಕರು ಇರುತ್ತಾರೆ. ಅದು ಅವರ ಅಜ್ಞಾನಮಾತ್ರದರ್ಶಕವಾಗಿರುತ್ತದೆ ಎಂದು ಹೇಳಬೇಕಾದದ್ದೇ ಇಲ್ಲವಷ್ಟೆ? ನಾವು ಈಗ ಕನ್ನಡಿಸಿರುವ ಅವಲೋಕನದಿಂದ ರಾಮಾನುಜಮತದ ಸಾರಾಸಾರವನ್ನು ಗ್ರಹಿಸಬೇಕೆನ್ನುವವರಿಗೆ ಸ್ವಲ್ಪ ಮಟ್ಟಿಗಾದರೂ ಪ್ರಯೋಜನವಾದೀತೆಂದು ನಂಬುತ್ತೇವೆ. ಈಗ ಅದ್ವೈತಿಗಳೆಂದುಕೊಳ್ಳುವವರನೇಕರು ತಮ್ಮ ಮತದ ಸಿದ್ಧಾಂತವನ್ನು ತಿಳಿದುಕೊಳ್ಳದೆ ಇರುತ್ತಾರೆ. ಅಲ್ಪಸ್ವಲ್ಪ ಓದಿದವರಲ್ಲಿ ಕೆಲವರು ತಾವು ಜ್ಞಾನಿಗಳೆಂದೂ ಉಪಾಸನಾದಿಗಳು ಮಂದಾಧಿಕಾರಿಗಳಿಗೆ ಹೇಳಿದ್ದೆಂದೂ ದುರಹಂಕಾರದಿಂದ ನುಡಿಯುತ್ತಾ ತಾವೂ ಪರಮಪುರುಷಾರ್ಥ-ದಿಂದ ವಂಚಿತರಾಗಿ ಇತರರನ್ನೂ ತಪ್ಪುಹಾದಿಗೆ ಎಳೆಯುತ್ತಿರುತ್ತಾರೆ. ಇದು ಸರ್ವಥಾ ಸರಿಯಲ್ಲ. ಶ್ರೀಶಂಕರಾಚಾರ್ಯರ ಮತದಲ್ಲಿಕೂಡ ಜ್ಞಾನಕ್ಕೆ ಎಲ್ಲರೂ ಅಧಿಕಾರಿಗಳಲ್ಲ ; ಎಲ್ಲಿಯೋ ಸಾವಿರಕ್ಕೊಬ್ಬರು ಅಂಥವರು ಇರುತ್ತಾರೆಂದು

ಭಗವಂತನೇ ಹೇಳಿರುತ್ತಾನೆ. ಈ ಕಲಿಯುಗದಲ್ಲಂತೂ ಕರ್ಮೋಪಾಸನೆಗಳನ್ನು ಕೂಡ ಸರಿಯಾಗಿ ಮಾಡುವ ಯೋಗ್ಯತೆಯುಳ್ಳವರು ಎಲ್ಲಿಯೋ ಕೆಲವರು ಇರಬಹುದು, ಅಷ್ಟೆ. ಭಗವಂತನು ಅರ್ಜುನನಲ್ಲಿ ಪರಮ ಪ್ರೇಮವುಳ್ಳವನಾದ್ದರಿಂದಲೇ ಅವನಿಗೆ ಹಿತವನ್ನು ಬಯಸಿ ಸಗುಣೋಪಾಸನೆಯನ್ನು ಬೋಧಿಸಿರುತ್ತಾನೆ- ಎಂದು ಭಗವದ್ಗೀತಾಭಾಷ್ಯದ ಹನ್ನೆರಡನೆಯ ಅಧ್ಯಾಯದಲ್ಲಿ **ಶಂಕರಾಚಾರ್ಯರವರು** ಬರೆದಿರುತ್ತಾರೆ. ಹೀಗಿರುವಲ್ಲಿ ನಮ್ಮಂಥವರು ಗರ್ವದಿಂದ ಸಗುಣೋಪಾಸನೆಯನ್ನು ಕಡೆಗಣಿಸುವದಕ್ಕೆ ಯಾವ ಕಾರಣವೂ ಇರುವದಿಲ್ಲ. ಶ್ರೀಶಂಕರಾಚಾರ್ಯರೂ ಅವರ ಶಿಷ್ಯಪರಂಪರೆಗೆ ಸೇರಿದ ಸಂನ್ಯಾಸಿಗಳೂ ಇಂದಿಗೂ ನಾರಾಯಣಸ್ಮರಣೆಯನ್ನೇ ಮಾಡುತ್ತಿರುತ್ತಾರೆ. ಆದ್ದರಿಂದ ನಾರಾಯಣನೇ ಪರಬ್ರಹ್ಮವು ಎಂಬ ಸಿದ್ಧಾಂತವಾಗಲಿ, ಸ್ತುತಿ, ನಮಸ್ಕಾರ, ನಾಮಕೀರ್ತನ, ಅರ್ಚನ- ಮುಂತಾದವುಗಳಿಂದ ಭಗವಂತನನ್ನು ಅತ್ಯಂತಪ್ರೇಮದಿಂದ ಧ್ಯಾನಮಾಡುವ ಪರಭಕ್ತಿಯನ್ನು ಸಂಪಾದಿಸಿಕೊಂಡು ಕೃತಾರ್ಥರಾಗಬೇಕೆಂಬ ಉಪದೇಶವಾಗಲಿ ಅದ್ವೈತಿಗಳಿಗೆ ಅಸಂಮತವೆಂದು ಬಗೆಯುವದು ತಪ್ಪೆಂಬುದು ಹಾಗಿರಲಿ, ಈಗಿನಕಾಲಕ್ಕೆ ನಮ್ಮಲ್ಲಿ ಬಹುಜನರಿಗೆ ಅತ್ಯಂತವಾಗಿ ಅವಶ್ಯವಾಗಿರುವ ಸಾಧನವೆಂದರೆ ಅದೇ ಆಗಿರುತ್ತದೆ- ಎಂದು ನಾವೆಲ್ಲರೂ ನಿಶ್ಚಿತವಾಗಿ ನಂಬಬೇಕು. ಈ ದೃಷ್ಟಿಯಿಂದ ನೋಡಿದಾಗ ವೇದಾರ್ಥಸಂಗ್ರಹಲ್ಲಿ ಶಂಕರಾನುಯಾಯಿಗಳಿಗೂ ಗ್ರಾಹ್ಯಾಂಶವು ಬಹಳವಿದೆ- ಎಂದು ನಮ್ಮ ದೃಢವಾದ ನಂಬಿಕೆ.

೮. ಗ್ರಂಥದ ಪ್ರಕೃತಸಂಸ್ಕರಣದ ವಿಶೇಷ

ಅತ್ಯಮೂಲ್ಯವಾದ ವೇದಾರ್ಥಸಂಗ್ರಹವು ಕನ್ನಡಕ್ಕೆ ಇಳಿದಿರುವದು ಇದೇ ಮೊಟ್ಟಮೊದಲು. (೧) ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟವಾಗಿರುವ ಶ್ರೀಶಂಕರಾಚಾರ್ಯರವರ ಗ್ರಂಥಗಳ ಶೈಲಿಯಲ್ಲಿಯೇ ಇದನ್ನು **ಮೂಲ, ಅರ್ಥ, ಟಿಪ್ಪಣಿ, ಪೀಠಿಕೆ, ಪರಿಶಿಷ್ಟ** - ಮುಂತಾದ ಸೌಕರ್ಯಗಳೊಡನೆ ಓದುಗರ ಮುಂದೆ ಇಡಲಾಗಿದೆ. (೨) ಕಾಶಿಯಲ್ಲಿ ಪ್ರಕಟವಾಗಿರುವ ಸಟೀಕವೇದಾರ್ಥಸಂಗ್ರಹ ಮತ್ತು ಕಾಂಚಿಯಲ್ಲಿ ಪ್ರಕಟವಾಗಿರುವ ಶ್ರೀಭಗವದ್ರಾಮಾನುಜಗ್ರನ್ಥಮಾಲೆಯಲ್ಲಿರುವ ವೇದಾರ್ಥಸಂಗ್ರಹ- ಇವೆರಡನ್ನೂ ನೋಡಿ **ಪಾಠಾಂತರ**ಸೂಚನಾಪೂರ್ವಕವಾಗಿ ಸಂಸ್ಕೃತದ ಶುದ್ಧಪಾಠವನ್ನು ಕೊಟ್ಟಿರುತ್ತದೆ. (೩) ಕನ್ನಡದ ಅರ್ಥಮಾತ್ರದಿಂದಲೇ ತಿಳಿದುಕೊಳ್ಳವದಕ್ಕಾಗದ ವಿಷಯಗಳನ್ನು ಟಿಪ್ಪಣಿಯಿಂದ ತಿಳಿಸಿದೆ. ಟಿಪ್ಪಣಿಯ ಭಾಗದ ಗ್ರಂಥಕ್ಕೆ **ಶ್ರೀಸುದರ್ಶನಸೂರಿಗಳು** ಬರೆದಿರುವ **ತಾತ್ಪರ್ಯದೀಪಿಕಾ** ಎಂಬ ವ್ಯಾಖ್ಯಾನದಿಂದ ಬಹಳ ವಿಷಯಗಳನ್ನು ಸಂಗ್ರಹಿಸಿದೆ. (೪) ಗ್ರಂಥವನ್ನು **ಪ್ರಕರಣ**ಗಳಾಗಿ ವಿಭಾಗಿಸಿ, ಪ್ರತಿಯೊಂದು ಪ್ರಕರಣವನ್ನೂ **ಖಂಡ**ಗಳಾಗಿ ಒಳವಿಭಾಗವನ್ನು

ಮಾಡಿದೆ. ಪ್ರಕರಣಗಳಿಗೂ ಖಂಡಗಳಿಗೂ ಆಯಾ ವಿಷಯವನ್ನು ತಿಳಿಸುವ **ತಲೆಬರಹ**ಗಳನ್ನು ಸೇರಿಸಿರುತ್ತದೆ. (೫) ಹೀಗೆ ಗ್ರಂಥವನ್ನು ಅಚ್ಚಿಗೆ ಸಿದ್ಧಪಡಿಸಿದ ಮೇಲೆ ನಮಗೆ ಎರಡು ಇಂಗ್ಲಿಷು ಅನುವಾದಗಳು ಸಿಕ್ಕಿದವು ; ಅವುಗಳಿಂದಲೂ ಆಗಾಗ್ಗೆ ಸ್ವಲ್ಪಮಟ್ಟಿಗೆ ಸಹಾಯವನ್ನು ಪಡೆದಿದೆಯಾದರೂ ಗ್ರಂಥವಿಭಾಗ, ತಲೆಬರಹ, ಟಿಪ್ಪಣಿ- ಮುಂತಾದವುಗಳೆಲ್ಲವನ್ನೂ ಮೊದಲು ಸಿದ್ಧಗೊಳಿಸಿದಂತೆಯೇ ಇಡಲಾಗಿದೆಯಾದ್ದರಿಂದ ಇದರ ತಪ್ಪುನೆಪ್ಪುಗಳಿಗೆ ಈಗಿನ **ಸಂಪಾದಕರೇ** ಹೊಣೆಯಾಗಿರುತ್ತಾರೆ. (೬) ಗ್ರಂಥದಲ್ಲಿ ಆಚಾರ್ಯರು ಉದಾಹರಿಸಿರುವ ಕೆಲವು **ವಾಕ್ಯಗಳ ಸ್ಥಾನವು** ಸಿಕ್ಕುವದು ಕಷ್ಟವಾಯಿತು. ಉಳಿದ ಅನುವಾದಗಳಲ್ಲಿ ಅವುಗಳ ಸಂಖ್ಯೆಯನ್ನು ನೋಡಿದ ಮೇಲೂ ಆಯಾ ಮೂಲಗ್ರಂಥಗಳನ್ನು ನೋಡಿಯೇ ಸಂಖ್ಯೆಗಳನ್ನು ಹಾಕಿರುತ್ತದೆ. ಗ್ರಂಥಶರೀರದಲ್ಲಿ ಬಿದ್ದಿರುವ ಕೆಲವು ಸ್ಥಾನಸಂಖ್ಯೆಗಳು ತಪ್ಪಾಗಿ ಅಚ್ಚಾಗಿರುವದರಿಂದ ಅಕಾರಾದಿಯಾಗಿ ವಾಕ್ಯಗಳನ್ನು ಉದಾಹರಿಸಿ ಮತ್ತೊಮ್ಮೆ ಶೋಧಿಸಿದ ಸ್ಥಾನಸಂಖ್ಯೆಗಳನ್ನೊಳಗೊಂಡ ಅನುಕ್ರಮಣಿಕೆಯನ್ನು ಜೋಡಿಸಲಾಗಿದೆ. ಹೀಗೆ **ಇಷ್ಟು ಸೌಕರ್ಯಗಳಿಂದೊಡಗೂಡಿದ ಅನುವಾದವು ಈವರೆಗೆ ಮತ್ತೆ ಯಾವ ಭಾಷೆಯಲ್ಲಿಯೂ ಆಗಿಲ್ಲವೆಂದು ನಮ್ಮ ನಂಬಿಕೆ.**

ಕೃತಜ್ಞತೆ

ಈ ಗ್ರಂಥವನ್ನು ಕಾರ್ಯಾಲಯದಲ್ಲಿ ಅಚ್ಚುಮಾಡಿಸುವದಕ್ಕೆ ಅನುಕೂಲವಾಗುವಂತೆ ಸಹಾಯಮಾಡಿದ ಮಹನೀಯರುಗಳಲ್ಲಿ ಮುಖ್ಯವಾಗಿ ಶ್ರೀ॥ಗಳಾದ ಒಬ್ಬ **ಶ್ರೀವೈಷ್ಣವಭಕ್ತರು, ಗೊರೂರು ; ತಂಗಲಿ ಸಾಹುಕಾರ್ ಕೃಷ್ಣಸ್ವಾಮಿ ಅಯ್ಯಂಗಾರ್ಯರು, ಮತ್ತು ವೆಂಕಟಾಚಲ ಅಯ್ಯಂಗಾರ್ ಮತ್ತು ಸಹೋದರರು, ಆನಂದಪುರ, ಶಿವಮೊಗ್ಗ-** ಈ ಮೂವರ ಹೆಸರನ್ನು ಉಲ್ಲೇಖಿಸಬೇಕು. ಅವರುಗಳ ಸಹಾಯದಿಂದ ಪುಸ್ತಕದ ಮುದ್ರಣ ಧನವ್ಯಯವು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಹೊಳೆನರಸೀಪುರದ ಪ್ಲೀಡರ್ **ಶ್ರೀ॥ ಪಿ.ಎನ್. ನರಸಿಂಹಯ್ಯನವರು** ಗ್ರಂಥವನ್ನು ಮೂಲಕ್ಕೆ ಹೋಲಿಸಿ ನೋಡುವದೇ ಮುಂತಾದ ಕೆಲಸಕ್ಕೆ ಸಹಕಾರವನ್ನು ನೀಡಿರುತ್ತಾರೆ. ಭಕ್ತಿ ಪ್ರಧಾನವಾದ ಈ ಅಮೋಘಗ್ರಂಥದ ಪ್ರಕಾಶನಕ್ಕೆ ನೆರವಾಗಿರುವ ಈ ಮಹನೀಯರುಗಳಿಗೆಲ್ಲ ಶ್ರೀಮನ್ನಾರಾಯಣನು ತನ್ನ ಚರಣಾರವಿಂದದಲ್ಲಿ ಅಚಲ ಭಕ್ತಿಯನ್ನೂ ಐಹಿಕಾಭ್ಯುದಯವನ್ನೂ ಕರುಣಿಸಲೆಂದು ಪ್ರಾರ್ಥಿಸಿ ಈ ಪೀಠಿಕೆಯನ್ನು ಸಮಾಪ್ತಿಗೊಳಿಸುವೆವು.

ಅಧ್ಯಾತ್ಮಪ್ರಕಾಶಕಾರ್ಯಾಲಯ
ವಿಕಾರಿಸಂವತ್ಸರದ ಆಷಾಢಶುಕ್ಲಪಂಚಮಿ

ಅನುವಾದಕ

೧೯೫೯

ವಿಷಯಾನುಕ್ರಮಣಿಕೆ

ಮಂಗಲ ಪುಟ ೧

೧. ಸಿದ್ಧಾಂತದ ಮತ್ತು ಪೂರ್ವಪಕ್ಷಗಳ ಸಂಕ್ಷೇಪ

ಸ್ವಮತಸಂಕ್ಷೇಪ : ವೇದಾಂತಾರ್ಥ- ವೇದಾಂತವಾಕ್ಯತಾತ್ಪರ್ಯ - ಜೀವಸ್ವರೂಪ- ಪರಮಾತ್ಮಸ್ವರೂಪ- ಪರಮಾತ್ಮನ ವೈಭವ (ಖಂ. ೧-೫) - ಶಾಂಕರಮತಸಂಕ್ಷೇಪ (೬)- ಭಾಸ್ಕರಮತಸಂಕ್ಷೇಪ (೭) - ಯಾದವಪ್ರಕಾಶಮತಸಂಕ್ಷೇಪ (೮). **ಪುಟಗಳು ೧-೮**

೨. ಶಾಂಕರಮತನಿರಾಕರಣ

ಈ ಮತವು ಶ್ರುತಿವಿರುದ್ಧ : (೧) ಸಗುಣವಾಕ್ಯವಿರುದ್ಧ - ಸರ್ವವಿಜ್ಞಾನೋಪಕ್ರಮವು ಸಗುಣಪರ-ಆದೇಶಪ್ರಶ್ನೆಯು ಸಗುಣವಿಷಯಕ್ಕೇ ಹೊಂದುತ್ತದೆ - ಮೃದಾದಿ ದೃಷ್ಟಾಂತವು ಸಗುಣಪರ-ಬ್ರಹ್ಮವೊಂದೇ ಜಗತ್ತಿಗೆ ಉಪಾದಾನವೆಂಬುದು ಸಗುಣಪರ - ನಾಮರೂಪವ್ಯಾಕರಣ ಶ್ರುತಿಯು ಸಗುಣಪರ- ತತ್ತ್ವಮಸಿವಾಕ್ಯವು ಸಗುಣಪರ-ತತ್ತ್ವಮಾದಿಪದಗಳೆಲ್ಲವೂ ಸಗುಣಪರ- ಕಾರ್ಯವು ಸಗುಣಬ್ರಹ್ಮಾತ್ಮಕವಾದ್ದರಿಂದಲೇ ಸತ್ಯ- ಶೋಧಕವಾಕ್ಯಗಳ ತಾತ್ಪರ್ಯ- ತತ್ತ್ವಂ ಪದಗಳು ನಿರ್ವಿಶೇಷವಸ್ತುಬೋಧಕವಲ್ಲ- ಪೂರ್ವಪಕ್ಷಿಯ ವ್ಯಾಖ್ಯಾನವು ಉಪಕ್ರಮವಿರುದ್ಧ- ಶಬ್ದವು ನಿರ್ವಿಶೇಷವಸ್ತು ಬೋಧಕವಲ್ಲ- ಶಬ್ದವು ವಿಶೇಷನಿರಾಕರಣದ್ವಾರದಿಂದ ಆತ್ಮನಿಗೆ ಪ್ರಮಾಣವೆಂಬ ವಾದದ ಖಂಡನೆ - ನಿರ್ವಿಕಲ್ಪಪ್ರತ್ಯಕ್ಷದಿಂದ ನಿರ್ವಿಶೇಷವಸ್ತುಸಿದ್ಧಿಯಿಲ್ಲ- ಭೇದ ನಿರಾಸಕವೇದಾಂತವಚನಗಳೇ ಇಲ್ಲ; ವಾಚಾರಂಭಣಶ್ರುತಿಯು ನಿರ್ವಿಶೇಷಪರವಲ್ಲ- ಸದೇವೇತ್ಯಾದಿಶ್ರುತಿ ನಿರ್ವಿಶೇಷಕ್ಕೆ ಪ್ರಮಾಣವಲ್ಲ- ಅಸತ್ಕಾರ್ಯವಾದನಿರಾಸಕ ಶ್ರುತಿಯು ಪೂರ್ವಪಕ್ಷಕ್ಕೆ ಹೊಂದದು- ಶೋಧಕವಾಕ್ಯಗಳು ನಿರ್ವಿಶೇಷಪರವಲ್ಲ- ನೇತಿನೇತಿಶ್ರುತಿಯು ನಿರ್ವಿಶೇಷಪರವಲ್ಲ- ನೇಹ ನಾನಾಸ್ತಿಶ್ರುತಿಯು ನಿರ್ವಿಶೇಷಪರವಲ್ಲ. (ಖಂ. ೯-೩೦).

ಈ ಮತವು ಯುಕ್ತಿವಿರುದ್ಧ : ಬ್ರಹ್ಮವು ಅವಿದ್ಯಾತಿರೋಹಿತವಾಗಲಾರದು- ನಿತ್ಯಜ್ಞಾನಕ್ಕೆ ತಿರೋಧಾನವು ಸಲ್ಲದು- (ಸಿದ್ಧಾಂತಕ್ಕೆ ಶ್ರುತ್ಯಾದಿಗಳ ಪ್ರಾಮಾಣ್ಯವಿರುವದರಿಂದ ಈ ದೋಷವಿಲ್ಲ)- ಅವಿದ್ಯೆಯು ಮಿಥ್ಯಾದರ್ಶನಕ್ಕೆ ಮೂಲವಾಗಲಾರದು. ಅವಿದ್ಯಾನಿವರ್ತಕವು ಯಾವದೂ ಇಲ್ಲ- ಬ್ರಹ್ಮಾತಿರಿಕ್ತನಿಷೇಧ್ಯವಿಷಯಕ್ಕೆ ಜ್ಞಾತೃವೇ ಇಲ್ಲ- ಭೇದನಿವರ್ತಕಜ್ಞಾನಕ್ಕೆ ಸಾಮಗ್ರಿಯಿಲ್ಲ- ಶಾಸ್ತ್ರವು ಪ್ರತ್ಯಕ್ಷಬಾಧಕವಾಗಲಾರದು (ಖಂ. ೩೧-೩೮). **ಪುಟಗಳು ೯ - ೬೫**

೩. ಭಾಸ್ಕರಮತನಿರಾಕರಣ

ಈ ಮತದಲ್ಲಿ ಉಪಾಧಿದೋಷಗಳು ಬ್ರಹ್ಮಕ್ಕೇ ಅಂಟುವವು- ಘಟಾಕಾಶಾದಿದೃಷ್ಟಾಂತವು ಪೂರ್ವಪಕ್ಷಿಗೆ ಸಾಧಕವಲ್ಲ- ಪ್ರದೇಶಭೇದವನ್ನೊಪ್ಪಿದರೂ ಆಕಾಶ ದೃಷ್ಟಾಂತವು ಹೊಂದುವದಿಲ್ಲ- ಶ್ರೋತ್ರೇಂದ್ರಿಯವ್ಯವಸ್ಥೆಯಂತೆ ಬ್ರಹ್ಮದಲ್ಲಿ ವ್ಯವಸ್ಥೆ ಎಂಬುದು ಸರಿಯಲ್ಲ (ಖಂ. ೩೯-೪೨). **ಪರಿಣಾಮವಾದವನ್ನೊಪ್ಪಿರುವದರಿಂದಲೂ ಈ ಪಕ್ಷದಲ್ಲಿದೋಷ** (ಖಂ. ೪೩). **ಪುಟಗಳು ೬೬-೭೧**

೪. ಯಾದವಪ್ರಕಾಶಮತನಿರಾಕರಣ

ಜೀವಬ್ರಹ್ಮಾಭೇದವನ್ನೊಪ್ಪಿರುವದರಿಂದ ಜೀವರ ದೋಷಗಳು ಬ್ರಹ್ಮಕ್ಕೇ ಅಂಟುವವು : ಬ್ರಹ್ಮದ ಈಶ್ವರಾಂಶ ನಿರ್ದುಷ್ಟವೆಂದರೂ ಈ ದೋಷವು ತಪ್ಪದು- ಜೀವರೂಪವು ಪರಮೇಶ್ವರನಿಗಿಂತ ವಿಲಕ್ಷಣವೆಂದರೆ ದೋಷವಿಲ್ಲ- ಒಂದೇ ವಸ್ತು ಭಿನ್ನಾಭಿನ್ನವೆಂದರೆ ದೋಷ- ಜಾತ್ಯಾದಿಗಳು ವಸ್ತುಪ್ರಕಾರಮಾತ್ರ (ಖಂ. ೪೪-೪೮) **ಪುಟಗಳು ೭೨ - ೭೮**

೫. ಸ್ವಪಕ್ಷಪ್ರತಿಷ್ಠಾಪನ

೧. **ತತ್ತ್ವಮಸಿವಾಕ್ಯದಲ್ಲಿರುವ ಸಾಮಾನಾಧಿಕರಣ್ಯಕ್ಕೆ ಮುಖ್ಯತ್ವ** - ಚಿದಚಿದಾತ್ಮಕ ಪ್ರಪಂಚವು ಬ್ರಹ್ಮದ ಪ್ರಕಾರವೇ - ಬ್ರಹ್ಮಕ್ಕೆ ಉಪಾದಾನತ್ವಸಿದ್ಧಿ - ಸ್ವರೂಪದಿಂದ ನಿರ್ವಿಕಾರವಾದ ಬ್ರಹ್ಮಕ್ಕೂ ಕಾರ್ಯಕಾರಣಶಬ್ದವಾಚ್ಯತ್ವ- ಪರಮಾತ್ಮನಿಗೂ ಪ್ರಪಂಚಕ್ಕೂ ಶರೀರಶರೀರಿಭಾವ- ಪರಮಾತ್ಮನು ಸರ್ವಶಬ್ದವಾಚ್ಯನೆಂಬುದಕ್ಕೆ ಶ್ರುತ್ಯಾದಿಪ್ರಮಾಣ (ಖಂ.೪೯ - ೫೪). **ಶಾಸ್ತ್ರೋಪದೇಶದ ಸಾರ** - ಇದಕ್ಕೆ ಪ್ರಮಾಣ ವಚನಗಳು (ಖಂ. ೫೫-೫೬) **ಬ್ರಹ್ಮದ ಪರಮಾಶ್ಚರ್ಯಸ್ವರೂಪ** - ಈ ವಿಷಯಕ್ಕೆ ನಾನಾಶ್ರುತಿಗಳ ಹೊಂದುಗಡೆ (ಖಂ. ೫೭-೫೮). ತತ್ತ್ವಮಸಿಯು ಸಗುಣಪರವೆಂಬುದು ಶ್ರುತ್ಯವಿರುದ್ಧ - ಸದ್ವಿದ್ಯೆಯು ಸಗುಣಪರವೆಂಬುದಕ್ಕೆ ಆಪ್ತೋಕ್ತಿ - ಜೀವರೇ ತಮ್ಮ ತಮ್ಮ ಕರ್ಮಕ್ಕೆ ಹೊಣೆ (ಖಂ.೫೯-೬೧).

೨. **ಪರಮಾತ್ಮಪ್ರಾಪ್ತ್ಯುಪಾಯವು ಭಕ್ತಿಯೇ** - ಭಕ್ತಿಯೇ ಉಪಾಯವೆಂಬುದಕ್ಕೆ ಪ್ರಮಾಣ - ಚಾರ್ವಾಕಾದಿಮತಗಳು ವೇದವಿರುದ್ಧವಾದ್ದರಿಂದ ಅಪ್ರಮಾಣ (ಖಂ.೬೨-೬೪).

೩. **ನಾರಾಯಣನೇ ಪರಬ್ರಹ್ಮ** - ಪುರಾಣದ ಪ್ರಾಮಾಣ್ಯದ ನಿರ್ಣಯ - ವೇದವಾಕ್ಯಗಳೆಲ್ಲ ನಾರಾಯಣಪರವೇ - ನಾರಾಯಣೇತರಪರವೆಂದು ತೋರುವ ವಾಕ್ಯಗಳಗತಿ - 'ಯಃ ಪರಃ ಸ ಮಹೇಶ್ವರಃ', 'ತದನ್ವೇಷ್ಟವ್ಯಮ್' - ವಿಷ್ಣುವನ್ನು ಕಾರ್ಯಗಳ ಜೊತೆಗೆ ಸೇರಿಸಿರುವದೇಕೆ?- ರುದ್ರನು ತಾನು ಸರ್ವೇಶ್ವರನೆಂದುಕೊಂಡಿರುವದಕ್ಕೆ ಗತಿ- ಇತಿಹಾಸಪುರಾಣಗಳಲ್ಲಿ ನಾರಾಯಣನೇ ಪರತತ್ತ್ವವೆಂದು ನಿರ್ಣಯಿಸಿದೆ - ವಿಷ್ಣುಪುರಾಣದಲ್ಲಿ ತ್ರಿಮೂರ್ತಿಸಾಮ್ಯವನ್ನು ಹೇಳಿಲ್ಲ- ಬ್ರಹ್ಮಾದಿಗಳು ಕರ್ಮವಶರು - ಭಗವಂತನು ಸ್ವತಂತ್ರನು (ಖಂ.೬೫-೭೪)

೪. ಕರ್ಮದ ಫಲವು ನಾರಾಯಣನಿಂದಲೇ : ಪ್ರಾಭಾಕರಮತಖಂಡನೆ : ಸಿದ್ಧವಸ್ತುವನ್ನು ಶಬ್ದವು ತಿಳಿಸಬಹುದು - ಕಾರ್ಯಾರ್ಥದಲ್ಲಿಯೇ ಶಬ್ದಕ್ಕೆ ವ್ಯುತ್ಪತ್ತಿ ಎಂದರೂ ದೋಷವಿಲ್ಲ - ಕಾರ್ಯವಾಕ್ಯಾರ್ಥವಾದದ ಖಂಡನೆ : ಕಾರ್ಯವು ಇಷ್ಟವಲ್ಲ , ಕಾರ್ಯವು ಪುರುಷಾನುಕೂಲವೆಂಬುದೂ ಸರಿಯಲ್ಲ , ಕಾರ್ಯವು ಕೃತಿಗೆ ಶೇಷಿ ಎಂಬುದೂ ಸರಿಯಲ್ಲ - ಸ್ವರ್ಗಕಾಮಾದಿಗಳು ನಿಯೋಜ್ಯನನ್ನು ಹೇಳುವವೆಂಬುದು ತಪ್ಪು - ಕರ್ಮಫಲಸಿದ್ಧಿಗಾಗಿ ಅಪೂರ್ವವನ್ನು ಅಂಗೀಕರಿಸಬೇಕಾದದ್ದಿಲ್ಲ, ಏಕೆಂದರೆ ಈಶ್ವರನೇ ಫಲದಾತೃ- ಕಾಮ್ಯನಿಷಿದ್ಧಕರ್ಮಗಳಿಗೆ ಪರಮಾತ್ಮನೇ ಫಲದಾತೃ (ಖಂ. ೭೫-೮೨).

೫. ಪರಮಾತ್ಮನ ನಿತ್ಯವಿಭೂತಿ : ಪರಮಪದವೆಂಬ ಸ್ಥಾನವೂ ಇದೆ- ಪರಮ ಪದಗಳು ಮೂರು ಇವೆ - ಪರಿಜನಸ್ಥಾನಾದಿಗಳು ಬ್ರಹ್ಮದಲ್ಲಿಯೇ ಅಂತರ್ಗತವಾಗಿವೆ. ನಿತ್ಯವಿಭೂತಿಯನ್ನು ವರ್ಣಿಸುವ ಇತಿಹಾಸಪುರಾಣಗಳು - ನಿತ್ಯವಿಭೂತಿಯ ವಿಷಯಕ್ಕೆ ಸೂತ್ರಕಾರರ ಸಂಮತಿ - ಪರಮಾತ್ಮಸ್ವರೂಪದ ವಿಷಯಕ್ಕೆ ವಾಕ್ಯಕಾರದ್ರಮಿಡಭಾಷ್ಯಕಾರರ ಸಂಮತಿ - ವಾಕ್ಯಕಾರ ಭಾಷ್ಯಕಾರರುಗಳು ಹೇಳಿರುವದು ಪತ್ನೀಪರಿಜನಾದಿಗಳಿಗೂ ಉಪಲಕ್ಷಣ - ನಿತ್ಯವಿಭೂತಿವಿಚಾರದ ಉಪಸಂಹಾರ (ಖಂ. ೮೩-೯೧).

ನಾರಾಯಣಸ್ವರೂಪಾದಿಗಳು ವೇದಪ್ರಮಾಣಸಿದ್ಧ : ವೇದಗಳು ಅಪೌರುಷೇಯ - ಇತಿಹಾಸಪುರಾಣಾದಿಗಳೂ ವೇದಾನುಸಾರಿಯಾಗಿರುವದರಿಂದ ಪ್ರಮಾಣ-ಲೌಕಿಕಶಬ್ದಗಳು ವೇದದಿಂದಲೇ ಬಂದಿವೆ (ಖಂ. ೯೨-೯೪).

೬. ಉಪಸಂಹಾರ : ಪ್ರಕರಣದಲ್ಲಿ ಹೇಳಿರುವ ಸಿದ್ಧಿವಸ್ತುವಿಷಯದ ಸಂಗ್ರಹ ; ಬ್ರಹ್ಮದ ಸ್ವರೂಪಾದಿಗಳು - ಬ್ರಹ್ಮದ ಸರ್ವಪ್ರಕಾರಕತ್ವ - **ಉಪಾಯ ವಿಷಯದ ಸಂಗ್ರಹ** : ಪರಭಕ್ತಿಯೇ ಬ್ರಹ್ಮಪ್ರಾಪ್ತ್ಯುಪಾಯ -**ಶೇಷತ್ವದ ಬಗ್ಗೆ ಆಕ್ಷೇಪಸಮಾಧಾನಗಳು :** ಪರವಶವಾದದ್ದು ದುಃಖವೆಂಬುದು ದೇಹಾಭಿಮಾನಿಗಳ ವಿಷಯ, ಸ್ವಾತಂತ್ರ್ಯಬುದ್ಧಿಯು ವಿಪರೀತಜ್ಞಾನದ ಫಲ - ಭಗವತ್ಪಾರತಂತ್ರ್ಯವು ಸುಖವೇ, ಇತರ ಸೇವೆಯು ದುಃಖವಾದರೂ ಪರಮಪುರುಷನ ಸೇವೆಯು ಸುಖವೇ- ಭಕ್ತಿರೂಪಸೇವೆಯನ್ನೇ ಶ್ರುತಿಯಲ್ಲಿ ವೇದನವೆಂದು ಕರೆದಿದೆ. **ಸಮಾಪ್ತಿಶ್ಲೋಕ** (ಖಂ.೯೫-೧೦೨) **ಪುಟಗಳು ೭೯-೨೨೪**

ಪ್ರಮಾಣವಚನಗಳ ಅಕ್ಷರಾನುಕ್ರಮಣಿಕೆ ಪುಟ ೨೨೫

ಃಃಃಃಃಃಃ

ಸಂಕೇತಾಕ್ಷರಗಳ ವಿವರಣೆ

ಸಂಕೇತ	ವಿವರಣೆ
ಅ. ಶಿಖಾ.	ಅಥರ್ವಶಿಖೋಪನಿಷತ್ತು
ಅ. ಶಿರ.	ಅಥರ್ವಶಿರ ಉಪನಿಷತ್ತು
ಆ. ಧ.	ಆಪಸ್ತಂಬಧರ್ಮಸೂತ್ರ
ಆ. ಸಿ.	ಆತ್ಮಸಿದ್ಧಿ (ಯಾಮುನಾಚಾರ್ಯಕೃತ)
ಋ., ಋ. ಸಂ.	ಋಗ್ವೇದಸಂಹಿತೆ
ಐ.	ಐತರೇಯೋಪನಿಷತ್ತು
ಐ. ಆ.	ಐತರೇಯಾರಣ್ಯಕ
ಕಾ.	ಕಾಠಕೋಪನಿಷತ್ತು
ಕುಂ.	ಕುಂಭಕೋಣದ ಛಾಪೆಯ ಮಹಾಭಾರತ
ಕಾ.	ಕಾಶಿಯಲ್ಲಿ ಅಚ್ಚಾಗಿರುವ ಸವ್ಯಾಖ್ಯಾನ ವೇದಾರ್ಥಸಂಗ್ರಹ
ಕೌ.	ಕೌಷೀತಕ್ಯುಪನಿಷತ್ತು
ಗೀ.	ಭಗವದ್ಗೀತೆ
ಛಾಂ.	ಛಾಂದೋಗ್ಯೋಪನಿಷತ್ತು
ಜಿತಂ. ತೇ.	ಜಿತಂತೇ ಸ್ತೋತ್ರ
ಜೈ. ಸೂ.	ಜೈಮಿನಿಗಳ ಪೂರ್ವಮೀಮಾಂಸಾಸೂತ್ರ
ತಾ., ಟೀಕೆ.	ತಾತ್ಪರ್ಯಬೋಧಿನೀ ಟೀಕಾ, ವೇದಾರ್ಥಸಂಗ್ರಹಕ್ಕೆ
ತೆ.	ತೆಲುಗು ಪ್ರತಿಯ ವೇದಾರ್ಥಸಂಗ್ರಹ
ತೈ. ಆ.	ತೈತ್ತಿರೀಯಾರಣ್ಯಕ
ತೈ. ನಾ.	ತೈತ್ತಿರೀಯದ ನಾರಾಯಣೋಪನಿಷತ್ತು
ತೈ. ಬ್ರಾ.	ತೈತ್ತಿರೀಯಬ್ರಾಹ್ಮಣ
ತೈ. ಸಂ.	ತೈತ್ತಿರೀಯ ಸಂಹಿತೆ
ದ್ರ. ಭಾ.	ದ್ರಮಿಡಭಾಷ್ಯ
ಧಾ. ಪಾ.	ಪಾಣಿನೀಯ ಧಾತುಪಾಠ
ಪಾ. ಭಾ.	ಪಾತಂಜಲ ಭಾಷ್ಯ
ಬೊಂ.	ಬೊಂಬಾಯಿ ಮುದ್ರಣದ ಮಹಾಭಾರತ

ಸಂಕೇತ	ವಿವರಣೆ
ಬೃ.	ಬೃಹದಾರಣ್ಯಕೋಪನಿಷತ್ತು
ಮನು.	ಮನುಸ್ಮೃತಿ
ಮ. ಭಾ. ಅನು.	ಮಹಾಭಾರತ ಅನುಶಾಸನಪರ್ವ
ಮ. ಭಾ. ಕರ್ಣ	ಮಹಾಭಾರತ ಕರ್ಣಪರ್ವ
ಮ. ಭಾ. ವನ.	ಮಹಾಭಾರತ ವನಪರ್ವ
ಮ. ಭಾ. ಸಭಾ.	ಮಹಾಭಾರತ ಸಭಾಪರ್ವ
ಮಹೋ.	ಮಹೋಪನಿಷತ್ತು
ಮಂ.	ಮಂತ್ರಿಕೋಪನಿಷತ್ತು
ಮಾ. ಪು.	ಮಾತ್ಸ್ಯಪುರಾಣ
ಮುಂ.	ಮುಂಡಕೋಪನಿಷತ್ತು
ಮೋ. ಧ.	ಮೋಕ್ಷಧರ್ಮ
ಮೋ. ಧ. ಕುಂ	ಮೋಕ್ಷಧರ್ಮ ಕುಂಭಕೋಣ ಮುದ್ರಣ
ಯಾ. ಸ್ಮೃ.	ಯಾಜ್ಞವಲ್ಕ್ಯಸ್ಮೃತಿ
ವಾಕ್ಯ.	ವಾಕ್ಯಕಾರರು
ವಿ. ಪು.	ವಿಷ್ಣುಪುರಾಣ
ವೇ. ಸೂ.	ವೇದಾಂತ ಸೂತ್ರ
ಶತ. ಬ್ರಾ.	ಶತಪಥಬ್ರಾಹ್ಮಣ
ಶ್ವೇ.	ಶ್ವೇತಾಶ್ವತರೋಪನಿಷತ್ತು
ಸು.	ಸುಬಾಲೋಪನಿಷತ್ತು

ಃಃಃಃಃಃಃಃ

॥ ಶ್ರೀರಸ್ತು ॥

ಶ್ರೀಮದ್ರಾಮಾನುಜಾಚಾರ್ಯಕೃತ

ವೇದಾರ್ಥಸಂಗ್ರಹ

ಮಂಗಲ

ಅಶೇಷಚಿದಚಿದ್ವಸ್ತುಶೇಷಿಣೇ ಶೇಷಶಾಯಿನೇ ।
ನಿರ್ಮಲಾನನ್ತಕಲ್ಯಾಣನಿಧಯೇ ವಿಷ್ಣವೇ ನಮಃ ॥೧॥

೧. ಎಲ್ಲಾ ಚಿತ್ತು ಮತ್ತು ಅಚಿತ್ತು — ಎಂಬ ರೂಪದ ವಸ್ತುಗಳಿಗೂ ಶೇಷಿಯಾಗಿರುವ ಶೇಷಶಾಯಿಯಾದ, ನಿರ್ದುಷ್ಟವಾದ ಅನಂತಕಲ್ಯಾಣ(ಗುಣ)ಗಳಿಗೆ ನಿಧಿಯಾಗಿರುವ ವಿಷ್ಣುವಿಗೆ ನಮಸ್ಕಾರ[1] !

ಪರಂಬ್ರಹ್ಮೈವಾಽಜ್ಞಂ ಭ್ರಮಪರಿಗತಂ ಸಂಸರತಿ ತತ್
ಪರೋಪಾಧ್ಯಾಲೀಢಂ ವಿವಶಮಶುಭಸ್ಯಾಸ್ಪದಮಿತಿ ।
ಶ್ರುತಿನ್ಯಾಯಾಪೇತಂ ಜಗತಿ ವಿತತಂ ಮೋಹನಮಿದಂ
ತಮೋ ಯೇನಾಽಪಾಸ್ತಂ ಸ ಹಿ ವಿಜಯತೇ ಯಾಮುನಮುನಿಃ ॥೨॥

೨. ಪರಬ್ರಹ್ಮವೇ ಅಜ್ಞಾನಿಯಾಗಿ ಭ್ರಾಂತಿವ್ಯಾಪ್ತವಾಗಿ ಸಂಸಾರವನ್ನನುಭವಿಸುತ್ತಿರುವದು[2] ; ಬೇರೊಂದು ಉಪಾಧಿಯಿಂದ ಕೂಡಿದ್ದಾಗಿರುವದು, ಪರವಶವಾಗಿರುವದು[3] ; ಅಶುಭಕ್ಕೆ ಆಶ್ರಯವಾಗಿರುವದು[4]- ಎಂದು ಶ್ರುತಿತರ್ಕಗಳ (ಆಧಾರ)ವಿಲ್ಲದೆ, ಜಗತ್ತಿನಲ್ಲಿ ಹರಡಿಕೊಂಡು ಮೋಹವನ್ನುಂಟು ಮಾಡುತ್ತಿರುವ ಈ ತಮಸ್ಸನ್ನು ದೂರವಾಗಿ ತೊಲಗಿಸಿರುವನಲ್ಲ, ಆ **ಯಾಮುನಮುನಿಯು** ಸರ್ವೋತ್ಕೃಷ್ಟನಾಗೊಪ್ಪುತ್ತಿರುವನು.

1. ಇಲ್ಲಿ ಸ್ವಮತವನ್ನು ಸಂಕ್ಷೇಪವಾಗಿ ತಿಳಿಸಿದೆ ಮತ್ತು ಆರ್ಥಿಕವಾಗಿ ಸೂಚಿಸಿದೆ.
2. ಎರಡನೆಯ ಪದ್ಯದಲ್ಲಿ ಪರಮತನಿರಾಕರಣವನ್ನು ಸಂಗ್ರಹವಾಗಿ ತಿಳಿಸಿದೆ. ಬ್ರಹ್ಮವೇ ಅಜ್ಞಾನಿ ಎಂಬುದು **ಶಾಂಕರಮತ**. ಇ.ಸಿ.ಟಿ.ನೆಯ ಅಧ್ಯಾಯವನ್ನು ನೋಡಿ
3. ಇದು **ಭಾಸ್ಕರಮತ.** ಭಾ.ಸೂ. ಭಾ. ೪-೧-೩, ೪-೪-೪ನ್ನು ನೋಡಿ.
4. ಇದು **ಯಾದವಪ್ರಕಾಶಮತ**. ಅಚಿದ್ಗತಪರಿಣಾಮಾರ್ಹತ್ವಕ್ಕೂ ಚಿದ್ಗತವಾದ ಅಪುರುಷಾರ್ಥ ಸಂಬಂಧಕ್ಕೂ ಆಶ್ರಯವಾಗಿರುವದು ಎಂದರ್ಥ. ಅಚಿದ್ಬ್ರಹ್ಮಗಳಿಗೆ ಭೇದಾಭೇದಗಳೆರಡೂ ಸ್ವಾಭಾವಿಕ ; ಚಿದ್ಬ್ರಹ್ಮಗಳಿಗೆ ಅಭೇದವೇ ಸ್ವಾಭಾವಿಕ, ಭೇದವು ಔಪಾಧಿಕ, ಏಕೆಂದರೆ ಮುಕ್ತಿಯಲ್ಲಿ ಅಭೇದವನ್ನೇ ಶ್ರುತಿಯಲ್ಲಿ ಹೇಳಿದೆ- ಎಂಬುದು ಭಾಸ್ಕರಮತ ; ಚಿದ್ಬ್ರಹ್ಮಗಳಿಗೂ ಭೇದಾಭೇದಗಳೇ ಸ್ವಾಭಾವಿಕ, ಏಕೆಂದರೆ ಮುಕ್ತಿಯಲ್ಲಿ ಭೇದವನ್ನೂ ಶ್ರುತಿಯಲ್ಲಿ ಹೇಳಿದೆ (!) ಎಂದು ಯಾದವ**ಪ್ರಕಾಶಮತ.**

೧. ಸಿದ್ಧಾಂತದ ಮತ್ತು ಪೂರ್ವಪಕ್ಷಗಳ ಸಂಕ್ಷೇಪ

(೧) ಸ್ವಮತ ಸಂಕ್ಷೇಪ

ವೇದಾಂತಾರ್ಥ

(ಮೂಲ)

೧. ಅಶೇಷಜಗದ್ಧಿತಾನುಶಾಸನಶ್ರುತಿನಿಕರಶಿರಸಿ ಸಮಧಿಗತೋಽಯಮರ್ಥಃ । ಜೀವಪರ[1] ಯಾಥಾತ್ಮ್ಯಜ್ಞಾನಪೂರ್ವಕವರ್ಣಾಶ್ರಮಧರ್ಮೇತಿಕರ್ತವ್ಯತಾಕಪರಮಪುರುಷಚರಣಯುಗಲಧ್ಯಾನಾರ್ಚನಪ್ರಣಾಮಾದಿರತ್ಯರ್ಥಪ್ರಿಯಸ್ತತ್ಪ್ರಾಪ್ತಿಫಲಃ ॥

(ಅರ್ಥ)

ಎಲ್ಲಾ ಜಗತ್ತಿಗೂ ಹಿತವನ್ನೇ ತಿಳಿಸುವ ವೇದಸಮೂಹದ ಶಿರೋಭೂತ (ವಾದ ವೇದಾಂತದಲ್ಲಿ) ಈ ಅರ್ಥವು ನಿಶ್ಚಿತವಾಗಿ ತಿಳಿಯಬರುತ್ತಿದೆ ; ಜೀವ, ಪರಮಾತ್ಮ - ಇವರ ಯಾಥಾತ್ಮ್ಯಜ್ಞಾನವನ್ನು ಮೊದಲುಮಾಡಿಕೊಂಡು ವರ್ಣಾಶ್ರಮಧರ್ಮವೆಂಬ ಇತಿಕರ್ತವ್ಯತೆಯಿಂದೊಡಗೂಡಿದ, ಪರಮಪುರುಷನ ಚರಣಯುಗಲವನ್ನು ಧ್ಯಾನಿಸುವದು, ಅರ್ಚಿಸುವದು, ನಮಸ್ಕರಿಸುವುದು-ಮುಂತಾದದದ್ದು[2] ಅತ್ಯಂತಪ್ರಿಯವಾಗಿದ್ದಲ್ಲಿ[3] ಆತನ ಪ್ರಾಪ್ತಿಯೆಂಬ ಫಲವುಳ್ಳದ್ದಾಗುವದು.

ವೇದಾಂತವಾಕ್ಯತಾತ್ಪರ್ಯ

(ಮೂಲ)

೨. ಅಸ್ಯ ಜೀವಾತ್ಮನೋಽನಾದ್ಯವಿದ್ಯಾಸಂಚಿತಪುಣ್ಯಪಾಪರೂಪಕರ್ಮಪ್ರವಾಹಹೇತುಕಬ್ರಹ್ಮಾದಿಸುರನರತಿರ್ಯಕ್ಸ್ಥಾವರಾತ್ಮಕಚತುರ್ವಿಧದೇಹಪ್ರವೇಶಕೃತತತ್ತದಾತ್ಮಾಭಿಮಾನಜನಿತಾವರ್ಜನೀಯಭವಭಯವಿಧ್ವಂಸನಾಯ ದೇಹಾತಿರಿಕ್ತಾತ್ಮಸ್ವರೂಪತತ್ಸ್ವಭಾವತದನ್ತರ್ಯಾಮಿಪರಮಾತ್ಮಸ್ವರೂಪತತ್ಸ್ವಭಾವ

---

1. 'ಜೀವಪರಮಾತ್ಮ' ಕಾ॥
2. ಕೀರ್ತನ, ಯಜನ-ಮುಂತಾದವುಗಳು (ಗೀ. ೯-೩೪). ಇವೆಲ್ಲ ಉಪಾಸನೆಯಲ್ಲಿಯೇ ಸೇರಿದವು. ವರ್ಣಾಶ್ರಮಧರ್ಮಗಳು ಪ್ರಯಾಜವೇ ಮುಂತಾದವುಗಳಿದ್ದಂತೆ ; ಧ್ಯಾನಾದಿಗಳು ಆಗ್ನೇಯಾದಿಷಟ್ಕದಂತೆ ಪ್ರಧಾನ. ಕಾ॥
3. 'ಮನ್ಮನಾ ಭವ' (ಗೀ. ೯-೩೪) ಮುಂತಾದ ಪ್ರತಿಪದಕ್ಕೂ 'ಮದ್ಭಕ್ತಃ' ಎಂಬ ಪದವನ್ನು ಅನ್ವಯಿಸಿಕೊಳ್ಳಬೇಕೆಂದು ಭಾವ. ಕಾ॥.

ತದುಪಾಸನತತ್ಫಲಭೂತಾತ್ಮಸ್ವರೂಪಾವಿರ್ಭಾವಪೂರ್ವಕಾನವಧಿಕಾತಿಶಯಾನನ್ದ ಬ್ರಹ್ಮಾನುಭವಜ್ಞಾಪನೇ ಪ್ರವೃತ್ತಂ ಹಿ ವೇದಾನ್ತವಾಕ್ಯಜಾತಮ್ 'ತತ್ತ್ವಮಸಿ' (ಛಾಂ.೬-೮-೭), 'ಅಯಮಾತ್ಮಾ ಬ್ರಹ್ಮ' (ಬೃ. ೪-೫-೧೯), 'ಯ ಆತ್ಮನಿ ತಿಷ್ಠನ್ನಾತ್ಮನೋಽನ್ತರೋ ಯಮಾತ್ಮಾ ನ ವೇದ ಯಸ್ಯಾಽಽತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ ಸ ತ ಆತ್ಮಾಽಽನ್ತರ್ಯಾಮ್ಯಮೃತಃ' (ಬೃ.ಮಾ.೩-೭-೩೦), 'ಏಷ ಸರ್ವಭೂತಾನ್ತರಾತ್ಮಾ'[1] (ಮುಂ. ೨-೨-೪), 'ಅಪಹತ ಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ' (ಸು.೭-೧), 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾಽನಾಶಕೇನ' (ಬೃ.೪-೪-೨೨), 'ಬ್ರಹ್ಮವಿದಾಪ್ನೋತಿ ಪರಮ್' (ತೈ.೨-೧), 'ತಮೇವಂ ವಿದ್ವಾನಮೃತ ಇಹ ಭವತಿ ನಾನ್ಯಃ ಪನ್ಥಾ ಅಯನಾಯ ವಿದ್ಯತೇ' (ತೈ. ಆ. ೩-೩೮) ಇತ್ಯಾದಿಕಮ್ ॥

(ಅರ್ಥ)

ಈ ಜೀವಾತ್ಮನಿಗೆ **ಅನಾದ್ಯವಿದ್ಯೆಯಿಂದ**[2] ರಾಶೀಹಾಕಿಕೊಂಡಿರುವ ಪುಣ್ಯಪಾಪರೂಪವಾದ ಕರ್ಮಪ್ರವಾಹದ ಕಾರಣದಿಂದ ಬ್ರಹ್ಮನು ಮೊದಲಾದ ಸುರರು, ನರರು, ತಿರ್ಯಗ್ಜಂತುಗಳು, ಸ್ಥಾವರಪ್ರಾಣಿಗಳು - ಎಂಬ **ನಾಲ್ಕು ಬಗೆಯ (ಪ್ರಾಣಿಗಳ) ದೇಹವನ್ನು** ಹೊಗುವದರಿಂದಾದ ಆಯಾ (ದೇಹದ) ಅಭಿಮಾನದಿಂದ ಉಂಟಾದ, ತಪ್ಪಿಸಿಕೊಳ್ಳಲಾಗದ ಸಂಸಾರಭಯವನ್ನು ನಾಶ ಮಾಡಲೋಸುಗ ದೇಹಾತಿರಿಕ್ತವಾದ ಆತ್ಮಸ್ವರೂಪ, ಅವನ ಸ್ವಭಾವ; ಅವನ ಅಂತರ್ಯಾಮಿಯಾದ ಪರಮಾತ್ಮನ ಸ್ವರೂಪ, ಅವನ ಸ್ವಭಾವ ; ಆ (ಪರಮಾತ್ಮನ) ಉಪಾಸನೆ, ಅದರ ಫಲವಾಗಿ ಆತ್ಮನ ಸ್ವರೂಪವು ಹೊರತೋರುವಿಕೆಯ ಮೂಲಕ ಅನವಧಿಕಾತಿಶಯವಾದ ಆನಂದವೆಂಬ ಬ್ರಹ್ಮಾನುಭವ - (ಇವುಗಳನ್ನು) ತಿಳಿಸಿಕೊಡುವದಕ್ಕಲ್ಲವೆ, 'ಅದೇ ನೀನಾಗಿರುವೆ' (ಛಾಂ.೬-೮-೭), 'ಈ ಆತ್ಮನು ಬ್ರಹ್ಮವು' (ಬೃ.೪-೫-೧೯), 'ಯಾವನು ಆತ್ಮನಲ್ಲಿದ್ದುಕೊಂಡು ಆತ್ಮನ ಒಳಗಿರುತ್ತಾನೋ, ಯಾವನನ್ನು ಆತ್ಮನು ಅರಿಯನೋ, ಯಾವನಿಗೆ ಆತ್ಮನು ಶರೀರವೋ, ಯಾವನು ಆತ್ಮನನ್ನು ಒಳಗಿದ್ದು ನಿಯಮಿಸುತ್ತಿರುವನೋ, ಅವನೇ ಅಮೃತನಾದ ನಿನ್ನ ಆತ್ಮನಾದ ಅಂತರ್ಯಾಮಿಯು' (ಬೃ.ಮಾ.೩-೭-೩೦), 'ಇವನೇ ಸರ್ವಭೂತಗಳಿಗೂ ಅಂತರಾತ್ಮನು' (ಮುಂ.೨-೨-೪), 'ಅಪಹತ ಪಾಪ್ಮನು, ದಿವ್ಯನಾದ ಒಬ್ಬನೇ ದೇವನಾದ ನಾರಾಯಣನು' (ಸು.೭-೧),

1. ಈ ವಾಕ್ಯವು ಮುಂದಿನ ವಾಕ್ಯಕ್ಕೆಸೇರಿದೆ ಎಂದಿಟ್ಟುಕೊಂಡರೆ ಎರಡೂ ಸೇರಿ **ಸುಬಾಲೋಪನಿಷತ್ತಿನ** ವಾಕ್ಯವೇ ಆಗುವದು.
2. ಅನಾತ್ಮದಲ್ಲಿ ಆತ್ಮಬುದ್ಧಿರೂಪವಾದ ತಪ್ಪುತಿಳಿವಳಿಕೆಯಿಂದ ; ಮತ್ತು ತನ್ನದಲ್ಲದ್ದು ತನ್ನದೆಂಬ ತಪ್ಪುತಿಳಿವಳಿಕೆಯಿಂದ.

'ಆ ಈತನನ್ನು ಬ್ರಾಹ್ಮಣರು ವೇದಾಧ್ಯಯನದಿಂದಲೂ ಯಜ್ಞದಿಂದಲೂ ದಾನ-ದಿಂದಲೂ ಅನಶನರೂಪವಾದ ತಪಸ್ಸಿನಿಂದಲೂ ತಿಳಿಯಲಿಚ್ಛಿಸುತ್ತಾರೆ' (ಬೃ.೪-೪-೨೨), 'ಬ್ರಹ್ಮವನ್ನು ಅರಿತವನು ಪರ(ಮಾತ್ಮ)ನನ್ನು ಸೇರುತ್ತಾನೆ' (ತೈ.೨-೧), 'ಆತನನ್ನು ಹೀಗೆ ಅರಿತುಕೊಂಡವನು ಇಲ್ಲಿ ಅಮೃತನಾಗುತ್ತಾನೆ, ಅದನ್ನು ಹೊಂದುವದಕ್ಕೆ ಬೇರೊಂದು ಹಾದಿಯಿರುವದಿಲ್ಲ' (ತೈ.ಆ. ೩-೩೮)- ಇವೇ ಮುಂತಾದ[1] ವೇದಾಂತವಾಕ್ಯಗಳ ಸಮೂಹವು ಹೊರಟಿರುತ್ತದೆ?

ಜೀವಸ್ವರೂಪ

(ಮೂಲ)

೩. ಜೀವಾತ್ಮಸ್ವರೂಪಂ ದೇವಮನುಷ್ಯಾದಿಪ್ರಕೃತಿಪರಿಣಾಮವಿಶೇಷ ರೂಪನಾನಾವಿಧಭೇದರಹಿತಂ ಜ್ಞಾನಾನನ್ದೈಕಗುಣಮ್ । ತಸ್ಯೈತಸ್ಯ ಕರ್ಮಕೃತ ದೇವಾದಿಭೇದೇ ವಿಧ್ವಸ್ತೇ[2] ಸ್ವರೂಪಭೇದೋ ವಾಚಾಮಗೋಚರಃ ಸ್ವಸಂವೇದ್ಯಃ ಜ್ಞಾನಸ್ವರೂಪಮಿತ್ಯೇತಾವದೇವ ನಿರ್ದೇಶ್ಯಮ್ । ತಚ್ಚ ಸರ್ವೇಷಾಮ್ ಆತ್ಮನಾಂ ಸಮಾನಮ್ ॥

(ಅರ್ಥ)

ಜೀವಾತ್ಮನ ಸ್ವರೂಪವು ದೇವತೆ, ಮನುಷ್ಯ- ಮುಂತಾದ ಪ್ರಕೃತಿಯ ಪರಿಣಾಮವಿಶೇಷರೂಪವಾದ ಬಗೆಬಗೆಯ ಭೇದಗಳಿಲ್ಲದ್ದು, ಜ್ಞಾನಾನಂದೈಕ ಗುಣವುಳ್ಳದ್ದು. ಆ ಈ (ಸ್ವರೂಪಕ್ಕೆ) ಕರ್ಮದಿಂದಾಗಿರುವ ದೇವಾದಿಭೇದವು ನಾಶವಾಗಲು **ಸ್ವರೂಪಭೇದವು** ವಾಕ್ಕುಗಳಿಗೆ ಅಗೋಚರವಾಗಿ ತನಗೆ ಮಾತ್ರ ಅನುಭವಕ್ಕೆ ಬರತಕ್ಕದ್ದು, 'ಜ್ಞಾನಸ್ವರೂಪವು' ಎಂದಿಷ್ಟೇ ನಿರ್ದೇಶಿಸ ಬಹುದಾದದ್ದು.[3] ಆ (ಸ್ವರೂಪವು) ಎಲ್ಲಾ ಆತ್ಮರುಗಳಿಗೂ ಸಮಾನವಾಗಿರುತ್ತದೆ.[4]

ಪರಮಾತ್ಮಸ್ವರೂಪ

(ಮೂಲ)

೪. ಏವಂವಿಧಚಿದಚಿದಾತ್ಮಕಪ್ರಪಞ್ಚಸ್ಯ ಉದ್ಭವಸ್ಥಿತಿಪ್ರಲಯಸಂಸಾರ ನಿವರ್ತನೈಕಹೇತುಭೂತಃ, ಸಮಸ್ತಹೇಯಪ್ರತ್ಯನೀಕತಯಾ ಅನನ್ತ[5] ಕಲ್ಯಾಣೈಕ

1. ಮುಂತಾದ ಎಂಬ ಶಬ್ದದಿಂದ ಉಪಾಸನಾಶಬ್ದಾನ್ವಿತವಾದ ಮತ್ತು ಜೀವಪರಭೇದವನ್ನು ಹೇಳುವ ಶ್ರುತಿಗಳನ್ನು ಗ್ರಹಿಸಬೇಕು. 2. 'ಅಪಧ್ವಸ್ತೇ' ತೆ॥.
3. ಪ್ರತ್ಯಸ್ತಮಿತಭೇದಂ ಯತ್ರಾತ್ಮಾತ್ಮಮಗೋಚರಮ್ । ವಚಸಾಮಾತ್ಮಸಂವೇದ್ಯಂ ತಜ್ಜ್ಞಾನಂ ಬ್ರಹ್ಮಸಂಜ್ಞಿತಮ್ ॥ (ವಿ.ಪು. ೬-೭-೫೩) ಈ ಶ್ಲೋಕದ ಅಭಿಪ್ರಾಯವಿದು ; ಬ್ರಹ್ಮಜ್ಞಾನವು ದೇವಾದಿಶಬ್ದಗಳಿಗೆ ಅಗೋಚರ, ಜ್ಞಾನಸತ್ತೈಕಸ್ವರೂಪವೂ ಸ್ವಸಂವೇದ್ಯವೂ ಆಗಿರುತ್ತದೆ ಎಂದು ಅರ್ಥ ಜಿಜ್ಞಾಸಾಧಿಕರಣಭಾಷ್ಯದಲ್ಲಿ (ಪು.೬೧) ಇದು ಕ್ಷೇತ್ರಜ್ಞ ಪರವೇ ಎಂಬುದನ್ನು ಪ್ರತಿಪಾದಿಸಿದೆ.
4. ಆತ್ಮರುಗಳಿಗೆಲ್ಲ ಈ ಒಂದೇ ಸ್ವರೂಪವಿರುವದರಿಂದ ಏಕವಚನಪ್ರಯೋಗವನ್ನು ಅಲ್ಲಲ್ಲಿ ಮಾಡಿರುತ್ತದೆ ಎಂದು ಭಾವ 5. 'ಅನನ್ತ' ಎಂಬ ಮಾತು ತೆ॥ ಪಾಠದಲ್ಲಿಲ್ಲ.

ತಾನತಯಾ ಚ ಸ್ವೇತರಸಮಸ್ತವಸ್ತುವಿಲಕ್ಷಣಸ್ವರೂಪಃ, ಅನವಧಿಕಾತಿಶಯಾಸಙ್ಖ್ಯೇಯಕಲ್ಯಾಣಗುಣಗಣಃ, ಸರ್ವಾತ್ಮಪರಬ್ರಹ್ಮಪರಜ್ಯೋತಿಃ ಪರತತ್ತ್ವಪರಮಾತ್ಮಸದಾದಿಶಬ್ದ ಭೇದೈರ್ನಿಖಿಲವೇದಾನ್ತವೇದ್ಯೋ ಭಗವಾನ್ ನಾರಾಯಣಃ ಪುರುಷೋತ್ತಮ ಇತ್ಯನ್ತರ್ಯಾಮಿಸ್ವರೂಮ್ ॥

(ಅರ್ಥ)

ಈ ವಿಧವಾದ ಚಿದಚಿದಾತ್ಮಕವಾದ ಪ್ರಪಂಚಕ್ಕೆ ಉತ್ಪತ್ತಿ, ಸ್ಥಿತಿ, ಪ್ರಲಯ, ಸಂಸಾರನಿವೃತ್ತಿ - ಇವುಗಳಿಗೆಲ್ಲ ತಾನೊಬ್ಬನೇ ಹೇತುವಾಗಿರುವವನು ; ಸಮಸ್ತ ಹೇಯಗುಣಗಳಿಗೆ ವಿರೋಧಿಯಾಗಿರುವದರಿಂದಲೂ ಅನಂತಕಲ್ಯಾಣ[1]ವೊಂದೇ ರೂಪವುಳ್ಳದ್ದಾಗಿರುವದರಿಂದಲೂ ತನಗಿಂತ ಬೇರೆಯಾದ ಸಮಸ್ತವಸ್ತುಗಳಿಗಿಂತಲೂ ವಿಲಕ್ಷಣವಾದ ಸ್ವರೂಪವುಳ್ಳವನು; ನಿರವಧಿಕವಾಗಿ ಅತಿಶಯವುಳ್ಳ ಅಗಣಿತವಾದ ಕಲ್ಯಾಣಗುಣಗಳ ಸಮೂಹವುಳ್ಳವನು ; 'ಸರ್ವಾತ್ಮ', 'ಪರಬ್ರಹ್ಮ', 'ಪರಜ್ಯೋತಿ, 'ಪರತತ್ತ್ವ', 'ಪರಮಾತ್ಮ', 'ಸತ್' - ಮುಂತಾದ ಶಬ್ದವಿಶೇಷಗಳಿಂದ ಎಲ್ಲಾ ವೇದಾಂತಗಳಿಂದಲೂ ತಿಳಿಯಬರುವ ಭಗವಂತನಾದ **ನಾರಾಯಣನು** ಪುರುಷೋತ್ತಮನು - ಎಂಬಿದು **ಅಂತರ್ಯಾಮಿಯ ಸ್ವರೂಪವು.**

ಪರಮಾತ್ಮನ ವೈಭವ

(ಮೂಲ)

೫. ಅಸ್ಯ[2] ಚ ವೈಭವಪ್ರತಿಪಾದನಪರಾಃ ಶ್ರುತಯಃ ಸ್ವೇತರಸಮಸ್ತ ಚಿದಚಿದ್ವಸ್ತುಜಾತಾನ್ತರಾತ್ಮತಯಾ ನಿಖಿಲನಿಯಮನಂ ತಚ್ಛಕ್ತಿತದಂಶತದ್ವಿಭೂತಿತದ್ರೂಪತಚ್ಛರೀರತತ್ತನುಪ್ರಭೃತಿಭಿಃ ಶಬ್ದೈಸ್ತತ್ಸಾಮಾನಾಧಿಕರಣ್ಯೇನ ಚ ಪ್ರತಿಪಾದಯನ್ತಿ ॥

(ಅರ್ಥ)

ಆ (ಅಂತರ್ಯಾಮಿಯ) **ವೈಭವ**ವನ್ನು ತಿಳಿಸುವದರಲ್ಲಿ ತಾತ್ಪರ್ಯವುಳ್ಳ ಶ್ರುತಿಗಳು ಅವನಿಗಿಂತ ಬೇರೆಯಾದ ಸಮಸ್ತಚಿದಚಿದ್ವಸ್ತುಸಮೂಹಕ್ಕೆ ಅಂತರಾತ್ಮನಾಗಿರುವದರಿಂದ ಎಲ್ಲವನ್ನೂ ನಿಯಮಿಸುತ್ತಿರುವನೆಂಬುದನ್ನು ಆತನ 'ಶಕ್ತಿ', ಆತನ 'ಅಂಶ', ಆತನ 'ವಿಭೂತಿ', ಆತನ 'ರೂಪ', ಆತನ 'ಶರೀರ', ಆತನ 'ತನು'- (ಎಂಬಿವೇ) ಮುಂತಾದ ಶಬ್ದಗಳಿಂದಲೂ ಅವನ ಸಾಮಾನಾಧಿಕರಣ್ಯದಿಂದಲೂ[3] ಪ್ರತಿಪಾದಿಸುತ್ತವೆ.

---

1. ಆನಂದಸ್ವರೂಪನು ಎಂದರ್ಥ. 'ಅಸ್ಯೈವ ಚ' ಎಂದು ಕಾ॥ ಪಾಠವಿದ್ದರೂ 'ಅಸ್ಯ ಚ' ಎಂದೇ ವ್ಯಾಖ್ಯಾನದಲ್ಲಿ ಹಿಡಿದಿದೆ. 'ತಸ್ಯ' ತೆ॥. 3. ತತ್ತ್ವಮಸಿ ಮುಂತಾದ ಅಭೇದ ಶ್ರುತಿಗಳು ಸಾಮಾನಾಧಿಕರಣ್ಯದಿಂದಲೂ ವೈಭವವನ್ನೇ ಹೇಳುತ್ತವೆ ಎಂದು ಅಭಿಪ್ರಾಯ.

(೨) ಶಾಂಕರಮತಸಂಕ್ಷೇಪ

(ಮೂಲ)

೬. ತಸ್ಯ ವೈಭವಪ್ರತಿಪಾದನಪರಾಣಾಮೇಷಾಂ ಸಾಮಾನಾಧಿಕರಣ್ಯಾದೀನಾಂ ವಿವರಣೇ ಪ್ರವೃತ್ತಾಃ ಕೇಚನ— ನಿರ್ವಿಶೇಷಜ್ಞಾನಮಾತ್ರಮೇವ ಬ್ರಹ್ಮ । ತಚ್ಚ ನಿತ್ಯಮುಕ್ತಸ್ವಪ್ರಕಾಶಸ್ವಭಾವಮಪಿ[1] ತತ್ತ್ವಮಸ್ಯಾದಿಸಾಮಾನಾಧಿಕರಣ್ಯಾವಗತ-ಜೀವೈಕ್ಯಮ್ । ಬ್ರಹ್ಮೈವಾಜ್ಞಂ ಬಧ್ಯತೇ ಮುಚ್ಯತೇ ಚ । ನಿರ್ವಿಶೇಷ ಚಿನ್ಮಾತ್ರಾತಿರೇಕೇಶ್ವರೇಶಿತವ್ಯಾ[2]ದ್ಯನನ್ತವಿಕಲ್ಪಸ್ವರೂಪಂ ಕೃತ್ಸ್ನಂ ಜಗನ್ಮಿಥ್ಯಾ ಕಶ್ಚಿದ್ಬದ್ಧಃ ಕಶ್ಚಿನ್ಮುಕ್ತ ಇತೀಯಂ ವ್ಯವಸ್ಥಾ ನ ವಿದ್ಯತೇ । ಇತಃ ಪೂರ್ವಂ ಕೇಚನ ಮುಕ್ತಾ ಇತ್ಯಯಮರ್ಥೋ ಮಿಥ್ಯಾ । ಏಕಮೇವ ಶರೀರಂ ಜೀವವತ್, ನಿರ್ಜೀವಾನೀತರಾಣಿ ಶರೀರಾಣಿ । ತಚ್ಚ ಶರೀರಂ ಕಿಮಿತಿ ನ ವ್ಯವಸ್ಥಿತಮ್ । ಆಚಾರ್ಯೋ ಜ್ಞಾನಸ್ಯೋಪದೇಷ್ಟಾ[3] ಮಿಥ್ಯಾ । ಪ್ರಮಾತಾ ಮಿಥ್ಯಾ, ಶಾಸ್ತ್ರಂ ಚ ಮಿಥ್ಯಾ, ಶಾಸ್ತ್ರಜನ್ಯಜ್ಞಾನಂ ಚ ಮಿಥ್ಯಾ । ಏತತ್ಸರ್ವಂ ಮಿಥ್ಯಾಭೂತೇನೈವ ಶಾಸ್ತ್ರೇಣಾ[4]ಽವಗಮ್ಯತ[5] ಇತಿ ವರ್ಣಯನ್ತಿ ॥

(ಅರ್ಥ)

ಆ (ಅಂತರ್ಯಾಮಿಯ) ವೈಭವವನ್ನು ತಿಳಿಸುವದರಲ್ಲಿಯೇ ತಾತ್ಪರ್ಯ-ವುಳ್ಳ ಈ ಸಾಮಾನಾಧಿಕರಣ್ಯಾದಿಗಳನ್ನು ವಿವರಿಸುವದಕ್ಕೆ ಹೊರಟಿರುವ ಕೆಲವರು : 'ಬ್ರಹ್ಮವು ನಿರ್ವಿಶೇಷಜ್ಞಾನಮಾತ್ರವೇ, ಅದು ನಿತ್ಯಮುಕ್ತವೂ ಸ್ವಪ್ರಕಾಶ ಸ್ವಭಾವುಳ್ಳದ್ದೂ ಆಗಿದ್ದರೂ 'ತತ್ತ್ವಮಸಿ' ಮುಂತಾದ ಸಾಮಾನಾಧಿಕರಣ್ಯಗಳಿಂದ ಜೀವರುಗಳೊಡನೆ ಒಂದಾಗಿದೆ(ಯೆಂದು ನಿಶ್ಚಯವಾಗುತ್ತದೆ). ಬ್ರಹ್ಮವೇ ಅಜ್ಞನಾಗಿ ಬದ್ಧವಾಗುತ್ತಿದೆ ಮುಕ್ತವೂ ಆಗುತ್ತಿದೆ. ನಿರ್ವಿಶೇಷಚಿನ್ಮಾತ್ರ (ಬ್ರಹ್ಮಕ್ಕಿಂತ) ಬೇರೆಯಾದ ಈಶ್ವರ, ಈಶಿತವ್ಯ- ಇವೇ ಮುಂತಾದ ಅನಂತ ವಿಕಲ್ಪಸ್ವರೂಪವುಳ್ಳ ಜಗತ್ತೆಲ್ಲವೂ ಮಿಥ್ಯೆ. ಒಬ್ಬನು ಬದ್ಧನು, ಇನ್ನೊಬ್ಬನು ಮುಕ್ತನು- ಎಂಬೀ ವ್ಯವಸ್ಥೆಯು ಇರುವದಿಲ್ಲ . ಇದಕ್ಕಿಂತಲೂ ಮುಂಚೆ ಕೆಲವರು ಮುಕ್ತರಾಗಿರುತ್ತಾರೆ ಎಂಬೀ ವಿಷಯವು ಮಿಥ್ಯೆ. ಒಂದೇ ಶರೀರವೇ ಜೀವವುಳ್ಳದ್ದು[6], ಉಳಿದವುಗಳು ಜೀವರಹಿತವಾದವುಗಳು ; ಆ (ಜೀವವುಳ್ಳ) ಶರೀರವು ಯಾವದು ಎಂಬುದು

---

1. 'ಸ್ವಭಾವಮ್' ಎಂಬ ಈ ಮಾತು ತೆ॥ ಪಾಠದಲ್ಲಿಲ್ಲ.
2. 'ಈಶೇಶಿತವ್ಯ' ಕಾ॥ ಟೀಕೆಯಲ್ಲಿ ಈಶ್ವರೇಶಿತವ್ಯ ಎಂಬ ಪಾಠವನ್ನೇ ಒಪ್ಪಿದಂತಿದೆ.
3. ಜ್ಞಾನೋಪದೇಷ್ಟಾ ಕಾ॥
4. 'ಮಿಥ್ಯಾಭೂತೇನ ಶಾಸ್ತ್ರೇಣೈವ' ತೆ॥
5. 'ಅವಗತಮ್' ತೆ॥
6. ಇಷ್ಟಸಿದ್ಧಿಯ ಆರನೆಯ ಅಧ್ಯಾಯದಲ್ಲಿ ಬ್ರಹ್ಮವೇ ಅವಿದ್ಯಾಶ್ರಯವೆಂಬ ಪಕ್ಷವನ್ನು ವರ್ಣಿಸಿರುವ ರೀತಿಯನ್ನು ನೋಡಿರಿ.

ಗೊತ್ತಾಗಿಲ್ಲ. ಜ್ಞಾನವನ್ನು ಉಪದೇಶಿಸುವ ಆಚಾರ್ಯನು ಮಿಥ್ಯೆ; ಪ್ರಮಾತೃವೂ ಮಿಥ್ಯಾರೂಪನೇ, ಶಾಸ್ತ್ರವೂ ಮಿಥ್ಯೆಯೇ, ಶಾಸ್ತ್ರಜನ್ಯಜ್ಞಾನವೂ ಮಿಥ್ಯೆಯೇ. ಇದೆಲ್ಲವೂ ಮಿಥ್ಯೆಯಾದ ಶಾಸ್ತ್ರದಿಂದಲೇ ಗೊತ್ತಾಗುತ್ತದೆ'- ಎಂದು ವರ್ಣಿಸುತ್ತಿರುವರು.

(೩) ಭಾಸ್ಕರಮತಸಂಕ್ಷೇಪ

(ಮೂಲ)

೭. ಅಪರೇ ತು[1] - ಅಪಹತಪಾಪ್ಮತ್ವಾದಿಸಮಸ್ತಕಲ್ಯಾಣಗುಣೋ[2]ಪೇತ ಮಪಿ ಬ್ರಹ್ಮ ತೇನೈವೈಕ್ಯಾವಬೋಧೇನ ಕೇನಚಿದುಪಾಧಿವಿಶೇಷೇಣ ಸಂಬದ್ಧಂ ಬದ್ಧತೇ ಮುಚ್ಯತೇ ಚ, ನಾನಾವಿಧಮಲರೂಪಪರಿಣಾಮಾಸ್ಪದಂ ಚ ಇತಿ ವ್ಯವಸ್ಥಿತಾಃ ॥

(ಅರ್ಥ)

ಮತ್ತೆ ಕೆಲವರಾದರೋ - ಬ್ರಹ್ಮವು ಅಪಹತಪಾಪ್ಮತ್ವವೇ ಮುಂತಾದ ಸಮಸ್ತಕಲ್ಯಾಣಗುಣಗಳಿಂದಲೂ ಕೂಡಿದ್ದಾದರೂ[3] ಅದೇ ಐಕ್ಯಜ್ಞಾನ(ನಿಮಿತ್ತ) ದಿಂದಲೇ[4] ಯಾವದೋ ಒಂದು ಉಪಾಧಿಯಿಂದೊಡಗೂಡಿ[5] ಬದ್ಧವಾಗುತ್ತಲೂ ಮುಕ್ತವಾಗುತ್ತಲೂ ಇರುತ್ತದೆ. ಬಗೆಬಗೆಯ ಮಲರೂಪವಾದ ಪರಿಣಾಮಕ್ಕೂ[6] (ಅದು) ಆಶ್ರಯವಾಗಿರುತ್ತದೆ(ಎನ್ನಬೇಕು)- ಎಂದು ನಿಶ್ಚಯಿಸಿರುತ್ತಾರೆ.

---

1. ಕಾ॥ ಪಾಠದಲ್ಲಿ ಈ ಪದವಿಲ್ಲ.
2. ಕಾ॥ ಪಾಠದಲ್ಲಿಲ್ಲದಿದ್ದರೂ ಟೀಕೆಯಲ್ಲಿ ಈ ಮಾತನ್ನು ಇಟ್ಟುಕೊಂಡಿದೆಯೆಂದು ತೋರುತ್ತದೆ.
3. ಅಪಹತಪಾಪ್ಮತ್ವವೇ ಮುಂತಾದ ಗುಣಗಳು ಪರಮಾತ್ಮನಲ್ಲಿರುತ್ತವೆ (ಭಾ.ಸೂ.ಭಾ. ಪು.೨೩೮); ಆನಂದರೂಪತ್ವ, ವಿಜ್ಞಾನಘನತ್ವ, ಸರ್ವಜ್ಞತ್ವ, ಸರ್ವಾತ್ಮಕತ್ವ - ಮುಂತಾದ ಗುಣಗಳೂ ಇವೆ (ಭಾ.ಭಾ.ಪು.೧೭೯) - ಎಂಬುದು **ಭಾಸ್ಕರಮತ.** ಭಾಸ್ಕರಾಚಾರ್ಯರು ನಿರ್ಗುಣವಸ್ತುವನ್ನೇ ಒಪ್ಪುವದಿಲ್ಲ.
4. 'ತತ್ತ್ವಮಸಿ' ಮುಂತಾದ ಐಕ್ಯೋಪದೇಶವು ಹೊಂದುವದಕ್ಕಾಗಿ ಎಂದರ್ಥ. ಶ್ರುತಾರ್ಥಾಪತ್ತಿಪ್ರಮಾಣದಿಂದ ಜೀವೇಶ್ವರಭೇದವನ್ನು ಕಲ್ಪಿಸಬೇಕೆಂದು ಅವರ ಭಾವ.
5. 'ತತ್ತ್ವಮಸಿ' ಎಂಬ ಶ್ರುತಿಪ್ರಮಾಣದಿಂದ ಜೀವನಿಗೆ ಬ್ರಹ್ಮಾಭಿನ್ನರೂಪವು ನಿತ್ಯಸಿದ್ಧವು, ಜೀವರೂಪವು ಔಪಾಧಿಕವಾಗಿ ಪ್ರವಾಹನಿತ್ಯ (ಭಾ.ಸೂ.ಭಾ.ಪು.೧೬೨), ಉಪಾಧಿಕೃತ ವಾದ ಭೇದವು ಅಭೇದಭಾವನೆಯಿಂದ ತೊಲಗುತ್ತದೆ (ಭಾ.ಸೂ.ಭಾ.ಪು.೨೨೧) ಎಂಬುದು **ಭಾಸ್ಕರಮತ**
6. ಭೋಕ್ತೃಭೋಗ್ಯನಿಯಂತೃರೂಪವಾದ ಪ್ರಪಂಚವು ಬ್ರಹ್ಮವೇ (ಭಾ.ಸೂ.ಭಾ.೧೬೬); ಬ್ರಹ್ಮವು ತನ್ನನ್ನೇ ಕಾರ್ಯರೂಪವಾಗಿ ಪರಿಣಮಿಸಿಕೊಳ್ಳುತ್ತದೆ (ಭಾ.ಸೂ.ಭಾ.೮೫) ಎಂಬುದು **ಭಾಸ್ಕರಮತ.**

(೪) ಯಾದವಪ್ರಕಾಶಮತಸಂಕ್ಷೇಪ

(ಮೂಲ)

೮. ಅನ್ಯೇ ಪುನರೈಕ್ಯಾವಬೋಧಯಾಥಾತ್ಮ್ಯಂ ವರ್ಣಯನ್ತಃ ಸ್ವಾಭಾವಿಕ ನಿರತಿಶಯಾ[1] ಪರಿಮಿತೋದಾರಗುಣಸಾಗರಂ ಬ್ರಹ್ಮೈವ ಸುರನರತಿರ್ಯಕ್ಸ್ಥಾವರ ನಾರಕಿಸ್ವರ್ಗಿಪವರ್ಗಿಚೇತನೈಕಸ್ವಭಾವಂ ಸ್ವಭಾವತೋ ವಿಲಕ್ಷಣಮವಿಲಕ್ಷಣಂ ಚ ವಿಯದಾದಿನಾನಾವಿಧ[2] ಪರಿಣಾಮಾಸ್ಪದಂ ಚೇತಿ ಪ್ರತ್ಯವತಿಷ್ಠನ್ತೇ ॥

(ಅರ್ಥ)

ಇನ್ನು ಕೆಲವರಾದರೋ ಐಕ್ಯಜ್ಞಾನದ ಯಾಥಾತ್ಮ್ಯವನ್ನು ವರ್ಣಿಸುವವರಾಗಿ 'ಸ್ವಾಭಾವಿಕವೂ ನಿರತಿಶಯವೂ ಅಪರಿಮಿತವೂ ಆದ ಉದಾರಗುಣಗಳ ಸಾಗರವಾಗಿರುವ ಬ್ರಹ್ಮವೇ ದೇವತೆಗಳು, ಮನುಷ್ಯರು, ತಿರ್ಯಗ್ಜಂತುಗಳು, ಸ್ಥಾವರ (ಪ್ರಾಣಿಗಳು), ನಾರಕಿಗಳು, ಸ್ವರ್ಗಿಗಳು, ಅಪವರ್ಗಿಗಳು- ಎಂಬ ಚೇತನಗಳ ಸ್ವಭಾವವೇ ಉಳ್ಳದ್ದು ; (ತನ್ನ) ಸ್ವಭಾವದಿಂದ ವಿಲಕ್ಷಣವೂ ಅವಿಲಕ್ಷಣವೂ ಆಗಿರುವಂಥದ್ದು ; ಆಕಾಶವೇ ಮುಂತಾದ ನಾನಾವಿಧವಾದ ಪರಿಣಾಮಗಳಿಗೂ ಆಶ್ರಯವಾಗಿರುವಂಥದ್ದು'- ಎಂದು ಎದುರುನಿಲ್ಲುತ್ತಿದಾರೆ.

---

1. ಈ ಮಾತು ತೆ॥ ಪಾಠದಲ್ಲಿಲ್ಲ.
2. ಇದಾದಮೇಲೆ 'ಮಲರೂಪ' ಎಂಬ ಮಾತು ಕಾ॥ ಪಾಠದಲ್ಲಿ ಹೆಚ್ಚಾಗಿದೆ.

೨. ಶಾಂಕರಮತನಿರಾಕರಣ

ಈ ಮತವು ಶ್ರುತಿವಿರುದ್ಧ

೧. ಸಗುಣವಾಕ್ಯವಿರುದ್ಧ

(ಮೂಲ)

೯. ತತ್ರ ಪ್ರಥಮಪಕ್ಷೇ[1] ಶ್ರುತ್ಯರ್ಥಪರ್ಯಾಲೋಚನಪರಾ ದುಷ್ಪರಿಹರಾನ್ ದೋಷಾನ್ ಉದಾಹರನ್ತಿ । ತಥಾ ಹಿ । ಪ್ರಕೃತಪರಾಮರ್ಶಿತಚ್ಛಬ್ದಾವಗತಸ್ಯ ಬ್ರಹ್ಮಣಃ ಸ್ವಸಂಕಲ್ಪಕೃತಜಗದುದಯವಿಭವವಿಲಯಾದಯಃ 'ತದೈಕ್ಷತ ಬಹು ಸ್ಯಾಮ್ ಪ್ರಜಾಯೇಯ' (ಛಾಂ.೬-೨-೩) ಇತ್ಯಾರಭ್ಯ 'ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ '(ಛಾಂ.೬-೮-೪) ಇತ್ಯಾದಿಭಿಃ ಪದೈಃ ಪ್ರತಿಪಾದಿತಾಃ । ತತ್ಸಂಬನ್ಧಿ ತಯಾ ಪ್ರಕರಣಾನ್ತರನಿರ್ದಿಷ್ಟಾಃ ಸರ್ವಜ್ಞತಾಸರ್ವಶಕ್ತಿತ್ವಸರ್ವೇಶ್ವರತ್ವಸರ್ವಪ್ರಕಾರತ್ವಸಮಾಭ್ಯಧಿಕನಿವೃತ್ತಿಸತ್ಯಕಾಮತ್ವಸತ್ಯಸಂಕಲ್ಪತ್ವಸರ್ವಾವಭಾಸಕತ್ವಾದ್ಯನವಧಿಕಾತಿಶಯಾಸಂಖ್ಯೇಯಕಲ್ಯಾಣಗುಣಗಣಾ 'ಅಪಹತಪಾಪ್ಮಾ' (ಛಾಂ.೮-೭-೧) ಇತ್ಯಾದ್ಯನೇಕವಾಕ್ಯಾವಗತನಿರಸ್ತನಿಖಿಲದೋಷತಾ ಚ ಸರ್ವೇ ತಸ್ಮಿನ್ ಪಕ್ಷೇ ವಿಹನ್ಯನ್ತೇ ॥

(ಅರ್ಥ)

ಇವುಗಳಲ್ಲಿ ಮೊದಲನೆಯ ಪಕ್ಷದಲ್ಲಿ ಶ್ರುತ್ಯರ್ಥವನ್ನು ಪರ್ಯಾಲೋಚನೆ ಮಾಡುವದರಲ್ಲಿ ತಾತ್ಪರ್ಯವುಳ್ಳವರು ಪರಿಹರಿಸುವದಕ್ಕೆ ಆಗದಿರುವ ದೋಷಗಳನ್ನು ಹೇಳುತ್ತಾರೆ. ಹೇಗೆಂದರೆ, ಪ್ರಕೃತ(ವಸ್ತು)ವನ್ನು ಪರಾಮರ್ಶಿಸುವ ತಚ್ಛಬ್ದದಿಂದ[2] ಗೊತ್ತಾಗುವ ಬ್ರಹ್ಮಕ್ಕೆ ತನ್ನ ಸಂಕಲ್ಪದಿಂದಾದ ಜಗತ್ತಿನ ಸೃಷ್ಟಿ, ವಿಭವ, ಪ್ರಲಯ - ಮುಂತಾದವುಗಳು[3] 'ಅದು ನಾನು ಬಹುವಾಗುವೆನು, ಹುಟ್ಟುವೆನು- ಎಂದು ಯೋಚಿಸಿಕೊಂಡಿತು' (ಛಾಂ.೬-೨-೩) ಎಂಬುದರಿಂದ ಹಿಡಿದು 'ಸೋಮ್ಯನೆ, ಈ ಪ್ರಜೆಗಳೆಲ್ಲ ಸನ್ಮೂಲಗಳು, ಸತ್ತನ್ನೇ ಆಯತನವಾಗಿ ಉಳ್ಳವುಗಳು, ಸತ್ತಿನಲ್ಲಿಯೇ ಲಯವಾಗತಕ್ಕವುಗಳು' (ಛಾಂ.೬-೮-೪) ಎಂಬಿವೇ ಮುಂತಾದ

---

1. 'ಪಕ್ಷಸ್ಥ' ಎಂಬ ಕಾ॥ ಪಾಠಕ್ಕಿಂತ ಇದೇ ಮೇಲು.
2. ತಚ್ಛಬ್ದವು ಸಗುಣವಸ್ತುವನ್ನೇ ಹೇಳುತ್ತದೆ ; ಏಕೆಂದರೆ ಅದು ಪ್ರಕೃತಗುಣಗಳನ್ನು ಪರಾಮರ್ಶಿಸುತ್ತದೆ ಎಂದು ಭಾವ.
3. ಅನುಪ್ರವೇಶ, ನಾಮರೂಪವ್ಯಾಕರಣ - ಮುಂತಾದವುಗಳು.

ಪದಗಳಿಂದ ಪ್ರತಿಪಾದಿತವಾಗಿರುತ್ತವೆ. ಆ (ಬ್ರಹ್ಮಕ್ಕೆ) ಸಂಬಂಧಪಟ್ಟವುಗಳೆಂದು ಬೇರೆಯ ಪ್ರಕರಣಗಳಲ್ಲಿ[1] ತಿಳಿಸಿರುವ ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವೇಶ್ವರತ್ವ, ಸರ್ವಪ್ರಕಾರತ್ವ, ಸಮಾಭ್ಯಧಿಕನಿವೃತ್ತಿ, ಸತ್ಯಕಾಮತ್ವ, ಸತ್ಯಸಂಕಲ್ಪತ್ವ, ಸರ್ವಾವಭಾಸಕತ್ವ[2]- ಇವೇ ಮುಂತಾದ ಅನವಧಿಕಾತಿಶಯವಾಗಿರುವ[3] ಲೆಕ್ಕವಿಲ್ಲದಷ್ಟು ಕಲ್ಯಾಣಗುಣಗಣಗಳೂ 'ಅಪಹತಪಾಪ್ಮನು' (ಛಾಂ.೮-೭-೧) ಮುಂತಾದ ಅನೇಕವಾಕ್ಯಗಳಿಂದ ಗೊತ್ತಾಗಿರುವ ಯಾವದೋಷಗಳೂ ಇಲ್ಲದಿರುವಿಕೆಯೂ[4] ಎಲ್ಲವೂ ಆ ಪಕ್ಷದಲ್ಲಿ ವಿಹತವಾಗುವವು.[5]

ಶಾಂಕರಮತದವರ ಆಶಯದ ಅನುವಾದ

(ಮೂಲ)

೧೦. ಅಥ ಸ್ಯಾತ್ । ಉಪಕ್ರಮೇಽಪಿ ಏಕವಿಜ್ಞಾನೇನ ಸರ್ವವಿಜ್ಞಾನ ಮುಖೇನ ಕಾರಣಸ್ಯೈವ ಸತ್ಯತಾಂಪ್ರತಿಜ್ಞಾಯ, ತಸ್ಯ ಕಾರಣಭೂತಸ್ಯೈವ ಸತ್ಯತಾಂ ವಿಕಾರಜಾತಸ್ಯ ಚ ಅಸತ್ಯತಾಂ ಮೃದ್ದೃಷ್ಟಾನ್ತೇನ ದರ್ಶಯಿತ್ವಾ ಸತ್ಯಭೂತಸ್ಯೈವ ಬ್ರಹ್ಮಣಃ 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ.೬-೨-೧) ಇತಿ ಸಜಾತೀಯವಿಜಾತೀಯನಿಖಿಲಭೇದನಿರಸನೇನ ನಿರ್ವಿಶೇಷತೈವ ಪ್ರತಿಪಾದಿತಾ । ಏತಚ್ಚೋಧಕಾನಿ ಪ್ರಕರಣಾನ್ತರ (ಗತ)[6]ವಾಕ್ಯಾನ್ಯಪಿ 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ.೨-೧), 'ನಿಷ್ಕಲಮ್ ನಿಷ್ಕ್ರಿಯಮ್'

---

1. ಸರ್ವಶಾಖಾಪ್ರತ್ಯಯನ್ಯಾಯದಿಂದ ಈ ಪ್ರಕರಣದ ಸಂದರ್ಭಕ್ಕೆ ಹೊಂದುವ ಗುಣಗಳನ್ನು ಬೇರೆಯ ಪ್ರಕರಣಗಳಿಂದಲೂ ಸೇರಿಸಿಕೊಳ್ಳಬಹುದೆಂದು ಭಾವ.
2. 'ಯಸ್ಸರ್ವಜ್ಞಃ ಸರ್ವವಿತ್' (ಮುಂ.೨-೨-೬), 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ' (ಶ್ವೇ. ೬-೬), 'ಸ ಈಶೋಽಸ್ಯ ಜಗತೋ ನಿತ್ಯಮೇವ ನಾನ್ಯೋ ಹೇತುರ್ವಿದ್ಯತ ಈಶನಾಯ' (ಶ್ವೇ. ೬-೧೭), 'ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ' (ಶ್ವೇ. ೬-೮), 'ಸತ್ಯಕಾಮಃ ಸತ್ಯಸಂಕಲ್ಪಃ' (ಛಾಂ. ೮-೭-೧), 'ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಕಾ. ೧-೨-೧೫) - ಇಂಥ ವಾಕ್ಯಗಳಿಂದ ಸರ್ವಜ್ಞತ್ವಾದಿಗುಣಗಳು ಉಕ್ತವಾಗಿವೆ.
3. ಒಂದೊಂದು ಗುಣವೂ ಅನವಧಿಕಾತಿಶಯ ಆಗಿದೆ.
4. ಹೇಯಪ್ರತ್ಯನೀಕತ್ವವೂ ಶ್ರುತ್ಯುಕ್ತವಾಗಿದೆ.
5. ಇಲ್ಲಿ ಹೇಳಿರುವ ಗುಣಗಳು ಸೃಷ್ಟಿಗೆ ಬೇಕಾಗಿರುತ್ತವೆ ; ಸಮನೂ ಇಲ್ಲ, ಹೆಚ್ಚಿನವನೂ ಇಲ್ಲ- ಎಂದಾದರೆ ಅವನೇ ಕಾರಣನೆಂದು ಸಿದ್ಧಿಸುತ್ತದೆ ; ಸರ್ವಾವಭಾಸಕತ್ವವು ಜಗತ್ತಿನ ಸ್ಥಿತಿಗೆ ಬೇಕು ; ಹೇಯಪ್ರತ್ಯನೀಕತ್ವವಿಲ್ಲದಿದ್ದರೆ ಈಶ್ವರನು ಕರ್ಮವಶ್ಯನೆಂದಾಗಿ ಅವನಿಗೆ ಸ್ವಾತಂತ್ರ್ಯವಿಲ್ಲದೆ ಹೋಗುವದು.
6. ಈ ಮಾತು ತೆ॥ ಪಾಠದಲ್ಲಿಲ್ಲ.

(ಶ್ವೇ.೬-೧೯), 'ನಿರ್ಗುಣಮ್' (ಶ್ವೇ.೬-೧೧, ಮಂ.೧)[1], 'ನಿರಞ್ಜನಮ್'[2] (ಶ್ವೇ.೬-೧೯), 'ವಿಜ್ಞಾನಮಾನನ್ದಮ್' (ಬೃ.೩-೯-೨೮-೭) ಇತ್ಯಾದೀನಿ ಸರ್ವವಿಶೇಷಪ್ರತ್ಯನೀಕಾಕಾರತಾಂ[3] ಬೋಧಯನ್ತಿ । ನ ಚ ಏಕಾಕಾರತಾವಬೋಧೇ[4] ಪದಾನಾಂ ಪರ್ಯಾಯತಾ । ಏಕತ್ವೇಽಪಿ ವಸ್ತುನಃ ಸರ್ವವಿಶೇಷಪ್ರತ್ಯನೀಕಾ-ಕಾರತ್ವೋಪಸ್ಥಾಪನೇನ ಸರ್ವಪದಾನಾಮ್ ಅರ್ಥವತ್ತ್ವಾದಿತಿ ॥

(ಅರ್ಥ)

ಇನ್ನು (ಪೂರ್ವಪಕ್ಷಿಯ ಅಭಿಪ್ರಾಯವು) ಹೀಗಿರಬಹುದು : ಉಪಕ್ರಮದಲ್ಲಿಯೂ ಒಂದೆರ ವಿಜ್ಞಾನದಿಂದ ಸರ್ವವನ್ನೂ ಅರಿತಂತೆ ಆಗುವದೆಂದು (ತಿಳಿಸುವ) ಮೂಲಕ ಕಾರಣವೇ ಸತ್ಯವೆಂದು ಪ್ರತಿಜ್ಞೆ ಮಾಡಿ, ಆ ಕಾರಣವಾಗಿರುವ (ಬ್ರಹ್ಮ)ವೇ ಸತ್ಯವೆಂಬುದನ್ನೂ ಕಾರ್ಯಜಾತವು ಅಸತ್ಯವೆಂಬುದನ್ನೂ ಮಣ್ಣಿನ ದೃಷ್ಟಾಂತದಿಂದ ತಿಳಿಸಿಕೊಟ್ಟು, ಸತ್ಯವಾಗಿರುವ ಬ್ರಹ್ಮಕ್ಕೇ 'ಸೋಮ್ಯನೆ, ಇದು ಮೊದಲು ತನಗೆರಡನೆಯದಿಲ್ಲದ ಒಂದೇ ಆಗಿತ್ತು' (ಛಾಂ.೬-೨-೧) ಎಂದು ಸಜಾತೀಯ ವಿಜಾತೀಯ ಎಂಬ ಎಲ್ಲಾ ಭೇದಗಳನ್ನೂ ತಿರಸ್ಕರಿಸಿ ನಿರ್ವಿಶೇಷತ್ವವನ್ನೇ ಪ್ರತಿಪಾದಿಸಲಾಗಿದೆ. **ಇದನ್ನು ಶೋಧಿಸುವ ಪ್ರಕರಣಾಂತರಗಳಲ್ಲಿರುವ** 'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' (ತೈ. ೨-೧), 'ನಿಷ್ಕಲವೂ ನಿಷ್ಕ್ರಿಯವೂ' (ಶ್ವೇ.೬-೧೯), 'ನಿರ್ಗುಣವು' (ಮಂ.೧), 'ನಿರಞ್ಜನವು' (ಶ್ವೇ.೬-೧೯), 'ವಿಜ್ಞಾನವೂ ಆನಂದವೂ' (ಬೃ.೩-೯-೨೮-೭)- ಇವೇ ಮುಂತಾದ ವಾಕ್ಯಗಳು (ಬ್ರಹ್ಮವು) ಎಲ್ಲಾ ವಿಶೇಷಗಳಿಗೂ ವಿರುದ್ಧವಾಗಿರುವ ಆಕಾರವುಳ್ಳದ್ದೆಂದು ತಿಳಿಸುತ್ತಿವೆ.[5] ಏಕಾಕಾರವಾಗಿಯೇ ಇರುವದೆಂಬುದನ್ನು ತಿಳಿಸುವದಾದರೆ ಪದಗಳು **ಪರ್ಯಾಯವಾಗುವದೆಂಬುದೂ**[6] ಸಲ್ಲದು. ಏಕೆಂದರೆ ವಸ್ತುವು ಒಂದೇ ಆಗಿದ್ದರೂ

---

1. ಶ್ವೇತಾಶ್ವತರದಲ್ಲಿರುವ 'ನಿರ್ಗುಣಶ್ಚ' ಎಂಬ ವಾಕ್ಯವೇ ಇದೂ, ಬೇರೆಯೊ, ತಿಳಿಯದು. ಶ್ರೀ.ಭಾ...ದ ಮುದ್ರಿತಪುಸ್ತಕದಲ್ಲಿ ಇದನ್ನು **ಮನ್ತ್ರಿಕೋಪನಿಷತ್ತಿನ** ವಾಕ್ಯವೆಂದು ಟಿಪ್ಪಣಿಯಲ್ಲಿ ಗಣಿಸಿದೆ ; ನಿ.ಸಾ. ಮುದ್ರಣಾಲಯದಲ್ಲಿ ಅಚ್ಚಾಗಿರುವ ಆ ಉಪನಿಷತ್ತಿನಲ್ಲಿ 'ನಿರ್ಗುಣಂ ಗಹ್ವರೇ' (೧) ಎಂದಿದೆ.
2. 'ನಿರಞ್ಜನಮ್' ಎಂಬುದು ಕಾ॥ ಪಾಠದಲ್ಲಿ ಮಾತ್ರ ಇದೆ.
3. 'ಪ್ರತ್ಯನೀಕೈಕಾಕಾರತಾಮ್' ತೆ॥.
4. ಬೋಧೇಽಪಿ ತೆ॥.
5. ಬ್ರಹ್ಮಸ್ವರೂಪವನ್ನು ನಿಶ್ಚಯಿಸುವ ಈ ವಾಕ್ಯಗಳೆಲ್ಲ ವಿಶೇಷನಿರಾಕರಣೆಯನ್ನು ಮಾಡುವದಕ್ಕೇ ಬಂದಿವೆ ಎಂದು ಪೂರ್ವಪಕ್ಷಿಯ ಭಾವ
6. ಬ್ರಹ್ಮವು ಒಂದೇ ಸ್ವರೂಪದಲ್ಲಿದೆ ಎಂಬುದನ್ನು ಅನೇಕ ಶಬ್ದಗಳು ತಿಳಿಸಿದರೆ 'ಹಸ್ತಃ ಕರಃ', 'ಘಟಃ ಕಲಶಃ' ಎಂಬಂತೆ ಪರ್ಯಾಯವೆಂದಾಗುವದಿಲ್ಲವೆ ? - ಎಂಬ ಶಂಕೆಯೂ ಸರಿಯಲ್ಲ.

ಎಲ್ಲಾ ವಿಶೇಷಗಳಿಗೂ ವಿರುದ್ಧವಾದ ಆಕಾರವುಳ್ಳದ್ದೆಂಬುದನ್ನು ನೆನಪು ಕೊಡುವದರಿಂದ[1] ಎಲ್ಲಾ ಪದಗಳಿಗೂ ಸಪ್ರಯೋಜನತ್ವವಿದೆ.

೨. ಸರ್ವವಿಜ್ಞಾನೋಪಕ್ರಮವು ಸಗುಣಪರ

(ಮೂಲ)

೧೧. ನೈತದೇವಮ್ । ಏಕವಿಜ್ಞಾನೇನ ಸರ್ವವಿಜ್ಞಾ(ನಪ್ರತಿಜ್ಞಾ)ನಂ[2] ಸರ್ವಸ್ಯ ಮಿಥ್ಯಾತ್ವೇ ಸರ್ವಸ್ಯ ಜ್ಞಾತವ್ಯಸ್ಯಾಭಾವಾತ್ ನ ಸೇತ್ಸ್ಯತಿ । ಸತ್ಯ ಮಿಥ್ಯಾತ್ವಯೋರೇಕತಾಪ್ರಸಕ್ತೇರ್ವಾ। ಅಪಿ ತು ಏಕವಿಜ್ಞಾನೇನ ಸರ್ವವಿಜ್ಞಾನ ಪ್ರತಿಜ್ಞಾ ಸರ್ವಸ್ಯ ತದಾತ್ಮಕತ್ವೇನೈವ ಸತ್ಯತ್ವೇ ಸಿಧ್ಯತಿ ॥

(ಅರ್ಥ)

ಇದು ಹೀಗಲ್ಲ. ಒಂದನ್ನರಿತರೆ ಸರ್ವವನ್ನೂ ಅರಿತುಕೊಳ್ಳಬಹುದಾಗುವದೆಂಬ ಪ್ರತಿಜ್ಞೆಯು— ಎಲ್ಲವೂ ಮಿಥ್ಯೆಯೇ ಆಗಿರುವಲ್ಲಿ ಅರಿತುಕೊಳ್ಳಬೇಕಾದ ಸರ್ವವೇ ಇಲ್ಲದ್ದರಿಂದ- ಸಿದ್ಧಿಸಲಾರದು. ಅಥವಾ ಸತ್ಯ, ಮಿಥ್ಯೆ - ಎರಡೂ ಒಂದೇ ಎಂದಾಗುವದು. ಒಂದರ ಅರಿವಿನಿಂದ ಸರ್ವವನ್ನೂ ಅರಿತಂತಾಗುವದೆಂಬ ಪ್ರತಿಜ್ಞೆಯು ಮತ್ತೆ ಹೇಗೆ (ಸಿದ್ಧಿಸುವದೆಂದರೆ) ಸರ್ವವೂ ಆ (ಬ್ರಹ್ಮಾ)ತ್ಮಕವಾಗಿರುವದರಿಂದಲೇ ಸತ್ಯವೆಂದರೆ ಸಿದ್ಧಿಸುತ್ತದೆ.

೩. ಆದೇಶಪ್ರಶ್ನೆ ಸಗುಣವಿಷಯಕ್ಕೇ ಹೊಂದುತ್ತದೆ

(ಮೂಲ)

೧೨. ಅಯಮರ್ಥಃ । ಶ್ವೇತಕೇತುಂ ಪ್ರತ್ಯಾಹ 'ಸ್ತಬ್ಧೋಽಸ್ಯುತ ತಮಾದೇಶಮಪ್ರಾಕ್ಷ್ಯಃ' (ಛಾಂ.೬-೧-೩) ಇತಿ । ಪರಿಪೂರ್ಣ ಇವ ಲಕ್ಷ್ಯಸೇ । ತಾನಾಚಾರ್ಯಾನ್ ಪ್ರತಿ ತಮಪ್ಯಾದೇಶಂ ಪೃಷ್ಟವಾನಸಿ? ಇತಿ । ಆದಿಶ್ಯತೇ ಅನೇನೇತ್ಯಾದೇಶಃ । ಪ್ರಶಾಸನಮ್ । 'ಏತಸ್ಯ ವಾಽಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚನ್ದ್ರಮಸೌ ವಿಧೃತೌ ತಿಷ್ಠತಃ' (ಬೃ.೩-೮-೯) ಇತ್ಯಾದಿಭಿ ರೈಕಾರ್ಥ್ಯಾತ್ । ತಥಾ ಚ ಮಾನವಂ ವಚಃ 'ಪ್ರಶಾಸಿತಾರಂ ಸರ್ವೇಷಾಮ್' (ಮನು.೧೨-೧೨೨) ಇತ್ಯಾದಿ । ಅತ್ರಾಪಿ 'ಏಕಮೇವ' (ಛಾಂ. ೬-೨-೧) ಇತಿ ಜಗದುಪಾದಾನತಾಂ ಪ್ರತಿಪಾದ್ಯ ಅದ್ವಿತೀಯಪದೇನ ಅಧಿಷ್ಠಾತೃನ್ತರನಿವಾರಣಾತ್ ಅಸ್ಯೈವಾಧಿಷ್ಠಾತೃತ್ವಮಪಿ ಪ್ರತಿಪಾದ್ಯತೇ । ಅತಸ್ತಂ ಪ್ರಶಾಸಿತಾರಂ

1. ಒಂದೊಂದು ಶಬ್ದವೂ ಒಂದೊಂದು ವಿಶೇಷನಿರಾಕರಣೆಯನ್ನು ಮಾಡುತ್ತದೆಯಾದ್ದರಿಂದ ಅದಕ್ಕೆ ಸಾರ್ಥಕ್ಯವಿದೆ. 2. ಪ್ರತಿಜ್ಞಾ ಎಂಬುದು ಕಾ॥ ಪಾಠದಲ್ಲಿಲ್ಲ.

ಜಗದುಪಾದಾನಭೂತಮಪಿ ಪೃಷ್ಟವಾನಸಿ ಯೇನ ಶ್ರುತೇನ ಮತೇನ ವಿಜ್ಞಾತೇನ ಅಶ್ರುತಮಮತಮವಿಜ್ಞಾತಂ ಶ್ರುತಂ ಮತಂ ವಿಜ್ಞಾತಂ ಭವತಿ? ಇತ್ಯುಕ್ತಂ ಸ್ಯಾತ್ । ನಿಖಿಲಜಗದುದಯವಿಭವವಿಲಯಾದಿಕಾರಣಭೂತಂ ಸರ್ವಜ್ಞತ್ವಸತ್ಯಕಾಮತ್ವ ಸತ್ಯಸಙ್ಕಲ್ಪತ್ವಾದ್ಯಪರಿಮಿತೋದಾರಗುಣಸಾಗರಂ ಕಿಂ ಬ್ರಹ್ಮಾಪಿ[1] ತ್ವಯಾ ಶ್ರುತಮ್? ಇತಿ ಹಾರ್ದೋ ಭಾವಃ । ತಸ್ಯ ನಿಖಿಲಕಾರಣತಯಾ ಕಾರಣಮೇವ ನಾನಾಸಂಸ್ಥಾನವಿಶೇಷಸಂಸ್ಥಿತಂ ಕಾರ್ಯಮಿತ್ಯುಚ್ಯತ ಇತಿ ಕಾರಣಭೂತ ಸೂಕ್ಷ್ಮಚಿದಚಿದ್ವಸ್ತುಶರೀರಕಬ್ರಹ್ಮವಿಜ್ಞಾನೇನ ಕಾರ್ಯಭೂತಮಖಿಲಂ ಜಗತ್ ವಿಜ್ಞಾತಂ ಭವತೀತಿ ಹೃದಿ ನಿಧಾಯ 'ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಂ ಸ್ಯಾತ್' ಇತಿ ಪುತ್ರಂ ಪ್ರತಿ ಪೃಷ್ಟವಾನ್ ಪಿತಾ ॥

(ಅರ್ಥ)

(ಈ ವಾಕ್ಯಕ್ಕೆ) ಇದು ಅರ್ಥವು : ಶ್ವೇತಕೇತುವನ್ನು ಕುರಿತು (ತಂದೆ) ಹೇಳುತ್ತಾನೆ: 'ಸ್ತಬ್ಧನಾಗಿರುವೆ. ಆ ಆದೇಶವನ್ನು ಕೇಳಿರುವೆಯೊ?' (ಛಾಂ.೬-೧-೩) ಪರಿಪೂರ್ಣನಾಗಿರುವಂತೆ ಕಾಣುತ್ತಿರುವೆ; ಆ ಆಚಾರ್ಯರನ್ನು ಕುರಿತು ಆ ಆದೇಶವನ್ನು ಕೂಡ ಕೇಳಿರುವೆಯೊ? ಎಂದರ್ಥ. ಇದರಿಂದ ಆದೇಶಮಾಡಲ್ಪಡುತ್ತದೆಯಾದ್ದರಿಂದ (ಇದಕ್ಕೆ) **ಆದೇಶ**ವೆಂದು ಹೆಸರು ; (ಆದೇಶವೆಂದರೆ) ಪ್ರಶಾಸನವು. ಏಕೆಂದರೆ (ಇದು) 'ಗಾರ್ಗಿಯೆ, ಈ ಅಕ್ಷರದ ಪ್ರಶಾಸನದಲ್ಲಿ ಸೂರ್ಯಚಂದ್ರರುಗಳು ಎತ್ತಿಹಿಡಿಯಲ್ಪಟ್ಟವರಾಗಿ ನಿಂತಿರುತ್ತಾರೆ' (ಬೃ.೩-೮-೯) ಮುಂತಾದ (ಶ್ರುತಿಗಳೊಡನೆ) ಸಮಾನಾರ್ಥಕವಾಗಿರುತ್ತದೆ. ಆದ್ದರಿಂದಲೇ 'ಎಲ್ಲರಿಗೂ ಪ್ರಶಾಸಿತೃವಾಗಿರುವ'(ಮನು. ೧೨-೧೨೨)[2] ಎಂದು ಮುಂತಾಗಿ ಮನುವಚನ(ವಿರುತ್ತದೆ). ಇಲ್ಲಿಯೂ 'ಒಂದೇ' (ಛಾಂ.೬-೨-೧) ಎಂದು (ಬ್ರಹ್ಮವು) ಜಗತ್ತಿಗೆ ಉಪಾದಾನವೆಂದು ತಿಳಿಸಿ ತನಗೆರಡನೆಯದಿಲ್ಲದ ಎಂಬ ಪದದಿಂದ ಮತ್ತೊಂದು ಅಧಿಷ್ಠಾತೃವನ್ನು ಅಲ್ಲಗಳೆದಿರುವದರಿಂದ ಈ (ಬ್ರಹ್ಮವೇ) ಅಧಿಷ್ಠಾತೃವೂ ಆಗಿರುವದೆಂದು ತಿಳಿಸಿಕೊಟ್ಟಿದೆ.[3] ಆದ್ದರಿಂದ[4] ಜಗತ್ತಿಗೆ ಉಪಾದಾನವಾಗಿರುವ ಆ ಪ್ರಶಾಸಿತೃವನ್ನು ಕೇಳಿರುವೆಯೇನು? ಶ್ರವಣಮಾಡಿ ಮನನಮಾಡಿ ಅರಿತುಕೊಂಡರೆ ಅಶ್ರುತವಾದದ್ದು ಶ್ರುತವಾಗುತ್ತದೆ, ಅಮತವಾದದ್ದು ಮತವಾಗುತ್ತದೆ, ಅವಿಜ್ಞಾತವಾದದ್ದು ವಿಜ್ಞಾತವಾಗುತ್ತದೆಯಲ್ಲ,

1. ಕಾ॥ ಪಾಠದಲ್ಲಿ 'ಅಪಿ' ಇಲ್ಲ.
2. 'ಪ್ರಶಾಸಿತಾರಂ ಸರ್ವೇಷಾಮಣೀಯಾಂಸಮಣೋರಪಿ । ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ತಂ ಪುರುಷಂ ಪರಮ್ ॥' ಎಂದು ಪೂರ್ಣವಾಕ್ಯ
3. ಆದ್ದರಿಂದ ಇಲ್ಲಿಯೂ ಪ್ರಶಾಸಿತೃತ್ವವನ್ನುಹೇಳಿದಂತೆಯೇ ಆಗಿದೆ ಎಂದು ಅಭಿಪ್ರಾಯ.
4. 'ಆ ಆದೇಶವನ್ನು' ಎಂಬಲ್ಲಿ ಆ ಎಂಬುದರ ಅರ್ಥವನ್ನು ಈಗ ವಿವರಿಸಲಾಗುವದು.

(ಅವನನ್ನು ಕೇಳಿರುವೆಯೇನು?) ಎಂದು ಕೇಳಿದಂತೆ ಆಗಿರುವದು. ಇಡಿಯ ಜಗತ್ತಿನ ಹುಟ್ಟು, ತೋರಿಕೊಳ್ಳುವಿಕೆ, ನಾಶವಾಗುವಿಕೆ- (ಇವೇ) ಮುಂತಾದದ್ದಕ್ಕೆ ಕಾರಣವಾಗಿರುವ ಸರ್ವಜ್ಞತ್ವ , ಸತ್ಯಕಾಮತ್ವ , ಸತ್ಯಸಂಕಲ್ಪತ್ವ- ಇವೇ ಮುಂತಾದ ಲೆಕ್ಕವಿಲ್ಲದ ಉತ್ತಮಗುಣಗಳ ಸಾಗರವಾಗಿರುವ ಬ್ರಹ್ಮವನ್ನು ಕೇಳಿರುವೆಯೇನು? ಎಂಬುದು (ತಂದೆಯ) ಹೃದಯದಲ್ಲಿರುವ ಭಾವವು.[1] ಆ (ಬ್ರಹ್ಮವು) ಎಲ್ಲಕ್ಕೂ ಕಾರಣವಾಗಿರುವದರಿಂದ ಕಾರಣವೇ ಬೇರೆಬೇರೆಯ ಸಂಸ್ಥಾನವಿಶೇಷಗಳಾಗಿದ್ದು ಕೊಂಡು **ಕಾರ್ಯ**ವೆನಿಸುತ್ತದೆಯಾದ್ದರಿಂದ ಕಾರಣವಾಗಿರುವ ಸೂಕ್ಷ್ಮಚಿದಚಿದ್ವಸ್ತು ಶರೀರಕವಾದ ಬ್ರಹ್ಮದ ವಿಜ್ಞಾನದಿಂದ ಕಾರ್ಯವಾದ ಜಗತ್ತೆಲ್ಲವೂ ವಿಜ್ಞಾತವಾಗುತ್ತದೆ ಎಂದು ಹೃದಯದಲ್ಲಿಟ್ಟುಕೊಂಡು 'ಯಾವದರ (ಶ್ರವಣಮನನ ವಿಜ್ಞಾನಗಳಿಂದ) ಅಶ್ರುತವಾದದ್ದು ಶ್ರುತವಾಗುತ್ತದೆಯೋ, ಅಮತವಾದದ್ದು ಮತವಾಗುತ್ತದೆಯೋ, ಅವಿಜ್ಞಾತವಾದದ್ದು ವಿಜ್ಞಾತವಾಗುತ್ತದೆಯೋ (ಅದನ್ನು ಕೇಳಿರುವೆಯ?') ಎಂದು ಮಗನನ್ನು ತಂದೆ ಕೇಳಿದನು.

೪. ಮೃದಾದಿದೃಷ್ಟಾಂತವು ಸಗುಣಪರ

(ಮೂಲ)

೧೩. ತದೇತತ್ ಸಕಲಸ್ಯ ವಸ್ತುಜಾತಸ್ಯ ಏಕಕಾರಣತ್ವಂ ಪಿತೃಹೃದಿ ನಿಹಿತಮಜಾನನ್ ಪುತ್ರಃ ಪರಸ್ಪರವಿಲಕ್ಷಣೇಷು ವಸ್ತುಷು ಅನ್ಯಸ್ಯ ಜ್ಞಾನೇನ ತದನ್ಯಜ್ಞಾನಸ್ಯ[2] ಘಟಮಾನತಾಂ ಬುದ್ಧ್ವಾ ಪರಿಚೋದಯತಿ । 'ಕಥಂ ನು ಭಗವಃ ಸ ಆದೇಶಃ' (ಛಾಂ. ೬-೧-೩) ಇತಿ । ಪರಿಚೋದಿತಃ ಪುನಃ ತದೇವ ಹೃದಿ ನಿಹಿತಂ ಜ್ಞಾನಾನನ್ದಾಮಲತ್ವೈಕಸ್ವರೂಪಮ್, ಅಪರಿಚ್ಛೇದ್ಯಮಾಹಾತ್ಮ್ಯಮ್ ಸತ್ಯಸಂಕಲ್ಪತ್ವಮಿಶ್ರೈರನವಧಿಕಾತಿಶಯಾಸಙ್ಖ್ಯೇಯಕಲ್ಯಾಣಗುಣಗಣೈರ್ಜುಷ್ಟಮ್ । ಅವಿಕಾರಸ್ವರೂಪಂ ಪರಂ ಬ್ರಹ್ಮೈವ ನಾಮರೂಪವಿಭಾಗಾನರ್ಹಸೂಕ್ಷ್ಮಚಿದಚಿದ್ವಸ್ತು ಶರೀರಮ್ ಸ್ವಲೀಲಾಯೈ[3] ಸ್ವಸಙ್ಕಲ್ಪೇನ ಅನನ್ತವಿಚಿತ್ರಸ್ಥಿರತ್ರಸರೂಪಜಗತ್ಸಂಸ್ಥಾನಂ ಸ್ವಾಂಶೇನಾऽವಸ್ಥಿತಮಿತಿ ತಜ್ಞಾನೇನ ಅನ್ಯಸ್ಯ ನಿಖಿಲಸ್ಯ ಜ್ಞಾತತಾಂ ಬ್ರುವನ್ ಲೋಕದೃಷ್ಟಂ ಕಾರ್ಯಕಾರಣಯೋರನನ್ಯತ್ವಂ ದರ್ಶಯಿತುಂ ದೃಷ್ಟಾನ್ತಮಾಹ 'ಯಥಾ ಸೋಮ್ಯೈಕೇನ ಮೃತ್ಪಿಣ್ಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾದ್ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವಸತ್ಯಮ್'

1. ಇದನ್ನು ಮುಂದೆ ಸ್ಫುಟಗೊಳಿಸಲಾಗುವದು.
2. 'ಅನ್ಯಸ್ಯ ವಿಜ್ಞಾನೇನ ತದನ್ಯವಿಜ್ಞಾನಸ್ಯ' ಕಾ॥ ; ಶ್ರುತಿಯಲ್ಲಿ ವಿಜ್ಞಾನ ಎಂದೇ ಇದೆ.
3. 'ಸ್ವಲೀಲಯೈವ' ಎಂದು ಕಾ॥ ; ಟೀಕೆಯಲ್ಲಿ 'ಸ್ವಲೀಲಯಾ ಇತಿ' ಎಂದಿದೆ. ಲೀಲಯಾ ಎಂಬುದು ಲೀಲಾಯಾ ಎಂಬುದಕ್ಕೆ ಬದಲು ಬಿದ್ದ ಅಚ್ಚಿನ ತಪ್ಪಿರಬಹುದಾಗಿದೆ.

(ಛಾಂ.೬-೧-೪) ಇತಿ । ಏಕಮೇವ ಮೃದ್ದ್ರವ್ಯಂ ಸ್ವೈಕದೇಶೇನ ನಾನಾವ್ಯವಹಾರಾಸ್ಪದತ್ವಾಯ ಘಟಶರಾವಾದಿನಾನಾಸಂಸ್ಥಾನಾವಸ್ಥಾರೂಪವಿಕಾರಾಪನ್ನಂ ನಾನಾನಾಮಧೇಯಮಪಿ ಮೃತ್ತಿಕಾಸಂಸ್ಥಾನವಿಶೇಷತ್ವಾತ್ ಮೃದ್ದ್ರವ್ಯಮೇವ ಇತ್ಥಂ[1] ವ್ಯವಸ್ಥಿತಂ ನ ವಸ್ತ್ವನ್ತರಮಿತಿ ಯಥಾ ಮೃತ್ಪಿಣ್ಡವಿಜ್ಞಾನೇನ ತತ್ಸಂಸ್ಥಾನ ವಿಶೇಷರೂಪಂ ಘಟಶರಾವಾದಿ ಸರ್ವಂ ವಿಜ್ಞಾತಮೇವ ಭವತೀತ್ಯರ್ಥಃ ॥

(ಅರ್ಥ)

ಸಕಲವಸ್ತುಜಾತಕ್ಕೂ ಒಂದೇ ಕಾರಣವೆಂಬ ಇದು ತಂದೆಯ ಹೃದಯದಲ್ಲಿದೆಯೆಂಬುದನ್ನು ಅರಿಯದೆ ಪುತ್ರನು ವಸ್ತುಗಳು ಒಂದಕ್ಕೊಂದು ವಿಲಕ್ಷಣವಾಗಿದ್ದರೂ ಒಂದರ ಜ್ಞಾನದಿಂದ ಅದಕ್ಕಿಂತ ಅನ್ಯವಾದವುಗಳ ಜ್ಞಾನವು (ಆಗುವದೆಂಬುದು) ಹೊಂದುವದಿಲ್ಲವೆಂದು ತಿಳಿದು 'ಭಗವಂತನೆ, ಆ ಆದೇಶವು ಹೇಗೆ ಆಗುತ್ತದೆ?' (ಛಾಂ.೬-೧-೩) ಎಂದು ಆಕ್ಷೇಪಣೆಮಾಡಿರುತ್ತಾನೆ. (ಹೀಗೆ)ಆಕ್ಷೇಪಣೆಮಾಡಲಾಗಿ (ತಂದೆ)ಯಾದರೋ ಜ್ಞಾನಾನಂದಾಮಲತ್ವೈಕಸ್ವರೂಪವೂ ಇಷ್ಟೆಂದು ತಿಳಿಯುವದಕ್ಕಾಗದ ಮಾಹಾತ್ಮ್ಯವುಳ್ಳದ್ದೂ ಸತ್ಯಸಂಕಲ್ಪತ್ವದಿಂದೊಡಗೂಡಿದ ಅನವಧಿಕಾತಿಶಯವಾದ ಲೆಕ್ಕವಿಲ್ಲದಷ್ಟು ಕಲ್ಯಾಣಗುಣಗಣಗಳಿಂದ ಭೂಷಿತವಾಗಿರುವ ಅವಿಕಾರಸ್ವರೂಪವಾದ,[2] ನಾಮರೂಪಗಳ ವಿಂಗಡಕ್ಕೆ ಯೋಗ್ಯವಲ್ಲದ[3] ಸೂಕ್ಷ್ಮಚಿದಚಿದ್ವಸ್ತುಶರೀರಕವಾದ ಪರಬ್ರಹ್ಮವೇ ತನ್ನ ಲೀಲೆಗೋಸ್ಕರ[4] ತನ್ನ ಸಂಕಲ್ಪದಿಂದ ಅನಂತವಾದ ಬಗೆಬಗೆಯ ಚರಾಚರರೂಪವಾದ ಜಗತ್ತಿನ ಆಕಾರವುಳ್ಳದ್ದಾಗಿ ತನ್ನ ಅಂಶದಿಂದ[5] ಇದ್ದುಕೊಂಡಿರುವದರಿಂದ ಅದರ ಜ್ಞಾನದಿಂದ ಉಳಿದದ್ದೆಲ್ಲದರ ಜ್ಞಾನವೂ ಆಗುವದೆಂಬುದನ್ನು ಹೇಳುವದಕ್ಕಾಗಿ ಲೋಕದಲ್ಲಿ ಕಂಡಿರುವ ಕಾರ್ಯಕಾರಣಗಳ ಅನನ್ಯತ್ವವನ್ನು ತೋರಿಸಿಕೊಡುವದಕ್ಕಾಗಿ 'ಸೋಮ್ಯನೆ, ಹೇಗೆ ಒಂದು ಮಣ್ಣುಮುದ್ದೆಯಿಂದ ಮಣ್ಣಿನಿಂದಾದದ್ದೆಲ್ಲವೂ ವಿಜ್ಞಾತವಾಗುವದೋ ವಿಕಾರವೂ ನಾಮಧೇಯವೂ ವಾಕ್ಕಿನಿಂದ ಮುಟ್ಟಲ್ಪಡುವದೋ,[6] ಮಣ್ಣೆಂದೇ ಸತ್ಯವಾಗಿರುವದೋ' (ಛಾಂ.೬-೧-೪) ಎಂಬ ದೃಷ್ಟಾಂತವನ್ನು ಹೇಳಿರುತ್ತಾನೆ. ಮೃದ್ದ್ರವ್ಯ

1. ಕಾ॥ ಪಾಠದಲ್ಲಿ 'ಇತಿ' ಎಂದಿದೆ. 2. ಇಲ್ಲಿ ವಿಶೇಷ್ಯಾಂಶವನ್ನೇ 'ಅವಿಕಾರಸ್ವರೂಪ' ವೆಂದಿದೆ. 3. ಇದೇ ಅವ್ಯಾಕೃತಾವಸ್ಥೆ ; ಸೂಕ್ಷ್ಮ ಶಬ್ದದ ಅರ್ಥವಿದು.

4. ಇದು ಸೃಷ್ಟಿಯ ಪ್ರಯೋಜನವನ್ನು ಹೇಳುವ ಮಾತು.

5. ವಿಕಾರಿಯಾದ ನಾಮರೂಪಾಂಶದಿಂದ

6. ವಾಚಾ ಎಂದರೆ ವಾಕ್ಪೂರ್ವಕವಾದ ವ್ಯವಹಾರದಿಂದ, ವ್ಯವಹಾರಕಾರಣದಿಂದ ; ವಿಕಾರವೆಂದರೆ ಘಟಾದಿಸಂಸ್ಥಾನವು, ಗಡಿಗೆ ಮುಂತಾದ ಆಕಾರವು; ನಾಮಧೇಯವೆಂದರೆ ಗಡಿಗೆ ಮುಂತಾದ ಹೆಸರು ; ಘಟಾದಿಸಂಸ್ಥಾನವೂ ನಾಮಧೇಯವೂ ವಾಕ್ಪೂರ್ವಕವಾದ ವ್ಯವಹಾರದಿಂದ ಮುಟ್ಟಲ್ಪಡುತ್ತದೆ, ಹಾಗೆಂದು ವ್ಯವಹೃತವಾಗುತ್ತದೆ ಎಂದರ್ಥ. ಶ್ರೀ.ಛಾ. ೨-೧-೧೪ನ್ನು ನೋಡಿ. ಈ ವಾಕ್ಯದ ತಾತ್ಪರ್ಯವನ್ನು ಇಲ್ಲಿಯೂ ಮುಂದೆ ಹೇಳಿದೆ.

ಪೊಂದೇ ತನ್ನ ಒಂದಂಶದಿಂದ ನಾನಾವ್ಯವಹಾರಕ್ಕೆ ಆಶ್ರಯವಾಗುವದಕ್ಕಾಗಿ ಗಡಿಗೆ, ಶ್ರಾವೆ-ಮುಂತಾದ ಬಗೆಬಗೆಯ ಸಂಸ್ಥಾನಗಳ ಅವಸ್ಥೆಯ ರೂಪದ ವಿಕಾರವನ್ನು ಹೊಂದಿ ಬಗೆಬಗೆಯ ಹೆಸರುಳ್ಳದ್ದಾದರೂ ಮಣ್ಣಿನ ಒಂದೊಂದು ಸಂಸ್ಥಾನವಾಗಿರುವದರಿಂದ ಮೃದ್ದ್ರವ್ಯವೇ ಇಂತು ಅವಸ್ಥೆಯನ್ನು ಪಡೆದುಕೊಂಡಿರುತ್ತದೆ, ವಸ್ತ್ವಂತರವಲ್ಲ ; ಆದ್ದರಿಂದ ಹೇಗೆ ಮಣ್ಣಿನಮುದ್ದೆಯ ವಿಜ್ಞಾನದಿಂದ ಅದರ ಸಂಸ್ಥಾನ ವಿಶೇಷರೂಪವಾದ ಗಡಿಗೆ, ಶ್ರಾವೆ-ಮುಂತಾದದ್ದೆಲ್ಲವೂ ವಿಜ್ಞಾತವೇ ಆಗುತ್ತದೆಯೋ ಎಂದರ್ಥ.

೫. ಬ್ರಹ್ಮವೊಂದೇ ಜಗತ್ತಿಗೆ ಉಪಾದಾನವೆಂಬುದು ಸಗುಣಪರ

(ಮೂಲ)

೧೪. ತತಃ ಕೃತ್ಸ್ನಸ್ಯ ಜಗತೋ ಬ್ರಹ್ಮೈಕಕಾರಣತಾಮಜಾನನ್ ಪುತ್ರಃ ಪೃಚ್ಛತಿ 'ಭಗವಾಂಸ್ತ್ವೇವ ಮೇ ತದ್ಬ್ರವೀತು' (ಛಾಂ.೬-೧-೭) ಇತಿ । ತತಃ ಸರ್ವಜ್ಞಂ ಸರ್ವಶಕ್ತಿ ಬ್ರಹ್ಮೈವಸರ್ವಕಾರಣಮಿತ್ಯುಪದಿಶನ್ ಸ ಹೋವಾಚ । 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ. ೬-೨-೧) ಇತಿ । ಅತ್ರ ಇದಮಿತಿ ಜಗನ್ನಿರ್ದಿಷ್ಟಮ್ । ಅಗ್ರೇ ಇತಿಸೃಷ್ಟೇಃ ಪೂರ್ವಕಾಲಃ । ತಸ್ಮಿನ್ ಕಾಲೇ ಜಗತಃ ಸದಾತ್ಮಕತಾಂ ಸದೇವೇತಿ ಪ್ರತಿಪಾದ್ಯ ತತ್ಸೃಷ್ಟಿಕಾಲೇಽಪ್ಯ ವಿಶಿಷ್ಟಮಿತಿ ಕೃತ್ವಾ ಏಕಮೇವೇತಿ ಸದಾಪನ್ನಸ್ಯ ಜಗತಸ್ತದಾನೀಮವಿಭಕ್ತನಾಮರೂಪತಾಂ ಪ್ರತಿಪಾದ್ಯ ತತ್ಪ್ರತಿಪಾದನೇನೈವ ಸತೋ ಜಗದುಪಾದಾನತ್ವಂ ಪ್ರತಿಪಾದಿತಮಿತಿ ಸ್ವವ್ಯತಿರಿಕ್ತನಿಮಿತ್ತಕಾರಣಮ್ ಅದ್ವಿತೀಯಪದೇನ ಪ್ರತಿಷಿದ್ಧಮಿತಿ 'ತಮಾದೇಶಮ ಪ್ರಾಕ್ಷ್ಯೋ ಯೇನಾಶ್ರುತಂ ಶ್ರುತಂ ಭವತಿ' (ಛಾಂ. ೬-೧-೩) ಇತ್ಯಾದಾವೇವ ಪ್ರಶಾಸಿತೈವ ಜಗದುಪಾದಾನಮಿತಿ ಹೃದಿ ನಿಹಿತಮ್ ಇದಾನೀಮಭಿವ್ಯಕ್ತಮ್ ॥[1]

(ಅರ್ಥ)

ಅನಂತರದಲ್ಲಿ ಇಡಿಯ ಜಗತ್ತಿಗೆ ಬ್ರಹ್ಮವೊಂದೇ ಕಾರಣವೆಂಬುದನ್ನು ಅರಿಯದ ಪುತ್ರನು 'ಭಗವಂತನಾದ (ನೀನೇ) ನನಗೆ ಅದನ್ನು ಹೇಳಬೇಕು' (ಛಾಂ.೬-೧-೭) ಎಂದು ಕೇಳಿರುತ್ತಾನೆ, ಆಮೇಲೆ ಸರ್ವಜ್ಞವೂ ಸರ್ವಶಕ್ತಿಗಳು ಳ್ಳದ್ದೂ ಆದ ಬ್ರಹ್ಮವೇ ಸರ್ವಕ್ಕೂ ಕಾರಣವೆಂಬುದನ್ನು ಉಪದೇಶಿಸುವದಕ್ಕಾಗಿ ಅಪನಿಂತೆಂದನು.[2] 'ಸೋಮ್ಯನೆ, ಇದು ಮೊದಲು ಎರಡನೆಯದಿಲ್ಲದ ಒಂದೇ ಸತ್ತೇ ಆಗಿತ್ತು' (ಛಾಂ.೬-೨-೧). ಇಲ್ಲಿ 'ಇದು' ಎಂದು ಜಗತ್ತನ್ನು ಹೇಳಿರುತ್ತದೆ.

1. 'ಸುವ್ಯಕ್ತಮ್' ಕಾ॥
2. 'ತಥಾ ಸೋಮ್ಯೇತಿ ಹೋವಾಚ' ಎಂಬ ಶ್ರುತಿಯ ಅರ್ಥವಿದು.

'ಮೊದಲು' ಎಂದು ಸೃಷ್ಟಿಗಿಂತ ಹಿಂದಿನ ಕಾಲವನ್ನು (ಹೇಳಿರುತ್ತದೆ). ಆ ಕಾಲದಲ್ಲಿ ಜಗತ್ತು ಸದಾತ್ಮಕವಾಗಿತ್ತೆಂಬುದನ್ನು 'ಸತ್ತೇ' ಎಂಬ (ಶಬ್ದದಿಂದ) ತಿಳಿಸಿ, ಅದು ಸೃಷ್ಟಿಕಾಲದಲ್ಲಿಯೂ ಸಮಾನವಾಗಿರುವದರಿಂದ 'ಒಂದೇ' ಎಂದು ಸತ್ತಾಗಿದ್ದ ಜಗತ್ತು ಆಗ ಅವಿಭಕ್ತವಾದ ನಾಮರೂಪಗಳುಳ್ಳದ್ದಾಗಿತ್ತು ಎಂದು ತಿಳಿಸಿ, ಅದನ್ನು ತಿಳಿಸಿದ್ದರಿಂದಲೇ ಸತ್ತು ಜಗತ್ತಿಗೆ ಉಪಾದಾನವೆಂಬುದನ್ನು ತಿಳಿಸಿದಂತಾಗಿರುವದರಿದ ತನಗಿಂತ ವ್ಯತಿರಿಕ್ತವಾದ ನಿಮಿತ್ತ ಕಾರಣವನ್ನು 'ಅದ್ವಿತೀಯ' (ತನಗೆರಡನೆಯದಿಲ್ಲ ಎಂಬ) ಪದದಿಂದ ಅಲ್ಲಗಳೆದಿದೆಯಾಗಿ 'ಯಾವದರಿಂದ ಅಶ್ರುತವಾದದ್ದು ಶ್ರುತವಾಗುತ್ತದೆಯೋ ಆ ಆದೇಶವನ್ನು ಕೇಳಿದೆಯೊ?' (ಛಾಂ. ೬-೧-೩) ಎಂದು (ಕೇಳಿದಾಗ) **ಮೊದಲೇ ಜಗತ್ತಿಗೆ ಉಪಾದಾನವು ಪ್ರಶಾಸಿತೃವೇ ಎಂದು ಹೃದಯದಲ್ಲಿಟ್ಟುಕೊಂಡಿತ್ತಲ್ಲ(ಅದನ್ನು) ಈಗ ಅಭಿವ್ಯಕ್ತಿಗೊಳಿಸಿದ್ದಾಗಿದೆ.**

೬. ನಾಮರೂಪವ್ಯಾಕರಣಶ್ರುತಿಯು ಸಗುಣಪರ

(ಮೂಲ)

೧೫. ಏತದೇವೋಪಪಾದಯತಿ ಸ್ವಯಮೇವ ಜಗದುಪಾದಾನಂ ಜಗನ್ನಿಮಿತ್ತಂ ಚ ಸತ್ 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯ' (ಛಾಂ.೬-೨-೩) ಇತಿ । ತದೇತತ್ ಸಚ್ಛಬ್ದವಾಚ್ಯಂ ಪರಂ ಬ್ರಹ್ಮ[1] ಸರ್ವಜ್ಞಂ ಸರ್ವಶಕ್ತಿಸತ್ಯಸಙ್ಕಲ್ಪವಮ್ ಅವಾಪ್ತಸಮಸ್ತಕಾಮಮಪಿ ಲೀಲಾರ್ಥಂ ವಿಚಿತ್ರಾನನ್ತಚಿದಚಿನ್ಮಿಶ್ರಜಗದ್ರೂಪೇಣ ಅಹಮೇವ ಬಹು ಸ್ಯಾಂ, ತದರ್ಥಂ ಪ್ರಜಾಯೇಯ - ಇತಿ ಸ್ವಯಮೇವ ಸಂಕಲ್ಪ್ಯ ಸ್ವಾಂಶೈಕದೇಶಾದೇವ ವಿಯದಾದಿಭೂತಾನಿ ಸೃಷ್ಟ್ವಾ ಪುನರಪಿ ಸೈವ ಸಚ್ಛಬ್ದಾಭಿಹಿತಾ ಪರಾ ದೇವತಾ ಏವ[2]ಮೈಕ್ಷತ 'ಹನ್ತಾಽಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾಽಽತ್ಮನಾಽನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾಂ.೬-೩-೨) ಇತಿ । 'ಅನೇನ ಜೀವೇನಾಽಽತ್ಮನಾ' ಇತಿ ಜೀವಸ್ಯ ಬ್ರಹ್ಮಾತ್ಮಕತ್ವಂ ಪ್ರತಿಪಾದ್ಯ ಬ್ರಹ್ಮಾತ್ಮಕಜೀವಾನುಪ್ರವೇಶಾದೇವ ಕೃತ್ಸ್ನಸ್ಯಾಚಿದ್ವಸ್ತುನಃ ಪದಾರ್ಥತ್ವಮ್, ಏವಂಭೂತಸ್ಯೈವಾಚಿದ್ವಸ್ತುನೋ[3] ನಾಮರೂಪಭಾಕ್ತ್ವಮಿತಿ ಚ ದರ್ಶಯತಿ ॥

ಏತದುಕ್ತಂ ಭವತಿ । ಜೀವಾತ್ಮಾ ತು ಬ್ರಹ್ಮಣಃ ಶರೀರತಯಾ ಪ್ರಕಾರತ್ವಾತ್ ಬ್ರಹ್ಮಾತ್ಮಕಃ । 'ಯಸ್ಯಾಽಽತ್ಮಾ ಶರೀರಮ್' (ಬೃ.ಮಾ.೩-೭-೩೦) ಇತಿ ಶ್ರುತ್ಯನ್ತರಾತ್ । ಏವಂಭೂತಸ್ಯ ಜೀವಸ್ಯ ಶರೀರತಯಾ ಪ್ರಕಾರಭೂತಾನಿ ದೇವಮನುಷ್ಯಾದಿ ಸಂಸ್ಥಾನಾನಿ ವಸ್ತೂನೀತಿ ಬ್ರಹ್ಮಾತ್ಮಕಾನಿ ತಾನಿ ಸರ್ವಾಣಿ । ಅತೋ ದೇವೋ ಮನುಷ್ಯೋ ಯಕ್ಷೋ ರಾಕ್ಷಸಃ ಪಶುರ್ಮೃಗಃ ಪಕ್ಷೀ ವೃಕ್ಷೋ ಲತಾ ಕಾಷ್ಠಂ ಶಿಲಾ

---

1. 'ಬ್ರಹ್ಮೈವ' ಕಾ॥ 2. ಈ ಮಾತು ಕಾ॥ ಪಾಠದಲ್ಲಿಲ್ಲ.
3. 'ಅಚಿದ್ವಸ್ತುನೋ' ಎಂಬುದಕ್ಕೆ 'ಸರ್ವಸ್ಯ ವಸ್ತುನೋ' ಎಂದು ಕಾ॥

ತೃಣಂ ಘಟಃ ಪಟಃ ಇತ್ಯಾದಯಃ ಸರ್ವೇ ಪ್ರಕೃತಿಪ್ರತ್ಯಯಯೋಗೇನ ಅಭಿಧಾಯಕತಯಾ ಪ್ರಸಿದ್ಧಾಃ ಶಬ್ದಾ ಲೋಕೇ ತತ್ತದ್ವಾಚ್ಯತಯಾ ಪ್ರತೀಯಮಾನತತ್ತತ್ಸಂಸ್ಥಾನವಸ್ತುಮುಖೇನ ತದಭಿಮಾನಿಜೀವತದನ್ತರ್ಯಾಮಿ ಪರಮಾತ್ಮಪರ್ಯನ್ತಸ್ಯ[1] ಸಂಘಾತಸ್ಯೈವ ವಾಚಕಾ ಇತಿ ॥

(ಅರ್ಥ)

ಇದನ್ನೇ (ಈಗ) ತಾನೇ ಜಗದುಪಾದಾನವೂ ಜಗನ್ನಿಮಿತ್ತವೂ ಆಗಿರುವದಾದ 'ಅದು ಬಹುವಾಗುವೆನು, ಹುಟ್ಟುವೆನು ಎಂದು ಯೋಚಿಸಿಕೊಂಡಿತು' (ಛಾಂ. ೬-೨-೩) ಎಂದು ಉಪಪತ್ತಿ (ಪೂರ್ವಕವಾಗಿ ವಿವರಿಸು)ತ್ತಿದಾನೆ. ಸತ್ ಎಂಬ ಶಬ್ದಕ್ಕೆ ವಾಚ್ಯವಾದ ಸರ್ವಜ್ಞವೂ ಸರ್ವಶಕ್ತಿಯುಕ್ತವೂ ಸತ್ಯಸಂಕಲ್ಪವೂ **ಆದ ಆ ಈ ಪರಬ್ರಹ್ಮವೇ ಸಕಲಕಾಮಗಳನ್ನೂ ಪಡೆದುಕೊಂಡಿರುವದೇ ಆದರೂ ಲೀಲೆಗಾಗಿ[2] ಬಗೆಬಗೆಯ ಅಗಣಿತಚಿದಚಿತ್ತುಗಳಿಂದೊಡಗೂಡಿದ ಜಗತ್ತಿನ ರೂಪದಿಂದ ನಾನೇ ಬಹುವಾಗುವೆನು, ಅದಕ್ಕಾಗಿ ಹುಟ್ಟುವೆನು[3]- ಎಂದು ತಾನೇ ಸಂಕಲ್ಪಿಸಿ ತನ್ನ ಅಂಶದ ಒಂದು ಭಾಗದಿಂದಲೇ ಆಕಾಶಾದಿಭೂತಗಳನ್ನು ಸೃಷ್ಟಿಸಿ ಮತ್ತೂ ಅದೇ ಸಚ್ಛಬ್ದದಿಂದ ಉಕ್ತವಾದ ಪರದೇವತೆಯು (ಹೀಗೆಂದು) ಯೋಚಿಸಿಕೊಂಡಿತು :** 'ಒಳ್ಳೆಯದು, ನಾನು ಈ ಮೂರು ದೇವತೆಗಳನ್ನು ಈ ಜೀವನಿಂದ (ಅಂತರ್ಯಾಮಿಯಾದ) ಆತ್ಮನಾಗಿ ಅನುಪ್ರವೇಶ ಮಾಡಿ ನಾಮರೂಪಗಳನ್ನು ವ್ಯಾಕರಣಮಾಡುವೆನು' (ಛಾಂ.೬-೩-೨), 'ಈ ಜೀವನೆಂಬ ಆತ್ಮನಾಗಿ' ಎಂದು ಜೀವನು ಬ್ರಹ್ಮಾತ್ಮಕನೆಂಬುದನ್ನು ತಿಳಿಸಿ **ಬ್ರಹ್ಮಾತ್ಮಕನಾದ ಜೀವನು ಅನುಪ್ರವೇಶಮಾಡಿದ್ದರಿಂದಲೇ ಅಚಿದ್ವಸ್ತುವೆಲ್ಲವೂ ಪದಾರ್ಥ(ವೆನಿಸರು)ವದೆಂದೂ[4] ಹೀಗಿರುವ ಅಚಿದ್ವಸ್ತುವೇ ನಾಮರೂಪಗಳುಳ್ಳದ್ದಾಗಿದೆಯೆಂದೂ[5] ತಿಳಿಸಿರುತ್ತದೆ.**

---

1. 'ಪರ್ಯನ್ತಸಂಘಾತಸ್ಯೈವ' ಎಂದು ತೆ॥.
2. ಯಾವ ಪ್ರಯೋಜನಕ್ಕಾಗಿಸೃಷ್ಟಿ? ಎಂಬ ಶಂಕೆಗೆ ಪರಿಹಾರವಿದು.
3. ಹುಟ್ಟಿದ ಅವಸ್ಥೆ ಹುಟ್ಟುವ ಅವಸ್ಥೆ- ಎಂದು ಉತ್ಪತ್ತಿಯಲ್ಲಿ ಎರಡು ಬಗೆ ; ಹುಟ್ಟಿದ ಅವಸ್ಥೆಯನ್ನು ಅಸ್ತಿ (ಇದೆ) ಎಂಬ ಶಬ್ದದಿಂದ ಹೇಳುತ್ತಾರೆ, ಹುಟ್ಟುವ ಅವಸ್ಥೆಯನ್ನು ಜಾಯತೇ (ಉಂಟಾಗುತ್ತದೆ) ಎನ್ನುವರು. ಬಹು ಸ್ಯಾಮ್ (ಬಹುವಾಗುವೆನು) ಎಂಬ ಮಾತಿನಿಂದ ಹುಟ್ಟಿದ ಅವಸ್ಥೆಯನ್ನೂ ಪ್ರಜಾಯೇಯ (ಹುಟ್ಟುವೆನು) ಎಂಬ ಮಾತಿನಿಂದ ಹುಟ್ಟುವ ಅವಸ್ಥೆಯನ್ನೂ ಹೇಳಿದೆ- ಎಂದು ಟೀಕೆ.
4. ಅನುಪ್ರವಾವೇಶಮಾಡಿದ ಜೀವನ ಶರೀರವೆನಿಸಿರುವದರಿಂದಲೇ ಅಚಿತ್ತು ಪದಾರ್ಥವೆನಿಸಿದೆ ; ಹಾಗೆ ಜೀವಶರೀರವಲ್ಲದ ಅಚಿದ್ವಸ್ತುವೇ ಇಲ್ಲ- ಎಂದರ್ಥ.
5. ನಾಮರೂಪಗಳುಳ್ಳದ್ದೆಲ್ಲವೂ ಬ್ರಹ್ಮಾತ್ಮಕಜೀವಾನುಪ್ರವಿಷ್ಟವಾಗಿಯೇ ಇದೆ.

(ಇಲ್ಲಿ) ಇಷ್ಟನ್ನು ಹೇಳಿದಂತೆ ಆಗಿದೆ: **ಜೀವಾತ್ಮನಾದರೆ ಬ್ರಹ್ಮಕ್ಕೆ ಶರೀರವಾಗಿರುವದರಿಂದ ಬ್ರಹ್ಮಾತ್ಮಕ(ನಾಗಿರುತ್ತಾನೆ)**. (ಇದಕ್ಕೆ) 'ಯಾವನಿಗೆಆತ್ಮನು ಶರೀರವೋ' (ಬೃ.ಮಾ.೩-೭-೩೦) ಎಂಬ ಮತ್ತೊಂದು ಶ್ರುತಿಯು (ಪ್ರಮಾಣವು). **ಹೀಗಿರುವ ಜೀವನಿಗೆ ದೇವಮನುಷ್ಯಾದಿ ಸಂಸ್ಥಾನಗಳು ಶರೀರವಾಗಿರುವದರಿಂದ ಪ್ರಕಾರವಾಗಿರುವವಾಗಿ ವಸ್ತುಗಳೆನಿಸಿಕೊಂಡಿರುತ್ತವೆಯಾಗಿ ಅವೆಲ್ಲವೂ ಬ್ರಹ್ಮಾತ್ಮಕ**ಗಳಾಗಿವೆ. ಆದ್ದರಿಂದ ದೇವ, ಮನುಷ್ಯ, ಯಕ್ಷ, ರಾಕ್ಷಸ, ಪಶು, ಮೃಗ, ಪಕ್ಷಿ, ವೃಕ್ಷ, ಬಳ್ಳಿ, ಕಟ್ಟಿಗೆ, ಕಲ್ಲು, ಹುಲ್ಲು, ಗಡಿಗೆ, ಬಟ್ಟೆ - ಇವೇ ಮುಂತಾದ ಪ್ರಕೃತಿಪ್ರತ್ಯಯ ಸಂಬಂಧದಿಂದ ಅಭಿಧಾಯಕಗಳೆಂದು ಪ್ರಸಿದ್ಧವಾಗಿರುವ **ಶಬ್ದಗಳೆಲ್ಲ ಲೋಕದಲ್ಲಿ ಅದದಕ್ಕೆ ವಾಚ್ಯವೆಂದು ತೋರುತ್ತಿರುವ ಆಯಾ ಸಂಸ್ಥಾನದ[1] ವಸ್ತುವಿನ ಮೂಲಕ ಅದಕ್ಕೆ ಅಭಿಮಾನಿಯಾದ ಜೀವ, (ಮತ್ತು) ಆ (ಜೀವನಿಗೆ) ಅಂತರ್ಯಾಮಿಯಾದ ಪರಮಾತ್ಮನವರೆಗಿನ ಸಂಘಾತಕ್ಕೇ[2] ವಾಚಕಗಳು** (ಎಂಬುದು ಅಭಿಪ್ರಾಯವು).

೭. ತತ್ತ್ವಮಸಿವಾಕ್ಯವು ಸಗುಣಪರ

(ಮೂಲ)

೧೬. ಏವಂ ಸಮಸ್ತಸ್ಯ[3] ಚಿದಚಿದಾತ್ಮಕಸ್ಯ ಪ್ರಪಞ್ಚಸ್ಯ ಸದುಪಾದಾನತಾ ಸನ್ನಿಮಿತ್ತತಾಸದಾಧಾರತಾಸನ್ನಿಯಾಮ್ಯತಾಸಚ್ಛೇಷತಾದಿ ಸರ್ವಂ ಚ 'ಸನ್ಮೂಲಾಃ ಸೌಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ' (ಛಾಂ. ೬-೮-೪) ಇತ್ಯಾದಿನಾ ವಿಸ್ತರೇಣ ಪ್ರತಿಪಾದ್ಯ ಕಾರ್ಯಕಾರಣಭಾವಾದಿಮುಖೇನ 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಮ್' (ಛಾಂ. ೬-೮-೭) ಇತಿ ಕೃತ್ಸ್ನಸ್ಯ ಜಗತಃ ಬ್ರಹ್ಮಾತ್ಮಕತ್ವಮೇವ ಸತ್ಯಮಿತಿ ಪ್ರತಿಪಾದ್ಯ, ಕೃತ್ಸ್ನಸ್ಯ ಜಗತಃ ಸ ಏವಾಽಽತ್ಮಾ ಕೃತ್ಸ್ನಂ ಚ ಜಗತ್ ತಸ್ಯ ಶರೀರಮ್ । ತಸ್ಮಾತ್ ತ್ವಂಶಬ್ದವಾಚ್ಯಮಪಿ ಜೀವಪ್ರಕಾರಂ ಬ್ರಹ್ಮೈವೇತಿ ಸರ್ವಸ್ಯ ಬ್ರಹ್ಮಾತ್ಮಕತ್ವಂ ಪ್ರತಿಜ್ಞಾತಂ 'ತತ್ತ್ವಮಸಿ' (ಛಾಂ.೬-೮-೭) ಇತಿ ಜೀವವಿಶೇಷೇ ಉಪಸಂಹೃತಮ್ ॥

ಏತದುಕ್ತಂ ಭವತಿ । ಐತದಾತ್ಮ್ಯಮಿದಂ ಸರ್ವಮಿತಿ ಚೇತನಾಚೇತನ ಪ್ರಪಞ್ಚಮ್ ಇದಂ ಸರ್ವಮ್ ಇತಿ ನಿರ್ದಿಶ್ಯ ತಸ್ಯ ಪ್ರಪಞ್ಚಸ್ಯ 'ಏಷ ಆತ್ಮಾ' ಇತಿ

---

1. ಆಯಾ ಆಕಾರದ ಎಂದರ್ಥ. ಸಂಸ್ಥಾನಶಬ್ದವು ಈ ಗ್ರಂಥದಲ್ಲಿ ಮತ್ತೆಮತ್ತೆ ಈ ಅರ್ಥದಲ್ಲಿ ಬರುತ್ತಿರುವದು.
2. ಬರಿಯ ಅಚಿದ್ವಸ್ತುವಿಗೆ ವಾಚಕಗಳಲ್ಲ.
3. 'ಸಮಸ್ತ ಚಿದಚಿದಾತ್ಮಕ' ಕಾ॥

ಪ್ರತಿಪಾದಿತಃ । ಪ್ರಪಞ್ಚೋದ್ದೇಶೇನ ಬ್ರಹ್ಮಾತ್ಮಕತ್ವಂ ಪ್ರತಿಪಾದಿತಮ್ ಇತ್ಯರ್ಥಃ । ತದಿದಂ ಬ್ರಹ್ಮಾತ್ಮಕತ್ವಂ ಕಿಮಾತ್ಮಶರೀರಭಾವೇನ ಉತ ಸ್ವರೂಪೇಣ? - ಇತಿ ವಿವೇಚನೀಯಮ್ । ಸ್ವರೂಪೇಣೇತಿ ಚೇತ್ । ಬ್ರಹ್ಮಣಃ ಸತ್ಯಸಂಕಲ್ಪತ್ವಾದಯಃ 'ತದೈಕ್ಷತ ಬಹು ಸ್ಯಾಮ್[1]' (ಛಾಂ. ೬-೨-೩) ಇತ್ಯುಪಕ್ರಮಾವಗತಾ ಬಾಧಿತಾ ಭವನ್ತಿ । ಶರೀರಾತ್ಮಭಾವೇನ ಚ ತದಾತ್ಮಕತ್ವಂ ಶ್ರುತ್ಯನ್ತರಾದ್ವಿಶೇಷತೋಽವಗತಮ್ । 'ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' (ತೈ. ಆ. ೩-೧೧-೨) ಇತಿ ಪ್ರಶಾಸಿತೃತ್ವರೂಪಾತ್ಮತ್ವೇನಸರ್ವೇಷಾಂ ಜನಾನಾಮ್ ಅನ್ತಃ ಪ್ರವಿಷ್ಟಃ ಅತಃ ಸರ್ವಾತ್ಮಾ ಸರ್ವೇಷಾಂ ಜನಾನಾಂ ಆತ್ಮಾ ಸರ್ವಂ ಚಾಸ್ಯ ಶರೀರಮ್ ಇತಿ ವಿಶೇಷತೋ ಜ್ಞಾಯತೇ ಬ್ರಹ್ಮಾತ್ಮಕತ್ವಮ್ । 'ಯ ಆತ್ಮನಿ ತಿಷ್ಠನ್ನಾತ್ಮನೋಽನ್ತರೋ ಯಮಾತ್ಮಾ ನ ವೇದ ಯಸ್ಯಾಽಽತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ ಸ ತ ಆತ್ಮಾಽನ್ತರ್ಯಾಮ್ಯಮೃತಃ' (ಬೃ.ಮಾ. ೩-೭-೩೦) ಇತಿ ಚ । ಅತ್ರಾಽಪಿ 'ಅನೇನ ಜೀವೇನಾಽಽತ್ಮನಾ' (ಛಾಂ.೬-೩-೨) ಇತಿ ಇದಮೇವ ಜ್ಞಾಯತ ಇತಿ ಪೂರ್ವಮೇವೋಕ್ತಮ್ । ಅತಃ ಸರ್ವಸ್ಯ ಚಿದಚಿದ್ವಸ್ತುನೋ ಬ್ರಹ್ಮಶರೀರತ್ವಾತ್ ಸರ್ವಶರೀರಂ ಸರ್ವಪ್ರಕಾರಂ ಸರ್ವೈಃ ಶಬ್ದೈರ್ಬ್ರಹ್ಮೈವಾಭಿಧೀಯತ ಇತಿ ತತ್ತ್ವಮ್ ಇತಿ ಸಾಮಾನಾಧಿಕರಣ್ಯೇನ ಜೀವಶರೀರತಯಾ ಜೀವಪ್ರಕಾರಂ ಬ್ರಹ್ಮೈವಾಽಭಿಹಿತಮ್ ॥

(ಅರ್ಥ)

ಹೀಗೆ ಚಿದಚಿದಾತ್ಮಕವಾದ ಸಮಸ್ತಪ್ರಪಂಚಕ್ಕೂ ಸತ್ತೇ ಉಪಾದಾನವು ಸತ್ತೇ ನಿಮಿತ್ತವು, ಸತ್ತೇ ಆಧಾರವು[3], ಸತ್ತೇ ನಿಯಾಮಕವು[4], (ಅದು) ಸತ್ತಿಗೇ ಶೇಷವು[5]- ಎಂಬುದೇ ಮುಂತಾದದ್ದೆಲ್ಲವನ್ನೂ 'ಸೋಮ್ಯನೆ, ಈ ಪ್ರಜೆಗಳೆಲ್ಲ ಸನ್ಮೂಲಗಳು, ಸದಾಯತನಗಳು, ಸತ್ಪ್ರತಿಷ್ಠಗಳು' (ಛಾಂ. ೬-೮-೪) ಮುಂತಾದ (ವಾಕ್ಯ)ದಿಂದ ವಿಸ್ತಾರವಾಗಿ ಪ್ರತಿಪಾದಿಸಿ ಕಾರ್ಯಕಾರಣಭಾವವೇ ಮುಂತಾದದ್ದರ[6] ಮೂಲಕ 'ಇದೆಲ್ಲವೂ ಇದನ್ನೇ ಆತ್ಮವಾಗುಳ್ಳದ್ದು, ಅದು ಸತ್ಯವು' (ಛಾಂ. ೬-೮-೭) ಎಂಬುದರಿಂದ ಇಡಿಯ ಜಗತ್ತು ಬ್ರಹ್ಮಾತ್ಮಕವೆಂಬುದೇ ಸತ್ಯವು ಎಂದು ಪ್ರತಿಪಾದಿಸಿ, ಇಡಿಯ ಜಗತ್ತಿಗೆ ಅವನೇ ಆತ್ಮನು, ಇಡಿಯ ಜಗತ್ತು ಅವನ ಶರೀರವು. ಆದ್ದರಿಂದ ತ್ವಂಶಬ್ದ (ನೀನು ಎಂಬ ಶಬ್ದಕ್ಕೆ) ವಾಚ್ಯವಾದ ಜೀವಪ್ರಕಾರಕವಾಗಿರುವದೂ

1. 'ಪ್ರಜಾಯೇಯ' ಎಂಬ ಪದವೂ ಕಾ॥ಪಾಠದಲ್ಲಿದೆ.
2. 'ಸರ್ವಶಬ್ದೈಃ' ಎಂಬ ಕಾ॥ ಪಾಠಕ್ಕಿಂತ ಈ ಪಾಠವೇ ಮೇಲು.
3. 'ಸದಾಯತನ' ಎಂಬ ಶ್ರುತಿಯ ಅರ್ಥವಿದು.
4. ನಿಯಂತೃವಾಗಿಯೇ ಪರಮಾತ್ಮನು ಆಧಾರನಾಗಿರುತ್ತಾನೆ.
5. ಶರೀರವಾಗಿರುವದರಿಂದಲೇ ಶೇಷನೆಂಬುದು ಸಿದ್ಧವಾಗುತ್ತದೆ.
6. ಸದಾಧಾರಕತ್ವವೇ ಮುಂತಾದದ್ದರ ಮೂಲಕ ಎಂದರ್ಥ.

ಬ್ರಹ್ಮವೇ ಎಂದು **ಸರ್ವವೂ ಬ್ರಹ್ಮಾತ್ಮಕವೆಂದು ಪ್ರತಿಜ್ಞೆಮಾಡಿರುವದನ್ನು 'ತತ್ತ್ವಮಸಿ' (ಅದೇ ನೀನು) ಎಂದು ಜೀವ (ನೆಂಬ) ವಿಶೇಷದಲ್ಲಿ ಉಪಸಂಹಾರಮಾಡಿರುತ್ತದೆ.**

(ಈ ವಾಕ್ಯದಲ್ಲಿ) ಇಷ್ಟನ್ನು ಹೇಳಿದಂತೆ ಆಗಿರುತ್ತದೆ : 'ಇದೆಲ್ಲವೂ ಇದನ್ನೇ ಆತ್ಮವಾಗಿ ಉಳ್ಳದ್ದು' ಎಂದು ಚೇತನಾಚೇತನ ಪ್ರಪಂಚವನ್ನು 'ಇದೆಲ್ಲವೂ' ಎಂಬ (ಮಾತಿನಿಂದ) ತಿಳಿಸಿ ಆ ಪ್ರಪಂಚಕ್ಕೆ ಇದು ಆತ್ಮನು ಎಂದು ಹೇಳಿರುತ್ತದೆ. ಪ್ರಪಂಚವನ್ನು ಉದ್ದೇಶಿಸಿ (ಇದು) ಬ್ರಹ್ಮಾತ್ಮಕವೆಂದು ಪ್ರತಿಪಾದಿಸಲಾಗಿದೆ ಎಂದರ್ಥ. **ಆ ಈ ಬ್ರಹ್ಮಾತ್ಮಕತ್ವವೆಂಬುದು ಆತ್ಮಶರೀರಭಾವದಿಂದಲೊ, ಅಥವಾ ಸ್ವರೂಪದಿಂದಲೊ[1]? - ಎಂಬುದನ್ನು (ಇಲ್ಲಿ) ವಿವೇಚನೆಮಾಡಬೇಕಾಗಿರುತ್ತದೆ.** ಸ್ವರೂಪದಿಂದಲೇ ಎಂದರೆ ಅದು 'ಬಹುವಾಗುವೆನು (ಹುಟ್ಟುವೆನು) ಎಂದು ಯೋಚಿಸಿಕೊಂಡಿತು' (ಛಾಂ. ೬-೨-೩) ಎಂಬ ಉಪಕ್ರಮದಿಂದ ಗೊತ್ತಾಗಿರುವ ಬ್ರಹ್ಮದ ಸತ್ಯಸಂಕಲ್ಪತ್ವವೇ ಮುಂತಾದವುಗಳು ಬಾಧಿತವಾಗುತ್ತವೆ. ಶರೀರಾತ್ಮಭಾವದಿಂದ ಆ (ಬ್ರಹ್ಮಾ)ತ್ಮಕತ್ವವಿದೆಯೆಂಬುದೋ 'ಜನರ ಅಂತಃಪ್ರವಿಷ್ಟನಾದ ಶಾಸ್ತೃವು ಸರ್ವಾತ್ಮನು' (ತೈ. ಆ. ೩-೧೧-೨) ಎಂಬ ಬೇರೊಂದು ಶ್ರುತಿಯಿಂದ ವಿಶೇಷ(ರೂಪ)ದಿಂದ ಗೊತ್ತಾಗಿರುತ್ತದೆ. ಪ್ರಶಾಸಿತೃರೂಪನಾದ ಆತ್ಮನಾಗಿ ಎಲ್ಲ ಜನರ ಒಳಗೆ ಪ್ರವಿಷ್ಟನಾಗಿರುತ್ತಾನೆ; ಆದ್ದರಿಂದ ಸರ್ವಾತ್ಮನು; ಎಲ್ಲಾ ಜನರಿಗೂ ಆತ್ಮನು, ಎಲ್ಲವೂ ಇವನ ಶರೀರವು - ಎಂದು ಬ್ರಹ್ಮಾತ್ಮಕತ್ವವು ವಿಶೇಷವಾಗಿ[2] ಗೊತ್ತಾಗಿರುತ್ತದೆ. 'ಯಾವನು ಆತ್ಮನಲ್ಲಿರುವವನಾಗಿ ಆತ್ಮನ ಒಳಗಿರುವನೋ ಯಾವನನ್ನು ಆತ್ಮನು ಅರಿಯನೋ, ಯಾವನಿಗೆ ಆತ್ಮನು ಶರೀರವೋ, ಯಾವನು ಆತ್ಮನನ್ನು ಒಳಗಿದ್ದು ನಿಯಮಿಸುತ್ತಿರುವನೋ ನಿನ್ನ ಅಂತರ್ಯಾಮಿಯೂ ಅಮೃತನೂ ಆದ ಆತ್ಮನು' (ಬೃ.ಮಾ.೩-೭-೩೦) ಎಂದೂ (ವಿಶೇಷವಾಗಿ ಗೊತ್ತಾಗಿರುತ್ತದೆ). ಇಲ್ಲಿಯೂ 'ಈ ಜೀವನಿಂದ ಆತ್ಮನಾಗಿ' (ಛಾಂ. ೬-೩-೨) ಎಂಬಲ್ಲಿ ಇದೇ ತಿಳಿದುಬರುತ್ತಿದೆ ಎಂದು (ಈ) ಮೊದಲೇ ಹೇಳಿದ್ದಾಗಿದೆ. **ಆದ್ದರಿಂದ ಚಿದಚಿದ್ವಸ್ತುವೆಲ್ಲವೂ ಬ್ರಹ್ಮದ ಶರೀರವಾಗಿರುವದರಿಂದ ಸರ್ವವನ್ನೂ ಶರೀರವಾಗುಳ್ಳ ಸರ್ವಪ್ರಕಾರವಾದ ಬ್ರಹ್ಮವೇ ಸರ್ವಶಬ್ದಗಳಿಂದಲೂ ಅಭಿಹಿತವಾಗಿರುತ್ತದೆಯಾದ್ದರಿಂದ 'ಅದು ನೀನು' ಎಂಬ ಸಾಮಾನಾಧಿಕರಣ್ಯದಿಂದ ಜೀವಶರೀರವುಳ್ಳ ಜೀವಪ್ರಕಾರಕವಾದ ಬ್ರಹ್ಮವೇ ಅಭಿಹಿತವಾಗಿರುತ್ತದೆ (ಎಂದಾಯಿತು).**

---

1. ಇಲ್ಲಿ ಮೊದಲನೆಯದು ಸಿದ್ಧಾಂತ, ಎರಡನೆಯದು ಶಾಂಕರಮತ
2. 'ಐತದಾತ್ಮ್ಯಮ್' ಎಂಬುದು ಸಾಮಾನ್ಯವಾಕ್ಯ, ಶಾಸ್ತಾ ಸರ್ವಾತ್ಮಾ ಎಂಬುದು ವಿಶೇಷವಾಕ್ಯವು ; ಸಾಮಾನ್ಯವನ್ನು ವಿಶೇಷದಿಂದ ನಿರ್ಧರಿಸುವದು ಯುಕ್ತ ಎಂದು ಭಾವ.

೮. ತತ್ತ್ವಮಾದಿಪದಗಳೆಲ್ಲವೂ ಸಗುಣವಾಚಕಗಳು

(ಮೂಲ)

೧೭. ಏವಮಭಿಹಿತೇ ಸತಿ ಅಯಮರ್ಥೋ ಜ್ಞಾಯತೇ । ತ್ವಮ್ ಇತಿ ಯಃ ಪೂರ್ವಂ ದೇಹಸ್ಯಾಧಿಷ್ಠಾತೃತಯಾ[1] ಪ್ರತೀತಃ, ಸ ಪರಮಾತ್ಮಶರೀರತಯಾ ಪರಮಾತ್ಮಪ್ರಕಾರಭೂತಃ ಪರಮಾತ್ಮಪರ್ಯನ್ತಃ[2] । ಅತಃ 'ತ್ವಮ್' ಇತಿ ಶಬ್ದಃ[3] ತತ್ಪ್ರಕಾರವಿಶಿಷ್ಟಂ[4] ತದನ್ತರ್ಯಾಮಿಣಮೇವ ಆಚಷ್ಟ ಇತಿ । 'ಅನೇನ ಜೀವೇನಾಽಽತ್ಮನಾಽನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾಂ. ೬-೩-೨) ಇತಿ ಬ್ರಹ್ಮಾತ್ಮಕತಯೈವ ಜೀವಸ್ಯ ಶರೀರಿಣಃ ಸ್ವನಾಮಭಾಕ್ತ್ವಾತ್ ತತ್ತ್ವಮಿತಿ ಸಮಾನಾಧಿಕರಣವೃತ್ತಯೋರ್[5]ದ್ವಯೋರಪಿ ಪದಯೋರ್ಬ್ರಹ್ಮೈವ ವಾಚ್ಯಮ್। ತತ್ರ ತತ್ಪದಂ ಜಗತ್ಕಾರಣಭೂತಂ ಸರ್ವ[6]ಕಲ್ಯಾಣಗುಣಾಕರಂ ನಿರವದ್ಯಂ ನಿರ್ವಿಕಾರಮಾಚಷ್ಟೇ । ತ್ವಮಿತಿ ಚ ತದೇವ ಬ್ರಹ್ಮ ಜೀವಾನ್ತರ್ಯಾಮಿರೂಪಂ[7] ಸಶರೀರಜೀವಪ್ರಕಾರವಿಶಿಷ್ಟಮಾಚಷ್ಟೇ । ತದೇವಂ ಪ್ರವೃತ್ತಿನಿಮಿತ್ತಭೇದೇನ ಏಕಸ್ಮಿನ್ ಬ್ರಹ್ಮಣ್ಯೇವ ತತ್ ತ್ವಮ್ ಇತಿ ದ್ವಯೋಃ ಪದಯೋರ್ವೃತ್ತಿರುಕ್ತಾ । ಬ್ರಹ್ಮಣೋ ನಿರವದ್ಯತ್ವಂ ನಿರ್ವಿಕಾರತ್ವಂ ಸರ್ವಕಲ್ಯಾಣಗುಣಾಕರತ್ವಂ ಜಗತ್ಕಾರಣತ್ವಂ ಚ ಅಬಾಧಿತಮ್ । ಅಶ್ರುತವೇದಾನ್ತಾಃ ಪುರುಷಾಃ ಸರ್ವೇ ಪದಾರ್ಥಾಃ ಸರ್ವೇ ಜೀವಾತ್ಮಾನಶ್ಚ ಬ್ರಹ್ಮಾತ್ಮಕಾ ಇತಿ ನ ಪಶ್ಯನ್ತಿ । ಸರ್ವಶಬ್ದಾನಾಂ ಚ ಕೇವಲೇಷು ತತ್ತತ್ಪದಾರ್ಥೇಷು ವಾಚ್ಯೈಕದೇಶೇಷು ವಾಚ್ಯ ಪರ್ಯವಸಾನಂ ಮನ್ಯನ್ತೇ । ಇದಾನೀಂ ವೇದಾನ್ತವಾಕ್ಯಶ್ರವಣೇನ ಬ್ರಹ್ಮಕಾರ್ಯತಯಾ ತದನ್ತರ್ಯಾಮಿಕತಯಾ ಸರ್ವಸ್ಯ ಬ್ರಹ್ಮಾತ್ಮಕತ್ವಂ ಸರ್ವಶಬ್ದಾನಾಂ ತತ್ತತ್ಪ್ರಕಾರಸಂಸ್ಥಿತಬ್ರಹ್ಮವಾಚಿತ್ವಂ ಚ ಜಾನನ್ತಿ । ನನ್ವೇವಂ ಗವಾದಿಶಬ್ದಾನಾಂ ತತ್ತತ್ಪದಾರ್ಥವಾಚಿತಯಾ ವ್ಯುತ್ಪತ್ತಿರ್ಬಾಧಿತಾ ಸ್ಯಾತ್ । ನೈವಮ್ । ಸರ್ವೇ ಶಬ್ದಾಃ ಅಚಿಚ್ಚಿದವಿಶಿಷ್ಟಸ್ಯ ಪರಮಾತ್ಮನೋ ವಾಚಕಾ ಇತ್ಯುಕ್ತಂ 'ನಾಮರೂಪೇ ವ್ಯಾಕರವಾಣಿ' (ಛಾಂ. ೬-೩-೨) ಇತ್ಯತ್ರ । ತತ್ರ ಲೌಕಿಕಾಸ್ತು ಪುರುಷಾಃ ಶಬ್ದಂ

---

1. 'ದೇಹಾಧಿಷ್ಠಾತೃತಯಾ' ಕಾ॥
2. 'ಪೃಥಕ್ಸ್ಥಿತಿಪ್ರವೃತ್ತ್ಯನರ್ಹಃ' ಎಂಬ ಕಾ॥ ಪಾಠವು ಹೆಚ್ಚಿಂದು ಬಿಟ್ಟುಬಿಟ್ಟಿದೆ.
3. 'ಶಬ್ದಃ' ಎಂಬುದು ಕಾ॥ ಪಾಠದಲ್ಲಿಲ್ಲ.
4. 'ತ್ವತ್ಪ್ರಕಾರವಿಶಿಷ್ಟಂ ತ್ವದನ್ತರ್ಯಾಮಿಣಂ' ಎಂಬ ಕಾ॥ ಪಾಠ ಸರಿಯಲ್ಲ.
5. 'ಸಾಮಾನಾಧಿಕರಣ್ಯಪ್ರವೃತ್ತಯೋಃ' ಕಾ॥ ಅಲ್ಲಿ ಟೀಕೆಯಲ್ಲಿಯೂ ಹಾಗೆಯೇ ಇದೆ.
6. 'ಸಕಲ' ಕಾ॥
7. 'ಜೀವಾನ್ತರ್ಯಾಮಿರೂಪೇಣ ಸ್ವಶರೀರ' ಎಂಬ ಕಾ॥ ಪಾಠಕ್ಕಿಂತ ಈ ಪಾಠವೇ ಮೇಲು.

ವ್ಯಾಹರನ್ತಃ ಶಬ್ದವಾಚ್ಯೇ ಪ್ರಧಾನಾಂಶಸ್ಯ[1] ಪರಮಾತ್ಮನಃ ಪ್ರತ್ಯಕ್ಷಾದ್ಯಪರಿಚ್ಛೇದ್ಯತ್ವಾತ್ ವಾಚ್ಯೈಕದೇಶಭೂತೇ ವಾಚ್ಯ ಸಮಾಪ್ತಿಂ ಮನ್ಯನ್ತೇ । ವೇದಾನ್ತಶ್ರವಣೇನ ಚ ವ್ಯುತ್ಪತ್ತಿಃ ಪೂರ್ಯತೇ । ಏವಮೇವ ವೈದಿಕಾಃ ಶಬ್ದಾಃ ಸರ್ವೇ ಪರಮಾತ್ಮಪರ್ಯನ್ತಾನ್ ಸ್ವಾರ್ಥಾನ್ ಬೋಧಯನ್ತಿ । ವೈದಿಕಾ ಏವ ಸರ್ವೇ ಶಬ್ದಾಃ ವೇದಾದೇವೋ[2]ದ್ಧೃತ್ಯೋದ್ಧೃತ್ಯ ಪರೇಣೈವ ಬ್ರಹ್ಮಣಾ ಸರ್ವಪದಾರ್ಥಾನ್ ಪೂರ್ವವತ್ ಸೃಷ್ಟ್ವಾ ತೇಷು ಪರಮಾತ್ಮಪರ್ಯನ್ತೇಷು ಪೂರ್ವವತ್ ನಾಮತಯಾ ಪ್ರಯುಕ್ತಾಃ । ತದಾಹ ಮನುಃ 'ಸರ್ವೇಷಾಂ ತು ಸ ನಾಮಾನಿ ಕರ್ಮಾಣಿ ಏವಿಧಾನಿ ಚ । ವೇದ ಶಬ್ದೇಭ್ಯ ಏವಾದೌ ಪೃಥಕ್ಸಂಸ್ಥಾಶ್ಚ ನಿರ್ಮಮೇ[3]' (ಮನು. ೧-೨೧) ಇತಿ । ಸಂಸ್ಥಾಃ ಸಂಸ್ಥಾನಾನಿ । ರೂಪಾಣೀತಿ ಯಾವತ್ । ಆಹ ಚ ಭಗವಾನ್ ಪರಾಶರಃ 'ನಾಮರೂಪಂ ಚ ಭೂತಾನಾಂ ಕೃತ್ಯಾನಾಂ ಚ ಪ್ರಪಞ್ಚನಮ್[4] । ವೇದಶಬ್ದೇಭ್ಯ ಏವಾದೌ ದೇವಾದೀನಾಂ ಚಕಾರ ಸಃ ॥ (ವಿ.ಪು. ೧-೫-೬೪) ಇತಿ । ಶ್ರುತಿಶ್ಚ 'ಸೂರ್ಯಾಚನ್ದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್' (ಋ. ೧೦-೧೯೦-೩) ಇತಿ । ಸೂರ್ಯಾದೀನ್ ಪೂರ್ವವತ್ ಪರಿಕಲ್ಪ ನಾಮಾನಿ ಚ ಪೂರ್ವವಚ್ಚಕಾರೇತ್ಯರ್ಥಃ ॥

(ಅರ್ಥ)

ಹೀಗೆ (ಸಾಮಾನಾಧಿಕರಣ್ಯದಿಂದ) ಹೇಳಿದ್ದರಿಂದ ತಿಳಿದುಬರುವ ಅರ್ಥವಿದು : 'ನಾನು' ಎಂದು ದೇಹಕ್ಕೆ ಅಧಿಷ್ಠಾತೃವಾಗಿ ಮೊದಲು ತಿಳಿದಿದ್ದೆವಲ್ಲ, ಅವನು ಪರಮಾತ್ಮನ ಶರೀರವಾಗಿ ಪರಮಾತ್ಮನ ಪ್ರಕಾರವಾಗಿದ್ದು ಪರಮಾತ್ಮ ಪರ್ಯಂತನಾದವನು[5] ; ಆದ್ದರಿಂದ 'ನೀನು' ಎಂಬ ಶಬ್ದವು ಆ ಪ್ರಕಾರದಿಂದೊಡ ಗೂಡಿರುವ ಅವನ ಅಂತರ್ಯಾಮಿಯನ್ನೇ ಹೇಳುತ್ತದೆ- ಎಂದು (ಗೊತ್ತಾಗುತ್ತದೆ). ಏಕೆಂದರೆ 'ಈ ಜೀವನೆಂಬ ಆತ್ಮನಿಂದ ಅನುಪ್ರವೇಶಮಾಡಿ ನಾಮರೂಪಗಳನ್ನು ವ್ಯಾಕರಣಮಾಡುವೆನು' (ಛಾಂ. ೬-೩-೨) ಎಂದು ಶರೀರಿಯಾದ ಜೀವನಿಗೆ ಬ್ರಹ್ಮಾತ್ಮಕನಾಗಿರುವದರಿಂದಲೇ ಅವನ (ಜೀವನೆಂಬ) ಹೆಸರು ಬಂದಿರುತ್ತದೆ. **'ಅದು ನೀನು' ಎಂದು ಸಮಾನಾಧಿಕರಣದಲ್ಲಿ ವ್ಯಾಪಾರವುಳ್ಳ ಎರಡು ಪದಗಳಿಗೂ**

---

1. 'ಪ್ರಧಾನಾಂಶಸ್ಯೈವ' ಎಂಬಲ್ಲಿ ಏವ ಹೆಚ್ಚು.
2. ವೇದಾದೇವಾದೌ ಉದ್ಧೃತ್ಯೋದ್ಧೃತ್ಯ ಎಂದು ತೆ॥
3. ಈ ಶ್ಲೋಕವು 'ಸರ್ವೇಷಾಂ ತು ನಾಮಾನಿ.... ಪೃಥಕ್ಸಂಸ್ಥಾಶ್ಚ ನಿರ್ಮಮೇ' ಎಂದು ವಿಚ್ಛಿನ್ನವಾಗಿಯೇ ತೆ॥ ಪಾಠದಲ್ಲಿ ಉದಾಹೃತವಾಗಿದೆ. ಕಾ॥ ಪಾಠದಲ್ಲಿ ಪೂರ ಇದೆ.
4. 'ಪ್ರಪಞ್ಚಿತಮ್' ಕಾ॥
5. ಶರೀರವಾಗಿದ್ದು ಪ್ರಕಾರವಾಗಿರುವದರಿಂದ ವಿಂಗಡವಾಗಿ ತಾನೇ ಸಿದ್ಧವಾಗುವದು, ಇದ್ದು ಕೊಂಡಿರುವದು, ಪ್ರವೃತ್ತಿಯುಳ್ಳವನಾಗುವದು- ಇವಕ್ಕೆ ಅರ್ಹನಲ್ಲ ಎಂದರ್ಥ. ತಾ॥.

ಬ್ರಹ್ಮವೇ ವಾಚ್ಯವು. ಅವುಗಳೊಳಗೆ 'ಅದು' ಎಂಬ (ತತ್) ಪದವು ಜಗತ್ಕಾರಣವಾಗಿರುವ ಸರ್ವಕಲ್ಯಾಣಗುಣಗಳ ಆಕರವಾಗಿರುವ ನಿರ್ದುಷ್ಟವಾಗಿರುವ ನಿರ್ವಿಕಾರವಾದ (ಬ್ರಹ್ಮ)ವನ್ನು ಹೇಳುತ್ತದೆ ; ನೀನು (ತ್ವಮ್) ಎಂಬಿದು ಜೀವಾಂತರ್ಯಾಮಿರೂಪವಾಗಿಯೂ ಸಶರೀರನಾದ ಜೀವನೆಂಬ ಪ್ರಕಾರದಿಂದ ವಿಶಿಷ್ಟವಾಗಿರುವ ಬ್ರಹ್ಮವನ್ನು ಹೇಳುತ್ತದೆ. ಅಂತು ಹೀಗೆ ಪ್ರವೃತ್ತಿನಿಮಿತ್ತಗಳು ಬೇರೆಬೇರೆಯಾಗಿರುವದರಿಂದ ಒಂದೇ ಬ್ರಹ್ಮದಲ್ಲಿಯೇ ತತ್, ತ್ವಮ್- ಎಂಬೀ ಎರಡು ಪದಗಳಿಗೂ ವೃತ್ತಿಯನ್ನು ಹೇಳಿರುತ್ತದೆ. ಬ್ರಹ್ಮವು ನಿರ್ದುಷ್ಟವಾಗಿರುವದು, ನಿರ್ವಿಕಾರವಾಗಿರುವದು, ಸರ್ವಕಲ್ಯಾಣಗುಣಗಳಿಗೆ ಆಕರವಾಗಿರುವದು, ಮತ್ತು ಜಗತ್ಕಾರಣವಾಗಿರುವದು- (ಎಂಬಿದು) ಅಬಾಧಿತವಾಗಿರುತ್ತದೆ.

ವೇದಾಂತಶ್ರವಣವನ್ನು ಮಾಡದಿರುವ ಜನರು ಸರ್ವಪದಾರ್ಥಗಳೂ ಸರ್ವ ಜೀವಾತ್ಮರುಗಳೂ ಬ್ರಹ್ಮಾತ್ಮಕವಾಗಿವೆ ಎಂಬಿದನ್ನು ಅರಿತುಕೊಳ್ಳದೆ ಇರುವರು ; ಸರ್ವಶಬ್ದಗಳೂ ಬರಿಯ ವಾಚ್ಯದ ಏಕದೇಶವಾಗಿರುವ ಆಯಾ ಪದಾರ್ಥಗಳಲ್ಲಿಯೇ ಪರ್ಯವಸಾನವಾಗಿವೆ ಎಂದು ಎಣಿಸಿಕೊಂಡಿರುತ್ತಾರೆ. ಈಗ ವೇದಾಂತ ವಾಕ್ಯವನ್ನು ಶ್ರವಣಮಾಡಿರುವದರಿಂದ ಬ್ರಹ್ಮಕಾರ್ಯವಾಗಿರುವದ-ರಿಂದಲೂ ಆ (ಬ್ರಹ್ಮವೇ ಅದಕ್ಕೆ) ಅಂತರ್ಯಾಮಿಯಾಗಿರುವದರಿಂದಲೂ ಎಲ್ಲವೂ ಬ್ರಹ್ಮಾತ್ಮಕವೆಂಬುದನ್ನೂ ಸರ್ವಶಬ್ದಗಳೂ ಆಯಾ ಪ್ರಕಾರದಿಂದ **(ಕೂಡಿ) ಇದ್ದುಕೊಂಡಿರುವ ಬ್ರಹ್ಮವನ್ನು ಹೇಳುವದೆಂಬುದನ್ನೂ ಅರಿತು ಕೊಂಡಿರುವರು.**

(ಆಕ್ಷೇಪ) :- ಹೀಗಾದರೆ ಗೋವು ಮುಂತಾದ ಶಬ್ದಗಳು ಆಯಾ ಪದಾರ್ಥಗಳನ್ನು ಹೇಳುತ್ತವೆ ಎಂಬ ವ್ಯುತ್ಪತ್ತಿಗೆ ಬಾಧಕವಾಗುವದಿಲ್ಲವೆ?[1]

(ಪರಿಹಾರ) :- ಹಾಗಲ್ಲ. ಎಲ್ಲಾ ಶಬ್ದಗಳೂ ಅಚಿತ್ತು ಮತ್ತು ಜೀವ-ಇವುಗಳಿಂದೊಡಗೂಡಿದ ಪರಮಾತ್ಮನಿಗೆ ವಾಚಕಗಳು ಎಂದು 'ನಾಮರೂಪಗಳನ್ನು ವ್ಯಾಕರಣಮಾಡುವೆನು' (ಛಾಂ. ೬-೩-೨) ಎಂಬ (ಶ್ರುತಿಯ ವಾಕ್ಯವನ್ನು ವಿವರಿಸು)ವಲ್ಲಿ ಹೇಳಲಾಗಿತ್ತು. ಅಲ್ಲಿ ಲೋಕದ ಜನರಾದರೋ ಶಬ್ದವನ್ನು ಹೇಳುವಾಗ ಶಬ್ದವಾಚ್ಯದಲ್ಲಿ ಮುಖ್ಯಾಂಶವಾಗಿರುವ ಪರಮಾತ್ಮನು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಗೊತ್ತಾಗುವಂತಿಲ್ಲವಾದ್ದರಿಂದ ವಾಚ್ಯದ ಒಂದು ಭಾಗದಲ್ಲಿಯೇ ವಾಚ್ಯವು ಮುಗಿಯಿತು ಎಂದು ತಿಳಿದಿರುತ್ತಾರೆ ; ವೇದಾಂತಶ್ರವಣದಿಂದಲಾದರೆ

---

1. ಗೋವು ಗೋವನ್ನೇ ಹೇಳತ್ತದೆ ಎಂಬುದು ಲೌಕಿಕವ್ಯುತ್ಪತ್ತಿಯಿಂದಸಿದ್ಧವಾಗಿರುತ್ತದೆ ; ಹೀಗಿರುವಾಗ ಅವು ಬ್ರಹ್ಮಪರ್ಯಂತವಾಚಕಗಳೆಂಬುದು ಈ ವ್ಯುತ್ಪತ್ತಿಗೆ ವಿರುದ್ಧವೆಂದಾಗು ವುದಿಲ್ಲವೆ?- ಎಂದು ಆಕ್ಷೇಪ.

ವ್ಯುತ್ಪತ್ತಿಯು ಪೂರ್ಣವಾಗುತ್ತದೆ.[1] ಹೀಗೆಯೇ ವೈದಿಕ ಶಬ್ದಗಳೆಲ್ಲವೂ ಪರಮಾತ್ಮ ಪರ್ಯಂತವಾಗಿರುವ ತಮ್ಮತಮ್ಮ ಅರ್ಥಗಳನ್ನು ತಿಳಿಸುತ್ತವೆ. **ಸರ್ವಶಬ್ದಗಳೂ ವೈದಿಕ (ಶಬ್ದಗಳೇ)ಆಗಿದ್ದು ಅವನ್ನು ವೇದದಿಂದಲೇ (ಮೊದಲು)[2] ಎತ್ತಿಎತ್ತಿ (ತೆಗೆದುಕೊಂಡು) ಪರಬ್ರಹ್ಮವೇ ಸರ್ವಪದಾರ್ಥಗಳನ್ನೂ ಮುನ್ನಿನಂತೆ ಸೃಷ್ಟಿಮಾಡಿ ಪರಮಾತ್ಮಪರ್ಯಂತವಾದ ಆ (ಪದಾರ್ಥಗಳ ವಿಷಯದಲ್ಲಿ) ಮುನ್ನಿನಂತೆ ಹೆಸರುಗಳಾಗಿ ಪ್ರಯೋಗಿಸಿರುತ್ತದೆ.** ಇದನ್ನು **ಮನುವು** 'ಆತನು ಎಲ್ಲವುಗಳ ನಾಮಗಳನ್ನೂ (ವಿವಿಧವಾದ ಕರ್ಮಗಳನ್ನೂ ವೇದಶಬ್ದಗಳಿಂದಲೇ ಮೊದಲು)[3] ಬೇರೆ ಬೇರೆಯಾದ ಸಂಸ್ಥೆಗಳನ್ನು ನಿರ್ಮಿಸಿದನು' (ಮನು. ೧-೨೧) ಎಂದು ಹೇಳಿರುತ್ತಾನೆ. (ಇಲ್ಲಿ) ಸಂಸ್ಥೆಗಳನ್ನೂ ಎಂದರೆ ಸಂಸ್ಥಾನಗಳನ್ನು, ರೂಪಗಳನ್ನು, ಎಂದು ಅಭಿಪ್ರಾಯ. ಭಗವಂತನಾದ **ಪರಾಶರನೂ** (ಹೀಗೆಂದು) ಹೇಳಿರುತ್ತಾನೆ: 'ದೇವಾದಿಭೂತಗಳ ನಾಮವನ್ನೂ ರೂಪವನ್ನೂ ಕೃತ್ಯಗಳವಿವರವನ್ನೂ ಆದಿಯಲ್ಲಿ ವೇದಶಬ್ದಗಳಿಂದಲೇ ಮಾಡಿದನು' (ವಿ.ಪೂ. ೧-೫-೬೪), 'ಸೂರ್ಯಚಂದ್ರರನ್ನು ಧಾತನು ಮೊದಲಿನಂತೆ ಮಾಡಿದನು' (ಋ. ೧೦-೧೯೦-೩) ಎಂದು ಶ್ರುತಿಯಲ್ಲಿಯೂ ಇದೆ. ಸೂರ್ಯಾದಿಗಳನ್ನು ಮುನ್ನಿನಂತೆಯೇ ಉಂಟುಮಾಡಿ ನಾಮಗಳನ್ನು ಮುನ್ನಿನಂತೆಯೇ ಗೊತ್ತುಮಾಡಿದನು ಎಂದರ್ಥ.

೯. ಕಾರ್ಯವು ಸಗುಣಬ್ರಹ್ಮಾತ್ಮಕವಾದ್ದರಿಂದಲೇ ಸತ್ಯ

(ಮೂಲ)

೧೮. ಏವಂ ಜಗದ್ಬ್ರಹ್ಮಣೋರನನ್ಯತ್ವಂ ಪ್ರಪಞ್ಚಿತಮ್ । ತೇನ ಏಕೇನ ಜ್ಞಾತೇನ[4] ಸರ್ವಸ್ಯ ಜ್ಞಾತತಾ ಉಪಪಾದಿತಾ ಭವತಿ । ಸರ್ವಸ್ಯ ಬ್ರಹ್ಮಕಾರ್ಯತಾ[5] ಪ್ರತಿಪಾದನೇನ ತದಾತ್ಮಕತಯೈವ ಸತ್ಯತ್ವಂ ನಾನ್ಯಥಾ ಇತಿ 'ತತ್ಸತ್ಯಮ್' ಇತ್ಯುಕ್ತಮ್ । ಯಥಾ ದೃಷ್ಟಾನ್ತೇ ಸರ್ವಸ್ಯ ಮೃದ್ವಿಕಾರಸ್ಯ ಮೃದಾತ್ಮನೈವ ಸತ್ಯತ್ವಮ್ ॥

(ಅರ್ಥ)

ಹೀಗೆ ಜಗದ್ಬ್ರಹ್ಮಗಳ ಅನನ್ಯತ್ವವನ್ನು ವಿವರಿಸಿದ್ದಾಯಿತು. ಅದರಿಂದ ಒಂದನ್ನು ಅರಿತರೆ ಸರ್ವವನ್ನೂ ಅರಿತಂತೆ ಆಯಿತೆಂಬುದನ್ನು (ಯುಕ್ತಿಗೆ)ಹೊಂದಿಸಿ

1. ಲೌಕಿಕವ್ಯುತ್ಪತ್ತಿಯು ಅಪೂರ್ಣವಾಗಿರುವದರಿಂದ ಪೂರ್ಣವಾಗಿ ತಿಳಿಸುವದು ಅದಕ್ಕೆ ವಿರುದ್ಧವಾಗಲಾರದು ಎಂದು ಭಾವ.
2. 'ಆದೌ' ಎಂಬ ಪಾಠಕ್ಕೆ ಅರ್ಥವಿದು.
3. ಕಂಸದಲ್ಲಿರುವ ಭಾಗವು ತೆ॥ ಪಾಠದಲ್ಲಿಲ್ಲ.
4. 'ಜ್ಞಾನೇನ' ಎಂಬುದಕ್ಕಿಂತ 'ಜ್ಞಾತೇನ' ಎಂಬ ಪಾಠವೇ ಮೇಲು.
5. 'ಬ್ರಹ್ಮಕಾರ್ಯತ್ವ' ಕಾ॥.

(ತಿಳಿಸಿ)ದಂತೆ ಆಗಿರುತ್ತದೆ. ಸರ್ವವೂ ಬ್ರಹ್ಮಕಾರ್ಯವೆಂದು ಪ್ರತಿಪಾದಿಸಿದ್ದರಿಂದ ಆ (ಬ್ರಹ್ಮಾ)ತ್ಮಕವಾಗಿರುವದರಿಂದಲೇ (ಸರ್ವವೂ) ಸತ್ಯವಾಗಿದೆಯೇ ಹೊರತು ಬೇರೆಯಲ್ಲ , ಎಂಬ (ಅಭಿಪ್ರಾಯದಿಂದ) 'ಅದು ಸತ್ಯವು' ಎಂದಿರುತ್ತದೆ. ಹೇಗೆ ದೃಷ್ಟಾಂತದಲ್ಲಿ ಮಣ್ಣಿನ ಕಾರ್ಯವಾದದ್ದೆಲ್ಲವೂ ಮೃದಾತ್ಮವಾಗಿಯೇ ಸತ್ಯವೋ (ಹಾಗೆ).

೧೦. ಶೋಧಕವಾಕ್ಯಗಳ ತಾತ್ಪರ್ಯ

(ಮೂಲ)

೧೯. ಶೋಧಕವಾಕ್ಯಾನ್ಯಪಿ ನಿರವದ್ಯಂ ಸರ್ವಕಲ್ಯಾಣಗುಣಾಕರಂ ಪರಂ ಬ್ರಹ್ಮ ಶೋಧಯನ್ತಿ । ಸರ್ವಪ್ರತ್ಯನೀಕಾಕಾರತಾಬೋಧನೇಽಪಿ[1] ತತ್ತತ್ಪ್ರತ್ಯನೀಕತಾಭೇದಸ್ಯ[2] ಅವರ್ಜನೀಯತ್ವಾನ್ನ ನಿರ್ವಿಶೇಷವಸ್ತುಸಿದ್ಧಿಃ[3] । ನನು[4] ಜ್ಞಾನಮಾತ್ರಂ ಬ್ರಹ್ಮೇತಿ ಪ್ರತಿಪಾದಿತೇ ನಿರ್ವಿಶೇಷಜ್ಞಾನಮಾತ್ರಂ ಬ್ರಹ್ಮೇತಿ ನಿಶ್ಚೀಯತೇ । ನೈವಮ್ । ಸ್ವರೂಪನಿರೂಪಣಧರ್ಮಶಬ್ದಾ ಹಿ ಧರ್ಮಮುಖೇನ ಸ್ವರೂಪಮಪಿ ಪ್ರತಿಪಾದಯನ್ತಿ ಗವಾದಿಶಬ್ದವತ್ । ತಥಾಹ[5] ಸೂತ್ರಕಾರಃ 'ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್' (ವೇ. ಸೂ.೨-೩-೩೦), [6] 'ಯಾವದಾತ್ಮಭಾವಿತ್ವಾಚ್ಚ ನ ದೋಷಃ' (ವೇ.ಸೂ. ೨-೩-೨೯) ಇತಿ । ಜ್ಞಾನೇನ ಧರ್ಮೇಣ ಸ್ವರೂಪಮಪಿ ನಿರೂಪಿತಮ್ । ನ ತು ಜ್ಞಾನಮಾತ್ರಂ ಬ್ರಹ್ಮೇತಿ । ಕಥಮಿದಮವಗಮ್ಯತ ಇತಿ ಚೇತ್ । 'ಯಃ ಸರ್ವಜ್ಞಃ ಸರ್ವವಿತ್' (ಮುಂ. ೧-೧-೯) ಇತ್ಯಾದಿಜ್ಞಾತೃತ್ವಶ್ರುತೇಃ । 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (ಶ್ವೇ. ೬-೮), 'ವಿಜ್ಞಾತಾರಮರೇ ಕೇನ ವಿಜಾನೀಯಾತ್' (ಬೃ.೨-೪-೧೪) ಇತ್ಯಾದಿಶ್ರುತಿಶತಸಮಧಿಗತಮಿದಮ್ । ಜ್ಞಾನಸ್ಯ ಧರ್ಮಮಾತ್ರತ್ವಾತ್ ಧರ್ಮಮಾತ್ರಸ್ಯೈಕಸ್ಯ ವಸ್ತುತ್ವಪ್ರತಿಪಾದನಾನು

1. 'ಸರ್ವಪ್ರತ್ಯನೀಕಾಕಾರಬೋಧನೇಽಪಿ' ಎಂಬ ತೆ॥ ಪಾಠಕ್ಕಿಂತ ಇದು ಮೇಲು.
2. 'ತತ್ತತ್ಪ್ರತ್ಯನೀಕತಾಯಾಃ ಭೇದಸ್ಯ' ಎಂಬ ಕಾ॥ ಪಾಠಕ್ಕಿಂತ ಇದೇ ಮೇಲು; ಇದನ್ನೇ ಟೀಕೆಯಲ್ಲಿ ಒಪ್ಪಿರುವಂತೆ ಕಾಣುತ್ತದೆ.
3. ನಿರ್ವಿಶೇಷತ್ವಸಿದ್ಧಿಃ ಎಂಬ ತೆ॥ ಪಾಠದಲ್ಲಿ ಅಧ್ಯಾಹಾರವು ಬೇಕಾಗುತ್ತದೆ. 'ನಿರ್ವಿಶೇಷ ಸಿದ್ಧಿಃ' ಎಂದಿಷ್ಟೇ ಮೂಲದಲ್ಲಿದ್ದಿದ್ದರೂ ಇದ್ದಿರಬಹುದೆಂದು ಊಹಿಸುವದಕ್ಕೆಡೆಯಿದೆ.
4. 'ನನು ಚ' ಎಂಬ ಕಾ॥ ಪಾಠದಲ್ಲಿ ಚ ಹೆಚ್ಚು.
5. 'ತದಾಹ' ಕಾ॥.
6. ಕಾ॥ ಪಾಠದಲ್ಲಿ ಇದಾದ ಮೇಲೆ ಜ್ಞಾನಗುಣಸಾರತ್ವಾದಾತ್ಮನೋ ಜ್ಞಾನಮಿತಿ ವ್ಯಪದೇಶಃ । ಯಥಾ ಪ್ರಾಜ್ಞೇನ ಬ್ರಹ್ಮಣಾ ವಿಪಶ್ಚಿತಾ ಯಃ ಸರ್ವಜ್ಞಃ ಸರ್ವವಿದಿತಿ ಸರ್ವಜ್ಞೇ ಏವ ಜ್ಞಾನಗುಣಸಾರತ್ವಾತ್ ಸತ್ಯಂ ಜ್ಞಾನಮಿತಿ ವ್ಯಪದಿಶ್ಯತೇ ॥ ಎಂದಿಷ್ಟು ಭಾಗವು ಹೆಚ್ಚಾಗಿದೆ ; ಅದನ್ನು ಯಾರೋ ಆ ಸೂತ್ರದ ಭಾಷ್ಯದಿಂದ ಸೇರಿಸಿಕೊಂಡಿರಬೇಕೆಂದು ತೋರುತ್ತದೆ.

ಪಪತ್ತೇಶ್ಚ[1] । ಅತಃ ಸತ್ಯಜ್ಞಾನಾದಿಪದಾನಿ ಸ್ವಾರ್ಥಭೂತಜ್ಞಾನಾದಿವಿಶಿಷ್ಟಮೇವ ಬ್ರಹ್ಮ ಪ್ರತಿಪಾದಯನ್ತಿ ॥

(ಅರ್ಥ)

ಶೋಧಕವಾಕ್ಯಗಳು ಕೂಡ ನಿರವದ್ಯವಾದ ಸರ್ವಕಲ್ಯಾಣಗುಣಾಕರವಾದ ಪರಬ್ರಹ್ಮವನ್ನು ಶೋಧಿಸಿ (ತಿಳಿಸು)ತ್ತವೆ. ಎಲ್ಲಕ್ಕೂ ವಿರುದ್ಧವಾದ ಆಕಾರವನ್ನು ತಿಳಿಸುತ್ತವೆ ಎಂದರೂ ಆಯಾ ವಿರೋಧವೆಂಬ ಭೇದವು ತಪ್ಪುವಂತಿಲ್ಲವಾದ್ದರಿಂದ ನಿರ್ವಿಶೇಷತ್ವವು ಸಿದ್ಧವಾಗುವದಿಲ್ಲ.[2]

(ಪೂರ್ವಪಕ್ಷಿ) :- ಜ್ಞಾನಮಾತ್ರವೇ ಬ್ರಹ್ಮವು ಎಂದು ತಿಳಿಸಿದರೆ ನಿರ್ವಿಶೇಷವಾದ ಜ್ಞಾನಮಾತ್ರವೇ ಬ್ರಹ್ಮವೆಂದು ನಿಶ್ಚಿತವಾಗುವದಲ್ಲವೆ!

(ಸಿದ್ಧಾಂತಿ) :- ಹಾಗಲ್ಲ. ಏಕೆಂದರೆ ಸ್ವರೂಪವನ್ನು ಗೊತ್ತುಪಡಿಸುವ ಧರ್ಮಶಬ್ದಗಳು ಗವಾದಿಶಬ್ದಗಳಂತೆ ಧರ್ಮದ ಮೂಲಕ ಸ್ವರೂಪವನ್ನು ತಿಳಿಸಿ ಕೊಡುತ್ತವೆ. ಹಾಗೆಂದು **ಸೂತ್ರಕಾರರು** ಹೇಳಿರುತ್ತಾರೆ : 'ಆ ಗುಣವು ಸಾರವಾಗಿ ರುವದರಿಂದ ಪ್ರಾಜ್ಞನಂತೆ ಅದರಿಂದ ವ್ಯಪದೇಶ(ಮಾಡಿದೆ)'[3] (ವೇ.ಸೂ. ೨-೩-೨೯), 'ಯಾವದಾತ್ಮಭಾವಿಯಾಗಿರುವದರಿಂದ ದೋಷವಿಲ್ಲ'[4] (ವೇ.ಸೂ. ೨-೩-೩೦), ಜ್ಞಾನವೆಂಬ ಧರ್ಮದಿಂದ ಸ್ವರೂಪವನ್ನು ಗೊತ್ತುಪಡಿಸಿದಂತೆ (ಆಯಿತು), ಇಷ್ಟೇ ಹೊರತು ಜ್ಞಾನಮಾತ್ರವೇ ಬ್ರಹ್ಮವೆಂದಲ್ಲ. ಇದುಹೇಗೆ ಗೊತ್ತು? ಎಂದರೆ 'ಯಾವನು ಸರ್ವಜ್ಞನೋ ಸರ್ವವಿದನೋ' (ಮುಂ.೧-೧-೯) - ಮುಂತಾದ ಜ್ಞಾತೃತ್ವವನ್ನು ಹೇಳುವ ಶ್ರುತಿಯಿಂದ (ಗೊತ್ತಾಗುತ್ತದೆ). 'ಇವನ ಪರಶಕ್ತಿಯು ವಿವಿಧವಾಗಿಯೇ (ಇದೆಯೆಂದು) ಶ್ರುತವಾಗಿದೆ, ಸ್ವಾಭಾವಿಕವಾದ ಜ್ಞಾನಬಲಕ್ರಿಯೆಯೂ ಶ್ರುತವಾಗಿದೆ' (ಶ್ವೇ. ೬-೮), 'ಎಲೆ, ವಿಜ್ಞಾತೃವನ್ನು ಏತರಿಂದ ಅರಿತುಕೊಂಡಾನು' (ಬೃ. ೨-೪-೧೪) ಎಂದು ಮುಂತಾಗಿರುವ

1. ಬ್ರಹ್ಮಸ್ವರೂಪವನ್ನು ತಿಳಿಸುವ ವಾಕ್ಯಗಳೂ ಎಂದರ್ಥ.
2. ಸತ್ಯಕಾಮತ್ವಾದಿಗುಣಗಳನ್ನು ಹೇಳಿರುವದರಿಂದ ಅವುಗಳಿಗಿಂತ ವ್ಯತಿರಿಕ್ತವಾದ ಹೇಯ ಗುಣಗಳನ್ನು ಮಾತ್ರ ನಿಷೇಧಮಾಡಿದೆ ಎಂದು ತಿಳಿಯಬೇಕು ; ಇನ್ನು ಸತ್ಯಂ ಜ್ಞಾನಮ್ ಮುಂತಾದವು ಅನೃತಾದಿನಿಷೇಧಪರವೆನ್ನುವದಾದರೆ ಆಗ ಬ್ರಹ್ಮವು ಸರ್ವವಿಶೇಷ ವಿರುದ್ಧವಾದ ಆಕಾರವುಳ್ಳದ್ದೆಂದಾಗಿ ಆಗಲೂ ಆ ವಿಶೇಷಗಳಿಗೆ ವಿರುದ್ಧಸ್ವಭಾವವುಳ್ಳ-ದ್ದೆಂದು ಸವಿಶೇಷವನ್ನೇ ಹೇಳಿದಂತೆ ಆಗುವದು.
3. ಪರಮಾತ್ಮನಿಗೆ ಆನಂದಗುಣವು ಸಾರವಾಗಿರುವದರಿಂದ ಆನಂದವೆಂದು ಕರೆಯುವಂತೆ, ಅಥವಾ 'ಸತ್ಯಂ ಜ್ಞಾನಮನನ್ತಂ' ಎಂಬಲ್ಲಿ ಬ್ರಹ್ಮಕ್ಕೆ ಜ್ಞಾನವು ಸಾರಗುಣವಾದ್ದರಿಂದ ಅದನ್ನು ಜ್ಞಾನವೆಂದಿರುವಂತೆ, ವಿಜ್ಞಾನಗುಣಸಾರನಾದ್ದರಿಂದ ಆತ್ಮನನ್ನು ವಿಜ್ಞಾನವೆಂದಿದೆ ಎಂದುಸೂತ್ರದ ಅರ್ಥ.
4. ಗೋವುಗಳಲ್ಲಿರುವ ಗೋತ್ವದಂತೆ, ಆತ್ಮನಲ್ಲೆಲ್ಲ ಇರುವ ಧರ್ಮವಾದ್ದರಿಂದ ಆತ್ಮನನ್ನು ವಿಜ್ಞಾನವೆಂದಿದೆ.

ನೂರಾರು ಶ್ರುತಿಗಳಿಂದ ಇದು ತಿಳಿದುಬರುತ್ತದೆ ; ಏಕೆಂದರೆ ಜ್ಞಾನವೆಂಬುದು ಬರಿಯ ಧರ್ಮವಾಗಿರುತ್ತದೆ, ಒಂದು ಬರಿಯ ಧರ್ಮವನ್ನು ವಸ್ತುವೆಂದು ಪ್ರತಿಪಾದಿಸುವದು ಹೊಂದುವದೂ ಇಲ್ಲ. ಆದ್ದರಿಂದ ಸತ್ಯ, ಜ್ಞಾನ- ಮುಂತಾದ ಪದಗಳು ತಮ್ಮ ಅರ್ಥವಾದ (ಸತ್ಯತ್ವ), ಜ್ಞಾನ- ಮುಂತಾದವುಗಳಿಂದ ವಿಶಿಷ್ಟವಾಗಿರುವ ಬ್ರಹ್ಮವನ್ನೇ ಪ್ರತಿಪಾದಿಸುತ್ತವೆ.

೧೧. ತತ್ತ್ವಂಪದಗಳು ನಿರ್ವಿಶೇಷವಸ್ತು ಬೋಧಕವಲ್ಲ

(ಮೂಲ)

೨೦. ತತ್ ತ್ವಮ್ ಇತಿ ದ್ವಯೋರಪಿ ಪದಯೋಃ ಸ್ವಾರ್ಥಪ್ರಹಾಣೇನ ನಿರ್ವಿಶೇಷವಸ್ತುಸ್ವರೂಪೋಪಸ್ಥಾಪನಪರತ್ವೇ ಮುಖ್ಯಾರ್ಥಪರಿತ್ಯಾಗಶ್ಚ । ಐಕ್ಯ ತಾತ್ಪರ್ಯನಿಶ್ಚಯಾನ್ನ ಲಕ್ಷಣಾ ದೋಷಃ, 'ಸೋಽಯಂ ದೇವದತ್ತಃ' ಇತಿವತ್ । ಯಥಾ ಸೋಽಯಮ್ ಇತ್ಯತ್ರ ಸ ಇತಿಶಬ್ದೇನ[1] ದೇಶಾನ್ತರಕಾಲಾನ್ತರಸಂಬನ್ಧೀ ಪುರುಷಃ ಪ್ರತೀಯತೇ, ಅಯಮ್ ಇತಿ ಚ ಸಂನಿಹಿತದೇಶವರ್ತಮಾನಕಾಲ ಸಂಬನ್ಧೀ । ತಯೋಃ ಸಾಮಾನಾಧಿಕರಣ್ಯೇನ ಐಕ್ಯಂ ಪ್ರತೀಯತೇ । ತತ್ರ ಏಕಸ್ಯ ಯುಗಪದ್ ವಿರುದ್ಧದೇಶಕಾಲಸಂಬನ್ಧಿತಯಾ ಪ್ರತೀತಿರ್ನ ಘಟತ ಇತಿ ದ್ವಯೋರಪಿ ಪದಯೋಃ ಸ್ವರೂಪಮಾತ್ರೋಪಸ್ಥಾಪನಪರತ್ವಮ್ । ಸ್ವರೂಪಸ್ಯ ಚೈಕ್ಯಂ ಪ್ರತಿಪಾದ್ಯತ ಇತಿ ಚೇತ್ । ನೈತದೇವಮ್ । ಸೋಽಯಂ ದೇವದತ್ತ ಇತ್ಯತ್ರಾಽಪಿ ಲಕ್ಷಣಾಗನ್ಧೋ ನ ವಿದ್ಯತೇ । ವಿರೋಧಾಭಾವಾತ್ । ಏಕಸ್ಯ ಭೂತ ವರ್ತಮಾನಕ್ರಿಯಾದ್ವಯಸಂಬನ್ಧೋ ನ ವಿರುದ್ಧಃ । ದೇಶಾನ್ತರಸ್ಥಿತಿರ್ಭೂತಾ । ಸಂನಿಹಿತದೇಶಸ್ಥಿತಿರ್ವರ್ತತೇ । ಅತೋ ಭೂತವರ್ತಮಾನಕ್ರಿಯಾದ್ವಯಸಂಬನ್ಧಿ ತಯಾ ಐಕ್ಯಪ್ರತಿಪಾದನಮ್ ಅವಿರುದ್ಧಮ್ । ದೇಶದ್ವಯವಿರೋಧಶ್ಚ ಕಾಲ ಭೇದೇನ ಪರಿಹೃತಃ । ಲಕ್ಷಣಾಯಾಮಪಿ ನ ದ್ವಯೋರಪಿ ಪದಯೋರ್ಲಕ್ಷಣಾ ಸಮಾಶ್ರಯಣಮ್ ಏಕೇನೈವ ಲಕ್ಷಿತೇನ ವಿರೋಧಪರಿಹಾರಾತ್ । ಲಕ್ಷಣಾಬಾಧ ಏವೋಕ್ತಃ । ದೇಶಾನ್ತರಸಂಬನ್ಧಿತಯಾ ಭೂತಸ್ಯೈವ ಅನ್ಯದೇಶಸಂಬನ್ಧಿತಯಾ ವರ್ತಮಾನತ್ವಾವಿರೋಧಾತ್ । ಏವಮತ್ರಾಪಿ ಜಗತ್ಕಾರಣಭೂತಸ್ಯೈವ ಪರಸ್ಯ ಬ್ರಹ್ಮಣಃ ಜೀವಾನ್ತರ್ಯಾಮಿತಯಾ ಜೀವಾತ್ಮತ್ವಮ್ ಅವಿರುದ್ಧಮಿತಿ ಪ್ರತಿಪಾದಿತಮ್ । ಯಥಾಭೂತಯೋರೇವ ಹಿ ದ್ವಯೋರೈಕ್ಯಂ ಸಾಮಾನಾಧಿ-ಕರಣ್ಯೇನ ಪ್ರತೀಯತೇ । ತತ್ಪರಿತ್ಯಾಗೇನ ಸ್ವರೂಪಮಾತ್ರೈಕ್ಯಂ ನ ಸಾಮಾನಾಧಿ ಕರಣ್ಯಾ[2]ರ್ಥಃ । 'ಭಿನ್ನಪ್ರವೃತ್ತಿನಿಮಿತ್ತಾನಾಂ ಶಬ್ದಾನಾಮ್ ಏಕಸ್ಮಿನ್ನರ್ಥೇ ವೃತ್ತಿಃ ಸಾಮಾನಾಧಿಕರಣ್ಯಮ್' ಇತಿ ಹಿ ತದ್ವಿದಃ । ತಥಾಭೂತಯೋರೇವ ಐಕ್ಯಮ್ ಉಪಪಾದಿತ[3]ಮಸ್ಮಾಭಿಃ ॥

1. 'ತಚ್ಛಬ್ದೇನ' ಕಾ ॥. 2. 'ಸಾಮಾನಾಧಿಕರಣ್ಯಸ್ಯಾರ್ಥಃ' ತೆ॥ 3. 'ಸಂಪಾದಿತಮ್' ಕಾ॥.

(ಅರ್ಥ)

ತತ್ (ಅದು) ತ್ವಮ್ (ನೀನು) ಎಂಬೀ ಎರಡು ಪದಗಳೂ ತಮ್ಮ ಅರ್ಥವನ್ನು ಬಿಟ್ಟು ನಿರ್ವಿಶೇಷವಸ್ತುವಿನ ಸ್ವರೂಪವನ್ನು ನೆನಪುಕೊಡುವದರಲ್ಲಿ ತಾತ್ಪರ್ಯವುಳ್ಳವು ಎಂಬ (ಪಕ್ಷ) ದಲ್ಲಿ ಮುಖ್ಯಾರ್ಥವನ್ನು ಬಿಟ್ಟಂತೆಯೂ (ಆಗುವದು).

(ಪೂರ್ವಪಕ್ಷಿ) :- ಐಕ್ಯದಲ್ಲಿ ತಾತ್ಪರ್ಯವಿದೆ ಎಂದು ನಿಶ್ಚಯವಾಗುವದರಿಂದ (ಸರ್ವಪದಗಳಿಗೂ) ಲಕ್ಷಣೆ(ಯನ್ನುಹೇಳುವದು) ದೋಷವಲ್ಲ. 'ಅವನೇ ಈ ದೇವದತ್ತನು' ಎಂಬಂತೆಯೇ (ಇದು. ಇದರ ವಿವರ:) ಅವನೇ ಇವನು ಎಂಬಲ್ಲಿ ಅವನು ಎಂಬ ಶಬ್ದದಿಂದ ಮತ್ತೊಂದು ದೇಶದ, ಮತ್ತೊಂದು ಕಾಲದ ಸಂಬಂಧವುಳ್ಳ ಪುರುಷನೆಂದು ತೋರುತ್ತದೆ, ಇವನು ಎಂಬ (ಶಬ್ದ)ದಿಂದಾದರೊ, ಹತ್ತಿರವಿರುವ ದೇಶ ಮತ್ತು ವರ್ತಮಾನಕಾಲ- ಇವುಗಳ ಸಂಬಂಧವುಳ್ಳ (ಪುರುಷನು) ಎಂದು ತೋರುತ್ತದೆ. ಅವೆರಡು (ಶಬ್ದಗಳ) ಸಾಮಾನಾಧಿಕರಣ್ಯದಿಂದ ಒಬ್ಬನೇ (ಪುರುಷನು) ಎಂದು ತೋರುತ್ತದೆ. ಇಲ್ಲಿ ಒಬ್ಬನೇ ಒಂದೇ ಕಾಲದಲ್ಲಿ ವಿರುದ್ಧವಾದ (ಬೇರೆಬೇರೆಯ) ದೇಶಕಾಲಗಳ ಸಂಬಂಧಿಯೆಂದು ತಿಳಿಯುವದು ಹೊಂದುವದಿಲ್ಲವಾದ್ದರಿಂದ ಎರಡು ಪದಗಳೂ (ಪುರುಷ)ಸ್ವರೂಪ ಮಾತ್ರವನ್ನೇ ತಿಳಿಸಿಕೊಡುವದರಲ್ಲಿ ತಾತ್ಪರ್ಯವುಳ್ಳವಾಗಿರುತ್ತವೆ, ಸ್ವರೂಪವು ಒಂದೇ ಎಂದೂ ಪ್ರತಿಪಾದಿತವಾಗಿರುತ್ತದೆ. ಅಲ್ಲವೆ?

(ಸಿದ್ಧಾಂತಿ) :- ಹಾಗಲ್ಲ. **'ಅವನೇ ಈ ದೇವದತ್ತನು' ಎಂಬಲ್ಲಿಯೂ ಲಕ್ಷಣೆಯ ವಾಸನೆಯೂ ಇಲ್ಲ ;** ಏಕೆಂದರೆ ವಿರೋಧವಿರುವದಿಲ್ಲ. ಒಬ್ಬನಿಗೇ ಭೂತವರ್ತಮಾನವೆಂಬ ಎರಡು ಕ್ರಿಯೆಗಳ ಸಂಬಂಧವು ವಿರುದ್ಧವಲ್ಲ. ಮತ್ತೊಂದು ದೇಶದಲ್ಲಿರುವದು ಭೂತ(ಕಾಲದ್ದು), ಹತ್ತಿರವಿರುವ ದೇಶದಲ್ಲಿರುವದು (ಈಗ) ಇದ್ದುಕೊಂಡಿದೆ. ಆದ್ದರಿಂದ ಭೂತ, ವರ್ತಮಾನ- (ಹೀಗಿರುವ) ಎರಡು ಕ್ರಿಯೆಗಳ ಸಂಬಂಧಿಯಾಗಿರುವವನು ಒಬ್ಬನೇ ಎಂದು ತಿಳಿಸುವದು ವಿರುದ್ಧವಲ್ಲ. ದೇಶದ್ವಯದ ವಿರೋಧವನ್ನು ಕಾಲವು ಬೇರೆ ಬೇರೆ ಎಂಬುದರಿಂದ ಪರಿಹರಿಸಿದಂತಾಯಿತು.

ಲಕ್ಷಣೆಯನ್ನು (ಒಪ್ಪಿದರೂ) ಎರಡು ಪದಗಳಿಗೂ ಲಕ್ಷಣೆಯನ್ನು ಆಶ್ರಯಿಸಬೇಕಾದದ್ದಿಲ್ಲ ; ಏಕೆಂದರೆ ಒಂದಕ್ಕೆ ಲಕ್ಷಣೆಯನ್ನು ಹೇಳಿದರೇ ವಿರೋಧವನ್ನು ಪರಿಹರಿಸಿದಂತೆ ಆಗುತ್ತದೆ. (ಆದರೆ) ಲಕ್ಷಣೆಯು ಇಲ್ಲವೆಂದೇ (ನಾವು) ಹೇಳಿರುತ್ತೇವೆ ; ಏಕೆಂದರೆ ಒಂದು ದೇಶದ ಸಂಬಂಧಿಯಾಗಿ ಭೂತ (ಕಾಲ)ದ್ದಾಗಿರುವದೇ ಮತ್ತೊಂದು ದೇಶದ ಸಂಬಂಧಿಯಾಗಿ ವರ್ತಮಾನ(ಕಾಲ)ದ್ದಾಗಿರುವದರಲ್ಲಿ ವಿರೋಧವಿರುವದಿಲ್ಲ. ಹೀಗೆಯೇ ಇಲ್ಲಿಯೂ ಜಗತ್ಕಾರಣಭೂತವಾಗಿರುವ ಪರಬ್ರಹ್ಮವೇ ಜೀವಾಂತರ್ಯಾಮಿಯಾಗಿ ಜೀವಾತ್ಮನೆನಿಸಿರುವದು ವಿರುದ್ಧವಲ್ಲ- ಎಂದು ಪ್ರತಿಪಾದಿಸಿದ್ದಾಗಿದೆ.

ನಿಜವಾಗಿ ಹೇಗೆ ಇದ್ದುಕೊಂಡಿರುವವೋ ಹಾಗಿರುವ ಎರಡಕ್ಕೇ ಅಲ್ಲವೆ, ಸಾಮಾನಾಧಿಕರಣ್ಯದಿಂದ ಐಕ್ಯವು ತಿಳಿದುಬರುವದು? ಅದನ್ನು ಬಿಟ್ಟು[1] ಸ್ವರೂಪ ಮಾತ್ರವು ಒಂದೇ ಎಂಬುದು ಸಾಮಾನಾಧಿಕರಣ್ಯದ ಅರ್ಥವಲ್ಲ. 'ಬೇರೆಬೇರೆಯ ಪ್ರವೃತ್ತಿನಿಮಿತ್ತವುಳ್ಳ ಶಬ್ದಗಳಿಗೆ ಒಂದೇ ಅರ್ಥದಲ್ಲಿ ವೃತ್ತಿ(ಯಿರುವದೇ) **ಸಾಮಾನಾಧಿಕರಣ್ಯವು** ಎಂದಲ್ಲವೆ, ಆ (ಸಾಮಾನಾಧಿಕರಣ್ಯವನ್ನು) ಬಲ್ಲವರು (ಹೇಳುತ್ತಾರೆ)? ಹಾಗಿರುವ (ಎರಡಕ್ಕೇ) ನಾವು ಐಕ್ಯವನ್ನು ಹೊಂದಿಸಿರುತ್ತೇವೆ.[2]

೧೨. ಪೂರ್ವಪಕ್ಷಿಯ ವ್ಯಾಖ್ಯಾನವು ಉಪಕ್ರಮವಿರುದ್ಧ

(ಮೂಲ)

೨೧. ಉಪಕ್ರಮವಿರೋಧ್ಯುಪಸಂಹಾರವಾಕ್ಯತಾತ್ಪರ್ಯನಿಶ್ಚಯಶ್ಚ ನ ಘಟತೇ । ಉಪಕ್ರಮೇ ಹಿ 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯ' (ಛಾಂ. ೬-೨-೩) ಇತ್ಯಾದಿನಾ ಸತ್ಯಸಂಕಲ್ಪತ್ವಂ ಜಗದೇಕಕಾರಣತ್ವಮಪ್ಯುಕ್ತಮ್ । ತದ್ವಿರೋಧಿ ಚ ಅವಿದ್ಯಾಶ್ರಯತ್ವಾದಿ ಬ್ರಹ್ಮಣಃ ॥

(ಅರ್ಥ)

ಉಪಕ್ರಮಕ್ಕೆ ವಿರೋಧಿಯಾಗಿ ಉಪಸಂಹಾರವಾಕ್ಯತಾತ್ಪರ್ಯವನ್ನು ನಿಶ್ಚಯಿಸುವದೂ ಕೂಡುವದಿಲ್ಲ. ಉಪಕ್ರಮದಲ್ಲಿ 'ಅದು ಬಹುವಾಗುವೆನು, ಹುಟ್ಟುವೆನು' (ಛಾಂ. ೬-೨-೩) ಎಂದು ಮುಂತಾದ (ವಾಕ್ಯ)ದಿಂದ ಸತ್ಯಸಂಕಲ್ಪತ್ವವನ್ನು ಜಗತ್ತಿಗೆ (ಅದು) ಒಂದೇ ಕಾರಣವೆಂದೂ ಹೇಳಿರುತ್ತದೆ ; ಬ್ರಹ್ಮವು ಅವಿದ್ಯೆಗೆ ಆಶ್ರಯವಾಗಿರುತ್ತದೆ ಎಂದು ಮುಂತಾಗಿ (ಹೇಳುವದು) ಅದಕ್ಕೆ ವಿರುದ್ಧವೂ ಆಗಿದೆ.

೧೩. ಶಬ್ದವು ನಿರ್ವಿಶೇಷವಸ್ತುಬೋಧಕವಲ್ಲ

(ಮೂಲ)

೨೨. ಅಪಿ ಚ ಅರ್ಥಭೇದತತ್ಸಂಸರ್ಗವಿಶೇಷಬೋಧನಕೃತಪದವಾಕ್ಯಸ್ವರೂಪತಾಲಬ್ಧಪ್ರಮಾಣಭಾವಸ್ಯ ಶಬ್ದಸ್ಯ ನಿರ್ವಿಶೇಷವಸ್ತುಬೋಧನಾಸಾಮರ್ಥ್ಯಾತ್ ನ ನಿರ್ವಿಶೇಷವಸ್ತುನಿ ಶಬ್ದಃ ಪ್ರಮಾಣಮ್ । ನಿರ್ವಿಶೇಷೇತ್ಯಾದಿ ಶಬ್ದಾಸ್ತು ಕೇನಚಿದ್ವಿಶೇಷೇಣ ವಿಶಿಷ್ಟತಯಾಽವಗತಸ್ಯ ವಸ್ತುನೋ ವಸ್ತ್ವನ್ತರಾವಗತವಿಶೇಷನಿಷೇಧಕತಯಾ[3] ಬೋಧಕಾಃ । ಇತರಥಾ ತೇಷಾಮಪಿ ಅನವಬೋಧಕತ್ವಮೇವ । ಪ್ರಕೃತಿಪ್ರತ್ಯಯರೂಪೇಣ ಪದಸ್ಯೈವ ಅನೇಕವಿಶೇಷಗರ್ಭತ್ವಾತ್[4] । ಅನೇಕಪದಾರ್ಥಸಂಸರ್ಗಬೋಧಕತ್ವಾಚ್ಚ ವಾಕ್ಯಸ್ಯ ॥

---

1. ಹೇಗಿದೆಯೋ, ಯಾವ ವಿಶೇಷಣದಿಂದ ಕೂಡಿದೆಯೋ, ಆ ವಿಶೇಷಣದಿಂದ ಕೂಡಿದೆ ಎಂಬುದನ್ನು ಬಿಟ್ಟು. 2. ಜಗತ್ಕಾರಣತ್ವ, ಜೀವಾಂತರ್ಯಾಮಿತ್ವ- ಎಂಬ ಎರಡು ವಿಶೇಷಣಗಳಿಂದ ಕೂಡಿರುವ ಶಬ್ದಗಳಿಗೇ ಏಕಾರ್ಥವು ಕೂಡುವಂತೆ ಹೇಳಿದ್ದೇವೆ.
3. 'ನಿಷೇಧಪರತಯಾ' ತೆ॥ 4. 'ಗರ್ಭಿತತ್ವಾತ್' ಕಾ॥

(ಅರ್ಥ)

ಇದಲ್ಲದೆ **ಬೇರೆಬೇರೆ ಪದಾರ್ಥಗಳನ್ನೂ ಅವುಗಳ ಆಯಾ ಸಂಸರ್ಗವನ್ನೂ ಬೋಧಿಸುವದರಿಂದ ಪದ, ವಾಕ್ಯ - ಎಂಬ ಸ್ವರೂಪವಾಗಿ[1] ಪ್ರಾಮಾಣ್ಯವನ್ನು ಹೊಂದಿರುವ[2] ಶಬ್ದಕ್ಕೆ ನಿರ್ವಿಶೇಷವಸ್ತುವನ್ನು ತಿಳಿಸಿಕೊಡುವ ಶಕ್ತಿಯಿಲ್ಲವಾದ್ದರಿಂದ ನಿರ್ವಿಶೇಷವಸ್ತುವಿನಲ್ಲಿ ಶಬ್ದವು ಪ್ರಮಾಣವಲ್ಲ.** 'ನಿರ್ವಿಶೇಷ' ಮುಂತಾದ ಶಬ್ದಗಳಾದರೋ ಯಾವದಾದರೊಂದು ವಿಶೇಷದಿಂದೊಡಗೂಡಿದ್ದೆಂದು ಗೊತ್ತಾಗಿರುವ ವಸ್ತುವನ್ನು ಮತ್ತೊಂದು ವಸ್ತುವಿನಲ್ಲಿರುವ ವಿಶೇಷವನ್ನು ಅಲ್ಲಗಳೆಯುವದರಿಂದ ತಿಳಿಸುತ್ತದೆ. ಹಾಗಿಲ್ಲದಿದ್ದರೆ ಅವೂ (ಅದನ್ನು) ತಿಳಿಸುವಂತೆಯೇ ಇಲ್ಲ.[3] (ಏಕೆಂದರೆ) ಪದವೇ ಪ್ರಕೃತಿ ಪ್ರತ್ಯಯಗಳ ರೂಪದಿಂದ ಅನೇಕ ವಿಶೇಷಗಳನ್ನೊಳಗೊಂಡಿರುತ್ತದೆ; ಮತ್ತು ವಾಕ್ಯವು ಅನೇಕ ಪದಾರ್ಥಗಳ ಸಂಸರ್ಗವನ್ನು ಬೋಧಿಸುತ್ತದೆ- (ಹೀಗೆಂದು ನಿಶ್ಚಯಿಸಬೇಕು).

೧೪. ಶಬ್ದವು ವಿಶೇಷನಿರಾಕರಣದ್ವಾರದಿಂದ ಆತ್ಮನಿಗೆ ಪ್ರಮಾಣವೆಂಬ ವಾದದ ಖಂಡನೆ

(ಮೂಲ)

೨೩. ಅಥ ಸ್ಯಾತ್ । ನಾಸ್ಮಾಭಿರ್ನಿರ್ವಿಶೇಷೇ ಸ್ವಯಮ್ಮೃಕಾಶೇ ವಸ್ತುನಿ ಶಬ್ದಃ ಪ್ರಮಾಣಮಿತ್ಯುಚ್ಯತೇ । ಸ್ವತಃಸಿದ್ಧಸ್ಯ ಪ್ರಮಾಣಾನಪೇಕ್ಷತ್ವಾತ್ । ಸರ್ವೈಃ ಶಬ್ದೈಸ್ತದುಪರಾಗವಿಶೇಷಾ ಜ್ಞಾತೃತ್ವಾದಯಃ ಸರ್ವೇ ನಿರಸ್ಯನ್ತೇ[4] । ಸರ್ವೇಷು ವಿಶೇಷೇಷು ನಿವೃತ್ತೇಷು ವಸ್ತುಮಾತ್ರಮನವಚ್ಛಿನ್ನಂ ಸ್ವಯಂಪ್ರಕಾಶಂ ಸ್ವತ ಏವಾऽವತಿಷ್ಠತ ಇತಿ । ನೈತದೇವಮ್ । ಕೇನ ಶಬ್ದೇನ ತದ್ವಸ್ತು ನಿರ್ದಿಶ್ಯ ತದ್ಗತಾ ವಿಶೇಷಾ ನಿರಸ್ಯನ್ತೇ ? ಜ್ಞಪ್ತಿಮಾತ್ರಶಬ್ದೇನೇತಿ ಚೇತ್ । ನ । ಸೋಽಪಿ ಸವಿಶೇಷಮೇವ ವಸ್ತ್ವವಲಮ್ಬತೇ । ಪ್ರಕೃತಿಪ್ರತ್ಯಯರೂಪೇಣ ವಿಶೇಷಗರ್ಭತ್ವಾದೇವ[5] । 'ಜ್ಞಾ ಅವಬೋಧನೇ' ಇತಿಸಕರ್ಮಕಃ ಸಕರ್ತೃಕಃ ಕ್ರಿಯಾ ವಿಶೇಷಃ ಕ್ರಿಯಾನ್ತರವ್ಯಾವರ್ತಕ ಸ್ವಭಾವವಿಶೇಷಶ್ಚಪ್ರಕೃತ್ಯಾ ಅವಗಮ್ಯತೇ ಪ್ರತ್ಯಯೇನ ಚ ಲಿಙ್ಗಸಙ್ಖ್ಯಾದಯಃ ।

1. ಪದವು ಒಂದೊಂದು ಪದಾರ್ಥವನ್ನು ಬೋಧಿಸುವದು, ವಾಕ್ಯವು ಪದಾರ್ಥಗಳ ಒಂದಾನೊಂದು ಸಂಸರ್ಗವನ್ನು ಬೋಧಿಸುವದು.
2. ಪದಾರ್ಥವನ್ನಾಗಲಿ ಪದಾರ್ಥಸಂಸರ್ಗವನ್ನಾಗಲಿ ಬೋಧಿಸುವದರಿಂದಲೇ ಶಬ್ದವು ಪ್ರಮಾಣವೆನಿಸಿದೆ ಎಂದರ್ಥ.
3. ಶಬ್ದವು ಬೋಧಕವಾಗುವದಕ್ಕೆ ಒಂದು ವಿಶೇಷವನ್ನು ತಿಳಿಸಲೇಬೇಕಾಗಿರುತ್ತದೆ, ಇಲ್ಲದಿದ್ದರೆ ಅದಕ್ಕೆ ಬೋಧಕತ್ವವೇ ಬರುವದಿಲ್ಲ ಎಂದು ಭಾವ.
4. 'ನಿವರ್ತ್ಯನ್ತೇ' ತೆ॥ 5. 'ವಿಶೇಷಗರ್ಭಿತತ್ವಾತ್' ಕಾ॥

ಸ್ವತಃಸಿದ್ಧಾವಪಿ ಏತತ್ಸ್ವಭಾವ ವಿಶೇಷವಿರಹೇ ಸಿದ್ಧಿರೇವ ನ ಸ್ಯಾತ್ । ಅನನ್ಯಸಾಧನ[1] ಸ್ವಭಾವತಯಾ ಹಿ ಜ್ಞಪ್ತೇಃ ಸ್ವತಃಸಿದ್ಧಿರುಚ್ಯತೇ । ಬ್ರಹ್ಮಸ್ವರೂಪಂ ಕೃತ್ಸ್ನಂ ಸರ್ವದಾ ಸ್ವಯಮೇವ ಪ್ರಕಾಶತೇ ಚೇತ್, ನ ತಸ್ಮಿನ್ನನ್ಯಧರ್ಮಾಧ್ಯಾಸಃ ಸಂಭವತಿ । ನ ಹಿ ರಜ್ಜು ಸ್ವರೂಪೇಽವಭಾಸಮಾನೇ ಸರ್ಪತ್ವಾದಿರಧ್ಯಸ್ಯತೇ । ಅತ ಏವ ಹಿ ಭವದ್ಭಿರಾಚ್ಛಾದಿಕಾ ಅವಿದ್ಯಾ ಅಭ್ಯುಪಗಮ್ಯತೇ । ತತಶ್ಚ ಶಾಸ್ತ್ರೀಯನಿವರ್ತಕಜ್ಞಾನಸ್ಯ ಬ್ರಹ್ಮಣಿ ತಿರೋಹಿತಾಂಶೋ ವಿಷಯಃ । ಅನ್ಯಥಾ ತಸ್ಯ ನಿವರ್ತಕತ್ವಂ ಚ ನ ಸ್ಯಾತ್ । ಅಧಿಷ್ಠಾನಾತಿರೇಕಿರಜ್ಜುತ್ವಪ್ರಕಾಶನೇನ ಹಿ ಸರ್ಪತ್ವಂ ಬಾಧ್ಯತೇ । ಏಕಶ್ಚೇದ್ ವಿಶೇಷೋ ಜ್ಞಾನಮಾತ್ರೇ ವಸ್ತುನಿ ಶಬ್ದೇನ ಅಭಿಧೀಯತೇ । ಸ ಚ ಬ್ರಹ್ಮವಿಶೇಷಣಂ ಭವತೀತಿ ಸರ್ವಶ್ರುತಿಪ್ರತಿಪಾದಿತಸರ್ವವಿಶೇಷಣವಿಶಿಷ್ಟಂ ಬ್ರಹ್ಮ ಭವತೀತಿ । ಅತಃ ಪ್ರಾಮಾಣಿಕಾನಾಂ ನ ಕೇನಾಽಪಿ ಪ್ರಕಾರೇಣ[2] ನಿರ್ವಿಶೇಷವಸ್ತುಸಿದ್ಧಿಃ ॥

(ಅರ್ಥ)

ಇನ್ನು (ಪೂರ್ವಪಕ್ಷಿಗಳ ಅಭಿಪ್ರಾಯವು) ಹೀಗಿರಬಹುದು : ಸ್ವಯಂ ಪ್ರಕಾಶವಾಗಿರುವ ನಿರ್ವಿಶೇಷವಸ್ತುವಿನ (ವಿಷಯ)ದಲ್ಲಿ ಶಬ್ದವು ಪ್ರಮಾಣವೆಂದು ನಾವು ಹೇಳುತ್ತಿಲ್ಲ ; ಏಕೆಂದರೆ ಸ್ವತಃಸಿದ್ಧವಾದದ್ದಕ್ಕೆ ಪ್ರಮಾಣದ ಬಯಕೆಯೇ ಇರುವದಿಲ್ಲ. ಎಲ್ಲಾ ಶಬ್ದಗಳೂ ಅದರ ಸಂಬಂಧವಿಶೇಷಗಳಾದ[3] ಜ್ಞಾತೃತ್ವಾದಿ ಗಳನ್ನೆಲ್ಲ ತೊಲಗಿಸುತ್ತವೆ. ಎಲ್ಲಾ ವಿಶೇಷಗಳೂ ತೊಲಗಲಾಗಿ ಯಾವ ಆವಚ್ಛೇದ ಕವೂ ಇಲ್ಲದ ಸ್ವಯಂಪ್ರಕಾಶವಾದ ವಸ್ತುವೊಂದೇ ತಾನೇ ಉಳಿದುಕೊಳ್ಳುತ್ತದೆ.

ಇದು ಹೀಗಲ್ಲ. ಯಾವ ಶಬ್ದವು ಆ ವಸ್ತುವನ್ನು ತಿಳಿಸಿ ಅದರಲ್ಲಿರುವ ವಿಶೇಷಗಳನ್ನು ತೊಲಗಿಸುತ್ತದೆ? ಜ್ಞಪ್ತಿಮಾತ್ರವೆಂಬ ಶಬ್ದವು ಎಂದರೆ, ಅದೂ ಸವಿಶೇಷವಸ್ತುವನ್ನೇ ಆವಲಂಬಿಸಿರುತ್ತದೆ ; ಏಕೆಂದರೆ (ಅದೂ) ಪ್ರಕೃತಿಪ್ರತ್ಯಯ ರೂಪದಿಂದ ವಿಶೇಷಗಳನ್ನೊಳಗೊಂಡೇ ಇರುತ್ತದೆ. 'ಜ್ಞಾ ಅವಬೋಧನೇ' (ಜ್ಞಾ = ತಿಳಿ) ಎಂದು (ಧಾತ್ವರ್ಥವಿರುವದರಿಂದ) ಸಕರ್ಮಕವೂ ಸಕರ್ತೃಕವೂ ಆಗಿರುವ ಒಂದಾನೊಂದು ಕ್ರಿಯೆಯೂ ಮತ್ತೊಂದು ಕ್ರಿಯೆಯನ್ನು ತಪ್ಪಿಸುವ ಸ್ವಭಾವವಿಶೇಷವೂ ಇರುವ (ಕ್ರಿಯೆಯು ಜ್ಞಾನಶಬ್ದದ) ಪ್ರಕೃತಿಯಿಂದ ತಿಳಿದು ಬರುತ್ತದೆ ; ಪ್ರತ್ಯಯದಿಂದಲೋ ಲಿಂಗ, ಸಂಖ್ಯೆ- ಮುಂತಾದವುಗಳು (ತಿಳಿದು ಬರುತ್ತವೆ). ಸ್ವತಃಸಿದ್ಧವಾದರೂ ಇಂಥ ಸ್ವಭಾವವಿಶೇಷವಿಲ್ಲದ್ದಾದರೆ (ಅದರ)

---

1. 'ಅನ್ಯಸಾಧನ' ಎಂದು ತೆ॥.
2. 'ಪ್ರಮಾಣೇನ' ತೆ॥
3. ಅದರಲ್ಲಿ ಅಧ್ಯಸ್ತವಾಗಿರುವ ಎಂದರ್ಥ.

ಸಿದ್ಧಿಯೇ ಆಗಲಾರದು. (ತನಗೆ) ಮತ್ತೊಂದು ಸಾಧನವಿಲ್ಲವೆಂಬ[1] ಸ್ವಭಾವವಿರುವದರಿಂದಲೇ ಅಲ್ಲವೆ, ಜ್ಞಪ್ತಿಯು ಸ್ವತಃಸಿದ್ಧವೆನ್ನುವದು?

ಬ್ರಹ್ಮಸ್ವಭಾವವು ಎಲ್ಲವೂ ಯಾವಾಗಲೂ ತಾನೇ ಬೆಳಗುತ್ತಿರುವದಾದರೆ ಅದರಲ್ಲಿ ಮತ್ತೊಂದು ಧರ್ಮವನ್ನು ಅಧ್ಯಾಸಮಾಡುವದು ಆಗಲಾರದು. ಹಗ್ಗದ ಸ್ವರೂಪವು ಕಾಣುತ್ತಲೇ ಇದ್ದರೆ (ಅದರಲ್ಲಿ) ಸರ್ಪತ್ವಾದಿಗಳನ್ನು ಅಧ್ಯಾಸ ಮಾಡುವದಿಲ್ಲವಷ್ಟೆ? ಆದ್ದರಿಂದಲೇ ಅಲ್ಲವೆ, ನೀವುಗಳು (ಬ್ರಹ್ಮವನ್ನು) ಮುಚ್ಚಿಕೊಂಡಿರುವ **ಅವಿದ್ಯೆಯನ್ನು**[2] ಅಂಗೀಕರಿಸಿರುತ್ತೀರಿ? ಆದ್ದರಿಂದ ಶಾಸ್ತ್ರದಿಂದಾಗುವ ನಿವರ್ತಕಜ್ಞಾನಕ್ಕೆ ಬ್ರಹ್ಮದಲ್ಲಿ ಮರೆಯಾಗಿರುವ ಅಂಶವೇ ವಿಷಯವು ; ಹಾಗಿಲ್ಲದಿದ್ದರೆ ಆ (ಜ್ಞಾನವು) ನಿವರ್ತಕವಾಗಲಾರದು. ಅಧಿಷ್ಠಾನಕ್ಕಿಂತ ಬೇರೆಯಾದ ರಜ್ಜುತ್ವವನ್ನು ತಿಳಿಸುವದರಿಂದಲ್ಲವೆ, ಸರ್ಪತ್ವವು ಬಾಧಿತವಾಗುವದು[3]? ಜ್ಞಾನಮಾತ್ರವಾದ ವಸ್ತುವಿನಲ್ಲಿ (ಹೀಗೆ) ಒಂದು ವಿಶೇಷವನ್ನು ಶಬ್ದವು ತಿಳಿಸಬಹುದಾದರೆ, ಅದು ಬ್ರಹ್ಮಕ್ಕೆ ವಿಶೇಷಣವಾಗುತ್ತದೆಯಾದ್ದರಿಂದ ಬ್ರಹ್ಮವು ಸರ್ವಶ್ರುತಿಗಳಲ್ಲಿಯೂ ಹೇಳುವ ಸರ್ವವಿಶೇಷಣಗಳಿಂದಲೂ ವಿಶಿಷ್ಟವಾಗಬಹುದಾಗುತ್ತದೆ.[4] ಆದ್ದರಿಂದ ಪ್ರಾಮಾಣಿಕರ (ಮತದಲ್ಲಿ) ಯಾವ ಪ್ರಕಾರದಿಂದಲೂ[5] ನಿರ್ವಿಶೇಷವಸ್ತುವಿನ ಸಿದ್ಧಿ(ಯಾಗುವ)ಹಾಗಿಲ್ಲ.

೧೫. ನಿರ್ವಿಕಲ್ಪಪ್ರತ್ಯಕ್ಷದಿಂದ ನಿರ್ವಿಶೇಷವಸ್ತು ಸಿದ್ಧಿಯಿಲ್ಲ

(ಮೂಲ)

೨೪. ನಿರ್ವಿಕಲ್ಪಕಪ್ರತ್ಯಕ್ಷೇಽಪಿ ಸವಿಶೇಷಮೇವ ವಸ್ತು ಪ್ರತೀಯತೇ । ಅನ್ಯಥಾ ಸವಿಕಲ್ಪಕೇ ಸೋಽಯಮ್ ಇತಿ ಪೂರ್ವಾವಗತಪ್ರಕಾರವಿಶಿಷ್ಟಪ್ರತೀತ್ಯನುಪಪತ್ತೇಃ[6] । ವಸ್ತುಸಂಸ್ಥಾನವಿಶೇಷರೂಪತ್ವಾದ್ ಗೋತ್ವಾದೇಃ, ನಿರ್ವಿಕಲ್ಪಕ

---

1. 'ಅನ್ಯಸಾಧನ' ಎಂಬ ತೆ॥ ಪಾಠಕ್ಕೆ 'ಮತ್ತೊಂದನ್ನು ಸಾಧಿಸುವದೆಂಬ' ಎಂದು ಅನುವಾದ. ಇದಕ್ಕಿಂತ 'ಅನನ್ಯ' ಎಂಬ ಕಾ॥ ಪಾಠವೇ ಮೇಲು.
2. ಇದೇ ಕೆಲವರು ಶಾಂಕರವೇದಾಂತಿಗಳು ಒಪ್ಪಿರುವ **ಮೂಲಾವಿದ್ಯೆ.**
3. 'ಇದು ಹಾವು' ಎಂಬ ಭ್ರಾಂತಿಯಲ್ಲಿ 'ಇದು' ಎಂಬುದು ಅಧಿಷ್ಠಾನವು ; ರಜ್ಜುತ್ವ (ಹಗ್ಗವಾಗಿರುವಿಕೆ) ಎಂಬುದು ಅದಕ್ಕಿಂತ ಬೇರೆ. 4. ಬ್ರಹ್ಮವು ಜ್ಞಾಪ್ಯವಾಗುವದಕ್ಕೂ ಅದರ ಅಧ್ಯಾಸವು ನಿವೃತ್ತಿಯಾಗುವದಕ್ಕೂ ಒಂದು ವಿಶೇಷವನ್ನಾದರೂ ಒಪ್ಪಬೇಕು; ಆಗ ಎಲ್ಲವನ್ನೂ ಒಪ್ಪುವದಕ್ಕೆ ಅಡ್ಡಿಯೇನು? 5. 'ಕೇನಾಪಿ ಪ್ರಮಾಣೇನ' ಎಂಬ ಪಾಠಕ್ಕೆ ಯಾವ ಪ್ರಮಾಣದಿಂದಲೂ ಎಂದರ್ಥ ; ಮುಂದೆ ನಿರ್ವಿಕಲ್ಪಕಪ್ರತ್ಯಕ್ಷದಿಂದ ನಿರ್ವಿಶೇಷಸಿದ್ಧಿಯನ್ನು ಶಂಕಿಸುವದರಿಂದ ಹೀಗೆ ಪಾಠಾಂತರವನ್ನು ಯಾರೋ ಕಲ್ಪಿಸಿರಬಹುದು. ಆದರೆ ಪ್ರಕೃತಕ್ಕೆ ಶಬ್ದದಿಂದ ಯಾವ ಪ್ರಕಾರದಿಂದಲೂ ನಿರ್ವಿಶೇಷವು ಸಿದ್ಧವಾಗುವದಿಲ್ಲ ಎಂದಿಷ್ಟೇ ಹೇಳಿದರೆ ಸಾಕೆಂತ ತೋರುತ್ತದೆ. 6. 'ಪ್ರತ್ಯಯಾನುಪಪತ್ತೇಃ' ಕಾ॥

ದಶಾಯಾಮಪಿ ಸಸಂಸ್ಥಾನಮೇವ ವಸ್ತು ಇತ್ಥಮಿತಿ ಪ್ರತೀಯತೇ । ದ್ವಿತೀಯಾದಿ ಪ್ರತ್ಯಯೇಷು ತಸ್ಯೈವ ಸಂಸ್ಥಾನವಿಶೇಷಸ್ಯ ಅನೇಕವಸ್ತುನಿಷ್ಠತಾಮಾತ್ರಂ ಪ್ರತೀಯತೇ । ಸಂಸ್ಥಾನರೂಪಪ್ರಕಾರಾಖ್ಯಸ್ಯ ಪದಾರ್ಥಸ್ಯ ಅನೇಕವಸ್ತುನಿಷ್ಠತಯಾ ಅನೇಕವಸ್ತು ವಿಶೇಷಣತ್ವಂ ದ್ವಿತೀಯಾದಿಪ್ರತ್ಯಯಾವಗಮ್ಯಮ್ ಇತಿ ದ್ವಿತೀಯಾದಿ ಪ್ರತ್ಯಯಾಃ ಸವಿಕಲ್ಪಕಾ ಇತ್ಯುಚ್ಯನ್ತೇ । ಅತ ಏವ ಏಕಸ್ಯ ಪದಾರ್ಥಸ್ಯ ಭಿನ್ನಾಭಿನ್ನರೂಪೇಣ ವಿರುದ್ಧಂ ದ್ವ್ಯಾತ್ಮಕತ್ವಂ ಪ್ರತ್ಯುಕ್ತಮ್ । ಸಂಸ್ಥಾನಸ್ಯ ಸಂಸ್ಥಾನಿನಃ ಪ್ರಕಾರತಯಾ ಪದಾರ್ಥಾನ್ತರತ್ವಮ್ । ಪ್ರಕಾರತ್ವಾದೇವ ಪೃಥಕ್ಸಿದ್ಧ್ಯನರ್ಹತ್ವಂ ಪೃಥಗನುಪಲಮ್ಭಶ್ಚೇತಿ ನ ದ್ವ್ಯಾತ್ಮಕತ್ವಸಿದ್ಧಿಃ ॥

(ಅರ್ಥ)

ನಿರ್ವಿಕಲ್ಪಕಪ್ರತ್ಯಕ್ಷದಲ್ಲಿಯೂ ಸವಿಶೇಷವಾಗಿಯೇ ವಸ್ತುವು ತೋರುತ್ತದೆ ; ಏಕೆಂದರೆ ಹಾಗಿಲ್ಲದೆ ಇದ್ದರೆ ಸವಿಕಲ್ಪಕ(ಪ್ರತ್ಯಕ್ಷ)ದಲ್ಲಿ ಅದೇ ಇದು ಎಂದು ಹಿಂದೆ ತಿಳಿದಿದ್ದ ಪ್ರಕಾರದಿಂದ ವಿಶಿಷ್ಟವಾಗಿರುವ (ವಸ್ತುವೆಂಬ) ಪ್ರತೀತಿಯು ಆಗಲಾರದಾಗುವದು. ಗೋತ್ವವೇ ಮುಂತಾದದ್ದು ವಸ್ತುವಿನ ಸಂಸ್ಥಾನವಿಶೇಷರೂಪವಾಗಿರುವದಾದ್ದರಿಂದ **ನಿರ್ವಿಕಲ್ಪಕದೆಶೆಯಲ್ಲಿಯೂ ಸಂಸ್ಥಾನಸಹಿತವಾಗಿಯೇ ವಸ್ತು ಇಂಥದ್ದು ಎಂದು ತೋರುತ್ತದೆ.**[1] ಎರಡನೆಯದೇ ಮುಂತಾದ ಪ್ರತ್ಯಯಗಳಲ್ಲಿ (ಯಾದರೋ) ಅದೇ ಸಂಸ್ಥಾನವಿಶೇಷವು ಅನೇಕವಸ್ತುಗಳಲ್ಲಿದ್ದುಕೊಂಡಿದೆ ಎಂದು ಮಾತ್ರ ತೋರುತ್ತದೆ. ಸಂಸ್ಥಾನರೂಪವಾದ **ಪ್ರಕಾರ**ವೆಂಬ ಪದಾರ್ಥವು ಅನೇಕ ವಸ್ತುಗಳಲ್ಲಿರುವದಾಗಿ ಅನೇಕವಸ್ತುಗಳಿಗೆ ವಿಶೇಷಣವೆಂಬುದು ಎರಡನೆಯದೇ ಮುಂತಾದ ಪ್ರತ್ಯಯಗಳಿಂದ ಗೊತ್ತಾಗುವದರಿಂದ (ಆ) ಎರಡನೆಯದೇ ಮುಂತಾದ ಪ್ರತ್ಯಯಗಳು **ಸವಿಕಲ್ಪಕ**ವೆನಿಸುವವು.[2]

ಈ (ಕಾರಣ)ದಿಂದಲೇ ಒಂದೇ ಪದಾರ್ಥಕ್ಕೆ **ಭಿನ್ನಾಭಿನ್ನ**ರೂಪದಿಂದ ವಿರುದ್ಧವಾದ ದ್ವಿರೂಪತ್ವವನ್ನು ತಿರಸ್ಕರಿಸಿದಂತೆ ಆಯಿತು.[3] ಸಂಸ್ಥಾನವು ಸಂಸ್ಥಾನಿಗೆ ಪ್ರಕಾರವಾಗಿರುವದರಿಂದ (ಅದು) ಮತ್ತೊಂದು ಪದಾರ್ಥವೆನಿಸಿರುತ್ತದೆ ;

1. ಮೊದಲು ನೋಡಿದಾಗ ಇಂಥದ್ದೆಂಬ ವಿಶೇಷವು ಸ್ಫುಟವಾಗಿ ತೋರದ್ದು **ನಿರ್ವಿಕಲ್ಪಕ ಪ್ರತ್ಯಕ್ಷವು.** ನಿರ್ವಿಕಲ್ಪಕಪ್ರತ್ಯಕ್ಷಕ್ಕೆ ಯಾವ ವಿಶೇಷವೂ ಇಲ್ಲದ್ದೇ ವಿಷಯವೆಂದು ಬೌದ್ಧಾದಿಗಳೆನ್ನುವರು; ಆದರೆ ಅದು ಅನುಭವವಿರುದ್ಧ, ಆಗಲೂ ವಸ್ತು 'ಇದ್ದು ಇಂಥದ್ದು' ಎಂಬ ಒಂದಾನೊಂದು ಸಂಸ್ಥಾನ (ಆಕಾರ)ವಿಶಿಷ್ಟವಾಗಿಯೇ ತೋರುತ್ತದೆ.
2. ಇಷ್ಟೇ ಹೊರತು ಯಾವ ವಿಶೇಷವೂ ಇಲ್ಲದ ವಸ್ತುವನ್ನು ಹೇಳುವ 'ನಿರ್ವಿಕಲ್ಪಕ' ಪ್ರತ್ಯಕ್ಷವೆಂಬುದೇ ಇಲ್ಲ.
3. ಪ್ರಕಾರಪ್ರಕಾರಿರೂಪದ ದ್ವಿರೂಪತ್ವವನ್ನು ಒಪ್ಪಬಹುದು ; ಭಿನ್ನಾಭಿನ್ನರೂಪವಾದ ದ್ವಿಪ್ರಕಾರತ್ವವನ್ನು ಒಪ್ಪುವದಕ್ಕಾಗುವದಿಲ್ಲ, ಏಕೆಂದರೆ ಭೇದಾಭೇದವೆಂಬುದು ವಿರುದ್ಧ ರೂಪವಾಗಿರುತ್ತದೆ.

ಪ್ರಕಾರವಾದ್ದರಿಂದಲೇ ಬೇರೆಯಾಗಿ ಸಿದ್ಧವಾಗುವದಕ್ಕೆ ತಕ್ಕದ್ದಾಗಿರುವದಿಲ್ಲ, ಬೇರೆಯಾಗಿ ಕಾಣಬರುವದೂ ಇಲ್ಲ ; ಆದ್ದರಿಂದ (ಇಲ್ಲಿ ಭಿನ್ನಾಭಿನ್ನರೂಪ) ದ್ವ್ಯಾತ್ಮಕತ್ವವು ಸಿದ್ಧವಾಗುವದಿಲ್ಲ.[1]

೧೬. ಭೇದನಿರಾಸಕವೇದಾಂತವಚನಗಳೇ ಇಲ್ಲ

ವಾಚಾರಂಭಣಶ್ರುತಿಯು ನಿರ್ವಿಶೇಷಪರವಲ್ಲ

(ಮೂಲ)

೨೫. ಅಪಿ ಚ ನಿರ್ವಿಶೇಷವಸ್ತುವಾದಿನಾ ಸ್ವಯಮ್ಭ್ಯುಪಾಶೇ ವಸ್ತುನಿ ತದುಪರಾಗವಿಶೇಷಾಃ ಸರ್ವೈಃ ಶಬ್ದೈ[2]ರ್ನಿಷಿಧ್ಯನ್ತ ಇತಿ ವದತಾ ಕೇ ತೇ ಶಬ್ದಾ ನಿಷೇಧಕಾ ಇತಿ ವಕ್ತವ್ಯಮ್ । 'ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್' (ಛಾಂ. ೬-೧-೪) ಇತಿ ವಿಕಾರನಾಮಧೇಯ ಯೋರ್ವಾಚಾರಮ್ಭಣಮಾತ್ರತ್ವಾತ್ ಯತ್ತತ್ರ ಕಾರಣತಯಾ ಉಪಲಕ್ಷ್ಯತೇ ವಸ್ತು ಮಾತ್ರಂ ತದೇವ ಸತ್ಯಮ್, ಅನ್ಯದಸತ್ಯಮ್ ಇತೀಯಂ ಶ್ರುತಿರ್ವದತೀತಿ ಚೇತ್। ನೈತದುಪಪದ್ಯತೇ । ಏಕಸ್ಮಿನ್ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ ಪ್ರತಿಜ್ಞಾತೇ ಅನ್ಯಜ್ಞಾನೇನ ಅನ್ಯಜ್ಞಾನಾಸಂಭವಂ ಮನ್ವಾನಸ್ಯ ಏಕಮೇವ ವಸ್ತು ವಿಕಾರಾದ್ಯವಸ್ಥಾವಿಶೇಷೇಣ ಪಾರಮಾರ್ಥಿಕೇನೈವ ನಾನಾರೂಪಮವಸ್ಥಿತಂ ಚೇತ್ ತತ್ರೈಕಸ್ಮಿನ್ ವಿಜ್ಞಾತೇ ತಸ್ಮಾದ್ವಿಲಕ್ಷಣಸಂಸ್ಥಾನಾನ್ತರಮಪಿ ತದೇವೇತಿ[3] ತತ್ರ ದೃಷ್ಟಾನ್ತೋಽಯಂ ನಿದರ್ಶಿತಃ । ನಾತ್ರ ಕಸ್ಯಚಿದ್ ವಿಶೇಷಸ್ಯ ನಿಷೇಧಕಃ ಕೋಽಪಿ ಶಬ್ದೋ ದೃಶ್ಯತೇ । ವಾಚಾರಮ್ಭಣಮಿತಿ ವಾಚಾವ್ಯವಹಾರೇಣ ಆರಭ್ಯತ ಇತ್ಯಾರಮ್ಭಣಮ್ । ಪಿಣ್ಡರೂಪಸಂಸ್ಥಿತಾಯಾ[4] ಮೃತ್ತಿಕಾಯಾ ನಾಮ ಚಾನ್ಯತ್, ವ್ಯವಹಾರಾಶ್ಚಾನ್ಯೇ । ಘಟಶರಾವಾದಿರೂಪೇಣಾವಸ್ಥಿತಾಯಾಸ್ತಸ್ಯಾ ಏವ ಮೃತ್ತಿಕಾಯಾ ಅನ್ಯಾನಿ ನಾಮಾನಿ[5] ವ್ಯವಹಾರಾಶ್ಚಾನ್ಯಾದೃಶಾಃ । ತಥಾಪಿ ಸರ್ವತ್ರ ಮೃತ್ತಿಕಾದ್ರವ್ಯಮೇಕಮೇವ ನಾನಾಸಂಸ್ಥಾನ ನಾನಾನಾಮಧೇಯಾಭ್ಯಾಂ ನಾನಾವ್ಯವಹಾರೇಣ ಚಾರಭ್ಯತ ಇತಿ ಏತದೇವ ಸತ್ಯಮ್ ಇತ್ಯನೇನ ಅನ್ಯಜ್ಞಾನೇನಾನ್ಯಜ್ಞಾನಸಂಭವೋ ನಿದರ್ಶಿತಃ, ನಾತ್ರ ಕಿಂಚಿದ್ವಸ್ತು ನಿಷಿಧ್ಯತ ಇತಿ ಪೂರ್ವಮೇವಾಽಯಮರ್ಥಃ ಪ್ರಪಞ್ಚಿತಃ । ಅಪಿ ಚ 'ಯೇನಾ ಶ್ರುತಂ ಶ್ರುತಮ್'

1. ನಿಯಮದಿಂದ ಜೊತೆಯಲ್ಲಿಯೇ ತೋರುವದು, ಸಾಮಾನಾಧಿಕರಣ್ಯದಿಂದ ತೋರುವದು, ಒಂದೇ ಶಬ್ದದ ಸಂಬಂಧವುಳ್ಳವಾಗಿ ತೋರುವದು, ಮೊದಲು ನೋಡಿದಾಗ ಭೇದಕಾಕಾರವು ತೋರದೆ ಅಭಿನ್ನವೆಂಬ ಜ್ಞಾನವಾಗುವದು- ಎಂದು ಭೇದಾಭೇದಕ್ಕೆ ನಾಲ್ಕು ಹೇತುಗಳು, ಅವೆಲ್ಲವನ್ನೂ ಇಲ್ಲಿ ತಿರಸ್ಕರಿಸಿದೆ ಎಂದು ತಾ. ॥

2. 'ಶಬ್ದೈಃ ಸರ್ವೈಃ' ಕಾ॥

3. 'ತದೇವ ವಸ್ತ್ವಿತಿ' ಕಾ॥

4. 'ಪಿಣ್ಡರೂಪೇಣಾವಸ್ಥಿತಾಯಾ' ಕಾ ॥

5. 'ನಾಮಧೇಯಾನಿ' ಕಾ ॥

(ಛಾಂ. ೬-೧-೩) ಇತ್ಯಾದಿನಾ ಬ್ರಹ್ಮವ್ಯತಿರಿಕ್ತಸ್ಯ ಸರ್ವಸ್ಯ ಮಿಥ್ಯಾತ್ವಂ ಪ್ರತಿಜ್ಞಾತಂ ಚೇತ್ 'ಯಥಾ ಸೋಮ್ಯೈಕೇನ ಮೃತ್ಪಿಣ್ಡೇನ' (ಛಾಂ. ೬-೧-೪) ಇತ್ಯಾದಿದೃಷ್ಟಾನ್ತಃ ಸಾಧ್ಯವಿಕಲಃ ಸ್ಯಾತ್ । ರಜ್ಜುಸರ್ಪಾದಿವನ್ಮೃತ್ತಿಕಾವಿಕಾರಸ್ಯ ಘಟಶರಾವಾದೇರಸತ್ಯತ್ವಂ ಶ್ವೇತಕೇತೋಃ ಶುಶ್ರೂಷೋಃ ಪ್ರಮಾಣಾನ್ತರೇಣ ಯುಕ್ತ್ಯಾ ಚಾಸಿದ್ಧಮಿತಿ । ಏತದಪಿ ಸಿಷಾಧಯಿಷಿತಮಿತಿ ಚೇತ್, ಯಥೇತಿ ದೃಷ್ಟಾನ್ತತಯೋಪಾದಾನಂ ನ ಘಟತೇ ॥

(ಅರ್ಥ)

ಇದಲ್ಲದೆ ನಿರ್ವಿಶೇಷವಾದ ವಸ್ತು(ವೊಂದು ಇದೆ ಎಂಬ)ವಾದಿಯು ಸ್ವಯಂ ಪ್ರಕಾಶವಾಗಿರುವ (ಆ) ವಸ್ತುವಿನಲ್ಲಿ ಅದರ ಸಂಬಂಧ(ವಾದ ಆರೋಪ) ವಿಶೇಷಗಳನ್ನು ಶಬ್ದಗಳೆಲ್ಲವೂ ಅಲ್ಲಗಳೆಯುತ್ತವೆ ಎನ್ನುತ್ತಿರುವದರಿಂದ ಹಾಗೆ ಅಲ್ಲ ಗಳೆಯುವ(ವೆಂಬ) ಆ ಶಬ್ದಗಳು ಯಾವವು?- ಎಂಬುದನ್ನು ಹೇಳಬೇಕಾಗುತ್ತದೆ.

'ವಿಕಾರವೂ ನಾಮಧೇಯವೂ **ವಾಚಾರಂಭಣವು**, ಮೃತ್ತಿಕೆಯೇ ಸತ್ಯವು' (ಛಾಂ. ೬-೧-೪) ಎಂದು, ವಿಕಾರನಾಮಧೇಯಗಳೆರಡೂ ವಾಚಾರಂಭಣಮಾತ್ರ ವಾಗಿರುವದರಿಂದ, ಅಲ್ಲಿ ಕಾರಣವಾಗಿ ವಸ್ತುಮಾತ್ರವು ಕಂಡುಬರುತ್ತದೆಯಲ್ಲ, ಅದೇ ಸತ್ಯವು, ಮಿಕ್ಕದ್ದು ಅಸತ್ಯವು- ಎಂದು ಈ ಶ್ರುತಿಯು ಹೇಳುತ್ತದೆಯಲ್ಲ! ಎಂದರೆ ಇದು ಯುಕ್ತವಾಗುವದಿಲ್ಲ. ಒಂದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತಂತೆ ಆಗುವದು ಎಂದು ಪ್ರತಿಜ್ಞೆ ಮಾಡಲಾಗಿ ಒಂದರ ಜ್ಞಾನದಿಂದ ಮತ್ತೊಂದರ ಜ್ಞಾನವು ಆಗಲಾರದೆಂದು ತಿಳಿದ (ಶ್ವೇತಕೇತು)ವಿಗೆ ಒಂದೇ ವಸ್ತುವೇ ವಿಕಾರವೇ[1] ಮುಂತಾದ ಪರಮಾರ್ಥವಾಗಿಯೇ ಇರುವ ಅವಸ್ಥಾವಿ-ಶೇಷದಿಂದ ಬಗೆಬಗೆಯ ರೂಪದಲ್ಲಿದ್ದುಕೊಂಡಿರುತ್ತದೆಯಾದರೆ ಆಗ ಒಂದನ್ನು ಅರಿತರೆ ಅದಕ್ಕಿಂತ ವಿಲಕ್ಷಣವಾಗಿ ಸಂಸ್ಥಾನವುಳ್ಳದ್ದೂ ಅದೇ (ವಸ್ತುವಾಗಿರುತ್ತದೆ) ಎಂದು ಅದಕ್ಕಾಗಿ ಈ ದೃಷ್ಟಾಂತವನ್ನು ತೋರಿಸಿದ್ದಾಗಿದೆ. ಇಲ್ಲಿ ಯಾವ ವಿಶೇಷವನ್ನೂ ಅಲ್ಲಗಳೆಯುವ ಯಾವ ಶಬ್ದವೂ ಕಾಣಬರುವದಿಲ್ಲ. 'ವಾಚಾರಂಭಣ' ಎಂಬಲ್ಲಿ ವಾಕ್ಕಿನಿಂದ- ವ್ಯವಹಾರದಿಂದ ಆರಬ್ಧವಾಗಿದೆ (ಮುಟ್ಟಲ್ಪಡುತ್ತದೆ)ಯಾದ್ದರಿಂದ ಆರಂಭಣವೆನಿಸುತ್ತದೆ (ಎಂದರ್ಥ). ಮುದ್ದೆಯ ರೂಪದಲ್ಲಿ ಇದ್ದುಕೊಂಡಿರುವ ಮಣ್ಣಿನ ನಾಮವೇ ಬೇರೆ, ವ್ಯವಹಾರವೂ ಬೇರೆ ; ಗಡಿಗೆ, ಶ್ರಾವೆ - ಮುಂತಾದ ರೂಪದಲ್ಲಿ ಇದ್ದುಕೊಂಡಿರುವ ಅದೇ ಮಣ್ಣಿಗೆ ಹೆಸರುಗಳು ಬೇರೆ, ವ್ಯವಹಾರಗಳೂ ಬೇರೆಯ ತೆರನಾಗಿವೆ. ಹೀಗಿದ್ದರೂ ಮಣ್ಣೆಂಬ ದ್ರವ್ಯವೊಂದೇ ಬಗೆಬಗೆಯ ಸಂಸ್ಥಾನಗಳು, ಬಗೆಬಗೆಯ ಹೆಸರುಗಳು- ಇವುಗಳಿರುವದರಿಂದ ಬೇರೆಬೇರೆಯ

---

1. ವಿಕಾರವೆಂದರೆ ಕಾರ್ಯವು

ವ್ಯವಹಾರ(ಪ್ರಯೋಜನ)ದಿಂದ ಆರಬ್ಧವಾಗಿರುತ್ತದೆ[1] ಯಾದ್ದರಿಂದ ಈ (ಮಣ್ಣೇ) ಸತ್ಯವು ಎಂದು ಇದರಿಂದ ಒಂದರ ಜ್ಞಾನದಿಂದ ಇನ್ನೊಂದರ ಜ್ಞಾನ(ವಾಗ) ಬಹುದೆಂದೂ ತೋರಿಸಿಕೊಟ್ಟಿರುತ್ತದೆ ; ಇಲ್ಲಿ ಯಾವ ವಸ್ತುವನ್ನೂ ಅಲ್ಲಗಳೆದಿಲ್ಲ ಎಂದು ಹಿಂದೆಯೇ[2] ವಿವರಿಸಿದ್ದಾಗಿದೆ.

ಇದಲ್ಲದೆ 'ಯಾವದರಿಂದ ಅಶ್ರುತವಾದದ್ದು ಶ್ರುತವಾಗುತ್ತದೆಯೋ' (ಛಾಂ.೬-೧-೩) ಎಂದು ಮುಂತಾಗಿರುವ ವಾಕ್ಯದಿಂದ ಎಲ್ಲವೂ ಮಿಥ್ಯೆಯೆಂದೇ ಹೇಳಿದೆಯಾದರೆ 'ಸೋಮ್ಯನೆ, ಹೇಗೆ ಒಂದು ಮಣ್ಣಿನ ಮುದ್ದೆಯಿಂದ' (ಛಾಂ. ೬-೧-೪) ಎಂಬ ದೃಷ್ಟಾಂತವು ಸಾಧ್ಯರಹಿತವಾಗುವದು.[3] ಏಕೆಂದರೆ ಹಗ್ಗದ ಹಾವೇ ಮುಂತಾದವುಗಳಂತೆ ಮಣ್ಣಿನ ಕಾರ್ಯವಾದ ಗಡಿಗೆ, ಶ್ರಾವೆ- ಮುಂತಾದವುಗಳು ಅಸತ್ಯವೆಂಬುದು ಶ್ರೋತೃವಾದ ಶ್ವೇತಕೇತುವಿಗೆ ಮತ್ತೊಂದು ಪ್ರಮಾಣದಿಂದ ಲಾಗಲಿ ಯುಕ್ತಿಯಿಂದಲಾಗಲಿ[4] ಸಿದ್ಧವಾಗಿರುವದಿಲ್ಲ. ಇದನ್ನೂ (ಇಲ್ಲಿ) ಸಾಧಿಸಬೇಕೆಂದೇ ಅಭಿಪ್ರಾಯವಿದೆ ಎನ್ನುವದಾದರೆ, (ಆಗ) 'ಹೇಗೆ' ಎಂದು (ಇದನ್ನು) ದೃಷ್ಟಾಂತವಾಗಿ ತೆಗೆದುಕೊಂಡಿರುವದು ಹೊಂದುವದಿಲ್ಲ.[5]

ಸದೇವೇತ್ಯಾದಿಶ್ರುತಿಯೂ ನಿರ್ವಿಶೇಷಕ್ಕೆ ಪ್ರಮಾಣವಲ್ಲ

(ಮೂಲ)

೨೬. 'ಸದೇವ,'[6] 'ಏಕಮೇವ' - ಇತ್ಯಾವಧಾರಣದ್ವಯೇನ 'ಅದ್ವಿತೀಯಮ್' ಇತ್ಯನೇನ ಚ ಸನ್ಮಾತ್ರಾತಿರೇಕಿಸಜಾತೀಯವಿಜಾತೀಯಾಃ ಸರ್ವೇ ವಿಶೇಷಾ ನಿಷಿಧ್ಯನ್ತ[7] ಇತಿ ಪ್ರತೀಯತ ಇತಿ ಚೇತ್ । ನೈತದೇವಮ್ ।

---

1. ಕರ್ಮಾರ್ಥದಲ್ಲಿ ಲ್ಯುಟ್‌ಪ್ರತ್ಯಯವು ಬಂದು 'ಆರಂಭಣ'ವೆಂಬ ಶಬ್ದವು ಆಗಿರುತ್ತದೆ ; ಆರಭ್ಯತೇ ಎಂದರೆ ಸಂಬದ್ಧವಾಗಿರುತ್ತದೆ ಎಂದರ್ಥ. ವ್ಯವಹಾರವೆಂಬ ಪ್ರಯೋಜನಕ್ಕಾಗಿ ಎಂಬರ್ಥದಲ್ಲಿ ವ್ಯವಹಾರದಿಂದ ಎಂದು ಹೇಳಿದೆ. ತಾ॥
2. ಖಂ.೧೩ರಲ್ಲಿ
3. ದೃಷ್ಟಾಂತದಲ್ಲಿ ಅಸತ್ಯತ್ವವೆಂಬ ಸಾಧ್ಯವಿರುವದಿಲ್ಲ.
4. ಘಟಶರಾವಾದಿಗಳು ಸತ್ಯವೆಂದು ಪ್ರತ್ಯಕ್ಷಾದಿಪ್ರಮಾಣಸಿದ್ಧ ; ಘಟತ್ವಾದಿಗಳು ವ್ಯಾವರ್ತಮಾನವಾಗಿರುವದರಿಂದ ಅಸತ್ಯ ಎಂಬುದು ಯುಕ್ತ್ಯಾಭಾಸವಾದ್ದರಿಂದ ಯುಕ್ತಿಯಿಂದಲೂ ಅಸತ್ಯತ್ವವು ಸಿದ್ಧವಾಗಿಲ್ಲ. ತಾ ॥
5. ಏಕೆಂದರೆ ದೃಷ್ಟಾಂತವು ಸಿದ್ಧವಾಗಿಯೇ ಇರಬೇಕು.
6. ಇದಕ್ಕಿಂತ ಮುಂಚೆ - 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್ ಇತ್ಯತ್ರ'- ಎಂದು ಕಾ॥ ಪಾಠದಲ್ಲಿ ಹೆಚ್ಚಾಗಿದೆ. ಅದು ಟೀಕಾಸಮ್ಮತವೆಂತ ಕಾಣುವದಿಲ್ಲ. ಅಲ್ಲಿ 'ವಿಶೇಷೋಪಸ್ಥಾಪಕಪದಾನ್ಯುಪಾದತ್ತೇ'- ಎಂದಿಷ್ಟೇ ಇದೆ.
7. 'ನಿಶಿದ್ಧಾ' ಕಾ॥.

ಕಾರ್ಯಕಾರಣಭಾವಾವಸ್ಥಾದ್ವಯಾವಸ್ಥಿತಸ್ಯ ಏಕಸ್ಯ ವಸ್ತುನ ಏಕಾವಸ್ಥಾವಸ್ಥಿತಸ್ಯ[1] ಜ್ಞಾನೇನ ಅವಸ್ಥಾನ್ತರಾವಸ್ಥಿತಸ್ಯಾಪಿ ವಸ್ತ್ವೈಕ್ಯೇನ ಜ್ಞಾನತಾಂ ದೃಷ್ಟಾನ್ತೇನ ದರ್ಶಯಿತ್ವಾ ಶ್ವೇತಕೇತೋರಪ್ರಜ್ಞಾತಂ ಸರ್ವಸ್ಯ ಬ್ರಹ್ಮಕಾರಣತ್ವಂ ಚ ವಕ್ತುಂ 'ಸದೇವ ಸೋಮ್ಯೇದಮ್' ಇತ್ಯಾರಬ್ಧಮ್ । ಇದಮ್ ಅಗ್ರೇ ಸದೇವಾಸೀದಿತಿ । ಅಗ್ರ ಇತಿ ಕಾಲವಿಶೇಷಃ । ಇದಂಶಬ್ದವಾಚ್ಯಸ್ಯ ಪ್ರಪಞ್ಚಸ್ಯ ಸದಾಪತ್ತಿರೂಪಾಂ ಕ್ರಿಯಾಂ ಸದ್ದ್ರವ್ಯತಾಂ ಚ ವದತಿ । ಏಕಮೇವೇತಿ ಚ ಅಸ್ಯ ನಾನಾನಾಮರೂಪವಿಕಾರ ಪ್ರಹಾಣಮ್ । ಏತಸ್ಮಿನ್ ಪ್ರತಿಪಾದಿತೇ[2] ಅಸ್ಯ ಜಗತಃ ಸದುಪಾದಾನತಾ ಪ್ರತಿಪಾದಿತಾ ಭವತಿ । ಅನ್ಯತ್ರ ಉಪಾದಾನಕಾರಣಸ್ಯ ಸ್ವವ್ಯತಿರಿಕ್ತಾಧಿಷ್ಠಾತ್ರಪೇಕ್ಷಾ ದರ್ಶನೇಽಪಿ ಸರ್ವವಿಲಕ್ಷಣತ್ವಾದಸ್ಯ ಸರ್ವಜ್ಞಸ್ಯ ಬ್ರಹ್ಮಣಃ ಸರ್ವಶಕ್ತೇಯೋಗೋ ನ ವಿರುದ್ಧ ಇತಿ ಅದ್ವಿತೀಯಪದಮ್ ಅಧಿಷ್ಠಾತ್ರನ್ತರಂ ನಿವಾರಯತಿ[3] । ಸರ್ವಶಕ್ತಿ ಯುಕ್ತತ್ವಾದೇವ ಬ್ರಹ್ಮಣಃ ಕಾಶ್ಚನ ಶ್ರುತಯಃ ಪ್ರಥಮಮುಪಾದಾನಕಾರಣತ್ವಂ ಪ್ರತಿಪಾದ್ಯ ನಿಮಿತ್ತಕಾರಣಮಪಿ ತದೇವೇತಿ ಪ್ರತಿಪಾದಯನ್ತಿ । ಯಥೇಽಯಂ ಶ್ರುತಿಃ । ಅನ್ಯಾಶ್ಚ ಶ್ರುತಯೋ ಬ್ರಹ್ಮಣೋ ನಿಮಿತ್ತಕಾರಣತಾಮ್[4] ಅನುಜ್ಞಾಯ ತಸ್ಯ[5] ಉಪಾದಾನತಾದಿ ಕಥಮಿತಿ ಪರಿಚೋದ್ಯ ಸರ್ವಶಕ್ತಿಯುಕ್ತತ್ವಾದುಪಾದಾನಕಾರಣಂ ತದಿತರಾಶೇಷೋಪಕರಣಂ ಚ ಬ್ರಹ್ಮೈವೇತಿ ಪರಿಹರನ್ತಿ । 'ಕಿಂ ಸ್ವಿದ್ವನಂ ಕ ಉ ಸ ವೃಕ್ಷ ಆಸೀತ್ । ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ । ಮನೀಷಿಣೋ ಮನಸಾ ಪೃಚ್ಛತೇದು ತತ್ । ಯದಧ್ಯತಿಷ್ಠದ್ ಭುವನಾನಿ ಧಾರಯನ್ । ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸೀತ್ । ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ । ಮನೀಷಿಣೋ ಮನಸಾ ವಿಬ್ರವೀಮಿ ವಃ । ಬ್ರಹ್ಮಾಧ್ಯತಿಷ್ಠದ್ಭುವನಾನಿ ಧಾರಯನ್' ॥[6] (ತೈ. ಬ್ರಾ. ೨-೮-೯-೭೬, ೭೭) ಇತಿ ಸಾಮಾನ್ಯತೋ ದೃಷ್ಟೇನ ವಿರೋಧಮಾಶಙ್ಕ್ಯ ಬ್ರಹ್ಮಣಃ ಸರ್ವವಿಲಕ್ಷಣತ್ವೇನ ಪರಿಹಾರ ಉಕ್ತಃ । ಅತಃ 'ಸದೇವ ಸೋಮ್ಯೇದಮಗ್ರ ಆಸೀತ್' ಇತ್ಯತ್ರಾಪಿ ಅಗ್ರ ಇತ್ಯಾದ್ಯನೇಕವಿಶೇಷಾ ಬ್ರಹ್ಮಣಃ ಪ್ರತಿಪಾದಿತಾಃ । ಭವದಭಿಮತ ವಿಶೇಷನಿಷೇಧವಾಚೀ ಕೋಽಪಿ ಶಬ್ದೋ ನ ದೃಶ್ಯತೇ । ಪ್ರತ್ಯುತ ಜಗದ್ಬ್ರಹ್ಮಣೋಃ ಕಾರ್ಯಕಾರಣಭಾವಜ್ಞಾಪನಾಯ 'ಅಗ್ರೇ' ಇತಿ ಕಾಲವಿಶೇಷಸದ್ಭಾವಃ, 'ಆಸೀತ್' ಇತಿ ಕ್ರಿಯಾವಿಶೇಷಃ, ಜಗದುಪಾದಾನತಾ, ಜಗನ್ನಿಮಿತ್ತತಾ ಚ, ನಿಮಿತ್ತೋಪಾದಾ

---

1. 'ಏಕಾವಸ್ಥಸ್ಯ' ಎಂದು ತೆ ॥
2. 'ಉಪಪಾದಿತೇ' ಎಂಬ ಕಾ॥ಪಾಠವು ಟೀಕಾಸಮ್ಮತವಲ್ಲ.
3. 'ವಾರಯತಿ' ಕಾ॥ 4. 'ಕಾರಣತ್ವಮ್' ಕಾ॥
5. 'ಅಸ್ಯೈವ' ಕಾ॥
6. ಮೊದಲನೆಯ ವಾಕ್ಯವು ಋಗ್ವೇದದಲ್ಲಿಯೂ ತೈತ್ತಿರೀಯಸಂಹಿತೆಯಲ್ಲಿಯೂ ಇದೆ; ಆದರೆ ಉತ್ತರವಾಕ್ಯವು ತೈ.ಬ್ರಾ.ದಲ್ಲಿಯೇ ಇರುವದರಿಂದ ಅದನ್ನೇ ಇಲ್ಲಿ ನಿರ್ದೇಶಿಸಿದೆ.

ನಯೋರ್ಭೇದನಿರಸನೇನ ತಸ್ಯೈವ ಬ್ರಹ್ಮಣಃ ಸರ್ವಶಕ್ತಿಯೋಗಶ್ಚೇತಿ ಅಪ್ರಜ್ಞಾತಾಃ ಸಹಸ್ರಶೋ ವಿಶೇಷಾ ಏವ ಪ್ರತಿಪಾದಿತಾಃ ॥

(ಅರ್ಥ)

(ಪೂರ್ವಪಕ್ಷಿ) :- ['ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' ಎಂಬಲ್ಲಿ] 'ಸತ್ತೇ', 'ಒಂದೇ'[1] ಎಂಬ ಎರಡು ಅವಧಾರಣಗಳಿಂದಲೂ 'ತನಗೆರಡನೆಯದಿಲ್ಲದ' ಎಂಬ (ಶಬ್ದ)ದಿಂದಲೂ ಸನ್ಮಾತ್ರಕ್ಕಿಂತ ಬೇರೆಯಾದ ಸಜಾತೀಯವಾದ, ವಿಜಾತೀಯವಾದ- ಎಂಬ ವಿಶೇಷಗಳನ್ನೆಲ್ಲ ಅಲ್ಲಗಳೆದಿದೆ ಎಂದು ತೋರುತ್ತದೆಯಲ್ಲ!

(ಸಿದ್ಧಾಂತಿ) :- ಇದು ಹೀಗಲ್ಲ. ಕಾರ್ಯಭಾವ, ಕಾರಣಭಾವ - ಎಂಬ ಎರಡು ಅವಸ್ಥೆಗಳಲ್ಲಿ ಒಂದೇ ವಸ್ತುವಿರುವದರಿಂದ ಒಂದವಸ್ಥೆಯಲ್ಲಿರುವ (ವಸ್ತುವಿನ) ಜ್ಞಾನದಿಂದ (ಅದಕ್ಕೆ) ಮತ್ತೊಂದವಸ್ಥೆಯಲ್ಲಿರುವ ವಸ್ತುವಿನ ಜ್ಞಾನವೂ (ಅವೆರಡೂ) ಒಂದೇ ವಸ್ತುವಾದ್ದರಿಂದ (ಆಗುವದು) ಎಂಬುದನ್ನು ದೃಷ್ಟಾಂತದಿಂದ ತಿಳಿಸಿಕೊಟ್ಟು ಶ್ವೇತಕೇತುವಿಗೆ ತಿಳಿಯದೆ ಇದ್ದ ಎಲ್ಲಕ್ಕೂ ಬ್ರಹ್ಮವೇ ಕಾರಣವೆಂಬುದನ್ನು ಹೇಳುವದಕ್ಕಾಗಿ 'ಸೋಮ್ಯನೆ, ಇದು ಸತ್ತೊಂದೇ' (ಛಾಂ. ೬-೨-೧), ಎಂಬ (ಶ್ರುತಿಯು) ಪ್ರಾರಂಭವಾಗಿರುತ್ತದೆ. 'ಇದು ಮೊದಲು **ಸತ್ತೇ** ಆಗಿತ್ತು' ಎಂಬಲ್ಲಿ 'ಮೊದಲು' ಎಂದು ಒಂದಾನೊಂದು **ಕಾಲ**ವನ್ನು (ಹೇಳಿದೆ). ಇದು ಎಂಬ ಶಬ್ದಕ್ಕೆ ವಾಚ್ಯವಾಗಿರುವ ಪ್ರಪಂಚವು ಸತ್ತಾಗಿತ್ತೆಂಬ **ಕ್ರಿಯೆ**ಯನ್ನೂ **ಸದ್ದ್ರವ್ಯ**ವಾಗಿತ್ತೆಂಬುದನ್ನೂ (ಶ್ರುತಿ) ಹೇಳುತ್ತದೆ. **'ಒಂದೇ'** ಎಂದು ಈ (ಜಗತ್ತು) ಬೇರೆಬೇರೆಯ ನಾಮರೂಪಗಳ ವಿಕಾರವನ್ನು ಬಿಟ್ಟಿತ್ತು ಎಂಬುದನ್ನು (ಹೇಳುತ್ತದೆ); ಇದನ್ನು ಹೇಳಿದರೆ ಈ ಜಗತ್ತಿಗೆ ಸತ್ತೇ ಉಪಾದಾನವೆಂದು ತಿಳಿಸಿಕೊಟ್ಟಂತೆ ಆಗುವದು. ಮಿಕ್ಕ ಕಡೆಯಲ್ಲಿ ಉಪಾದಾನಕಾರಣಕ್ಕೆ ತನಗಿಂತ ಬೇರೆಯಾದ ಅಧಿಷ್ಠಾತೃವಿನ ಅಪೇಕ್ಷೆ(ಯಿರುವದು) ಕಂಡಿದ್ದರೂ ಈ ಸರ್ವಜ್ಞವಾದ ಬ್ರಹ್ಮವು ಎಲ್ಲಕ್ಕಿಂತಲೂ ವಿಲಕ್ಷಣವಾಗಿರುವದರಿಂದ[2] ಇದಕ್ಕೆ ಸರ್ವಶಕ್ತಿಗಳೂ ಇರುವದು ವಿರುದ್ಧವಲ್ಲ ಮತ್ತು **'ಅದ್ವಿತೀಯ'** ಎಂಬ ಪದವು ಮತ್ತೊಬ್ಬ ಅಧಿಷ್ಠಾತೃವನ್ನು ನಿವಾರಣೆಮಾಡಿರುತ್ತದೆ.

---

1. 'ಇದಮಗ್ರೇ ಸದೇವಾಸೀದ್' (ಈ ಜಗತ್ತು ಮೊದಲು ಸತ್ತೇ ಆಗಿತ್ತು) ಎಂಬುದು ಅನ್ವಯ ಕ್ರಮವಲ್ಲ ; 'ಸದೇವೇದಮಗ್ರ ಏಕಮೇವಾಸೀತ್' (ಸತ್ತೇ ಆಗಿರುವ ಇದು ಮೊದಲು ಒಂದೇ ಆಗಿತ್ತು) ಎಂದು ಸಮನ್ವಯ- ಎಂದು ತಾ॥ 'ತಸ್ಮಿನ್ ಕಾಲೇ ಜಗತಃ ಸದಾತ್ಮಕತಾಂ ಸದೇವೇತಿ ಪ್ರತಿಪಾದ್ಯ' ಎಂಬ (ಭಾ.ಭಾ.೧೪) ಭಾಷ್ಯಕ್ಕೆ ಇದನ್ನು ಹೋಲಿಸಿರಿ.
2. ಧರ್ಮಿಯು ಇತರ ವಿಲಕ್ಷಣವಾಗಿರುವದರಿಂದ ಇತರ ವಿಲಕ್ಷಣವಾದ ಧರ್ಮಗಳ ಸಂಬಂಧವೂ ಇರಬಹುದು- ಎಂದು ಭಾವ. ತಾ॥

ಬ್ರಹ್ಮವು ಸರ್ವಶಕ್ತಿಗಳುಳ್ಳದ್ದಾದ್ದರಿಂದಲೇ **ಕೆಲವು ಶ್ರುತಿಗಳು** ಮೊದಲು (ಅದು) ಉಪಾದಾನಕಾರಣವೆಂದು ತಿಳಿಸಿ ನಿಮಿತ್ತಕಾರಣವೂ ಆದೇ ಎಂದು ತಿಳಿಸಿಕೊಡುತ್ತವೆ. ಉದಾಹರಣೆಗೆ ಈ ಶ್ರುತಿಯು (ಹಾಗೆ ತಿಳಿಸುತ್ತದೆ). **ಮತ್ತೆ ಕೆಲವು ಶ್ರುತಿಗಳು** ಬ್ರಹ್ಮವು ನಿಮಿತ್ತಕಾರಣವೆಂಬುದನ್ನು ಒಪ್ಪಿ ಅದಕ್ಕೆ[1] ಉಪಾದಾನತ್ವವೇ ಮುಂತಾದದ್ದು ಹೇಗೆ (ಹೊಂದುತ್ತದೆ)? ಎಂದು ಆಕ್ಷೇಪಿಸಿಕೊಂಡು ಸರ್ವಶಕ್ತಿಯುಕ್ತವಾಗಿರುವದರಿಂದ ಉಪಾದಾನಕಾರಣವೂ ಆದಕ್ಕಿಂತ ಬೇರೆಯಾದ ಎಲ್ಲಾ ಉಪಕರಣವೂ ಬ್ರಹ್ಮವೇ ಎಂದು (ಆಕ್ಷೇಪವನ್ನು) ಪರಿಹರಿಸುತ್ತವೆ. (ಹೇಗೆಂದರೆ) 'ವನವು ಯಾವದು? ಯಾವದರಿಂದ ದ್ಯಾವಾಪೃಥಿವಿಗಳನ್ನು ಕೆತ್ತಿಮಾಡಿದನೋ[2] ಆ ವೃಕ್ಷವು ಯಾವದಾಗಿತ್ತು? ಭುವನಗಳನ್ನು ಧಾರಣೆಮಾಡುವಾತನು ಏನನ್ನು ಅಧಿಷ್ಠಾನ ಮಾಡಿಕೊಂಡಿದ್ದನು? ಜಾಣರೆ, ಇದನ್ನು ಮನಮುಟ್ಟಿ ಕೇಳಿ (ತಿಳಿದು)ಕೊಳ್ಳಿರಿ. ಯಾವದರಿಂದ ದ್ಯಾವಾಪೃಥಿವಿಗಳನ್ನು ಕೆತ್ತಿಮಾಡಿದನೋ, ಬ್ರಹ್ಮವೇ (ಆ)ವನವು, ಬ್ರಹ್ಮವೇ ಆ ವೃಕ್ಷವಾಗಿತ್ತು. ಜಾಣರೆ, ಇದನ್ನು ಮನಸ್ಸಿನಲ್ಲಿ ನಿಶ್ಚಯಿಸಿ ನಿಮಗೆ ಹೇಳುತ್ತಿರುವೆನು ; ಭುವನಗಳನ್ನು ಧರಿಸುವಾತನು ಬ್ರಹ್ಮವನ್ನೇ ಅಧಿಷ್ಠಾನಮಾಡಿಕೊಂಡಿದ್ದನು' (ತೈ. ಬ್ರಾ. ೨-೮-೯-೭೬, ೭೭)- ಎಂದು ಸಾಮಾನ್ಯವಾಗಿ ಕಂಡಿರುವದಕ್ಕೆ ವಿರೋಧ(ವಾಯಿತೆಂದು) ಶಂಕಿಸಿ ಬ್ರಹ್ಮವು ಎಲ್ಲದಕ್ಕಿಂತಲೂ ವಿಲಕ್ಷಣವಾಗಿರುವದೆಂದು ಪರಿಹಾರವನ್ನು ಹೇಳಿದ್ದಾಗಿದೆ.[3]

ಆದ್ದರಿಂದ 'ಸೋಮ್ಯನೆ, ಇದು ಮೊದಲು ಸತ್ತೇ ಆಗಿತ್ತು' (ಛಾಂ.೬-೨-೧) ಎಂಬಲ್ಲಿಯೂ 'ಮೊದಲು' ಮುಂತಾದ ಅನೇಕ ವಿಶೇಷಗಳನ್ನು ಬ್ರಹ್ಮಕ್ಕೆ ಹೇಳಿರುತ್ತದೆ. ನಿಮಗೆ ಒಪ್ಪಾಗಿರುವ ವಿಶೇಷನಿಷೇಧವನ್ನು ಹೇಳುವ ಯಾವ ಶಬ್ದವೂ (ಇಲ್ಲಿ) ಕಾಣುವದಿಲ್ಲ. ಆದಕ್ಕೆ ಬದಲು ಜಗದ್ಬ್ರಹ್ಮಗಳಿಗೆ ಕಾರ್ಯಕಾರಣಭಾವವನ್ನು ತಿಳಿಸುವದಕ್ಕಾಗಿ 'ಮೊದಲು' ಎಂದು **ಕಾಲವಿಶೇಷದ** ಇರವೂ, 'ಇತ್ತು' ಎಂದು

---

1. 'ಅಸ್ಯೈವ' ಎಂಬ ಪಾಠಕ್ಕೆ 'ಅದಕ್ಕೇ' ಎಂದರ್ಥ.
2. ಸಾಯಣಭಾಷ್ಯದಲ್ಲಿ ಬಹುವಚನಕ್ಕೆ ಸರಿಯಾಗಿಯೇ ಅರ್ಥಮಾಡಿದೆ ; ಆದರೆ ಶ್ರೀ ಭಾ. ಟೀಕಾನುಸಾರವಾಗಿ ಇಲ್ಲಿ ಏಕವಚನಕ್ಕೆ ತಿರುಗಿಸಿ ಕನ್ನಡಿಸಿದೆ.
3. ಛಾಂದೋಗ್ಯಶ್ರುತಿಯಲ್ಲಿ ಜಗತ್ತಿನಿಂದ ಉಪಕ್ರಮಮಾಡಿ ಬ್ರಹ್ಮವನ್ನು ಹೇಳಿರುವದರಿಂದ ಉಪಾದಾನತ್ವವನ್ನು ಮೊದಲು ಹೇಳಿದ ಬಳಿಕ ಬ್ರಹ್ಮವು ನಿಮಿತ್ತವೂ ಆಗಿದೆ ಎಂದು ತಿಳಿಸಿದೆ; **'ಬ್ರಹ್ಮ ವನಂ'** ಎಂಬಲ್ಲಿ ಬ್ರಹ್ಮದಿಂದ ಉಪಕ್ರಮಮಾಡಿರುವದರಿಂದ ಚೇತನವಾದ ಬ್ರಹ್ಮಕ್ಕೆ ನಿಮಿತ್ತತ್ವವನ್ನು ಮೊದಲು ಹೇಳಿ ಆ ಬಳಿಕ ಅದು ಉಪಾದಾನವೆಂಬುದನ್ನು ಹೇಳಿದೆ. ಈ ಎರಡು ಕಡೆಯಲ್ಲಿಯೂ ಬ್ರಹ್ಮವು ಇತರವಿಲಕ್ಷಣವಾಗಿರುವದರಿಂದ ಉಭಯ ವಿಧಕಾರಣವಾಗಿರಬಹುದು ಎಂದಿದೆ.

ಕ್ರಿಯಾವಿಶೇಷವೂ (ಬ್ರಹ್ಮವು) ಜಗತ್ತಿಗೆ ಉಪಾದಾನವೆಂದೂ ಜಗತ್ತಿಗೆ ನಿಮಿತ್ತವೆಂದೂ ನಿಮಿತ್ತೋಪಾದಾನಗಳಿಗೆ ಭೇದವನ್ನು ಅಲ್ಲಗಳೆದು ಅದೇ ಬ್ರಹ್ಮಕ್ಕೆ ಸರ್ವಶಕ್ತಿ ಸಂಬಂಧವೂ[1] ಎಂದು (ಮೊದಲು) ಗೊತ್ತಾಗದೆ ಇದ್ದ ಸಾವಿರಾರು ವಿಶೇಷಗಳನ್ನು ಇಲ್ಲಿ ಪ್ರತಿಪಾದಿಸಿರುತ್ತದೆ.

ಅಸತ್ಕಾರ್ಯವಾದನಿರಾಸಕಶ್ರುತಿಯು ಪೂರ್ವಪಕ್ಷಕ್ಕೆ ಹೊಂದದು

(ಮೂಲ)

೨೭. ಯತೋ ವಾಸ್ತವಕಾರ್ಯಕಾರಣಭಾವಾದಿಜ್ಞಾಪನೇ ಪ್ರವೃತ್ತ ಮಿದಮ್ ಅತ ಏವ 'ಅಸದೇವೇದಮಗ್ರ ಆಸೀತ್' (ಛಾಂ.೬-೨-೧) ಇತ್ಯಾರಭ್ಯ ಅಸತ್ಕಾರ್ಯವಾದನಿಷೇಧಶ್ಚ ಕ್ರಿಯತೇ 'ಕುತಸ್ತು ಖಲು ಸೋಮ್ಯೈವಂ ಸ್ಯಾತ್' (ಛಾಂ.೬-೨-೨) ಇತಿ । ಪ್ರಾಗಸತ ಉತ್ಪತ್ತಿರಹೇತುಕಾ ಇತ್ಯರ್ಥಃ । ತದೇವೋಪ ಪಾದಯತಿ 'ಕಥಮಸತಃ ಸಜ್ಜಾಯೇತ' (ಛಾಂ. ೬-೨-೩) ಇತಿ । ಅಸತ ಉತ್ಪನ್ನಮ್ ಅಸದಾತ್ಮಕಮೇವ ಭವತೀತ್ಯರ್ಥಃ । ಯಥಾ ಮೃದ ಉತ್ಪನ್ನಂ ಘಟಾದಿಕಂ ಮೃದಾತ್ಮಕಮ್ । ಸತ ಉತ್ಪತ್ತಿರ್ನಾಮ ವ್ಯವಹಾರವಿಶೇಷಹೇತು ಭೂತೋಽವಸ್ಥಾವಿಶೇಷಯೋಗಃ । ಏತದುಕ್ತಂ ಭವತಿ । ಏಕಮೇವ ಕಾರಣಭೂತ ದ್ರವ್ಯಮ್ ಅವಸ್ಥಾನ್ತರಯೋಗೇನ ಕಾರ್ಯಮಿತ್ಯುಚ್ಯತ ಇತಿ ಏಕವಿಜ್ಞಾನೇನ ಸರ್ವವಿಜ್ಞಾನಂ ಪ್ರತಿಪಿಪಾದಯಿಷಿತಮ್ । ತದಸತ್ಕಾರ್ಯವಾದೇ ನ ಸೇತ್ಸ್ಯತಿ । ತಥಾ ಹಿ ನಿಮಿತ್ತಸಮವಾಯ್ಯಸಮವಾಯಿಪ್ರಭೃತಿಭಿಃ ಕಾರಣೈರವಯವ್ಯಾಖ್ಯಂ ಕಾರ್ಯಂ ದ್ರವ್ಯಾನ್ತರಮೇವಾರಭ್ಯತ[2] ಇತಿ ಕಾರಣಭೂತಾದ್ವಸ್ತುನಃ ಕಾರ್ಯಸ್ಯ ವಸ್ತ್ವನ್ತರತ್ವಾತ್ ನ ತಜ್ಜ್ಞಾನೇನಾಽಸ್ಯ ಜ್ಞಾತತಾ ಕಥಮಪಿ ಸಂಭವತೀತಿ ಕಥಮವಯವಿದ್ರವ್ಯಾನ್ತರಂ ನಿರಸ್ಯತ ಇತಿ ಚೇತ್ । ಕಾರಣಗತಾವಸ್ಥಾನ್ತರ ಯೋಗಸ್ಯ ದ್ರವ್ಯಾನ್ತರೋತ್ಪತ್ತಿವಾದಿನಃ ಸಂಪ್ರತಿಪನ್ನಸ್ಯೈವ ಏಕತ್ವನಾಮಾನ್ತರ ವ್ಯವಹಾರಾನ್ತರಾದೇರುಪಪಾದಕತ್ವಾದ್ ದ್ರವ್ಯಾನ್ತರಾದರ್ಶನಾಚ್ಚೇತಿ ಕಾರಣ ಮೇವಾಽವಸ್ಥಾನ್ತರಾಪನ್ನಂ ಕಾರ್ಯಮಿತ್ಯುಚ್ಯತ ಇತ್ಯುಕ್ತಮ್ ॥

ನನು ನಿರಧಿಷ್ಠಾನಭ್ರಮಾಸಂಭವಜ್ಞಾಪನಾಯ ಅಸತ್ಕಾರ್ಯವಾದ ನಿರಾಸಃ ಕ್ರಿಯತೇ । ತಥಾ ಹಿ ಏವಂ ಚಿದ್ರೂಪಂ ನಿತ್ಯಮೇಽವಾವಿದ್ಯಾಶಬಲಿತಂ[4]

1. ಕಾಲವಿಶೇಷ, ಕ್ರಿಯಾವಿಶೇಷ, ಉಪಾದಾನತ್ವನಿಮಿತ್ತತ್ವಗಳು, ಸದ್ರವ್ಯತ್ವ , ಅನೇಕಶಕ್ತಿತ್ವ- ಎಂದು ಎಷ್ಟೋ ವಿಶೇಷಗಳನ್ನು ಹೇಳುವ ವಾಕ್ಯವನ್ನು ನಿರ್ವಿಶೇಷಪರವೆನ್ನುವದು ಸರಿಯಲ್ಲ- ಎಂದು ಅಭಿಪ್ರಾಯ.
2. 'ದ್ರವ್ಯಾನ್ತರಮೇವೋತ್ಪಾದ್ಯತೇ' ಕಾ॥
3. 'ಸತ್ಯಮೇವಾವಿದ್ಯಾಚ್ಛಾದಿತಮ್' ಕಾ॥
4. 'ಅವಿದ್ಯಾಶಬಲಂ' ಪಾ॥

ಜಗದ್ರೂಪೇಣ ವಿವರ್ತತ ಇತ್ಯವಿದ್ಯಾಶ್ರಯಿತ್ವಾಯ ಮೂಲಕಾರಣಂ ಸತ್ಯಮಿತ್ಯ ಭ್ಯುಪಗನ್ತವ್ಯಮಿತ್ಯಸತ್ಕಾರ್ಯವಾದನಿರಾಸಃ । ನೈತದೇವಮ್ । ಏಕವಿಜ್ಞಾನೇನ ಸರ್ವವಿಜ್ಞಾನಪ್ರತಿಜ್ಞಾದೃಷ್ಟಾನ್ತಮುಖೇನ ಸತ್ಕಾರ್ಯವಾದಸ್ಯೈವ ಪ್ರಸಕ್ತತ್ವಾದಿ-ತ್ಯುಕ್ತಮ್ । ಭವತ್ಪಕ್ಷೇ ನಿರಧಿಷ್ಠಾನಭ್ರಮಾಸಂಭವಸ್ಯ ದುರುಪಪಾದತ್ವಾಚ್ಚ । ಯಸ್ಯ ಹಿ ಚೇತನಗತೋ ದೋಷಃ ಪಾರಮಾರ್ಥಿಕಃ, ದೋಷಾಶ್ರಯತ್ವಂ ಚ ಪಾರಮಾರ್ಥಿಕಮ್, ತಸ್ಯ ಪಾರಮಾರ್ಥಿಕದೋಷೇಣ ಯುಕ್ತಸ್ಯ ಅಪಾರಮಾರ್ಥಿಕಗನ್ಧರ್ವನಗರಾದಿದರ್ಶನಮುಪಪನ್ನಮ್ । ಯಸ್ಯ ತು ದೋಷಶ್ಚಾಪಾರಮಾರ್ಥಿಕಃ, ದೋಷಾಶ್ರಯತ್ವಂ ಚಾಪಾರಮಾರ್ಥಿಕಮ್, ತಸ್ಯ ಅಪಾರಮಾರ್ಥಿಕೇನಾಽಪ್ಯಾಶ್ರಯೇಣ ತದುಪಪನ್ನಮಿತಿ ಭವತ್ಪಕ್ಷೇ ನ ನಿರಧಿಷ್ಠಾನ-ಭ್ರಮಾಸಂಭವಃ ॥

(ಅರ್ಥ)

ಇದು ನಿಜವಾಗಿರುವ ಕಾರ್ಯಕಾರಣಭಾವವೇ ಮುಂತಾದದ್ದನ್ನು ತಿಳಿಸುವ-ದಕ್ಕೆ ಹೊರಟಿರುವದಷ್ಟೆ? ಆದರಿಂದಲೇ 'ಇದು ಮೊದಲು ಅಸತ್ತೇ ಆಗಿತ್ತು' (ಛಾಂ. ೬-೨-೨) ಎಂಬುದರಿಂದ ಹಿಡಿದು[1] ಅಸತ್ಕಾರ್ಯವಾದವನ್ನು 'ಸೋಮ್ಯನೆ, ಇದು ಹೇಗೆತಾನೆ ಹೀಗೆ ಆದೀತು?' (ಛಾಂ. ೬-೨-೩) ಎಂದು ನಿಷೇಧಮಾಡಿರುತ್ತದೆ. ಮೊದಲು ಇಲ್ಲದೆ ಇದ್ದದ್ದಕ್ಕೆ ಉತ್ಪತ್ತಿಯಾಗುವದಕ್ಕೆ (ಯಾವ) ಹೇತುವೂ ಇಲ್ಲ ಎಂದರ್ಥ. ಅದನ್ನೇ (ಶ್ರುತಿಯು) 'ಅಸತ್ತಿನಿಂದ ಸತ್ತು ಹೇಗೆಹುಟ್ಟೀತು?' (ಛಾಂ. ೬-೨-೩) ಎದು ಉಪಪಾದನೆಮಾಡುತ್ತದೆ. **ಹೇಗೆ ಮಣ್ಣಿನಿಂದ ಹುಟ್ಟಿದ್ದ ಗಡಿಗೆಯೇ ಮುಂತಾದದ್ದು ಮೃದಾತ್ಮಕವಾಗಿರುವದೋ ಹಾಗೆ ಅಸತ್ತಿನಿಂದ ಹುಟ್ಟಿದ್ದು ಅಸದಾ ತ್ಮಕವಾಗಿಯೇ ಇರುತ್ತದೆ ಎಂದರ್ಥ.** ಸತ್ತಿಗೆ ಉತ್ಪತ್ತಿ ಎಂದರೆ ಒಂದಾನೊಂದು ವ್ಯವಹಾರಕ್ಕೆ ಕಾರಣವಾಗಿರುವ ಒಂದಾನೊಂದು ಅವಸ್ಥೆಯನ್ನು ಹೊಂದುವದು.

ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ : ಕಾರಣಭೂತವಾದ ಒಂದೇ ದ್ರವ್ಯವೇ ಮತ್ತೊಂದು ಅವಸ್ಥೆಯನ್ನು ಹೊಂದುವದರಿಂದ ಕಾರ್ಯವೆನಿಸುತ್ತದೆಯಾದ್ದರಿಂದ ಒಂದರ ವಿಜ್ಞಾನದಿಂದ ಎಲ್ಲದರ ವಿಜ್ಞಾನವೂ (ಆಗುವದೆಂದು ಇಲ್ಲಿ) ಪ್ರತಿಪಾದಿಸು-ವದಕ್ಕೆ ಹೊರಟಿರುತ್ತದೆ. ಇದು ಅಸತ್ಕಾರ್ಯವಾದದಲ್ಲಿ ಸಿದ್ಧಿಸುವದಿಲ್ಲ. ಹೇಗೆಂದರೆ,

---

1. ಇಲ್ಲಿ ಉದಾಹರಿಸಿರುವ ವಾಕ್ಯದಿಂದ ಕಾರ್ಯವೂ ಕಾರಣವೂ ಅಸತ್ತೆಂಬ ಶೂನ್ಯವಾದಿಗಳ ಪಕ್ಷದ ನಿರಾಸವಿದಲ್ಲ ಎಂದು **ಶಾಂಕರವ್ಯಾಖ್ಯಾನ**ದ ಖಂಡನೆಮಾಡಿದಂತಾಯಿತು. ಕ್ಷಣಿಕ ವಿಜ್ಞಾನಪಕ್ಷದ ನಿರಾಸವಿದೆಂಬ **ಭಾಸ್ಕರಮತ**ವನ್ನೂ ಖಂಡನೆ ಮಾಡಿದಂತೆ ಆಯಿತು.

(ಅಸತ್ಕಾರ್ಯ ಪಕ್ಷದಲ್ಲಿ) ನಿಮಿತ್ತ, ಸಮವಾಯಿ, ಅಸಮವಾಯಿ - ಮುಂತಾದ[1] ಕಾರಣಗಳಿಂದ ಅವಯವಿ ಎಂಬ ಹೆಸರಿನ ಕಾರ್ಯವಾದ ಮತ್ತೊಂದು ದ್ರವ್ಯವೇ[2] ಹುಟ್ಟುತ್ತದೆಯಾದರೆ ಕಾರಣಭೂತವಾದ ವಸ್ತುವಿಗಿಂತ ಕಾರ್ಯವು ಬೇರೆಯಾದ ವಸ್ತುವಾಗಿರುವದರಿಂದ ಆ (ಕಾರಣ)ದ ಜ್ಞಾನದಿಂದ ಈ (ಕಾರ್ಯ)ವು ಜ್ಞಾತ ವಾಗುವದೆಂಬುದು ಹೇಗೂ ಹೊಂದುವದಿಲ್ಲ. ಅವಯವಿಯು ದ್ರವ್ಯಾಂತರ ವೆಂಬುದನ್ನು ಹೇಗೆ ನಿರಾಸಮಾಡಿರುತ್ತದೆ? - ಎಂದರೆ ಕಾರಣಗತವಾದ ಮತ್ತೊಂದು ಅವಸ್ಥೆಯ ಸಂಬಂಧವು ದ್ರವ್ಯಾಂತರದ ಉತ್ಪತ್ತಿಯನ್ನು ಹೇಳುವ ವಾದಿಗೆ ಒಪ್ಪಿಗೆಯಾಗಿಯೇ ಇರುವ, ಏಕತ್ವ, ನಾಮಾಂತರ, ವ್ಯವಹಾರಾಂತರ[3]- ಮುಂತಾದವುಗಳನ್ನು ಉಪಪಾದಿಸುತ್ತಿರುವದರಿಂದಲೂ ದ್ರವ್ಯಾಂಶವು ಕಾಣದೆ ಇರುವದರಿಂದಲೂ (ನಿರಾಸಮಾಡಿರುತ್ತದೆ).[4] ಕಾರಣವೇ ಮತ್ತೊಂದು ಅವಸ್ಥೆಯನ್ನು ಹೊಂದಿ ಕಾರ್ಯವೆನಿಸಿತ್ತದೆ ಎಂದು (ಆಗಲೆ) ಹೇಳಿರುತ್ತೇವೆ.

(ಪೂರ್ವಪಕ್ಷಿ) :- ನಿರಧಿಷ್ಠಾನಭ್ರಮವು ಹೊಂದುವದಿಲ್ಲ ಎಂಬುದನ್ನು ತಿಳಿಸುವದಕ್ಕಾಗಿ ಅಸತ್ಕಾರ್ಯವಾದದ ನಿರಾಸವನ್ನು ಮಾಡಿರುತ್ತದೆ. ಹೇಗೆಂದರೆ ಚಿದ್ರೂಪವೊಂದೇ ನಿತ್ಯವಾಗಿ ಅವಿದ್ಯಾಶಬಲವಾಗಿರುವದರಿಂದ[5] ಜಗದ್ರೂಪದಿಂದ ವಿವರ್ತವಾಗುತ್ತದೆ ಎಂದು ಅವಿದ್ಯಾಶ್ರಯತ್ವವನ್ನು (ಬ್ರಹ್ಮಕ್ಕೆ ಹೊಂದಿಸುವದಕ್ಕಾಗಿ) ಮೂಲಕಾರಣವು ಸತ್ಯವೆಂದು ಒಪ್ಪಬೇಕು. ಆದ್ದರಿಂದ (ಇಲ್ಲಿ) ಅಸತ್ಕಾರ್ಯವಾದದ ನಿರಾಸವನ್ನು ಮಾಡಿರುತ್ತದೆ.

(ಸಿದ್ಧಾಂತಿ) :- ಇದು ಹೀಗಲ್ಲ. ಏಕೆಂದರೆ ಒಂದರ ವಿಜ್ಞಾನದಿಂದ ಎಲ್ಲ- ವನ್ನೂ ಅರಿತಂತೆ ಆಗುವದೆಂಬ ಪ್ರತಿಜ್ಞೆ, ಮತ್ತು (ಮೃದಾದಿ) ದೃಷ್ಟಾಂತ - ಇವುಗಳ ದ್ವಾರದಿಂದ ಸತ್ಕಾರ್ಯವಾದವೇ ಪ್ರಸಕ್ತವಾಗಿರುತ್ತದೆ - ಎಂದು (ಹಿಂದೆ) ಹೇಳಿರು ತ್ತೇವೆ. ನಿಮ್ಮ ಪಕ್ಷದಲ್ಲಿ ನಿರಧಿಷ್ಠಾನಭ್ರಮೆಯು[6] ಹೊಂದುವದಿಲ್ಲ ವೆಂಬುದನ್ನು

---

1. ನಿಮಿತ್ತಶಬ್ದವು ಅಧಿಷ್ಠಾತೃವನ್ನೇ ಹೇಳುವದು. ಪ್ರಸಿದ್ಧವೆಂಬದರಿಂದ ಅಧಿಷ್ಠಾತೃ- ವ್ಯತಿರಿಕ್ತ ವಾದ ದಂಡಚಕ್ರಾದಿನಿಮಿತ್ತಕಾರಣಗಳನ್ನು ಇಲ್ಲಿ 'ಮುಂತಾದ' ಎಂಬ ಮಾತಿನಿಂದ ಹೇಳಿರುತ್ತದೆ.
2. ಅವಯವಿಯು ಒಂದು, ದೊಡ್ಡದು ; ಅವಯವಗಳು ಅನೇಕ, ಅಲ್ಪಪರಿಣಾಮಗಳು ; ಆದ್ದರಿಂದ ಅವಯವಿ ಎಂಬುದು ಬೇರೊಂದು ದ್ರವ್ಯವು.
3. ದ್ರವ್ಯವು ಆದೇ ಆದ್ದರಿಂದ ಅವಸ್ಥಾಭೇದವೆಂಬ ಹೇತುವಿನಿಂದಲೇ ಘಟಬುದ್ಧಿ, ಘಟಶಬ್ದ, ಘಟವ್ಯವಹಾರ- ಮುಂತಾದವು ಸಿದ್ಧಿಸುತ್ತವೆ.
4. ಆದ್ದರಿಂದ ಇದು ವೈಶೇಷಿಕಮತನಿರಾಸವೇ.
5. 'ಅನಾದ್ಯವಿದ್ಯಾಯುಕ್ತವಾಗಿರುವದರಿಂದ' ಎಂದರ್ಥ. ಕಾ। ಪಾಠಕ್ಕೆ 'ಸತ್ಯವಾಗಿರುವ ಚಿದ್ರೂಪವೊಂದೇ ಅವಿದ್ಯೆಯಿಂದ ಮುಸುಕಲ್ಪಟ್ಟಿರುವದರಿಂದ' ಎಂದು ಅನುವಾದ.
6. ಹಗ್ಗವೇ ಮುಂತಾದ ಆಧಾರವಿಲ್ಲದೆ ಹಾವೇ ಮುಂತಾದವುಗಳೆಂದು ತಪ್ಪಾಗಿ ತಿಳಿದುಕೊಳ್ಳುವದು.

ಉಪಪಾದಿಸುವದು ಆಗುವದಿಲ್ಲವಾದ್ದರಿಂದಲೂ (ಇದು ಶೂನ್ಯವಾದ ನಿರಾಸವಲ್ಲ). ಹೇಗೆಂದರೆ ಯಾವನ (ಮತದಲ್ಲಿ) ಚೇತನದಲ್ಲಿರುವ ದೋಷವು ಪಾರಮಾರ್ಥಿಕವಾಗಿರುವದೋ, ದೋಷಕ್ಕೆ ಆಶ್ರಯವಾಗಿರುವದೆಂಬುದೂ ಪಾರಮಾರ್ಥಿಕವಾಗಿರುವದೋ, ಅವನ (ಮತದಲ್ಲಿ) ಪಾರಮಾರ್ಥಿಕದೋಷದಿಂದ ಕೂಡಿದವನಿಗೆ ಅಪಾರಮಾರ್ಥಿಕವಾದ ಗಂಧರ್ವನಗರವೇ ಮುಂತಾದವುಗಳನ್ನು ಕಾಣುವದೆಂಬುದು ಹೊಂದುತ್ತದೆ. ಆದರೆ **ಯಾವನ (ಮತದಲ್ಲಿ) ದೋಷವೂ ಅಪಾರಮಾರ್ಥಿಕವೋ, ದೋಷಾಶ್ರಯತ್ವವೂ ಅಪಾರಮಾರ್ಥಿಕವೋ ಅವನ ಮತದಲ್ಲಿ ಅಪಾರಮಾರ್ಥಿಕವಾದ ಆಶ್ರಯದಿಂದಲೂ ಆ (ಭ್ರಮದರ್ಶನವು) ಹೊಂದುತ್ತದೆ-ಯಾಗಿ ನಿಮ್ಮ ಪಕ್ಷದಲ್ಲಿ ನಿರಧಿಷ್ಠಾನಭ್ರಮೆಯು ಸಂಭವಿಸುವದಿಲ್ಲವೆಂಬುದಿಲ್ಲ.**[1]

ಶೋಧಕವಾಕ್ಯಗಳು ನಿರ್ವಿಶೇಷಪರವಲ್ಲ

(ಮೂಲ)

೨೮. ಶೋಧಕವಾಕ್ಯೇಷ್ವಪಿ[2] 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) 'ಆನನ್ದೋ ಬ್ರಹ್ಮ' (ತೈ. ೩-೬) ಇತ್ಯಾದಿಷು ಸಾಮಾನಾಧಿಕರಣ್ಯ ವ್ಯುತ್ಪತ್ತಿಸಿದ್ಧಾನೇಕಗುಣವಿಶಿಷ್ಟೈಕಾರ್ಥಾಭಿಧಾನಮ್[3] ಅವಿರುದ್ಧಮಿತಿ ಸರ್ವಗುಣವಿಶಿಷ್ಟಂ ಬ್ರಹ್ಮಾಽಭಿಧೀಯತ ಇತಿ ಪೂರ್ವಮೇವೋಕ್ತಮ್ ॥

(ಅರ್ಥ)

'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' (ತೈ.೨-೧), 'ಆನಂದವು ಬ್ರಹ್ಮ' (ತೈ. ೩-೬) ಎಂದು ಮುಂತಾಗಿರುವ **ಶೋಧಕವಾಕ್ಯ**ಗಳಲ್ಲಿಯೂ ಸಾಮಾನಾಧಿಕರಣ್ಯದ ವ್ಯುತ್ಪತ್ತಿಯಿಂದ ಸಿದ್ಧವಾಗಿರುವ ಅನೇಕ ಗುಣಗಳಿಂದಕೂಡಿದ

---

1. ಅಧಿಷ್ಠಾನವು ಅಪರಮಾರ್ಥವಾದರೆ ಭ್ರಮೆಯು ಸಂಭವಿಸುವದಿಲ್ಲವೆನ್ನುವದು ದೃಷ್ಟಾಂತದಿಂದಲೊ, ಯುಕ್ತಿಯ ಬಲದಿಂದಲೊ? ದೃಷ್ಟಾಂತದಿಂದಲಾದರೆ ದೋಷದೋಷಾಶ್ರಯತ್ವಾದಿಗಳು ಅಪರಮಾರ್ಥವಾಗಿದ್ದರೂ ಭ್ರಮೆಯಾಗುವದು ಎಲ್ಲಿಯೂ ಕಂಡಿಲ್ಲ. ಯುಕ್ತಿಯಿಂದಲಾದರೆ ದೋಷವು ಅಪರಮಾರ್ಥವಾದರೆ ದೋಷಾಂತರವು ಬೇಕಾಗುತ್ತದೆಯಾಗಿ ಅನವಸ್ಥಾದೋಷವು ಬರುವದು ; ಆದ್ದರಿಂದ ಅದು ಪರಮಾರ್ಥವೆಂದೇ ಆಗುವದು. ಅನವಸ್ಥಾದೋಷವನ್ನು ಪರಿಹರಿಸುವದಕ್ಕೆ ಸ್ವರೂಪಾನಾದಿತ್ವ, ಪ್ರವಾಹಾನಾದಿತ್ವ, ದುರ್ಘಟತ್ವ, ಸ್ವಪರನಿರ್ವಾಹಕತ್ವ- ಮುಂತಾದವುಗಳನ್ನು ಕಲ್ಪಿಸಿದರೆ ಅದನ್ನು ಅಧಿಷ್ಠಾನಕ್ಕೇ ಕಲ್ಪಿಸಬಹುದು. ಅನಾದಿಯಾದರೂ ಅನವಸ್ಥಾದೋಷವು ತಪ್ಪಿದ್ದಲ್ಲ; ಏಕೆಂದರೆ ಅನಾದಿಯಾದ ಅಪರಮಾರ್ಥ ಜೀವಭೇದವೂ (?) ದೋಷಮೂಲವೆಂದೇ ಒಪ್ಪಿರುತ್ತೀರಿ- ಎಂದು ತಾ॥ 2. 'ಏತಚ್ಛೋಧಕ' ಎಂಬ ಕಾ॥ ಪಾಠವನ್ನು ಟೀಕೆಯಲ್ಲಿ ಹಿಡಿದಿಲ್ಲ; 'ಏತತ್' ಎಂಬ ಮಾತು ಬೇಕೂ ಇಲ್ಲವೆಂದು ತೋರುತ್ತದೆ.

3. 'ಏಕಾರ್ಥಾವಬೋಧನಮ್' ಕಾ॥

ಒಂದು ವಸ್ತುವನ್ನು ಹೇಳುವದೇನೂ ವಿರುದ್ಧವಲ್ಲವಾದ್ದರಿಂದ ಸರ್ವಗುಣ ವಿಶಿಷ್ಟವಾದ ಬ್ರಹ್ಮವನ್ನೇ ಹೇಳಿದೆ ಎಂದು ಹಿಂದೆಯೇ (ಖಂ.೧೯) ಹೇಳಿದ್ದಾಗಿದೆ.

ನೇತಿ ನೇತಿ ಶ್ರುತಿಯು ನಿರ್ವಿಶೇಷಪರವಲ್ಲ

(ಮೂಲ)

೨೯. 'ಅಥಾತ ಆದೇಶೋ ನೇತಿ ನೇತಿ' (ಬೃ.೨-೩-೬) ಇತಿ ಬಹುಧಾ ನಿಷೇಧೋ ದೃಶ್ಯತ ಇತಿ ಚೇತ್ । ಕಿಮತ್ರ ನಿಷಿಧ್ಯತ ಇತಿ ವಕ್ತವ್ಯಮ್ । 'ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚೈವಾಮೂರ್ತಂ ಚ'[1] (ಬೃ.೨-೩-೧) ಇತಿ ಮೂರ್ತಾಮೂರ್ತಾತ್ಮಕಃ ಪ್ರಪಞ್ಚಃ ಸರ್ವೋಽಪಿ ನಿಷಿಧ್ಯತ ಇತಿ ಚೇತ್ । ಬ್ರಹ್ಮಣೋ ರೂಪತಯಾ ಅಪ್ರಜ್ಞಾತಂ ಸರ್ವಂ ರೂಪತಯಾ ಉಪದಿಶ್ಯ ಪುನಸ್ತದೇವ ನಿಷೇದ್ಧುಮ್ ಅಯುಕ್ತಮ್ । 'ಪ್ರಕ್ಷಾಲನಾದ್ಧಿ ಪಙ್ಕಸ್ಯದೂರಾದಸ್ಪರ್ಶನಂ ವರಮ್'[2] (?) ಇತಿ ನ್ಯಾಯಾತ್ । ಕಸ್ತರ್ಹಿ ನಿಷೇಧಕವಾಕ್ಯಾರ್ಥಃ ? ಸೂತ್ರಕಾರಃ ಸ್ವಯಮೇವ ವದತಿ 'ಪ್ರಕೃತ್ಯೈತಾವತ್ತ್ವಂ ಹಿ ಪ್ರತಿಷೇಧತಿ ತತೋ ಬ್ರವೀತಿ ಚ ಭೂಯಃ' (ವೇ. ಸೂ. ೩-೨-೨೧) ಇತಿ । ಉತ್ತರತ್ರ 'ಅಥ ನಾಮಧೇಯಂ ಸತ್ಯಸ್ಯ ಸತ್ಯಮಿತಿ ಪ್ರಾಣಾ ವೈ ಸತ್ಯಂ ತೇಷಾಮೇಷ ಸತ್ಯಮ್' (ಬೃ.೨-೩-೬) ಇತಿ ಸತ್ಯಾದಿಗುಣಗಣಸ್ಯ[3] ಪ್ರತಿಪಾದಿತ್ವಾತ್ ಪೂರ್ವಪ್ರಕೃತೈತಾವನ್ಮಾತ್ರಂ ನ ಭವತಿ ಬ್ರಹ್ಮ ಇತಿ ಬ್ರಹ್ಮಣ ಏತಾವನ್ಮಾತ್ರತಾ[4] ಪ್ರತಿಷಿಧ್ಯತೇ ಇತಿ ಸೂತ್ರಸ್ಯಾರ್ಥಃ ॥

(ಅರ್ಥ)

(ಶಂಕೆ) :- 'ಇನ್ನು ಆದ್ದರಿಂದ ಆದೇಶವು, ಇದಲ್ಲ, ಇದಲ್ಲ[5], (ಬೃ.೨-೩-೬) ಎಂದು ಬಹುಪ್ರಕಾರವಾಗಿ ನಿಷೇಧವು ಕಾಣುತ್ತದೆಯಲ್ಲ!

(ಪರಿಹಾರ):- ಇಲ್ಲಿ ಏನನ್ನು ನಿಷೇಧಿಸಿದೆ?- ಎಂಬುದನ್ನು (ನೀವು) ಹೇಳಬೇಕು.

(ಶಂಕೆ) :- 'ಮೂರ್ತವೆಂಬುದೇ (ಒಂದು), ಅಮೂರ್ತವು (ಮತ್ತೊಂದು) - ಎಂಬಿವೆರಡೇ ಬ್ರಹ್ಮದ ರೂಪಗಳು' (ಬೃ.೨-೩-೧) ಎಂದು ಮೂರ್ತಾ ಮೂರ್ತಾತ್ಮಕವಾದ ಪ್ರಪಂಚವೆಲ್ಲವನ್ನೂ ನಿಷೇಧಿಸಿದೆ(ಯಲ್ಲ)!

---

1. 'ಮೂರ್ತಂ ಚಾಮೂರ್ತಮೇವ ಚ' ಕಾ॥ 2. ಈ ಶ್ಲೋಕವು ಎಲ್ಲಿಯದೆಂದು ತಿಳಿಯದು. ಭಾರತ ವನಪರ್ವದಲ್ಲಿ (೨-೪೯) ಇದೇ ಅರ್ಥದ ಬೇರೊಂದು ಶ್ಲೋಕಾರ್ಧವಿದೆ.
3. 'ಇತ್ಯಾದಿನಾ ಗುಣಗಣಸ್ಯ' ಎಂಬ ಪಾಠಕ್ಕಿಂತ ಇದೇ ಮೇಲೆಂದು ತೋರುತ್ತದೆ.
4. 'ತಾವನ್ಮಾತ್ರತಾ' ಎಂಬ ಕಾ॥ ಪಾಠಕ್ಕಿಂತ ಇದು ಮೇಲು.
5. ಯಾವದೂ ಬ್ರಹ್ಮದ ಸ್ವರೂಪವಲ್ಲ ಎಂಬುದು ಪೂರ್ವಪಕ್ಷಿಯ ಶ್ರುತ್ಯರ್ಥ.

(ಪರಿಹಾರ) :- ಬ್ರಹ್ಮದ ರೂಪವೆಂದು (ಮೊದಲು) ತಿಳಿಯದೆ ಇದ್ದ ಎಲ್ಲವನ್ನೂ (ಅದರ) ರೂಪವೆಂದು ಉಪದೇಶಿಸಿ ಮತ್ತೆ ಅದನ್ನೇ ನಿಷೇಧಿಸಿರುವದು ಅಯುಕ್ತವು. ಏಕೆಂದರೆ 'ಕೆಸರನ್ನು ತೊಳೆದುಕೊಳ್ಳುವದಕ್ಕಿಂತ ದೂರದಲ್ಲಿಯೇ (ಇದ್ದು ಅದನ್ನು) ಮುಟ್ಟದೆ ಇರುವದೇ ಮೇಲು' (?) ಎಂಬ ನ್ಯಾಯವಿದೆ.[1]

(ಪ್ರಶ್ನೆ) :- ಹಾಗಾದರೆ (ಈ) ನಿಷೇಧಕವಾಕ್ಯಕ್ಕೆ ಅರ್ಥವೇನು?

(ಉತ್ತರ) :- 'ಪ್ರಕೃತವಾದ ಏತಾವತ್ತ್ವವನ್ನಲ್ಲವೆ, ಪ್ರತಿಷೇಧಿಸಿದೆ? ಅದಾದ ಬಳಿಕ ಬಹಳವಾಗಿ ಹೇಳಿಯೂ ಇರುತ್ತದೆ' (ವೇ.ಸೂ. ೩-೨-೨೧) ಎಂದು (ಇದಕ್ಕೆ) **ಸೂತ್ರಕಾರರು** ತಾವೇ (ಅರ್ಥವನ್ನು) ಹೇಳಿರುತ್ತಾರೆ. ಮುಂದೆ 'ಇನ್ನು ನಾಮಧೇಯವು, ಸತ್ಯದ ಸತ್ಯವೆಂದು ; ಪ್ರಾಣಗಳೇ ಸತ್ಯವು, ಅವುಗಳಿಗೆ ಇವನು ಸತ್ಯವು' (ಬೃ.೨-೩-೬) ಎಂದು ಸತ್ಯಾದಿಗುಣಗಣವನ್ನು ಪ್ರತಿಪಾದಿಸಿರುವದರಿಂದ ಮೊದಲು ಪ್ರಕೃತವಾಗಿದ್ದ ಇಷ್ಟೇ ಅಲ್ಲ, ಬ್ರಹ್ಮವು- ಎಂದು ಬ್ರಹ್ಮಕ್ಕೆ ಏತಾವನ್ಮಾತ್ರತ್ವವನ್ನು ಪ್ರತಿಷೇಧಿಸಿದೆ - ಎಂಬುದು ಸೂತ್ರದ ಅರ್ಥವು.

ನೇಹ ನಾನಾಸ್ತಿ ಶ್ರುತಿಯು ನಿರ್ವಿಶೇಷಪರವಲ್ಲ

(ಮೂಲ)

೩೦. 'ನೇಹ ನಾನಾಸ್ತಿ ಕಿಞ್ಚನ' (ಬೃ.೪-೪-೧೯) ಇತ್ಯಾದಿನಾ ನಾನಾತ್ವಪ್ರತಿಷೇಧ ಏವ ದೃಶ್ಯತ ಇತಿ ಚೇತ್ । ಅತ್ರಾಽಪಿ ಉತ್ತರತ್ರ 'ಸರ್ವಸ್ಯ ವಶೀ ಸರ್ವಸ್ಯೇಶಾನಃ' (ಬೃ.೪-೪-೨೨) ಇತಿ ಸತ್ಯಸಂಕಲ್ಪತ್ವಸರ್ವೇಶ್ವರತ್ವ ಪ್ರತಿಪಾದನಾತ್, ಚೇತನಾಚೇತನವಸ್ತು[2] ಶರೀರ ಈಶ್ವರ ಇತಿ ಸರ್ವಪ್ರಕಾರ ಸಂಸ್ಥಿತಃ ಸರ್ವೇಶ್ವರಃ ಸ ಏಕ ಏವೇತಿ ತತ್ತ್ವತ್ಯನೀಕಾಬ್ರಹ್ಮತ್ವನಾನಾತ್ವಂ ಪ್ರತಿಷಿದ್ಧಮ್ ನ ಭವದಭಿಮತಮಂ । ಸರ್ವಾಸ್ವೇವಂಪ್ರಕಾರಾಸು ಶ್ರುತಿಷು ಇಯಮೇವ ಸ್ಥಿತಿ[3]ರಿತಿ ನ ಕ್ವಚಿದಪಿ ಬ್ರಹ್ಮಣಃ ಸವಿಶೇಷತ್ವನಿಷೇಧವಾಚೀ[4] ಕೋಽಪಿ ಶಬ್ದೋ ದೃಶ್ಯತೇ ॥

(ಅರ್ಥ)

(ಶಂಕೆ) :- 'ಇಲ್ಲಿ ಸ್ವಲ್ಪವೂ ನಾನಾತ್ವವಿರುವದಿಲ್ಲ' (ಬೃ.೪-೪-೧೯) ಮುಂತಾದ ವಾಕ್ಯದಿಂದ ನಾನಾತ್ವಪ್ರತಿಷೇಧವನ್ನು (ಮಾಡಿರುವ)ದೇ ಕಾಣುತ್ತದೆಯಲ್ಲ!

---

1. ಆದ್ದರಿಂದ ತಾನೇ ಮೂರ್ತಾಮೂರ್ತಗಳು ರೂಪವೆಂದು ಹೇಳಿ ಅವು ಬ್ರಹ್ಮಸ್ವರೂಪವಲ್ಲ ಎಂದು ಹೇಳುವದು ಈ ನ್ಯಾಯಕ್ಕೆ ಉದಾಹರಣೆಯಾಗುವದು.
2. 'ಸರ್ವವಸ್ತುಶರೀರ' ಕಾ॥
3. 'ರೀತಿರಿತಿ' ತ॥ 4. 'ನಿಷೇಧಕಃ' ಕಾ॥

(ಪರಿಹಾರ) :- ಇಲ್ಲಿಯೂ ಮುಂದೆ 'ಸರ್ವಕ್ಕೂ ವಶಿಯು, ಸರ್ವಕ್ಕೂ ಈಶಾನನು' (ಬೃ.೪-೪-೨೨) ಎಂದು ಸತ್ಯಸಂಕಲ್ಪತ್ವ, ಸರ್ವೇಶ್ವರತ್ವ- ಇವನ್ನು ತಿಳಿಸಿರುವದರಿಂದ ಚೇತನಾಚೇತನವಸ್ತುಗಳನ್ನು ಶರೀರವಾಗುಳ್ಳವನು ಈಶ್ವರನಾದ್ದರಿಂದ ಎಲ್ಲಾ ಪ್ರಕಾರಗಳಿಂದಲೂ ಕೂಡಿರುವಾತನು ಸರ್ವೇಶ್ವರನು, ಅವನು ಒಬ್ಬನೇ- ಎಂದು ಅದಕ್ಕೆ ವಿರುದ್ಧವಾದ ಅಬ್ರಹ್ಮಾತ್ಮಕವಾದ ನಾನಾತ್ವವನ್ನು ಪ್ರತಿಷೇಧಮಾಡಿದೆಯೇ ಹೊರತು ನಿಮಗೆ ಇಷ್ಟವಾದ (ವಿಶೇಷಗಳ ನಿಷೇಧ) ವಿಲ್ಲ.

ಈ ಪ್ರಕಾರವಾದ ಎಲ್ಲಾ ಶ್ರುತಿಗಳಲ್ಲಿಯೂ ಇದೇ ಸ್ಥಿತಿ(ಯಿರುತ್ತದೆ)ಯಾದ್ದರಿಂದ ಬ್ರಹ್ಮಕ್ಕೆ ಸವಿಶೇಷತ್ವವನ್ನು ಅಲ್ಲಗಳೆಯುವ ಯಾವ ಶಬ್ದವೂ ಎಲ್ಲಿಯೂ ಕಾಣಬರುವುದಿಲ್ಲ.

ಈ ಮತವು ಯುಕ್ತಿ ವಿರುದ್ಧ

೧. ಬ್ರಹ್ಮವು ಅವಿದ್ಯಾತಿರೋಹಿತವಾಗಲಾರದು

ನಿತ್ಯಜ್ಞಾನಕ್ಕೆ ತಿರೋಧಾನವು ಸಲ್ಲದು

(ಮೂಲ)

೩೧. ಅಪಿ ಚ ನಿರ್ವಿಶೇಷಜ್ಞಾನಮಾತ್ರಂ ಬ್ರಹ್ಮ, ತಚ್ಚಾಽಽಚ್ಛಾದಿಕಾವಿದ್ಯಾತಿರೋಹಿತಸ್ವಸ್ವರೂಪಂ ಸ್ವಗತನಾನಾತ್ವಂ ಪಶ್ಯತಿ - ಇತ್ಯಯಮರ್ಥೋ ನ ಘಟತೇ । ತಿರೋಧಾನಂ ನಾಮ ಪ್ರಕಾಶನಿವಾರಣಮ್ । ಸ್ವರೂಪಾತಿರೇಕಿಪ್ರಕಾಶಧರ್ಮಾನಭ್ಯುಪಗಮೇನ ಪ್ರಕಾಶಸ್ಯೈವ ಸ್ವರೂಪತ್ವಾತ್ ಸ್ವರೂಪನಾಶ ಏವ ಸ್ಯಾತ್ । ಪ್ರಕಾಶಪರ್ಯಾಯಂ ಜ್ಞಾನಂ ನಿತ್ಯಮ್, ಸ ಚ ಪ್ರಕಾಶೋಽವಿದ್ಯಾ ತಿರೋಹಿತ[1] ಇತಿ ಬಾಲಿಶಭಾಷಿತಮಿದಮ್ । ಅವಿದ್ಯಯಾ ಪ್ರಕಾಶಸ್ತಿರೋಹಿತ ಇತಿ ಪ್ರಕಾಶೋತ್ಪತ್ತಿಪ್ರತಿಬನ್ಧೋ ವಾ ವಿದ್ಯಮಾನಸ್ಯ ವಿನಾಶೋ ವಾ? ಪ್ರಕಾಶಸ್ಯಾಽನುತ್ಪಾದ್ಯತ್ವಾತ್ ವಿನಾಶ ಏವ[2] ಸ್ಯಾತ್ । ಪ್ರಕಾಶೋ ನಿತ್ಯೋ ನಿರ್ವಿಕಾರಸ್ತಿಷ್ಠತೀತಿ ಚೇತ್ । ಸತ್ಯಾಮಪ್ಯವಿದ್ಯಾಯಾಂ ಬ್ರಹ್ಮಣಿ ನ ಕಿಞ್ಚಿತ್ತಿರೋಹಿತಮಿತಿ ನಾನಾತ್ವಂ ಪಶ್ಯತೀತಿ ಭವತಾಮಯಂ ವ್ಯವಹಾರಃ ಸತ್ಸ್ವನಿರ್ವಚನೀಯ ಏವ ॥

(ಅರ್ಥ)

ಮತ್ತು ನಿರ್ವಿಶೇಷಜ್ಞಾನಮಾತ್ರವೇ ಬ್ರಹ್ಮವು, ಅದು ಆಚ್ಛಾದಕವಾದ ಅವಿದ್ಯೆಯಿಂದ ಸ್ವರೂಪವು ತಿರೋಹಿತವಾಗಿರುವದರಿಂದ ತನ್ನಲ್ಲಿ ನಾನಾತ್ವವನ್ನು

---

1. 'ನಿವಾರಿತಃ' ಕಾ॥ 2. 'ಸ್ವರೂಪನಾಶ ಏವ' ಪಾ॥

ಕಾಣುತ್ತಿರುವದು- ಎಂಬೀ ಅರ್ಥವು ಹೊಂದುವದಿಲ್ಲ. ತಿರೋಧಾನವೆಂದರೆ ಪ್ರಕಾಶವನ್ನು ಅಡ್ಡಿಮಾಡುವದು. ತನ್ನ ಸ್ವರೂಪಕ್ಕಿಂತ ಬೇರೆಯಾದ ಪ್ರಕಾಶವೆಂಬ ಧರ್ಮವನ್ನು ಒಪ್ಪದೆ ಇರುವದರಿಂದ ಪ್ರಕಾಶವೇ ಸ್ವರೂಪವಾಗಿದೆಯಾಗಿ (ತಿರೋಧಾನವೆಂದರೆ) ಸ್ವರೂಪನಾಶವೇ ಆಗುವದು. ಪ್ರಕಾಶಪರ್ಯಾಯವಾದ ಜ್ಞಾನವು ನಿತ್ಯವು, ಅದು ಅವಿದ್ಯೆಯಿಂದ ಮುಚ್ಚಲ್ಪಟ್ಟೂ ಇದೆ[1] ಎಂಬುದು ಮಕ್ಕಳ ಮಾತು. ಅವಿದ್ಯೆಯಿಂದ ಪ್ರಕಾಶವು ತಿರೋಹಿತವಾಗಿದೆ ಎಂದರೆ ಪ್ರಕಾಶವುಂಟಾಗುವದಕ್ಕೆ ಅಡ್ಡಿಯೊ, ಇರುವದರ ವಿನಾಶವೊ? ಪ್ರಕಾಶವು ಉತ್ಪಾದ್ಯವಲ್ಲವಾದ್ದರಿಂದ ವಿನಾಶವೆಂದೇ ಆಗುವದು. ಪ್ರಕಾಶವು ನಿತ್ಯವು, ನಿರ್ವಿಕಾರವಾಗಿಯೇ ಇರುತ್ತದೆ - ಎನ್ನುವದಾದರೆ, ಅವಿದ್ಯೆಯಿದ್ದರೂ ಬ್ರಹ್ಮದಲ್ಲಿ ಯಾವದೂ ತಿರೋಹಿತವಾಗಿಯೇ ಇರುವದಿಲ್ಲವೆಂದಾಗಿ (ಅದು) ನಾನಾತ್ವವನ್ನು ಕಾಣುತ್ತದೆ ಎಂಬೀ ನಿಮ್ಮಗಳ ವ್ಯವಹಾರವು ಸತ್ಪುರುಷರಬಳಿಯಲ್ಲಿ ಆಡತಕ್ಕದ್ದೇ ಅಲ್ಲ.

ಸಿದ್ಧಾಂತಕ್ಕೆ ಶ್ರುತಿಸ್ಮೃತ್ಯಾದಿಪ್ರಾಮಾಣ್ಯವಿರುವದರಿಂದ ಈ ದೋಷವಿಲ್ಲ

(ಮೂಲ)

೩೨. ನನು ಚ ಭವತೋಽಪಿ ವಿಜ್ಞಾನಸ್ವರೂಪ ಆತ್ಮಾ ಅಭ್ಯುಪಗನ್ತವ್ಯಃ । ಸ ಚ ಸ್ವಯಂಪ್ರಕಾಶಃ । ತಸ್ಯ ಚ ದೇವಾದಿಸ್ವರೂಪಾತ್ಮಾಭಿಮಾನೇ ಸ್ವರೂಪಪ್ರಕಾಶತಿರೋಧಾನಮ್ ಅವಶ್ಯಾಶ್ರಯಣೀಯಮ್ । ಸ್ವರೂಪಪ್ರಕಾಶೇ ಸತಿ ಸ್ವಾತ್ಮನ್ಯಾಕಾರಾನ್ತರಾಧ್ಯಾಸಾಯೋಗಾತ್ । ಅತೋ ಭವತಶ್ಚ ಸಮಾನೋಽಯಂ ದೋಷಃ । ಕಿಂಚ, ಅಸ್ಮಾಕಮೇಕಸ್ಮಿನ್ನೇವಾಽಽತ್ಮನಿ ಭವದುದೀರಿತಂ ದುರ್ಘಟಿತ್ವಮ್ । ಭವತಾಮ್ ಆತ್ಮಾನನ್ಯಾಭ್ಯುಪಗಮಾತ್ ಸರ್ವೇಷ್ವಯಂ ದೋಷಃ ಪರಿಹರಣೀಯಃ ॥

ಅತ್ರೋಚ್ಯತೇ । ಸ್ವಭಾವತೋ ಮಲಪ್ರತ್ಯನೀಕಾನನ್ತಜ್ಞಾನಾನನ್ದೈಕಸ್ವರೂಪಮ್, ಸ್ವಾಭಾವಿಕಾನವಧಿಕಾತಿಶಯಾಪರಿಮಿತೋದಾರಗುಣಸಾಗರಮ್, ನಿಮೇಷಕಾಷ್ಠಾಕಲಾಮುಹೂರ್ತಾದಿಪದಾರ್ಥಪರ್ಯನ್ತಾಪರಿಮಿತವ್ಯವಚ್ಛೇದಸ್ವರೂಪಸರ್ವೋತ್ಪತ್ತಿಸ್ಥಿತಿವಿನಾಶಾದಿ[2] ಪರಿಣಾಮನಿಮಿತ್ತಭೂತಕಾಲಕೃತಪರಿಣಾಮಾಸ್ಪೃಷ್ಟಾನನ್ತ ಮಹಾವಿಭೂತಿ, ಸ್ವಲೀಲಾಪರಿಕರಸ್ವಾಂಶಭೂತಾನನ್ತಬದ್ಧಮುಕ್ತನಾನಾವಿಧಚೇತನತದ್ಭೋಗ್ಯ ಭೂತಾನನ್ತವಿಚಿತ್ರಪರಿಣಾಮಶಕ್ತಿ, ಚೇತನೇತರವಸ್ತುಜಾತಾನ್ತರ್ಯಾಮಿತ್ವಕೃತ ಸರ್ವಶರೀರತ್ವ ಸರ್ವಪ್ರಕಾರಾವಸ್ಥಾನಾವಸ್ಥಿತಂ

---

1. ಅಡ್ಡಿ ಮಾಡಲ್ಪಟ್ಟಿದೆ - ಎಂಬುದು ಪಾಠಾಂತರಕ್ಕೆ ಅನುವಾದ
2. 'ಸರ್ವಪರಿಣಾಮ' ಕಾ॥.

ಪರಂ ಬ್ರಹ್ಮ ಚ ವೇದ್ಯಮ್, ತತ್ಸಾಕ್ಷಾತ್ಕಾರಕ್ಷಮಭಗವದ್ದ್ವೈಪಾಯನ ಪರಾಶರ ವಾಲ್ಮೀಕಿಮನುಯಾಜ್ಞವಲ್ಕ್ಯಗೌತಮಾಪಸ್ತಮ್ಬಪ್ರಭೃತಿಮುನಿಗಣಪ್ರಣೀತ ವಿಧ್ಯರ್ಥವಾದಮನ್ತ್ರರೂಪ ವೇದಮೂಲೇತಿಹಾಸಪುರಾಣಧರ್ಮಶಾಸ್ತ್ರೋಪ ಬೃಂಹಿತಪರಮಾರ್ಥಭೂತಾಽನಾದಿನಿಧನಾವಿಚ್ಛಿನ್ನಪಾಠಸಂಪ್ರದಾಯಋಗ್ಯಜುಃ ಸಾಮಾಥರ್ವರೂಪಾನನ್ತಶಾಖಂ ವೇದಂ ಚಾಽಭ್ಯುಪಗಚ್ಛತಾಮ್ ಅಸ್ಮಾಕಂ ಕಿಂ ನ ಸೇತ್ಸ್ಯತಿ ?

ಯಥೋಕ್ತಂ ಭಗವತಾ ದ್ವೈಪಾಯನೇನ ಮಹಾಭಾರತೇ 'ಯೋ ಮಾಮಜ ಮನಾದಿಂ ಚ ವೇತ್ತಿ ಲೋಕಮಹೇಶ್ವರಮ್' (ಗೀ. ೧೦-೩), 'ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ । ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ । ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತಯುದಾಹೃತಃ । ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥' (ಗೀ. ೧೫-೧೬, ೧೭), 'ಕಾಲಃ ಸಂಪಚ್ಯತೇ ತತ್ರ ಕಾಲಸ್ತತ್ರ ನ ವೈ ಪ್ರಭುಃ ॥'(ಮೋ.ಧ. ೧೯೮-೯)[1], 'ಏತೇ ವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ ॥' (ಮೋ.ಧ. ೧೯೮-೬), 'ಅವ್ಯಕ್ತಾದಿವಿಶೇಷಾನ್ತಂ ಪರಿಣಾಮಧಿಸಂಯುತಮ್ । ಕ್ರೀಡಾ ಹರೇರಿದಂ ಸರ್ವಂ ಕ್ಷರ ಇತ್ಯವಧಾರ್ಯತಾಮ್ ॥' (ಮೋ.ಧ.ಕುಂ.೨೦೬-೫೮)[2] 'ಕೃಷ್ಣ ಏವ ಹಿ ಲೋಕಾನಾಮುತ್ಪತ್ತಿರಪಿ ಚಾಪ್ಯಯಃ[3] । ಕೃಷ್ಣಸ್ಯ ಹಿ ಕೃತೇ ಭೂತಮಿದಂ ವಿಶ್ವಂ[4] ಚರಾಚರಮ್ ॥' (ಮ.ಭಾ.ಸಭಾ.೩೮-೨೩) ಕೃಷ್ಣಸ್ಯ ಹಿ ಕೃತೇ ಇತಿ । ಕೃಷ್ಣಸ್ಯ ಶೇಷಭೂತಮ್ ಸರ್ವಮ್[5] ಇತ್ಯರ್ಥಃ । ಭಗವತಾ ಪರಾಶರೇಣಾಪ್ಯುಕ್ತಮ್[6] । 'ಶುದ್ಧೇ ಮಹಾವಿಭೂತ್ಯಾಖ್ಯೇ ಪರೇ ಬ್ರಹ್ಮಣಿ ಶಬ್ದ್ಯತೇ । ಮೈತ್ರೇಯ ಭಗವಚ್ಛಬ್ದಃ ಸರ್ವಕಾರಣಕಾರಣೇ ॥' (ವಿ.ಪು.೬-೫-೭), 'ಜ್ಞಾನಶಕ್ತಿಬಲೈಶ್ವರ್ಯವೀರ್ಯತೇ-ಜಾಂಸ್ಯಶೇಷತಃ । ಭಗವಚ್ಛಬ್ದ ವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ ॥' (ವಿ.ಪು.೬-೫-೭೯), 'ಏವಮೇಷ ಮಹಾಶಬ್ದೊ[7] ಮೈತ್ರೇಯ ಭಗವಾನಿತಿ । ಪರಮಬ್ರಹ್ಮಭೂತಸ್ಯ ವಾಸುದೇವಸ್ಯ ನಾನ್ಯಗಃ ॥' (ವಿ.ಪು. ೬-೫-೭೬), 'ತತ್ರ ಪೂಜ್ಯಪದಾರ್ಥೋಕ್ತಿಪರಿಭಾಷಾ ಸಮನ್ವಿತಃ । ಶಬ್ದೋಽಯಂ ನೋಪಚಾರೇಣ ತ್ವನ್ಯತ್ರ ಹ್ಯುಪಚಾರತಃ ॥' (ವಿ.ಪು. ೬-೫-೭೭), 'ಏವಂ ಪ್ರಕಾರಮಮಲಂ ನಿತ್ಯಂ ವ್ಯಾಪಕಮಕ್ಷಯಮ್ ಸಮಸ್ತಹೇಯರಹಿತಂ ವಿಷ್ಣ್ವಾಖ್ಯಂ ಪರಮಂ ಪದಮ್ ॥'

---

1. 'ಸಂಪದ್ಯತೇ' ಎಂದು ಬೊಂ॥ ಪಾಠ ; 'ಸ ಕಾಲಸ್ಯ ಪ್ರಭೂ ರಾಜನ್ ಸ್ವರ್ಗಸ್ಯಾಪಿ ತಥೇಶ್ವರಃ' ಎಂದು ಉತ್ತರಾರ್ಧ. 2. ಇದು ಬೊಂ॥ ಪಾಠದಲ್ಲಿಲ್ಲ.
3. 'ಅವ್ಯಯಃ' ಎಂದು ಅಚ್ಚಿನ ಭಾರತ ಪಾಠ 4. 'ವಿಶ್ವಮಿದಂ ಭೂತಂ' ಅಚ್ಚಿನ ಪಾಠ
5. ಈ ಮಾತು ತೆ॥ಪಾಠದಲ್ಲಿಲ್ಲ. 6. 'ಏವಮುಕ್ತಮ್' ಎಂದು ತೆ॥
7. 'ಮಹಾಖ್ಯಬ್ದೋ' ಎಂದು ಅಚ್ಚಿನ ಪಾಠ.

(ವಿ.ಪು.೧-೨೨-೫೩), 'ಕಲಾಮುಹೂರ್ತಾದಿಮಯಶ್ಚ ಕಾಲೋ । ನ ಯದ್ವಿಭೂತೇಃ ಪರಿಣಾಮಹೇತುಃ'॥ (ವಿ.ಪು. ೪-೧-೮೪), 'ಕ್ರೀಡತೋ ಬಾಲಕಸ್ಯೇವ ಚೇಷ್ಟಾಂ ತಸ್ಯ ನಿಶಾಮಯ' (ವಿ.ಪು.೧-೨-೧೮) ಇತಿ । ಮನುನಾಪಿ 'ಪ್ರಶಾಸಿತಾರಂ ಸರ್ವೇಷಾಮಣೀಯಾಂಸಮಣೀಯಸಾಮ್'[1] (ಮನು. ೧೨-೧೨೨) ಇತ್ಯಾದ್ಯುಕ್ತಮ್ । ಯಾಜ್ಞವಲ್ಕ್ಯೇನಾಪಿ 'ಕ್ಷೇತ್ರಜ್ಞಸ್ಯೇಶ್ವರಜ್ಞಾನಾದ್ವಿಶುದ್ಧಿಃ ಪರಮಾ ಮತಾ' (ಯಾ. ಸ್ಮೃ)[2] ಇತ್ಯಾದಿ । ಅಪಸ್ತಮ್ಬೇನಾಽಪಿ 'ಪೂಃ ಪ್ರಾಣಿನಃ ಸರ್ವ ಏವ ಗುಹಾಶಯಸ್ಯ' (ಆ.ಧ. ೧-೨೨-೪) ಇತಿ । ಸರ್ವೇ ಪ್ರಾಣಿನೋ ಗುಹಾಶಯಸ್ಯ ಪರಮಾತ್ಮನಃ ಪೂಃ, ಪುರಂ ಶರೀರಮಿತ್ಯರ್ಥಃ । ಪ್ರಾಣಿನ ಇತಿ ಜೀವಾತ್ಮಕಭೂತಸಂಘಾತಾಃ ॥

(ಅರ್ಥ)

(ಆಕ್ಷೇಪ) :- ನಿಮ್ಮ (ಪಕ್ಷದಲ್ಲಿ)ಯೂ ಆತ್ಮನು ವಿಜ್ಞಾನಸ್ವರೂಪನೆಂದು ಒಪ್ಪಬೇಕಷ್ಟೆ? ಅವನು ಸ್ವಪ್ರಕಾಶನೆಂದೂ ಅವನಿಗೆ ದೇವತೆಗಳೇ ಮುಂತಾದ ಸ್ವರೂಪದಲ್ಲಿ ತಾನೆಂಬ ಅಭಿಮಾನವಿರುವಲ್ಲಿ ಸ್ವರೂಪವಾದ ಪ್ರಕಾಶವು ಮರೆಯಾಗಿರುವದೆಂದೂ ಅವತ್ಯಪಾಗಿ ಆಶ್ರಯಿಸಬೇಕು; ಏಕೆಂದರೆ ಸ್ವರೂಪದ ಪ್ರಕಾಶವು ಇರುವಲ್ಲಿ ತನ್ನ ಆತ್ಮನಲ್ಲಿ ಮತ್ತೊಂದು ಆಕಾರವನ್ನು ಅಧ್ಯಾಸಮಾಡುವದು ಆಗಲಾರದು. ಆದ್ದರಿಂದ ನಿನಗೂ ಈ ದೋಷವು ಸಮಾನವು.[3] ಮತ್ತು ನಮ್ಮ (ಮತದಲ್ಲಿ) ಒಬ್ಬ ಆತ್ಮನಲ್ಲಿ (ಮಾತ್ರವೇ) ನೀನು ಹೇಳಿದ ದುರ್ಘಟತ್ವ(ವೆಂಬ ದೋಷ)ವಿರುತ್ತದೆ ; ನಿಮ್ಮಗಳ (ಮತದಲ್ಲಿ) ಆತ್ಮರುಗಳು ಅನಂತವಾಗಿರುವದರಿಂದ (ಅವ)ರೆಲ್ಲರಲ್ಲಿಯೂ ಈ ದೋಷವನ್ನು ಪರಿಹರಿಸಬೇಕಾಗುವದಲ್ಲ![4]

(ಪರಿಹಾರ) :- ಇದಕ್ಕೆ ಹೇಳುತ್ತೇವೆ[5] : ಸ್ವಭಾವದಿಂದಲೇ ದೋಷವಿರುದ್ಧವಾಗಿರುವ ಅನಂತವಾದ ಜ್ಞಾನಾನಂದೈಕಸ್ವರೂಪವುಳ್ಳದ್ದು[6] ಸ್ವಾಭಾವಿಕವಾದ

---

1. 'ಅಣೋರಪಿ' ಎಂದು ಅಚ್ಚಿನ ಪಾಠ. 2. ತೆಲುಗುಮುದ್ರಣದ ಯಾಜ್ಞವಲ್ಕ್ಯಸ್ಮೃತಿಯಲ್ಲಿ ನಮಗೆ ಈ ಶ್ಲೋಕವು ಸಿಕ್ಕಿಲ್ಲ.
3. ವೇದವಚನಕ್ಕೆ ವಿರುದ್ಧವಾದ ನ್ಯಾಯವನ್ನು ಹೇಳಬಾರದು; ಹಾಗೆ ಹೇಳಿದರೆ ನಿಮಗೂ ಅದೇ ನ್ಯಾಯದಿಂದ ದೋಷವು ಬರುತ್ತದೆ ಎಂದು ಭಾವ.
4. ನೀವು ಹೇಳುವ ಪರಿಹಾರವು ನಮಗೂ ಇರಬಹುದಷ್ಟೆ?
5. ದೋಷರಹಿತವಾದ, ಸಗುಣವಾದ, ನಿತ್ಯವಿಭೂತಿಗಳುಳ್ಳ, ಪರಿಣಾಮಶಕ್ತಿಗಳುಳ್ಳ ಅಂತರ್ಯಾಮಿಯಾದ ಬ್ರಹ್ಮವನ್ನುಹೇಳುವ ವಚನಗಳಿಗೆ ನಿಮ್ಮ ಪಕ್ಷವು ವಿರುದ್ಧವಾಗಿದೆ. ಆದರೆ ನಮ್ಮ ಪಕ್ಷದಲ್ಲಿ ಜೀವಸ್ವರೂಪವಾದ ಜ್ಞಾನವು ತಿರೋಹಿತವಾಗುವದೇ ಮುಂತಾದದ್ದು ಯಾವ ಶಬ್ದಕ್ಕೂ ವಿರುದ್ಧವಲ್ಲ ; ಆದ್ದರಿಂದ ನಿಮ್ಮ ಮತದಮೇಲೆ ತರ್ಕವನ್ನು ಹೇಳಬಹುದು, ನಮ್ಮ ಮತದ ಮೇಲೆ ಹೇಳಕೂಡದು- ಎಂಯ ಭಾವ.
6. ಸತ್ಯ, ಜ್ಞಾನ, ಅನಂತ, ನಿರ್ಮಲ, ಆನಂದ- ಇವುಗಳನ್ನು ಬ್ರಹ್ಮದ **ಸ್ವರೂಪ ನಿರೂಪಕಧರ್ಮ**ಗಳೆಂದು ಶ್ರೀರಾಮಾನುಜಾಚಾರ್ಯರು ಒಪ್ಪಿರುತ್ತಾರೆ.

ಅನವಧಿಕಾತಿಶಯವಾದ ಅಪರಿಮಿತವಾದ ಉದಾರಗುಣಗಳ ಸಾಗರವೂ ನಿಮಿಷ, ಕಾಷ್ಠಾ, ಕಲಾ, ಮುಹೂರ್ತ- ಮುಂತಾಗಿ ಪದಾರ್ಥದವರೆಗಿನ ಅಪರಿಮಿತವಾದ ಪರಿಚ್ಛೇದಸ್ವರೂಪವುಳ್ಳ[1] ಎಲ್ಲದರ ಉತ್ಪತ್ತಿ, ಸ್ಥಿತಿ, ವಿನಾಶ-ಮುಂತಾದ ಸರ್ವ ಪರಿಣಾಮಕ್ಕೂ ನಿಮಿತ್ತವಾಗಿರುವ, ಕಾಲದಿಂದಾದ ಪರಿಣಾಮವು ಸೋಂಕದ ಅನಂತಮಹಾವಿಭೂತಿಗಳುಳ್ಳದ್ದೂ[2] ತನ್ನ **ಲೀಲೆಗೆ**[3] ಪರಿಕರವಾಗಿರುವ ತನ್ನ ಅಂಶಗಳಾದ ಅನಂತಬುದ್ಧಮುಕ್ತನಾನಾವಿಧಚೇತನರನ್ನೂ ಅವರಿಗೆ ಭೋಗ್ಯವಾಗಿ ರುವ ಅನಂತವಿಚಿತ್ರಪರಿಣಾಮಿಶಕ್ತಿಗಳನ್ನೂ ಉಳ್ಳದ್ದೂ ಚೇತನಗಳಲ್ಲದ ವಸ್ತುಜಾತಕ್ಕೆ[4] ಅಂತರ್ಯಾಮಿಯಾಗಿರುವವರಿಂದಾದ ಸರ್ವಶರೀರತ್ವದಿಂದಾದ ಸರ್ವಪ್ರಕಾರತ್ವವುಳ್ಳದ್ದಾಗಿರುವದೆಂಬ (ಧರ್ಮದಿಂದ) ವಿಶಿಷ್ಟವಾದದ್ದೂ ಆಗಿರುವ **ವೇದ್ಯವಾದ ಪರಬ್ರಹ್ಮವನ್ನೂ** ಆ (ಬ್ರಹ್ಮ)ವನ್ನು ಸಾಕ್ಷಾತ್ಕಾರಮಾಡಿಕೊಳ್ಳಲು ಸಮರ್ಥರಾದ ಭಗವಂತನಾದ ದ್ವೈಪಾಯನ, ಪರಾಶರ, ವಾಲ್ಮೀಕಿ, ಮನು, ಯಾಜ್ಞವಲ್ಕ್ಯ, ಗೌತಮ, ಆಪಸ್ತಂಬ - ಇವರೇ ಮೊದಲಾದ ಮುನಿಗಣವು[5] ರಚಿಸಿರುವ ವಿಧಿ, ಅರ್ಥವಾದ, ಮಂತ್ರ- ಎಂಬ ವೇದಮೂಲಕವಾದ ಇತಿಹಾಸ, ಪುರಾಣ, ಧರ್ಮಶಾಸ್ತ್ರ- ಇವುಗಳ ಉಪಬೃಂಹಣವುಳ್ಳ[6] ಪರಮಾರ್ಥವಾಗಿರುವ[7] ಉತ್ಪತ್ತಿನಾಶಗಳಿಲ್ಲದೆ ಅವಿಚ್ಛಿನ್ನವಾಗಿ (ನಡೆದುಕೊಂಡುಬಂದಿರುವ) ಪಾಠದ ಸಂಪ್ರದಾಯವುಳ್ಳ[8] ಋಗ್ಯಜುಃಸಾಮಾಥರ್ವರೂಪವಾದ ಅನಂತಶಾಖೆಗಳ ವೇದವನ್ನೂ ಒಪ್ಪಿರುವ ನಮಗೆ ಯಾವದು ತಾನೆ ಸಿದ್ಧಿಸಲಾರದು?

ಹೇಗೆಂದರೆ (೧) **ಭಗವಂತನಾದ ದ್ವೈಪಾಯನನು ಮಹಾಭಾರತದಲ್ಲಿ** ಹೀಗೆಂದಿರುತ್ತಾನೆ : 'ಯಾವನು ನನ್ನನ್ನು **ಅಜನೆಂದೂ ಅನಾದಿಯೆಂದೂ ಲೋಕಮಹೇಶ್ವರ**ನೆಂದೂ ಅರಿತುಕೊಳ್ಳುವನೋ (ಅವನು ಮನುಷ್ಯರಲ್ಲಿ **ಅಸಂಮೂಢನಾಗಿ** ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ)[9] (ಗೀ.೧೦-೩),

1. ಕಾಲವು ಸ್ವರೂಪದಿಂದಲೇ ಪರಿಣಾಮಿಯಾಗಿದ್ದು ಪ್ರಕೃತಿಯನ್ನು ಪರಿಣಾಮಗೊಳಿಸುವ ಕಾರಣವಾಗಿದೆ.
2. ಇದು **ನಿತ್ಯವಿಭೂತಿ**
3. ಈಗ **ಲೀಲಾವಿಭೂತಿ**ಯನ್ನು ಹೇಳುತ್ತಾರೆ.
4. ಪ್ರಧಾನಾವ್ಯಕ್ತ ಕಾಲಗಳಿಗೆ ಎಂದರ್ಥ.
5. ಪೂರ್ವಪಕ್ಷಕ್ಕೆ ಸಿದ್ಧಾಂತಕ್ಕಿರುವಷ್ಟು ಸ್ಮೃತಿಬಲವಿಲ್ಲವೆಂದು ಭಾವ.
6. ಉಪಬೃಂಹಣವೆಂದರೆ ಸಕಲವೇದಗಳನ್ನೂ ಅವುಗಳ ಅರ್ಥವನ್ನೂ ಬಲ್ಲವರಾಗಿ ತಮ್ಮ ಯೋಗಮಹಿಮೆಯಿಂದ ವೇದತತ್ತ್ವಾರ್ಥವನ್ನು ಸಾಕ್ಷಾತ್ಕರಿಸಿಕೊಂಡವರು ತಾವು ಅರಿತಿರುವ ವೇದಾರ್ಥವನ್ನು ವಾಕ್ಯಗಳಿಂದ ವ್ಯಕ್ತಪಡಿಸುವದು- ಎಂದು **ಶ್ರೀಭಾಷ್ಯ.**
7. ಪ್ರತಿವಾದಿಗಳಿಗೆ ಶಾಸ್ತ್ರವು ಅಪರಮಾರ್ಥವಾಗಿರುವದರಿಂದ ಪ್ರಮಾಣವಾಗಲಾರದು - ಎಂದು ಭಾವ.
8. ವೇದದಲ್ಲಿ ಯಾವ ದೋಷವೂ ಇಲ್ಲವೆಂಬುದಕ್ಕೆ ಸೂಚಕವಿದು.
9. ಈಶ್ವರನು ಬದ್ಧಮುಕ್ತಜೀವರಿಗಿಂತಲೂ ವಿಲಕ್ಷಣನು, ಎಲ್ಲರಿಗೂ ಒಡೆಯನು ಎಂಬುದಕ್ಕೆ ಪ್ರಮಾಣ.

'ಲೋಕದಲ್ಲಿ ಕ್ಷರ, ಅಕ್ಷರ- ಇವರಿಬ್ಬರೂ ಪುರುಷರು; **ಕ್ಷರ**ವೆಂದರೆ ಸರ್ವಭೂತಗಳು, **ಅಕ್ಷರ**ವೆಂದರೆ ಕೂಟಸ್ಥ(ನಾದ ಮುಕ್ತಾತ್ಮನು). **ಉತ್ತಮಪುರುಷ**ನಾದರೋ ಪರಮಾತ್ಮನೆಂದು ಉಕ್ತನಾಗಿರುತ್ತಾನೆ ; ಅವನು ಲೋಕತ್ರಯವನ್ನು[1] ವ್ಯಾಪಿಸಿಕೊಂಡು ಭರಣಮಾಡುತ್ತಿರುವನು, ಅವ್ಯಯನು, ಈಶ್ವರನು'[2] (ಗೀ. ೧೫-೧೬, ೧೭). 'ಕಾಲವನ್ನು ಆತನು ಪಚನಮಾಡುವನು, ಅವನ ವಿಷಯದಲ್ಲಿ ಕಾಲವು (ಯಾವದಕ್ಕೂ) ಸಮರ್ಥವಲ್ಲ' (ಮೋ. ಧ.೧೯೮-೯), 'ಅಪ್ಪ, ಪರಮಾತ್ಮನ ಸ್ಥಾನದ ನಿರಯಗಳಿವು' (ಮೋ. ಧ.೧೯೮-೬), 'ಅವ್ಯಕ್ತವೇ ಮುಂತಾಗಿ ವಿಶೇಷಗಳವರೆಗೂ (ಎಲ್ಲವೂ) ಪರಿಣಾಮ, ಅಭಿವೃದ್ಧಿ ಇವುಗಳಿಂದ ಕೂಡಿರುತ್ತದೆ ; ಇದೆಲ್ಲವೂ ಹರಿಯ ಕ್ರೀಡೆಯು[3], (ಇದು) ಕ್ಷರವೆಂದು ನಿಶ್ಚಯಿಸಬೇಕು' (ಮೋ. ಧ. ಕುಂ. ೨೦೬-೫೮), 'ಕೃಷ್ಣನೇ ಲೋಕಗಳಿಗೆ ಉತ್ಪತ್ತಿಯೂ ಪ್ರಲಯವೂ (ಆಗಿರುತ್ತಾನೆ) ; ಈ ಚರಾಚರವೆಂಬ ಭೂತವೆಲ್ಲವೂ ಕೃಷ್ಣನಿಗಾಗಿ (ಇರತಕ್ಕದ್ದು)'[4] (ಸಭಾ. ೩೮-೨೩). 'ಕೃಷ್ಣನಿಗಾಗಿ' ಎಂದರೆ ಎಲ್ಲವೂ ಕೃಷ್ಣನಿಗೆ ಶೇಷವಾಗಿರತಕ್ಕದ್ದು ಎಂದರ್ಥ. (೨) **ಭಗವಂತನಾದ ಪರಾಶರನೂ** ಹೀಗೆಂದಿರುತ್ತಾನೆ : 'ಎಲೈ ಮೈತ್ರೇಯನೆ, ಸಕಲಕಾರಣಗಳಿಗೂ ಕಾರಣವಾಗಿರುವ ಮಹಾವಿಭೂತಿ ಎಂಬ ಹೆಸರಿನ ಶುದ್ಧವಾದ ಪರಬ್ರಹ್ಮದಲ್ಲಿ, ಭಗವಚ್ಛಬ್ದವನ್ನು ಪ್ರಯೋಗಿಸುತ್ತಾರೆ' (ವಿ. ಪು. ೬-೫-೭೨), 'ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು- (ಇವು)ಗಳೆಲ್ಲವೂ ಹೇಯಗುಣಾದಿಗಳನ್ನುಬಿಟ್ಟು[5] ಭಗವಚ್ಛಬ್ದಕ್ಕೆ ವಾಚ್ಯವೆನಿಸಿರುತ್ತವೆ' (ವಿ. ಪು. ೬-೫-೭೯), 'ಮೈತ್ರೇಯನೆ, ಈ ಭಗವಂತನೆಂಬ ಮಹಾಶಬ್ದವು ಪರಬ್ರಹ್ಮವಾದ ವಾಸುದೇವನಿಗೇ ಹೊರತು ಮತ್ತೆ ಯಾರಿಗೂ ಸಲ್ಲತಕ್ಕದ್ದಲ್ಲ' (ವಿ. ಪು. ೬-೫-೭೬) ; 'ಆ (ವಾಸುದೇವ)ನಲ್ಲಿ ಪೂಜ್ಯಪದಾರ್ಥವನ್ನು ತಿಳಿಸುವ ಪರಿಭಾಷೆಯಿಂದ ಕೂಡಿ ಉಪಚಾರವಿಲ್ಲದೆ ಈ ಶಬ್ದವು (ಪ್ರಯುಕ್ತ)ವಾಗಿರುತ್ತದೆ, ಮಿಕ್ಕ ಕಡೆಯಲ್ಲಿ ಯಾವದೋ ಉಪಚಾರದಿಂದ ಪ್ರಯುಕ್ತವಾಗುತ್ತದೆ' (ವಿ. ಪು. ೬-೫-೭೭) ; 'ವಿಷ್ಣುವೆಂಬ ಪರಮಪದವು ಈ ಪ್ರಕಾರದ್ದು, ನಿರ್ಮಲವಾದದ್ದು, ಸತ್ಯವೂ, ವ್ಯಾಪಕವೂ, ಅಕ್ಷಯವೂ, ಯಾವ ಹೇಯ(ಗುಣ)ಗಳೂ ಇಲ್ಲದ್ದೂ (ಆಗಿರುವದು)' (ವಿ. ಪು. ೧-೨೨-೫೩); 'ಕಲಾಮುಹೂರ್ತಾದಿರೂಪದ ಕಾಲವು ಯಾವನ ವಿಭೂತಿಯ ಪರಿಣಾಮಕ್ಕೆ ಹೇತುವಾಗಲಾರದೋ' (ವಿ. ಪು. ೪-೧-೮೪) ;

---

1. ಅಚೇತನ, ತತ್ಸಂಸೃಷ್ಟಚೇತನ, ಮುಕ್ತಚೇತನ- ಎಂಬಿವೇ ಲೋಕತ್ರಯವು.
2. ಇದು ನಿತ್ಯವಿಭೂತಿಯನ್ನು ತಿಳಿಸುವ ವಾಕ್ಯ.
3. ಇದು ಲೀಲಾವಿಭೂತಿಯನ್ನು ತಿಳಿಸುವ ವಾಕ್ಯ
4. ಉಭಯವಿಧವಿಭೂತಿಯನ್ನು ತಿಳಿಸುವ ವಾಕ್ಯವಿದು.
5. ಉಭಯಲಿಂಗವನ್ನು ತಿಳಿಸುವ ವಾಕ್ಯ.

'ಆಟವಾಡುತ್ತಿರುವ ಬಾಲಕನಂತಿರುವ ಆತನ ಆಟವನ್ನು (ಹೇಳುವೆನು) ಕೇಳು' (ವಿ.ಪು.೧-೨-೧೮) (೩) **ಮನುವು** ಕೂಡ 'ಸರ್ವರಿಗೂ ಪ್ರಶಾಸಿತೃವಾದ, ಅಣುತರವಾದ ಎಲ್ಲವುಗಳಿಂದಲೂ[1] ಅಣುತರವಾಗಿರುವ....' (ಮನು. ೧೨-೧೨೨) ಎಂದು ಮುಂತಾಗಿ ಹೇಳಿರುತ್ತಾನೆ. (೪) **ಯಾಜ್ಞವಲ್ಕ್ಯನೂ** 'ಕ್ಷೇತ್ರಜ್ಞನಿಗೆ ಈಶ್ವರಜ್ಞಾನದಿಂದ ಪರಮವಿಶುದ್ಧಿಯಾಗುವದೆಂಬುದು (ಬಲ್ಲವರ) ಮತವು' (ಯಾಜ್ಞ?) (೫) ಆಪಸ್ತಂಬನುಕೂಡ (ಹೀಗೆಂದಿರುತ್ತಾನೆ) : 'ಗುಹಾಶಯನಾದ (ಪರಮಾತ್ಮನಿಗೆ) ಪ್ರಾಣಿಗಳೆಲ್ಲವೂ ಪುರವು' (ಆ.ಧ.೧-೨೨-೪). ಎಲ್ಲ ಪ್ರಾಣಿಗಳೂ (ಹೃದಯ) ಗುಹೆಯಲ್ಲಿರುವ ಪರಮಾತ್ಮನಿಗೆ ಪೂಃ ಎಂದರೆ ಪುರವು, ಶರೀರವು ಎಂದರ್ಥ. ಪ್ರಾಣಿಗಳೆಂದರೆ ಜೀವಾತ್ಮಕಭೂತಸಂಘಾತಗಳು.

(ಮೂಲ)

೩೩. ನನು ಚ ಕಿಮನೇನಾಽಽಡಮ್ಬರೇಣ ? ಚೋದ್ಯಂ ತು ನ ಪರಿಹೃತಮ್ । ಉಚ್ಯತೇ । ಏವಮಭ್ಯುಪಗಚ್ಛತಾಮಸ್ಮಾಕಮಂ, ಆತ್ಮಧರ್ಮಭೂತಸ್ಯ ಚೈತನ್ಯಸ್ಯ ಸ್ವಾಭಾವಿಕಸ್ಯಾಽಪಿ ಕರ್ಮಣಾ ಪಾರಮಾರ್ಥಿಕಂ ಸಂಕೋಚಂ ವಿಕಾಸಂ ಚ ಬ್ರುವತಾಂ ಸರ್ವಮಿದಂ ಪರಿಹೃತಮ್ । ಭವತಸ್ತು ಪ್ರಕಾಶ ಏವ ಸ್ವರೂಪಮಿತಿ ಪ್ರಕಾಶೋ ನ ಧರ್ಮಭೂತಃ । ತಸ್ಯ ಸಂಕೋಚೋ ವಿಕಾಸೋ[2] ವಾ ನಾಭ್ಯುಪಗಮ್ಯತೇ । ಪ್ರಕಾಶಪ್ರಸರಾನುತ್ಪತ್ತಿಮೇವ ತಿರೋಧಾನಭೂತಾಃ ಕರ್ಮಾದಯಃ ಕುರ್ವನ್ತಿ । ಅವಿದ್ಯಾ ಚೇತ್ ತಿರೋಧಾನಂ ತಿರೋಧಾನಭೂತಯಾ ತಯಾ ಸ್ವರೂಪಭೂತ ಪ್ರಕಾಶನಾಶಃ[3] ಪೂರ್ವಮೇವೋಕ್ತಃ । ಅಸ್ಮಾಕಂ[4] ತ್ವವಿದ್ಯಾರೂಪೇಣ ಕರ್ಮಣಾ ಸ್ವರೂಪನಿತ್ಯಧರ್ಮಭೂತಜ್ಞಾನಪ್ರಕಾಶಃ ಸಂಕುಚಿತಃ । ತೇನ ದೇವಾದಿರೂಪಾ[5]ಽಽತ್ಮಾಭಿಮಾನೋಽಽಭವತೀತಿ ವಿಶೇಷಃ । ಯಥೋಕ್ತಮ್ 'ಅವಿದ್ಯಾಕರ್ಮಸಂಜ್ಞಾನ್ಯಾ ತೃತೀಯಾ ಶಕ್ತಿರಿಷ್ಯತೇ । ಯಯಾ ಕ್ಷೇತ್ರಜ್ಞಶಕ್ತಿಃ ಸಾ ವೇಷ್ಟಿತಾ ನೃಪ ಸರ್ವಗಾ । ಸಂಸಾರ ತಾಪಾನಖಿಲಾನವಾಪ್ನೋತ್ಯತಿಸಂತತಾನ್' ॥ (ವಿ.ಪು.೬-೭-೬೧, ೬೨)[6] 'ತಯಾ ತಿರೋಹಿತತ್ವಾಚ್ಚ ಶಕ್ತಿಃ ಕ್ಷೇತ್ರಜ್ಞಸಂಜ್ಞಿತಾ । ಸರ್ವಭೂತೇಷು ಭೂಪಾಲ ತಾರತಮ್ಯೇನ ವರ್ತತೇ[7]'॥ (ವಿ.ಪು.೬-೭-೬೩) ಇತಿ ಕ್ಷೇತ್ರಜ್ಞಾನಾಂ ಸ್ವಧರ್ಮಭೂತಸ್ಯ[8] ಜ್ಞಾನಸ್ಯ ಕರ್ಮಸಂಜ್ಞಯಾ ಅವಿದ್ಯಯಾ ಸಂಕೋಚಂ ವಿಕಾಸಂ ಚ ದರ್ಶಯತಿ ॥

---

1. ಸೂಕ್ಷ್ಮರಾದ ಜೀವರೆಲ್ಲರಿಗಿಂತಲೂ.
2. 'ಸಂಕೋಚವಿಕಾಸೌ ವಾ ನಾಭ್ಯುಪಗಮ್ಯೇತೇ' ಕಾ॥
3. 'ನಾಶ ಇತಿ' ಎಂದು ಕಾ॥ **4.** 'ಅಸ್ಮಾಕಂ ಚ' ತೆ॥ **5.** 'ಸ್ವರೂಪಾ' ಕಾ॥
6. ಇಲ್ಲೊಂದು ಇತಿ ಇದ್ದರೆ ಚೆನ್ನಾಗಿರುತ್ತಿತ್ತು ; ಅನುವಾದವನ್ನು ನೋಡಿ.
7. 'ಲಕ್ಷ್ಯತೇ' ಅಚ್ಚಿನ ಪಾಠ. **8.** 'ಸ್ವಧರ್ಮಭೂತ' ಎಂದಿಷ್ಟೇ ತೆ॥

(ಅರ್ಥ)

(ಪೂರ್ವಪಕ್ಷಿ) :- ಈ ಆಡಂಬರದಿಂದೇನು ? ಚೋದ್ಯವನ್ನೇನೋ (ನೀವು) ಪರಿಹರಿಸಲಿಲ್ಲ!

(ಸಿದ್ಧಾಂತಿ) :- ಹೀಗೆಂದು ಒಪ್ಪಿರುವ ನಮ್ಮ (ಮತದಲ್ಲಿ) ಆತ್ಮನ ಧರ್ಮ-ವಾಗಿರುವ ಚೈತನ್ಯವು ಸ್ವಾಭಾವಿಕವಾಗಿದ್ದರೂ ಕರ್ಮದಿಂದ ಪರಮಾರ್ಥವಾಗಿ[1] ಸಂಕೋಚವಾಗುವದೆಂದೂ ವಿಕಾಸವಾಗುವದೆಂದೂ ಹೇಳುವದರಿಂದ ಈ (ಆಕ್ಷೇಪ ವ)ನ್ನೆಲ್ಲ ಪರಿಹರಿಸಿದಂತೆ (ಆಗಿದೆ). ನಿನ್ನ (ಮತ)ದಲ್ಲಾದರೋ ಪ್ರಕಾಶವೇ ಸ್ವರೂಪವಾದ್ದರಿಂದ ಪ್ರಕಾಶವು (ಆತ್ಮನ) ಧರ್ಮವಾಗಿರುವದಿಲ್ಲ. ಅದಕ್ಕೆ ಸಂಕೋಚವನ್ನಾಗಲಿ ವಿಕಾಸವನ್ನಾಗಲಿ ಒಪ್ಪಿರುವದಿಲ್ಲ. (ನಮ್ಮ ಮತದಲ್ಲಿ) ತಿರೋಧಾನವಾಗಿರುವ ಕರ್ಮಾದಿಗಳು[2] ಪ್ರಕಾಶವು ಹರಡುವದೆಂಬುದುಂಟಾಗ-ದಂತೆಯೇ ಮಾಡುತ್ತವೆ. (ಇದಕ್ಕೆ ಬದಲು) ಅವಿದ್ಯೆಯು ತಿರೋಧಾನವಾದರೆ ತಿರೋಧಾನವಾಗಿರುವ ಆ (ಅವಿದ್ಯೆ)ಯಿಂದ ಸ್ವರೂಪವಾಗಿರುವ ಪ್ರಕಾಶದ-ನಾಶ(ವೇ ಆಗುವದು) ಎಂದು ಮುಂಚೆಯೇ ಹೇಳಿರುತ್ತೇವೆ. ನಮ್ಮ (ಮತ ದಲ್ಲಿಯೋ) ಅವಿದ್ಯಾರೂಪವಾದ[3] ಕರ್ಮದಿಂದ ಸ್ವರೂಪದ ನಿತ್ಯಧರ್ಮವಾಗಿರುವ ಜ್ಞಾನಪ್ರಕಾಶವು ಸಂಕುಚಿತವಾಗಿರುತ್ತದೆ ; ಅದರಿಂದ ದೇವಾದಿರೂಪದಲ್ಲಿ ತಾನೆಂಬ ಅಭಿಮಾನವು ಆಗುತ್ತದೆ ಎಂಬುದು ವಿಶೇಷವು. ಇದನ್ನು (ಪುರಾಣದಲ್ಲಿ) ಹೀಗೆ ಹೇಳಿರುತ್ತಾರೆ : 'ಕರ್ಮವೆಂಬ ಹೆಸರಿನ **ಅವಿದ್ಯೆ**ಯು ಮತ್ತೊಂದಾದ ಮೂರನೆಯ[4] ಶಕ್ತಿ ; ನೃಪನೆ, ಸರ್ವವ್ಯಾಪಿಯಾದ ಅದರಿಂದ **ಆ ಕ್ಷೇತ್ರಜ್ಞಶಕ್ತಿ**ಯು ಮುಚ್ಚಲ್ಪಟ್ಟು ಅತಿಯಾಗಿ ವಿಸ್ತೃತವಾದ ಎಲ್ಲಾ ಸಂಸಾರ ತಾಪಗಳನ್ನೂ ಅನುಭವಿಸು ತ್ತದೆ.' (ವಿ.ಪು. ೬-೭-೬೧, ೬೨) ; 'ಅದರಿಂದ ಮರೆಮಾಡಲ್ಪಟ್ಟಿರುವದರಿಂದಲೇ ಕ್ಷೇತ್ರಜ್ಞನೆಂಬ ಹೆಸರಿನ ಶಕ್ತಿಯು, ಎಲೈ ಭೂಪಾಲನೆ, ಎಲ್ಲಾ ಭೂತಗಳಲ್ಲಿಯೂ ತಾರತಮ್ಯದಿಂದ ಇರುತ್ತಿದೆ' (ವಿ.ಪು. ೬-೭-೬೩) ಎಂದು ಕ್ಷೇತ್ರಜ್ಞರುಗಳಿಗೆ ಅವರ

---

1. ಪೂರ್ವಪಕ್ಷಿಗಳಂತೆ ಅಪರಮಾರ್ಥವಾಗಿ ಜ್ಞಾನಸ್ವರೂಪಕ್ಕೆ ಮುಸುಕನ್ನು ಹೇಳುವದಿಲ್ಲ ವೆಂದು ಭಾವ.
2. 'ಕರ್ಮಾದಿಗಳು' ಎಂದರೆ ಕರ್ಮ, ಪ್ರಕೃತಿ, ವಾಸನೆ - ಇವು.
3. 'ಅವಿದ್ಯಾರೂಪೇಣ ಕರ್ಮಣಾ' ಎಂಬುದರ ಅನುವಾದವಿದು ; 'ಕರ್ಮರೂಪೇಣ ಅವಿದ್ಯಯಾ' ಎಂದಿದ್ದರೆ ಪ್ರಕೃತಕ್ಕೆ ಹೊಂದುತ್ತದೆ ; ಏಕೆಂದರೆ ಕರ್ಮದಿಂದ ಜ್ಞಾನಶಕ್ತಿಯು ಆವೃತವಾಗಿದೆ, ಅದರಿಂದ ಸಂಕೋಚವಿಕಾಸಗಳನ್ನು ಹೊಂದುತ್ತದೆ - ಎಂಬುದೇ ಪ್ರಕೃತ.
4. ವಿಷ್ಣುಶಕ್ತಿ, ಕ್ಷೇತ್ರಜ್ಞಶಕ್ತಿ, ಕರ್ಮವೆಂಬ ಅವಿದ್ಯಾಶಕ್ತಿ- ಇವು ಮೂರೂ ಆತ್ಮನಿಗೆ ಶಕ್ತಿಗಳು ಎಂಬಿವು ಪ್ರಕೃತಪುರಾಣದ ಉಪದೇಶ.

ಧರ್ಮವಾಗಿದ್ದುಕೊಂಡಿರುವ ಜ್ಞಾನಕ್ಕೆ ಕರ್ಮಸಂಜ್ಞಿತವಾದ ಅವಿದ್ಯೆಯಿಂದ ಸಂಕೋಚವನ್ನೂ ವಿಕಾಸವನ್ನೂ ತಿಳಿಸಿರುತ್ತದೆ.[1]

೨. ಅವಿದ್ಯೆಯು ಮಿಥ್ಯಾದರ್ಶನಕ್ಕೆ ಮೂಲವಾಗಲಾರದು

(ಮೂಲ)

೩೪. ಅಪಿ ಚ ಆಚ್ಛಾದಿಕಾಽವಿದ್ಯಾ ಶ್ರುತಿಭಿರ್ಜ್ಞೇಯೋಪದೇಶಬಲಾಚ್ಚ ಬ್ರಹ್ಮಸ್ವರೂಪತಿರೋಧಾನಹೇತುದೋಷರೂಪಾ ಆಶ್ರೀಯತೇ । ತಸ್ಯಾಶ್ಚ ಮಿಥ್ಯಾರೂಪತ್ವೇನ ಪ್ರಪಞ್ಚವತ್ ಸ್ವದರ್ಶನಮೂಲದೋಷಾಪೇಕ್ಷತ್ವಾತ್, ನ ಸಾ ಮಿಥ್ಯಾದರ್ಶನಮೂಲದೋಷಃ ಸ್ಯಾದಿತಿ ಬ್ರಹ್ಮೈವ ಮಿಥ್ಯಾದರ್ಶನಮೂಲಂ ಸ್ಯಾತ್ । ತಸ್ಯಾಶ್ಚಾಽನಾದಿತ್ವೇಽಪಿ ಮಿಥ್ಯಾರೂಪತ್ವಾದೇವ ಬ್ರಹ್ಮದೃಶ್ಯತ್ವೇ ನೈವಾಽನಾದಿತ್ವಾತ್ ತದ್ದರ್ಶನಮೂಲಪರಮಾರ್ಥದೋಷಾನಭ್ಯುಪಗಮಾಚ್ಚ ಬ್ರಹ್ಮೈವ ತದ್ದರ್ಶನಮೂಲಂ ಸ್ಯಾತ್ । ತಸ್ಯ ನಿತ್ಯತ್ವಾದನಿರ್ಮೋಕ್ಷ ಏವ । ಅತ ಏವೇದಮಪಿ ನಿರಸ್ತಮ್ 'ಏಕಮೇವ ಶರೀರಂ ಜೀವವತ್, ನಿರ್ಜೀವಾನೀತರಾಣಿ ಶರೀರಾಣಿ, ಯಥಾ[2] ಸ್ವಪ್ನದೃಷ್ಟನಾನಾವಿಧಶರೀರಾಣಾಂ ನಿರ್ಜೀವತ್ವಮ್ । ತತ್ರ ಸ್ವಪ್ನೇ ದ್ರಷ್ಟುಃ ಶರೀರಮೇಕಮೇವ ಜೀವವತ್, ತಸ್ಯ ಸ್ವಪ್ನವೇಲಾಯಾಂ ದೃಶ್ಯಭೂತನಾನಾವಿಧಾನನ್ತಶರೀರಾಣಾಂ ನಿರ್ಜೀವತ್ವಮೇವ । ಅನೇನೇಕೇನೈವಾನ್ಯೇಷಾಂ ಜೀವಾನಾಂ ಶರೀರಾಣಾಂ ಚ ಪರಿಕಲ್ಪಿತತ್ವಾತ್ ಜೀವಾ ಮಿಥ್ಯಾಭೂತಾ' ಇತಿ । ಬ್ರಹ್ಮಣಾ ಸ್ವಸ್ವರೂಪವ್ಯತಿರಿಕ್ತಸ್ಯ ಜೀವಭಾವಸ್ಯ ಸರ್ವಶರೀರಾಣಾಂ ಚ ಕಲ್ಪಿತತ್ವಾದೇಕಸ್ಮಿನ್ನಪಿ ಶರೀರೇ ಶರೀರವಜ್ಜೀವಸದ್ಭಾವಸ್ಯ ಮಿಥ್ಯಾರೂಪತ್ವಾತ್ । ಸರ್ವಾಣಿ ಶರೀರಾಣಿ ಮಿಥ್ಯಾರೂಪಾಣಿ ತತ್ರ ಜೀವಭಾವಶ್ಚ ಮಿಥ್ಯಾರೂಪ ಇತ್ಯೇಕಸ್ಯ ಶರೀರಸ್ಯ ತತ್ರ ಜೀವಸದ್ಭಾವಸ್ಯ ಚ ನ ಕಶ್ಚಿದ್ ವಿಶೇಷಃ । ಅಸ್ಮಾಕಂ ತು ಸ್ವಪ್ನೇ ದ್ರಷ್ಟುಃ ಶರೀರಸ್ಯ[4] ತಸ್ಮಿನ್ನಾತ್ಮಸದ್ಭಾವಸ್ಯ ಚ ಪ್ರಬೋಧವೇಲಾಯಾಮ್ ಅಬಾಧಿತತ್ವಾತ್, ಅನ್ಯೇಷಾಂ ಶರೀರಾಣಾಂ ತದ್ಗತ ಜೀವಾನಾಂ ಚ ಬಾಧಿತತ್ವಾತ್ ತೇ ಸರ್ವೇ ಮಿಥ್ಯಾಭೂತಾಃ, ಸ್ವಶರೀರಮೇಕಂ ತಸ್ಮಿನ್ ಜೀವಭಾವಶ್ಚ ಪರಮಾರ್ಥ ಇತಿ ವಿಶೇಷಃ ॥

---

1. ಹಿಂದಿನ ಎರಡು ಶ್ಲೋಕಗಳಾದಮೇಲೆ ಒಂದು ಇತಿ ಇದ್ದಿದ್ದರೆ 'ಯಥೋಕ್ತಮ್' ಎಂಬುದರೊಡನೆ ಸರಳವಾಗಿ ಅನ್ವಯವಾಗುತ್ತಿತ್ತು ; ಮುಂದಿನ ಶ್ಲೋಕವು ಧರ್ಮಭೂತಜ್ಞಾನದ ಸಂಕೋಚವಿಕಾಸಗಳನ್ನು ಹೇಳುತ್ತದೆ ಎಂಬುದು ಸ್ಫುಟತರವಾಗುತ್ತಿತ್ತು - ಎಂದು ತೋರುತ್ತದೆ.

2. ಕಾ॥ ಪಾಠದಲ್ಲಿ ಈ ಮಾತು ಈ ವಾಕ್ಯದಲ್ಲಿ ಮುಂದೆ ಇರುವ 'ನಿರ್ಜೀವತ್ವಮ್' ಎಂಬುದರ ಹಿಂದುಗಡೆ ಇದೆ. 3. ಇದರ ಮುಂದಿರುವ 'ಅನ್ಯೇಷಾಂ ಜೀವಾನಾಂ ಶರೀರಾಣಾಂ ಚ' ಎಂಬ ಮಾತುಗಳು ಕಾ॥ ಪಾಠದಲ್ಲಿ ಬಿಟ್ಟುಹೋಗಿವೆ. 4. 'ಸ್ವಶರೀರಸ್ಯ' ಕಾ॥

(ಅರ್ಥ)

ಇದಲ್ಲದೆ (ನಿಮ್ಮ ಮತದಲ್ಲಿ) ಆಚ್ಛಾದಕವಾದ ಅವಿದ್ಯೆಯು ಶ್ರುತಿಗಳಿಂದಲೂ ಐಕ್ಯೋಪದೇಶದ ಬಲದಿಂದಲೂ ಬ್ರಹ್ಮಸ್ವರೂಪವನ್ನು ಮರೆಮಾಡುವದಕ್ಕೆ ಕಾರಣವಾದ ದೋಷರೂಪವಾದದ್ದೆಂದು ಆಶ್ರಯಿಸಲ್ಪಟ್ಟಿರುತ್ತದೆ.[1] ಆದರೆ ಅದು ಮಿಥ್ಯಾರೂಪವಾಗಿರುವದರಿಂದ ಪ್ರಪಂಚದಂತೆ ಅದಕ್ಕೂ ತನ್ನನ್ನು ಕಾಣುವದಕ್ಕೆ ಕಾರಣವಾದ ದೋಷವು ಬೇಕಾಗಿರುವದರಿಂದ ಅದು ಮಿಥ್ಯಾದರ್ಶನಕ್ಕೆ ಕಾರಣವಾದ ದೋಷವಾಗಲಾರದಾಗಿ ಬ್ರಹ್ಮವೇ ಮಿಥ್ಯಾದರ್ಶನಕ್ಕೆ ಕಾರಣವೆಂದಾಗುವದು. (ಆ ಅವಿದ್ಯೆಯು) ಅನಾದಿಯಾದರೂ ಮಿಥ್ಯಾರೂಪವಾಗಿರುವದರಿಂದ ಬ್ರಹ್ಮದೃಶ್ಯವಾಗಿಯೇ ಅನಾದಿಯಾಗಿರುವದರಿಂದಲೂ ದರ್ಶನಕ್ಕೆ ಕಾರಣವಾಗಿರುವ ಪರಮಾರ್ಥದೋಷವನ್ನು ಒಪ್ಪದೆ ಇರುವದರಿಂದಲೂ ಬ್ರಹ್ಮವೇ ಅದನ್ನು ಕಾಣುವದಕ್ಕೆ ಕಾರಣವೆಂದಾಗುವದು. ಆ (ಬ್ರಹ್ಮವು) ನಿತ್ಯವಾಗಿರುವದರಿಂದ ಅವಿದ್ಯೆಯಿಂದ ಮೋಕ್ಷವು ಆಗುವದಿಲ್ಲವೆಂದೇ (ಆಯಿತು).

ಆದ್ದರಿಂದಲೇ **'ಒಂದು ಶರೀರವೇ ಜೀವವುಳ್ಳದ್ದು, ಇತರಶರೀರಗಳೆಲ್ಲ ಸ್ವಪ್ನದಲ್ಲಿ ಕಂಡ ಬಗೆಬಗೆಯ ಶರೀರಗಳಂತೆ ನಿರ್ಜೀವ(ಶರೀರಗಳೇ). ಅಲ್ಲಿ ಸ್ವಪ್ನದಲ್ಲಿ (ಸ್ವಪ್ನ)ದ್ರಷ್ಟೃವಾದವನ ಶರೀರವೊಂದೇ ಜೀವವುಳ್ಳದ್ದು ; ಅವನಿಗೆ ಸ್ವಪ್ನಕಾಲಕ್ಕೆ ದೃಶ್ಯವಾಗಿರುವ ಬಗೆಬಗೆಯ ಅನಂತ ಶರೀರಗಳು ನಿರ್ಜೀವವೇ ಆಗಿರುತ್ತವೆ. ಈ (ಜೀವ)ನೊಬ್ಬನೇ ಜೀವರುಗಳನ್ನೂ (ಅವರ) ಶರೀರಗಳನ್ನೂ ಕಲ್ಪಿಸಿಕೊಂಡಿರುತ್ತಾನಾದ್ದರಿಂದ ಮಿಕ್ಕ ಜೀವರು ಮಿಥ್ಯಾಭೂತರೇ' ಎಂಬೀ (ಪಕ್ಷವನ್ನೂ) (ಇಲ್ಲಿ) ತಿರಸ್ಕರಿಸಿದಂತೆ ಆಯಿತು.**[2] ಏಕೆಂದರೆ ಬ್ರಹ್ಮವು ತನ್ನ ಸ್ವರೂಪಕ್ಕಿಂತ ಬೇರೆಯಾಗಿರುವ ಜೀವತ್ವವನ್ನೂ ಎಲ್ಲಾ ಶರೀರಗಳನ್ನೂ ಕಲ್ಪಿಸಿಕೊಂಡಿರುವದರಿಂದ (ಆ) ಒಂದು ಶರೀರದಲ್ಲಿಯೂ ಶರೀರಿಯಾದ ಜೀವವಿರುವದೆಂಬುದು ಮಿಥ್ಯಾರೂಪವಾಗಿರುವದರಿಂದ ಸರ್ವಶರೀರಗಳೂ ಮಿಥ್ಯಾರೂಪಗಳೇ ಆಗಿರುತ್ತವೆ ; ಅವುಗಳಲ್ಲಿ ಜೀವರಿರುವದೂ ಮಿಥ್ಯಾರೂಪವೇ ಆಗಿರುತ್ತದೆ. ಆದ್ದರಿಂದ ಒಂದೇ ಶರೀರವು, ಅದರಲ್ಲಿಯೇ ಜೀವನಿರುತ್ತಾನೆ - ಎಂಬುದರಲ್ಲಿ ಯಾವ ವಿಶೇಷವೂ ಇರುವದಿಲ್ಲ. ನಮ್ಮ (ಮತದಲ್ಲಿ)ಯಾದರೋ ಸ್ವಪ್ನದಲ್ಲಿ ದ್ರಷ್ಟೃವಾದವನ ಶರೀರವೂ ಅಲ್ಲಿ ಜೀವವಿರುವದೂ ಎಚ್ಚರದ ಕಾಲದಲ್ಲಿ ಬಾಧಿತವಾಗದೆ ಇರುವದರಿಂದಲೂ ಮಿಕ್ಕಶರೀರಗಳೂ ಅವುಗಳಲ್ಲಿರುವ ಜೀವರುಗಳೂ ಬಾಧಿತವಾಗುವದರಿಂದಲೂ ಅವೆಲ್ಲವೂ ಮಿಥ್ಯಾಭೂತವಾದವುಗಳೇ ತನ್ನ ಶರೀರವೊಂದು, ಅದರಲ್ಲಿ ಜೀವನಿರುವದು-(ಇವು ಮಾತ್ರ) ಪರಮಾರ್ಥ ಎಂಬ ವಿಶೇಷವಿರುತ್ತದೆ.

---

1. ಇ.ಸಿ. ಪು. ೩೬. 2. ಇಲ್ಲಿ ಹೇಳಿರುವ ಏಕಜೀವವಾದವನ್ನು ಎಲ್ಲಿಂದ ಅನುವಾದಮಾಡಿಕೊಂಡಿದೆ ಎಂಬುದನ್ನು ನಿರ್ಧರಿಸುವದು ಕಷ್ಟ. ಇ.ಸಿ. ೬ನೆಯ ಅಧ್ಯಾಯವನ್ನು ನೋಡಿ.

೩. ಅವಿದ್ಯಾನಿವರ್ತಕವು ಯಾವದೂ ಇಲ್ಲ

(ಮೂಲ)

೩೫. ಅಪಿ ಚ ಕೇನ ವಾಽವಿದ್ಯಾನಿವೃತ್ತಿಃ ? ಸಾ ಚ ಕೀದೃಶೀ?- ಇತಿ ವಿವೇಚನೀಯಮ್ । ಐಕ್ಯಜ್ಞಾನಂ ನಿವರ್ತಕಮ್, ನಿವೃತ್ತಿಶ್ಚ ಅನಿರ್ವಚನೀಯ ಪ್ರತ್ಯನೀಕಾಕಾರಾ ಇತಿ ಚೇತ್ । ಅನಿರ್ವಚನೀಯಪ್ರತ್ಯನೀಕಂ ನಿರ್ವಚನೀಯಮ್ । ತಚ್ಚ ಸದ್ವಾ , ಅಸದ್ವಾ , ದ್ವಿರೂಪಂ ವಾ? ಕೋಟ್ಯನ್ತರಂ[1] ನ ವಿದ್ಯತೇ । ಬ್ರಹ್ಮವ್ಯತಿರೇಕೇಣೈತದಭ್ಯುಪಗಮೇ ಪುನರಪ್ಯವಿದ್ಯಾ ನ ನಿವೃತ್ತಾ ಸ್ಯಾತ್ । ಬ್ರಹ್ಮೈವ ಚೇನ್ನಿವೃತ್ತಿಃ, ತತ್ಪ್ರಾಗಪ್ಯವಿಶಿಷ್ಟಮಿತಿ ವೇದಾನ್ತಜ್ಞಾನಾತ್ ಪೂರ್ವಮೇವ ನಿವೃತ್ತಿಃ ಸ್ಯಾತ್ । ಐಕ್ಯಜ್ಞಾನಂ ನಿವರ್ತಕಮ್, ತದಭಾವಾತ್ ಸಂಸಾರ ಇತಿ ಭವದ್ದರ್ಶನಂ ವಿಹನ್ಯತೇ । ಕಿಂ ಚ ನಿವರ್ತಕಜ್ಞಾನಸ್ಯಾಪ್ಯ ವಿದ್ಯಾರೂಪತ್ವಾತ್ ತನ್ನಿವರ್ತನಂ ಕೇನೇತಿ ವಕ್ತವ್ಯಮ್ । ನಿವರ್ತಕಜ್ಞಾನಂ ಸ್ವೇತರಸಮಸ್ತಭೇದಂ ನಿವರ್ತ್ಯ ಕ್ಷಣಿಕತ್ವಾದೇವ ಸ್ವಯಮೇವ ನಶ್ಯತಿ । ದಾವಾನಲವಿಷನಾಶನವಿಷಾನ್ತರವತ್ ಇತಿ ಚೇತ್ । ನ । ನಿವರ್ತಕಜ್ಞಾನಸ್ಯ ಬ್ರಹ್ಮವ್ಯತಿರಿಕ್ತತ್ವೇನ ತತ್ಸ್ವರೂಪತದುತ್ಪತ್ತಿವಿನಾಶಾನಾಂ ಮಿಥ್ಯಾರೂಪತ್ವಾತ್ ತದ್ವಿನಾಶರೂಪಾಽವಿದ್ಯಾ ತಿಷ್ಠತ್ಯೇವೇತಿ ತದ್ವಿನಾಶದರ್ಶನಸ್ಯ ನಿವರ್ತಕಂ ವಕ್ತವ್ಯಮೇವ । ದಾವಾಗ್ನ್ಯಾದೀನಾಮಪಿ ಪೂರ್ವವಸ್ಥಾವಿರೋಧಿ ಪರಿಣಾಮಪರಮ್ಪರಾ ಅವರ್ಜನೀಯೈವ ॥

(ಅರ್ಥ)

ಇದಲ್ಲದೆ ಅವಿದ್ಯಾನಿವೃತ್ತಿಯು ಏತರಿಂದ ? ಆ (ನಿವೃತ್ತಿಯು) ಎಂಥ (ರೂಪದ್ದು)?- ಎಂಬುದನ್ನು ವಿವೇಚನೆಮಾಡತಕ್ಕದ್ದಿದೆ. 'ಐಕ್ಯಜ್ಞಾನವು ನಿವರ್ತಕವು, ನಿವೃತ್ತಿ ಎಂಬುದು ಅನಿರ್ವಚನೀಯಕ್ಕೆ ವಿರುದ್ಧವಾದ ಆಕಾರವುಳ್ಳದ್ದು' ಎಂದರೆ, ಅನಿರ್ವಚನೀಯಕ್ಕೆ ವಿರುದ್ಧವಾದದ್ದನ್ನು ಗೊತ್ತುಪಡಿಸಿ ಹೇಳಬೇಕು. ಅದು ಸತ್ತೊ, ಅಸತ್ತೊ, ಎರಡೂ ರೂಪದ್ದೊ?- ಇವುಗಳಿಗಿಂತ ಬೇರೆಯ ಕೋಟಿಯು ಇರುವದಿಲ್ಲ.[3] ಇದು ಬ್ರಹ್ಮಕ್ಕಿಂತ ವ್ಯತಿರಿಕ್ತವಾಗಿ ಇದೆ ಎಂದು ಒಪ್ಪಿದರೆ ಮತ್ತೂ ಅವಿದ್ಯೆಯು ನಿವೃತ್ತಿಯಾಗದೆಯೇ ಇರುವದು. ಬ್ರಹ್ಮವೇ ನಿವೃತ್ತಿಯು ಎಂದರೆ ಅದು

---

1. 'ಕಲ್ಪಾನ್ತರಮ್' ಕಾ॥.
2. 'ಮನ್ತವ್ಯಮೇವ' ಎಂಬ ಕಾ॥ ಪಾಠಕ್ಕಿಂತ ಈ ಪಾಠವೇ ಮೇಲು.
3. ಇವು ಮೂರುಕೋಟಿಯನ್ನು ಬಿಟ್ಟರೆ ಅನಿರ್ವಚನೀಯವೇ ಉಳಿಯುತ್ತದೆ ; ಅನಿರ್ವಚನೀಯದ ವಿರುದ್ಧವು ಅನಿರ್ವಚನೀಯವೇ ಆಗದು ಎಂದು ಭಾವ. ಇಲ್ಲಿ **ಪಂಚಮ ಪ್ರಕಾರ**ವನ್ನು 'ಅನಿರ್ವಚನೀಯಪ್ರತ್ಯನೀಕ' ಎಂಬ ಶಬ್ದದ ಶಕ್ತಿಯಿಂದಲೇ ಅಲ್ಲಗಳೆದಂತೆ ಆಗಿದೆ.

ಮೊದಲೂ ಇದ್ದೇ ಇತ್ತಾದ್ದರಿಂದ ವೇದಾಂತಜ್ಞಾನಕ್ಕಿಂತ ಮೊದಲೇ ನಿವೃತ್ತಿಯೆಂದಾಗುವದು; ಐಕ್ಯಜ್ಞಾನವು ನಿವರ್ತಕವು, ಅದು ಆಗದೆ ಇರುವದರಿಂದ ಸಂಸಾರವು- ಎಂಬ ನಿಮ್ಮ ದರ್ಶನಕ್ಕೆ (ಇದು) ವಿರುದ್ಧವೂ ಆಗುತ್ತದೆ.[1]

ಇದೂ ಅಲ್ಲದೆ ನಿವರ್ತಕಜ್ಞಾನವೂ ಅವಿದ್ಯಾರೂಪವಾಗಿರುವದರಿಂದ ಅದರ ನಿವೃತ್ತಿಯು ಏತರಿಂದ (ಆಗುವದು) ಎಂಬುದನ್ನು ಹೇಳಬೇಕಾಗುತ್ತದೆ. ನಿವರ್ತಕ ಜ್ಞಾನವು ತನಗಿಂತ ಬೇರೆಯಾದ ಸಮಸ್ತಭೇದವನ್ನೂ ತೊಲಗಿಸಿ (ತಾನು) ಕ್ಷಣಿಕ ವಾಗಿರುವದರಿಂದ ತಾನೇ ವಿನಾಶವಾಗುತ್ತದೆ ; ದಾವಾಗ್ನಿ, ವಿಷನಾಶಕವಿಷಾಂತರ- ಇವುಗಳು (ಇದಕ್ಕೆ ದೃಷ್ಟಾಂತ) ಎನ್ನುವದಾದರೆ, (ಅದು) ಸರಿಯಲ್ಲ. (ಏಕೆಂದರೆ) ನಿವರ್ತಕಜ್ಞಾನವು ಬ್ರಹ್ಮಕ್ಕಿಂತ ವ್ಯತಿರಿಕ್ತವಾಗಿರುವದರಿಂದ ಅದರ ಸ್ವರೂಪ, ಅದರ ಉತ್ಪತ್ತಿ, ಅದರ ವಿನಾಶ -(ಇವುಗಳು) ಮಿಥ್ಯೆಯಾಗಿರುವದರಿಂದ (ಅವುಗಳ) ವಿನಾಶರೂಪವಾದ ಅವಿದ್ಯೆಯು ಇದ್ದೇಕೊಂಡಿರುವದರಿಂದ[2] ಅವುಗಳ ವಿನಾಶ ದರ್ಶನಕ್ಕೆ ನಿವರ್ತಕವನ್ನು ಹೇಳಲೇಬೇಕಾಗುವದು. ದಾವಾಗ್ನಿಯೇ ಮುಂತಾದವು ಗಳಿಗೂ ಹಿಂದಿನ ಅವಸ್ಥೆಗೆ ವಿರುದ್ಧವಾದ ಪರಿಣಾಮ ಪರಂಪರೆಯು ತಪ್ಪಿದ್ದೇ ಅಲ್ಲ.[3]

೪. ಬ್ರಹ್ಮಾತಿರಿಕ್ತನಿಷೇಧ್ಯ ವಿಷಯಕ್ಕೆ ಜ್ಞಾತೃವೇ ಇಲ್ಲ

(ಮೂಲ)

೩೬. ಅಪಿ ಚ ಚಿನ್ಮಾತ್ರಬ್ರಹ್ಮವ್ಯತಿರಿಕ್ತಕೃತ್ಸ್ನನಿಷೇಧವಿಷಯಜ್ಞಾನಸ್ಯ ಕೋಽಯಂ ಜ್ಞಾತಾ ? ಅಧ್ಯಾಸರೂಪ ಇತಿ ಚೇನ್ನ । ತಸ್ಯ ನಿಷೇಧ್ಯತಯಾ ನಿವರ್ತಕಜ್ಞಾನಕರ್ಮತ್ವಾತ್ ತತ್ಕರ್ತೃತ್ವಾನುಪಪತ್ತೇಃ । ಬ್ರಹ್ಮಸ್ವರೂಪಮೇವೇತಿ ಚೇತ್ । ನ । ಬ್ರಹ್ಮಣೋ ನಿವರ್ತಕಜ್ಞಾನಂ ಪ್ರತಿ ಜ್ಞಾತೃತ್ವಂ ಕಿಂ ಸ್ವರೂಪಮ್, ಉತಾಽಧ್ಯಸ್ತಮ್ ? ಅಧ್ಯಸ್ತಂ ಚೇತ್ । ಅಯಮಧ್ಯಾಸಸ್ತ ನ್ಮೂಲಾವಿದ್ಯಾನ್ತರಂ ಚ ನಿವರ್ತಕಜ್ಞಾನಾವಿಷಯತಯಾ ತಿಷ್ಠತ್ಯೇವ । ತನ್ನಿವರ್ತಕಾನ್ತರಾಭ್ಯುಪಗಮೇ ತಸ್ಯಾಽಪಿ ತ್ರಿರೂಪತಯಾ[4] ಅನವಸ್ಥೈವ । ಸರ್ವಸ್ಯ ಹಿ ಜ್ಞಾನಸ್ಯ ತ್ರಿರೂಪತ್ವವಿರಹೇ ಜ್ಞಾನತ್ವಮೇವ ಹೀಯತೇ । ಕಸ್ಯಚಿತ್ ಕಿಞ್ಚಿನಾಽರ್ಥವಿಶೇಷಂ ಪ್ರತಿ

---

1. ಏಕೆಂದರೆ ಐಕ್ಯಜ್ಞಾನಕ್ಕೆ ಮೊದಲೇ ಅವಿದ್ಯಾನಿವೃತ್ತಿ ಎಂದು ಈಗ ಒಪ್ಪಿರುತ್ತೀರಿ.
2. ಮಿಥ್ಯಾವಸ್ತುವಿನ ದರ್ಶನಕ್ಕೆ ಹೇತುವಾದ ಅವಿದ್ಯೆ ಇದ್ದೇ ಇರುವದಷ್ಟೆ? ಆದ್ದರಿಂದ ಅವುಗಳ ದರ್ಶನಕ್ಕೆ ಕಾರಣವಾದ ಅವಿದ್ಯೆ ಇದ್ದೇ ಇರುವದೆಂದಾಯಿತು- ಎಂದು ಅಭಿಪ್ರಾಯ.
3. ಆದ್ದರಿಂದ ಈ ದೃಷ್ಟಾಂತಗಳ ಬಲದಿಂದ ಅವಿದ್ಯೆಯೂ ಅವಸ್ಥಾಂತರರೂಪದಿಂದ ಇದ್ದುಕೊಂಡೇ ಇರಬೇಕಾಗುತ್ತದೆ ಎಂದು ಭಾವ.
4. 'ತ್ರಿರೂಪತ್ವಾತ್' ಕಾ॥

ಸಿದ್ಧಿರೂಪತ್ವಾತ್ ಜ್ಞಾನಸ್ಯ । ತ್ರಿರೂಪತ್ವವಿರಹೇ ಭವತಾಂ ಸ್ವರೂಪಭೂತಜ್ಞಾನ ವನ್ನಿವರ್ತಕಜ್ಞಾನಮಪ್ಯನಿವರ್ತಕಃ ಸ್ಯಾತ್ । ಬ್ರಹ್ಮಸ್ವರೂಪಸ್ಯೈವ ಜ್ಞಾತೃತ್ವಾಭ್ಯುಪ ಗಮೇಽಸ್ಮದೀಯಪಕ್ಷ ಏವ ಪರಿಗೃಹೀತಃ ಸ್ಯಾತ್ । ನಿವರ್ತಕಜ್ಞಾನಸ್ವರೂಪಜ್ಞಾತೃತ್ವಂ ಸ್ವನಿವರ್ತ್ಯಾನ್ತರ್ಗತಮಿತಿವಚನಂ ಭೂತಲವ್ಯತಿರಿಕ್ತಂ ಕೃತ್ಸ್ನಂ ಛಿನ್ನಂ ದೇವದತ್ತೇನ - ಇತ್ಯಸ್ಯಾಮೇವ ಛೇದನ ಕ್ರಿಯಾಯಾಮ್ ಅಸ್ಯಾಶ್ಛೇದನಕ್ರಿಯಾಯಾಶ್ಛೇತ್ತೃತ್ವಸ್ಯ ಚ ಛೇದ್ಯಾನ್ತರ್ಭಾವ ವಚನವದುಪಹಾಸ್ಯಮ್ ॥

(ಅರ್ಥ)

ಇದಲ್ಲದೆ, ಚಿನ್ಮಾತ್ರಬ್ರಹ್ಮಕ್ಕಿಂತ ಬೇರೆಯಾದದ್ದೆಲ್ಲವನ್ನೂ ಅಲ್ಲಗಳೆಯುವ-ದೆಂಬ ವಿಷಯವುಳ್ಳ ಜ್ಞಾನವನ್ನು ಅರಿಯುವ ಈ ಜ್ಞಾತೃವು ಯಾವನು? (ಅವನು) ಅಧ್ಯಾಸರೂಪನೇ ಎಂದರೆ ಆಗಲಾರದು. ಏಕೆಂದರೆ ಅವನು ನಿಷೇಧ್ಯನಾಗಿರುವನಾಗಿ (ಆ) ನಿವರ್ತಕಜ್ಞಾನಕ್ಕೆ ಕರ್ಮವಾಗಿರುವದರಿಂದ ಅದಕ್ಕೆ ಕರ್ತೃವಾಗಲಾರನು. (ಹಾಗಾದರೆ) ಬ್ರಹ್ಮಸ್ವರೂಪವೇ (ಜ್ಞಾತೃ) ಎನ್ನುವದಾದರೆ (ಅದೂ) ಆಗಲಾರದು. (ಏಕೆಂದರೆ) ಬ್ರಹ್ಮವು ನಿವರ್ತಕಜ್ಞಾನಕ್ಕೆ ಜ್ಞಾತೃವಾಗಿರುವದೆಂಬುದು (ಅದರ) ಸ್ವರೂಪವೊ, ಅಥವಾ ಅಧ್ಯಸ್ತವೊ? ಅಧ್ಯಸ್ತವಾದರೆ ಈ ಅಧ್ಯಾಸವೂ ಅದರ ಮೂಲವಾದ ಮತ್ತೊಂದು ಅವಿದ್ಯೆಯೂ ನಿವರ್ತಕಜ್ಞಾನಕ್ಕೆ ವಿಷಯವಾಗದೆ ಇದ್ದುಕೊಂಡೇ ಇರುತ್ತದೆ. ಅದಕ್ಕೆ ಮತ್ತೊಂದು ನಿವರ್ತಕವನ್ನು ಒಪ್ಪಿದರೆ ಅದೂ ಮೂರು ರೂಪಗಳುಳ್ಳದ್ದೇ ಆಗಿರುವದರಿಂದ ಅನವಸ್ಥೆಯೇ ಆಗುವದು.[1] **ಯಾವ ಜ್ಞಾನವೇ ಆಗಲಿ, ತ್ರಿರೂಪಕವಲ್ಲವೆಂದರೆ (ಅದಕ್ಕೆ) ಜ್ಞಾನತ್ವವೇ ಇಲ್ಲವಾಗಿಬಿಡುತ್ತದೆ ; ಏಕೆಂದರೆ ಜ್ಞಾನವು ಯಾವನಿಗೋ ಒಬ್ಬನಿಗೆ ಯಾವದೋ ಒಂದು ಅರ್ಥವಿಶೇಷದ ವಿಷಯಕ್ಕೆ (ಆಗುವ) ಸಿದ್ಧಿಯ ರೂಪವಾಗಿರುತ್ತದೆ.** ತ್ರಿರೂಪತ್ವವು ಇಲ್ಲದಿದ್ದರೆ ನಿಮ್ಮ (ಮತದಲ್ಲಿ) ಸ್ವರೂಪವೇ ಆಗಿರುವ ಜ್ಞಾನದಂತೆ ನಿವರ್ತಕಜ್ಞಾನವೂ ನಿವರ್ತಕವಲ್ಲದೆ ಹೋಗುವದು. (ಇನ್ನು) ಬ್ರಹ್ಮಸ್ವರೂಪವೇ ಜ್ಞಾತೃ ಎಂದರೆ ನಮ್ಮ ಪಕ್ಷವನ್ನೇ (ನೀವೂ) ಸ್ವೀಕರಿಸಿದಂತೆ ಆಗುತ್ತದೆ. ನಿವರ್ತಕಜ್ಞಾನಸ್ವರೂಪವಾದ ಜ್ಞಾತೃತ್ವವೂ ತನ್ನಿಂದ ನಿವರ್ತ್ಯವಾದ (ಅಧ್ಯಸ್ತಗಳೊಳಗೇ) ಅಡಕವಾಗಿದೆ ಎಂಬ ಮಾತು 'ಭೂತಲವ್ಯತಿರಿಕ್ತವಾದದ್ದೆಲ್ಲ ವನ್ನೂ ದೇವದತ್ತನು ಕತ್ತರಿಸಿದನು' ಎಂದು ಈ ಛೇದನಕ್ರಿಯೆಯಲ್ಲಿಯೇ ಆ ಛೇದನಕ್ರಿಯೆಯನ್ನೂ ಛೇತ್ತೃತ್ವವನ್ನೂ ಛೇದ್ಯದಲ್ಲಿ ಅಡಕಮಾಡುವ (ವಾಕ್ಯದಂತೆ) ಉಪಹಾಸ್ಯವಾಗಿರುತ್ತದೆ.

---

1. ಜ್ಞಾತೃ, ಜ್ಞಾನ, ಜ್ಞೇಯ-ಎಂಬ ಮೂರು ರೂಪವುಳ್ಳ ಜ್ಞಾನವಿರುವವರೆಗೂ ಜ್ಞಾತೃವೂ ಅಧ್ಯಸ್ತವೆನ್ನುವಾಗಲೆಲ್ಲ ಅಧ್ಯಾಸವನ್ನು ನಿವೃತ್ತಿಮಾಡುವ ಮತ್ತೊಂದು ಜ್ಞಾನವನ್ನು ಕಲ್ಪಿಸಲೇಬೇಕಾಗುವದರಿಂದ ಅನವಸ್ಥಾದೋಷವು ಬರುತ್ತದೆ.

೫. ಭೇದನಿವರ್ತಕಜ್ಞಾನಕ್ಕೆ ಸಾಮಗ್ರಿಯಿಲ್ಲ

(ಮೂಲ)

೩೭. ಅಪಿ ಚ ನಿಖಿಲಭೇದನಿವರ್ತಕಮಿದಮೈಕ್ಯಜ್ಞಾನಂ ಕೇನ ಜಾತಮಿತಿ ವಿವೇಚನೀಯಮ್ । ಶ್ರುತ್ಯೈವೇತಿ ಚೇತ್ । ನ । ತಸ್ಯಾ ಬ್ರಹ್ಮವ್ಯತಿರಿಕ್ತಾಯಾ ಅವಿದ್ಯಾಪರಿಕಲ್ಪಿತತ್ವಾತ್ ಪ್ರಪಞ್ಚಬಾಧಕಜ್ಞಾನೋತ್ಪಾದಕತ್ವಂ[1] ನ ಸಂಭವತಿ । ತಥಾ ಹಿ ದುಷ್ಟಕಾರಣಜನ್ಯಮಪಿ ರಜ್ಜುಸರ್ಪಜ್ಞಾನಂ ದುಷ್ಟಕಾರಣಜನ್ಯೇನ 'ರಜ್ಜುರಿಯಂ ನ ಸರ್ಪಃ' ಇತಿ ಜ್ಞಾನೇನ ನ[2] ಬಾಧ್ಯತೇ । ರಜ್ಜುಸರ್ಪಜ್ಞಾನಭಯೇ ವರ್ತಮಾನೇ ಕೇನಚಿದ್ ಭ್ರಾನ್ತೇನ ಪುರುಷೇಣ 'ರಜ್ಜು ರಿಯಂ ನ ಸರ್ಪ'ಇತ್ಯುಕ್ತೇಽಪಿ 'ಅಯಂ ಭ್ರಾನ್ತ' ಇತಿ ಜ್ಞಾನೇ ಸತಿ ತದ್ವಚನಂ ರಜ್ಜುಸರ್ಪಜ್ಞಾನಸ್ಯ ಬಾಧಕಂ ನ ಭವತಿ । ಭಯಂ ಚ ನ ನಿವರ್ತತೇ । ಪ್ರಯೋಜಕಜ್ಞಾನವತಃ ಶ್ರವಣವೇಲಾಯಾಮೇವ ಹಿ ಬ್ರಹ್ಮವ್ಯತಿರಿಕ್ತತ್ವೇನ ಶ್ರುತೇರಪಿ ಭ್ರಾನ್ತಿಮೂಲತ್ವಂ ಜ್ಞಾತಮಿತಿ । ಕಿಂ ಚ ನಿವರ್ತಕಜ್ಞಾನಸ್ಯ ಜ್ಞಾತುಃ, ತತ್ಸಾಮಗ್ರೀಭೂತಶಾಸ್ತ್ರಸ್ಯ ಚ ಬ್ರಹ್ಮವ್ಯತಿರಿಕ್ತತಯಾ ಯದಿ ಬಾಧ್ಯತ್ವಮುಚ್ಯತೇ ಹನ್ತ ತರ್ಹಿ ಪ್ರಪಞ್ಚನಿವೃತ್ತೇರ್ಮಿಥ್ಯಾತ್ವಮಾಪತತೀತಿ ಪ್ರಪಞ್ಚಸ್ಯ ಸತ್ಯತಾ ಸ್ಯಾತ್ । ಸ್ವಪ್ನದೃಷ್ಟಪುರುಷವಾಕ್ಯಾವಗತಪುತ್ರಾದಿ[3]ಮರಣಸ್ಯ ಮಿಥ್ಯಾತ್ವೇನ ಪುತ್ರಾದಿ[3]ಸತ್ಯತಾವತ್ । ಕಿಂ ಚ ತತ್ತ್ವಮಸ್ಯಾದಿವಾಕ್ಯಂ ನ ಪ್ರಪಞ್ಚಸ್ಯ ಬಾಧಕಮ್ । ಭ್ರಾನ್ತಿಮೂಲತ್ವಾತ್, ಭ್ರಾನ್ತಪ್ರಯುಕ್ತರಜ್ಜು ಸರ್ಪಬಾಧಕವಾಕ್ಯವತ್ । ನನು ಚ ಸ್ವಪ್ನೇ ಕಸ್ಮಿಂಶ್ಚಿದ್ಭಯೇ ವರ್ತಮಾನೇ ಸ್ವಪ್ನದಶಾಯಾಮೇವ 'ಅಯಂ ಸ್ವಪ್ನ' ಇತಿ ಜ್ಞಾತೇ ಸತಿ ಪೂರ್ವಭಯನಿವೃತ್ತಿರ್ದೃಷ್ಟಾ । ತದ್ವದತ್ರಾಪಿ ಸಂಭವತೀತಿ । ನೈವಮ್ । ಸ್ವಪ್ನವೇಲಾಯಾಮೇವ ಸೋಽಪಿ ಸ್ವಪ್ನ ಇತಿ ಜ್ಞಾತೇ ಸತಿ ಪುನರ್ಭಯಾನುವೃತ್ತಿರೇವ[4] ದೃಷ್ಟೇತಿ ನ ಕಶ್ಚಿದ್ವಿಶೇಷಃ । ಶ್ರವಣವೇಲಾಯಾಮೇವ ಸೋಽಪಿ ಸ್ವಪ್ನ ಇತಿ ಜ್ಞಾತಮೇವೇತ್ಯುಕ್ತಮ್ । ಯದಪಿ ಚೇದಮುಕ್ತಮ್ । ಭ್ರಾನ್ತಿಪರಿಕಲ್ಪಿತತ್ವೇನ ಮಿಥ್ಯಾರೂಪಮಪಿ ಶಾಸ್ತ್ರಂ ಸದದ್ವಿತೀಯಂ ಬ್ರಹ್ಮೇತಿ ಬೋಧಯತಿ । ತಸ್ಯ ಸತೋ ಬ್ರಹ್ಮಣೋ ವಿಷಯಸ್ಯ ಪಶ್ಚಾತ್ತನಬಾಧಾದರ್ಶನಾತ್ ಬ್ರಹ್ಮ ಸುಸ್ಥಿತ ಮೇವೇತಿ । ತದಯುಕ್ತಮ್ । ಶೂನ್ಯಮೇವ ತತ್ತ್ವಮಿತಿ ವಾಕ್ಯೇನ ತಸ್ಯಾಪಿ ಬಾಧಿತತ್ವಾತ್ । ಇದಂ ಭ್ರಾನ್ತಿಮೂಲಂ ವಾಕ್ಯಮ್ ಇತಿ ಚೇತ್ । ಸದದ್ವಿತೀಯಂ ಬ್ರಹ್ಮೇತಿ ವಾಕ್ಯಮಪಿ ಭ್ರಾನ್ತಿಮೂಲಮಿತಿ ತ್ವಯೈವೋಕ್ತಮ್ । ಪಶ್ಚಾತ್ತನ ಬಾಧಾದರ್ಶನಂ ತು ಸರ್ವಶೂನ್ಯವಾಕ್ಯಸ್ಯೈವೇತಿ ವಿಶೇಷಃ । ಸರ್ವಶೂನ್ಯ

---

1. 'ಜ್ಞಾನಸ್ಯೋತ್ಪಾದಕತ್ವಂ' ಕಾ॥
2. ನ ಎಂಬ ಮಾತು ದುಷ್ಟಕಾರಣಜನ್ಯೇನ ಎಂಬುದರ ಹಿಂದೆ ಕಾ॥
3. 'ಪಿತ್ರಾದಿ' ಕಾ॥ 4. 'ಭಯಾನಿವೃತ್ತಿರೇವ' ಕಾ॥

ವಾದಿನೋ ಬ್ರಹ್ಮವ್ಯತಿರಿಕ್ತವಸ್ತುಮಿಥ್ಯಾತ್ವವಾದಿನಶ್ಚ ಸ್ವಪಕ್ಷಸಾಧನಪ್ರಮಾಣ ಪಾರಮಾರ್ಥ್ಯಾನಭ್ಯುಪಗಮೇನ ಅಭಿಯುಕ್ತೈರ್ವಾದಾನಧಿಕಾರ ಏವ ಪ್ರತಿಪಾದಿತಃ । 'ಅಧಿಕಾರೋಽನುಪಾಯತ್ವಾನ್ನ ವಾದೇ ಶೂನ್ಯವಾದಿನಃ'[1] (?) ಇತಿ ॥

(ಅರ್ಥ)

ಇದಲ್ಲದೆ ಎಲ್ಲಾ ಭೇದವನ್ನೂ ನಿವೃತ್ತಿಮಾಡುವ ಈ ಐಕ್ಯಜ್ಞಾನವು ಏತರಿಂದ ಉಂಟಾಯಿತು?- ಎಂಬುದನ್ನು ವಿವೇಚನೆಮಾಡಬೇಕಾಗಿದೆ. ಶ್ರುತಿಯಿಂದಲೇ (ಉಂಟಾಗುತ್ತದೆ) ಎಂದರೆ (ಆದು) ಸರಿಯಲ್ಲ ; ಏಕೆಂದರೆ ಆದು ಬ್ರಹ್ಮವ್ಯತಿರಿಕ್ತ-ವಾಗಿರುವದರಿಂದ ಅವಿದ್ಯಾಪರಿಕಲ್ಪಿತವಾಗಿರುತ್ತದೆಯಾಗಿ ಪ್ರಪಂಚಬಾಧಕವಾದ ಜ್ಞಾನವನ್ನುಂಟುಮಾಡುವದು ಸಂಭವಿಸುವದಿಲ್ಲ. ಹೇಗೆಂದರೆ ಹಗ್ಗದಹಾವಿನ ಜ್ಞಾನವು ದುಷ್ಟಕಾರಣದಿಂದ ಉಂಟಾಗಿದ್ದರೂ[2] ದುಷ್ಟಕಾರಣಜನ್ಯವಾದ ಇದು ಹಗ್ಗವು ಹಾವಲ್ಲ ಎಂಬ ಜ್ಞಾನದಿಂದ ಬಾಧಿತವಾಗುವದಿಲ್ಲ. (ಉದಾಹರಣೆಗೆ) ಹಗ್ಗದಹಾವಿನ ಜ್ಞಾನದಿಂದ ಅಂಜಿಕೆಯಾಗಿರುವಲ್ಲಿ ಯಾವನಾದರೂ ಭ್ರಾಂತನಾದ ಪುರುಷನು 'ಇದು ಹಗ್ಗವು, ಹಾವಲ್ಲ' ಎಂದು ಹೇಳಿದರೂ ಇವನು ಭ್ರಾಂತನು ಎಂದು ತಿಳಿದಿದ್ದರೆ ಆವನ ಮಾತು ಹಗ್ಗದಹಾವಿನ ಜ್ಞಾನಕ್ಕೆ ಬಾಧಕವಾಗುವದಿಲ್ಲ, ಹೆದರಿಕೆಯೂ ತೊಲಗುವದಿಲ್ಲ. (ಬ್ರಹ್ಮವ್ಯತಿರಿಕ್ತತ್ವವು ಮಿಥ್ಯಾತ್ವಕ್ಕೆ) ಪ್ರಯೋಜಕ ವೆಂದು ತಿಳಿದಿರುವವನಿಗೆ ಶ್ರವಣವೇಳೆಯಲ್ಲಿಯೇ ಶ್ರುತಿಯೂ ಬ್ರಹ್ಮವ್ಯತಿರಿಕ್ತವಾಗಿ ರುವದರಿಂದ ಭ್ರಾಂತಿಮೂಲಕವಾದದ್ದೆಂದು ತಿಳಿದೇ ಇರುತ್ತದೆಯಷ್ಟೆ[3]? ಮತ್ತು **ನಿವರ್ತಕಜ್ಞಾನವೂ, ಜ್ಞಾತೃವೂ, ಆ (ಜ್ಞಾನ)ಕ್ಕೆ ಸಾಮಗ್ರಿಯಾಗಿರುವ ಶಾಸ್ತ್ರವೂ ಬ್ರಹ್ಮವ್ಯತಿರಿಕ್ತವಾಗಿರುವದೆಂಬರಿಂದ ಬಾಧ್ಯತ್ವವನ್ನು ಹೇಳುವದಾದರೆ, ಆಗ ಪ್ರಪಂಚನಿವೃತ್ತಿಗೆ ಮಿಥ್ಯಾತ್ವವು ಬಂದೊದಗುವದಾಗಿ[4] ಪ್ರಪಂಚವು ಸತ್ಯವೆಂದೇ ಆಗುವದು.** ಕನಸಿನಲ್ಲಿದ್ದ ಪುರುಷನ ವಾಕ್ಯದಿಂದ ಮಗನೇ[5] ಮೊದಲಾದವರ

---

1. ಇದು **ಪರಾಶರಭಟ್ಟಾಚಾರ್ಯರ** ವಚನವೆಂದು ಟೀಕೆ. ಆನುವಾದದ ಟಿಪ್ಪಣಿಯನ್ನು ನೋಡಿ.
2. ನಸುಗತ್ತಲೆ, ಕಣ್ಣಿನದೋಷ— ಮುಂತಾದ ಕಾರಣದಿಂದ ಆಗಿದ್ದರೂ.
3. ಬ್ರಹ್ಮವ್ಯತಿರಿಕ್ತವಾಗಿರುವದೇ ಮಿಥ್ಯಾತ್ವಕ್ಕೆ ಕಾರಣ ಎಂದು ತಿಳಿದಿರುವವನಿಗೆ ಶ್ರುತಿಯು ಮಿಥ್ಯೆಯೆಂದು ವಾಕ್ಯಶ್ರವಣಕಾಲದಲ್ಲಿಯೇ ತಿಳಿದಿರುತ್ತದೆ.
4. ಮಿಥ್ಯಾಜ್ಞಾತ್ರಾದಿಗಳಿಂದಾಗುವ ನಿವೃತ್ತಿಯೂ ಬ್ರಹ್ಮವ್ಯತಿರಿಕ್ತವಾದ್ದರಿಂದ ಮಿಥ್ಯೆಯೇ; ಆದ್ದರಿಂದ ಬಾಧಕಜ್ಞಾನವುಂಟಾಗದಿರುವದರಿಂದ ಪ್ರಪಂಚವು ಸತ್ಯವೆಂದೇ ಆಗುವದು.
5. ತಂದೆಯೇ ಎಂದು ಕಾ॥ ಪಾಠಕ್ಕೆ ಅರ್ಥ

ಮರಣವು ಮಿಥ್ಯೆಯಾಗಿರುವದರಿಂದ ಮಗನೇ ಮೊದಲಾದವರು ಹೇಗೆ ಸತ್ಯವಾಗಿರುವರೋ ಹಾಗೆಯೇ (ಇದು.)[1] ಇದಲ್ಲದೆ ತತ್ತ್ವಮಸ್ಯಾದಿವಾಕ್ಯವು ಭ್ರಾಂತನು ಪ್ರಯೋಗಿಸುವ ರಜ್ಜುಸರ್ಪಬಾಧಕವಾಕ್ಯದಂತೆ ಭ್ರಾಂತಿಮೂಲಕವಾಗಿರುವದರಿಂದ ಪ್ರಪಂಚದ ಬಾಧಕವಾಗಲಾರದು.[2]

(ಆಕ್ಷೇಪ) :- ಸ್ವಪ್ನದಲ್ಲಿ ಯಾವದಾದರೊಂದು ಭಯವಿದ್ದರೆ ಸ್ವಪ್ನದಶೆಯಲ್ಲಿಯೇ 'ಇದು ಸ್ವಪ್ನವು' ಎಂದು ತಿಳಿದುಬಂದಾಗ ಹಿಂದಿನ ಭಯವು ತೊಲಗುವದು ಕಂಡಿದೆಯಲ್ಲವೆ? ಅದರಂತೆ ಇಲ್ಲಿಯೂ ಆಗಬಹುದಲ್ಲ!

(ಪರಿಹಾರ) :- ಹಾಗಲ್ಲ. ಸ್ವಪ್ನಕಾಲದಲ್ಲಿಯೇ ಇದೂ[3] ಸ್ವಪ್ನವೇ ಎಂದು ತಿಳಿದುಬಂದರೆ ಮತ್ತೆ ಭಯವು ನಿವೃತ್ತಿಯಾಗದೆ ಇರುವದೇ ಕಂಡುಬಂದಿದೆಯಾದ್ದರಿಂದ (ಇಲ್ಲಿ) ಯಾವ ವಿಶೇಷವೂ ಇಲ್ಲ.[4] ಶ್ರವಣವೇಳೆಯಲ್ಲಿಯೇ ಅದೂ ಸ್ವಪ್ನವೆಂದು ಗೊತ್ತೇ ಆಗಿದೆ[5] ಎಂದು ಹೇಳಿರುತ್ತೇವೆ.

ಭ್ರಾಂತಿಕಲ್ಪಿತವಾಗಿರುವದರಿಂದ ಮಿಥ್ಯಾರೂಪವಾಗಿದ್ದರೂ ಶಾಸ್ತ್ರವು ಅದ್ವಿತೀಯವಾದ ಸತ್ತೇ ಬ್ರಹ್ಮವು ಎಂದು ತಿಳಿಸಿಕೊಡಬಹುದು ; ಆ ಸದ್ಬ್ರಹ್ಮವೆಂಬ ವಿಷಯವು ಆಮೇಲೆ ಬಾಧಿತವಾಗುವದು ಕಂಡುಬಾರದೆ ಇರುವದರಿಂದ ಬ್ರಹ್ಮವು ಹಾಗೆಯೇ ನಿಂತೇ ಇರುವದು- ಎಂದು ಹೇಳುತ್ತಾರಲ್ಲ, ಅದು ಸರಿಯಲ್ಲ. ಏಕೆಂದರೆ 'ಶೂನ್ಯವೇ ತತ್ತ್ವವು' ಎಂಬ ವಾಕ್ಯದಿಂದ ಅದೂ ಬಾಧಿತವಾಗುತ್ತದೆ.

(ಆಕ್ಷೇಪ) :- ಇದು ಭ್ರಾಂತಿಮೂಲವಾಕ್ಯವಲ್ಲವೆ?

(ಪರಿಹಾರ) :- ಅದ್ವಿತೀಯವಾದ ಸತ್ತೇ ಬ್ರಹ್ಮವು ಎಂಬ ವಾಕ್ಯವೂ ಭ್ರಾಂತಿಮೂಲವೆಂದು ನೀನೇ ಹೇಳಿರುತ್ತೀಯಲ್ಲ! ಆಮೇಲೆ ಬಾಧಿತವಾಗುವದು

---

1. ಏಕೆಂದರೆ ಪುತ್ರಾದಿಗಳ ಸತ್ಯತ್ವವನ್ನು ಬಾಧಿಸುವ ಸಾಮಗ್ರಿಯಾಗಲಿ ಜ್ಞಾತೃವಾಗಲಿ ಇರುವದಿಲ್ಲ ; ಕನಸಿನ ಪುರುಷನೂ ಅವನ ವಾಕ್ಯವೂ ಮಿಥ್ಯೆಯೆಂದು ಗೊತ್ತಾಗಿಬಿಟ್ಟಿದೆ.
2. ಇದು ಅನುಮಾನವಾಕ್ಯದಂತೆ ಕಂಡರೂ ಅನುಮಾನದಿಂದ ಇಲ್ಲಿ ಅಬಾಧಕತ್ವವನ್ನು ಸಾಧಿಸಿಲ್ಲ ; ಬರಿಯ ಅನಿಷ್ಟಪ್ರಸಂಗವೇ ಎಂದು ಟೀಕೆ. ಭ್ರಾಂತಿಮೂಲಕಜ್ಞಾನವೂ ನಿವರ್ತಕವಾಗಬಹುದೆಂಬುದನ್ನು ಆಕ್ಷೇಪಿಸಿ ಪರಿಹಾರಮಾಡುವದಕ್ಕಾಗಿ ಇಲ್ಲಿ ಮತ್ತೆ ಇದನ್ನು ಹೇಳಿಕೊಂಡಿದೆ.
3. ಈ ಬಾಧಕಜ್ಞಾನವೂ
4. ಬಾಧ್ಯಬಾಧಕಜ್ಞಾನಗಳೆರಡಕ್ಕೂ ಯಾವ ತಾರತಮ್ಯವೂ ಇಲ್ಲ.
5. ಇದು ದೃಷ್ಟಾಂತಕ್ಕೆ ಅನ್ವಯಿಸುವ ವಾಕ್ಯವಾದರೆ ಹೀಗೆ ಇರಬಹುದು ; ಇಲ್ಲದಿದ್ದರೆ 'ಶ್ರವಣಕಾಲದಲ್ಲಿಯೇ ಭ್ರಾಂತಿಮೂಲಕವೆಂದು ಹೇಳುತ್ತೇವೆ' ಎಂದು ವಾಕ್ಯವಿರಬೇಕಾಗುವದು.

ಕಂಡಿಲ್ಲವೆಂಬುದು ಸರ್ವಶೂನ್ಯವಾಕ್ಯಕ್ಕೇ (ಸಲ್ಲುವದು) ಎಂಬುದು ವಿಶೇಷವು.[1] **ಸರ್ವಶೂನ್ಯವಾದಿಗೂ ಬ್ರಹ್ಮವ್ಯತಿರಿಕ್ತವಸ್ತುವು ಮಿಥ್ಯೆ ಎಂಬ ವಾದಿಗೂ - ತನ್ನ ಪಕ್ಷವನ್ನು ಸಾಧಿಸುವ ಪ್ರಮಾಣವು ಪರಮಾರ್ಥವೆಂದು ಒಪ್ಪದಿರುವದರಿಂದ** - ವಾದದಲ್ಲಿ **ಅಧಿಕಾರವೇ ಇಲ್ಲ** ಎಂದು 'ಉಪಾಯವು ಇಲ್ಲದಿರುವದರಿಂದ ಶೂನ್ಯವಾದಿಗೆ ವಾದದಲ್ಲಿ ಅಧಿಕಾರವಿರುವದಿಲ್ಲ' (?)[2] ಎಂದು ಬಲ್ಲವರು ಪ್ರತಿಪಾದಿಸಿರುತ್ತಾರೆ.

೬. ಶಾಸ್ತ್ರವು ಪ್ರತ್ಯಕ್ಷಬಾಧಕವಾಗಲಾರದು

(ಮೂಲ)

೩೮. ಅಪಿ ಚ ಪ್ರತ್ಯಕ್ಷದೃಷ್ಟಸ್ಯ ಪ್ರಪಞ್ಚಸ್ಯ ಮಿಥ್ಯಾತ್ವಂ ಕೇನ ಪ್ರಮಾಣೇನ ಸಾಧ್ಯತೇ? ಪ್ರತ್ಯಕ್ಷಸ್ಯ ದೋಷಮೂಲತ್ವೇನಾಽನ್ಯಥಾಸಿದ್ಧಿಸಂಭವಾತ್ ನಿರ್ದೋಷಂ ಶಾಸ್ತ್ರಮ್ ಅನನ್ಯಥಾಸಿದ್ಧಂ ಪ್ರತ್ಯಕ್ಷಸ್ಯ ಬಾಧಕಮ್ ಇತಿ ಚೇತ್ । ಕೇನ ದೋಷೇಣ ಜಾತಂ ಪ್ರತ್ಯಕ್ಷಮನನ್ತಭೇದವಿಷಯಮಿತಿ ವಕ್ತವ್ಯಮ್ । ಅನಾದಿಭೇದ ವಾಸನಾಖ್ಯದೋಷಜಾತಂ ಪ್ರತ್ಯಕ್ಷಮಿತಿ ಚೇತ್ । ಹನ್ತ ತರ್ಹಿ ಅನೇನೈವ ದೋಷೇಣ ಜಾತಂ ಶಾಸ್ತ್ರಮಪೀತಿ ಏಕದೋಷಮೂಲತ್ವಾಚ್ಛಾಸ್ತ್ರ ಪ್ರತ್ಯಕ್ಷಯೋರ್ನ ಬಾಧ್ಯಬಾಧಕ ಭಾವಸಿದ್ಧಿಃ । ಆಕಾಶವಾಯ್ವಾದಿಭೂತತದಾರಬ್ಧಶಬ್ದಸ್ಪರ್ಶಾದಿಯುಕ್ತಮನುಷ್ಯತ್ವಾದಿ ಸಂಸ್ಥಾನಸಂಸ್ಥಿತಪದಾರ್ಥಗ್ರಾಹಿ ಪ್ರತ್ಯಕ್ಷಮ್ । ಶಾಸ್ತ್ರಂ ತು ಪ್ರತ್ಯಕ್ಷಾದ್ಯಪರಿಚ್ಛೇದ್ಯ ಸರ್ವಾನ್ತರಾತ್ಮತ್ವಸತ್ಯತ್ವಾದ್ಯನನ್ತವಿಶೇಷಣವಿಶಿಷ್ಟಬ್ರಹ್ಮಸ್ವರೂಪತದುಪಾಸನಾ ದ್ಯಾರಾಧನಪ್ರಕಾರತತ್ಪ್ರಾಪ್ತಿ ಪೂರ್ವಕತತ್ಪ್ರಸಾದಲಭ್ಯಫಲಶೇಷತದನಿಷ್ಟಕರಣಮೂಲ ನಿಗ್ರಹವಿಶೇಷವಿಷಯಮ್ ಇತಿ ಶಾಸ್ತ್ರಪ್ರತ್ಯಕ್ಷಯೋರ್ನ ವಿರೋಧಃ । ಅನಾದಿನಿಧನಾ ವಿಚ್ಛಿನ್ನಪಾಠಸಂಪ್ರದಾಯತಾದ್ಯನೇಕಗುಣವಿಶಿಷ್ಟಸ್ಯ ಶಾಸ್ತ್ರಸ್ಯ ಬಲೀಯಸ್ತ್ವಂ ವದತಾ ಪ್ರತ್ಯಕ್ಷಪಾರಮಾರ್ಥ್ಯಮ್ ಅವಶ್ಯಮಭ್ಯುಪಗನ್ತವ್ಯಮಿತಿ ಅಲಮನೇನ

1. ಏಕೆಂದರೆ ಬ್ರಹ್ಮವನ್ನುಳಿಸಿಕೊಳ್ಳುವ ವಾಕ್ಯಕ್ಕೆ ಬಾಧಕಶಂಕೆಯಿದೆ ; ಸರ್ವಶೂನ್ಯವಾಕ್ಯವನ್ನು ಕೇಳಿದಮೇಲೆ ಮತ್ತೆ ಯಾವ ಬಾಧಕವನ್ನೂ ಕಲ್ಪಿಸುವದಕ್ಕೆ ಬರುವದಿಲ್ಲ- ಎಂದು ಭಾವ.
2. 'ಸರ್ವದಾ ಸದುಪಾಯಾನಾಂ ವಾದಮಾರ್ಗಃ ಪ್ರವರ್ತತೇ' ಎಂಬುದು ಪೂರ್ವಾರ್ಧ. ನಿಜವಾಗಿ ಪರಮಾರ್ಥವಾದ ಸಾಧನವುಳ್ಳವರಿಗೇ ಯಾವಾಗಲೂ ವಾದಮಾರ್ಗವು ಇರುತ್ತದೆ ಎಂದು ಅದಕ್ಕೆ ಅರ್ಥ. ಕಾ॥ ಪಾಠದಲ್ಲಿ ಈ ಶ್ಲೋಕಾರ್ಧವೂ ಇದೆಯಾದರೂ ವ್ಯಾಖ್ಯಾನಕಾರರು ಅದನ್ನು ತಾವೇ ಹೊಸದಾಗಿ ಸೇರಿಸಿದಂತೆ ಬರೆದಿರುತ್ತಾರೆ. ಸರ್ವವೂ ಶೂನ್ಯವೆಂಬವನಿಗೆ ಪರಮಾರ್ಥವಾದ ಉಪಾಯವಿಲ್ಲ ; ಹಾಗೆಯೇ ನಿಮಗೂ ಇಲ್ಲವೆಂದಾದರೆ ವಾದದಲ್ಲಿ ಅಧಿಕಾರವೇ ಇಲ್ಲವೆಂದಾಗುತ್ತದೆ. ಅಥವಾ ನಿಮ್ಮ ಪಕ್ಷಸ್ಥಾಪನೆಗೆ ಸಾಧನವಿಲ್ಲದ್ದರಿಂದ ನಿಮ್ಮ ಪ್ರವೃತ್ತಿಯು ವ್ಯರ್ಥವಾಗುತ್ತದೆ- ಎಂದು ಅಭಿಪ್ರಾಯ.

ಶ್ರುತಿಶತವಿತತಿವಾತವೇಗಪರಾಹತಕುದೃಷ್ಟಿದುಷ್ಟಯುಕ್ತಿಜಾಲತೂಲನಿರಸನೇನೇತ್ಯುಪರಮ್ಯತೇ ॥

(ಅರ್ಥ)

ಇದಲ್ಲದೆ ಪ್ರತ್ಯಕ್ಷವಾಗಿ ಕಂಡುಬರುವ ಪ್ರಪಂಚವು ಮಿಥ್ಯೆ ಎಂಬುದನ್ನು ಯಾವ ಪ್ರಮಾಣವು ಸಾಧಿಸುತ್ತದೆ?

(ಪೂರ್ವಪಕ್ಷಿ) :- ಪ್ರತ್ಯಕ್ಷವು ದೋಷಮೂಲಕವಾಗಿರುವದರಿಂದ (ಅದಕ್ಕೆ) ಬೇರೆ ಬಗೆಯಿಂದಲೂ ಸಿದ್ಧಿಯಾಗಬಹುದು ; ನಿರ್ದೋಷವಾದ ಶಾಸ್ತ್ರವು (ತನ್ನ ವಿಷಯವು) ಮತ್ತೊಂದು ಬಗೆಯಿಂದ ಸಿದ್ಧವಾಗದೆ ಇರುವದರಿಂದ ಪ್ರತ್ಯಕ್ಷಕ್ಕೆ ಬಾಧಕವಾಗಿರುತ್ತದೆ.

(ಸಿದ್ಧಾಂತಿ) :- ಅನಂತಭೇದಗಳನ್ನು ವಿಷಯವಾಗಿ (ಮಾಡಿಕೊಂಡಿರುವ) ಪ್ರತ್ಯಕ್ಷವು ಯಾವ ದೋಷದಿಂದ ಹುಟ್ಟುತ್ತದೆ?- ಎಂಬುದನ್ನು (ನೀವು) ಹೇಳಬೇಕು.

(ಪೂರ್ವಪಕ್ಷಿ) :- ಅನಾದಿಯಾದ ಭೇದವಾಸನೆ ಎಂಬ ದೋಷದಿಂದ ಪ್ರತ್ಯಕ್ಷವು ಹುಟ್ಟಿರುತ್ತದೆ.

(ಸಿದ್ಧಾಂತಿ) :- ಹಾಗಾದರೆ ಇದೇ ದೋಷದಿಂದಲೇ ಶಾಸ್ತ್ರವೂ ಹುಟ್ಟಿರುತ್ತದೆ ಯಾದ್ದರಿಂದ ಒಂದೇ ದೋಷವು ಪ್ರತ್ಯಕ್ಷಶಾಸ್ತ್ರಗಳೆರಡಕ್ಕೂ ಕಾರಣವಾಗಿರುವದ-ರಿಂದ (ಅವುಗಳಿಗೆ ಪರಸ್ಪರ) ಬಾಧ್ಯಬಾಧಕಭಾವವು ಸಿದ್ಧಿಸದು.[1] ಆಕಾಶ ವಾಯ್ವಾದಿಭೂತಗಳು, ಅವುಗಳಿಂದಾದ ಶಬ್ದಸ್ಪರ್ಶಾದಿಯುಕ್ತವಾದ ಮನುಷ್ಯತ್ವವೇ ಮುಂತಾದ ಸಂಸ್ಥಾನಗಳಿಂದೊಡಗೂಡಿರುವ ಪದಾರ್ಥಗಳನ್ನು **ಪ್ರತ್ಯಕ್ಷವು** ಗ್ರಹಿಸುತ್ತದೆ. **ಶಾಸ್ತ್ರವಾದರೋ ಪ್ರತ್ಯಕ್ಷಾದಿಗಳಿಂದ ಗೊತ್ತಾಗದ ಸರ್ವಾಂತರಾತ್ಮತ್ವ, ಸತ್ಯತ್ವ - ಇವೇ ಮುಂತಾದ ಅನಂತವಿಶೇಷಣ ವಿಶಿಷ್ಟವಾದ ಬ್ರಹ್ಮಸ್ವರೂಪ, ಅದನ್ನು ಉಪಾಸನೆಮಾಡುವದೇ ಮುಂತಾದ ಆರಾಧನಪ್ರಕಾರಗಳು, ಆ (ಬ್ರಹ್ಮ)ದ ಪ್ರಾಪ್ತಿಪೂರ್ವಕವಾಗಿ ಅದರ ಪ್ರಸಾದದಿಂದ ದೊರೆಯತಕ್ಕ ಫಲವಿಶೇಷಗಳು, ಆ (ಬ್ರಹ್ಮ)ಕ್ಕೆ ಅನಿಷ್ಟವಾದದ್ದನ್ನು ಮಾಡಿದ್ದರಿಂದಾಗುವ ನಿಗ್ರಹವಿಶೇಷಗಳು - ಇವುಗಳ ವಿಷಯವಾದದ್ದು. ಆದ್ದರಿಂದ ಶಾಸ್ತ್ರಪ್ರತ್ಯಕ್ಷಗಳಿಗೆ ವಿರೋಧವೇ ಇಲ್ಲ.**[2] ಅನಾದ್ಯನಂತವಾಗಿ ಅವಿಚ್ಛಿನ್ನಪಾಠದ ಸಂಪ್ರದಾಯತ್ವವೇ ಮುಂತಾದ ಅನೇಕಗುಣ

---

1. ಮಿಥ್ಯಾಶಾಸ್ತ್ರವು ಮಿಥ್ಯಾಪ್ರತ್ಯಕ್ಷಕ್ಕೆ ಹೇಗೆ ಬಾಧಕವಾದೀತು?- ಎಂದು ಭಾವ.
2. ಏಕೆಂದರೆ ಪ್ರತ್ಯಕ್ಷಕ್ಕೆ ವಿಷಯವಲ್ಲದವುಗಳನ್ನೇ ಶಾಸ್ತ್ರವು ಹೇಳುತ್ತಿದೆ.

ವಿಶಿಷ್ಟವಾದ ಶಾಸ್ತ್ರವು (ಪ್ರತ್ಯಕ್ಷ)ಕ್ಕಿಂತ ಪ್ರಬಲವೆಂದು ಹೇಳುವವನು ಪ್ರತ್ಯಕ್ಷವು ಪರಮಾರ್ಥವೆಂದು ಅವಶ್ಯವಾಗಿ ಒಪ್ಪಲೂಬೇಕಾಗುತ್ತದೆ.[1]

ಆದ್ದರಿಂದ ನೂರಾರು ಶ್ರುತಿಗಳ ಸಮೂಹವೆಂಬ ಬಿರುಗಾಳಿಯ ವೇಗದಿಂದ ಹೊಡೆದಾಡಿಸಲ್ಪಡುತ್ತಿರುವರ ದೃಷ್ಟಿಯಿಂದ ದುಷ್ಟವಾಗಿರುವ ಯುಕ್ತಿ ಜಾಲವೆಂಬ ಹತ್ತಿಯನ್ನು ತಳ್ಳಿಹಾಕುವದು ಸಾಕು ಎಂದು (ಇಲ್ಲಿಗೆ ಖಂಡನೆಯನ್ನು ನಿಲ್ಲಿಸಿ) ಸುಮ್ಮನಾಗುವೆವು.

---

1. ಹಿಂದೆ ಹೇಳಿದ ಅವಿರೋಧವು ಸಿದ್ಧಾಂತದ ಪ್ರಕಾರ. ಆದರೆ ಅನಾದ್ಯವಿಚ್ಛಿನಪಾಠ ಸಂಪ್ರದಾಯವೇ ಮುಂತಾದ ಗುಣವುಳ್ಳದ್ದಾದ್ದರಿಂದ ಪ್ರತ್ಯಕ್ಷಕ್ಕಿಂತ ಶಾಸ್ತ್ರವು ಪ್ರಬಲವೆಂಬುದನ್ನು ಅದ್ವೈತಿಯೂ ಒಪ್ಪುತ್ತಾನಾದ್ದರಿಂದ ಪ್ರತ್ಯಕ್ಷವು ಪರಮಾರ್ಥವೆಂದೇ ಒಪ್ಪಬೇಕು ಎಂಬ ಅರ್ಥ. **ಬ್ರಹ್ಮಸಿದ್ಧಿ ತರ್ಕಕಾಂಡ**ದಲ್ಲಿ ಆಗಮವು ನಿರ್ದೋಷವಾದ್ದರಿಂದ ಪ್ರಬಲವೆಂದಿರುವದನ್ನು ನೋಡಿ.

೩. ಭಾಸ್ಕರಮತನಿರಾಕರಣ

ಈ ಮತದಲ್ಲಿ ಉಪಾಧಿದೋಷಗಳು ಬ್ರಹ್ಮಕ್ಕೇ ಅಂಟುವವು

(ಮೂಲ)

೩೯. ದ್ವಿತೀಯೇ ತು ಪಕ್ಷೇ ಉಪಾಧಿಬ್ರಹ್ಮವ್ಯತಿರಿಕ್ತವಸ್ತ್ವನ್ತರಾನಭ್ಯುಪಗಮಾತ್, ಬ್ರಹ್ಮಣ್ಯೇವೋಪಾಧಿಸಂಸರ್ಗಾತ್, ಔಪಾಧಿಕಾಃ ಸರ್ವೇದೋಷಾ ಬ್ರಹ್ಮಣ್ಯೇವ ಭವೇಯುಃ । ತತಶ್ಚಾಪಹತಪಾಪ್ಮತ್ವಾದಿನಿರ್ದೋಷ[1] ಶ್ರುತಯಃ ಸರ್ವಾ ವಿಹನ್ಯನ್ತೇ ॥

(ಅರ್ಥ)

ಎರಡನೆಯ ಪಕ್ಷದಲ್ಲಿಯಾದರೋ[2] ಉಪಾಧಿ, ಬ್ರಹ್ಮ- ಇವುಗಳಿಗಿಂತ ವ್ಯತಿರಿಕ್ತವಾದ ಮತ್ತೊಂದು ವಸ್ತುವನ್ನು (ಈ ಪಕ್ಷದವರು) ಒಪ್ಪದೆ ಇರುವದರಿಂದ ಉಪಾಧಿಯ ಸಂಬಂಧವು ಬ್ರಹ್ಮದಲ್ಲಿಯೇ (ಅಂಟಿಕೊಳ್ಳು)ವದಾಗಿ ಉಪಾಧಿಯಿಂದಾಗುವ ದೋಷಗಳೆಲ್ಲವೂ ಬ್ರಹ್ಮದಲ್ಲಿಯೇ ಆಗಬೇಕಾಗುವದು. ಆದ್ದರಿಂದ (ಬ್ರಹ್ಮವು) ಅಪಹತಪಾಪ್ಮವು ಎಂದು ಮುಂತಾಗಿ (ಬ್ರಹ್ಮಕ್ಕೆ) ನಿರ್ದೋಷತ್ವವನ್ನು ಹೇಳುವ ಶ್ರುತಿಗಳಿಗೆಲ್ಲ ವಿರೋಧವಾಗುವದು.

ಘಟಾಕಾಶಾದಿದೃಷ್ಟಾಂತವು ಪೂರ್ವಪಕ್ಷಿಗಳಿಗೆ ಸಹಾಯಕವಲ್ಲ

(ಮೂಲ)

೪೦. ಯಥಾ ಘಟಾಕಾಶಾದೇಃ ಪರಿಚ್ಛಿನ್ನತಯಾ ಮಹಾಕಾಶಾದ್ ವೈಲಕ್ಷಣ್ಯಂ ಪರಸ್ಪರಭೇದಶ್ಚ ದೃಶ್ಯತೇ, ತತ್ರಸ್ಥಾ ದೋಷಾ ವಾ ಗುಣಾ ವಾ ಅನವಚ್ಛಿನ್ನೇ ಮಹಾಕಾಶೇ ನ ಸಂಬಧ್ಯನ್ತೇ. ಏವಮ್ ಉಪಾಧಿಕೃತಭೇದವ್ಯವಸ್ಥಿತ ಜೀವಗತಾ ದೋಷಾ ಅನುಪಹಿತೇ ಪರೇ ಬ್ರಹ್ಮಣಿ ನ ಸಂಬಧ್ಯನ್ತೇ ಇತಿ ಚೇತ್ । ನೈತದುಪಪದ್ಯತೇ । ನಿರವಯವಸ್ಯಾಽಽಕಾಶಸ್ಯಾನವಚ್ಛೇದ್ಯಸ್ಯ ಘಟಾದಿಭಿಶ್ಛೇದಾಸಂಭವಾತ್, ತೇನೈವಾಽಽಕಾಶೇನ ಘಟಾದಯಃ ಸಂಯುಕ್ತಾ ಇತಿ ಬ್ರಹ್ಮಣೋಽಪ್ಯಚ್ಛೇದ್ಯತ್ವಾದ್ ಬ್ರಹ್ಮೈವೋಪಾಧಿಸಂಯುಕ್ತಂ ಸ್ಯಾತ್ ॥

---

1. 'ನಿರ್ದೋಷತ್ವಶ್ರುತಯಃ' ಕಾ॥
2. ಈ ಪಕ್ಷದಲ್ಲಿ ಮಿಥ್ಯಾತ್ವದಿಂದಾಗುವ ಅನುಪಪತ್ತಿಗಳು ಯಾವವೂ ಆಗುವದಿಲ್ಲವಾದರೂ- ಎಂಬುದನ್ನರಿತು (ಆದರೋ) ಎಂಬ ಶಬ್ದದಿಂದ ಸೂಚಿಸಿದೆ.

(ಅರ್ಥ)

(ಪೂರ್ವಪಕ್ಷಿ) : ಹೇಗೆ ಘಟಾಕಾಶವೇ ಮುಂತಾದದ್ದು ಪರಿಚ್ಛಿನ್ನವಾಗಿರುವದರಿಂದ ಮಹಾಕಾಶಕ್ಕಿಂತ ವಿಲಕ್ಷಣವೆಂಬುದೂ (ಘಟಾಕಾಶಗಳೇ ಮುಂತಾದವಕ್ಕೆ) ಒಂದಕ್ಕೊಂದಕ್ಕೆ ಭೇದವೂ ಕಂಡುಬರುತ್ತದೆಯೋ ಅವುಗಳಲ್ಲಿರುವ ಗುಣಗಳಾಗಲಿ ದೋಷಗಳಾಗಲಿ ಅನವಚ್ಛಿನ್ನವಾದ ಮಹಾಕಾಶಕ್ಕೆ ಸಂಬಂಧ ಪಡದೆ ಇರುವವೋ, ಹಾಗೆ ಉಪಾಧಿಯಿಂದಾದ ಭೇದದಿಂದ (ಬೇರೆಬೇರೆಯಾಗಿ)ದ್ದುಕೊಂಡಿರುವ ಜೀವರುಗಳಲ್ಲಿನ ದೋಷಗಳು ಉಪಹಿತವಲ್ಲದ ಪರಬ್ರಹ್ಮಕ್ಕೆ ಸಂಬಂಧಪಡದೆ ಇರುತ್ತದೆ.[1]

(ಸಿದ್ಧಾಂತಿ).:- ಇದು ಹೊಂದುವದಿಲ್ಲ. ಏಕೆಂದರೆ ನಿರವಯವವಾದ್ದರಿಂದ ಆಕಾಶವು ಅವಚ್ಛೇದ್ಯವಲ್ಲವಾಗಿ ಘಟಾದಿಗಳಿಂದ ಅದಕ್ಕೆ ವಿಂಗಡವು ಸಂಭವಿಸುವದಿಲ್ಲ-ವಾಗಿ ಅದೇ ಆಕಾಶಕ್ಕೇ ಘಟಾದಿಗಳು ಸೇರಿಕೊಂಡಿರುತ್ತವೆಯಾದ್ದರಿಂದ ಬ್ರಹ್ಮವೂ ಅಚ್ಛೇದ್ಯವಾಗಿದೆಯಾಗಿ ಬ್ರಹ್ಮವೇ ಉಪಾಧಿಗೆ ಸೇರಿಕೊಂಡಿದೆಯೆಂದಾಗುವದು.

ಪ್ರದೇಶಭೇದವನ್ನೊಪ್ಪಿದರೂ ಆಕಾಶದೃಷ್ಟಾಂತವು ಹೊಂದುವದಿಲ್ಲ

(ಮೂಲ)

೪೧. ಘಟಸಂಯುಕ್ತಾಕಾಶಪ್ರದೇಶೋಽನ್ಯಸ್ಮಾದಾಕಾಶಪ್ರದೇಶಾದ್ ಭಿದ್ಯತ ಇತಿ ಚೇತ್ । ಆಕಾಶಸ್ಯ ಏಕಸ್ಯೈವಪ್ರದೇಶಭೇದೇನ ಘಟಾದಿ ಸಂಯೋಗಾತ್ ಘಟಾದೌ ಗಚ್ಛತಿ ತಸ್ಯ ಚ ಪ್ರದೇಶಸ್ಯಾಽನಿಯಮ ಇತಿ, ತದ್ವತ್ ಬ್ರಹ್ಮಣ್ಯೇವ ಪ್ರದೇಶಭೇದಾಽನಿಯಮೇನ ಉಪಾಧಿಸಂಸರ್ಗಾತ್ ಉಪಾಧೌ ಗಚ್ಛತಿ ಸಂಯುಕ್ತವಿಯುಕ್ತಬ್ರಹ್ಮಪ್ರದೇಶಭೇದಾಚ್ಚ ಬ್ರಹ್ಮಣ್ಯೇವ ಉಪಾಧಿಸಂಸರ್ಗಃ ಕ್ಷಣೇ ಕ್ಷಣೇ ಬನ್ಧೋ ಮೋಕ್ಷಶ್ಚ ಭವತೀತಿ[2] ಸನ್ತಃ ಪರಿಹಸನ್ತಿ ॥

(ಅರ್ಥ)

(ಶಂಕೆ) :- ಘಟಸಂಯೋಗವುಳ್ಳ ಆಕಾಶದ ಪ್ರದೇಶವು ಮತ್ತೊಂದು ಆಕಾಶಪ್ರದೇಶಕ್ಕಿಂತ ಬೇರೆ(ಯಲ್ಲವೆ) ?

---

1. ಯಾವ ಜೀವನು ಯಾವ ಉಪಾಧಿಗೆ ಸಂಬಂಧಪಟ್ಟಿರುತ್ತಾನೋ ಅವನಿಗೆ ಮಾತ್ರ ಸಂಬಂಧಪಟ್ಟಿರುವ ದೋಷಗಳು, ಮತ್ತೊಬ್ಬ ಜೀವನಿಗೆ ಅಂಟುವದಿಲ್ಲ ; ಬ್ರಹ್ಮಕ್ಕಂತೂ ಅಂಟುವದೇ ಇಲ್ಲ- ಎಂದು ಅಭಿಪ್ರಾಯ. **ಭಾಸ್ಕರಾಚಾರ್ಯರ ಸೂತ್ರಭಾಷ್ಯವು** ಮಾತ್ರ ಅಚ್ಚಾಗಿದೆ. ಆಕಾಶಕ್ಕೆ ಉಪಾಧಿಯಿಂದ ಶ್ರವಣೇಂದ್ರಿಯವೆಂಬ ಭಿನ್ನಭಿನ್ನಾಂಶವಿರುವಂತೆ ಜೀವನು ಬ್ರಹ್ಮಕ್ಕೆ ಅಂಶವು ಎಂಬ ದೃಷ್ಟಾಂತವು ವೇ.ಸೂ ಭಾ. ೧-೪-೨೧ರಲ್ಲಿ ಸಿಕ್ಕುತ್ತದೆ. ಘಟಾಕಾಶಮಹಾಕಾಶಗಳ ದೃಷ್ಟಾಂತವು ಸೂತ್ರಭಾಷ್ಯದಲ್ಲಿ ನಮಗೆಸಿಕ್ಕಿಲ್ಲ.

2. 'ಬನ್ಧಮೋಕ್ಷೌ ಚ ಸ್ಯಾತಾಮಿತಿ' ಕಾ॥

(ಪರಿಹಾರ) :- ಆಕಾಶವೊಂದೇ ಪ್ರದೇಶವು ಬೇರೆಬೇರೆಯಾಗಿ ಘಟ ದೊಡನೆ ಸಂಯೋಗವಾಗುತ್ತದೆಯಾಗಿ ಘಟವೇ ಮುಂತಾದದ್ದು (ಬೇರೆ ಕಡೆಗೆ) ಹೋಗುವಾಗ ಆ ಪ್ರದೇಶವು (ಇಂಥದ್ದೆಂಬ) ನಿಯಮವಿರುವದಿಲ್ಲ. ಆದರಂತೆ ಪ್ರದೇಶವು ನಿಯತವಾಗಿಲ್ಲದ್ದರಿಂದ ಬ್ರಹ್ಮದಲ್ಲಿಯೇ ಉಪಾಧಿಯ ಸಂಬಂಧವಾಗು ವದರಿಂದ ಉಪಾಧಿಯು ಹೋಗಲಾಗಿ ಸಂಯುಕ್ತವೂ ವಿಯುಕ್ತವೂ ಆಗುವ ಪ್ರದೇಶಗಳು ಬೇರೆಬೇರೆಯಾಗಿರುವದರಿಂದ ಬ್ರಹ್ಮದಲ್ಲಿಯೇ ಉಪಾಧಿಯ ಸಂಬಂಧವು ಕ್ಷಣಕ್ಷಣಕ್ಕೂ ಬಂಧವೂ ಮೋಕ್ಷವೂ ಆಗುತ್ತದೆ ಎಂದು ಸತ್ಪುರುಷರು (ಇದನ್ನು ಕೇಳಿ) ನಗುವರು.

ಶ್ರೋತ್ರೇಂದ್ರಿಯವ್ಯವಸ್ಥೆಯಂತೆ ಬ್ರಹ್ಮವ್ಯವಸ್ಥೆ ಎಂಬುದು ಸರಿಯಲ್ಲ

(ಮೂಲ)

೪೨. ನಿರವಯವಸ್ಯ ಆಕಾಶಸ್ಯೈವ[1] ಶ್ರೋತ್ರೇನ್ದ್ರಿಯತ್ವೇಽಪಿ ಇನ್ದ್ರಿಯ ವ್ಯವಸ್ಥಾವತ್ ಬ್ರಹ್ಮಣ್ಯಪಿ ವ್ಯವಸ್ಥಾ ಉಪಪದ್ಯತ ಇತಿ ಚೇತ್ । ನ । ವಾಯು ವಿಶೇಷಸಂಸ್ಕೃತಕರ್ಣಪ್ರದೇಶಸಂಯುಕ್ತಸ್ಯೈವಾಽಽಕಾಶಪ್ರದೇಶಸ್ಯ ಇನ್ದ್ರಿಯತ್ವಾತ್ । ತಸ್ಯ ಚ ಪ್ರದೇಶಾನ್ತರಾದ್ಭೇದಾನಿಯಮೇಽಪಿ ಇನ್ದ್ರಿಯವ್ಯವಸ್ಥಾ ಉಪಪದ್ಯತೇ । ಆಕಾಶಸ್ಯ ತು ಸರ್ವೇಷಾಂ ಶರೀರೇಷು ಗಚ್ಛತ್ಸು ಅನಿಯಮೇನ ಸರ್ವಪ್ರದೇಶಸಂಯೋಗ ಇತಿ ಬ್ರಹ್ಮಣ್ಯಪಿ ಉಪಾಧಿಸಂಯೋಗಪ್ರದೇಶಾನಿಯಮ ಏವ । ಆಕಾಶಸ್ಯ ಸ್ವರೂಪೇಣೈವ ಶ್ರೋತ್ರೇನ್ದ್ರಿಯತ್ವಮಭ್ಯುಪಗಮ್ಯಾಪಿ ಇನ್ದ್ರಿಯವ್ಯವಸ್ಥಾ ಉಕ್ತಾ । ಪರಮಾರ್ಥತಸ್ತು ಆಕಾಶೋ ನ ಶ್ರೋತ್ರೇನ್ದ್ರಿಯಮ್ । ವೈಕಾರಿಕಾದಹಙ್ಕಾರಾತ್ ಏಕಾದಶೇನ್ದ್ರಿಯಾಣಿ ಜಾಯನ್ತ ಇತಿ ಹಿ ವೈದಿಕಾಃ । ಯಥೋಕ್ತಂ ಭಗವತಾ ಪರಾಶರೇಣ 'ತೈಜಸಾನೀನ್ದ್ರಿಯಾಣ್ಯಾಹುರ್ದೇವಾ ವೈಕಾರಿಕಾ ದಶ । ಏಕಾದಶಂ ಮನಶ್ಚಾತ್ರ ದೇವಾ ವೈಕಾರಿಕಾಃ ಸ್ಮೃತಾಃ ॥' (ವಿ.ಪು. ೧-೨-೪೬, ೪೭) ಇತಿ । ಅಯಮರ್ಥಃ । ವೈಕಾರಿಕಃ ತೈಜಸಃ, ಭೂತಾದಿಃ - ಇತಿ ತ್ರಿವಿಧೋಽಹಙ್ಕಾರಃ । ಸ ಚ ಕ್ರಮಾತ್ ಸಾತ್ತ್ವಿಕೋ, ರಾಜಸೋ, ತಾಮಸಶ್ಚ । ತತ್ರ ತಾಮಸಾದ್ ಭೂತಾದೇರಾಕಾಶಾದೀನಿ ಭೂತಾನಿ ಜಾಯನ್ತ ಇತಿ ಸೃಷ್ಟಿಕ್ರಮಮ್ ಉಕ್ತ್ವಾ , ತೈಜಸಾದ್ ರಾಜಸಾಹಙ್ಕಾರಾತ್ ಏಕಾದಶೇನ್ದ್ರಿಯಾಣಿ ಜಾಯನ್ತ ಇತಿ ಪರಮತಮ್ ಉಪನ್ಯಸ್ಯ, ಸಾತ್ತ್ವಿಕಾಹಙ್ಕಾರಾತ್ ವೈಕಾರಿಕಾಣಿ ಇನ್ದ್ರಿಯಾಣಿ

---

1. 'ನಿರವಯವಸ್ಯೈವಾಕಾಽಽಶಸ್ಯ' ಎಂಬ ಕಾ॥ಪಾಠವನ್ನು ಟೀಕೆಯಲ್ಲಿ ಒಪ್ಪಿದಂತೆ ಕಾಣಲಿಲ್ಲ.

ಜಾಯನ್ತ ಇತಿ ಸ್ವಮತಮ್ ಉಚ್ಯತೇ[1] । 'ದೇವಾ ವೈಕಾರಿಕಾಃ ಸ್ಮೃತಾಃ' (ಇತಿ) ದೇವಾಃ ಇನ್ದ್ರಿಯಾಣಿ । ಏವಮ್ ಅಹಙ್ಕಾರಿಕಾಣಾಮ್ ಇನ್ದ್ರಿಯಾಣಾಂ[2] ಭೂತೈಶ್ಚ ಆಪ್ಯಾಯನಂ ಮಹಾಭಾರತೇ ಉಚ್ಯತೇ । ಭೌತಿಕತ್ವೇಽಪಿ ಇನ್ದ್ರಿಯಾಣಾಮ್ ಆಕಾಶಾದಿಭೂತವಿಕಾರತ್ವಾದೇವ ಆಕಾಶಾದಿಭೂತಪರಿಣಾಮ ವಿಶೇಷಾಃ ವ್ಯವಸ್ಥಿತಾ ಏವ ಶರೀರವತ್ ಪುರುಷಾಣಾಮ್ ಇನ್ದ್ರಿಯಾಣಿ ಭವನ್ತೀತಿ ಬ್ರಹ್ಮಣ್ಯಚ್ಛೇದ್ಯೇ ನಿರವಯವೇ ನಿರ್ವಿಕಾರೇ ತ್ವನಿಯಮೇನ ಅನನ್ತಹೇಯೋಪಾಧಿ ಸಂಸರ್ಗದೋಷೋ ದುಷ್ಪರಿಹರ ಏವೇತಿ ಶ್ರದ್ದಧಾನಾನಾಮೇವಾಽಯಂ ಪಕ್ಷ ಇತಿ ಶಾಸ್ತ್ರವಿದೋ ನ ಬಹುಮನ್ಯನ್ತೇ ॥

(ಅರ್ಥ)

(ಪೂರ್ವಪಕ್ಷಿ) :— ನಿರವಯವಾದ ಆಕಾಶವೇ ಶ್ರೋತ್ರೇಂದ್ರಿಯ ವಾಗಿದ್ದರೂ (ಶ್ರೋತ್ರರೂಪವಾದ) ಇಂದ್ರಿಯಗಳ ವ್ಯವಸ್ಥೆಯಿರುವಂತೆ ಬ್ರಹ್ಮದಲ್ಲಿಯೂ ವ್ಯವಸ್ಥೆಯಿರಬಹುದಲ್ಲ!

(ಸಿದ್ಧಾಂತಿ) :— ಹಾಗಲ್ಲ. ಆಯಾ ವಾಯುವಿನಿಂದ ಸಂಸ್ಕಾರವನ್ನು ಪಡೆದ ಕರ್ಣಪ್ರದೇಶದೊಡನೆ ಸಂಯುಕ್ತವಾದ ಆಕಾಶಪ್ರದೇಶವೇ (ಶ್ರೋತ್ರರೂಪವಾದ) ಇಂದ್ರಿಯವಾಗಿರುವದರಿಂದ ಅದು ಮತ್ತೊಂದು ಪ್ರದೇಶಕ್ಕಿಂತ ಭಿನ್ನವೆಂಬ ನಿಯಮವಿಲ್ಲದಿದ್ದರೂ ಇಂದ್ರಿಯಗಳ ವ್ಯವಸ್ಥೆಯಿರಬಹುದಾಗಿದೆ.[3] ಆಕಾಶಕ್ಕಾದರೋ ಎಲ್ಲರ ಶರೀರಗಳೂ ಹೋಗುತ್ತಿರುವಲ್ಲಿ ನಿಯಮವಿಲ್ಲದೆ ಎಲ್ಲಾ ಪ್ರದೇಶಗಳೊಡನೆಯೂ ಸಂಯೋಗವಿರುತ್ತದೆಯಾದ್ದರಿಂದ ಬ್ರಹ್ಮದಲ್ಲಿಯೂ ಉಪಾಧಿಗಳ ಸಂಯೋಗಪ್ರದೇಶಗಳ ನಿಯಮವಿರುವದೇ ಇಲ್ಲ.[4]

ಆಕಾಶವು ತನ್ನ ರೂಪದಿಂದಲೇ ಶ್ರೋತ್ರೇಂದ್ರಿಯವಾಗಿದೆ ಎಂಬುದನ್ನು ಒಪ್ಪಿಕೊಂಡರೂ ಇಂದ್ರಿಯಗಳಿಗೆ ವ್ಯವಸ್ಥೆ(ಯಿರಬಹುದೆಂದು) ಹೇಳಿದೆವು. ಆದರೆ ನಿಜವಾಗಿ **ಆಕಾಶವೇ ಶ್ರೋತ್ರೇಂದ್ರಿಯವಲ್ಲ ; ಏಕೆಂದರೆ ವೈಕಾರಿಕವಾದ ಅಹಂಕಾರದಿಂದ ಏಕಾದಶೇಂದ್ರಿಯಗಳು ಹುಟ್ಟುತ್ತವೆ, ಎಂದೇ ವೈದಿಕರು (ಅಭಿಪ್ರಾಯಪಡುತ್ತಾರೆ).** ಭಗವಂತನಾದ **ಪರಾಶರನು** ಹಾಗೆಂದು ಹೇಳಿರುತ್ತಾನೆ : 'ಇಂದ್ರಿಯಗಳು ತೈಜಸವೆಂದು(ಕೆಲವರು) ಹೇಳುತ್ತಾರೆ. ವೈಕಾರಿಕ ದೇವಗಳು ಹತ್ತು, ಇಲ್ಲಿ ಹನ್ನೊಂದನೆಯದೇ ಮನಸ್ಸು ; ದೇವಗಳು ವೈಕಾರಿಗಳೆಂದು (ತಿಳಿದವರು)

1. 'ಸೂಚ್ಯತೇ' ಕಾ॥ 2. 'ಇನ್ದ್ರಿಯಾಣಾಮ್ ಅಹಙ್ಕಾರಿಕಾಣಾಮ್' ಕಾ॥
3. ಆಕಾಶಪ್ರದೇಶಗಳು ಬೇರೆಬೇರೆ ಎಂದು ಒಪ್ಪದೆಯೇ ಇಂದ್ರಿಯಗಳು ಬೇರೆಬೇರೆಯೆಂದು ಸಾಧಿಸಬಹುದು. 4. ಬೇರೆಬೇರೆಯ ಉಪಾಧಿಸಂಯೋಗವು ಬೇರೆಬೇರೆ ಪ್ರದೇಶದಲ್ಲಿ ಆಗುವದೆಂಬ ನಿಯಮವಿಲ್ಲ.

ಹೇಳುತ್ತಾರೆ' (ವಿ.ಪು.೧-೨-೪೬, ೪೭)[1] (ಈ ಶ್ಲೋಕಕ್ಕೆ ಇದು ಅರ್ಥವು). ವೈಕಾರಿಕ, ತೈಜಸ, ಭೂತಾದಿ- ಎಂದು ಅಹಂಕಾರವು ಮೂರು ಬಗೆ. ಅದು ಕ್ರಮವಾಗಿ ಸಾತ್ತ್ವಿಕವೂ ರಾಜಸವೂ ತಾಮಸವೂ (ಆಗಿರುತ್ತದೆ). ಇವುಗಳಲ್ಲಿ ತಾಮಸವಾದ **ಭೂತಾದಿ**ಯಿಂದ ಆಕಾಶಾದಿಭೂತಗಳು ಹುಟ್ಟುತ್ತವೆ ಎಂದು ಸೃಷ್ಟಿಕ್ರಮವನ್ನು ಹೇಳಿ, **ತೈಜಸ**ವೆಂಬ ರಾಜಸಾಹಂಕಾರದಿಂದ ಹನ್ನೊಂದು ಇಂದ್ರಿಯಗಳು ಉಂಟಾಗುವೆ ಎಂದು ಮತ್ತೊಬ್ಬರ ಮತವನ್ನು ಮೊದಲು ಹೇಳಿ, ಸಾತ್ತ್ವಿಕಾಹಂಕಾರವಾದ **ವೈಕಾರಿಕ**ದಿಂದ ಇಂದ್ರಿಯಗಳು ಹುಟ್ಟುತ್ತವೆ ಎಂದು ಸ್ವಮತವನ್ನು 'ದೇವಗಳು ವೈಕಾರಿಕಗಳೆಂದು (ತಿಳಿದವರು) ಹೇಳುವರು' ಎಂಬ (ವಾಕ್ಯದಿಂದ) ಹೇಳಿರುತ್ತದೆ. (ಇಲ್ಲಿ) ದೇವಗಳು ಎಂದರೆ ಇಂದ್ರಿಯಗಳು. ಹೀಗೆ ಅಹಂಕಾರಿಕಗಳಾದ ಇಂದ್ರಿಯಗಳಿಗೆ ಭೂತಗಳಿಂದಲೂ ಆಪ್ಯಾಯನವಾಗುವದೆಂದು **ಮಹಾಭಾರತ**ದಲ್ಲಿ (?) ಹೇಳಿರುತ್ತದೆ.

ಇಂದ್ರಿಯಗಳು ಭೌತಿಕವೆಂದರೂ[2] ಆಕಾಶವೇ ಮುಂತಾದ ಭೂತಗಳ ಕಾರ್ಯವಾಗಿರುವದರಿಂದಲೇ ಆಕಾಶಾದಿಭೂತಗಳ ಆಯಾ ಪರಿಣಾಮಗಳು ಶರೀರಗಳಂತೆ ವ್ಯವಸ್ಥಿತಯವಾಗಿಯೇ ಇರುತ್ತವೆ ; ಮನುಷ್ಯರ ಇಂದ್ರಿಯಗಳೂ (ಹೀಗೆಯೇ ವ್ಯವಸ್ಥಿತ)ವಾಗಿರುತ್ತವೆ.[3] ಆದರೆ ಅನವಚ್ಛೇದ್ಯವೂ ನಿರವಯವೂ ನಿರ್ವಿಕಾರವೂ[4] ಆಗಿರುವ ಬ್ರಹ್ಮದಲ್ಲಿ ಮಾತ್ರ (ಹೀಗೆ) ನಿಯಮ(ವಿರಲಾರದಾದ್ದ)ರಿಂದ ಅನಂತವಾದ ಹೇಯೋಪಾಧಿಗಳ ಸಂಬಂಧದ ದೋಷವು (ಬಂದೊದಗುವದನ್ನು) ಯಾರೂ ಪರಿಹರಿಸುವದಕ್ಕೆ ಆಗುವದೇ ಇಲ್ಲ. ಆದ್ದರಿಂದ ಈ ಪಕ್ಷವು

---

1. ಈ ಸಂದರ್ಭಕ್ಕೆ ಬೇಕಾದ **ವಿಷ್ಣುಪುರಾಣ**ಶ್ಲೋಕಗಳ ಅನುಪೂರ್ವಿ ಹೀಗಿದೆ : ವೈಕಾರಿಕಸ್ತೈಜಸಶ್ಚ ಭೂತಾದಿಶ್ಚೈವ ತಾಮಸಃ ॥ ೩೫ ॥ ತ್ರಿವಿಧೋಽಯಮಹಙ್ಕಾರೋ ಮಹತ್ತತ್ತ್ವಾದಜಾಯತಃ ॥ ಭೂತೇನ್ದ್ರಿಯಾಣಾಂ ಹೇತುಃ ಸ ತ್ರಿಗುಣತ್ವಾನ್ಮಹಾಮುನೇ ॥ ೩೬ ॥ (ಇಲ್ಲಿಂದ ಮುಂದಕ್ಕೆ ಭೂತತನ್ಮಾತ್ರೆಗಳ ಸೃಷ್ಟಿಯ ವಿವರಣೆಯ ಶ್ಲೋಕಗಳಿವೆ. ಆಮೇಲೆ) 'ಭೂತತನ್ಮಾತ್ರಸರ್ಗೋಽಯಮಹಙ್ಕಾರಾತ್ತು ತಾಮಸಾತ್ । ತೈಜಸಾನೀನ್ದ್ರಿಯಾಣ್ಯಾಹುರ್ದೇವಾ ವೈಕಾರಿಕಾ ದಶ ॥ ೪೬ ॥ ಏಕಾದಶಂ ಮನಶ್ಚಾತ್ರ ದೇವಾ ವೈಕಾರಿಕಾಃ ಸ್ಮೃತಾಃ ॥ ೪೭ ॥
ಕೊನೆಯಲ್ಲಿರುವ 'ದೇವಾ' ಎಂಬ ಶಬ್ದವು ಇಂದ್ರಿಯಗಳನ್ನೇ ಹೇಳುತ್ತದೆಯೆಂದೂ ಇಂದ್ರಿಯಗಳು ಸಾತ್ತ್ವಿಕಾಹಂಕಾರಕಾರ್ಯಗಳೆಂದೂ ಇಲ್ಲಿ ಪ್ರತಿಪಾದಿಸಿದೆ.
2. ಭೂತಗಳೇ ಇಂದ್ರಿಯಗಳೆಂದು ಒಪ್ಪಿ ಪರಿಹಾರವನ್ನು ಹೇಳಲಾಗಿತ್ತು ; ಈಗ ಭೂತಪರಿಣಾಮವೇ ಇಂದ್ರಿಯವೆಂದು ಒಪ್ಪಿ ಪರಿಹಾರವನ್ನು ಹೇಳಿದೆ ಎಂಬುದು ಇಲ್ಲಿ ವಿಶೇಷ.
3. 'ಆದರೆ ಹೀಗೆ ಜೀವರುಗಳು ಬ್ರಹ್ಮದ ಪರಿಣಾಮವಲ್ಲವಾದ್ದರಿಂದ ವ್ಯವಸ್ಥೆಯಿರುವದಕ್ಕೆ ಕಾರಣವಿಲ್ಲ ಎಂದರ್ಥ'. ಟೀಕೆ.
4. ಬ್ರಹ್ಮದ ವಿಕಾರವೇ ಜೀವನೆಂದರೆ ಅವಿಕಾರಶ್ರುತಿವಿರೋಧ ; ಜೀವನು ನಿತ್ಯನೆಂಬುದಕ್ಕೆ ವಿರೋಧ ; ಅಕೃತಾಭ್ಯಾಗಮಕೃತವಿಪ್ರಣಾಶವೆಂಬ ದೋಷಗಳೂ ಇವೆ.

(ಬರಿಯ) ಶ್ರದ್ಧೆಯಿರುವವರದ್ದು[1] (ಮಾತ್ರವಾಗಿದೆ). ಆದ್ದರಿಂದ ಶಾಸ್ತ್ರಜ್ಞರು (ಇದನ್ನು) ಗೌರವಿಸಲಾರರು.

ಪರಿಣಾಮವಾದಾಂಗೀಕಾರದಿಂದಲೂ ಈ ಪಕ್ಷದಲ್ಲಿ ದೋಷ

(ಮೂಲ)

೪೩. ಸ್ವರೂಪಪರಿಣಾಮಾಭ್ಯುಪಗಮಾತ್ ಅವಿಕಾರಶ್ರುತಿರ್ಬಾಧ್ಯತೇ । ನಿರವದ್ಯತಾ ಚ । ಬ್ರಹ್ಮಣಃ ಶಕ್ತಿಪರಿಣಾಮ ಇತಿ ಚೇತ್ । ಕೇಯಂ ಶಕ್ತಿರಿತ್ಯುಚ್ಯತೇ? ಕಿಂ ಬ್ರಹ್ಮಪರಿಣಾಮರೂಪಾ ? ಉತ ಬ್ರಹ್ಮಣೋಽನನ್ಯಾ ಕಾಪೀತಿ? ಉಭಯಪಕ್ಷೇಽಪಿ ಸ್ವರೂಪಪರಿಣಾಮೋಽವರ್ಜನೀಯ ಏವ ॥

(ಅರ್ಥ)

(ಬ್ರಹ್ಮ)ಸ್ವರೂಪವೇ ಪರಿಣಮಿಸುತ್ತದೆ ಎಂದು (ಪೂರ್ವಪಕ್ಷದಲ್ಲಿ) ಒಪ್ಪಿರುವದರಿಂದ (ಬ್ರಹ್ಮವು) ಅವಿಕಾರವೆಂಬ ಶ್ರುತಿಯೂ ನಿರವದ್ಯ(ವೆಂಬ ಶ್ರುತಿಯೂ) ಬಾಧಿತವಾಗುತ್ತದೆ.

(ಪೂರ್ವಪಕ್ಷಿ):—(ಬ್ರಹ್ಮ)ಶಕ್ತಿಗೇ ಪರಿಣಾಮ(ವನ್ನು ನಾವು ಒಪ್ಪಿದ್ದೇವೆ).[2]

(ಸಿದ್ಧಾಂತಿ) :— ಈ ಶಕ್ತಿ ಎಂಬುದು ಯಾವದು? ಬ್ರಹ್ಮದ ಪರಿಣಾಮವೊ? ಅಥವಾ ಬ್ರಹ್ಮಕ್ಕಿಂತ ಅನನ್ಯವಾದ ಯಾವದಾದರೊಂದು (ತತ್ತ್ವವೊ)? ಎರಡು ಪಕ್ಷದಲ್ಲಿಯೂ ಸ್ವರೂಪಪರಿಣಾಮವನ್ನು ತಪ್ಪಿಸಿಕೊಳ್ಳುವದಕ್ಕೆ ಆಗುವದೇ ಇಲ್ಲ.

---

1. ಒಬ್ಬರು ಹೇಳಿದಮಾತ್ರದಿಂದ ತೃಪ್ತರಾಗಿರುವವರೂ ನ್ಯಾಯದಿಂದ ನಿರ್ಣಯ ಮಾಡಲಾರದವರೂ ಆದವರದ್ದು.
2. ಬ್ರಹ್ಮಕ್ಕೆ ಭೋಕ್ತೃತ್ವಾದಿಶಕ್ತಿಗಳಿವೆ ಎಂದು ಭಾಸ್ಕರಭಾಷ್ಯದಲ್ಲಿದೆ.

೪. ಯಾದವಪ್ರಕಾಶಮತನಿರಾಕರಣ

ಜೀವಬ್ರಹ್ಮಾಭೇದವನ್ನೊಪ್ಪಿರುವದರಿಂದ ಜೀವರ ದೋಷಗಳು ಬ್ರಹ್ಮಕ್ಕೇ ಅಂಟುವವು

(ಮೂಲ)

೪೪. ತೃತೀಯೇಽಪಿ ಪಕ್ಷೇ ಜೀವಬ್ರಹ್ಮಣೋರ್ಭೇದವತ್ ಅಭೇದಸ್ಯ ಚಾಽಭ್ಯುಪಗಮಾತ್ ತಸ್ಯ ಚ ತದ್ಭಾವಾತ್ ಸೌಭರಿಭೇದವತ್[1] ಸ್ವಾವತಾರ ಭೇದವಚ್ಚ ಸರ್ವಸ್ಯ ಈಶ್ವರಭೇದತ್ವಾತ್ ಸರ್ವೇ ಜೀವಗತಾ ದೋಷಾಸ್ತಸ್ಯೈವ ಸ್ಯುಃ । ಏತದುಕ್ತಂ ಭವತಿ । ಈಶ್ವರಃ ಸ್ವರೂಪೇಣೈವ ಸುರನರತಿರ್ಯಕ್ಸ್ಥಾವರಾದಿ ಭೇದೇನಾಽವಸ್ಥಿತ ಇತಿ ಹಿ ತದಾತ್ಮಕತ್ವವರ್ಣನಂ ಕ್ರಿಯತೇ । ತಥಾ ಸತಿ ಏಕಮೃತ್ಪಿಣ್ಡಾರಬ್ಧಘಟಶರಾವಾದಿಗತಾನಿ ಉದಕಾಹರಣಾದೀನಿ ಸರ್ವಕಾರ್ಯಾಣಿ ಯಥಾ ತಸ್ಯೈವ ಭವನ್ತಿ ಏವಂ ಸರ್ವಜೀವಗತಸುಖದುಃಖಾದಿ ಸರ್ವಮ್ ಈಶ್ವರಗತಮೇವ ಸ್ಯಾದಿತಿ ॥

(ಅರ್ಥ)

ಮೂರನೆಯ ಪಕ್ಷದಲ್ಲಿ ಜೀವಬ್ರಹ್ಮರಿಗೆ ಭೇದದಂತೆ ಅಭೇದವನ್ನೂ ಅಂಗೀಕರಿಸಿರುವದರಿಂದ ಆ (ಬ್ರಹ್ಮವೇ) ಆ (ಜೀವ)ನಾಗಿರುವದರಿಂದ **ಸೌಭರಿ ಭೇದದಂತೆಯೂ**[2] ತನ್ನ ಅವತಾರಗಳ ಭೇದದಂತೆಯೂ ಎಲ್ಲವೂ ಈಶ್ವರನ ಭೇದವಾಗಿರುವದರಿಂದ ಜೀವನ ಎಲ್ಲಾ ದೋಷಗಳೂ ಆ (ಬ್ರಹ್ಮ)ಕ್ಕೇ ಆಗುವವು. ಇಲ್ಲಿ ಇಷ್ಟನ್ನು ಹೇಳಿದಂತೆ ಆಗಿದೆ. ಈಶ್ವರನು[3] ತನ್ನ ರೂಪದಿಂದಲೇ[4] ಸುರರು, ನರರು, ತಿರ್ಯಗ್ಜಂತುಗಳು, ಸ್ಥಾವರಪ್ರಾಣಿಗಳು - ಮುಂತಾದ ಭೇದಗಳಾಗಿ ಇದ್ದುಕೊಂಡಿರುತ್ತಾನೆ ಎಂಬದರಿಂದಷ್ಟೆ, (ಅವು) ತದಾತ್ಮಕವಾಗಿವೆ ಎಂದು (ನೀವು) ವರ್ಣನೆಯನ್ನು ಮಾಡುತ್ತಿರುವದು? ಹಾಗಾದರೆ ಒಂದೇ ಮಣ್ಣಿನ ಮುದ್ದೆಯಿಂದ

---

1. 'ಸೌಭರಿಭೇದವಚ್ಚ' ಎಂದು ಕಾ॥ ಪಾಠದಲ್ಲಿ 'ಚ' ಹೆಚ್ಚಾಗಿದೆ.
2. ಸೌಭರಿಯು ತನ್ನ ಐವತ್ತು ಜನ ಹೆಂಡಿರ ಮನೆಗಳಲ್ಲಿಯೂ ಬೇರೆಬೇರೆಯ ದೇಹದಿಂದ ಒಬ್ಬನೇ ಇರುತ್ತಿದ್ದನೆಂದು ಪುರಾಣಕಥೆ. ವಿ.ಪು. ೪-೨ ನೋಡಿರಿ.
3. ಬ್ರಹ್ಮವು ಸನ್ಮಾತ್ರವು ; ಅದೇ ಜೀವ, ಈಶ್ವರ, ಅಚಿದ್ವಸ್ತುಗಳು— ಎಂದು ಪರಿಣಮಿಸುತ್ತದೆ- ಎಂಬುದೇ **ಯಾದವಪ್ರಕಾಶರ ಮತವು**. ಈಶ್ವರನು ಬ್ರಹ್ಮದ ಪರಿಣಾಮವೆಂದರೆ ಅನಿತ್ಯನೆಂದಾಗುವದರಿಂದ ಬ್ರಹ್ಮ,ಈಶ್ವರ- ಎಂಬ ಭೇದವನ್ನು ಕಲ್ಪಿಸುವದಕ್ಕಿಲ್ಲ; ಆದ್ದರಿಂದ ಬ್ರಹ್ಮವೇ ಈಶ್ವರನೆಂದು ಒಪ್ಪಬೇಕು- ಎಂದಿಟ್ಟುಕೊಂಡು ಈಶ್ವರನಿಗೇ ಪರಿಣಾಮವೆಂದು ಇಲ್ಲಿ ಹೇಳಿದೆ. ಈ ವಿಷಯಕ್ಕೆ **ವೇದಾಂತದೀಪ** ೧-೧-೧. ಪುಟ ೧೧೮ನ್ನು ನೋಡಿ.
4. ಉಪಾಧಿವಶದಿಂದಲ್ಲ.

ಉಂಟಾದ ಗಡಿಗೆ, ಶ್ರಾವೆ— ಮುಂತಾದವುಗಳಿಂದಾಗುವ ನೀರನ್ನು ತರುವದೇ ಮುಂತಾದ ಕಾರ್ಯಗಳೆಲ್ಲವೂ ಆ (ಮಣ್ಣುಮುದ್ದೆ)ಯವೆಂದೇ ಹೇಗೆ ಆಗುವದೋ, ಹಾಗೆ ಸರ್ವಜೀವರಲ್ಲಿರುವ ಸುಖದುಃಖಾದಿಯೆಲ್ಲವೂ ಈಶ್ವರನದೆಂದೇ ಆಗುವದು.

ಬ್ರಹ್ಮದ ಈಶ್ವರಾಂಶವು ನಿರ್ದುಷ್ಟವಾಗಿದೆಯೆಂದರೂ ದೋಷವು ತಪ್ಪದು

(ಮೂಲ)

೪೫. ಘಟಶರಾವಾದಿಸಂಸ್ಥಾನಾನುಪಯುಕ್ತಮೃದ್ದ್ರವ್ಯಂ ಯಥಾ ಕಾರ್ಯಾನ್ತರಾನನ್ವಿತಮ್, ಏವಮೇವ ಸುರಪಶುಮನುಜಾದಿಜೀವತ್ವಾನುಪಯುಕ್ತೇಶ್ವರಃ ಸರ್ವಜ್ಞ[1] ಸತ್ಯಸಂಕಲ್ಪತ್ವಾದಿ (ಕಲ್ಯಾಣ)ಗುಣಾಕರ ಇತಿ ಚೇತ್ । ಸತ್ಯಮ್ । ಸ ಏವೇಶ್ವರಃ ಏಕೇನಾಂಶೇನ ಕಲ್ಯಾಣಗುಣಾಕರಃ, ಸ ಏವ ಚಾನ್ಯೇನಾಂಶೇನ ಹೇಯಗುಣಾಕರಃ ಇತ್ಯುಕ್ತಮ್ । ದ್ವಯೋರಂಶಯೋರೀಶ್ವರತ್ವಾವಿಶೇಷಾತ್ । ದ್ವಾವಂಶೌ ವ್ಯವಸ್ಥಿತೌ ಇತಿ ಚೇತ್ । ಕಸ್ತೇನ ಲಾಭಃ ? ಏಕಸ್ಯೈವ ಏಕೇನಾಂಶೇನ ನಿತ್ಯದುಃಖಿತ್ವಾತ್ । ಅಂಶಾನ್ತರೇಣ ಸುಖಿತ್ವಮಪಿ ನೇಶ್ವರತ್ವಾಯ ಕಲ್ಪತೇ । ಯಥಾ ದೇವದತ್ತಸ್ಯೈಕಸ್ಮಿನ್ ಹಸ್ತೇ ಚನ್ದನಪಙ್ಕಾನುಲೇಪಃ । ಕೇಯೂರಕಟಕಾಙ್ಗುಲೀಯಕಾಲಙ್ಕಾರಃ, ಏತಸ್ಯೈವ ಅನ್ಯಸ್ಮಿನ್ ಹಸ್ತೇ ಮುದ್ಗರಾಭಿಘಾತಃ ಕಾಲಾನಲಜ್ವಾಲಾನು ಪ್ರವೇಶಶ್ಚ ತದ್ವದೇವ ಈಶ್ವರಸ್ಯ ಸ್ಯಾದಿತಿ ಬ್ರಹ್ಮಾಜ್ಞಾನಪಕ್ಷಾದಪಿ ಪಾಪೀಯಾನ್ ಅಯಂ ಭೇದಾಭೇದಪಕ್ಷಃ ಅಪರಿಮಿತಸ್ಯ[2] ದುಃಖಿಸ್ಯ ಪಾರಮಾರ್ಥಿಕತ್ವಾತ್ ಸಂಸಾರಿಣಾಮ್ ಅನನ್ತತ್ವೇನ ದುಸ್ತರತ್ವಾಚ್ಚ ॥

(ಅರ್ಥ)

(ಪೂರ್ವಪಕ್ಷಿ):- ಗಡಿಗೆ, ಶ್ರಾವೆ[3] ಮುಂತಾದ ಸಂಸ್ಥಾನಗಳಿಗೆ ಉಪಯೋಗವಾಗದೆ (ಉಳಿದಿರುವ) ಮೃದ್ದ್ರವ್ಯವು ಹೇಗೆ ಮತ್ತೊಂದು ಕಾರ್ಯದಲ್ಲಿ ಅನುಗತವಾಗದೆ ಇರುವದೋ ಹಾಗೆಯೇ ದೇವತೆಗಳು, ಪಶುಗಳು, ಮನುಷ್ಯರು - ಮುಂತಾದ ಜೀವರ ಸ್ವಭಾವಕ್ಕೆ ಉಪಯೋಗವಾಗದ ಈಶ್ವರನು ಸರ್ವಜ್ಞನು, ಸತ್ಯಸಂಕಲ್ಪವೇ ಮುಂತಾದ ಕಲ್ಯಾಣಗುಣಗಳಿಗೆ ಆಶ್ರಯನೂ ಆಗಿರುತ್ತಾನಲ್ಲ!

---

1. 'ಸರ್ವಜ್ಞಃ' ಎಂಬ ತೆ॥ ಪಾಠಕ್ಕಿಂತ ಈ (ಕಾ॥) ಸಮಸ್ತಪದಪಾಠವೇ ಮೇಲು.
2. 'ಅಪರಿಮಿತದುಃಖಿಸ್ಯ' ಕಾ॥
3. 'ಕರಕಾದಿ' ಎಂಬ ತೆ॥ ಪಾಠಕ್ಕೆ ಕುಡಿಕೆ ಮುಂತಾದ ಎಂದರ್ಥ.

(ಸಿದ್ಧಾಂತ) :- ನಿಜ, ಅದೇ ಈಶ್ವರನೇ ಒಂದಂಶದಿಂದ ಕಲ್ಯಾಣಗುಣಗಳಿಗೆ ಆಶ್ರಯನು, ಅವನೇ ಮತ್ತೊಂದು ಅಂಶದಿಂದ ಹೇಯಗುಣಗಳಿಗೆ ಆಶ್ರಯನು- ಎಂದು ಹೇಳಿದಂತಾಯಿತು. ಏಕೆಂದರೆ ಎರಡು ಅಂಶಗಳೂ ಈಶ್ವರನೆಂಬುದು ಸಮಾನವಾಗಿದೆ.

(ಪೂರ್ವಪಕ್ಷಿ) :— (ಈ) ಎರಡು ಅಂಶಗಳೂ (ಬೇರೆಬೇರೆಯಾಗಿ) ವ್ಯವಸ್ಥಿತವಾಗಿರುವವಲ್ಲ!

(ಸಿದ್ಧಾಂತಿ) :— ಆದರಿಂದ (ನಿಮಗೆ) ಲಾಭವೇನು? ಒಬ್ಬನಿಗೇ ಒಂದಂಶದಿಂದ ನಿತ್ಯದುಃಖಿತ್ವವಿರುವದರಿಂದ ಮತ್ತೊಂದು ಅಂಶದಿಂದ ಸುಖಿತ್ವವಿದ್ದರೂ ಈಶ್ವರತ್ವಕ್ಕೆ ತಕ್ಕವನಾಗಲಾರನು. ದೇವದತ್ತನಿಗೆ ಒಂದು ಕೈಗೆ ಗಂಧವನ್ನು ಬಳಿದು, ತೋಳುಬಂದಿ, ಕಡಗ, ಉಂಗುರ- ಇವುಗಳ ಅಲಂಕಾರವೂ ಅವನಿಗೇ ಮತ್ತೊಂದು ಕೈಗೆ ಸುತ್ತಿಗೆಯ ಪೆಟ್ಟು, ಕಾಲಾಗ್ನಿಯ ಉರಿಯ (ನೋವೂ) ಇದ್ದರೆ ಹೇಗೋ ಹಾಗೆಯೇ ಈಶ್ವರನಿಗೆ ಆಗುವದು. ಆದ್ದರಿಂದ **ಬ್ರಹ್ಮಾಜ್ಞಾನಪಕ್ಷಕ್ಕಿಂತಲೂ ಈ ಭೇದಾಭೇದಪಕ್ಷವು ಕೆಟ್ಟದು ; ಏಕೆಂದರೆ (ಈಶ್ವರನಿಗೆ) ಅಪರಿಮಿತವಾದ ದುಃಖವು ಪರಮಾರ್ಥವಾಗಿಯೇ ಇರುತ್ತದೆ ; ಸಂಸಾರಿಗಳು ಅನಂತ(ಸಂಖ್ಯಾಕ)ರಾಗಿರುವದರಿಂದ (ಅದನ್ನು) ಮೀರುವದೂ ಕಷ್ಟವಾಗಿರುತ್ತದೆ.**

ಜೀವರೂಪವು ಪರಮೇಶ್ವರನಿಗಿಂತ ವಿಲಕ್ಷಣವೆಂದರೆ ದೋಷವಿಲ್ಲ

(ಮೂಲ)

೪೬. ತಸ್ಮಾದ್ವಿಲಕ್ಷಣೋಽಯಂ ಜೀವಾಂಶಃ ಇತಿ ಚೇತ್ । ಅಗತೋಽಸಿ ತರ್ಹಿ ಮದೀಯಂ ಪನ್ಥಾನಮ್ । ಈಶ್ವರಸ್ಯ ಸ್ವರೂಪೇಣ ತಾದಾತ್ಮ್ಯವರ್ಣನೇ ಸ್ಯಾದಯಂ ದೋಷಃ । ಆತ್ಮಶರೀರಭಾವೇನ ತು ತಾದಾತ್ಮ್ಯ ಪ್ರತಿಪಾದನೇ ನ ಕಶ್ಚಿದ್ ದೋಷಃ । ಪ್ರತ್ಯುತ ನಿಖಿಲಭುವನ[1]ನಿಯಮನಾದಿರ್ಮಹಾನಯಂ ಗುಣಗಣಃ ಪ್ರತಿಪಾದಿತೋ ಭವತಿ । ಸಾಮಾನಾಧಿಕರಣ್ಯಂ ಚ ಮುಖ್ಯವೃತ್ತಮ್ ॥

(ಅರ್ಥ)

(ಪೂರ್ವಪಕ್ಷಿ) :— (ಈಶ್ವರ)ನಿಗಿಂತ ಈ ಜೀವಾಂಶವು ವಿಲಕ್ಷಣವಾದದ್ದು ಎಂದರೊ?

---

1. 'ಚೇತನ' ಪಾ॥

(ಸಿದ್ಧಾಂತಿ) :— ಹಾಗಾದರೆ, ನನ್ನ ಮಾರ್ಗಕ್ಕೆ (ನೀನು) ಬಂದ[1]. ಈಶ್ವರನು ಸ್ವರೂಪದಿಂದ (ಜೀವನ) ತಾದಾತ್ಮ್ಯ(ವುಳ್ಳವನು) ಎಂದು ಹೇಳಿದರೆ ಈ ದೋಷವಾಗುವದು; ಆದರೆ **ಆತ್ಮಶರೀರಭಾವದಿಂದ (ಜೀವೇಶ್ವರರಿಗೆ) ತಾದಾತ್ಮ್ಯವನ್ನು ಹೇಳಿದರೆ ಯಾವ ದೋಷವೂ ಇರುವದಿಲ್ಲ ; ಇದಕ್ಕೆ ಬದಲು ಲೋಕವನ್ನೆಲ್ಲ ನಿಯಮನಮಾಡುವದೇ ಮುಂತಾದ ದೊಡ್ಡ ಗುಣಗಣವನ್ನೇ ಪ್ರತಿಪಾದಿಸಿದಂತೆ ಆಗುತ್ತದೆ. (ಈಶ್ವರಜೀವರಿಗೆ) ಸಾಮಾನಾಧಿಕರಣ್ಯವನ್ನು ಮುಖ್ಯವೃತ್ತಿಯಿಂದಲೇ (ಹೇಳಿದಂತೆಯೂ ಆಗುತ್ತದೆ).**

ಒಂದೇ ವಸ್ತು ಭಿನ್ನಾಭಿನ್ನವೆಂದರೆ ದೋಷ

(ಮೂಲ)

೪೭. ಅಪಿ ಚ, ಏಕಸ್ಯ ವಸ್ತುನೋ ಹಿ ಭಿನ್ನಾಭಿನ್ನತ್ವಂ ವಿರುದ್ಧತ್ವಾನ್ನ ಸಂಭವತೀತ್ಯುಕ್ತಮ್ । ಘಟಸ್ಯ ಪಟಾದ್ ಭಿನ್ನತ್ವೇ ಸತಿ ತಸ್ಯ ತಸ್ಮಿನ್ನಭಾವಃ, ಅಭಿನ್ನತ್ವೇ ಸತಿ ತಸ್ಯ ಚ ಭಾವಃ ಇತ್ಯೇಕಸ್ಮಿನ್ ಕಾಲೇ ಚೈಕಸ್ಮಿನ್ ದೇಶೇ ಚ ಏಕಸ್ಯ ಹಿ ಪದಾರ್ಥಸ್ಯ ಯುಗಪತ್ ಸದ್ಭಾವೋಽಸದ್ಭಾವಶ್ಚ ವಿರುದ್ಧಃ । ಜಾತ್ಯಾತ್ಮನಾ ಭಾವಃ, ವ್ಯಕ್ತ್ಯಾತ್ಮನಾ ಚಾಽಭಾವಃ ಇತಿ ಚೇತ್ । ಜಾತೇರ್ಮುಣ್ಡೇನ ವ್ಯಕ್ತ್ಯಾಚಾಽಭೇದೇ ಸತಿ ಖಣ್ಡೇ ಮುಣ್ಡಸ್ಯಾಽಪಿ ಸದ್ಭಾವಪ್ರಸಙ್ಗಃ । ಖಣ್ಡೇನ ಚ ಜಾತೇರಭಿನ್ನತ್ವೇಽಸದ್ಭಾವಃ[2], ಅಶ್ವೇ ಮಹಿಷತ್ವಸ್ಯೇವ ಇತಿ ವಿರೋಧೋ ದುಷ್ಪರಿಹರ ಏವ ॥

(ಅರ್ಥ)

ಇದಲ್ಲದೆ, ಒಂದೇ ವಸ್ತುವು ಭಿನ್ನಾಭಿನ್ನವಾಗಿರುವದೆಂಬುದು ವಿರುದ್ಧವಾಗಿರುವದರಿಂದ ಹೊಂದುವದಿಲ್ಲ ಎಂದು (ಆಗಲೆ)[3] ಹೇಳಿರುತ್ತೇವೆ. ಗಡಿಗೆಯು ಬಟ್ಟೆಗಿಂತ ಭಿನ್ನವಾಗಿದ್ದರೆ ಅದರಲ್ಲಿ ಅದರ ಅಭಾವವು, ಅಭಿನ್ನವಾಗಿದ್ದರೆ ಅದರದ್ದೇ ಭಾವವು- ಎಂದು ಒಂದೇ ಕಾಲದಲ್ಲಿ ಒಂದೇ ದೇಶದಲ್ಲಿ ಒಂದೇ ಪದಾರ್ಥಕ್ಕೆ ಒಮ್ಮೆಗೇ ಇರುವಿಕೆ, ಇಲ್ಲದಿರುವಿಕೆ- (ಎರಡೂ ಇರುವದು) ವಿರುದ್ಧವು.

---

1. ವಿಶಿಷ್ಟಾದ್ವೈತಪಕ್ಷವನ್ನೇ ನೀನೂ ಒಪ್ಪಿದಂತೆ ಆಯಿತು ಎಂದರ್ಥ.
2. 'ಖಣ್ಡೇನ ಚ ಜಾತೇರಭಿನ್ನತ್ವೇ ಸದ್ಭಾವಃ, ಭಿನ್ನತ್ವೇ ಅಸದ್ಭಾವಃ' ಎಂದು ತೆ॥ ಪಾಠ. ಅನುವಾದದ ಟಿಪ್ಪಣಿಯನ್ನು ನೋಡಿ.
3. ನಿರ್ವಿಶೇಷವಸ್ತುವಾದವನ್ನು ಖಂಡಿಸುವಾಗ ಪ್ರಸಂಗವಶದಿಂದ ಇದನ್ನು (ಖಂ.೨೪) ಹೇಳಲಾಗಿದೆ.

(ಪೂರ್ವಪಕ್ಷಿ) :— ಜಾತಿಯ ರೂಪದಿಂದ ಇರುತ್ತದೆ, ವ್ಯಕ್ತಿರೂಪದಿಂದ ಇರುವದಿಲ್ಲ ಎಂದರೊ?

(ಸಿದ್ಧಾಂತಿ) :— (ಗೋ)ಜಾತಿಗೂ ಮುಂಡ (ಎತ್ತು) ಎಂಬ ವ್ಯಕ್ತಿಗೂ ಅಭೇದವಾದರೆ ಖಂಡ (ಎತ್ತಿನಲ್ಲಿ) ಮುಂಡವೂ ಇರಬೇಕಾಗುವದು ; ಖಂಡ ಎಂಬ ವ್ಯಕ್ತಿಗೂ ಜಾತಿಗೂ ಅಭೇದವಾದರೆ - ಅಶ್ವದಲ್ಲಿ ಮಹಿಷತ್ವವು ಇಲ್ಲದಿರುವಂತೆ- (ಮುಂಡವು ಖಂಡದಲ್ಲಿ) ಇರಬಾರದಾಗುವದು- ಎಂಬೀ ವಿರೋಧವು (ಹಾಗೂ) ಪರಿಹರಿಸಿಕೊಳ್ಳಲಾರದ್ದೇ ಆಗುವದು.[1]

ಜಾತ್ಯಾದಿಗಳೆಲ್ಲ ವಸ್ತುಪ್ರಕಾರಮಾತ್ರ

(ಮೂಲ)

೪೮. ಜಾತ್ಯಾದೇರ್ವಸ್ತುಸಂಸ್ಥಾನತಯಾ ವಸ್ತುನಃ ಪ್ರಕಾರತ್ವಾತ್ ಪ್ರಕಾರಪ್ರಕಾರಿಣೋಶ್ಚ ಪದಾರ್ಥಾನ್ತರತ್ವಂ ಪ್ರಕಾರಸ್ಯ ಪೃಥಕ್ಸಿದ್ಧ್ಯನರ್ಹತ್ವಂ ಪೃಥಗನುಪಲಮ್ಭಶ್ಚ । ತಸ್ಯ ಚ ಸಂಸ್ಥಾನಸ್ಯ ಅನೇಕವಸ್ತುಷು ಪ್ರಕಾರತಯಾ ಅವಸ್ಥಿತಿಶ್ಚ ಇತ್ಯಾದಿ ಪೂರ್ವಮೇವೋಕ್ತಮ್ । ಸೋಽಯಮ್ ಇತಿ ಬುದ್ಧಿಃ ಪ್ರಕಾರೈಕ್ಯಾತ್ । ಅಯಮಪಿ ದಣ್ಡೀ ಇತಿ ಬುದ್ಧಿವತ್ । ಅಯಮೇವ ಚ ಜಾತ್ಯಾದಿಃ ಪ್ರಕಾರೋ ವಸ್ತುನೋ ಭೇದ ಇತ್ಯುಚ್ಯತೇ । ತದ್ಯೋಗ ಏವ 'ವಸ್ತು ಭಿನ್ನಮ್' ಇತಿ ವ್ಯವಹಾರಹೇತುಃ ಇತ್ಯರ್ಥಃ । ಸ ಚ ವಸ್ತುನೋ ಭೇದವ್ಯವಹಾರಹೇತುಃ ಸ್ವಸ್ಯ ಚ[2] । ಸಂವೇದನವತ್ । ಯಥಾ ಸಂವೇದನಂ ವಸ್ತುನೋ ವ್ಯವಹಾರಹೇತುಃ ಸ್ವಸ್ಯ

---

1. ಇಲ್ಲಿ ಮೂಲದ ನಿಜವಾದ ಪಾಠವು ಏನೆಂಬುದು ಗೊತ್ತಾಗುವದಿಲ್ಲ ; ಟೀಕೆಯಲ್ಲಿಯೂ ಎರಡು ಬಗೆಯಲ್ಲಿ ವ್ಯಾಖ್ಯಾನವಿದೆ. ನಾವು ಇಲ್ಲಿ ಕೊಟ್ಟಿರುವದು ಕಾ॥ಪಾಠ ? ಆದರಲ್ಲಿಯೂ ಸರಿಯಾಗಿ ಅರ್ಥವಾಗುವಂತಿಲ್ಲ. ಜಾತಿರೂಪದಿಂದ ವ್ಯಕ್ತಿಗಳಾದ ಖಂಡಮುಂಡ (ಮುರಿದ ಕೋಡಿನ ಎತ್ತು, ಬೋಳ ಎತ್ತು)ಗಳಿಗೆ ಅಭೇದವಿರುವದರಿಂದ ಖಂಡ ಗೋವಿನಲ್ಲಿ ಮುಂಡಗೋವೂ ಇರಬಹುದು ; ಖಂಡಮುಂಡವ್ಯಕ್ತಿಗಳಿಗೆ ಭೇದವಿರುವದರಿಂದ ಅವು ಒಂದರಲ್ಲಿ ಒಂದು ಇರಲೂಬಾರದು. ಹೀಗೆ ಅನಿಷ್ಟಪ್ರಸಂಗವು ಬರುತ್ತದೆ ಎಂಬುದು ಒಟ್ಟುಗ್ರಂಥದ ಅಭಿಪ್ರಾಯವೆಂದು ತೋರುತ್ತದೆ. ಇದಕ್ಕೆ 'ಜಾತೇರ್ವ್ಯಕ್ತ್ಯಾ ಮುಣ್ಡೇನ ಖಣ್ಡೇನ ಜಾಭೇದೇ ಖಣ್ಡೇ ಮುಣ್ಡಸ್ಯಾಪಿ ಸದ್ಭಾವಪ್ರಸಙ್ಗಃ । ವ್ಯಕ್ತೇಃ ಖಣ್ಡಸ್ಯ ಮುಣ್ಡಾದ್ ಭೇದೇ ತದಭಾವಃ ಅಶ್ವೇ ಮಹಿಷವತ್' ಎಂಬೀ ರೀತಿಯ ಪಾಠವು ಬೇಕಾಗುವದು. ಯಾದವಪ್ರಕಾಶಮತದಲ್ಲಿ ದ್ರವ್ಯರೂಪದಿಂದ ಅಭೇದ, ಅವಸ್ಥಾರೂಪದಿಂದ ಅಭೇದ, ಎಂದಿದ್ದರೂ **ಭಾಸ್ಕರಮತ**ವನ್ನು ಖಂಡಿಸಿದ್ದರಿಂದಲೇ ಅದನ್ನೂ ಖಂಡಿಸಿದಂತೆ ಎಂಬ ಅಭಿಪ್ರಾಯದಿಂದ ಹೀಗೆಹೇಳಿದೆ ; ಅಥವಾ ಇಲ್ಲಿ ಜಾತಿ ಎಂದರೆ ದ್ರವ್ಯವು, ವ್ಯಕ್ತಿ ಎಂದರೆ ಅವಸ್ಥೆ-ಎಂದು ಟೀಕೆ.

2. 'ಸ್ವಯಂ ಚ' ಕಾ॥

ವ್ಯವಹಾರಹೇತುಶ್ಚ ಭವತಿ । ಅತ ಏವ 'ಸನ್ಮಾತ್ರಗ್ರಾಹಿ ಪ್ರತ್ಯಕ್ಷಂ ನ ಭೇದಗ್ರಾಹಿ' ಇತ್ಯಾದಿವಾದಾ ನಿರಸ್ತಾಃ । ಜಾತ್ಯಾದಿಸಂಸ್ಥಾನಸಂಸ್ಥಿತಸ್ಯೈವ ವಸ್ತುನಃ ಪ್ರತ್ಯಕ್ಷೇಣ ಗೃಹೀತತ್ವಾತ್ । ತಸ್ಯೈವ ಸಂಸ್ಥಾನರೂಪಜಾತ್ಯಾದೇಃ ಪ್ರತಿಯೋಗ್ಯಪೇಕ್ಷಯಾ ಭೇದ ವ್ಯವಹಾರಹೇತುತ್ವಾಚ್ಚ । ಸ್ವರೂಪಪರಿಣಾಮದೋಷಶ್ಚ ಪೂರ್ವಮೇವೋಕ್ತಃ ॥

(ಅರ್ಥ)

ಜಾತ್ಯಾದಿಗಳು ವಸ್ತುವಿನ ಸಂಸ್ಥಾನವಾಗಿರುವದರಿಂದ[1] ವಸ್ತುವಿನ ಪ್ರಕಾರ ವಾಗಿರುವದರಿಂದ ಪ್ರಕಾರಪ್ರಕಾರಿಗಳು ಬೇರೆಬೇರೆ ಪದಾರ್ಥಗಳಾಗಿವೆ. **ಪ್ರಕಾರವು (ತಾನು) ಬೇರೆಯಾಗಿ ಸಿದ್ಧವಾಗತಕ್ಕದ್ದಲ್ಲ, ಬೇರೆಯಾಗಿ ಕಾಣುವದೂ ಇಲ್ಲ ; ಆ ಸಂಸ್ಥಾನವು ಅನೇಕ ವಸ್ತುಗಳಲ್ಲಿ ಪ್ರಕಾರವಾಗಿ ಇದ್ದುಕೊಂಡೂ ಇರುತ್ತದೆ** ಎಂದು (ಈ) ಮೊದಲೇ[2] ಹೇಳಿರುತ್ತೇವೆ. ಅದೇ ಇದು ಎಂಬ ಬುದ್ಧಿಯು ಪ್ರಕಾರವು ಒಂದೇ ಆಗಿರುವದರಿಂದ[3] (ಹೊಂದುತ್ತದೆ) ; ಇವನೂ ದಂಡಿಯೇ ಎಂಬ ಬುದ್ಧಿಯಂತೆಯೇ (ಇದು).[4] **ಈ ಜಾತಿಯೇ ಮುಂತಾದ ಪ್ರಕಾರವೇ ವಸ್ತುವಿನ ಭೇದವೆನಿಸುತ್ತದೆ[5] ; ಅದರ ಸಂಬಂಧವೇ ವಸ್ತುವು ಭಿನ್ನವೆಂಬ ವ್ಯವಹಾರಕ್ಕೆ ಕಾರಣವಾಗಿರುತ್ತದೆ** ಎಂದರ್ಥ. ಅದು 'ವಸ್ತುವು ಬೇರೆ' ಎಂಬ ವ್ಯವಹಾರಕ್ಕೂ ಸಂವೇದನದಂತೆ ತನ್ನ (ವ್ಯವಹಾರಕ್ಕೂ) ಕಾರಣವಾಗಿರುತ್ತದೆ.[6] (ಇದರ ವಿವರ) : ಹೇಗೆ ಸಂವೇದನವು ವಸ್ತುವಿನ ವ್ಯವಹಾರಕ್ಕೆ ಹೇತುವೂ ತನ್ನ ವ್ಯವಹಾರಕ್ಕೂ ಹೇತುವೂ ಆಗಿರುವದೋ (ಹಾಗೆಯೇ ಇದು).

---

1. 'ಜಾತ್ಯಾದಿ' ಎಂದು ಆದಿಶಬ್ದವಿರುವದರಿಂದ ಇಲ್ಲಿ ಸಂಸ್ಥಾನವೆಂದರೆ ಅಪೃಥಕ್ಸಿದ್ಧ ಧರ್ಮವೆಂದು ಅರ್ಥ- ಎಂದು ಟೀಕೆ.
2. ಖಂ.೨೪.
3. **ಸಮಾನಪ್ರಕಾರಗಳಿ**ರುವರಿಂದ ಎಂದರ್ಥ.
4. 'ಇವನು ದಂಡಿ', 'ಇವನೂ ದಂಡಿ'- ಎಂಬ ವ್ಯವಹಾರವು ದಂಡಿತ್ವಜಾತಿಯಿಲ್ಲದಿದ್ದರೂ ಹೇಗೆ ಆಗಿರುವದೋ ಅದರಂತೆ ಎಂದರ್ಥ. ಆದ್ದರಿಂದ ಸಂಸ್ಥಾನಕ್ಕಿಂತ ವ್ಯತಿರಿಕ್ತವಾದ ಜಾತಿ ಎಂಬುದಿಲ್ಲ ; ಅನುವೃತ್ತವ್ಯವಹಾರಕ್ಕಾಗಿ ಜಾತಿಯನ್ನು ಬೇರೆ ಕಲ್ಪಿಸಬೇಕಾದದ್ದೂ ಇಲ್ಲ- ಎಂದು ಭಾವ.
5. ಜಾತ್ಯಾದಿಗಳನ್ನು ಗ್ರಹಿಸುವಾಗ ಅಭಿನ್ನವೆಂಬ ಬುದ್ಧಿಯು ತೊಲಗುತ್ತದೆ ; ಆದ್ದರಿಂದ ಜಾತ್ಯಾದಿಸಂಸ್ಥಾನವೇ ಭೇದವು ; ಅದಕ್ಕಿಂತ ವ್ಯತಿರಿಕ್ತವಾದ ಭೇದವೆಂಬುದೂ ಇಲ್ಲ.
6. ಜಾತ್ಯಾದಿಯಿಂದ ಆಯಾ ಜಾತಿಯುಳ್ಳ ವಸ್ತುವಿನ ವ್ಯವಹಾರವೂ ಆಗುತ್ತದೆ. ಜಾತ್ಯಾದಿಯ ವ್ಯವಹಾರವೂ ಆಗುತ್ತದೆ ; ಸಂವೇದನದಂತೆ (ಅರಿವಿನಂತೆ)ಯೇ ಇದೂ ಸ್ವಪರ ನಿರ್ವಾಹಕ- ಎಂದರ್ಥ.

ಇದರಿಂದಲೇ **ಪ್ರತ್ಯಕ್ಷವು ಸನ್ಮಾತ್ರಗ್ರಾಹಿಯೇ ಹೊರತು ಭೇದಗ್ರಾಹಕವಲ್ಲ**[1] **- ಎಂಬಿದೇ ಮುಂತಾದ ವಾದಗಳನ್ನು ನಿರಾಸಮಾಡಿದಂತೆ ಆಯಿತು ;** [2] **ಏಕೆಂದರೆ ಜಾತ್ಯಾದಿಸಂಸ್ಥಾನದೊಡನಿರುವ ವಸ್ತುವನ್ನು ಪ್ರತ್ಯಕ್ಷವು ಗ್ರಹಿಸುತ್ತದೆ ಮತ್ತು ಆ ಸಂಸ್ಥಾನರೂಪವಾದ ಜಾತಿಯೇ ಪ್ರತಿಯೋಗಿಯ ಅಪೇಕ್ಷೆಯಿಂದ ಭೇದವ್ಯವಹಾರಕ್ಕೂ ಕಾರಣವಾಗಿರುತ್ತದೆ.**[3] ಸ್ವರೂಪವೇ ಪರಿಣಮಿಸುತ್ತದೆ ಎಂಬ (ವಾದದ) ದೋಷವನ್ನು ಹಿಂದೆಯೇ ಹೇಳಲಾಗಿದೆ.[4]

---

1. 'ಪ್ರತ್ಯಕ್ಷವು ಸನ್ಮಾತ್ರಗ್ರಾಹಿ' ಎಂಬ ಮತವು ಯಾರದೆಂಬುದುಗೊತ್ತಾಗಿಲ್ಲ ; ವ್ಯಾಖ್ಯಾಕಾರರೂ ವಿಶದಪಡಿಸಿಲ್ಲ. ನೀರಿನ ಅಲೆಗಳಲ್ಲಿ ಚಂದ್ರರುಗಳು ಭಿನ್ನಭಿನ್ನರಾಗಿ ಕಾಣುತ್ತಿದ್ದರೂ 'ಚಂದ್ರ'ಎಂಬ ಅಭೇದವು ಎಲ್ಲೆಲ್ಲಿಯೂ ಅನುಗತವಾಗಿರುವಂತೆ, ಪ್ರಪಂಚದಲ್ಲಿರುವ ಭೇದಗಳಲ್ಲೆಲ್ಲ 'ಇದು', 'ಅದು', 'ವಸ್ತು' - ಎಂದು ಅಭೇದವು ಅನುಗತವಾಗಿಯೇ ಇರುವದರಿಂದ ಭೇದವು ಹುಸಿ- ಎಂಬ ಯುಕ್ತಿಯು **ಬ್ರಹ್ಮಸಿದ್ಧಿ** (೨-೩೧) ಕಾಣಬರುತ್ತದೆ. ಬ್ರ.ಸಿ.ವ್ಯಾಖ್ಯಾನದಲ್ಲಿ 'ಸತ್' ಎಂಬ ಅಭೇದಾನುಗಮವನ್ನು ಹೇಳಿದೆ.
2. ಜಾತಿಯೇ ಭೇದವಾದ್ದರಿಂದಲೂ ಜಾತ್ಯಾದಿವಿಶಿಷ್ಟವಸ್ತುವನ್ನೇ ಪ್ರತ್ಯಕ್ಷವು ಗ್ರಹಿಸುವದ ರಿಂದಲೂ ಪ್ರತ್ಯಕ್ಷವು ಸನ್ಮಾತ್ರಕ್ಕೆ ಪ್ರಮಾಣವೆಂಬುದು ಸರಿಯಲ್ಲ, ಅದು ಭೇದಕ್ಕೂ ಪ್ರಮಾಣ ಎಂದರ್ಥ.
3. ಇಂಥದ್ದರ ಭೇದವೆಂದು ಪ್ರತಿಯೋಗಿಯ ಅಪೇಕ್ಷೆಯಿಂದ ಜಾತ್ಯಾದಿಯೇ ಭೇದವೆನಿಸುವದು. ಸ್ವತಃ ಜಾತಿಯೆನಿಸುವದು.
4. ಳಿಳನೆಯ ಖಂಡದಲ್ಲಿ ಈ ದೋಷವನ್ನುತಿಳಿಸಿದೆ. ಆದ್ದರಿಂದ ಜೀವ ಬ್ರಹ್ಮಾಭೇದವಾದದಲ್ಲಿ ಶ್ರುತಿವಿರೋಧವೆಂಬ ದೋಷವಿದೆ ; ಅಚಿದ್ಬ್ರಹ್ಮಾಭೇದವನ್ನೊಪ್ಪಿದರೆ ಬ್ರಹ್ಮದಲ್ಲಿಯೇ ಎಲ್ಲಾ ದೋಷಗಳೂ ಅಂಟುವವೆಂಬ ದೋಷವಿದೆ.

೫. ಸ್ವಪಕ್ಷಪ್ರತಿಷ್ಠಾಪನ

ತತ್ತ್ವಮಸಿ

೧. ತತ್ತ್ವಮಸಿವಾಕ್ಯದಲ್ಲಿರುವ ಸಾಮಾನಾಧಿಕರಣ್ಯಕ್ಕೆ ಮುಖ್ಯತ್ವ

(ಮೂಲ)

೪೯. 'ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅನ್ತರೋ ಯಂ ಪೃಥಿವೀ ನ ವೇದ ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮನ್ತರೋ ಯಮಯತಿ ಏಷ ತ ಆತ್ಮಾಽನ್ತರ್ಯಾಮ್ಯಮೃತಃ' (ಬೃ.೩-೭-೩), 'ಯ ಆತ್ಮನಿ ತಿಷ್ಠನ್ನಾತ್ಮನೋಽನ್ತರೋ ಯಮಾತ್ಮಾ ನ ವೇದ ಯಸ್ಯಾಽಽತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ ಸ ತ ಆತ್ಮಾಽನ್ತರ್ಯಾಮ್ಯಮೃತಃ' (ಬೃ.ಮಾ. ೩-೭-೩೦), 'ಯಃ ಪೃಥಿವೀಮನ್ತರೇ ಸಂಚರನ್ ಯಸ್ಯ ಪೃಥಿವೀ ಶರೀರಂ ಯಂ[1] ಪೃಥಿವೀ ನ ವೇದ' (ಸು. ೭-೧), ಇತ್ಯಾದಿ, 'ಯೋಽಕ್ಷರಮನ್ತರೇ ಸಂಚರನ್ ಯಸ್ಯಾಕ್ಷರಂ ಶರೀರಂ ಯಮಕ್ಷರಂ ನ ವೇದ' (ಸು.೭-೧), 'ಯೋ ಮೃತ್ಯುಮನ್ತರೇ ಸಂಚರನ್ ಯಸ್ಯ ಮೃತ್ಯುಃ ಶರೀರಂ ಯಂ ಮೃತ್ಯುರ್ನವೇದ ಏಷ ಸರ್ವಭೂತಾನ್ತರಾತ್ಮಾಽಪಹತಪಾಪ್ಮಾದಿವ್ಯೋ ದೇವ ಏಕೋ ನಾರಾಯಣಃ' (ಸು.೭-೧), 'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ' (ಮುಂ.೩-೧-೧, ಶ್ವೇ. ೪-೬), 'ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' (ತೈ. ಆ. ೩-೧೧-೨), 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್, ತದನು ಪ್ರವಿಶ್ಯ, ಸಚ್ಚ ತ್ಯಚ್ಚಾಭವತ್....' (ತೈ. ೨-೬) ಇತ್ಯಾದಿ । 'ಸತ್ಯಂ ಚಾಽನೃತಂ ಚ ಸತ್ಯಮಭವತ್' (ತೈ. ೨-೬), 'ಅನೇನ ಜೀವೇನಾಽಽತ್ಮನಾ' (ಛಾಂ. ೬-೩-೨) ಇತ್ಯಾದಿ, 'ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ ಜುಷ್ಟಸ್ತತಸ್ತೇನಾಮೃತತ್ವಮೇತಿ' (ಶ್ವೇ.೧-೬) 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್' (ಶ್ವೇ. ೧-೧೨), 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾ-ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್' (ಶ್ವೇ. ೬-೧೩), 'ಪ್ರಧಾನ ಕ್ಷೇತ್ರಜ್ಞ ಪತಿರ್ಗುಣೇಶಃ' (ಶ್ವೇ. ೧-೧೭)'ಜ್ಞಾಜ್ಞೌ ದ್ವಾವಜಾವೀಶಾನೀಶೌ'

1. ನಿ.ಸಾ.ಮುದ್ರಿತಪಾಠದಲ್ಲಿ 'ಯಸ್ಯ ಪೃಥಿವೀಶರೀರಂ ಯಃ ಪೃಥಿವೀಮನುಸಂಚರನ್....' ಹೀಗೆಯೇ 'ಅನುಸಂಚರನ್' ಎಂಬ ವಾಕ್ಯವು ಎಲ್ಲಾ ಕಡೆಯಲ್ಲಿಯೂ ಎರಡನೆಯ ದಾಗಿದೆ, ಶ್ರೀಭಾಷ್ಯದಲ್ಲಿಯೂ 'ಯಃ ಪೃಥಿವೀಮನ್ತರೇ ಸಂಚರನ್ ಯಸ್ಯ ಪೃಥಿವೀ ಶರೀರಮ್' ಎಂದು ಮುಂತಾಗಿ ಇಲ್ಲಿರುವ ಅನುಕ್ರಮದಲ್ಲಿಯೇ ವಾಕ್ಯಗಳು ಪಠಿತವಾಗಿವೆ.

(ಶ್ವೇ. ೧-೯) ಇತ್ಯಾದಿಶ್ರುತಿಶತೈಃ ತದುಪಬೃಂಹಣೈಃ 'ಜಗತ್ಸರ್ವಂ ಶರೀರಂ ತೇ ಸ್ಥೈರ್ಯಂ ತೇ ವಸುಧಾತಲಮ್' (ವಾ. ರಾ. ೨೦-೨೬), 'ಯತ್ಕಿಞ್ಚಿತ್ಸೃಜ್ಯತೇ ಯೇನ ಸತ್ತ್ವಜಾತೇನ ವೈ ದ್ವಿಜ । ತಸ್ಯ ಸೃಜ್ಯಸ್ಯ ಸಂಭೂತೌ ತತ್ಸರ್ವಂ ವೈ ಹರೇಸ್ತನುಃ' (ವಿ.ಪು. ೧-೨೨-೩೮), 'ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ' (ಗೀ. ೧೦-೨೦), 'ಸರ್ವಸ್ಯ ಚಾಽಽಹಂ ಹೃದಿ ಸಂನಿವಿಷ್ಟೋ ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ' (ಗೀ.೧೫-೧೫) ಇತ್ಯಾದಿ । ವೇದವಿದಗ್ರೇಸರವಾಲ್ಮೀಕಿಪರಾಶರದ್ವೈಪಾಯನವಚೋಭಿಶ್ಚ ಪರಸ್ಯ ಬ್ರಹ್ಮಣಃ ಸರ್ವಸ್ಯಾಽಽತ್ಮತ್ವಾವಗಮಾತ್ ಚಿದಚಿದಾತ್ಮಕಸ್ಯ ವಸ್ತುನಸ್ತಚ್ಛರೀರತ್ವಾವಗಮಾಚ್ಚ ಶರೀರಸ್ಯ ಶರೀರಿಣಂ ಪ್ರತಿಪ್ರಕಾರತಯೈವ ಪದಾರ್ಥತ್ವಾತ್,[1] ಶರೀರ-ಶರೀರಿಣೋಶ್ಚ ಧರ್ಮಭೇದೇಽಪಿತಯೋರಸಂಕರಾತ್ ಸರ್ವಶರೀರಂ ಬ್ರಹ್ಮೇತಿ ಬ್ರಹ್ಮಣೋ ವೈಭವಂ ಪ್ರತಿಪಾದಯದ್ಭಿಃ ಸಾಮಾನಾಧಿಕರಣ್ಯಾದಿಭಿರ್ಮುಖ್ಯವೃತ್ತೈಃ ಸರ್ವಚೇತನಾಚೇತನ ಪ್ರಕಾರಂ ಬ್ರಹ್ಮೈವಾಭಿಧೀಯತೇ ॥

ಸಾಮಾನಾಧಿಕರಣ್ಯಂ ಹಿ ದ್ವಯೋಃ ಪದಯೋಃ ಪ್ರಕಾರದ್ವಯಮುಖೇನೈಕಾರ್ಥನಿಷ್ಠತ್ವಮ್ । ತಸ್ಯ ಚೈತಸ್ಮಿನ್ ಪಕ್ಷೇ ಮುಖ್ಯತಾ । ತಥಾ ಹಿ । ತತ್ತ್ವಮ್ ಇತಿಸಾಮಾನಾಧಿಕರಣ್ಯೇ ತದಿತ್ಯನೇನ ಜಗತ್ಕಾರಣಂ ಸರ್ವಕಲ್ಯಾಣಗುಣಾಕರಂ (?) ನಿರವದ್ಯಂ ಬ್ರಹ್ಮೋಚ್ಯತೇ । ತ್ವಮಿತಿ ಚ ಚೇತನಸಮಾನಾಧಿಕರಣವೃತ್ತೇನ ಜೀವಾನ್ತರ್ಯಾಮಿರೂಪಿ ತಚ್ಛರೀರಂ ತದಾತ್ಮತಯಾಽವಸ್ಥಿತಂ ತತ್ಪ್ರಕಾರಂ ಬ್ರಹ್ಮೋಚ್ಯತೇ । ಇತರೇಷು ಪಕ್ಷೇಷು ಸಾಮಾನಾಧಿಕರಣ್ಯಹಾನಿಃ ಬ್ರಹ್ಮಣಃ ಸದೋಷತಾ ಚ ಸ್ಯಾತ್ ॥

(ಅರ್ಥ)

(೧) 'ಯಾವನು ಪೃಥಿವಿಯಲ್ಲಿರುವವನಾಗಿ, ಪೃಥಿವಿಯ ಒಳಗಿರುವನೋ, ಯಾವನನ್ನು ಪೃಥಿವಿಯು ಅರಿಯದೋ, ಯಾವನಿಗೆ ಪೃಥಿವಿಯು ಶರೀರವೋ, ಯಾವನು ಪೃಥಿವಿಯನ್ನು ಒಳಗಿದ್ದು ನಿಯಮಿಸುತ್ತಿರುವನೋ, ಇವನೇ ನಿನ್ನ ಆತ್ಮನೇ ಅಮೃತನಾದ ಅಂತರ್ಯಾಮಿಯು' (ಬೃ.೩-೭-೩), 'ಯಾವನು ಆತ್ಮನಲ್ಲಿರುವವನೋ[2], ಆತ್ಮನ ಒಳಗಿರುವವನಾಗಿ, ಯಾವನನ್ನು ಆತ್ಮನು ಅರಿಯನೋ[3], ಯಾವನಿಗೆ ಆತ್ಮನು ಶರೀರವೋ, ಯಾವನು ಆತ್ಮನನ್ನು ಒಳಗಿದ್ದು

1. 'ತತ್ಪದಾರ್ಥತ್ವಾತ್' ಎಂದು ಕಾ॥
2. ಪೃಥಿವಿ, ಆತ್ಮ- ಎಂಬ ಉದಾಹರಣೆಗಳಿಂದ ಅಚೇತನ, ಚೇತನ- ಎರಡೂ ಪರಮಾತ್ಮನ ಶರೀರವೇ ಎಂದಂತೆ ಆಯಿತು.
3. ಇಷ್ಟೆಂದು ಪೂರ್ಣವಾಗಿ ಅರಿಯನೋ ಅಥವಾ ಭಗವಂತನ ಪ್ರಸಾದವಿಲ್ಲದೆ ಅರಿಯಲಾರನೋ ಎಂದರ್ಥ.

ನಿಯಮಿಸುತ್ತಿರುವನೋ ಆ ನಿನ್ನ ಆತ್ಮನೇ ಅಮೃತನಾದ ಅಂತರ್ಯಾಮಿಯು' (ಬೃ.ಮಾ.೩-೭-೩೦), 'ಯಾವನು ಪೃಥಿವಿಯ ಒಳಗೆ ಸಂಚರಿಸುತ್ತಿರುವವನೋ, ಯಾವನಿಗೆ ಪೃಥಿವಿಯು ಶರೀರವೋ, ಯಾವನನ್ನು ಪೃಥಿವಿಯು ಅರಿಯದೋ' (ಸು.೭-೧)- ಎಂದು ಮುಂತಾಗಿ 'ಯಾವನು ಅಕ್ಷರದೊಳಗೆ ಸಂಚರಿಸುತ್ತಿರುವನೋ' (ಸು. ೭-೧), 'ಯಾವನಿಗೆ ಅಕ್ಷರವು ಶರೀರವೋ, ಯಾವನನ್ನು ಅಕ್ಷರವು[1] ಅರಿಯದೋ' ; 'ಯಾವನು ಮೃತ್ಯುವಿನೊಳಗೆ ಸಂಚರಿಸುತ್ತಿರುವನೋ, ಯಾವನಿಗೆ ಮೃತ್ಯುವು ಶರೀರವೋ, ಯಾವನನ್ನು ಮೃತ್ಯುವು[2] ಅರಿಯದೊ ಇವನೇ[3] ಸರ್ವಭೂತಾಂತರಾತ್ಮನು, ಅಪಹತಪಾಪ್ಮನು, ದಿವ್ಯನು, ಒಬ್ಬನೇ ದೇವನಾದ ನಾರಾಯಣನು' (ಎಂಬವರೆಗೆ) (ಸು.೭-೧), 'ಎರಡು ಜೊತೆಯಲ್ಲಿಯೇ ಇದ್ದು (ಒಬ್ಬರಿಗೊಬ್ಬರು) ಸಖರಾದ ಸುಪರ್ಣಗಳು ಒಂದೇ ವೃಕ್ಷವನ್ನು ಆಶ್ರಯಿಸಿಕೊಂಡಿರುತ್ತವೆ; ಅವುಗಳಲ್ಲಿ ಒಂದು ಹಣ್ಣನ್ನು ಸವಿದುತಿನ್ನುತ್ತಿದೆ, ಇನ್ನೊಂದು ತಿನ್ನದೆ ನೋಡುತ್ತಿದೆ'[4] (ಮುಂ. ೩-೧-೧, ಶ್ವೇ. ೪-೬), 'ಜನರ ಒಳಗೆ ಹೊಕ್ಕಿರುವವನು, ಆಳುವವನು, ಸರ್ವರ ಆತ್ಮನು'(ತೈ. ಆ. ೩-೧೧-೨), 'ಅದನ್ನು ಸೃಷ್ಟಿಸಿ ಅದನ್ನೇ ಒಳಹೊಕ್ಕನು[5]; ಅದನ್ನು ಒಳಹೊಕ್ಕು ಸತ್ತೂತ್ಯತ್ತೂ ಆದನು' ಎಂದು ಮೊದಲಾಗಿ 'ಸತ್ಯವೂ ಅನೃತವೂ ಸತ್ಯವೇ ಆಯಿತು'[6] (ಎಂಬವರೆಗಿನ) ಶ್ರುತಿ (ತೈ. ೨-೬), 'ಈ ಜೀವನೆಂಬ ಆತ್ಮನಿಂದ ಒಳಹೊಕ್ಕು....' (ಛಾಂ. ೬-೩-೨), 'ಆತ್ಮನನ್ನೂ ಪ್ರೇರಕನನ್ನೂ ಬೇರೆ ಎಂದು ತಿಳಿದುಕೊಂಡು ಅವನಿಂದ ಅನುಗೃಹೀತನಾಗಿ ಆ (ಜ್ಞಾನ)ದಿಂದ ಅಮೃತತ್ತ್ವವನ್ನು ಹೊಂದುತ್ತಾನೆ'[7] (ಶ್ವೇ. ೧-೬), 'ಭೋಕ್ತೃ, ಭೋಗ್ಯ ಮತ್ತು ಪ್ರೇರಕನು - (ಇವರನ್ನು) ತಿಳಿದು, ಈ ಮೂರು ವಿಧವಾದ ಬ್ರಹ್ಮವನ್ನು ನಾನು (ನಿನಗೆ) ಹೇಳಿರುವೆನು' (ಶ್ವೇ. ೧-೧೨), 'ನಿತ್ಯರುಗಳಲ್ಲಿ

---

1. ಪ್ರತ್ಯಗಾತ್ಮನು. ಕಾರಣಾವಸ್ಥೆಯಲ್ಲಿಯೂ ಅಂತರ್ಯಾಮಿತ್ವವನ್ನು ಹೇಳುವದಕ್ಕೆ ಇದನ್ನು ಉದಾಹರಿಸಿದೆ. 'ಯಃ ಪೃಥಿವ್ಯಾಮ್'ಎಂದು ಪ್ರಾರಂಭಿಸಿರುವದು ಪ್ರಕರಣವನ್ನು ತಿಳಿಸುವದಕ್ಕೆ. 2. ತಮಃಶಬ್ದವಾಚ್ಯವಾದ ಪ್ರಕೃತಿಯು. ಕಾರಣಾವಸ್ಥೆಯಲ್ಲಿ ಎಲ್ಲವೂ ಭಗವಂತನ ಶರೀರವೇ, ಶರೀರಿಗೆ ನಾರಾಯಣನೆಂಬ ಹೆಸರು - ಎಂದು ಇಲ್ಲಿ ಹೇಳಿದೆ. 3. 'ಸ ಏಷ' ಎಂಬ ನಿ.ಸಾ. ಪಾಠಕ್ಕೆ ಆ ಇವನೇ ಎಂದು ಅರ್ಥ.

4. ಅಮೃತತ್ವ, ಸರ್ವಭೂತಾನ್ತರಾತ್ಮತ್ವ, ಅಪಹತಪಾಪ್ಮತ್ವ- ಎಂಬ ಶಬ್ದಗಳಲ್ಲಿ ಹೇಳಿರುವಂತೆಯೇ ಬೇರೆ ಶ್ರುತಿಗಳನ್ನೂ ತಿಳಿಯಬೇಕೆಂದು ಸೂಚಿಸುವದಕ್ಕೆ ಈ ಶ್ರುತಿ, ಭೇದ ಶ್ರುತಿಯೆಂದಲ್ಲ- ಎಂದು ಟೀಕೆ.

5. ಆಯಾ ಚಿದಚಿತ್ತುಗಳನ್ನು ಪ್ರವೇಶಿಸಿರುವದರಿಂದ ಆಯಾ ಶಬ್ದಕ್ಕೆ ಬ್ರಹ್ಮವು ವಾಚ್ಯವು ಎಂದು ತಿಳಿಸುವದಕ್ಕೆ ಈ ಶ್ರುತಿ.

6. ಆಯಾ ವಸ್ತುಗಳೊಳಗೆ ಹೊಕ್ಕಿದ್ದರೂ ಬ್ರಹ್ಮಕ್ಕೆ ಆದರ ದೋಷವಿಲ್ಲ ಎಂದು ತಿಳಿಸುವದಕ್ಕೆ ಈ ವಾಕ್ಯ. 7. ಇದು ಭೇದಶ್ರುತಿ, ಇಲ್ಲಿಯವರೆಗೆ ಹೇಳಿದವು **ಘಟಕಶ್ರುತಿಗಳು.**

ನಿತ್ಯನಾಗಿ ಚೇತನರುಗಳಲ್ಲಿ ಚೇತನನಾಗಿ, ತಾನೊಬ್ಬನೇ ಬಹು(ಚೇತನರಿಗೆ) ಯಾವನು ಕಾಮಗಳನ್ನು ಕೊಡುತ್ತಿರುವನೋ'[1] (ಶ್ವೇ. ೬-೧೩), 'ಪ್ರಧಾನಕ್ಷೇತ್ರಜ್ಞರುಗಳಿಗೆ ಪತಿಯೂ ಗುಣಗಳಿಗೆ ಈಶ್ವರನೂ' (ಶ್ವೇ.೬-೧೨), 'ಜ್ಞನು, ಅಜ್ಞನು ಎಂಬಿಬ್ಬರು, ಎಂದು ಇಬ್ಬರೂ ಅಜರೇ, ಈಶ್ವರನೂ ಅನೀಶ್ವರನೂ' (ಶ್ವೇ. ೧-೯) ಇವೇ ಮುಂತಾದ ನೂರಾರು ಶ್ರುತಿಗಳಿಂದಲೂ (೨) ಅವುಗಳನ್ನು ಉಪಬೃಂಹಣಮಾಡುವ 'ಜಗತ್ತೆಲ್ಲವೂ ನಿನ್ನ ಶರೀರವು, ಭೂತಲವು ನಿನ್ನ ಸ್ಥೈರ್ಯವು' (ವಾ.ರಾ. ೧೨೦-೨೬) 'ಎಲೈ ದ್ವಿಜನೆ[2], ಆ ಸೃಜ್ಯ(ವಸ್ತು)ವು ಉಂಟಾಗುವಲ್ಲಿ ಯಾವಯಾವ ಜೀವನಿಂದ ಯಾವಯಾವದು ಸೃಷ್ಟವಾಗುವದೋ ಅದೆಲ್ಲವೂ ಹರಿಯ ತನು' (ವಿ.ಪು. ೧-೨೨-೩೮), 'ಎಲೈ ಗುಡಾಕೇಶನೆ, ನಾನು ಸರ್ವಭೂತಗಳ ಹೃದಯದಲ್ಲಿರುವ ಆತ್ಮನು' (ಗೀ.೧೦-೨೦), 'ನಾನು ಪ್ರತಿಯೊಬ್ಬನ ಹೃದಯದಲ್ಲಿಯೂ ಹೊಕ್ಕಿರುವೆನು, ಸ್ಮೃತಿಯೂ ಜ್ಞಾನವೂ (ಅವುಗಳ) ನಿವೃತ್ತಿಯೂ ನನ್ನಿಂದಲೇ' (ಗೀ.೧೫-೧೫)- ಇವೇ ಮುಂತಾದ ವೇದವನ್ನು ಬಲ್ಲವರಲ್ಲಿ ಶ್ರೇಷ್ಠರಾದ **ವಾಲ್ಮೀಕಿ, ಪರಾಶರ, ದ್ವೈಪಾಯನರ** ವಾಕ್ಕುಗಳಿಂದಲೂ **ಪರಬ್ರಹ್ಮವು ಎಲ್ಲಕ್ಕೂ ಆತ್ಮನೆಂದು ಗೊತ್ತಾಗುವದರಿಂದಲೂ ಚಿದಚಿದಾತ್ಮಕವಾದ ವಸ್ತುವು ಅದರ ಶರೀರವೆಂದು ಗೊತ್ತಾಗಿರುವದರಿಂದಲೂ ಶರೀರವು ಶರೀರಿಗೆ ಪ್ರಕಾರವಾಗಿರುವದರಿಂದಲೇ ಆ (ಶರೀರ)ಪದಕ್ಕೆ ಅರ್ಥವಾಗಿರುವದರಿಂದಲೂ ಶರೀರಶರೀರಿಗಳು ಬೇರೆಬೇರೆಯ ಧರ್ಮವುಳ್ಳವರಾದರೂ (ಅವುಗಳಿಗೆ ಸಂಬಂಧಪ್ರಯುಕ್ತವಾಗಿ ಆಗಬಹುದಾದ ಅನೋಯನ್ಯಧರ್ಮಗಳ) ಸಂಕರವಾಗದಿರುವದರಿಂದ ಬ್ರಹ್ಮಕ್ಕೆ ಸರ್ವವೂ ಶರೀರವೆಂದು ಬ್ರಹ್ಮದ ವೈಭವವನ್ನು ಪ್ರತಿಪಾದಿಸುವ ಸಾಮಾನಾಧಿಕರಣ್ಯವೇ ಮುಂತಾದ[3]ವನ್ನು ಮುಖ್ಯವೃತ್ತಿಯಿಂದ (ಹೇಳುವ ಮೂಲಕ) ಸರ್ವಚೇತನಾ ಚೇತನಗಳೆಂಬ ಪ್ರಕಾರವುಳ್ಳ ಬ್ರಹ್ಮವೇ ಉಕ್ತವಾಗಿರುತ್ತದೆ.**

ಸಾಮಾನಾಧಿಕರಣ್ಯವೆಂದರೆ ಎರಡು ಪದಗಳು (ಬೇರೆಬೇರೆಯ) ಎರಡು ಪ್ರಕಾರಗಳ ದ್ವಾರದಿಂದ ಏಕಾರ್ಥನಿಷ್ಠವಾಗಿರುವದಲ್ಲವೆ? ಆ (ಸಾಮಾನಾಧಿಕರಣ್ಯವು) ಈ (ನಮ್ಮ) ಪಕ್ಷದಲ್ಲಿ ಮುಖ್ಯವಾಗಿರುತ್ತದೆ. ಹೇಗೆಂದರೆ : 'ಅದು ನೀನು' (ಛಾಂ.) ಎಂಬ ಸಾಮಾನಾಧಿಕರಣ್ಯದಲ್ಲಿ ಅದು ಎಂಬ (ಪದ)ದಿಂದ ಜಗತ್ಕಾರಣ

---

1. ಆತ್ಮರು ನಿತ್ಯರು, ಅನೇಕರು- ಎಂದು ಇಲ್ಲಿ ತಿಳಿಸಿದೆ.
2. ಮೈತ್ರೇಯನಿಗೆ ಪರಾಶರರು ಹೇಳಿದ್ದಿದು.
3. ಶಕ್ತಿ ಅಂಶ, ವಿಭೂತಿ, ಶರೀರ- ಮುಂತಾದ (೩೦.೫ರಲ್ಲಿ ಹೇಳಿರುವ) ಶಬ್ದಗಳನ್ನು ಇಲ್ಲಿ ಸೇರಿಸಿಕೊಳ್ಳಬೇಕು.

ವಾದ ಸರ್ವಕಲ್ಯಾಣಗುಣಾಕರವುಳ್ಳ ನಿರ್ದುಷ್ಟವಾದ ಬ್ರಹ್ಮವನ್ನು ಹೇಳಿರುತ್ತದೆ. ಮತ್ತು ನೀನು ಎಂಬ ಚೇತನಸಾಮಾನಾಧಿಕರಣವುಳ್ಳ (ಪದ)ದಿಂದ ಜೀವಾಂತರ್ಯಾಮಿರೂಪಿಯಾದ ಆ (ಜೀವ)ಶರೀರಕವಾದ ಆ (ಜೀವನ) ಆತ್ಮನಾಗಿರುವ ಆ ಪ್ರಕಾರವುಳ್ಳ ಬ್ರಹ್ಮವನ್ನು[1] ಹೇಳಿರುತ್ತದೆ. ಮಿಕ್ಕ ಪಕ್ಷಗಳಲ್ಲಾದರೋ ಸಾಮಾನಾಧಿಕರಣ್ಯಕ್ಕೆ ಹಾನಿಯೂ ಬ್ರಹ್ಮಕ್ಕೆ ದೋಷಸಾಹಿತ್ಯವೂ ಆಗುವದು.[2]

೨. ಚಿದಚಿದಾತ್ಮಕಪ್ರಪಂಚವು ಬ್ರಹ್ಮದ ಪ್ರಕಾರವೇ

(ಮೂಲ)

೫೦. ಏತದುಕ್ತಂ ಭವತಿ । ಬ್ರಹ್ಮೈವೈವಮವಸ್ಥಿತಮ್ ಇತ್ಯತ್ರ ಏವಂಶಬ್ದಾರ್ಥಭೂತಪ್ರಕಾರತಯೈವ ವಿಚಿತ್ರಚೇತನಾಚೇತನಾತ್ಮಕಪ್ರಪಞ್ಚಸ್ಯ ಸ್ಥೂಲಸ್ಯ ಸೂಕ್ಷ್ಮಸ್ಯ ಚ ಸದ್ಭಾವಃ । ತಥಾ ಚ 'ಬಹು ಸ್ಯಾಂ ಪ್ರಜಾಯೇಯ' (ಛಾಂ. ೬-೨-೩) ಇತ್ಯಯಮರ್ಥಃ ಸಂಪನ್ನೋ ಭವತಿ । ತಸ್ಯೈವೇಶ್ವರಸ್ಯ ಕಾರ್ಯತಯಾ ಕಾರಣತಯಾ ಚ ನಾನಾಸಂಸ್ಥಾನಸಂಸ್ಥಿತಸ್ಯ ಸಂಸ್ಥಾನತಯಾ ಚಿದಚಿದ್ವಸ್ತುಜಾತಮ್ ಅವಸ್ಥಿತಮಿತಿ ॥

ನನು ಚ ಸಂಸ್ಥಾನರೂಪೇಣ ಪ್ರಕಾರತಯಾ ಏವಂಶಬ್ದಾರ್ಥತ್ವಂ ಜಾತಿಗುಣಯೋರೇವ ದೃಷ್ಟಮ್, ನ ದ್ರವ್ಯಸ್ಯ । ಸ್ವತನ್ತ್ರಸಿದ್ಧಿಯೋಗ್ಯಸ್ಯ ಪದಾರ್ಥಸ್ಯ ಏವಂಶಬ್ದಾರ್ಥತಯಾ ಈಶ್ವರಸ್ಯ ಪ್ರಕಾರಮಾತ್ರತ್ವಮ್ ಅಯುಕ್ತಮ್ ಇತಿ ಚೇತ್ । ಉಚ್ಯತೇ । ದ್ರವ್ಯಸ್ಯಾಪಿ ದಣ್ಡಕುಣ್ಡಲಾದೇಃ ದ್ರವ್ಯಾನ್ತರಪ್ರಕಾರತ್ವಂ ದೃಷ್ಟಮೇವ । ನನು ಚ ದಣ್ಡಾದೇಃ ಸ್ವತನ್ತ್ರಸ್ಯ ದ್ರವ್ಯಾನ್ತರಪ್ರಕಾರತ್ವೇ ಮತ್ವರ್ಥೀಯಪ್ರತ್ಯಯೋ ದೃಷ್ಟಃ ಯಥಾ ದಣ್ಡೀ ಕುಣ್ಡಲೀ ಇತಿ । ಅತೋ ಗೋತ್ವಾದಿತುಲ್ಯತಯಾ ಚೇತನಾಚೇತನಸ್ಯ ದ್ರವ್ಯಭೂತಸ್ಯ ವಸ್ತುನ ಈಶ್ವರಪ್ರಕಾರತಯಾ ಸಾಮಾನಾಧಿಕರಣ್ಯೇನ ಪ್ರತಿಪಾದನಂ ನ ಯುಜ್ಯತೇ । ಅತ್ರೋಚ್ಯತೇ । ಗೌಃ, ಅಶ್ವೋ, ಮನುಷ್ಯೋ, ದೇವಃ ಇತಿ ಭೂತಸಂಘಾತರೂಪಾಣಾಂ ದ್ರವ್ಯಾಣಾಮೇವ 'ದೇವದತ್ತೋ ಮನುಷ್ಯೋ ಜಾತಃ ಪುಣ್ಯವಿಶೇಷೇಣ', 'ಯಜ್ಞದತ್ತೋ ಗೌರ್ಜಾತಃ

---

1. ಹೀಗೆ ಎರಡು ಪದಗಳೂ ಬ್ರಹ್ಮವನ್ನೇ ಹೇಳುತ್ತವೆ.
2. **ಬ್ರಹ್ಮಾಜ್ಞಾನಪಕ್ಷ**ದಲ್ಲಿ ಪ್ರವೃತ್ತಿನಿಮಿತ್ತವಿಲ್ಲದ್ದರಿಂದ ಸಾಮಾನಾಧಿಕರಣ್ಯದ ಲಕ್ಷಣವಿಲ್ಲದೆ ಹೋಗುವದು ; ಬ್ರಹ್ಮಕ್ಕೆ ಅವಿದ್ಯಾಶ್ರಯತ್ವವೆಂಬ ದೋಷವೂ ಬರುವದು. **ಭಾಸ್ಕರವಾದ**ದಲ್ಲಿ ಬ್ರಹ್ಮಕ್ಕೇ ತಚ್ಛಬ್ದಾರ್ಥವಾದ ಕಲ್ಯಾಣಗುಣತ್ವಕ್ಕೆ ವಿರುದ್ಧವಾದ ಅಜ್ಞತ್ವಾದಿಗಳು ; ತ್ವಂಶಬ್ದವು ವಸ್ತುಮಾತ್ರವನ್ನು ಹೇಳುವದೆಂದರೆ ಎದುರಿಗಿರುವ ಚೇತನವನ್ನು ಹೇಳುವ ಪ್ರವೃತ್ತಿನಿಮಿತ್ತವನ್ನು ಕೈಬಿಡಬೇಕಾಗುವದು.

ಪಾಪೇನ ಕರ್ಮಣಾ', 'ಅನ್ಯಶ್ಚೇತನಃ ಪುಣ್ಯಾತಿರೇಕೇಣ ದೇವೋ ಜಾತಃ'— ಇತ್ಯಾದಿ ದೇವಾದಿಶರೀರಾಣಾಂ ಚೇತನಪ್ರಕಾರತಯಾ ಲೋಕವೇದಯೋಃ ಸಾಮಾನಾಧಿಕರಣ್ಯೇನ ಪ್ರತಿಪಾದನಂ ದೃಷ್ಟಮ್ । ಅಯಮರ್ಥಃ । ಜಾತಿರ್ವಾ ದ್ರವ್ಯಂ ವಾ ಗುಣೋ ವಾ ನ ತತ್ರಾಽಽದರಃ । ಕಞ್ಚನ ದ್ರವ್ಯವಿಶೇಷಂ ಪ್ರತಿ ವಿಶೇಷಣತಯೈವ ಯಸ್ಯ ಸದ್ಭಾವಃ ತಸ್ಯ ತದಪೃಥಕ್ಸಿದ್ಧೇಸ್ತತ್ಪ್ರಕಾರತಯಾ ತತ್ಸಾಮಾನಾಧಿಕರಣ್ಯೇನ ಪ್ರತಿಪಾದನಂ ಯುಕ್ತಮ್ । ಯಸ್ಯ ಪುನರ್ದ್ರವ್ಯಸ್ಯ ಪೃಥಕ್ಸಿದ್ಧಸ್ಯೈವ ಕದಾಚಿತ್ ಕ್ವಚಿದ್ದ್ರವ್ಯಾನ್ತರಪ್ರಕಾರತ್ವಮಿಷ್ಯತೇ ತತ್ರ ಮತ್ವರ್ಥೀಯಪ್ರತ್ಯಯ ಇತಿ ವಿಶೇಷಃ ॥

ಏವಮೇವ ಸ್ಥಾವರಜಙ್ಗಮಾತ್ಮಕಸ್ಯ ಸರ್ವಸ್ಯ ವಸ್ತುನ ಈಶ್ವರಶರೀರತ್ವೇನ ತತ್ಪ್ರಕಾರತಯೈವ ಸ್ವರೂಪಸದ್ಭಾವಃ ಇತಿ ತತ್ಪ್ರಕಾರೀ ಈಶ್ವರ ಏವ ತತ್ಶಬ್ದೇನ ಅಭಿಧೀಯತ ಇತಿ ತತ್ಸಾಮಾನಾಧಿಕರಣ್ಯೇನ ಪ್ರತಿಪಾದನಂ ಯುಕ್ತಮ್ । ತದೇತತ್ ಸರ್ವಂ ಪೂರ್ವಮೇವ ನಾಮರೂಪವ್ಯಾಕರಣಶ್ರುತಿವಿವರಣೇ ಪ್ರಪಞ್ಚಿತಮ್ । ಅತಃ ಪ್ರಕೃತಿಪುರುಷಮಹದಹಙ್ಕಾರತನ್ಮಾತ್ರ ಭೂತೇನ್ದ್ರಿಯತದಾರಬ್ಧಚತುರ್ದಶ ಭುವನಾತ್ಮಕಬ್ರಹ್ಮಾಣ್ಡತದನ್ತರ್ವರ್ತಿದೇವ ತಿರ್ಯಙ್ಮನುಷ್ಯಸ್ಥಾವರಾದಿಸರ್ವಪ್ರಕಾರ ಸಂಸ್ತಾನಸಂಸ್ಥಿತಂ ಕಾರ್ಯಮಪಿ ಸರ್ವಂ ಬ್ರಹ್ಮೈವೇತಿ ಕಾರಣಭೂತಬ್ರಹ್ಮವಿಜ್ಞಾನಾದೇವ ಸರ್ವಂ ವಿಜ್ಞಾತಂ ಭವತೀತಿ ಏಕವಿಜ್ಞಾನೇನ ಸರ್ವವಿಜ್ಞಾನಮ್ ಉಪಪನ್ನತರಮ್ । ತದೇವಂ ಕಾರ್ಯಕಾರಣಭಾವಾದಿಮುಖೇನ ಕೃತ್ಸ್ನಸ್ಯ ಚಿದಚಿದ್ವಸ್ತುನಃ ಪರಬ್ರಹ್ಮಪ್ರಕಾರತಯಾ ತದಾತ್ಮಕತ್ವಮ್ ಉಕ್ತಮ್ ॥

(ಅರ್ಥ)

ಇಷ್ಟು ಹೇಳಿದಂತಾಯಿತು : 'ಬ್ರಹ್ಮವೇ ಹೀಗೆ ಇದ್ದುಕೊಂಡಿರುತ್ತದೆ'[1] ಎಂಬಲ್ಲಿ ಹೀಗೆ ಎಂಬ ಶಬ್ದಕ್ಕೆ ಅರ್ಥವಾಗಿರುವ **(ಬ್ರಹ್ಮದ) ಪ್ರಕಾರವಾಗಿಯೇ ವಿಚಿತ್ರವಾಗಿರುವ ಚೇತನಾಚೇತನಾತ್ಮಕವಾದ ಸ್ಥೂಲ ಮತ್ತು ಸೂಕ್ಷ್ಮವಾದ[2] ಪ್ರಪಂಚಕ್ಕೆ ಇರುವಿಕೆ.** ಆದ್ದರಿಂದಲೇ 'ಬಹುವಾಗುವೆನು, ಹುಟ್ಟುವೆನು' (ಛಾಂ. ೬-೨-೩) ಎಂಬೀ ಅರ್ಥವು ಹೊಂದುತ್ತದೆ[3] ; ಏಕೆಂದರೆ ಅದೇ ಈಶ್ವರನೇ ಕಾರ್ಯವಾಗಿಯೂ ಕಾರಣವಾಗಿಯೂ ನಾನಾಸಂಸ್ಥಾನಗಳಿಂದೊಡಗೂಡಿ ಇರುವದರಿಂದ (ಅವನ) ಸಂಸ್ಥಾನವಾಗಿಯೇ ಚಿದಚಿದ್ವಸ್ತುಸಮೂಹವು ಇದ್ದುಕೊಂಡಿರುತ್ತದೆ.

---

1. ಈ ಪ್ರಕಾರವಾಗಿ ಆಗಿರುತ್ತದೆ ಎಂದರ್ಥ. 'ಇದೆಲ್ಲವೂ ಬ್ರಹ್ಮವೇ', 'ವಿಷ್ಣುವು ವ್ಯಕ್ತವೂ ಅವ್ಯಕ್ತವೂ ಆಗಿರುತ್ತಾನೆ', 'ಜ್ಯೋತಿಗಳೂ ವಿಷ್ಣುವೇ' ಎಂದು ಮುಂತಾಗಿರುವ ವಾಕ್ಯಗಳಲ್ಲಿ ಹೇಳಿರುವ ಪ್ರಕಾರಗಳನ್ನು ಇಲ್ಲಿ 'ಹೀಗೆ' ಎಂದು ಸಾಮಾನ್ಯವಾಗಿ ತಿಳಿಸಿದೆ.
2. ಸೂಕ್ಷ್ಮದೆಶೆಯಲ್ಲಿ ಏಕತ್ವವೂ ಸ್ಥೂಲ ದೆಶೆಯಲ್ಲಿ ಬಹುತ್ವವೂ ಅದೇ ಬ್ರಹ್ಮಕ್ಕೆ.
3. ಪ್ರಕಾರದ ದ್ವಾರವಿಲ್ಲದೆ ಬ್ರಹ್ಮವು ಬಹುವಾಗುವದೆಂಬುದು ಹೊಂದದು.

(ಆಕ್ಷೇಪ) :— ಸಂಸ್ಥಾನರೂಪದಿಂದ ಪ್ರಕಾರವಾಗಿರುವದರಿಂದ 'ಹೀಗೆ' ಎಂಬ ಶಬ್ದಕ್ಕೆ ಅರ್ಥವಾಗಿರುವದೆಂಬುದು ಜಾತಿಗುಣಗಳಲ್ಲಿ ಮಾತ್ರ ಕಂಡು ಬಂದಿದೆಯೇ ಹೊರತು ದ್ರವ್ಯಕ್ಕೆ (ಕಂಡುಬಂದಿರು)ವದಿಲ್ಲವಲ್ಲ! ಸ್ವತಂತ್ರವಾಗಿ ಸಿದ್ಧಿಯನ್ನು (ಪಡೆಯುವದಕ್ಕೆ) ತಕ್ಕ ಪದಾರ್ಥಕ್ಕೆ ಹೀಗೆ ಎಂಬ ಶಬ್ದಕ್ಕೆ ಅರ್ಥವಾಗಿ ಈಶ್ವರನ ಪ್ರಕಾರಮಾತ್ರವಾಗಿರುವದೆಂಬುದು ಸರಿಯಲ್ಲವಲ್ಲ!

(ಪರಿಹಾರ) :—(ಇದಕ್ಕೆ ಉತ್ತರವನ್ನು) ಹೇಳುತ್ತೇವೆ. ದಂಡ, ಕುಂಡಲ-ಮುಂತಾದ ದ್ರವ್ಯವೂ ಮತ್ತೊಂದು ದ್ರವ್ಯಕ್ಕೆ ಪ್ರಕಾರವಾಗಿರುವದು ಕಂಡೇ ಇದೆ.

(ಶಂಕೆ) :— ದಂಡವೇ ಮುಂತಾದ ಸ್ವತಂತ್ರ(ದ್ರವ್ಯ)ವು ದ್ರವ್ಯಾಂತರಕ್ಕೆ ಪ್ರಕಾರವಾಗಿರುವಲ್ಲಿ 'ದಂಡೀ', 'ಕುಂಡಲೀ' ಎಂದು ಮತ್ವರ್ಥೀಯ ಪ್ರತ್ಯಯವು'[1] (ಬರುವದು) ಕಂಡಿರುತ್ತದೆ. ಆದ್ದರಿಂದ ಗೋತ್ವವೇ ಮುಂತಾದವುಗಳಂತೆಯೇ ದ್ರವ್ಯವಾದ ಚೇತನಾಚೇತನವಸ್ತುವನ್ನು ಈಶ್ವರಪ್ರಕಾರವೆಂದು ಸಾಮಾನಾಧಿಕರಣ್ಯದಿಂದ ಪ್ರತಿಪಾದಿಸುವದು ಯುಕ್ತವಲ್ಲ.

(ಪರಿಹಾರ) :— ಇದಕ್ಕೆ (ಉತ್ತರವನ್ನು) ಹೇಳುತ್ತೇವೆ. ಎತ್ತು, ಕುದುರೆ, ಮನುಷ್ಯ, ದೇವ- ಎಂಬ (ಶಬ್ದಗಳಿಗೆ ವಾಚ್ಯವಾದ) ಭೂತಸಂಘಾತರೂಪಗಳಾಗಿರುವ ದ್ರವ್ಯಗಳಿಗೇ 'ದೇವದತ್ತನು ಪುಣ್ಯವಿಶೇಷದಿಂದ ಮನುಷ್ಯನಾಗಿ ಹುಟ್ಟಿದನು', 'ಯಜ್ಞದತ್ತನು ಪಾಪಕರ್ಮದಿಂದ ಎತ್ತಾಗಿ ಹುಟ್ಟಿದನು', 'ಮತ್ತೊಬ್ಬ ಚೇತನನು ಪುಣ್ಯಾತಿಶಯದಿಂದ ದೇವತೆಯಾಗಿ ಹುಟ್ಟಿದನು'- ಎಂದು ಮುಂತಾಗಿ ದೇವಾದಿ ಶರೀರಗಳನ್ನು[2] ಚೇತನಕ್ಕೆ ಪ್ರಕಾರವಾಗಿ ಲೋಕವೇದಗಳಲ್ಲಿ ಸಾಮಾನಾಧಿಕರಣ್ಯದಿಂದ ಪ್ರತಿಪಾದಿಸಿರುವದು ಕಂಡಿರುತ್ತದೆ.

(ಇದಕ್ಕೆ) ಇದು ಅರ್ಥವು : ಜಾತಿಯಾಗಲಿ ಗುಣವಾಗಲಿ ದ್ರವ್ಯವಾಗಲಿ ಆ (ವಿಷಯದಲ್ಲಿ ಯಾವ) ಆದರವೂ ಇರುವದಿಲ್ಲ ; **ಯಾವದಾದರೊಂದು ದ್ರವ್ಯಕ್ಕೆ ವಿಶೇಷಣವಾಗಿಯೇ ಯಾವದಕ್ಕೆ ಇರುವಿಕೆಯಿರವದೋ ಅದು ಅದಕ್ಕಿಂತ ಬೇರೆಯಾಗಿ ಸಿದ್ಧಿಯಿಲ್ಲದ್ದರಿಂದ ಅದರ ಪ್ರಕಾರವೆಂದು ಅದರ ಸಾಮಾನಾಧಿಕರಣ್ಯದಿಂದ ಪ್ರತಿಪಾದಿಸುವದು ಯುಕ್ತವು ;** ಆದರೆ ಯಾವ ದ್ರವ್ಯವು ಪೃಥಕ್ಸಿದ್ಧವಾಗಿಯೇ ಇದ್ದು ಯಾವಾಗಲೋ ಎಲ್ಲಿಯೋ ಒಂದು ಕಡೆ ಮತ್ತೊಂದು ದ್ರವ್ಯಕ್ಕೆ ಪ್ರಕಾರವೆಂದು (ಹೇಳುವದು) ಇಷ್ಟವಾಗಿರುವದೋ ಅಲ್ಲಿ ಮತ್ವರ್ಥೀಯಪ್ರತ್ಯಯ(ವಿರುತ್ತದೆ) ಎಂಬುದು ವಿಶೇಷವು.

---

1. ಉಳ್ಳ ಎಂಬರ್ಥದ ಪ್ರತ್ಯಯವು ; ಇಲ್ಲಿ 'ದಂಡವು ದೇವದತ್ತನು' ಎಂದು ಪ್ರಯೋಗಿಸುವದು ಕಂಡಿಲ್ಲ- ಎಂದು ಭಾವ.
2. ದೇವತ್ವಮನುಷ್ಯತ್ವಾದಿಸಂಸ್ಥಾನವಿಶಿಷ್ಟವಾಗಿರುವ ಶರೀರಗಳನ್ನು ಎಂದರ್ಥ.

ಹೀಗೆಯೇ ಸ್ಥಾವರಜಂಗಮಾತ್ಮಕವಾದ ಪ್ರತಿಯೊಂದು ವಸ್ತುವೂ ಈಶ್ವರ ಶರೀರವಾಗಿರುವದರಿಂದ ಅದರ ಪ್ರಕಾರವಾಗಿಯೇ ಸ್ವರೂಪವು ಇರುವದಾದ್ದರಿಂದ ಅವುಗಳ ಪ್ರಕಾರಿಯಾದ ಈಶ್ವರನನ್ನೇ ಆಯಾ ಶಬ್ದದಿಂದ ಹೇಳಿರುತ್ತದೆಯಾಗಿ ಅವನ ಸಾಮಾನಾಧಿಕರಣ್ಯದಿಂದ ಪ್ರತಿಪಾದಿಸಿರುವದು ಯುಕ್ತವು. ಆ ಇದೆಲ್ಲವನ್ನೂ ಈ ಮೊದಲೇ ನಾಮರೂಪವ್ಯಾಕರಣಶ್ರುತಿಯ ವಿವರಣದಲ್ಲಿ (ಖಂ.೧೬) ವಿವರಿಸಿರುತ್ತದೆ. **ಆದ್ದರಿಂದ ಪ್ರಕೃತಿ, ಪುರುಷ, ಮಹತ್ತು, ಅಹಂಕಾರ, ತನ್ಮಾತ್ರೆಗಳು, ಭೂತ, ಇಂದ್ರಿಯಗಳು, ಅವುಗಳಿಂದ ಆಗಿರುವ ಚತುರ್ದಶಭುವನಾತ್ಮಕವಾದ ಬ್ರಹ್ಮಾಂಡ, ಅದರೊಳಗಿರುವ ದೇವತೆಗಳು, ತಿರ್ಯಗ್ಜಂತುಗಳು, ಮನುಷ್ಯರು, ಸ್ಥಾವರ ಪ್ರಾಣಿಗಳು- ಮುಂತಾದ ಸರ್ವಪ್ರಕಾರಸಂಸ್ಥಾನಗಳಿಂದಲೂ ಇದ್ದುಕೊಂಡಿ-ರುವ ಕಾರ್ಯವೂ ಎಲ್ಲವೂ ಬ್ರಹ್ಮವೇ ಎಂದು ಕಾರಣವಾದ ಬ್ರಹ್ಮವಿಜ್ಞಾನದಿಂದಲೇ ಎಲ್ಲವೂ ವಿಜ್ಞಾತವಾಗುತ್ತದೆಯಾಗಿ ಏಕವಿಜ್ಞಾನದಿಂದ ಸರ್ವವಿಜ್ಞಾನವು ಯುಕ್ತತರವಾಗುತ್ತದೆ.**[1] ಇಂತೀಪರಿಯಲ್ಲಿ ಕಾರ್ಯಕಾರಣಭಾವವೇ ಮುಂತಾದ[2] ದ್ವಾರದಿಂದ ಎಲ್ಲಾ ಚಿದಚಿದ್ವಸ್ತುವೂ ಪರಬ್ರಹ್ಮಪ್ರಕಾರವಾಗಿ ತದಾತ್ಮಕವಾಗಿದೆ ಎಂದು ಹೇಳಿದ್ದಾಯಿತು.

೩. ಬ್ರಹ್ಮಕ್ಕೆ ಉಪಾದಾನತ್ವಸಿದ್ಧಿ

(ಮೂಲ)

೫೧. ನನು ಚ ಪರಸ್ಯ ಬ್ರಹ್ಮಣಃ ಸ್ವರೂಪೇಣ ಪರಿಣಾಮಾಸ್ಪದತ್ವಂ ನಿರ್ವಿಕಾರನಿರವದ್ಯ[3]ಶ್ರುತಿವ್ಯಾಕೋಪಪ್ರಸಙ್ಗೇನ ನಿವಾರಿತಮ್ । 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್' (ವೇ.ಸೂ. ೧-೪-೨೩) ಇತ್ಯೇಕವಿಜ್ಞಾನೇನ ಸರ್ವವಿಜ್ಞಾನಪ್ರತಿಜ್ಞಾ[4] ಮೃತ್ತತ್ಕಾರ್ಯದೃಷ್ಟಾನ್ತಾಭ್ಯಾಂ ಪರಮಪುರುಷಸ್ಯ ಜಗದುಪಾದಾನಕಾರಣತ್ವಂ ಚ ಪ್ರತಿಪಾದಿತಮ್ । ಉಪಾದಾನಕಾರಣತ್ವಂ ಚ ಪರಿಣಾಮಾಸ್ಪದತ್ವಮೇವ । ಕಥಮಿದಮುಪಪದ್ಯತೇ ?

---

1. ನಿಜವಾದ ಕಾರ್ಯಕಾರಣಭಾವವನ್ನು ಒಪ್ಪುವ ಸಿದ್ಧಾಂತಕ್ಕೇ ಇದು ಹೆಚ್ಚು ಒಪ್ಪುತ್ತದೆ- ಎಂದು ಭಾವ.
2. 'ಸನ್ಮೂಲಾಃ ಸತ್ಪ್ರತಿಷ್ಠಾಃ' ಎಂಬುದು **ಕಾರ್ಯಕಾರಣಭಾವ;** 'ಸದಾಯತನಾಃ' ಎಂಬುದು **ಧಾರ್ಯಾಧಾರಕಭಾವ.**
3. 'ನಿರ್ವಿಕಾರತ್ವನಿರವದ್ಯತ್ವ' ಎಂಬ ಕಾ॥ ಪಾಠದಲ್ಲಿ ಟೀಕೆಯನ್ನು ನೋಡಿ, ಯಾರೋ 'ತ್ವ' ಸೇರಿಸಿಕೊಂಡಿರಬಹುದೆಂದು ತೋರುತ್ತದೆ.
4. 'ಪ್ರತಿಜ್ಞಾನ' ಕಾ॥

ಅತ್ರೋಚ್ಯತೇ । ಸಜೀವಸ್ಯ ಪ್ರಪಞ್ಚಸ್ಯ, ಅವಿಶೇಷೇಣ ಕಾರಣತ್ವಮುಕ್ತಮ್ । ತತ್ರೇಶ್ವರಸ್ಯ ಜೀವರೂಪಪರಿಣಾಮಾಭ್ಯುಪಗಮೇ 'ನಾತ್ಮಾ ಶ್ರುತೇರ್ನಿತ್ಯತ್ವಾಚ್ಚ ತಾಭ್ಯಃ' (ವೇ.ಸೂ.೨-೩-೧೮) ಇತಿ ವಿರುಧ್ಯತೇ । ವೈಷಮ್ಯ ನೈರ್ಘೃಣ್ಯಪರಿಹಾರಶ್ಚ ಜೀವಾನಾಮನಾದಿತ್ವಾಭ್ಯುಪಗಮೇನ ತತ್ತತ್ಕರ್ಮನಿಮಿತ್ತತಯಾ ಪ್ರತಿಪಾದಿತಃ 'ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್' (ವೇ.ಸೂ. ೨-೧-೩೪) ಇತಿ,[1] 'ನ ಕರ್ಮಾವಿಭಾಗಾದಿತಿ ಚೇನ್ನಾನಾದಿತ್ವಾದುಪಪದ್ಯತೇ ಚಾಪ್ಯುಪಲಭ್ಯತೇ ಚ' (ವೇ.ಸೂ. ೨-೧-೩೫) ಇತಿ ಅಕೃತಾಭ್ಯಾಗಮ ಕೃತವಿಪ್ರಣಾಶಪ್ರಸಙ್ಗಶ್ಚಾನಿತ್ಯತ್ವೇಽಭಿಹಿತಃ । ತಥಾ ಪ್ರಕೃತೇರಪ್ಯನಾದಿತಾ ಶ್ರುತಿಭಿಃ ಪ್ರತಿಪಾದಿತಾ 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಂ ಪ್ರಜಾಂ ಜನಯನ್ತೀಂ ಸರೂಪಾಮ್ । ಅಜೋ ಹ್ಯೇಕೋ ಜುಷಮಾಣೋಽನುಶೇತೇ ಜಹಾತ್ಯೇನಾಂ ಭುಕ್ತಭೋಗಾಮಜೋಽನ್ಯಃ' (ಶ್ವೇ. ೪-೫) ಇತಿ ಪ್ರಕೃತಿಪುರುಷಯೋರಜತ್ವಂ ದರ್ಶಯತಿ[2] । 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತಾತ್ತಸ್ಮಿಂಶ್ಚಾನ್ಯೋ ಮಾಯಯಾ ಸಂನಿರುದ್ಧಃ' (ಶ್ವೇ. ೪-೯), 'ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್' (ಶ್ವೇ. ೪-೧೦)- ಇತಿ ಪ್ರಕೃತಿರೇವ ಸ್ವರೂಪೇಣ ವಿಕಾರಾಸ್ಪದಮ್ ಇತಿ ಚ ದರ್ಶಯತಿ । 'ಗೌರನಾದ್ಯನ್ತವತೀ ಸಾ ಜನಿತ್ರೀ ಭೂತಭಾವಿನೀ' (ಮಂ.೫)[3] ಇತಿ ಚ । ಸ್ಮೃತಿಶ್ಚ 'ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ'[4] (ಗೀ. ೧೩-೧೯), 'ಭೂಮಿರಾಪೋಽನಲೋ ವಾಯುಃ ಖಂ ಮನೋಬುದ್ಧಿರೇವ ಚ । ಅಹಙ್ಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥ ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ । ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್' ॥ (ಗೀ.೬-೪, ೫), 'ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ' (ಗೀ. ೯-೮), 'ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್' (ಗೀ. ೯-೧೦)- ಇತ್ಯಾದಿಕಾ । ಏವಂ ಚ ಪ್ರಕೃತೇರಪಿ ಈಶ್ವರಶರೀರತ್ವಾತ್ ಪ್ರಕೃತಿಶಬ್ದೋಽಪಿ ತದಾತ್ಮಭೂತಸ್ಯ ಈಶ್ವರಸ್ಯ ತತ್ಪ್ರಕಾರಸಂಸ್ಥಿತಸ್ಯ ವಾಚಕಃ । ಪುರುಷಶಬ್ದೋಽಪಿ ತದಾತ್ಮಭೂತಸ್ಯ ಈಶ್ವರಸ್ಯ ಪುರುಷಪ್ರಕಾರಸಂಸ್ಥಿತಸ್ಯ ವಾಚಕಃ । ಅತಃ, ತದ್ವಿಕಾರಾಣಾಮಪಿ ತಥೈವೇಶ್ವರ ಆತ್ಮಾ । ತದಾಹ 'ವ್ಯಕ್ತಂ ವಿಷ್ಣುಸ್ತಥಾವ್ಯಕ್ತಂ ಪುರುಷಃ ಕಾಲ ಏವ ಚ' (ವಿ.ಪು. ೧-೨-೧೮), 'ಸ ಏವ ಕ್ಷೋಭಕೋ ಬ್ರಹ್ಮನ್

---

1. ಇಲ್ಲಿ 'ಇತಿ' ಎಂಬ ಮಾತು ಅವಶ್ಯವಾಗಿದೆಯಾದರೂ ಆಚ್ಚಿನ ಪುಸ್ತಕಗಳಲ್ಲಿಲ್ಲ.
2. 'ದರ್ಶಿತಮ್' ಕಾ॥
3. 'ಗೌರನಾದ್ಯನ್ತವತೀ ಸಾ ಜನಿತ್ರೀ ಭೂತಭಾವಿನೀ । ಸಿತಾಸಿತಾ ಚ ರಕ್ತಾ ಚ ಸರ್ವಕಾಮದುಘಾ ವಿಭೋಃ' ಎಂದುಪೂರ್ಣವಾಕ್ಯ.
4. ಮುಂದಿನ ಅರ್ಧ 'ವಿಕಾರಾಂಶ್ಚ ಗುಣಾಂಶ್ಚೈವ ವಿದ್ಧಿ ಪ್ರಕೃತಿಸಂಭವಾನ್' ಕಾ॥

ಕ್ಷೋಭ್ಯಶ್ಚ ಪರಮೇಶ್ವರಃ[1] (ವಿ.ಪು. ೧-೨-೩೧) ಇತಿ । ಅತಃ ಪ್ರಕೃತಿಪ್ರಕಾರ ಸಂಸ್ಥಿತೇ ಪರಮಾತ್ಮನಿ ಪ್ರಕಾರಭೂತಪ್ರಕೃತ್ಯಂಶೇ ವಿಕಾರಃ, ಪ್ರಕಾರ್ಯಂಶೇ ಚಾವಿಕಾರಃ । ಏವಮೇವ ಜೀವಪ್ರಕಾರಸಂಸ್ಥಿತೇ ಪರಮಾತ್ಮನಿ ಚ ಪ್ರಕಾರ ಭೂತಜೀವಾಂಶೇ ಸರ್ವೇ ಚಾಽಪುರುಷಾರ್ಥಾಃ । ಪ್ರಕಾರ್ಯಂಶೋ ನಿಯನ್ತಾ ನಿರವದ್ಯಃ ಸರ್ವಕಲ್ಯಾಣಗುಣಾಶ್ರಯಃ[2] ಸತ್ಯಸಙ್ಕಲ್ಪ ಏವ । ತಥಾ ಚ ಸತಿ ಕಾರಣಾವಸ್ಥ ಈಶ್ವರ ಏವೇತಿ ತದುಪಾದಾನಕಜಗತ್ಕಾರ್ಯಾವಸ್ಥೋಽಪಿ ಸ ಏವೇತಿ ಕಾರ್ಯಕಾರಣಯೋರನನ್ಯತ್ವಂ ಸರ್ವಶ್ರುತ್ಯವಿರೋಧಶ್ಚ ಭವತಿ ॥

(ಅರ್ಥ)

(ಆಕ್ಷೇಪ) :- ಪರಬ್ರಹ್ಮವು ತನ್ನ ರೂಪದಿಂದಲೇ ಪರಿಣಾಮಕ್ಕೆ ಆಸ್ಪದ ವೆನ್ನುವದು (ಬ್ರಹ್ಮವು) ನಿರ್ವಿಕಾರ, ನಿರವದ್ಯ- ಎಂಬ ಶ್ರುತಿಗಳಿಗೆ ವಿರುದ್ಧವಾಗುವ ಪ್ರಸಕ್ತಿ(ಯಾದೀತೆಂಬ ಕಾರಣ)ದಿಂದ ತಳ್ಳಿಹಾಕಿದ್ದಾಗಿದೆ.[3] 'ಬ್ರಹ್ಮವು ಪ್ರಕೃತಿಯೂ (ಆಗಿದೆ) ; ಏಕೆಂದರೆ (ಹಾಗಾದರೆ) ಪ್ರತಿಜ್ಞೆ, ದೃಷ್ಟಾಂತ- (ಇವು) ವಿರುದ್ಧವಾಗು ವದಿಲ್ಲ' (ವೇ. ಸೂ. ೧-೪-೨೩) ಎಂಬ (ಸೂತ್ರದಲ್ಲಿ) ಒಂದರ ವಿಜ್ಞಾನದಿಂದ ಎಲ್ಲವನ್ನೂ ಅರಿತಂತೆ ಆಗುವದು ಎಂಬ ಪ್ರತಿಜ್ಞೆ, ಮಣ್ಣು ಮತ್ತು ಅದರ ಕಾರ್ಯ - ಇವುಗಳ ದೃಷ್ಟಾಂತ- ಇವುಗಳ (ಕಾರಣ)ದಿಂದ ಪರಮಪುರುಷನು ಜಗತ್ತಿಗೆ ಉಪಾದಾನಕಾರಣವೂ (ಆಗಿರುವ)ನೆಂದು ಪ್ರತಿಪಾದಿಸಲಾಗಿದೆ. ಉಪಾದಾನ ಕಾರಣವೆಂದರೆ ಪರಿಣಾಮಕ್ಕೆ ಆಸ್ಪದವಾಗಿರುವದೇ (ಆಗಿದೆ). ಇದು[4] ಹೇಗೆ ಹೊಂದುತ್ತದೆ?

(ಪರಿಹಾರ) :- ಇದಕ್ಕೆ ಹೇಳುತ್ತೇವೆ, ಜೀವಸಹಿತವಾದ ಪ್ರಪಂಚಕ್ಕೆಲ್ಲ (ಪರಮಪುರುಷನೇ) ಕಾರಣವೆಂದು ಹೇಳಿದೆ. ಅಲ್ಲಿ **ಈಶ್ವರನು ಜೀವರೂಪದಿಂದ ಪರಿಣಾಮವಾಗುವನೆಂದು ಒಪ್ಪಿದರೆ** 'ಆತ್ಮನು (ಹುಟ್ಟುವದಿಲ್ಲ), ಏಕೆಂದರೆ (ಹಾಗೆಂದು) ಶ್ರುತಿಯಿದೆ ; (ಅವನು) ಆ (ಶ್ರುತಿಗಳಂತೆ) ನಿತ್ಯನಾಗಿರುವದ ರಿಂದಲೂ (ಹುಟ್ಟುವದಿಲ್ಲ)' (ವೇ.ಸೂ. ೨-೩-೧೮), ಎಂಬುದಕ್ಕೆ ವಿರುದ್ಧವಾಗು ತ್ತದೆ. **ಜೀವರು ಅನಾದಿ** ಎಂದು ಒಪ್ಪಿ ಆಯಾ (ಜೀವರ) ಕರ್ಮನಿಮಿತ್ತವಿದೆ ಎಂದು 'ವೈಷಮ್ಯನೈರ್ಘೃಣ್ಯಗಳಿಲ್ಲ ; ಏಕೆಂದರೆ (ಸೃಜ್ಯಮಾನರಾದವರ ಕರ್ಮ) ಸಾಪೇಕ್ಷ್ಯ- ವಾಗಿ (ಸೃಷ್ಟಿಯಾಗುತ್ತದೆ)' (ವೇ.ಸೂ. ೨-೧-೩೪) ಎಂದು (ಈಶ್ವರನಿಗೆ) ವೈಷಮ್ಯನೈರ್ಘೃಣ್ಯ(ಗಳುಂಟಾಗುವವೆಂಬುದರ) ಪರಿಹಾರವನ್ನು ಹೇಳಿದೆ.

---

1. 'ಪರಮೇಶ್ವರಃ' ಎಂಬುದಕ್ಕೆ 'ಪುರುಷೋತ್ತಮಃ' ಎಂದು ಅಚ್ಚಿನ ಪಾಠ.
2. 'ಗುಣಾಕರಃ' ಕಾ॥ 3. ೪೩ನೆಯ ಖಂಡದಲ್ಲಿ. 4. ಬ್ರಹ್ಮವು ಉಪಾದಾನಕಾರಣವೂ ಆಗಿರುತ್ತದೆ, ನಿರ್ವಿಕಾರನಿರವದ್ಯವೂ ಆಗಿದೆ - ಎಂಬ ಪರಸ್ಪರವಿರುದ್ಧವಚನವು ಹೇಗೆ ಹೊಂದುತ್ತದೆ.

'(ಸೃಷ್ಟಿಗೆ) ಮುಂಚೆ ಅವಿಭಾಗಿವಿರುವದರಿಂದ ಕರ್ಮ(ವಿರುವದಿಲ್ಲವಲ್ಲ) ಎಂದರೆ, ಹಾಗಲ್ಲ ; ಏಕೆಂದರೆ (ಕ್ಷೇತ್ರಜ್ಞಕರ್ಮಗಳು) ಅನಾದಿಯಾಗಿರುತ್ತವೆ. (ಅನಾದಿಯಾದರೂ ಅವಿಭಾಗವು) ಉಪಪನ್ನವಾಗುತ್ತದೆ;[1] (ಶ್ರುತಿಸ್ಮೃತಿಗಳಲ್ಲಿ ಅನಾದಿತ್ವವು) ಕಂಡೂ ಬರುತ್ತದೆ' (ವೇ.ಸೂ. ೨-೧-೩೫) ಎಂದು (ಜೀವರು) ಅನಿತ್ಯವಾದರೆ ಅಕೃತಾಭ್ಯಾಗಮಕೃತವಿಪ್ರಣಾಶಪ್ರಸಂಗವಾಗುವದೆಂದುಹೇಳಲಾಗಿದೆ[2] ಹೀಗೆಯೇ **ಪ್ರಕೃತಿಯೂ ಅನಾದಿ** ಎಂಬುದನ್ನೂ **ಶ್ರುತಿಗಳು** ಪ್ರತಿಪಾದಿಸುತ್ತವೆ; 'ಒಂದೇ ಆಗಿ ಲೋಹಿತಶುಕ್ಲಕೃಷ್ಣ(ರೂಪವಾಗಿರುವ) ಅಜವಾಗಿ ಸಮಾನರೂಪವಾದ ಬಹುಪ್ರಜೆಯನ್ನು ಹಡೆಯುತ್ತಿರುವ (ಪ್ರಕೃತಿಯನ್ನು), ಒಬ್ಬ ಅಜನು ಸೇವಿಸುತ್ತಾ ಅನುಸರಿಸಿಕೊಂಡು ಮಲಗಿರುವನು, ಈ ಭುಕ್ತಭೋಗವಾದ (ಪ್ರಕೃತಿಯನ್ನು) ಇನ್ನೊಬ್ಬ ಅಜನು ಬಿಟ್ಟುಬಿಟ್ಟಿರುತ್ತಾನೆ' (ಶ್ವೇ.೪-೫) ಎಂದು (ಶ್ರುತಿಯು) ಪ್ರಕೃತಿಪುರುಷರು (ಇಬ್ಬರೂ) ಜನ್ಮರಹಿತರೆಂದು ತಿಳಿಸಿಕೊಡುತ್ತದೆ. 'ಇದರಿಂದ ಮಾಯಿಯು ಈ ವಿಶ್ವವನ್ನು ಸೃಷ್ಟಿಸುತ್ತಾನೆ ; ಮತ್ತು ಅದರಲ್ಲಿ ಮತ್ತೊಬ್ಬನು ಮಾಯೆಯಿಂದ ಕಟ್ಟುವಡೆದಿರುತ್ತಾನೆ' (ಶ್ವೇ.೪-೯), 'ಮಾಯೆಯನ್ನು ಪ್ರಕೃತಿಯೆಂದು ತಿಳಿಯಬೇಕು, ಮಾಯಿಯನ್ನು ಮಹೇಶ್ವರನೆಂದು ತಿಳಿಯಬೇಕು' (ಶ್ವೇ.೪-೧೦) ಎಂದು ಪ್ರಕೃತಿಯೇ ಸ್ವರೂಪದಿಂದ ವಿಕಾರಕ್ಕೆ ಆಸ್ಪದವೆಂದೂ ತಿಳಿಸಿರುತ್ತದೆ.[3] (ಆ ವಿಭುವಿನ) 'ಗೋವು ಆದ್ಯಂತಗಳಲ್ಲದ್ದು, ಅದೇ ಜನಿತ್ರಿಯು, ಭೂತಭಾವನಿಯು' (ಮಂ.೫), ಎಂದೂ (ತಿಳಿಸಿರುತ್ತದೆ). (ಇದಕ್ಕೆ) **ಸ್ಮೃತಿ**ಯೂ ಇದೆ : 'ಪ್ರಕೃತಿಯನ್ನೂ ಪುರುಷನನ್ನೂ ಇಬ್ಬರನ್ನೂ ಅನಾದಿಗಳೆಂದು ತಿಳಿ'[4] (ಗೀ.೧೩-೧೯), 'ಭೂಮಿ, ಅಪ್ಪು, ಅನಲ, ವಾಯು, ಆಕಾಶ, ಮನಸ್ಸು, ಬುದ್ಧಿಯು, ಅಹಂಕಾರ- ಎಂದೀ ನನ್ನ ಪ್ರಕೃತಿಯು ಎಂಟು ಬಗೆಯಾಗಿರುವದು. ಇದು ಅಪರ(ಪ್ರಕೃತಿಯು) ; ಇದಕ್ಕಿಂತ ಬೇರೆಯಾಗಿರುವ ನನ್ನ ಪರಪ್ರಕೃತಿಯನ್ನು ಜೀವಭೂತವಾಗಿದೆ ಎಂದುತಿಳಿ ; ಮಹಾಬಾಹುವೆ, ಆ (ಪ್ರಕೃತಿ)ಯಿಂದ ಈ

---

1. ಏಕೆಂದರೆ ಆಗ ಜೀವನು ನಾಮರೂಪಗಳನ್ನು ಬಿಟ್ಟಿರುತ್ತಾನೆ ; ಬ್ರಹ್ಮಶರೀರವಾದ್ದರಿಂದ ಬೇರೆ ಎಂಬುದಕ್ಕೆ ಬರುವಂತೆಯೂ ಇರುವದಿಲ್ಲ.
2. ಮಾಡದೆ ಇದ್ದ ಕರ್ಮಕ್ಕೆ ಫಲ, ಮಾಡಿದ್ದರ ಫಲಕ್ಕೆ ನಾಶ- ಎಂಬ ದೋಷವು ಬರುವದರಿಂದ ಜೀವರು ನಿತ್ಯರೆಂದು ಒಪ್ಪಬೇಕು.
3. ಪ್ರಕೃತಿಯ ಪರಿಣಾಮದ್ವಾರದಿಂದಲೇ ಸದ್ರೂಪವಾದ ಬ್ರಹ್ಮವು ಉಪಾದಾನವೆಂದು ಭಾವ.
4. ಕಾ॥ ದಲ್ಲಿರುವ ಉತ್ತರಾರ್ಧಕ್ಕೆ (ಇಚ್ಛಾದಿ)ವಿಕಾರಗಳನ್ನೂ (ಅಮಾನಿತ್ವಾದಿ) ಗುಣಗಳನ್ನೂ ಪ್ರಕೃತಿಯಿಂದುಂಟಾಗುತ್ತವೆ ಎಂದು ತಿಳಿ- ಎಂದರ್ಥ.

(ಅಚಿದ್ರೂಪ) ಜಗತ್ತುಧಾರ್ಯಮಾಣವಾಗಿರುತ್ತದೆ' (ಗೀ. ೬-೪,೫)[1], 'ನನ್ನ ಪ್ರಕೃತಿಯನ್ನು ಪರಿಣಾಮಗೊಳಿಸಿ ಮತ್ತೆಮತ್ತೆ ಸೃಷ್ಟಿಮಾಡುತ್ತೇನೆ' (ಗೀ.೯-೮), 'ಅಧ್ಯಕ್ಷನಾದ ನನ್ನಿಂದ (ನೋಡಲ್ಪಟ್ಟದ್ದಾಗಿ) ಪ್ರಕೃತಿಯು ಚರಾಚರಸಹಿತ ಜಗತ್ತನ್ನುಂಟುಮಾಡುತ್ತದೆ' (ಗೀ. ೯-೧೦).

ಅಂತೂ ಹೀಗೆ **ಪ್ರಕೃತಿಯೂ ಈಶ್ವರನ ಶರೀರವೇ ಆಗಿದೆಯಾಗಿ ಪ್ರಕೃತಿಶಬ್ದವೂ ಆ (ಪ್ರಕೃತಿ)ಯ ಆತ್ಮನಾಗಿ ಆದರ ಪ್ರಕಾರದಿಂದಿರುವ ಈಶ್ವರನಿಗೆ ವಾಚಕವು, ಪುರುಷಶಬ್ದವೂ ಪುರುಷಪ್ರಕಾರದಿಂದಿರುವ, ಆ (ಪುರುಷನಿಗೆ) ಆತ್ಮನಾದ, ಈಶ್ವರನಿಗೇ ವಾಚಕವು.** ಆದ್ದರಿಂದ ಆ (ಪ್ರಕೃತಿಪುರುಷರ) ವಿಕಾರಗಳಿಗೂ ಹಾಗೆಯೇ ಈಶ್ವರನು ಆತ್ಮನು. ಅದನ್ನು (ಪುರಾಣವು ಹೀಗೆಂದು) ಹೇಳುತ್ತಿದೆ : 'ವಿಷ್ಣುವು ವ್ಯಕ್ತವೂ ಅವ್ಯಕ್ತವೂ ಪುರುಷನೂ ಕಾಲವೂ (ಆಗಿರುತ್ತಾನೆ)' (ವಿ.ಪು.೧-೨-೧೮), 'ಎಲೈ ಬ್ರಾಹ್ಮಣನೆ, ಆ ಪರಮೇಶ್ವರನೇ ಕ್ಷೋಭಕನೂ ಕ್ಷೋಭ್ಯನೂ (ಆಗಿರುತ್ತಾನೆ)'[2] (ವಿ.ಪು. ೨-೩೧). ಆದ್ದರಿಂದ **ಪ್ರಕೃತಿಪ್ರಕಾರದಿಂದಿರುವ ಪರಮಾತ್ಮನಲ್ಲಿ ಪ್ರಕಾರವಾಗಿರುವ ಪ್ರಕೃತ್ಯಂಶದಲ್ಲಿ ವಿಕಾರವೂ ಪ್ರಕಾರ್ಯಂಶದಲ್ಲಿ ಅವಿಕಾರವೂ (ಇರುತ್ತದೆ) ; ಇದರಂತೆಯೇ ಜೀವಪ್ರಕಾರದಿಂದಿರುವ ಪರಮಾತ್ಮನಲ್ಲಿ ಪ್ರಕಾರವಾಗಿರುವ ಜೀವಾಂಶದಲ್ಲಿ ಎಲ್ಲಾ ಅಪುರುಷಾರ್ಥಗಳೂ (ಇರುತ್ತವೆ), ಪ್ರಕಾರ್ಯಂಶವಾದ ನಿಯಂತೃವು ನಿರವದ್ಯನೂ ಸರ್ವಕಲ್ಯಾಣಗುಣಾಕರನೂ ಸತ್ಯಸಂಕಲ್ಪನೂ ಆಗಿಯೇ ಇರುತ್ತಾನೆ. ಮತ್ತು ಹೀಗಿರುವಲ್ಲಿ ಕಾರಣಾವಸ್ಥೆ(ಯಲ್ಲಿರುವವನು) ಈಶ್ವರನೇ ಆಗಿದ್ದು ಅದು ಉಪಾದಾನವಾಗಿರುವ ಕಾರ್ಯಾವಸ್ಥೆಯಲ್ಲಿರುವವನೂ ಅವನೇ ಆಗಿರುವದರಿಂದ ಕಾರ್ಯಕಾರಣಗಳಿಗೆ ಅನನ್ಯತ್ವವಿರುತ್ತದೆ, ಸರ್ವಶ್ರುತಿಗಳಿಗೂ ಅವಿರೋಧವೂ ಆಗುತ್ತದೆ.**

೪. ಸ್ವರೂಪದಿಂದ ನಿರ್ವಿಕಾರವಾದ ಬ್ರಹ್ಮಕ್ಕೂ ಕಾರ್ಯಕಾರಣಶಬ್ದವಾಚ್ಯತ್ವ

(ಮೂಲ)

೫೨. ತದೇವಂ ನಾಮರೂಪವಿಭಾಗಾನರ್ಹಸೂಕ್ಷ್ಮದಶಾಪನ್ನಪ್ರಕೃತಿ

---

1. ಇಲ್ಲಿಯವರೆಗೆ ಬ್ರಹ್ಮವು ಚಿದ್ರೂಪದಿಂದಲೂ ಅಚಿದ್ರೂಪದಿಂದಲೂ ಪರಿಣಾಮವಾಗುವದೆಂದರೆ ದೋಷವೇನಂಬುದನ್ನು ತಿಳಿಸಿದಂತೆ ಆಯಿತು.
2. ಇದು ಮೈತ್ರೇಯನಿಗೆ ಪರಾಶರರು ಹೇಳಿದ್ದು : 'ಪ್ರಧಾನಪುರುಷರ ಕ್ಷೋಭಕನೂ ಅವನೇ, ಕ್ಷೋಭ್ಯರಾದ ಪ್ರಧಾನಪುರುಷರುಗಳೂ ಅವನೇ' - ಎಂದು ಅಕ್ಷರಾರ್ಥ.

ಪುರುಷಶರೀರಂ ಬ್ರಹ್ಮ ಕಾರಣಾವಸ್ಥಮ್ । ಜಗತಸ್ತದಾಪತ್ತಿರೇವ ಚ ಪ್ರಲಯಃ । ನಾಮರೂಪವಿಭಾಗವಿಭಕ್ತಸ್ಥೂಲಚಿದಚಿದ್ವಸ್ತುಶರೀರಂ ಬ್ರಹ್ಮ ಕಾರ್ಯಾವಸ್ಥಮ್ । ಬ್ರಹ್ಮಣಸ್ತಥಾವಿಧಸ್ಥೂಲಭಾವ ಏವ (ಜಗತಃ) ಸೃಷ್ಟಿರಿತ್ಯುಚ್ಯತೇ । ಯಥೋಕ್ತಂ ಭಗವತಾ ಪರಾಶರೇಣ 'ಪ್ರಧಾನಪುಂಸೋರಜಯೋಃ ಕಾರಣಂ ಕಾರ್ಯಭೂತಯೋಃ' (ವಿ.ಪು.೧-೯-೩೭) ಇತಿ । ತಸ್ಮಾತ್ ಈಶ್ವರಪ್ರಕಾರಭೂತಸರ್ವಾವಸ್ಥಪ್ರಕೃತಿ ಪುರುಷವಾಚಿನಃ ಶಬ್ದಾಸ್ತತ್ತ್ವಕಾರವಿಶಿಷ್ಟತಯಾ ಅವಸ್ಥಿತೇ ಪರಮಾತ್ಮನಿ ಮುಖ್ಯತಯಾ ವರ್ತನ್ತೇ । ಜೀವಾತ್ಮವಾಚಿ (ದೇವಮನುಷ್ಯಾದಿ) ಶಬ್ದವತ್ । ಯಥಾ ದೇವಮನುಷ್ಯಾದಿಶಬ್ದಾ ದೇವಮನುಷ್ಯಾದಿಪ್ರಕೃತಿಪರಿಣಾಮವಿಶೇಷಾಣಾಂ ಜೀವಾತ್ಮಪ್ರಕಾರತಯೈವ ಪದಾರ್ಥತ್ವಾತ್ ಪ್ರಕಾರಿಣಿ ಜೀವಾತ್ಮನಿ ಮುಖ್ಯತಯಾ ವರ್ತನ್ತೇ । ತಸ್ಮಾತ್ ಸರ್ವಸ್ಯ ಚಿದಚಿದ್ವಸ್ತುನಃ ಪರಮಾತ್ಮಶರೀರತಯಾ ತತ್ಪ್ರಕಾರತ್ವಾತ್, ಪರಮಾತ್ಮನಿ ಮುಖ್ಯತಯಾ ವರ್ತನ್ತೇ ಸರ್ವೇ ತದ್ವಾಚಕಾಃ ಶಬ್ದಾಃ ॥

(ಅರ್ಥ)

ಇಂತೀಪರಿಯಲ್ಲಿ ನಾಮರೂಪವಿಭಾಗಾನರ್ಹವಾದಸೂಕ್ಷ್ಮದಶೆಯನ್ನು ಪಡೆದ ಪ್ರಕೃತಿಪುರುಷರೆಂಬ ಶರೀರವುಳ್ಳ ಬ್ರಹ್ಮವು ಕಾರಣಾವಸ್ಥೆ(ಯಲ್ಲಿರುತ್ತದೆ) ; ಆ ಅವಸ್ಥೆಯನ್ನು ಹೊಂದುವದೇ ಜಗತ್ತಿಗೆ ಪ್ರಲಯ(ವೆನಿಸುವದು). ನಾಮರೂಪಗಳ ವಿಭಾಗದಿಂದ ವಿಭಕ್ತವಾಗಿರುವ ಸ್ಥೂಲವಾದ ಚಿದಚಿದ್ವಸ್ತುಗಳೆಂಬ ಶರೀರವುಳ್ಳ ಬ್ರಹ್ಮವು ಕಾರ್ಯಾವಸ್ಥೆ(ಯಲ್ಲಿರುತ್ತದೆ) ;ಬ್ರಹ್ಮವು ಹಾಗೆ ಸ್ಥೂಲತ್ವವನ್ನು (ಪಡೆಯುವದೇ) ಜಗತ್ತಿಗೆ ಸೃಷ್ಟಿಯೆನಿಸುವದು. ಹಾಗೆಂದು ಭಗವಂತನಾದ **ಪರಾಶರನು** ಹೇಳಿರುತ್ತಾನೆ : 'ಅಜರಾದ ಪ್ರಧಾನಪುರುಷರು ಕಾರ್ಯಭೂತರಾಗಲು (ಅವರಿಗೆ) ಕಾರಣನಾಗಿರುವ (ವಿಷ್ಣುವನ್ನು ಶರಣುಹೊಂದಿರಿ)'[1] (ವಿ.ಪು.೧-೯-೩೭). ಆದ್ದರಿಂದ ಈಶ್ವರನ ಪ್ರಕಾರವಾಗಿರುವ ಎಲ್ಲಾ ಅವಸ್ಥೆಗಳೂ ಪ್ರಕೃತಿಪುರುಷರಿಗೂ ವಾಚಕಗಳಾಗಿರುವ ಶಬ್ದಗಳು, ಆ ಪ್ರಕಾರವಿಶಿಷ್ಟನಾಗಿದ್ದು ಕೊಂಡಿರುವ ಪರಮಾತ್ಮನಲ್ಲಿ ಮುಖ್ಯವೃತ್ತಿಯಿಂದ (ವಾಚಕಗಳಾಗಿವೆ). ಜೀವಾತ್ಮನನ್ನು ಹೇಳುವ ದೇವಮನುಷ್ಯಾದಿಶಬ್ದಗಳಂತೆಯೇ ಇದು ; (ಇದರ ವಿವರ) : ಹೇಗೆ ದೇವತೆ, ಮನುಷ್ಯ- ಮುಂತಾದ ಶಬ್ದಗಳು; ದೇವತೆ, ಮನುಷ್ಯ- ಮುಂತಾದ ಪ್ರಕೃತಿಯ ಪರಿಣಾಮವಿಶೇಷಗಳು ಜೀವಾತ್ಮನ ಪ್ರಕಾರವಾಗಿಯೇ ಪದಾರ್ಥವಾಗಿರುವದರಿಂದ ಪ್ರಕಾರಿಯಾದ ಜೀವಾತ್ಮನಲ್ಲಿ ಮುಖ್ಯ(ವೃತ್ತಿ)ಯಿಂದ ಇದ್ದುಕೊಂಡಿರುವವೋ (ಹಾಗೆ ಎಲ್ಲಾ ಶಬ್ದಗಳೂ ಪರಮಾತ್ಮನಲ್ಲಿ ಮುಖ್ಯವೃತ್ತಿಯಿಂದ ಇದ್ದುಕೊಂಡಿರು

1. ಇದು ಬ್ರಹ್ಮನು ದೇವತೆಗಳಿಗೆ ಹೇಳಿದ ವಾಕ್ಯ. ಇಲ್ಲಿ 'ಅಜ' ಎಂಬ ವಿಶೇಷಣವು ಕಾರಣಾವಸ್ಥೆಯಲ್ಲಿಯೂ ಜೀವಪುರುಷರಿದಾರೆಂಬುದನ್ನು ತಿಳಿಸುವದು.

ತ್ತವೆ). ಆದ್ದರಿಂದ ಎಲ್ಲಾ ಚಿದಚಿದ್ವಸ್ತುವೂ ಪರಮಾತ್ಮಶರೀರವಾಗಿರುವದರಿಂದ ಅವನಿಗೆ ಪ್ರಕಾರವಾಗಿದೆಯಾಗಿ ಅದನ್ನುಹೇಳುವ ಶಬ್ದಗಳೆಲ್ಲ ಮುಖ್ಯವೃತ್ತಿಯಿಂದಲೇ ಪರಮಾತ್ಮನಲ್ಲಿ (ವಾಚಕಗಳಾಗಿ ಇರುತ್ತವೆ).

೫. ಪರಮಾತ್ಮನಿಗೂ ಪ್ರಪಂಚಕ್ಕೂ ಶರೀರಶರೀರಿಭಾವ

(ಮೂಲ)

೫೩. ಅಯಮೇವಾ[1]ऽऽತ್ಮಶರೀರಭಾವಃ, ಪೃಥಕ್ಸಿದ್ಧ್ಯನರ್ಹಾಧಾರಾಧೇಯ ಭಾವಃ ನಿಯನ್ತೃನಿಯಾಮ್ಯಭಾವಃ, ಶೇಷಶೇಷಿಭಾವಶ್ಚ । ಸರ್ವಾತ್ಮನಾ ಆಧಾರತಯಾ ನಿಯನ್ತೃತಯಾ ಶೇಷಿತಯಾ ಚಾऽऽಪ್ನೋತೀತ್ಯಾತ್ಮಾ । ಸರ್ವಾತ್ಮನಾ ಆಧೇಯತಯಾ ನಿಯಾಮ್ಯತಯಾ ಶೇಷತಯಾ ಚ ಅಪೃಥಕ್ಸಿದ್ಧಂ ಪ್ರಕಾರಭೂತಮಿತಿ ಆಕಾರಃ ಶರೀರಮ್ ಇತಿ ಚೋಚ್ಯತೇ । ಏವಮೇವ ಹಿ ಜೀವಾತ್ಮನಃ ಸ್ವಶರೀರಸಂಬನ್ಧಃ । ಏವಮೇವ ಪರಮಾತ್ಮನಃ ಸರ್ವಶರೀರತ್ವೇನ ಸರ್ವಶಬ್ದ ವಾಚ್ಯತ್ವಮ್ ॥

(ಅರ್ಥ)

ಈ ಆತ್ಮಶರೀರಭಾವವೇ ಪೃಥಕ್ಸಿದ್ಧ್ಯನರ್ಹವಾದ ಆಧಾರಾಧೇಯಭಾವವು, ನಿಯಂತೃನಿಯಾಮ್ಯಭಾವವು, ಶೇಷಶೇಷಿಭಾವವು. **ಸರ್ವಾತ್ಮನಾ[2] (ಎಲ್ಲಾ ಬಗೆಯಿಂದಲೂ) ಆಧಾರವಾಗಿ ನಿಯಂತೃವಾಗಿ ಶೇಷಿಯಾಗಿ ವ್ಯಾಪಿಸಿಕೊಂಡಿರು ತ್ತಾನಾದ್ದರಿಂದ ಆತ್ಮನು ; ಸರ್ವಾತ್ಮನಾ ಆಧೇಯವಾಗಿ, ನಿಯಾಮ್ಯವಾಗಿ ಶೇಷವಾಗಿ ಅಪೃಥಕ್ಸಿದ್ಧವಾದದ್ದು ಪ್ರಕಾರವಾಗಿರುತ್ತದೆಯಾದ್ದರಿಂದ ಆಕಾರವು, ಶರೀರವು** - ಎನಿಸಿಕೊಳ್ಳುತ್ತದೆ. ಹೀಗೆಯೇ ಅಲ್ಲವೆ, ಜೀವಾತ್ಮನಿಗೆ ತನ್ನ ಶರೀರಸಂಬಂಧವಿರು ವದು[3]? ಹೀಗೆಯೇ ಪರಮಾತ್ಮನಿಗೆ ಎಲ್ಲವೂ ಶರೀರವಾಗಿರುವದರಿಂದ **ಸರ್ವಶಬ್ದ ವಾಚ್ಯತ್ವವು** (ಇರುತ್ತದೆ).

---

1. 'ಅಯಮೇವ ಚಾತ್ಮಶರೀರಭಾವ' ಕಾ॥

2. ಈ ಮಾತನ್ನು ಕನ್ನಡಿಸದೆ ಹಾಗೆಯೇ ಇಟ್ಟಿದೆ. 'ಯಾವದ್ದ್ರವ್ಯಭಾವಿತಯಾ' ಪೂರ್ತಿಯಾಗಿ ದ್ರವ್ಯದಲ್ಲೆಲ್ಲ ಇದ್ದುಕೊಂಡು- ಎಂದು ಟೀಕೆಯಲ್ಲಿ ಇದಕ್ಕೆ ವ್ಯಾಖ್ಯಾನಮಾಡಿದೆ.

3. ಜೀವಾತ್ಮನು ಶರೀರವನ್ನು ಸರ್ವಾತ್ಮನಾ ಆಧಾರವಾಗಿ ನಿಯಂತೃವಾಗಿ ಶೇಷಿಯಾಗಿ ವ್ಯಾಪಿಸಿಕೊಂಡಿರುತ್ತಾನೆ ; ಶರೀರವು ಸರ್ವಾತ್ಮನಾ ಆಧೇಯವಾಗಿ ನಿಯಾಮ್ಯವಾಗಿ ಶೇಷವಾಗಿದೆ, ಆತ್ಮನಿಗಿಂತ ಪೃಥಕ್ಸಿದ್ಧವಾಗದೆಯೂ ಇದೆ.

ಪರಮಾತ್ಮನು ಸರ್ವಶಬ್ದವಾಚ್ಯನೆಂಬುದಕ್ಕೆ ಶ್ರುತಿಸ್ಮೃತಿಪುರಾಣಪ್ರಮಾಣ

(ಮೂಲ)

೫೪. ತದಾಹ ಶ್ರುತಿಗಣಃ । 'ಸರ್ವೇ ವೇದಾ ಯತ್ಪದಮಾಮನನ್ತಿ' (ಕ. ೧-೨-೧೫), 'ಸರ್ವೇ ವೇದಾ ಯತ್ಪೈಕಂ ಭವನ್ತಿ' (ತೈ.ಆ.೩-೧೧-೨೦) ಇತಿ ತಸ್ಯೈಕಸ್ಯ ವಾಚ್ಯತ್ವಾತ್ ಏಕಾರ್ಥವಾಚಿನೋ ಭವನ್ತಿ ಇತ್ಯರ್ಥಃ । 'ಏಕೋ ದೇವೋ ಬಹುಧಾ ಸಂನಿವಿಷ್ಟಃ' (ತೈ. ಆ. ೩-೧೪-೪೧), 'ಸಹೈವ ಸನ್ತಂ ನ ವಿಜಾನನ್ತಿ ದೇವಾಃ' (ತೈ. ಆ. ೩-೧೧-೨೪) ಇತ್ಯಾದಿ । ದೇವಾಃ ಇನ್ದ್ರಿಯಾಣಿ । ದೇವಮನುಷ್ಯಾದೀನಾಮ್ ಅನ್ತರ್ಯಾಮಿತಯಾ ಆತ್ಮತ್ವೇನ ನಿವಿಶ್ಯ ಸಹೈವ ಸನ್ತಂ ತೇಷಾಮ್ ಇನ್ದ್ರಿಯಾಣಿ ಮನಃಪರ್ಯನ್ತಾನಿ ನ ವಿಜಾನನ್ತಿ ಇತ್ಯರ್ಥಃ॥

ತಥಾ ಚ ಪೌರಾಣಿಕಾನಿ ವಚಾಂಸಿ 'ನತಾಃ ಸ್ಮ ಸರ್ವವಚಸಾಂ ಪ್ರತಿಷ್ಠಾ ಯತ್ರ ಶಾಶ್ವತೀ' (ವಿ.ಪು.೧-೧೪-೨೩), ವಾಚ್ಯೇ ಹಿ ವಚಸಃ ಪ್ರತಿಷ್ಠಾ । 'ಕಾರ್ಯಾಣಾಂ ಕಾರಣಂ ಪೂರ್ವಂ ವಚಸಾಂ ವಾಚ್ಯಮುತ್ತಮಮ್' (ಜಿತಂ. ತೇ ೭), 'ವೇದೈಶ್ಚ ಸರ್ವೈರಹಮೇವ ವೇದ್ಯಃ' (ಗೀ. ೧೫-೧೫)- ಇತ್ಯಾದೀನಿ ಸರ್ವಾಣಿ ಹಿ ವಚಾಂಸಿ ಸಶರೀರಾತ್ಮವಿಶಿಷ್ಟಮ್ ಅನ್ತರ್ಯಾಮಿಣಮೇವ ಆಚಕ್ಷತೇ । 'ಹನ್ತಾಽಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾಽಽತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾಂ. ೬-೩-೨) ಇತಿ ಹಿ ಶ್ರುತಿಃ ॥

ತಥಾ ಚ ಮಾನವಂ ವಚಃ 'ಪ್ರಶಾಸಿತಾರಂ ಸರ್ವೇಷಾಮಣೀಯಾಂಸಮಣೀಯಸಾಮ್ । ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ತು[1] ಪುರುಷಂ ಪರಮ್ ।' (ಮನು. ೧೨-೧೨೨) । ಅನ್ತಃ ಪ್ರವಿಶ್ಯಾಽನ್ತರ್ಯಾಮಿತಯಾ ಸರ್ವೇಷಾಂ ಪ್ರಶಾಸಿತಾರಂ ನಿಯನ್ತಾರಮ್ । ಅಣೀಯಾಂಸ ಆತ್ಮಾನಃ ಕೃತ್ಸ್ನಸ್ಯಾಚೇತನಸ್ಯ ವ್ಯಾಪಕತಯಾ ಸೂಕ್ಷ್ಮಭೂತಾಸ್ತೇ । ತೇಷಾಮಪಿ ವ್ಯಾಪಕತ್ವಾತ್ ತೇಭ್ಯೋಽಪಿ ಸೂಕ್ಷ್ಮತರ ಇತ್ಯರ್ಥಃ । ರುಕ್ಮಾಭಃ, ಆದಿತ್ಯವರ್ಣಃ । ಸ್ವಪ್ನಧೀಗಮ್ಯಃ, ಸ್ವಪ್ನಕಲ್ಪಬುದ್ಧಿಪ್ರಾಪ್ಯಃ । ವಿಶದತಮಪ್ರತ್ಯಕ್ಷತಾಪನ್ನಾನುಧ್ಯಾನೈಕಲಭ್ಯ[2] ಇತ್ಯರ್ಥಃ । 'ಏನಮೇಕೇ ವದನ್ತ್ಯಗ್ನಿಂ ಮರುತೋಽನ್ಯೇ ಪ್ರಜಾಪತಿಮ್ । ಇನ್ದ್ರಮೇಕೇ ಪರೇ ಪ್ರಾಣಮಪರೇ ಬ್ರಹ್ಮ ಶಾಶ್ವತಮ್' (ಮನು. ೧೨-೧೨೩) ಇತಿ । ಏಕೇ, ವೇದಾ ಇತ್ಯರ್ಥಃ । ಉಕ್ತರಿತ್ಯಾ ಪರಸ್ಯೈವ ಬ್ರಹ್ಮಣಃ ಸರ್ವಸ್ಯ ಪ್ರಶಾಸಿತೃತ್ವೇನ

---

1. 'ಆಣೋರಪಿ ; ವಿದ್ಯಾತ್ತಂ' ಎಂದು ಆಚ್ಚಿನ ಪಾಠ.
2. 'ಅನುಶಾಸನೈಕಲಭ್ಯಃ' ಎಂಬ ತೆ॥ ಪಾಠಕ್ಕಿಂತ ಈ ಕಾ॥ ಪಾಠವೇ ಮೇಲು.

ಸರ್ವಾನ್ತರಾತ್ಮತಯಾ ಪ್ರವಿಶ್ಯಾವಸ್ಥಿತತ್ವಾತ್ ಅಗ್ನ್ಯಾದಯೋಽಪಿ ಶಬ್ದಾಃ ಶಾಶ್ವತಬ್ರಹ್ಮಶಬ್ದವತ್ ತಸ್ಯೈವ ವಾಚಕಾ ಭವನ್ತೀತ್ಯರ್ಥಃ । ತಥಾ ಚ ಸ್ಮೃತ್ಯನ್ತರಮ್ 'ಯೇ ಯಜನ್ತಿ ಪಿತೄನ್ ದೇವಾನ್ ಬ್ರಾಹ್ಮಣಾನ್ ಸ ಹುತಾಶನಾನ್ । ಸರ್ವಭೂತಾನ್ತರಾತ್ಮಾನಂ ವಿಷ್ಣುಮೇವ ಯಜನ್ತಿ ತೇ ॥' (ದಕ್ಷ?) ಇತಿ । ಪಿತೃದೇವಬ್ರಾಹ್ಮಣಹುತಾಶನಾದಿಶಬ್ದಾಃ, ತನ್ಮುಖೇನ ತದನ್ತರಾತ್ಮಭೂತಸ್ಯ ವಿಷ್ಣೋರೇವ ವಾಚಕಾ ಇತ್ಯುಕ್ತಂ ಭವತಿ ॥

(ಅರ್ಥ)

ಇದನ್ನೇ **ಶ್ರುತಿಸಮೂಹವು** ಹೇಳುತ್ತಿದೆ ; (ಹೇಗೆಂದರೆ) : 'ಎಲ್ಲಾ ವೇದಗಳೂ ಯಾವ ಪದವನ್ನು[1] ಹೇಳುತ್ತಿವೆಯೋ' (ಕ. ೧-೨-೧೫) ; 'ಎಲ್ಲಾ ವೇದಗಳೂ ಎಲ್ಲಿ ಒಂದಾಗಿರುವವೋ' (ತೈ. ಆ. ೩-೧೧-೨೦) (ಎಂದರೆ) ಅವನೊಬ್ಬನೇ ವಾಚ್ಯನಾಗಿರುವದರಿಂದ ಒಂದೇ ಅರ್ಥವನ್ನು ಹೇಳುವವಾಗಿರುತ್ತ-ವೆಯೋ[2] ಎಂದರ್ಥ ; 'ಒಬ್ಬ ದೇವನೇ ಬಹು(ಪ್ರಕಾರ)ವಾಗಿ ಇದ್ದುಕೊಂಡಿರುತ್ತಾನೆ[3]' (ತೈ. ಆ. ೩-೧೪-೪೧) ; 'ಜೊತೆಯಲ್ಲಿಯೇ ಇರುವವನನ್ನು ದೇವತೆಗಳು ಅರಿಯದೆ ಇರುತ್ತಾರೆ' (ತೈ. ಆ. ೩-೧೪-೪೧). (ಇಲ್ಲಿ) ದೇವತೆಗಳೆಂದರೆ ಇಂದ್ರಿಯಗಳು ; ದೇವಮನುಷ್ಯಾದಿಗಳಿಗೆ ಅಂತರ್ಯಾಮಿಯಾಗಿ ಆತ್ಮನಾಗಿ ಪ್ರವೇಶಿಸಿ ಜೊತೆಯಲ್ಲಿಯೇ ಇರುವ (ಪರಮಾತ್ಮನನ್ನು) ಅವರ ಮನಃಪರ್ಯಂತ-ವಾದ ಇಂದ್ರಿಯಗಳು ಅರಿಯದೆ ಇರುವವು ಎಂದರ್ಥ.

ಹೀಗೆಂದು **ಪೌರಾಣಿಕವಚನಗಳೂ** (ಇವೆ) : 'ಸರ್ವವಚನಗಳಿಗೂ ಎಲ್ಲಿ ನಿತ್ಯಪ್ರತಿಷ್ಠೆಯೂ (ಇರುವದೋ ಆ ಪ್ರಭುವನ್ನು) ನಮಿಸುತ್ತೇವೆ'[4] (ವಿ.ಪು. ೧-೧೪-೨೩). ವಾಚ್ಯದಲ್ಲಲ್ಲವೆ, ವಚನಕ್ಕೆ ಪ್ರತಿಷ್ಠೆ[5]? 'ಕಾರ್ಯಗಳಿಗೆ ಮೊದಲಿರುವ ಕಾರಣವೂ, ವಚನಗಳಿಗೆ ಉತ್ತಮವಾದ ವಾಚ್ಯವೂ' (ಜಿತಂ. ತೇ. ೭) 'ಎಲ್ಲಾ ವೇದ-ಗಳಿಂದಲೂ ತಿಳಿಯಬರತಕ್ಕವನು ನಾನೇ' (ಗೀ. ೧೫-೧೫) -ಇವೇ ಮುಂತಾದ ಸರ್ವವಚನಗಳೂ ಸಶರೀರನಾದ ಆತ್ಮನಿಂದೊಡಗೂಡಿದ ಅಂತರ್ಯಾಮಿಯನ್ನೇ ಹೇಳುತ್ತವೆ. 'ಒಳ್ಳೆಯದು, ನಾನು ಈ ಮೂರು ದೇವತೆಗಳನ್ನು ಈ ಜೀವನಿಂದ (ಅಂತರ್ಯಾಮಿಯಾದ) ಆತ್ಮನಾಗಿ ಒಳಹೊಕ್ಕು ನಾಮರೂಪಗಳನ್ನು ವ್ಯಾಕರಣ ಮಾಡುವೆನು' (ಛಾಂ. ೬-೩-೨) ಎಂದಲ್ಲವೆ, ಶ್ರುತಿ?

---

1. ಪ್ರಾಪ್ಯವಾದ ಬ್ರಹ್ಮವನ್ನು. 2. ವಿಕವಾಕ್ಯತೆಯುಳ್ಳವಾಗಿವೆಯೋ.
3. ಆದ್ದರಿಂದ ಸರ್ವಶಬ್ದವಾಚ್ಯನಾಗಿರುತ್ತಾನೆ.
4. ಇದು ಪ್ರಚೇತಸರು ಪರಮಾತ್ಮನನ್ನು ಸ್ತೋತ್ರಮಾಡಿದಾಗ ಹೇಳಿದ ವಾಕ್ಯ.
5. ನಿಲುಗಡೆಯ ಸ್ಥಾನ.

ಮನುವಚನವೂ ಹೀಗೆಂದೇ ಇದೆ : 'ಎಲ್ಲರಿಗೂ ಪ್ರಶಾಸಿತೃವಾಗಿ ಅಣೀಯಸರಾದವರಿಗಿಂತಲೂ ಅಣೀಯಸನಾಗಿ ರುಕ್ಮಾಭನೂ ಸ್ವಪ್ನಧೀಗಮ್ಯನೂ ಆಗಿರುವವನನ್ನೇ ಪರಮಪುರುಷನೆಂದು ತಿಳಿಯಬೇಕು' (ಮನು. ೧೨-೧೨೨). ಒಳಹೊಕ್ಕು ಅಂತರ್ಯಾಮಿಯಾಗಿರುವದರಿಂದ ಎಲ್ಲರಿಗೂ ಪ್ರಶಾಸಿತೃವಾಗಿರುವ, (ಎಲ್ಲರನ್ನೂ) ನಿಯಮಿಸುತ್ತಿರುವ (ಎಂದರ್ಥ). ಅಣೀಯಸರೆಂದರೆ ಆತ್ಮರು, ಅಚೇತನವೆಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ಸೂಕ್ಷ್ಮರಾಗಿರುವವರು; ಅವರನ್ನು ಕೂಡ ವ್ಯಾಪಿಸಿಕೊಂಡಿರುವದರಿಂದ ಅವರಿಗಿಂತಲೂ (ಅಣೀಯಸನು ಎಂದರೆ) ಹೆಚ್ಚು ಸೂಕ್ಷ್ಮವಾಗಿರುವವನು ಎಂದರ್ಥ. ರುಕ್ಮಾಭನೆಂದರೆ ಆದಿತ್ಯ ವರ್ಣನು ; ಸ್ವಪ್ನಧೀಗಮ್ಯನು ಎಂದರೆ ಸ್ವಪ್ನಸದೃಶವಾದ ಬುದ್ಧಿಯಿಂದ ತಿಳಿದುಕೊಳ್ಳ ಬೇಕಾಗಿರುವವನು, ವಿಶದತಮವಾದ ಪ್ರತ್ಯಕ್ಷತೆಯನ್ನು ಪಡೆದ[1] ಅನುಧ್ಯಾನವೊಂದ ರಿಂದಲೇ ಪಡೆದುಕೊಳ್ಳಬಹುದಾದವನು ಎಂದರ್ಥ. 'ಇವನನ್ನು ಕೆಲವು ಅಗ್ನಿಯೆನ್ನುವವು, ಮರುತ್ತರೆಂದು ಬೇರೆಯವು (ಹೇಳುತ್ತಿರುವವು) ; ಪ್ರಜಾಪತಿಯೆಂದು ಕೆಲವು, ಇಂದ್ರನೆಂದು ಕೆಲವು, ಪ್ರಾಣನೆಂದು ಬೇರೆ ಕೆಲವು, ಇನ್ನು ಕೆಲವು ಶಾಶ್ವತವಾದ ಬ್ರಹ್ಮವೆನ್ನುವವು' (ಮನು. ೧೨-೧೨೩). ಇಲ್ಲಿ (ಏಕೇ= ಕೆಲವು ಎಂದರೆ) ಕೆಲವು ವೇದಗಳು[2] ಎಂದರ್ಥ. **(ಈ) ಹೇಳಿದ ರೀತಿಯಲ್ಲಿ ಪರಬ್ರಹ್ಮವೇ ಸರ್ವರ ಅಂತರಾತ್ಮನಾಗಿ ಒಳಹೊಕ್ಕು ಎಲ್ಲಕ್ಕೂ ಪ್ರಶಾಸಿತೃವಾಗಿದ್ದು ಕೊಂಡಿರುವದರಿಂದ ಅಗ್ನಿ ಮುಂತಾದ ಶಬ್ದಗಳೂ ಶಾಶ್ವತ ಬ್ರಹ್ಮ- ಎಂಬ ಶಬ್ದಗಳಂತೆಯೇ ಆ (ಬ್ರಹ್ಮಕ್ಕೆ) ವಾಚಕಗಳಾಗಿರುತ್ತವೆ ಎಂದರ್ಥ.** ಹೀಗೆಂದು **ಮತ್ತೊಂದು ಸ್ಮೃತಿಯೂ** ಇದೆ : 'ಯಾರು ಪಿತೃಗಳನ್ನೂ ದೇವತೆಗಳನ್ನೂ ಅಗ್ನಿಸಹಿತರಾದ ಬ್ರಾಹ್ಮಣರನ್ನೂ ಪೂಜಿಸುವರೋ ಅವರು ಸರ್ವಭೂತಗಳಿಗೂ ಅಂತರಾತ್ಮನಾದ ವಿಷ್ಣುವನ್ನೇ ಪೂಜಿಸುವರು' (ದಕ್ಷ.?). ಪಿತೃಗಳು, ದೇವತೆಗಳು, ಬ್ರಾಹ್ಮಣರು, ಅಗ್ನಿ- ಇವೇ ಮುಂತಾದ ಶಬ್ದಗಳು ಆಯಾ (ವಸ್ತುಗಳ) ದ್ವಾರದಿಂದ ಅವುಗಳಿಗೆ ಅಂತರಾತ್ಮನಾಗಿರುವ ವಿಷ್ಣುವಿಗೇ ವಾಚಕಗಳು ಎಂದು ಹೇಳಿದಂತೆ ಆಯಿತು.

ಶಾಸ್ತ್ರೋಪದೇಶದ ಸಾರ

(ಮೂಲ)

೫೫. ಅತ್ರೇದಂ ಸರ್ವಶಾಸ್ತ್ರಹೃದಯಮ್ । ಜೀವಾತ್ಮಾನಃ ಸ್ವಯಮಸಂ-ಕುಚಿತಾಪರಿಚ್ಛಿನ್ನನಿರ್ಮಲಜ್ಞಾನಸ್ವರೂಪಾಃ ಸನ್ತಃ ಕರ್ಮರೂಪಾವಿದ್ಯಾವೇಷ್ಟಿತಾಃ

---

1. ಸಾಕ್ಷಾತ್ಕಾರರೂಪವನ್ನು ತಳೆದ. 2. ಕೆಲವರು ಎಂದರ್ಥವಲ್ಲವೆಂದು ಅಭಿಪ್ರಾಯ.

ತತ್ತತ್ಕರ್ಮಾನುರೂಪಜ್ಞಾನಸಂಕೋಚಮಾಪನ್ನಾಃ, ಬ್ರಹ್ಮಾದಿಸ್ತಮ್ಬಪರ್ಯನ್ತವಿವಿಧ ವಿಚಿತ್ರದೇಹೇಷು ಪ್ರವಿಷ್ಟಾಃ, ತತ್ತದ್ದೇಹೋಚಿತಲಬ್ಧಜ್ಞಾನಪ್ರಸರಾಃ, ತತ್ತ-ದ್ದೇಹಾತ್ಮಾಭಿಮಾನಿನಃ, ತದುಚಿತಕರ್ಮಾಣಿ ಕುರ್ವಾಣಾಃ, ತದನುಗುಣಸುಖ ದುಃಖೋಪಭೋಗರೂಪಸಂಸಾರಪ್ರವಾಹಂ ಪ್ರತಿಪದ್ಯನ್ತೇ । ಏತೇಷಾಂ ಸಂಸಾರಮೋಚನಂ ಭಗವತ್ಪ್ರಪತ್ತಿಮನ್ತರೇಣ ನೋಪಪದ್ಯತ ಇತಿ ತದರ್ಥಂ ಪ್ರಥಮಮೇಷಾಂ ದೇವಾದಿಭೇದರಹಿತಜ್ಞಾನೈಕಾಕಾರತಯಾ ಸರ್ವೇಷಾಂ ಸಾಮ್ಯಂ ಪ್ರತಿಪಾದ್ಯ, ತಸ್ಯಾಪಿ ಸ್ವರೂಪಸ್ಯ ಭಗವಚ್ಛೇಷತೈಕಸ್ವರೂಪೈಕರಸತಯಾ ಭಗವದಾತ್ಮಕತಾಮಪಿ ಪ್ರತಿಪಾದ್ಯ, ಭಗವತ್ಸ್ವರೂಪಂ ಚ ಹೇಯಪ್ರತ್ಯನೀಕ ಕಲ್ಯಾಣೈಕತಾನತಯಾ ಸಕಲೇತರವಿಸಜಾತೀಯಮ್ ಅನವಧಿಕಾತಿಶಯಾ ಸಙ್ಖ್ಯೇಯಕಲ್ಯಾಣಗುಣಗಣಾಲಯಮ್, ಸ್ವಸಙ್ಕಲ್ಪಪ್ರವೃತ್ತಸಮಸ್ತಚಿದಚಿದ್ವಸ್ತು ಜಾತತಯಾ ಸರ್ವಸ್ಯಾಽಽತ್ಮಭೂತಂ ಪ್ರತಿಪಾದ್ಯ, ತದುಪಾಸನಂ ಸಾಙ್ಗಂ ತತ್ಪ್ರಾಪಕಂ ಪ್ರತಿಪಾದಯನ್ತಿ ಶಾಸ್ತ್ರಾಣೀತಿ ॥

(ಅರ್ಥ)

ಇಲ್ಲಿ ಇದೇ **ಸರ್ವಶಾಸ್ತ್ರಗಳ ಹೃದಯವು. ಜೀವಾತ್ಮರು**ಗಳು ತಾವು ತಾವು ಸಂಕುಚಿತವಾಗದ ಪರಿಚ್ಛೇದವಿಲ್ಲದ ನಿರ್ಮಲವಾದ ಜ್ಞಾನದ ಸ್ವರೂಪರೇ[1] ಆಗಿದ್ದುಕೊಂಡು ಕರ್ಮರೂಪವಾದ ಅವಿದ್ಯೆಯಿಂದ ಆವೃತರಾಗಿ ಆಯಾ ಕರ್ಮಕ್ಕೆ ಅನುರೂಪವಾದ ಜ್ಞಾನಸಂಕೋಚವನ್ನು ಹೊಂದಿದವರಾಗಿ ಬ್ರಹ್ಮಾದಿಸ್ತಂಬ ಪರ್ಯಂತವಾದ ವಿವಿಧ ವಿಚಿತ್ರದೇಹಗಳಲ್ಲಿ ಹೊಕ್ಕು ಆಯಾ ದೇಹಕ್ಕೆ ತಕ್ಕಂತೆ ಜ್ಞಾನವಿಕಾಸವನ್ನು ಪಡದುಕೊಂಡು ಆಯಾ ದೇಹಗಳಲ್ಲಿಯೇ ಅಭಿಮಾನವುಳ್ಳವ-ರಾಗಿ ಅದಕ್ಕೆ ತಕ್ಕ ಕರ್ಮಗಳನ್ನು ಮಾಡುತ್ತಾ[2] ಅದಕ್ಕೆ ಅನುಗುಣವಾಗಿ ಸುಖದುಃಖ-ಗಳ ಉಪಭೋಗರೂಪವಾದ ಸಂಸಾರಪ್ರವಾಹವನ್ನು ಸೇರುತ್ತಿರುವರು. ಇವರಿಗೆ ಸಂಸಾರದಿಂದ ಬಿಡುಗಡೆಯು ಭಗವಂತನ ಪ್ರಪತ್ತಿ[3]ಯಿಲ್ಲದೆ ಆಗಲಾರದಾದ್ದರಿಂದ ಅದಕ್ಕಾಗಿ ಮೊದಲು ಇವರುಗಳಿಗೆಲ್ಲ ದೇವಾದಿಭೇದವಿಲ್ಲದ ಜ್ಞಾನವೆಂಬ ಒಂದೇ ಆಕಾರವಿರುವದರಿಂದ **ಸಾಮ್ಯ**(ವಿದೆಯೆಂದು) ತಿಳಿಸಿಕೊಟ್ಟು, ಆ (ಜ್ಞಾನ)

---

1. ಇಲ್ಲಿ ಸ್ವರೂಪವೆಂದರೆ 'ಧರ್ಮ'ವೆಂದು **ಟೀಕೆ.**
2. ಕರ್ಮವನ್ನು ಮಾಡುವದು ಆಯಾ ಶರೀರಸಂಬಂಧವನ್ನು ಪಡೆದು ಸುಖದುಃಖವನ್ನು ಅನುಭವಿಸುವದು- ಇವು ಬೀಜಾಂಕುರನ್ಯಾಯದಿಂದ ಅನಾದಿಯೆಂದು ಭಾವ. ವೇ.ಸೂ. ೨-೧-೩೫ರ ಭಾಷ್ಯವನ್ನು ನೋಡಿ.
3. ಭಕ್ತಿಯೋಗಸಿದ್ಧನಿಗೂ ಕೂಡ ಅದಕ್ಕಾಗಿ ಪ್ರಪತ್ತಿಯು ಬೇಕು, ಪ್ರಪತ್ತಿಯು ಸ್ವತಂತ್ರವಾಗಿಯೇ ಉಪಾಯವಾಗಿದೆ ; ಆದ್ದರಿಂದ 'ಪ್ರಪತ್ತಿಯಿಲ್ಲದೆ ಆಗಲಾರದು' ಎಂದಿದೆ ಎಂದು **ಟೀಕೆ.**

ಸ್ವರೂಪವುಕೂಡ **ಭಗವಂತನಿಗೆ ಶೇಷ**ವಾಗಿರುವದೆಂಬ ಒಂದೇಸ್ವರೂಪದ ಏಕರಸವೇ ಇರುವದರಿಂದ (ಅವರೆಲ್ಲರಿಗೂ) ಭಗವಂತನೇ ಆತ್ಮನು ಎಂದು ತಿಳಿಸಿಕೊಟ್ಟು[1], **ಭಗವತ್ಸ್ವರೂಪವೂ** ಹೇಯ(ಗುಣ)ಗಳಿಗೆ ವಿರುದ್ಧವಾಗಿ ಕಲ್ಯಾಣೈಕ ತಾನವಾಗಿರುವದರಿಂದ[2] ಮಿಕ್ಕೆಲ್ಲಕ್ಕಿಂತಲೂ ವಿಸಜಾತೀಯವೂ ಅನವಧಿಕವೂ ಅನತಿಶಯವೂ ಆದ ಅಸಂಖ್ಯೇಯಕಲ್ಯಾಣಗುಣಗಣಗಳಿಗೆ ಆಲಯವಾಗಿದ್ದು[3] ತನ್ನ ಸಂಕಲ್ಪದಿಂದ ಪ್ರವರ್ತಿಸುತ್ತಿರುವ ಸಮಸ್ತಚಿದಚಿದ್ವಸ್ತುಗಳುಳ್ಳದ್ದಾದ್ದರಿಂದ ಎಲ್ಲಕ್ಕೂ ಆತ್ಮಭೂತವೂ[4] ಎಂದು ತಿಳಿಸಿಕೊಟ್ಟು ಆ (ಬ್ರಹ್ಮಕ್ಕೆ) ಪ್ರಾಪಕವಾದ ಆದರ **ಉಪಾಸನೆ**ಯನ್ನು ಸಾಂಗವಾಗಿ ಶಾಸ್ತ್ರಗಳು ತಿಳಿಸಿಕೊಡುತ್ತವೆ.

ಈ ಹೇಳಿದ ವಿಷಯಕ್ಕೆ ಪ್ರಮಾಣವಚನಗಳು

(ಮೂಲ)

೫೬. ಯಥೋಕ್ತಮ್ 'ನಿರ್ವಾಣಮಯ ಏವಾಽಯಮಾತ್ಮಾ ಜ್ಞಾನಮಯೋಽಮಲಃ । ದುಃಖಾಜ್ಞಾನಮಲಾ ಧರ್ಮಾಃ ಪ್ರಕೃತೇಸ್ತೇ ನ ಚಾಽಽತ್ಮನಃ[5]' (ವಿ.ಪು. ೬-೭-೨೨) ಪ್ರಕೃತಿಸಂಸರ್ಗಕೃತಕರ್ಮಮೂಲತ್ವಾನ್ನಾತ್ಮ ಸ್ವರೂಪಪ್ರಯುಕ್ತಾ ಧರ್ಮಾ ಇತ್ಯರ್ಥಃ । ಪ್ರಾಪ್ತಾಪ್ರಾಪ್ತವಿವೇಕೇನ ಪ್ರಕೃತೇರೇವ ಧರ್ಮಾ ಇತ್ಯುಕ್ತಮ್ । 'ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ । ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ ॥' (ಗೀ. ೫-೧೮) ಇತಿ । ದೇವತಿರ್ಯಙ್ಮನುಷ್ಯಸ್ಥಾವರಪ್ರಕೃತಿಸಂಸೃಷ್ಟಸ್ಯಾಽಽತ್ಮನಃ ಸ್ವರೂಪವಿವೇಚನೇ ಬುದ್ಧಿರ್ಯೇಷಾಂ ತೇ 'ಪಣ್ಡಿತಾಃ' । ತತ್ತತ್ಪ್ರಕೃತಿವಿಶೇಷವಿವಿಕ್ತಾತ್ಮ[6]ಯಾಥಾತ್ಮ್ಯ ಜ್ಞಾನವನ್ತಃ, ತತ್ರ ತತ್ರಾತ್ಯನ್ತವಿಷಮಾಕಾರೇ ವರ್ತಮಾನಮಾತ್ಮಾನಂ ಸಮಾನಾಕಾರಂ ಪಶ್ಯನ್ತೀತಿ 'ಸಮದರ್ಶಿನ' ಇತ್ಯುಕ್ತಮ್ । ತದಿದಮಾಹ 'ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ । ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ '' ॥ (ಗೀ. ೫-೧೯) ಇತಿ । ನಿರ್ದೋಷಮ್ ದೇವಾದಿ ಪ್ರಕೃತಿವಿಶೇಷ

---

1. ಜ್ಞಾನವೇ ಮುಖ್ಯಾಕಾರವಾಗಿರುವದೂ ಭಗವಂತನಿಗೇ ಶೇಷರಾಗಿರುವದೂ ಜೀವಾತ್ಮದ ಸ್ವರೂಪವು.
2. 'ಹೇಯಪ್ರತ್ಯನೀಕ' ಎಂಬುದರಿಂದ ಮಂಗಲಗುಣಾಶ್ರಯತ್ವವೂ 'ಕಲ್ಯಾಣೈಕ ತಾನತಾ' ಎಂಬುದರಿಂದ ಆನಂದರೂಪತ್ವವೂ ಉಕ್ತವಾಗಿವೆ ಎಂದು **ಟೀಕೆ.**
3. 'ಆಶ್ರಯವಾಗಿದ್ದು' ಎಂದು ಪಾಠಾಂತರದ ಕನ್ನಡ.
4. ಶರೀರಕ್ಕೆ ಆತ್ಮನಿರುವಂತೆ ನಿಯಾಮಕವೂ.
5. 'ತೇ ತು ನಾತ್ಮನಃ' ಎಂದು ಅಚ್ಚಿನ ಪಾಠ. 6. 'ವಿಯುಕ್ತಾತ್ಮ' ಪಾ॥

ಸಂಸರ್ಗರೂಪದೋಷರಹಿತಮ್ । ಸ್ವರೂಪೇಣಾವಸ್ಥಿತಮ್ । ಸರ್ವಮ್ ಆತ್ಮವಸ್ತು ನಿರ್ವಾಣರೂಪಜ್ಞಾನೈಕಾಕಾರತಯಾ ಸಮಮ್ ಇತ್ಯರ್ಥಃ ॥

ತಸ್ಯೈವಂಭೂತಸ್ಯ ಆತ್ಮನಃ ಭಗವಚ್ಛೇಷತೈಕರಸತಾ, ತನ್ನಿಯಾಮ್ಯತಾ ತದೇಕಾಧಾರತಾ ಚ ತಚ್ಛರೀರತತ್ತನುಪ್ರಭೃತಿಭಿಃ ಶಬ್ದೈಸ್ತತ್ಸಾಮಾನಾಧಿಕರಣ್ಯೇನ ಚ ಶ್ರುತಿಸ್ಮೃತೀತಿಹಾಸಪುರಾಣೇಷು ಪ್ರತಿಪಾದ್ಯತ ಇತಿ ಪೂರ್ವಮೇವೋಕ್ತಮ್ । 'ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ । ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥' (ಗೀ. ೭-೧೪) ಇತಿ[1] । ತಸ್ಯೈತಸ್ಯಾಽಽತ್ಮನಃ ಕರ್ಮಕೃತವಿಚಿತ್ರಗುಣಮಯಪ್ರಕೃತಿಸಂಸರ್ಗರೂಪಾತ್ ಸಂಸಾರಾನ್ಮೋಕ್ಷೋ ಭಗವತ್ಪ್ರಪತ್ತಿಮನ್ತರೇಣ ನೋಪಪದ್ಯತ ಇತ್ಯುಕ್ತಂ ಭವತಿ । 'ನಾನ್ಯಃ ಪನ್ಥಾ ಅಯನಾಯ ವಿದ್ಯತೇ' (ತೈ. ಆ. ೩-೧೨-೩೮) ಇತ್ಯಾದಿಭಿಃ[2] ಶ್ರುತಿಭಿಶ್ಚ ॥

(ಅರ್ಥ)

(ಇದನ್ನು) ಹೀಗೆಂದು 'ಈ ಆತ್ಮನು ನಿರ್ವಾಣಮಯನೇ, ಜ್ಞಾನಮಯನೇ, ನಿರ್ಮಲನೇ ; ದುಃಖ, ಅಜ್ಞಾನ, ಮಲ- ಎಂಬಿವು ಪ್ರಕೃತಿಯ ಧರ್ಮಗಳೇ ಆತ್ಮನವಲ್ಲ' (ವಿ.ಪು. ೬-೭-೨೨)[3] ಎಂಬಲ್ಲಿ ಹೇಳಿದೆ. ಪ್ರಕೃತಿಸಂಬಂಧದಿಂದಾದ ಕರ್ಮಮೂಲಕವಾಗಿರುವದರಿಂದ (ಈ) ಧರ್ಮಗಳು ಆತ್ಮಸ್ವರೂಪದಿಂದಾದವು ಗಳಲ್ಲವೆಂದರ್ಥ ; ಪ್ರಾಪ್ತ, ಅಪ್ರಾಪ್ತ- ಇವುಗಳ ವಿವೇಕದಿಂದ (ಇವು) ಪ್ರಕೃತಿಯ ಧರ್ಮಗಳೇ ಎಂದಿದೆ.[4]

'ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಲ್ಲಿಯೂ ಗೋವಿನಲ್ಲಿಯೂ ಆನೆಯಲ್ಲಿಯೂ ನಾಯಿಯಲ್ಲಿಯೂ ಚಂಡಾಲನಲ್ಲಿಯೂ ಪಂಡಿತರು ಸಮದರ್ಶಿಗಳು' (ಗೀ. ೫-೧೮) ಎಂದು (ಹೇಳಿದೆ). **ದೇವತೆ, ತಿರ್ಯಗ್ಜಂತು, ಮನುಷ್ಯ, ಸ್ಥಾವರ ಪ್ರಾಣಿ- ಎಂಬ ರೂಪದ ಪ್ರಕೃತಿಯ ಸಂಬಂಧವುಳ್ಳ ಆತ್ಮನ ನಿಜವಾದ ಸ್ವರೂಪವನ್ನು ವಿಂಗಡಿಸುವ ಬುದ್ಧಿಯು ಯಾರಿಗೆ ಇರುವದೋ ಅವರು 'ಪಂಡಿತರು' ;** ಆಯಾ ಪ್ರಕೃತಿಭೇದದಿಂದ ವಿಂಗಡಿಸಿ ಆತ್ಮಯಾಥಾತ್ಮ್ಯ ಜ್ಞಾನವನ್ನುಳ್ಳವರಾಗಿ ಆಯಾ ಅತ್ಯಂತ ವಿಷಮವಾದ ಆಕಾರದಲ್ಲಿರುವ ಆತ್ಮನನ್ನು ಸಮಾನವಾದ ಆಕಾರವುಳ್ಳವನಾಗಿಯೇ ಕಂಡುಕೊಂಡಿರುತ್ತಾರಾದ್ದರಿಂದ **'ಸಮದರ್ಶಿಗಳು'** ಎಂದಿದೆ. ಆ ಇದನ್ನು (ಈ ಶ್ಲೋಕದಲ್ಲಿ) ಹೇಳಿದೆ : 'ಯಾರ ಮನಸ್ಸು ಸಾಮ್ಯದಲ್ಲಿ ನಿಂತಿರುವದೋ

---

1. ಈ 'ಇತಿ'ಯು ಇಲ್ಲಿ ಬೇಕೆ?- ಎಂಬುದು ವಿಚಾರಣೀಯವಾಗಿದೆ.
2. 'ಇತ್ಯಾದಿ' ಕಾ॥ 3. ಇದು ಕೇಶಿಧ್ವಜನು ಖಾಂಡಿಕ್ಯಜನಕನಿಗೆ ಹೇಳಿದ ಮಾತು.
4. ಪ್ರಕೃತಿಸಂಬಂಧವಿದ್ದರೆ ದುಃಖಾದಿಗಳಿರುತ್ತವೆ ; ಅದಿಲ್ಲವಾಗಲು ತೊಲಗುತ್ತವೆ— ಎಂಬ ಅನ್ವಯವ್ಯತಿರೇಕಗಳಿಂದ ಹೀಗೆಂದು ಹೇಳಿದೆ ಎಂದರ್ಥ.

ಅವರಿಂದ ಸಂಸಾರವು ಇಲ್ಲಿಯೇ ಜಿತವಾಗಿರುತ್ತದೆ. ನಿರ್ದೋಷವಾಗಿ ಸಮವಾಗಿರುವದಲ್ಲವೆ, ಬ್ರಹ್ಮವು? ಆದ್ದರಿಂದ ಅವರು ಬ್ರಹ್ಮದಲ್ಲಿ ನಿಂತಿರುತ್ತಾರೆ'(ಗೀ. ೫-೧೯). (ಇಲ್ಲಿ) ನಿರ್ದೋಷವು ಎಂದರೆ ದೇವಾದಿಪ್ರಕೃತಿವಿಶೇಷದ ಸಂಬಂಧರೂಪವಾದ ದೋಷವಿಲ್ಲದ್ದು. ತನ್ನ ಸ್ವರೂಪದಲ್ಲಿರುವ ಆತ್ಮವಸ್ತುವೆಲ್ಲವೂ ನಿರ್ವಾಣರೂಪವಾದ ಜ್ಞಾನವೆಂಬ ಒಂದೇ ಆಕಾರದಲ್ಲಿರುವದರಿಂದ **ಸಮ**ವು ಎಂದರ್ಥ.

ಹೀಗಿರುವ[1] ಆ ಆತ್ಮನು ಭಗವಚ್ಛೇಷತ್ವವೆಂಬ ಏಕರಸವಾಗಿರುವಿಕೆ, ಆ (ಭಗವಂತನಿಂದ) ನಿಯಾಮ್ಯನಾಗಿರುವಿಕೆ, ಮತ್ತು ಆ ಭಗವಂತನೊಬ್ಬನನ್ನೇ ಆಧಾರವಾಗುಳ್ಳವನಾಗಿರುವಿಕೆ - ಇವನ್ನು ಅವನ 'ಶರೀರ', ಅವನ 'ತನು'- ಮುಂತಾದ ಶಬ್ದಗಳಿಂದಲೂ, ಆ (ಭಗವಂತನ) ಸಾಮಾನಾಧಿಕರಣ್ಯದಿಂದಲೂ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣ- ಮುಂತಾದವುಗಳಲ್ಲಿ ಪ್ರತಿಪಾದಿಸಿದೆ ಎಂದು ಹಿಂದೆಯೇ[2] ಹೇಳಿರುತ್ತದೆ. 'ಈ ನನ್ನ ಗುಣಮಯವಾದ ಮಾಯೆಯು ದಾಟಲಶಕ್ಯವಾದದ್ದು ; ನನ್ನನ್ನೇ ಯಾರು ಪ್ರಪನ್ನರಾಗುತ್ತಾರೋ ಅವರು ಈ ಮಾಯೆಯನ್ನು ದಾಟುವರು' (ಗೀ. ೭-೧೪) ಎಂಬ (ವಾಕ್ಯದಿಂದ) ಆ ಈ ಆತ್ಮನ ಕರ್ಮದಿಂದಾಗಿರುವ ವಿಚಿತ್ರವಾದ[3] ಗುಣಮಯವಾದ ಪ್ರಕೃತಿಯ ಸಂಬಂಧರೂಪ-ವಾದ ಸಂಸಾರದಿಂದ ಮೋಕ್ಷವು ಭಗವಂತನ **ಪ್ರಪತ್ತಿ**ಯಿಲ್ಲದೆ ಆಗಲಾರದು ಎಂದು ಹೇಳಿದಂತಾಗಿದೆ. '(ಮೋಕ್ಷ)ವನ್ನು ಪಡೆಯುವದಕ್ಕೆ ಮತ್ತೊಂದು ಹಾದಿಯಿಲ್ಲ'[4] (ತೈ. ಆ. ೩-೧೨-೩೮) ಮುಂತಾದ ಶ್ರುತಿಗಳಿಂದಲೂ (ಇದು ಸಿದ್ಧವಾಗಿರುತ್ತದೆ).

ಬ್ರಹ್ಮದ ಪರಮಾಶ್ಚರ್ಯಸ್ವರೂಪ

(ಮೂಲ)

೫೭. 'ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ । ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ । ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ ॥' (ಗೀ.೯-೪, ೫) ಇತಿ ಸರ್ವಶಕ್ತಿಯೋಗಾತ್ ಸ್ವೈಶ್ವರ್ಯ ವೈಚಿತ್ರ್ಯಮ್ ಉಕ್ತಮ್ । ತದಾಹ 'ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್' (ಗೀ. ೧೦-೪೨) ಇತಿ । ಅನನ್ತವಿಚಿತ್ರಮಹಾಶ್ಚರ್ಯರೂಪಂ ಜಗನ್ಮಾಽಯುತಾಯುತಾಂಶಾಂಶೇನ ಆತ್ಮತಯಾ ಪ್ರವಿಶ್ಯ ಸರ್ವಂ ಮತ್ಸಂಕಲ್ಪೇನ

---

1. ಜ್ಞಾನೈಕಾಕಾರನಾಗಿರುವ
2. ಖಂ. ೫ರಲ್ಲಿ; ಅಲ್ಲಿ ಸ್ಮೃತೀತಿಹಾಸಪುರಾಣಗಳ ಪರಾಮರ್ಶವು ಮಾತ್ರ ಇಲ್ಲ.
3. ಇದು ಮಾಯಾಶಬ್ದದ ಅರ್ಥ.
4. ಇಲ್ಲಿ ವೇದನವೆಂದರೆ ಪ್ರಪತ್ತಿಯೇ ಎಂದು ಭಾವ.

ವಿಷ್ಟಭ್ಯ ಅನೇನ ರೂಪೇಣಾಽನನ್ತಮಹಾವಿಭೂತಿಃ, ಅಪರಿಮಿತೋದಾರಗುಣ ಸಾಗರಃ, ನಿರತಿಶಯಾಶ್ಚರ್ಯಭೂತಃ ಸ್ಥಿತೋಽಹಮ್ ಇತ್ಯರ್ಥಃ । ತದಿದಮಾಹ 'ಏಕತ್ವೇ ಸತಿ ನಾನಾತ್ವಂ ನಾನಾತ್ವೇ ಸತಿ ಚೈಕತಾ । ಅಚಿನ್ತ್ಯಂ ಬ್ರಹ್ಮಣೋ ರೂಪಂ ಕಸ್ತದ್ವೇದಿತುಮರ್ಹತಿ ॥' (?) ಇತಿ ಪ್ರಶಾಸಿತೃತ್ವೇನೈಕ ಏವ ಸನ್ ವಿಚಿತ್ರಚಿದಚಿದ್ವಸ್ತುಷು ಅನ್ತರಾತ್ಮತಯಾ ಪ್ರವಿಶ್ಯ ತತ್ತದ್ರೂಪೇಣ ವಿಚಿತ್ರಪ್ರಕಾರೋ ವಿಚಿತ್ರಂ ಕರ್ಮಕಾರಯನ್ ನಾನಾರೂಪತಾಂ ಭಜತೇ ॥

ಏವಂ ಸ್ವಲ್ಪಾಲ್ಪಾಂಶೇನ ಸರ್ವಾಶ್ಚರ್ಯಮಯಂ ನಾನಾರೂಪಂ ಜಗತ್ ತದನ್ತರಾತ್ಮತಯಾ ಪ್ರವಿಶ್ಯ ವಿಷ್ಟಭ್ಯ ನಾನಾತ್ವೇನಾಽವಸ್ಥಿತೋಽಪಿ ಸನ್, ಅನವಧಿ ಕಾತಿಶಯಾಸಂಖ್ಯೇಯಕಲ್ಯಾಣಗುಣಗಣಃ ಸರ್ವೇಶ್ವರೇಶ್ವರಃ ಪರಬ್ರಹ್ಮಭೂತಃ ಪುರುಷೋತ್ತಮೋ ನಾರಾಯಣೋ ನಿರತಿಶಯಾಶ್ಚರ್ಯಭೂತೋ ನೀಲತೋಯದಸಂಕಾಶಃ ಪುಣ್ಡರೀಕದಲಾಮಲಾಯತೇಕ್ಷಣಃ ಸಹಸ್ರಾಂಶುಃ ಸಹಸ್ರಕಿರಣಃ ಪರಮೇ ವ್ಯೋಮ್ನಿ 'ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್' (ತೈ. ೨-೧), 'ತದಕ್ಷರೇ ಪರಮೇ ವ್ಯೋಮನ್' (ತೈ.ನಾ.೧-೧) ಇತ್ಯಾದಿ ಶ್ರುತಿಸಿದ್ಧ ಏಕ ಏವಾಽವತಿಷ್ಠತೇ ॥

ಬ್ರಹ್ಮವ್ಯತಿರಿಕ್ತಸ್ಯ ಕಸ್ಯಚಿದಪಿ ವಸ್ತುನಃ ಏಕಸ್ವಭಾವಸ್ಯೈಕಕಾರ್ಯಶಕ್ತಿಯುಕ್ತಸ್ಯ ಏಕರೂಪಸ್ಯ ರೂಪಾನ್ತರಯೋಗಃ ಸ್ವಭಾವಾನ್ತರಯೋಗಃ ಶಕ್ತ್ಯನ್ತರಯೋಗಶ್ಚ ನ ಘಟತೇ । ತಸ್ಯೈಕಸ್ಯ ಪರಸ್ಯ ಬ್ರಹ್ಮಣಃ ಸರ್ವವಸ್ತುವಿಸಜಾತೀಯತಯಾ ಸರ್ವಸ್ವಭಾವತ್ವಂ ಸರ್ವಶಕ್ತಿಯೋಗಶ್ಚೇತಿ ಏಕಸ್ಯೈವ ವಿಚಿತ್ರಾನನ್ತನಾನಾರೂಪತಾ ಚ ಪುನರಪ್ಯನನ್ತಾಪರಿಮಿತಾಶ್ಚರ್ಯಯೋಗೇನೈಕರೂಪತಾ ನ ವಿರುದ್ಧೇತಿ ವಸ್ತುಮಾತ್ರಸಾಮ್ಯಾತ್ ವಿರೋಧಚಿನ್ತಾ ನ ಯುಕ್ತಾ ಇತ್ಯರ್ಥಃ । ಯಥೋಕ್ತಮ್ 'ಶಕ್ತಯಃ ಸರ್ವಭಾವಾನಾಮಚಿನ್ತ್ಯಜ್ಞಾನಗೋಚರಾಃ । ಯತೋಽತೋ ಬ್ರಹ್ಮಣಸ್ತಾಸ್ತು ಸರ್ಗಾದ್ಯಾ ಭಾವಶಕ್ತಯಃ ॥ ಭವನ್ತಿ ತಪತಾಂ ಶ್ರೇಷ್ಠ ಪಾವಕಸ್ಯ ಯಥೋಷ್ಣತಾ ॥' (ವಿ.ಪು. ೧-೩-೨,೩) ಏತದುಕ್ತಂ ಭವತಿ । ಸರ್ವೇಷಾಮಗ್ನಿ ಜಲಾದೀನಾಂ ಭಾವಾನಾಮ್ ಏಕಸ್ಮಿನ್ನಪಿ ಭಾವೇ ದೃಷ್ಟೈವ ಶಕ್ತಿಸ್ತದ್ವಿಸಜಾತೀಯ ಭಾವಾನ್ತರೇಽಪೀತಿ ನ ಚಿನ್ತಯಿತುಂ ಯುಕ್ತಾ । ಜಲಾದಾವದೃಷ್ಟಾಪಿ ತದ್ವಿ-ಸಜಾತೀಯೇ ಪಾವಕೇ ಭಾಸ್ವರತೋಷ್ಣತ್ವಾದಿ[1] ಶಕ್ತಿರ್ಯಥಾ ದೃಶ್ಯತೇ, ಏವಮೇವ ಸರ್ವವಸ್ತುವಿಸಜಾತೀಯೇ ಬ್ರಹ್ಮಣಿ ಸರ್ವಸಾಮ್ಯಂ ನಾನುಮಾತುಂ ಯುಕ್ತಮಿತಿ । ಅತೋ ವಿಚಿತ್ರಾನನ್ತಶಕ್ತಿಯುಕ್ತಂ ಬ್ರಹ್ಮೈವ[2] ಇತ್ಯರ್ಥಃ । ತದಾಹ । 'ಜಗದೇತನ್ಮ ಹಾಶ್ಚರ್ಯಂ ರೂಪಂ ಯಸ್ಯ ಮಹಾತ್ಮನಃ ತೇನಾಽಽಶ್ಚರ್ಯವರೇಣಾಽಹಂ ಭವತಾ ಕೃಷ್ಣ ಸಙ್ಗತಃ' (ವಿ.ಪು.೫-೧೯-೭) ಇತಿ ॥

1. 'ಉಷ್ಣತಾದಿ' ಕಾ॥ 2. ಏವಕಾರವಿಲ್ಲದ ಪಾಠವೂ ಉಂಟು.

(ಅರ್ಥ)

'ಈ ಜಗತ್ತೆಲ್ಲವೂ ಅವ್ಯಕ್ತಮೂರ್ತಿಯಾದ ನನ್ನಿಂದ ವ್ಯಾಪಿಸಲ್ಪಟ್ಟಿದೆ[1]; ಸರ್ವಭೂತಗಳೂ ನನ್ನಲ್ಲಿವೆ, ಆದರೆ ನಾನು ಅವುಗಳಲ್ಲಿಲ್ಲ.[2] ಭೂತಗಳು ನನ್ನಲ್ಲಿಲ್ಲವೂ ಇಲ್ಲ,[3] ನನ್ನ ಈಶ್ವರ ಸಂಬಂಧಿಯಾದ ಯೋಗವನ್ನು ನೋಡು' (ಗೀ. ೯-೪,೫) ಎಂದು ಸರ್ವಶಕ್ತಿಗಳಿರುವದರಿಂದ ತನ್ನ **ಐಶ್ವರ್ಯದ ವೈಚಿತ್ರ್ಯವನ್ನು** ಹೇಳಿರುತ್ತದೆ. ಅದನ್ನೇ 'ಈ ಜಗತ್ತೆಲ್ಲವನ್ನೂ ಒಂದಂಶದಿಂದ ಎತ್ತಿ ಹಿಡಿದುಕೊಂಡಿರುವೆನು' (ಗೀ. ೧೦-೪೨) ಎಂದು ಹೇಳಿರುತ್ತಾನೆ. ಅನಂತವಾದ ವಿಚಿತ್ರವಾದ ಮಹಾಶ್ಚರ್ಯಗಳ ರೂಪವಾದ ಜಗತ್ತು ನನ್ನ ಆಯುತಾಯುತಾಂಶದ (ಒಂದು) ಅಂಶದಿಂದ[4] ಆತ್ಮನಾಗಿ (ಅದರಲ್ಲಿ) ಒಳಹೊಕ್ಕು ಎಲ್ಲವನ್ನೂ ನನ್ನ ಸಂಕಲ್ಪದಿಂದ ಧಾರಣೆಮಾಡುತ್ತಾ ಈ ರೂಪದಿಂದ ಅನಂತಮಹಾವಿಭೂತಿಗಳುಳ್ಳವನೂ ಅಪರಿಮಿತವಾದ ಉದಾರಗುಣಗಳಿಗೆ ಸಾಗರದಂತಿರುವವನೂ ನಿರತಿಶಯಾಶ್ಚರ್ಯಭೂತನೂ ಆಗಿ ನಾನು ಇರುತ್ತಿರುವೆನು ಎಂದರ್ಥ. ಆ ಇದನ್ನೇ (ಈ ಶ್ಲೋಕವು ಹೇಳುತ್ತದೆ) : 'ಏಕತ್ವವಿದ್ದರೂ ನಾನಾತ್ವವು, ನಾನಾತ್ವವಿದ್ದರೂ ಏಕತ್ವವು ; ಬ್ರಹ್ಮದ ಆ ಅಚಿಂತ್ಯರೂಪವನ್ನು ಯಾವನುತಾನೆ ಅರಿತುಕೊಳ್ಳಲಾಪನು ?' (?) ಪ್ರಶಾಸಿತೃವಾಗಿ ತಾನೊಬ್ಬನೇ ಇದ್ದುಕೊಂಡು ವಿಚಿತ್ರವಾದ ಚಿದಚಿದ್ವಸ್ತುಗಳಲ್ಲಿ ಅಂತರಾತ್ಮನಾಗಿ ಒಳಹೊಕ್ಕು ಆಯಾ ರೂಪದಿಂದ ವಿಚಿತ್ರ ಪ್ರಕಾರಗಳುಳ್ಳನಾಗಿ ವಿಚಿತ್ರವಾದ ಕರ್ಮವನ್ನು ಮಾಡಿಸುತ್ತಾ ನಾನಾರೂಪತ್ವವನ್ನು ಪಡೆಯುತ್ತಿರುವನು.[5]

ಹೀಗೆ ಸ್ವಲ್ಪಾಲ್ಪಾಂಶದಿಂದಲೇ ಸರ್ವಾಶ್ಚರ್ಯಮಯವಾದ ನಾನಾರೂಪವಾದ ಜಗತ್ತನ್ನು ಅದರ ಅಂತರಾತ್ಮನಾಗಿ ಒಳಹೊಕ್ಕು ಹಿಡಿದಿಟ್ಟುಕೊಂಡು ನಾನಾತ್ವದಿಂದ ಇರುತ್ತಿದ್ದರೂ ಅನವಧಿಕಾತಿಶಯವಾದ ಅಸಂಖ್ಯೇಯಕಲ್ಯಾಣಗುಣಗಣನಾಗಿ ಸರ್ವೇಶ್ವರೇಶ್ವರನೂ ಪರಬ್ರಹ್ಮವಾಗಿರುವವನೂ ಪುರುಷೋತ್ತಮನೂ ಅದ ನಾರಾಯಣನು ನಿರತಿಶಯಾಶ್ಚರ್ಯಭೂತನಾಗಿರುತ್ತಾನೆ. ನೀಲಮೇಘದಂತೆ

---

1. ಧಾರಣಮಾಡುವದಕ್ಕೂ ನಿಯಮನಮಾಡುವದಕ್ಕೂ ಇದನ್ನು ವ್ಯಾಪಿಸಿಕೊಂಡಿರುತ್ತೇನೆ.
2. ನನ್ನ ಸ್ಥಿತಿಯು ಅವುಗಳ ಅಧೀನವಲ್ಲ.
3. ಘಟಾದಿಗಳಲ್ಲಿ ಜಲಾದಿಗಳಿರುವಂತೆ ಇಲ್ಲ ; ನನ್ನ ಸಂಕಲ್ಪಮಾತ್ರದಿಂದ ಇವೆ. ಈ ಶ್ಲೋಕವನ್ನು ಮಾಯಾವಾದಕ್ಕೆ ಅನುಗುಣವೆಂದು ಭಾವಿಸಬಾರದೆಂದು ಇಲ್ಲಿ ವ್ಯಾಖ್ಯಾನ ಮಾಡಿ ತಿಳಿಸಿದ್ದಾಗಿದೆ-ಎಂದು ತಾ॥
4. 'ಯಸ್ಯಾಽಯುತಾಯುತಾಂಶಾಂಶೇ ವಿಶ್ವಶಕ್ತಿರಿಯಂ ಸ್ಥಿತಾ' ಎಂಬ ವಿ.ಪು. ೧-೯-೫೩ರ ಸೂಚನೆ.
5. ನಾನಾಪ್ರಕಾರಗಳುಳ್ಳವನಾಗಿರುವವನು. ಇದು ಭೇದಾಭೇದವಾದಕ್ಕೆ ಅನುಗುಣವಾಗಿರುವಂತೆ ತೋರುವ ಶ್ಲೋಕವಾದ್ದರಿಂದ ಅದರರ್ಥವನ್ನು ವ್ಯಾಖ್ಯಾನಮಾಡಿ ತಿಳಿಸಿದೆ ಎಂದು ತಾ॥

ಹೊಳೆಯುತ್ತಿರುವವನಾಗಿ ಪುಂಡರೀಕದ ದಲದಂತೆ ನಿರ್ಮಲವಾದ ಅಗಲವಾದ ಕಣ್ಣುಗಳುಳ್ಳವನಾಗಿ ಸಹಸ್ರಾಂಶುವೂ ಸಹಸ್ರಕಿರಣನೂ ಆಗಿ - 'ಯಾವನು ಹೃದಯದಲ್ಲಿ ಪರಮವ್ಯೋಮದಲ್ಲಿರುವದನ್ನು ಅರಿತಿರುವನೋ' (ತೈ. ೨-೧), 'ಅದು ನಾಶರಹಿತವಾದ ಪರಮವ್ಯೋಮದಲ್ಲಿ' (ತೈ.ನಾ.೧-೧) ಮುಂತಾದ ಶ್ರುತಿಸಿದ್ಧವಾದ **ಪರಮವ್ಯೋಮ**ದಲ್ಲಿ ತಾನೊಬ್ಬನೇ ಇರುತ್ತಾನೆ.[1]

ಬ್ರಹ್ಮಕ್ಕಿಂತ ವ್ಯತಿರಿಕ್ತವಾದ, ಒಂದುಸ್ವಭಾವದ, ಒಂದಾನೊಂದು ಕಾರ್ಯಶಕ್ತಿಯುಳ್ಳ , ಒಂದು ರೂಪದಲ್ಲಿರುವ ಯಾವ ವಸ್ತುವಿಗೂ ಮತ್ತೊಂದು ರೂಪವಾಗಲಿ, ಮತ್ತೊಂದು ಸ್ವಭಾವವಾಗಲಿ, ಮತ್ತೊಂದು ಶಕ್ತಿಯಾಗಲಿ ಸಂಭವಿಸುವದಿಲ್ಲ.[2] ಆ **ಈ ಪರಬ್ರಹ್ಮವು ಸರ್ವವಸ್ತುಗಳಿಗಿಂತಲೂ ವಿಸಜಾತೀಯವಾಗಿರುವದರಿಂದ ಎಲ್ಲಾ ಸ್ವಭಾವತ್ವವೂ ಸರ್ವಶಕ್ತಿಯೋಗವೂ ಇರುವದರಿಂದ ಒಬ್ಬನೇ ಆಗಿರುವವನಿಗೆ ವಿಚಿತ್ರವಾದ ಅನಂತವಾದ ನಾನಾರೂಪತ್ವವೂ, ಮತ್ತು ಅನಂತವಾದ ಅಪರಿಮಿತವಾದ ಆಶ್ಚರ್ಯಗಳ ಸಂಬಂಧದಿಂದ ಒಂದೇ ರೂಪವಾಗಿರುವದೂ ವಿರುದ್ಧವಲ್ಲದ್ದ**ರಿಂದ, (ಇದೂ) ವಸ್ತುಮಾತ್ರವಾಗಿದೆ ಎಂಬ ಸಾಮ್ಯದಿಂದ (ಇದು) ವಿರುದ್ಧವು ಎಂಬ ಯೋಚನೆಯು ಸರಿಯಲ್ಲ ಎಂದರ್ಥ.[3] ಇದನ್ನು ಹೀಗೆಂದು (ಪುರಾಣದಲ್ಲಿ) ಹೇಳಿರುತ್ತದೆ : 'ಸರ್ವಪದಾರ್ಥಗಳ ಶಕ್ತಿಗಳೂ ಅಚಿಂತ್ಯಜ್ಞಾನಗೋಚರವಾಗಿರುತ್ತವೆಯಲ್ಲವೆ? ಆದ್ದರಿಂದ ಬ್ರಹ್ಮಕ್ಕೆ ಸೃಷ್ಟಿಯೇ ಮುಂತಾದ ಆ ಭಾವಶಕ್ತಿಗಳು, ಎಲೈ ತಪಸ್ವಿಶ್ರೇಷ್ಠನೆ, ಅಗ್ನಿಗೆ ಬಿಸಿಯು ಹೇಗೋ ಹಾಗೆ ಇರುತ್ತವೆ' (ವಿ.ಪು. ೧-೩-೨, ೩). (ಇಲ್ಲಿ) ಇಷ್ಟನ್ನು ಹೇಳಿದಂತಾಗಿದೆ : ಬೆಂಕಿ, ನೀರು- ಮುಂತಾದ ಎಲ್ಲಾ ಪದಾರ್ಥಗಳಿಗೂ ಒಂದು ಪದಾರ್ಥದಲ್ಲಿ ಕಂಡಿರುವ ಶಕ್ತಿಯೇ ಅದಕ್ಕಿಂತ ವಿಸಜಾತೀಯವಾದ ಭಾವಾಂತರದಲ್ಲಿಯೂ (ಇರಬೇಕಂದು) ಯೋಚಿಸುವದು ಯುಕ್ತವಲ್ಲ ; ನೀರು ಮುಂತಾದವುಗಳಲ್ಲಿ ಕಾಣದಿರುವ ಬೆಳಕು, ಬಿಸಿ ಮುಂತಾದ ಶಕ್ತಿಯು ಅದಕ್ಕೆ ವಿಸಜಾತೀಯವಾದ ಬೆಂಕಿಯಲ್ಲಿ ಹೇಗೆ ಕಾಣಬರುವದೋ ಹಾಗೆಯೇ ಸರ್ವವಸ್ತುಗಳಿಗಿಂತಲೂ ವಿಸಜಾತೀಯವಾದ ಬ್ರಹ್ಮದಲ್ಲಿ ಮಿಕ್ಕೆಲ್ಲ ವಸ್ತುಗಳ ಸಾಮ್ಯವನ್ನು ಅನುಮಾನಿಸುವದು ಯುಕ್ತವಲ್ಲ. ಆದ್ದರಿಂದ ವಿಚಿತ್ರವಾದ

---

1. ನಾನಾತ್ವವಿದ್ದರೂ ತಾನೊಬ್ಬನೇ ಈ ರೂಪದಲ್ಲಿರುವನು- ಎಂಬುದು ಶ್ಲೋಕದ ಎರಡನೆಯ ಪಾದದ ಅರ್ಥವು.
2. ಉದಾಹರಣೆಗೆ ಬೆಂಕಿಗೆ ಮೇಲಕ್ಕೇ ಉರಿಯುವ ರೂಪವಿದೆ, ಸುಡುವ ಸ್ವಭಾವವಿದೆ, ಸುಡುವ ಶಕ್ತಿಯಿದೆ ; ಅಡ್ಡಡ್ಡಲಾಗಿ ಹರಿಯುವ, ಸುವಾಸನೆಯನ್ನು ಕೊಡುವ, ವಸ್ತುಗಳನ್ನು ನೆನಸುವ ರೂಪಾದಿಗಳನ್ನು ಅದು ಪಡೆಯಲಾರದು.
3. ಏಕೆಂದರೆ ಸರ್ವಚಿದಚಿದ್ವಸ್ತು ವಿಸಜಾತೀಯವಾದ್ದರಿಂದ ಅದಕ್ಕೆ ಎಲ್ಲಾ ಸ್ವರೂಪ ಸ್ವಭಾವಶಕ್ತಿಗಳೂ ಇರಬಹುದಾಗಿದೆ ಎಂದರ್ಥ.

ಅನಂತಶಕ್ತಿಗಳುಳ್ಳದ್ದು ಬ್ರಹ್ಮವೇ[1] ಎಂದರ್ಥ. ಇದನ್ನು (ಪುರಾಣವು) ಹೇಳಿರುತ್ತದೆ : 'ಕೃಷ್ಣನೆ, ಯಾವ ಮಹಾತ್ಮನಿಗೆ ಈ ಮಹಾಶ್ಚರ್ಯವಾದ ಜಗತ್ತೆಂಬ ರೂಪವಿರುವದೋ ಅಂಥ ಆಶ್ಚರ್ಯಶ್ರೇಷ್ಠನಾದ ನಿಮ್ಮೊಡನೆ ನಾನು ಕೂಡಿರುತ್ತೇನೆ' (ವಿ.ಪು. ೫-೧೯-೭).

ಬ್ರಹ್ಮಸ್ವರೂಪವನ್ನು ವರ್ಣಿಸುವ ನಾನಾಶ್ರುತಿಗಳ ಹೊಂದುಗಡೆ

(ಮೂಲ)

೫೮. ತದೇತನ್ನಾನಾವಿಧಾನನ್ತಶ್ರುತಿನಿಕರಶಿಷ್ಟಪರಿಗೃಹೀತತದ್ವ್ಯಾಖ್ಯಾನ ಪರಿಶ್ರಮಾತ್ ಅವಧಾರಿತಮ್ । ತಥಾ ಹಿ । ಪ್ರಮಾಣಾನ್ತರಾಪರಿದೃಷ್ಟಾಪರಿಮಿತ ಪರಿಣಾಮಾನೇಕತತ್ತ್ವನಿಯತಕ್ರಮವಿಶಿಷ್ಟಾ ಸೃಷ್ಟಿಪ್ರಲಯೌ ಬ್ರಹ್ಮಣೋಽನೇಕ ವಿಧಾಃ ಶ್ರುತಯೋ ವದನ್ತಿ । 'ನಿರವದ್ಯಂ ನಿರಞ್ಜನಮ್' (ಶ್ವೇ. ೬-೧೯), 'ವಿಜ್ಞಾನಮಾನ್ದಮ್' (ಬೃ. ೩-೯-೨೮), 'ನಿರ್ವಿಕಾರಮ್' (?), 'ನಿಷ್ಕಲಂ ನಿಷ್ಕ್ರಿಯಂ ಶಾನ್ತಮ್' (ಶ್ವೇ. ೬-೧೯), 'ನಿರ್ಗುಣಮ್' (ಮಂ. ೨) ಇತ್ಯಾದಿಕಾಃ । ನಿರ್ಗುಣಂ ಜ್ಞಾನಸ್ವರೂಪಂ ಬ್ರಹ್ಮೇತಿ ಕಾಶ್ಚನ ಶ್ರುತಯೋಽಭಿದಧತಿ । 'ನೇಹ ನಾನಾಽಸ್ತಿ ಕಿಞ್ಚನ । ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ' (ಕಂ. ೨-೧-೧೧, ಬೃ.೪-೪-೧೯), 'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತತ್ತೇನ ಕಂ ಪಶ್ಯೇತ್- ತತ್ಕೇನ ಕಂ ವಿಜಾನೀಯಾತ್' (ಬೃ.೪-೫-೧೫) ಇತ್ಯಾದಿಕಾ ನಾನಾತ್ವನಿಷೇಧವಾದಿನ್ಯಃ ಸನ್ತಿ ಕಾಶ್ಚನ ಶ್ರುತಯಃ । 'ಯಃ ಸರ್ವಜ್ಞಃ ಸರ್ವವಿದ್ಯಸ್ಯ ಜ್ಞಾನಮಯಂ ತಪಃ' (ಮುಂ.೧-೧-೯) 'ಸರ್ವಾಣಿ ರೂಪಾಣಿ ವಿಚಿತ್ಯ ಧೀರೋ ನಾಮಾನಿ ಕೃತ್ವಾಭಿವದನ್ಯದಾಸ್ತೇ'(ತೈ. ಆ.ಪ್ರ.೩-೧೨-೩೮), 'ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ' (ತೈ.ನಾ.೨), 'ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ' (ಛಾಂ.೮-೧-೫, ೮-೭-೧) ಇತಿ ಸರ್ವಸ್ಮಿನ್ ಜಗತಿ ಹೇಯತಯಾಽವಗತಂ ಸರ್ವಂ ಗುಣಂ ಪ್ರತಿಷಿಧ್ಯ ನಿರತಿಶಯಕಲ್ಯಾಣಗುಣಾನನ್ತ್ಯಮ್, ಸರ್ವಜ್ಞತಾಮ್, ಸರ್ವಶಕ್ತಿ ಯೋಗಮ್, ಸರ್ವನಾಮರೂಪವ್ಯಾಕರಣಮ್, ಸರ್ವಸ್ಯಾಽಽಧಾರತಾಂ ಚ ಕಾಶ್ಚನ ಶ್ರುತಯೋ ಬ್ರುವತೇ[2] । 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ' (ಛಾಂ. ೩-೧೪-೧) 'ಐತದಾತ್ಮ್ಯಮಿದಂ ಸರ್ವಮ್'(ಛಾಂ. ೬-೧೫-೩), ಏಕಸ್ಸನ್ ಬಹುಧಾ ವಿಚಾರಃ'

---

1. ಬ್ರಹ್ಮವು ಎಂದು ಏವಕಾರರಹಿತವಾದ ಪಾಠಕ್ಕೆ ಅರ್ಥ. 2. 'ಬ್ರುವನ್ತಿ' ಕಾ॥

(ತೈ.ಆ.೩-೧೧-೨೦) ಇತ್ಯಾದಿಕಾಃ । ಬ್ರಹ್ಮಸೃಷ್ಟಂ ಜಗನ್ನಾನಾಕಾರಂ ಪ್ರತಿಪಾದ್ಯ ತದೈಕ್ಯಂ ಚ ಪ್ರತಿಪಾದಯನ್ತಿ ಕಾಶ್ಚನ ಶ್ರುತಯಃ । 'ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ' (ಶ್ವೇ.೧-೬), 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ' (ಶ್ವೇ. ೧-೧೨), 'ಪ್ರಜಾಪತಿರಕಾಮಯತ ಪ್ರಜಾಃ ಸೃಜೇಯೇತಿ' (ತೈ. ಬ್ರಾ. ೨-೨-೧), 'ಪತಿಂ ವಿಶ್ವಸ್ಯಾತ್ಮೇಶ್ವರಂ ಶಾಶ್ವತಂ ಶಿವಮಚ್ಯುತಮ್' (ತೈ.ನಾ.೧೩), 'ತಮೀಶ್ವರಾಣಾಂ ಪರಮಂ ಮಹೇಶ್ವರಂ ತಂ ದೇವತಾನಾಂ ಪರಮಂ ಚ ದೈವತಮ್' (ಶ್ವೇ. ೬-೭), 'ಸರ್ವಸ್ಯ ವಶೀ ಸರ್ವಸ್ಯೇಶಾನಃ' (ಬೃ.೪-೪-೨೨) ಇತ್ಯಾದಿಕಾಃ ಬ್ರಹ್ಮಣಃ ಸರ್ವಸ್ಮಾದನ್ಯತ್ವಮ್, ಸರ್ವಸ್ಯೇಶಿತವ್ಯತ್ವಮ್, ಈಶ್ವರತ್ವಂ ಚ ಬ್ರಹ್ಮಣಃ, ಸರ್ವಸ್ಯ ಶೇಷತಾಂ ಪತಿತ್ವಂ ಚೇಶ್ವರಸ್ಯ ಕಾಶ್ಚನ । 'ಅನ್ತಃ ಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' (ತೈ. ಆ. ೩-೧೧-೨೧), 'ಏಷ ತ[1] ಆತ್ಮಾನ್ತರ್ಯಾಮ್ಯಮೃತಃ' (ಬೃ.೩-೭-೩.... ೩-೭-೨೩), 'ಯಸ್ಯ ಪೃಥಿವೀ ಶರೀರಮ್.... ಯಸ್ಯಾಪಃ ಶರೀರಮ್.... ಯಸ್ಯ ತೇಜಃ ಶರೀರಮ್' (ಸು.೭) ಇತ್ಯಾದಿ । 'ಯಸ್ಯಾವ್ಯಕ್ತಂ ಶರೀರಮ್... ಯಸ್ಯಾಕ್ಷರಂ ಶರೀರಮ್.... ಯಸ್ಯ ಮೃತ್ಯುಃ ಶರೀರಮ್' (ಸು.೭) 'ಯಸ್ಯಾಽಽತ್ಮಾ ಶರೀರಮ್' (ಬೃ.ಮಾ. ೩-೭-೩೦) ಇತಿ ಬ್ರಹ್ಮವ್ಯತಿರಿಕ್ತಸ್ಯ ಸರ್ವಸ್ಯ ವಸ್ತುನೋ ಬ್ರಹ್ಮಣಶ್ಚ ಶರೀರಾತ್ಮಭಾವಂ ದರ್ಶಯನ್ತಿ ಕಾಶ್ಚನ । ಇತಿ ನಾನಾ ರೂಪಾಣಾಂ ವಾಕ್ಯಾನಾಮವಿರೋಧೋ ಮುಖ್ಯಾರ್ಥಾಪರಿತ್ಯಾಗಶ್ಚ ಯಥಾ ಸಂಭವತಿ ತಥೈವ ವರ್ಣನೀಯಮ್ ॥

ವರ್ಣಿತಂ ಚ । ಅವಿಕಾರಶ್ರುತಯಃ ಸ್ವರೂಪಪರಿಣಾಮಪರಿಹಾರಾದೇವ ಮುಖ್ಯಾರ್ಥಾಃ । ನಿರ್ಗುಣವಾದಾಶ್ಚ ಪ್ರಾಕೃತಹೇಯಗುಣನಿಷೇಧವಿಷಯತಯಾ[2] ವ್ಯವಸ್ಥಿತಾಃ, ನಾನಾತ್ವನಿಷೇಧವಾದಾಶ್ಚ ಏಕಸ್ಯೈವ[3] ಬ್ರಹ್ಮಣಃ ಶರೀರತಯಾ ಪ್ರಕಾರಭೂತಂ ಸರ್ವಂ ಚೇತನಾಚೇತನಂ ವಸ್ತ್ವಿತಿ ಸರ್ವಸ್ಯಾಽಽತ್ಮತಯಾ ಸರ್ವಪ್ರಕಾರಂ ಬ್ರಹ್ಮೈವಾಽವಸ್ಥಿತಮಿತಿ ಸುರಕ್ಷಿತಾಃ । ಸರ್ವವಿಲಕ್ಷಣತ್ವಪತಿತ್ವೇಶ್ವರತ್ವಕಲ್ಯಾಣಗುಣಾಕರತ್ವಸತ್ಕಾಮತ್ವಸತ್ಯಸಂಕಲ್ಪತ್ವಾದಿವಾಕ್ಯಂ ತದಭ್ಯುಪಗಮಾದೇವ ಸುರಕ್ಷಿತಮ್.... । ಜ್ಞಾನಾನನ್ದಮಾತ್ರವಾದಿ ಚ ಸರ್ವಸ್ಮಾದನ್ಯಸ್ಯ ಸರ್ವಕಲ್ಯಾಣಗುಣಾಶ್ರಯಸ್ಯ ಸರ್ವೇಶ್ವರಸ್ಯ ಸರ್ವಶೇಷಿಣಃ ಸರ್ವಾಧಾರಸ್ಯ ಸರ್ವೋತ್ಪತ್ತಿಸ್ಥಿತಿಪ್ರಲಯಹೇತುಭೂತಸ್ಯ ನಿರವದ್ಯಸ್ಯ ನಿರ್ವಿಕಾರಸ್ಯ ಸರ್ವಾತ್ಮಭೂತಸ್ಯ ಪರಸ್ಯ ಬ್ರಹ್ಮಣಃ ಸ್ವರೂಪನಿರೂಪಕಧರ್ಮೋ ಮಲಪ್ರತ್ಯನೀಕಾನನ್ದರೂಪ ಜ್ಞಾನಮೇವೇತಿ ಸ್ವಪ್ರಕಾಶತಯಾ ಸ್ವರೂಪಮಪಿ ಜ್ಞಾನಮೇವೇತಿ ಚ ಪ್ರತಿಪಾದನಾದನುಪಾಲಿತಮ್ । ಐಕ್ಯವಾದಾಶ್ಚ ಶರೀರಾತ್ಮಭಾವೇನ ಸಾಮಾನಾಧಿಕರಣ್ಯ ಮುಖ್ಯಾರ್ಥತೋಪಪಾದನಾದೇವ ಸುಸ್ಥಿತಾಃ ॥

---

1. 'ತ' ಎಂಬ ಮಾತು ಕಾ॥ದಲ್ಲಿಲ್ಲ. 2. 'ಪರತಯಾ' ಕಾ॥ 3. 'ಏಕಸ್ಯ' ಕಾ॥

ಏವಂ ಚ ಸತಿ ಅಭೇದೋ ವಾ ಭೇದೋ ವಾ ದ್ವಾತ್ಮಕತಾ ವಾ ವೇದಾನ್ತವೇದ್ಯಃ ಕೋಽಯಮರ್ಥಃ ಸಮರ್ಥಿತೋ ಭವತಿ ? ಸರ್ವಸ್ಯ ವೇದವೇದ್ಯತ್ವಾತ್ ಸರ್ವಂ ಸಮರ್ಥಿತಮ್ । ಸರ್ವಶರೀರತಯಾ ಸರ್ವಪ್ರಕಾರಂ ಬ್ರಹ್ಮೈವಾಽವಸ್ಥಿತಮಿತಿ ಅಭೇದಃ ಸಮರ್ಥಿತಃ । ಏಕಮೇವ ಬ್ರಹ್ಮನಾನಾಭೂತಚಿದಚಿದ್ವಸ್ತುಪ್ರಕಾರಂ ನಾನಾತ್ವೇನಾಽವಸ್ಥಿತಮಿತಿ ಭೇದಾಭೇದೌ । ಅಚಿದ್ವಸ್ತುನಶ್ಚ ಚಿದ್ವಸ್ತುನಶ್ಚ ಈಶ್ವರಸ್ಯ ಚ ಸ್ವರೂಪಸ್ವಭಾವವೈಲಕ್ಷಣ್ಯಾತ್ ಅಂಸಕರಾಚ್ಚ ಭೇದಃ ಸಮರ್ಥಿತಃ ॥

(ಅರ್ಥ)

ಆ ಈ (ವಿಷಯವನ್ನು) ನಾನಾವಿಧವಾಗಿರುವ ಅನಂತಶ್ರುತಿಸಮೂಹಗಳು (ಮತ್ತು) ಶಿಷ್ಟರು ಸ್ವೀಕರಿಸಿರುವ ಅದರ ವ್ಯಾಖ್ಯಾನ- (ಇವುಗಳಲ್ಲಿ) ಪರಿಶ್ರಮವನ್ನು ಮಾಡಿ ನಿಶ್ಚಯಿಸಿರುತ್ತದೆ. ಹೇಗೆಂದರೆ (೧) ಮತ್ತೊಂದು ಪ್ರಮಾಣಕ್ಕೆ ಕಾಣಲಾಗದ ಅಪರಿಮಿತವಾದ ಪರಿಣಾಮವುಳ್ಳ ಅನೇಕತತ್ತ್ವಗಳ ನಿಯತವಾದ ಕ್ರಮವುಳ್ಳ **ಸೃಷ್ಟಿಪ್ರಲಯಗಳು ಬ್ರಹ್ಮದಿಂದ (ಆಗುತ್ತವೆ ಎಂದು) ಅನೇಕ ವಿಧವಾದ ಶ್ರುತಿಗಳು** ಹೇಳುತ್ತವೆ. (೨) 'ನಿರವದ್ಯವೂ ನಿರಂಜನವೂ, (ಶ್ವೇ. ೬-೧೯), 'ವಿಜ್ಞಾನವೂ ಆನಂದವೂ' (ಬೃ.೩-೯-೨೮), 'ನಿರ್ವಿಕಾರವು' (?) 'ನಿಷ್ಕಲವೂ ನಿಷ್ಕ್ರಿಯವೂ ಶಾಂತವೂ' (ಶ್ವೇ. ೬-೯), 'ನಿರ್ಗುಣವು' (ಮಂ.೨) ಮುಂತಾದ **ಕೆಲವು ಶ್ರುತಿಗಳು ಬ್ರಹ್ಮವು ನಿರ್ಗುಣವು, ಜ್ಞಾನ ಸ್ವರೂಪವು** ಎಂದು ಹೇಳುತ್ತಿವೆ. (೩) 'ಇಲ್ಲಿ ಯಾವ ನಾನಾತ್ವವೂ ಇರುವದಿಲ್ಲ ; ಯಾವನು ಇಲ್ಲಿ ನಾನಾತ್ವವಿರುವಂತೆ ಕಾಣುವನೋ ಅವನು ಸಾವಿನ ಮೇಲೆ ಸಾವನ್ನು ಪಡೆಯುವನು' (ಕ. ೨-೧-೧೧, ಬೃ.೪-೪-೧೯), 'ಆದರೆ ಇವನಿಗೆ ಎಲ್ಲಿ ಎಲ್ಲವೂ ಆತ್ಮನೇ ಆಯಿತೋ ಅಲ್ಲಿ ಏತರಿಂದ ಯಾರನ್ನು ಕಂಡಾನು..... ಅಲ್ಲಿ ಏತರಿಂದ ಯಾರನ್ನು ಅರಿತಾನು?' (ಬೃ.೪-೧-೧೫) ಎಂದು ಮುಂತಾಗಿ **ನಾನಾತ್ವವನ್ನು ಅಲ್ಲಗಳೆಯುವ ಶ್ರುತಿಗಳೂ ಕೆಲವಿದೆ.** (೪) 'ಯಾವನು ಸರ್ವಜ್ಞನೋ ಸರ್ವವಿದನೋ ಯಾವನಿಗೆ ಜ್ಞಾನಮಯವಾದ ತಪಸ್ಸಿರುವದೋ' (ಮುಂ.೧-೧-೯), '(ಆ) ಧೀರನು ಸರ್ವರೂಪಗಳನ್ನೂ ಕಂಡು ಹೆಸರುಗಳನ್ನು ಕೊಟ್ಟು ಕರೆಯುತ್ತಾ ಇರುತ್ತಾನಷ್ಟೆ?' (ತೈ.ಆ.ಪ್ರ.೩-೧೨-೩೮), 'ಸರ್ವ ನಿಮಿಷಗಳೂ ವಿದ್ಯುದ್ರೂಪನಾದ ಪುರುಷನಿಂದ ಉಂಟಾಗಿರುತ್ತವೆ' (ತೈ.ನಾ.೨), 'ಅಪಹತಪಾಪ್ಮನು, ವಿಜರನು, ವಿಮೃತ್ಯುವು, ವಿಶೋಕನು, ಹಸಿವಿಲ್ಲದವನು, ಬಾಯಾರಿಕೆಯಿಲ್ಲದವನು; ಸತ್ಯಕಾಮನು, ಸತ್ಯಸಂಕಲ್ಪನು' (ಛಾಂ.೮-೧-೫, ೮-೭-೧) ಎಂದು ಜಗತ್ತಿನಲ್ಲೆಲ್ಲ ಹೇಯವೆಂದು ಗೊತ್ತಾಗಿರುವ ಎಲ್ಲಾ ಗುಣವನ್ನೂ ಅಲ್ಲಗಳೆದು **ನಿರತಿಶಯವಾದ ಕಲ್ಯಾಣಗುಣಗಳು ಅನಂತವಾಗಿರುವವೆಂದೂ (ಬ್ರಹ್ಮವು) ಸರ್ವಜ್ಞವೆಂದೂ (ಅದಕ್ಕೆ) ಸರ್ವಶಕ್ತಿಗಳ ಸಂಬಂಧವೂ**

(ಇದೆಯೆಂದೂ)ಎಲ್ಲಾ ನಾಮರೂಪಗಳನ್ನೂ (ಅದು) ವಿಂಗಡಿಸುವದೆಂದೂ ಎಲ್ಲಕ್ಕೂ ಆಧಾರವೆಂದೂ, ಕೆಲವು ಶ್ರುತಿಗಳು ಹೇಳುತ್ತಿವೆ. (೫) 'ಇದೆಲ್ಲವೂ ಬ್ರಹ್ಮವೇ ಅಲ್ಲವೆ, ಏಕೆಂದರೆ ಅದರಿಂದ ಹುಟ್ಟಿ (ಅದರಲ್ಲಿಯೇ) ಲಯವಾಗಿ, ಅದರಿಂದಲೇ ವ್ಯಾಪಾರಮಾಡುತ್ತಿದೆ' (ಛಾಂ. ೩-೧೪-೧), 'ಇದೆಲ್ಲವೂ ಇವನನ್ನೇ ಆತ್ಮನಾಗುಳ್ಳದ್ದು' (ಛಾಂ. ೬-೧೫-೩), 'ಒಬ್ಬನೇ ಆಗಿದ್ದು ಬಹುವಿಧವಾಗಿ ಸಂಚರಿಸುತ್ತಿರುವನು' (ತೈ. ಆ. ೩-೧೧-೨೦) -ಇವೇ ಮುಂತಾದ ಕೆಲವು ಶ್ರುತಿಗಳು **ಬ್ರಹ್ಮಸೃಷ್ಟವಾದ ಜಗತ್ತು ನಾನಾ ಆಕಾರಗಳುಳ್ಳದ್ದೆಂದು ಪ್ರತಿಪಾದಿಸಿ ಅದು ಒಂದೇ ಎಂದೂ ಪ್ರತಿಪಾದಿಸುತ್ತಿವೆ.** (೬) 'ಆತ್ಮನನ್ನೂ ಪ್ರೇರಿತೃವನ್ನೂ ಬೇರೆ ಎಂದು ತಿಳಿದುಕೊಂಡು' (ಶ್ವೇ. ೧-೬), 'ಭೋಕ್ತೃ ಭೋಗ್ಯ, ಪ್ರೇರಯಿತೃ- (ಇವರನ್ನು) ತಿಳಿದುಕೊಂಡು'(ಶ್ವೇ. ೧-೧೨), 'ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸುವೆನು- ಎಂದು ಇಚ್ಛಿಸಿದನು' (ತೈ.ಬ್ರಾ.೨-೨-೧), 'ವಿಶ್ವಕ್ಕೆಲ್ಲ ಪತಿಯೂ ಆತ್ಮನೂ ಈಶ್ವರನೂ ಶಾಶ್ವತನೂ ಶಿವಸ್ವರೂಪನೂ ಅಚ್ಯುತನೂ' (ತೈ.ನಾ.೧೩), 'ಆ ಈಶ್ವರರಿಗೆಲ್ಲರಿಗೂ ಹೆಚ್ಚಿನವನಾದ ಮಹೇಶ್ವರನನ್ನು ಮತ್ತು ಆ ದೇವತೆಗಳಿಗೆಲ್ಲರಿಗೂ ಹೆಚ್ಚಿನ ದೇವತೆಗಳನ್ನು'(ಶ್ವೇ.೬-೭), 'ಸರ್ವವನ್ನೂ ವಶದಲ್ಲಿಟ್ಟುಕೊಂಡಿರುವ, ಸರ್ವವನ್ನೂ ಆಳುತ್ತಿರುವ' (ಬೃ.೪-೪-೨೨) ಇವೇ ಮುಂತಾದ (ಕೆಲವು ಶ್ರುತಿಗಳು) ಬ್ರಹ್ಮವು ಎಲ್ಲಕ್ಕಿಂತಲೂ ಬೇರೆಯೆಂದೂ **ಎಲ್ಲವೂ ಈಶಿತವ್ಯವೆಂದೂ ಬ್ರಹ್ಮವು ಈಶ್ವರನೆಂದೂ ಎಲ್ಲವೂ ಶೇಷವೆಂದೂ ಈಶ್ವರನು ಪತಿಯೆಂದೂ (ಹೇಳುತ್ತಿವೆ).** (೭) 'ಜನರ ಒಳಗೆ ಹೊಕ್ಕು ಆಳುತ್ತಿರುವನು, ಸರ್ವರಿಗೂ ಆತ್ಮನು' (ತೈ.ಆ. ೩-೧೧-೨೧), 'ಇವನೇ ನಿನ್ನ ಆತ್ಮನಾದ ಅಮೃತನಾದ ಅಂತರ್ಯಾಮಿಯು' (ಬೃ.೩-೭-೩... ೩-೭-೨೩), 'ಯಾವನಿಗೆ ಪೃಥಿವಿಯು ಶರೀರವೋ.... ಯಾವನಿಗೆ ಅಪ್ಪು ಶರೀರವೋ.... 'ಯಾವನಿಗೆ ತೇಜಸ್ಸು ಶರೀರವೋ' (ಸು.೭) ಇತ್ಯಾದಿ ; 'ಯಾವನಿಗೆ ಅವ್ಯಕ್ತವು ಶರೀರವೋ, ಯಾವನಿಗೆ ಅಕ್ಷರವು ಶರೀರವೋ, ಯಾವನಿಗೆ ಮೃತ್ಯುವು ಶರೀರವೋ' (ಸು. ೭), 'ಯಾವನಿಗೆ ಆತ್ಮವು ಶರೀರವೋ,' (ಬೃ.ಮಾ.೩-೭-೩೦) - ಎಂದು ಬ್ರಹ್ಮವ್ಯತಿರಿಕ್ತವಾದ ಪ್ರತಿಯೊಂದು ವಸ್ತುವಿಗೂ ಬ್ರಹ್ಮಕ್ಕೂ **ಶರೀರಾತ್ಮಭಾವವನ್ನು ಕೆಲವು (ಶ್ರುತಿಗಳು) ತಿಳಿಸುತ್ತವೆ.** ಹೀಗೆ ನಾನಾರೂಪವಾಗಿರುವ ವಾಕ್ಯಗಳಿಗೆ ಅವಿರೋಧವೂ ಮುಖ್ಯಾರ್ಥವನ್ನು ಬಿಡದಿರುವದೂ ಹೇಗಾದರೆ ಹೊಂದುವದೋ ಹಾಗೆಯೇ ವರ್ಣಿಸತಕ್ಕದ್ದು ಯುಕ್ತ.

(ಹಾಗೆ ಇಲ್ಲಿ) ವರ್ಣಿಸಿದ್ದೂ ಆಗಿದೆ[1] : (ಬ್ರಹ್ಮವು) **ಅವಿಕಾರ**(ವೆಂದು ಹೇಳುವ) **ಶ್ರುತಿಗಳು** (ಬ್ರಹ್ಮಕ್ಕೆ) ಸ್ವರೂಪಪರಿಣಾಮವನ್ನು ತಪ್ಪಿಸಿರುವದರಿಂದಲೇ (ಅವಕ್ಕೆ) ಮುಖ್ಯಾರ್ಥ(ವನ್ನು ಹೇಳಿದಂತಾಗಿದೆ). **ನಿರ್ಗುಣವನ್ನು ಹೇಳುವ (ಶ್ರುತಿಗಳು)** ಪ್ರಾಕೃತವಾದ ಹೇಯಗುಣಗಳನ್ನು ನಿಷೇಧಮಾಡುವದರಲ್ಲಿ ತಾತ್ಪರ್ಯವುಳ್ಳವೆಂದು ವ್ಯವಸ್ಥೆಮಾಡಲಾಗಿದೆ. **ನಾನಾತ್ವವನ್ನು ನಿಷೇಧಮಾಡುವ ವಾಕ್ಯಗಳನ್ನು** ಚೇತನಾಚೇತನವಸ್ತುವೆಲ್ಲವೂ ಒಂದೇ ಬ್ರಹ್ಮಕ್ಕೆ ಶರೀರವಾಗಿ ಪ್ರಕಾರವಾಗಿದ್ದುಕೊಂಡಿರುವದರಿಂದ ಎಲ್ಲಕ್ಕೂ ಆತ್ಮನಾಗಿರುವದರಿಂದ ಬ್ರಹ್ಮವೇ ಸರ್ವಪ್ರಕಾರವುಳ್ಳದ್ದಾಗಿರುತ್ತದೆ (ಎಂದು ವರ್ಣಿಸಿ ಚೆನ್ನಾಗಿ) ಉಳಿಸಿಕೊಂಡದ್ದಾಗಿದೆ. **ಸರ್ವವಿಲಕ್ಷಣತ್ವ, ಪತಿತ್ವ, ಈಶ್ವರತ್ವ, ಸರ್ವಕಲ್ಯಾಣಗುಣಾಕರತ್ವ, ಸತ್ಯಕಾಮತ್ವ, ಸತ್ಯಸಂಕಲ್ಪತ್ವ, (ಇವೇ) ಮುಂತಾದ(ವನ್ನು ಹೇಳುವ) ವಾಕ್ಯವು** ಅದನ್ನು ಅಂಗೀಕರಿಸಿಕೊಂಡದ್ದರಿಂದಲೇ ಸುರಕ್ಷಿತವಾಗಿದೆ. **ಜ್ಞಾನಾನಂದಮಾತ್ರವನ್ನು ಹೇಳುವ ವಾಕ್ಯವನ್ನೂ,** ಎಲ್ಲಕ್ಕಿಂತಲೂ ಬೇರೆಯಾಗಿರುವ ಸರ್ವಕಲ್ಯಾಣಗುಣಗಳಿಗೂ ಆಶ್ರಯನೂ, ಸರ್ವೇಶ್ವರನೂ ಎಲ್ಲಕ್ಕೂ ಶೇಷಿಯೂ ಸರ್ವಾಧಾರನೂ ಎಲ್ಲದರ ಉತ್ಪತ್ತಿಸ್ಥಿತಿಪ್ರಲಯಗಳಿಗೆ ಕಾರಣನೂ ನಿರವದ್ಯನೂ ನಿರ್ವಿಕಾರನೂ ಸರ್ವಕ್ಕೂ ಆತ್ಮನೂ ಆಗಿರುವ ಪರಬ್ರಹ್ಮದ ಸ್ವರೂಪವನ್ನು ಗೊತ್ತುಪಡಿಸಿ ತಿಳಿಸುವ ಧರ್ಮವು ಮಲವಿರೋಧಿಯಾದ ಆನಂದರೂಪ ಜ್ಞಾನವೇ ಎಂದೂ ಸ್ವಪ್ರಕಾಶವಾಗಿರುವದ-ರಿಂದ ಸ್ವರೂಪವೂ ಜ್ಞಾನವೇ ಎಂದು ಪ್ರತಿಪಾದಿಸುವದರಿಂದ ಕಾಪಾಡಿಕೊಂಡಂತೆ ಆಯಿತು. **ಐಕ್ಯವನ್ನು ಹೇಳುವ (ಶ್ರುತಿ)ಗಳೂ** ಶರೀರಾತ್ಮಭಾವದಿಂದ ಸಾಮಾನಾಧಿ-ಕರಣ್ಯಕ್ಕೆ ಮುಖ್ಯಾರ್ಥವನ್ನು ಹೊಂದಿಸಿ (ತೋರಿಸಿಕೊಟ್ಟ)ರುವದರಿಂದಲೇ ಸುವ್ಯವಸ್ಥಿತವಾಗಿರುತ್ತವೆ.

(ಪ್ರಶ್ನೆ) :— ಹಾಗಾದರೆ **ವೇದಾಂತವೇದ್ಯವೆಂದು ಸಮರ್ಥಿತವಾಗಿರುವ ಈ ಅರ್ಥವು ಅಭೇದವೂ, ಭೇದವೂ (ಭೇದಾಭೇದವೆಂಬ) ಎರಡೂ ರೂಪದ್ದೂ - ಯಾವದು ?**

(ಉತ್ತರ) :— ಎಲ್ಲವೂ ವೇದದಿಂದ **ತಿಳಿಯಬರತಕ್ಕದ್ದೇ ಆಗಿರುವದರಿಂದ ಎಲ್ಲವನ್ನೂ ಸಮರ್ಥನೆಮಾಡಿದಂತೆ ಆಗಿದೆ. (೧) ಎಲ್ಲವನ್ನೂ ಶರೀರವಾಗುಳ್ಳದ್ದ-ರಿಂದ ಎಲ್ಲಾ ಪ್ರಕಾರಗಳಿಂದೊಡಗೂಡಿ ಬ್ರಹ್ಮವೇ ಇದೆ ಎಂದು ಅಭೇದವನ್ನು ಸಮರ್ಥಿಸಿದ್ದಾಗಿದೆ. (೨) ಒಂದೇ ಬ್ರಹ್ಮವೇ ನಾನಾರೂಪವಾಗಿರುವ ಚಿದಚಿದ್ವಸ್ತು-ಗಳೆಂಬ ಪ್ರಕಾರಗಳುಳ್ಳದ್ದಾಗಿದೆ ಎಂದು ಭೇದಾಭೇದಗಳನ್ನು (ಸಮರ್ಥಿಸಿದ್ದಾಗಿರು ತ್ತದೆ). (೩) ಅಚಿದ್ವಸ್ತುವಿನ, ಚಿದ್ವಸ್ತುವಿನ ಮತ್ತು ಈಶ್ವರನ ಸ್ವರೂಪವೂ**

1. ಇದು ಪೂರ್ವಾಚಾರ್ಯರ ಉಕ್ತಿಗೆ ಅನುಗುಣವೂ ಆಗಿದೆ ಎಂಬ ಭಾವವನ್ನು ಇಲ್ಲಿ ಟೀಕೆಯಲ್ಲಿ ತೆಗೆದಿದೆ.

ಸ್ವಭಾವವೂ ವಿಲಕ್ಷಣವಾಗಿರುವದರಿಂದಲೂ (ಒಂದಕ್ಕೊಂದು) ಸೇರಿಕೊಳ್ಳದಿರುವದರಿಂದಲೂ ಭೇದವೂ ಸಮರ್ಥಿತವಾಗಿರುತ್ತದೆ.

ತತ್ತ್ವಮಸಿವಾಕ್ಯವು ಸಗುಣಪರವೆಂದರೇ ಶ್ರುತ್ಯವಿರೋಧ

(ಮೂಲ)

೫೯. ನನು ಚ 'ತತ್ತ್ವಮಸಿ ಶ್ವೇತಕೇತೋ' (ಛಾಂ. ೬-೮-೭,೬-೮-೧೬), 'ತಸ್ಯ ತಾವದೇವ ಚಿರಮ್' (ಛಾಂ. ೬-೧೪-೨), 'ಇತ್ಯೈಕ್ಯಜ್ಞಾನಮೇವ ಪರಮಪುರುಷಾರ್ಥಲಕ್ಷಣಮೋಕ್ಷಸಾಧನಮಿತಿ ಗಮ್ಯತೇ । ನೈತದೇವಮ್ । ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ ಜುಷ್ಟಸ್ತತಸ್ತೇನಾಽಮೃತತ್ವಮೇತಿ' (ಶ್ವೇ. ೧-೬), ಆತ್ಮಾನಂ ಪ್ರೇರಿತಾರಂ ಚಾಽನ್ತರ್ಯಾಮಿಣಂ ಪೃಥಗ್ಭೂತ್ವಾ ತತಃ ಪೃಥಕ್ತ್ವಜ್ಞಾನಾದ್ಧೇತೋಃ, ತೇನ ಪರಮಾತ್ಮನಾ ಜುಷ್ಟಃ ಅಮೃತತ್ವ ಮೇತಿ - ಇತಿ ಸಾಕ್ಷಾದಮೃತತ್ವಪ್ರಾಪ್ತಿಸಾಧನಮ್ ಆತ್ಮನೋ ನಿಯನ್ತುಶ್ಚ ಪೃಥಗ್ಭಾವಜ್ಞಾನಮೇವ ಇತ್ಯವಗಮ್ಯತೇ । ಐಕ್ಯವಾಕ್ಯವಿರೋಧಾತ್ ಏತದಪರಮಾರ್ಥಂ ಸಗುಣಬ್ರಹ್ಮಪ್ರಾಪ್ತಿವಿಷಯಮ್ ಇತ್ಯಭ್ಯುಪಗನ್ತವ್ಯಮ್ ಇತಿ ಚೇತ್ ಪೃಥಕ್ತ್ವಜ್ಞಾನಸ್ಯೈವ ಸಾಕ್ಷಾದಮೃತತ್ವಪ್ರಾಪ್ತಿಸಾಧನತ್ವಶ್ರವಣಾತ್ ವಿಪರೀತಂ ಕಸ್ಮಾನ್ನ ಭವತಿ ? ಏತದುಕ್ತಂ ಭವತಿ । ದ್ವಯೋಸ್ತುಲ್ಯಯೋರ್ವಿರೋಧೇ ಸತಿ ಅವಿರೋಧೇನ ತಯೋರ್ವಿಷಯೋ ವಿವೇಚನೀಯ ಇತಿ । ಕಥಮವಿರೋಧ ಇತಿ ಚೇತ್ ? ಅನ್ತರ್ಯಾಮಿರೂಪೇಣಾಽವಸ್ಥಿತಸ್ಯ ಪರಸ್ಯ ಬ್ರಹ್ಮಣಃ ಶರೀರತಯಾ ಪ್ರಕಾರತ್ವಾಜ್ಜೀವಾತ್ಮನಃ, ತತ್ಪ್ರಕಾರಂ ಬ್ರಹ್ಮೈವ ತ್ವಮ್ ಇತಿ ಶಬ್ದೇನ ಅಭಿಧೀಯತೇ । ತಥೈವ ಜ್ಞಾತವ್ಯಮಿತಿ ತಸ್ಯ ವಾಕ್ಯಸ್ಯ ವಿಷಯಃ[1] । ಏವಂಭೂತಾಜ್ಜೀವಾತ್ ತದಾತ್ಮತಯಾ ಅವಸ್ಥಿತಸ್ಯ ಪರಮಾತ್ಮನೋ ನಿಖಿಲದೋಷರಹಿತತಯಾ ಸತ್ಯಸಂಕಲ್ಪತ್ವಾದ್ಯನವಧಿಕಾತಿಶಯಾಸಂಖ್ಯೇಯಕಲ್ಯಾಣಗುಣಾಕರತ್ವೇನ ಚ ಯಃ ಪೃಥಗ್ಭಾವಃ ಸೋಽನುಸಂಧೇಯಃ ಇತ್ಯಸ್ಯ ವಾಕ್ಯಸ್ಯ ವಿಷಯಃ - ಇತ್ಯಯಮರ್ಥಃ ಪೂರ್ವಮೇವ ಅಸಕೃದುಕ್ತಃ । 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ' (ಶ್ವೇ. ೧-೧೨) ಇತಿ ಭೋಗ್ಯಭೂತಸ್ಯ[2] ವಸ್ತುನೋಽಚೇತನತ್ವಂ ಪರಮಾರ್ಥತ್ವಂ ಸತತವಿಕಾರಾಸ್ಪದತ್ವಮ್ ಇತ್ಯಾದಯಃ ಸ್ವಭಾವಾಃ । ಭೋಕ್ತುಃ ಜೀವಾತ್ಮನಶ್ಚ ಅಮಲಾಪರಿಚ್ಛಿನ್ನಜ್ಞಾನಾನನ್ದಸ್ವಭಾವಸ್ಯೈವ ಅನಾದಿಕರ್ಮರೂಪಾವಿದ್ಯಾಕೃತನಾನಾವಿಧಜ್ಞಾನಸಙ್ಕೋಚವಿಕಾಸ್ ಭೋಗ್ಯಭೂತಾಚಿದ್ವಸ್ತುಸಂಸರ್ಗಶ್ಚ ।

---

1. 'ಅರ್ಥಃ' ತೆ॥ 2. 'ರೂಪಸ್ಯ' ಕಾ॥

ಪರಮಾರ್ಥೋಪಾಸನಾತ್ ಮೋಕ್ಷಶ್ಚ ಇತ್ಯಾದಯಃ ಸ್ವಭಾವಾಃ । ಏವಂಭೂತಭೋಕ್ತೃಭೋಗ್ಯಯೋಃ ಅನ್ತರ್ಯಾಮಿರೂಪೇಣಾಽವಸ್ಥಾನಮ್ ಸ್ವರೂಪೇಣ ಚಾಽಪರಿಮಿತಗುಣೌಘಾಶ್ರಯತ್ವೇನಾಽವಸ್ಥಾನಮ್ ಇತಿ ಪರಸ್ಯ ಬ್ರಹ್ಮಣಸ್ತ್ರಿವಿಧಾವಸ್ಥಾನಂ ಜ್ಞಾತವ್ಯಮಿತ್ಯರ್ಥಃ ॥

(ಅರ್ಥ)

(ಆಕ್ಷೇಪ) :— 'ಶ್ವೇತಕೇತುವೆ, ಅದೇ ನೀನಾಗಿರುವೆ' (ಛಾಂ. ೬-೮-೭, ೬-೮-೧೬), 'ಅವನಿಗೆ ಅಲ್ಲಿಯವರೆಗೇ ತಡ' (ಛಾಂ. ೬-೧೪-೨)- ಎಂಬ (ಶ್ರುತಿಯಿಂದ) ಐಕ್ಯಜ್ಞಾನವೇ ಪರಮಪುರುಷಾರ್ಥರೂಪವಾದ ಮೋಕ್ಷಕ್ಕೆ ಸಾಧನವೆಂದು ತಿಳಿಯಬರುತ್ತದೆಯಲ್ಲ!

(ಪರಿಹಾರ) :— ಇದು ಹಾಗಲ್ಲ. 'ಆತ್ಮನನ್ನೂ ಪ್ರೇರಿತೃವನ್ನೂ ಬೇರೆಯಾಗಿ ತಿಳಿದುಕೊಂಡು, ಆದರಿಂದ ಅವನಿಂದ ಜುಷ್ಟನಾಗಿ ಅಮೃತತ್ವವನ್ನು ಹೊಂದುತ್ತಾನೆ' (ಶ್ವೇ. ೧-೬) ಎಂಬ (ಶ್ರುತಿಯಿಂದ) ಆತ್ಮನನ್ನೂ ಪ್ರೇರಿತೃವಾದ ಅಂತರ್ಯಾಮಿಯನ್ನೂ ಬೇರೆಬೇರೆ ಎಂದು ತಿಳಿದುಕೊಂಡು, ಆದರಿಂದ- ಆ ಪೃಥಕ್ತ್ವಜ್ಞಾನವೆಂಬ ಹೇತುವಿನಿಂದ, ಅವನಿಂದ - ಆ ಪರಮಾತ್ಮನಿಂದ- ಅನುಗೃಹೀತನಾಗಿ - ಅಮೃತತ್ವವನ್ನು ಹೊಂದುತ್ತಾನೆ ಎಂದು ಸಾಕ್ಷಾತ್ತಾಗಿ[1] **ಅಮೃತತ್ವ ಪ್ರಾಪ್ತಿಗೆ ಸಾಧನವಾದದ್ದು ಆತ್ಮನೂ ನಿಯಂತೃವೂ ಪೃಥಕ್ಕಾಗಿರುತ್ತಾರೆಂಬ ಜ್ಞಾನವೇ ಎಂದು ಗೊತ್ತಾಗಿರುತ್ತದೆ.**

(ಪೂರ್ವಪಕ್ಷಿ) :— (ಈ ವಾಕ್ಯವು) ಐಕ್ಯ(ವನ್ನು ಹೇಳುವ) ವಾಕ್ಯಕ್ಕೆ ವಿರುದ್ಧವಾಗಿರುವದರಿಂದ ಅಪರಮಾರ್ಥವಾದ ಸಗುಣಬ್ರಹ್ಮಪ್ರಾಪ್ತಿವಿಷಯಕವಾದದ್ದೆಂದು ಒಪ್ಪಬೇಕು.

(ಸಿದ್ಧಾಂತಿ) :— ಪೃಥಕ್ತ್ವಜ್ಞಾನವೇ ಅಮೃತತ್ವಪ್ರಾಪ್ತಿಗೆ ಸಾಧನವೆಂದು ಸಾಕ್ಷಾತ್ತಾಗಿ ಶ್ರುತಿಯು ಹೇಳಿರುವದರಿಂದ (ನೀವು ಹೇಳಿದ್ದಕ್ಕೆ) ವಿಪರೀತವಾಗಿಯೇ ಏತಕ್ಕಾಗಬಾರದು? (ಇಲ್ಲಿ ನಾವು) ಇಷ್ಟನ್ನು ಹೇಳಿದಂತಾಗಿದೆ : ಸಮಾನ(ಬಲವುಳ್ಳ) ಎರಡಕ್ಕೆ ವಿರೋಧವು (ಬಂದೊದಗಿದರೆ) ವಿರೋಧವಾಗದಂತೆ ಅವೆರಡಕ್ಕೂ ವಿಷಯವನ್ನು ವಿಂಗಡಿಸಿಕೊಳ್ಳಬೇಕು.

(ಪೂರ್ವಪಕ್ಷಿ) :— (ಹಾಗಾದರೆ ಇಲ್ಲಿ ಇವೆರಡಕ್ಕೆ) ಅವಿರೋಧವು ಹೇಗೆ?

(ಸಿದ್ಧಾಂತಿ) :— ಅಂತರ್ಯಾಮಿಯ ರೂಪದಿಂದ ಇದ್ದುಕೊಂಡಿರುವ ಪರಬ್ರಹ್ಮಕ್ಕೆ ಜೀವಾತ್ಮನು ಶರೀರವಾಗಿ ಪ್ರಕಾರವಾಗಿರುವದರಿಂದ **ಆ (ಜೀವ)**

---

1. ಶ್ರುತಿಯ ಮುಖದಿಂದಲೇ ನೇರಾಗಿ ಗೊತ್ತಾಗಿರುತ್ತದೆ ; ಪೂರ್ವಪಕ್ಷಿಯು ಉದಾಹರಿಸಿದ ವಾಕ್ಯದಂತೆ ನಾವು ವಾಕ್ಯಕ್ಕೆ ಅರ್ಥವನ್ನು ಕಲ್ಪಿಸಬೇಕಾಗಿಲ್ಲ- ಎಂದರ್ಥ.

ಪ್ರಕಾರಕವಾದ ಬ್ರಹ್ಮವೇ ತ್ವಮ್ (ನೀನು) ಎಂಬ ಶಬ್ದದಿಂದ ಅಭಿಹಿತವಾಗಿರುತ್ತದೆ. ಹಾಗೆಯೇ ಅರಿತುಕೊಳ್ಳಬೇಕು ಎಂಬುದು ಆ ವಾಕ್ಯಕ್ಕೆ ವಿಷಯವು, ಹೀಗಿರುವ ಜೀವನಿಗಿಂತ ಅವನ ಆತ್ಮನಾಗಿ ಇದ್ದುಕೊಂಡಿರುವ ಪರಮಾತ್ಮನಿಗೆ ನಿಖಿಲದೋಷ ರಹಿತವಾಗಿರುವದರಿಂದಲೂ ಸತ್ಯಸಂಕಲ್ಪತ್ವವೇ ಮುಂತಾದ ಅನವಧಿಕಾತಿಶಯಾ ಸಂಖ್ಯೇಯಕಲ್ಯಾಣಗುಣಾಕರನಾಗಿರುವದರಿಂದಲೂ ಪೃಥಕ್ತ್ವವಿದೆಯಷ್ಟೆ? ಅದನ್ನು ಅನುಸಂಧಾನಮಾಡಬೇಕು ಎಂಬುದು ಈ ವಾಕ್ಯಕ್ಕೆ ವಿಷಯವು- ಎಂಬೀ ಅರ್ಥವನ್ನು ಹಿಂದೆಯೇ ಎಷ್ಟೋ ಸಲ ಹೇಳಿದ್ದಾಗಿದೆ. 'ಭೋಕ್ತೃ, ಭೋಗ್ಯ, ಪ್ರೇರಿತೃ- ಇವರನ್ನು ಅರಿತುಕೊಂಡು'(ಶ್ವೇ.೬-೧೨) ಎಂಬ (ವಾಕ್ಯಕ್ಕೆ) (೧) ಭೋಗ್ಯರೂಪವಾದ ವಸ್ತುವು ಅಚೇತನವಾಗಿರುವದು, ಪರಮಾರ್ಥವಾಗಿರುವದು ಸತತವಾಗಿ ವಿಕಾರಾಸ್ಪದವಾಗಿರುವದು- ಮುಂತಾದವು ಸ್ವಭಾವಗಳು ; (೨) ಭೋಕ್ತೃವಾದ ಜೀವಾತ್ಮನಿಗೆ (ನಿಜವಾಗಿ) ನಿರ್ಮಲವಾದ ಅಪರಿಚ್ಛಿನ್ನವಾದ ಜ್ಞಾನಾನಂದಸ್ವಭಾವ ವಿರುವದಾದರೂ ಅನಾದಿಕರ್ಮರೂಪವಾದ ಅವಿದ್ಯೆಯಿಂದಾದ ನಾನಾವಿಧಜ್ಞಾನ ಸಂಕೋಚವಿಕಾಸಗಳೂ ಭೋಗ್ಯವಾಗಿರುವ ಅಚಿದ್ವಸ್ತುವಿನ ಸಂಸರ್ಗವೂ ಪರಮಾತ್ಮನ ಉಪಾಸನೆಯಿಂದ ಮೋಕ್ಷ(ವಾಗುವದೂ)- ಮುಂತಾದವು ಸ್ವಭಾವಗಳು ; (೩) ಹೀಗಿದ್ದುಕೊಂಡಿರುವ ಭೋಕ್ತೃಭೋಗ್ಯಗಳಿಗೆ ಅಂತರ್ಯಾಮಿ ಯಾಗಿದ್ದುಕೊಂಡಿರುವದು, ಸ್ವರೂಪದಿಂದ ಅಪರಿಮಿತಗುಣಗಳ ಸಮೂಹಕ್ಕೆ ಆಶ್ರಯವಾಗಿರುವದು ಎಂದು ಪರಬ್ರಹ್ಮಕ್ಕೆ ಮೂರು ಬಗೆಯಿಂದ ಇರವನ್ನು ಅರಿಯಬೇಕು ಎಂದರ್ಥ.

ಸದ್ವಿದ್ಯೆಯು ಸಗುಣರೂಪವೆಂಬುದಕ್ಕೆ ಆಪ್ತೋಕ್ತಿ

(ಮೂಲ)

೬೦. ತತ್ತ್ವಮಸೀತಿ ಸದ್ವಿದ್ಯಾಯಾಮ್ ಉಪಾಸ್ಯಂ ಬ್ರಹ್ಮ ಸಗುಣಂ ಸಗುಣಬ್ರಹ್ಮಪ್ರಾಪ್ತಿಶ್ಚ ಫಲಮ್ ಇತ್ಯಭಿಯುಕ್ತೈಃ ಪೂರ್ವಾಚಾರ್ಯೈರ್ವ್ಯಾಖ್ಯಾತಮ್। ಯಥೋಕ್ತಂ ವಾಕ್ಯಕಾರೇಣ 'ಯುಕ್ತಂ ತದ್ಗುಣಕೋಪಾಸನಾತ್' (ವಾಕ್ಯ.) ಇತಿ । ವ್ಯಾಖ್ಯಾತಂ ಚ ದ್ರಮಿಡಾಚಾರ್ಯೇಣ ವಿದ್ಯಾವಿಕಲ್ಪಂ ವದತಾ । 'ಯದ್ಯಪಿ ಸಚ್ಚಿತ್ತೋ ನ ನಿರ್ಭುಗ್ನದೈವತಂ ಗುಣಗಣಂ ಮನಸಾಽನುಧಾವೇತ್, ತಥಾಪ್ಯನ್ತರ್ಗುಣಾಮೇವ ದೇವತಾಂ ಭಜತೇ ಇತಿ ತತ್ರಾಪಿ ಸಗುಣೈವ ದೇವತಾ ಪ್ರಾಪ್ಯತೇ'(ದ್ರ.ಭಾ.)ಇತಿ । ಸಚ್ಚಿತ್ತಃಸದ್ವಿದ್ಯಾನಿಷ್ಠಃ । ನ ನಿರ್ಭುಗ್ನದೈವತಂ ಗುಣಗಣಂ ಮನಸಾಽನುಧಾವೇತ್ ಅಪಹತಪಾಪ್ಮತ್ವಾದಿಕಲ್ಯಾಣಗುಣಗಣಂ ದೈವತಾದ್ವಿಭಕ್ತಂ ಯದ್ಯಪಿ ದಹರ ವಿದ್ಯಾನಿಷ್ಠ ಇವ ಸಚ್ಚಿತ್ತೋ ನ ಸ್ಮರೇತ್, ತಥಾಪಿ ಅನ್ತರ್ಗುಣಾಮೇವ ದೇವತಾಂ

ಭಜತೇ । ದೇವತಾಸ್ವರೂಪಾನುಬನ್ಧಿತ್ವಾತ್ ಸಕಲಕಲ್ಯಾಣಗುಣಗಣಸ್ಯ । ಕೇನಚಿತ್ ಪರದೇವತಾಽಸಾಧಾರಣೇನ ನಿಖಿಲಜಗತ್ಕಾರಣತ್ವಾದಿನಾ ಗುಣೇನೋಪಾಸ್ಯಮಾನಾಽಪಿ ದೇವತಾ ವಸ್ತುತಃ ಸ್ವರೂಪಾನುಬನ್ಧಿಸರ್ವಕಲ್ಯಾಣಗುಣಗಣ[1] ವಿಶಿಷ್ಟೈವ ಉಪಾಸ್ಯತೇ । ಅತಃ ಸಗುಣಮೇವ ಬ್ರಹ್ಮ ತತ್ರಾಽಪಿ ಪ್ರಾಪ್ಯಮ್ ಇತಿ ಸದ್ವಿದ್ಯಾದಹರವಿದ್ಯಯೋರ್ವಿಕಲ್ಪ ಇತ್ಯರ್ಥಃ ॥

(ಅರ್ಥ)

'ತತ್ತ್ವಮಸಿ' ಎಂಬ ಸದ್ವಿದ್ಯೆಯಲ್ಲಿ ಉಪಾಸ್ಯವಾದ ಬ್ರಹ್ಮವು ಸಗುಣವೇ, ಸಗುಣಬ್ರಹ್ಮಪ್ರಾಪ್ತಿಯೇ ಫಲವು- ಎಂದು ಅಭಿಯುಕ್ತರಾದ **ಪೂರ್ವಾಚಾರ್ಯರುಗಳು** ವ್ಯಾಖ್ಯಾನಮಾಡಿರುತ್ತಾರೆ. ಹೇಗೆಂದರೆ **ವಾಕ್ಯಕಾರರು** 'ತದ್ಗುಣಕೋಪಾಸನೆಯಿರುವದರಿಂದ (ಗುಣ)ಯುಕ್ತವೇ' (ಪ್ರಾಪ್ಯವು) (ವಾ.)- ಎಂದು ಹೇಳಿರುತ್ತಾರೆ. **ದ್ರಮಿಡಾಚಾರ್ಯರು** ವಿದ್ಯಾವಿಕಲ್ಪವನ್ನು ಹೇಳುವದಕ್ಕಾಗಿ (ಇದನ್ನು) ವ್ಯಾಖ್ಯಾನಮಾಡಿರುವದು (ಹೇಗೆಂದರೆ) : 'ಸಚ್ಚಿತ್ತನಾದವನು ನಿರ್ಭುಗ್ನದೈವತವಾದ ಗುಣಗಣವನ್ನು ಮನಸ್ಸಿನಿಂದ ಚಿಂತಿಸದಿದ್ದರೂ ಹಾಗೂ ಅಂತರ್ಗುಣದೇವತೆಯನ್ನೇ ಭಜಿಸುತ್ತಾನಾದ್ದರಿಂದ ಅಲ್ಲಿಯೂ ಸಗುಣ ದೇವತೆಯೇ ಪ್ರಾಪ್ತವಾಗುವದು' (ದ್ರ.ಭಾ.). (ಈ ವ್ಯಾಖ್ಯಾನದಲ್ಲಿ) 'ಸಚ್ಚಿತ್ತನು'- ಎಂದರೆ ಸದ್ವಿದ್ಯಾನಿಷ್ಠನಾಗಿರುವವನು; ನಿರ್ಭುಗ್ನದೈವತವಾದ ಗುಣಗಣವನ್ನು ಮನಸ್ಸಿನಿಂದ ಚಿಂತಿಸದಿದ್ದರೂ, ಎಂದರೆ ಅಪಹತಪಾಪ್ಮತ್ವಾದಿ ಕಲ್ಯಾಣಗುಣಗಣವನ್ನು ದೇವತೆಗಿಂತ ಬೇರೆಯಾಗಿ ದಹರವಿದ್ಯಾನಿಷ್ಠನಂತೆ ಸಚ್ಚಿತ್ತನು ಸ್ಮರಿಸದೆ ಇರುವನಾದರೂ (ಎಂದರ್ಥ). 'ಹಾಗೂ ಅಂತರ್ಗುಣ ದೇವತೆಯನ್ನೇ ಭಜಿಸುತ್ತಾನೆ' ಎಂದರೆ ಸಕಲಗುಣಗಣವೂ ದೇವತಾಸ್ವರೂಪಕ್ಕೆ ಸಂಬಂಧಪಟ್ಟಿರುವದರಿಂದ, ಪರದೇವತೆಗೆ ಅಸಾಧಾರಣವಾಗಿರುವ ನಿಖಿಲಜಗತ್ಕಾರಣತ್ವವೇ ಮುಂತಾದ ಗುಣದಿಂದ (ಕೂಡಿದ್ದೆಂದು) ಉಪಾಸನೆ ಮಾಡಿದಾಗಲೂ ನಿಜವಾಗಿ ಸ್ವರೂಪಕ್ಕೆ ಸಂಬದ್ಧವಾಗಿಯೇ ಇರುವ ಸರ್ವಕಲ್ಯಾಣ ಗುಣವಿಶಿಷ್ಟವಾದ ದೇವತೆಯನ್ನೇ ಉಪಾಸನೆಮಾಡಿರುತ್ತಾನೆ ; ಆದ್ದರಿಂದ ಸಗುಣಬ್ರಹ್ಮವೇ ಅಲ್ಲಿಯೂ ಪ್ರಾಪ್ತವಾಗಿರುತ್ತದೆಯಾಗಿ **ಸದ್ವಿದ್ಯಾದಹರವಿದ್ಯೆಗಳಿಗೆ ವಿಕಲ್ಪವೇ**[2] ಎಂದರ್ಥ.

---

1. ಕಾ॥ ಪಾಠದಲ್ಲಿ ಈ ಮಾತಿಲ್ಲ.
2. ಸದ್ವಿದ್ಯೆಯನ್ನು ಅನುಷ್ಠಾನಮಾಡುವವನು ದಹರವಿದ್ಯೆಯನ್ನು ಅನುಷ್ಠಾನಮಾಡಬೇಕಾಗಿಲ್ಲ.

ಜೀವರೇ ತಮ್ಮತಮ್ಮ ಕರ್ಮಕ್ಕೆ ಹೊಣೆ

(ಮೂಲ)

೬೧. ನನು ಚ ಸರ್ವಸ್ಯ ಜನ್ತೋಃ ಪರಮಾತ್ಮಾ ಅನ್ತರ್ಯಾಮಿಾ ತನ್ನಿಯಾಮ್ಯಂ ಚ ಸರ್ವಮ್ ಇತ್ಯುಕ್ತಮ್ । ಏವಂ ಚ ಸತಿ ವಿಧಿನಿಷೇಧ ಶಾಸ್ತ್ರಾಣಾಮ್ ಅಧಿಕಾರೀ ನ ದೃಶ್ಯತೇ । ಯಃ ಸ್ವಬುದ್ಧ್ಯೈವ ಪ್ರವೃತ್ತಿನಿವೃತ್ತಿಶಕ್ತಃ, ಸ ಏವಂ ಕುರ್ಯಾತ್, ನ ಕುರ್ಯಾತ್ - ಇತಿ ವಿಧಿನಿಷೇಧಯೋಗ್ಯಃ । ನ ಚೈಷ ದೃಶ್ಯತೇ । ಸರ್ವಸ್ಮಿನ್ ಪ್ರವೃತ್ತಿಜಾತೇ ಸರ್ವಸ್ಯ ಪ್ರೇರಕಃ ಪರಮಾತ್ಮಾ ಕಾರಯಿತಾ ಇತಿ ತಸ್ಯ ಸರ್ವನಿಯಮನಂ ಪ್ರತಿಪಾದಿತಮ್ । ಶ್ರೂಯತೇ ಚ[1] 'ಏಷ ಏವ ಸಾಧು ಕರ್ಮ ಕಾರಯತಿ ತಂ ಯಮೇಭ್ಯೋ ಲೋಕೇಭ್ಯ ಉನ್ನಿನೀಷತಿ, ಏಷ ಏವಾಸಾಧು ಕರ್ಮ ಕಾರಯತಿ ತಂ ಯಮಧೋ ನಿನೀಷತಿ' (ಕೌ. ೩-೯)[2] ಇತಿ । ಸಾಧ್ವಸಾಧುಕರ್ಮಕಾರಯಿತೃತ್ವಾತ್ ನೈರ್ಘೃಣ್ಯಂ ಚ ॥

ಅತ್ರೋಚ್ಯತೇ । ಸರ್ವೇಷಾಮೇವ ಚೇತನಾನಾಂ ಚಿಚ್ಛಕ್ತಿಯೋಗಃ ಪ್ರವೃತ್ತಿಶಕ್ತಿಯೋಗಃ ಇತ್ಯಾದಿ ಸರ್ವಂ ಪ್ರವೃತ್ತಿನಿವೃತ್ತಿಪರಿಕರಂ ಸಾಮಾನ್ಯೇನ ಸಂವಿಧಾಯ, ತನ್ನಿರ್ವಹಣಾಯ ತದಾಧಾರೋ ಭೂತ್ವಾ ಅನ್ತಃಪ್ರವಿಶ್ಯ, ಅನುಮನ್ತೃತಯಾ ಚ ನಿಯಮನಂ ಕುರ್ವನ್ ಶೇಷಿತ್ವೇನಾಽನವಸ್ಥಿತಃ ಪರಮಾತ್ಮಾ । ಏತದಾಹಿತಶಕ್ತಿಃ ಸನ್ ಪ್ರವೃತ್ತಿನಿವೃತ್ತ್ಯಾದಿ ಸ್ವಯಮೇವ ಕುರುತೇ । ಏವಂ ಕುರ್ವಾಣಮೀಕ್ಷಮಾಣಃ ಪರಮಾತ್ಮಾ ಉದಾಸೀನ ಆಸ್ತೇ । ಅತಃ ಸರ್ವಮ್ ಉಪಪನ್ನಮ್ । ಸಾಧ್ವಸಾಧುಕರ್ಮಕಾರಯಿತೃತ್ವಂ ತು ವ್ಯವಸ್ಥಿತವಿಷಯಮ್ ನ ಸರ್ವಸಾಧಾರಣಮ್ । ಯಸ್ತು ಪೂರ್ವಂ ಸ್ವಯಮೇವ ಅತಿಮಾತ್ರಮ್ ಅನುಕೂಲ್ಯೇ ಪ್ರವೃತ್ತಃ, ತಂ ಪ್ರತಿ ಪ್ರೀತಃ ಸ್ವಯಮೇವ ಭಗವಾನ್ ಕಲ್ಯಾಣಬುದ್ಧಿಯೋಗದಾನಂ ಕುರ್ವನ್ ಕಲ್ಯಾಣೇ ಪ್ರವರ್ತಯತಿ । ಯಃ ಪುನರತಿಮಾತ್ರಂ ಪ್ರಾತಿಕೂಲ್ಯೇ ಪ್ರವೃತ್ತಃ,

---

1. 'ತಥಾ ಚ ಶ್ರೂಯತೇ' ಕಾ॥
2. 'ಏಷ ಹ್ಯೇವೈನಂ ಸಾಧು ಕರ್ಮ ಕಾರಯತಿ ತಂ ಯಮಸ್ಯಾನುನೇಷತ್ಯೇಷ ಏವೈನಮಸಾಧು ಕರ್ಮ ಕಾರಯತಿ ತಂ ಯಮೇಭ್ಯೋ ಲೋಕೇಭ್ಯೋ ನುನುತ್ಸತ' ಎಂದು ಮುದ್ರಿತಪಾಠ. **ಆನಂದಾಶ್ರಮ ಮುದ್ರಿತ ಶಾಙ್ಖಾಯನಾರಣ್ಯಕ**ದಲ್ಲಿ : 'ಏಷ ಹ್ಯೇವ.... ಉನ್ನಿನೀಷತ ಏಷ ಉ ಏವಾ— ನಿನೀಷತೇ' (ಶಾಂ.ಆ.೫-೮) ಎಂದಿದೆ. **ಶಂಕರಾನಂದ ಕೃತದೀಪಿಕಾಸಮೇತ**ವಾದ **ಉಪನಿಷತ್ತಿ**ನಲ್ಲಿಯೂ ಇದೇ ಪಾಠವಿದೆ. ರಾಮಾನುಜಾಚಾರ್ಯರು ಇಲ್ಲಿ ಬೇರೊಂದು ಪಾಠವನ್ನು ಉಪಯೋಗಿಸಿರಬೇಕೆಂದು ತೋರುತ್ತದೆ. **ಶ್ರೀಭಾಷ್ಯ**ದಲ್ಲಿಯೂ 'ಏಷ ಏವ' ಎಂದೇ ಪಾಠವಿದೆ. (ಶಾರೀರಕ ೧-೧-೩೦ರ ಭಾಷ್ಯ, ವೇದಾಂತಸಾರ, ವೇದಾಂತದೀಪ- ಇವುಗಳನ್ನು ನೋಡಿ).

ತಸ್ಯ ತು[1] ಕ್ರೂರಾಂ ಬುದ್ಧಿಂ ದದತ್ ಸ್ವಯಮೇವ ಕ್ರೂರೇಷ್ವೇವ ಕರ್ಮಸು ಪ್ರೇರಯತಿ ಭಗವಾನ್ । ಯಥೋಕ್ತಂ ಭಗವತಾ 'ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿ ಪೂರ್ವಕಮ್ । ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥ ತೇಷಾಮೇವಾನುಕಮ್ಪಾರ್ಥಮಹ ಮಜ್ಞಾನಜಂ ತಮಃ । ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ (ಗೀ. ೧೦-೧೦, ೧೧), 'ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ । ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು' (ಗೀ. ೧೬-೧೯) ಇತಿ ॥

(ಅರ್ಥ)

ಇನ್ನೊಂದು (ಆಕ್ಷೇಪ) :— ಪ್ರತಿಯೊಬ್ಬ ಜೀವನಿಗೂ ಪರಮಾತ್ಮನೇ ಅಂತರ್ಯಾಮಿ, ಎಲ್ಲವೂ ಅವನಿಗೆ ನಿಯಾಮ್ಯವೇ ಎಂದು ಹೇಳಿದಿರಿ. ಹೀಗಾದರೆ ವಿಧಿನಿಷೇಧಶಾಸ್ತ್ರಗಳಿಗೆ ಅಧಿಕಾರಿಯೇ ಕಾಣುವದಿಲ್ಲವಲ್ಲ! ಯಾವನು ತನ್ನ ಬುದ್ಧಿಯಿಂದಲೇ ಪ್ರವೃತ್ತಿನಿವೃತ್ತಿಗಳಲ್ಲಿ ಶಕ್ತನಾಗಿರುವನೋ ಅವನು 'ಹೀಗೆ ಮಾಡಬೇಕು, ಹೀಗೆ ಮಾಡಬಾರದು' ಎಂಬ ವಿಧಿನಿಷೇಧಗಳಿಗೆ ತಕ್ಕವನು. ಆದರೆ ಅಂಥವನು ಕಾಣುವದಿಲ್ಲ ; (ಏಕೆಂದರೆ) ಎಲ್ಲಾ ಪ್ರವೃತ್ತಿಸಮೂಹದಲ್ಲಿಯೂ ಪ್ರತಿಯೊಬ್ಬನಿಗೂ ಪ್ರೇರಕನಾಗಿ ಪರಮಾತ್ಮನೇ ಮಾಡಿಸುವವನು- ಎಂದು ಅವನಿಗೆ ಸರ್ವನಿಯಂತೃತ್ವ-ವನ್ನು ಹೇಳಿರುತ್ತೀರಿ. 'ಯಾವನನ್ನು ಈ ಲೋಕಗಳಿಂದ ಮೇಲಕ್ಕೆತ್ತಲಿಚ್ಛಿಸುವನೋ ಅವನನ್ನು ಈತನೇ ಒಳ್ಳೆಯ ಕರ್ಮವನ್ನು ಮಾಡುವಂತೆಸಗುವನು, ಯಾವನನ್ನು ಕೆಳಕ್ಕಿಳಿಸಲಿಚ್ಛಿಸುವನೋ ಅವನನ್ನು ಈತನೇ ಕೆಟ್ಟ ಕರ್ಮವನ್ನು ಮಾಡುವಂತೆಸಗುವನು' (ಕೌ. ೩-೯) ಎಂದು ಒಳ್ಳೆಯ ಕೆಟ್ಟ ಕರ್ಮಗಳೆರಡನ್ನೂ ಮಾಡಿಸುವದರಿಂದ ನೈರ್ಘೃಣ್ಯವೂ[2] (ಬರುವದಲ್ಲ)!

(ಪರಿಹಾರ) :— ಈ (ವಿಷಯದಲ್ಲಿ) ಹೇಳುತ್ತೇವೆ : **ಎಲ್ಲಾ ಚೇತನರಿಗೂ ಚಿಚ್ಛಕ್ತಿಯ ಸಂಬಂಧ, ಪ್ರವೃತ್ತಿಶಕ್ತಿಯ ಸಂಬಂಧ- ಮುಂತಾದ ಪ್ರವೃತ್ತಿನಿವೃತ್ತಿಗಳಿಗೆ ಬೇಕಾದ ಎಲ್ಲಾ ಪರಿಕರವನ್ನೂ ಸಮಾನವಾಗಿಯೇ ಉಂಟುಮಾಡಿಕೊಟ್ಟು[3], ಅದನ್ನು ನಿರ್ವಹಿಸುವದಕ್ಕೆ ಅವರಿಗೆ ಆಧಾರನೂ ಆಗಿದ್ದುಕೊಂಡು ಒಳಗೆ ಪ್ರವೇಶಿಸಿ, ಅನುಮಂತೃವಾಗಿ ನಿಯಮನವನ್ನೂ ಮಾಡುತ್ತಾ ಶೇಷಿಯಾಗಿ ಪರಮಾತ್ಮನು ಇದ್ದುಕೊಂಡಿರುವನು. ಇವನು ಕೊಟ್ಟ ಶಕ್ತಿಗಳುಳ್ಳವನಾಗಿ (ಜೀವನು)**

---

1. ಕಾ॥ ಪಾಠದಲ್ಲಿ ಈ ಮಾತಿಲ್ಲ.
2. ದಯಾಶೂನ್ಯತೆಯೂ ಎಂದರ್ಥ. ಇಲ್ಲಿ ವೈಷಮ್ಯವನ್ನೂ ಸೇರಿಸಿಕೊಳ್ಳಬೇಕೆಂದು ತೋರುತ್ತದೆ.
3. ಜ್ಞಾನೇಚ್ಛಾಪ್ರಯತ್ನಶಕ್ತಿಗಳನ್ನು ಎಲ್ಲರಿಗೂ ಕೊಟ್ಟಿರುತ್ತಾನೆ.

ಪ್ರವೃತ್ತಿನಿವೃತ್ತ್ಯಾದಿಗಳನ್ನು ತಾನೇ ಮಾಡುತ್ತಿರುವನು. ಹೀಗೆ ಮಾಡುತ್ತಿರುವವನನ್ನು ನೋಡುತ್ತಿರುವ ಪರಮಾತ್ಮನು ಉದಾಸೀನನಾಗಿರುತ್ತಾನೆ. ಆದ್ದರಿಂದ ಎಲ್ಲವೂ ಹೊಂದುತ್ತದೆ.

ಒಳ್ಳೆಯಕೆಟ್ಟಕರ್ಮಗಳನ್ನು ಮಾಡಿಸುವದಾದರೋ ಗೊತ್ತಾದ (ಕೆಲವರ) ವಿಷಯದಲ್ಲೇ ಹೊರತು ಎಲ್ಲರಿಗೂ ಸಾಧಾರಣವಾದದ್ದಲ್ಲ. (ಹೇಗೆಂದರೆ), ಯಾವನು ಮೊದಲು ತಾನೇ ಒಳ್ಳೆ ಹೆಚ್ಚಿನ ಅನುಕೂಲ್ಯದಲ್ಲಿ ಪ್ರವೃತ್ತನಾಗಿರುತ್ತಾನೋ ಅವನ ವಿಷಯಕ್ಕೆ ಪ್ರೀತನಾಗಿ ಭಗವಂತನು ತಾನೇ ಕಲ್ಯಾಣಬುದ್ಧಿಯ ಸಂಬಂಧವನ್ನು ದಾನಮಾಡಿ ಒಳ್ಳೆಯ (ಕೆಲಸದಲ್ಲಿ) ಪ್ರವರ್ತಿಸುವಂತೆ ಮಾಡುತ್ತಾನೆ. ಆದರೆ ಯಾವನು ಹೆಚ್ಚಿನ ಪ್ರಾತಿಕೂಲ್ಯದಲ್ಲಿ ಪ್ರವೃತ್ತನಾಗಿರುತ್ತಾನೋ ಅವನಿಗಾದರೆ ಕ್ರೂರಬುದ್ಧಿಯನ್ನು ಕೊಡುವವನಾಗಿ ಭಗವಂತನು ತಾನೇ ಕ್ರೂರವಾದ ಕರ್ಮಗಳಲ್ಲಿಯೇ ಪ್ರೇರಿಸುತ್ತಾನೆ. ಹಾಗೆಂದು **ಭಗವಂತನು** ಹೇಳಿರುತ್ತಾನೆ : 'ಸತತಯುಕ್ತರಾಗಿ ಪ್ರೀತಿಪೂರ್ವಕವಾಗಿ ಭಜನೆಮಾಡುತ್ತಿರುವ ಅವರಿಗೆ ಯಾವದರಿಂದ ಅವರು ನನ್ನನ್ನು ಬಂದುಸೇರುತ್ತಾರೋ, ಅಂಥ ಬುದ್ಧಿಯೋಗವನ್ನು ಕೊಡುತ್ತೇನೆ. ಮತ್ತು ಅವರ ಅನುಕಂಪೆಗಾಗಿಯೇ ನಾನು ಅಜ್ಞಾನದಿಂದುಟಾದ ತಮಸ್ಸನ್ನು ಅವರ ಆತ್ಮಭಾವದಲ್ಲಿಯೇ ಇದ್ದುಕೊಂಡು ಜ್ಞಾನದೀಪದಿಂದ ನಾಶಪಡಿಸುವೆನು'[1] (ಗೀ. ೧೦-೧೦, ೧೧), '(ನನ್ನನ್ನು) ದ್ವೇಷಿಸುತ್ತಿರುವ ಆ ಕ್ರೂರಾದ ಅಶುಭರಾದ ನರಾಧಮರನ್ನು ಯಾವಾಗಲೂ ಮತ್ತೆಮತ್ತೆ ತೊಳಲುತ್ತಿರುವ ಸಂಸಾರಗಳಲ್ಲಿ ಅಸುರಯೋನಿಗಳಲ್ಲಿಯೇ ಹಾಕುತ್ತಿರುವೆನು' (ಗೀ. ೧೬-೧೯).[2]

(೨) ಪರಮಾತ್ಮಪ್ರಾಪ್ತ್ಯುಪಾಯವು ಭಕ್ತಿಯೇ

(ಮೂಲ)

೬೨. ಸೋಽಯಂ ಪರಬ್ರಹ್ಮಭೂತಃ ಪುರುಷೋತ್ತಮಃ ನಿರತಿಶಯ ಪುಣ್ಯಸಂಚಯಕ್ಷೀಣಾಶೇಷಜನ್ಮೋಪಚಿತಪಾಪರಾಶೇಃ ಪರಮಪುರುಷಚರಣಾರವಿನ್ದಶರಣಾಗತಿಜನಿತತದಾಭಿಮುಖ್ಯಸ್ಯ ಸದಾಚಾರ್ಯೋಪದೇಶೋಪಬೃಂಹಿತ

---

1. ನನ್ನಲ್ಲಿಯೇ ಸತತವಾದ ಯೋಗವನ್ನು ಬಯಸುವವರಿಗೆ ವಿಭೂತಿಜ್ಞಾನವಿಪಾಕ ದಶೆಯನ್ನು ಪಡೆದ ಬುದ್ಧಿಯೋಗವನ್ನು ಕೊಡುವೆನು. ಅವರ ಮನೋವೃತ್ತಿಗೆ ವಿಷಯನಾಗಿದ್ದುಕೊಂಡು ನನ್ನ ಕಲ್ಯಾಣಗುಣಗಳನ್ನು ತೋರಿಸಿಕೊಟ್ಟು ನನ್ನ ವಿಷಯದ ಜ್ಞಾನದಿಂದ ಕರ್ಮರೂಪಾಜ್ಞಾನದಿಂದುಂಟಾಗಿದ್ದ ವಿಷಯಾಭಿಮುಖ್ಯರೂಪವಾದ ತಮಸ್ಸನ್ನು ನಾಶಗೊಳಿಸುವೆನು- ಎಂದರ್ಥ.

2. ಅವರ ಕ್ರೂರಬುದ್ಧಿಗೆ ಅನುಗುಣವಾಗಿ ಕ್ರೂರಬುದ್ಧಿಯನ್ನೇ ಕೊಟ್ಟು ಅಂಥ ಕರ್ಮಗಳನ್ನು ಮಾಡಿಸಿ ಅದಕ್ಕೆ ತಕ್ಕ ಫಲವನ್ನೇ ಕೊಡುವೆನು ಎಂದರ್ಥ.

ಶಾಸ್ತ್ರಾಧಿಗತತತ್ತ್ವಯಾಥಾತ್ಮ್ಯವಬೋಧಪೂರ್ವಕಾಹರಹರುಪಚೀಯಮಾನ ಶಮದಮತಪಃಶೌಚಕ್ಷಮಾರ್ಜವಭಯಾಭಯಸ್ಥಾನವಿವೇಕದಯಾಹಿಂಸಾದ್ಯಾತ್ಮ ಗುಣೋಪೇತಸ್ಯ ವರ್ಣಾಶ್ರಮೋಚಿತಪರಮಪುರುಷಾರಾಧನವೇಷನಿತ್ಯನೈಮಿತ್ತಿ ಕರ್ಮೋಪಸಂಹೃತಿನಿಷಿದ್ಧಪರಿಹಾರನಿಷ್ಠಸ್ಯ ಪರಮಪುರುಷಚರಣಾರವಿಂದಯುಗ ಲನ್ಯಸ್ತಾತ್ಮಾತ್ಮೀಯಸ್ಯ ತದ್ಭಕ್ತಿಕಾರಿತಾನವರತಸ್ತುತಿಸ್ಮೃತಿನಮಸ್ಕೃತಿವನ್ದನಯತನ ಕೀರ್ತನಗುಣಶ್ರವಣವಚನಧ್ಯಾನಾರ್ಚನಪ್ರಣಾಮಾದಿಪ್ರೀತಪರಮಕಾರುಣಿಕ ಪುರುಷೋತ್ತಮಪ್ರಸಾದವಿಧ್ವಸ್ತಸ್ವಾನ್ತಧ್ವಾನ್ತಸ್ಯ ಅನನ್ಯಪ್ರಯೋಜನಾನವರತ ನಿರತಿಶಯಪ್ರಿಯಾವಿಶದತಮಪ್ರತ್ಯಕ್ಷತಾಪನ್ನಾನುಧ್ಯಾನರೂಪಭಕ್ತ್ಯೈಕಲಭ್ಯಃ । ತದುಕ್ತಂ ಪರಮಗುರುಭಿಃ ಬಗವದ್ಯಾಮುನಾಚಾರ್ಯಪಾದೈಃ । 'ಉಭಯ ಪರಿಕರ್ಮಿತ ಸ್ವಾನ್ತಸ್ಯ ಐಕಾನ್ತಿಕಾತ್ಯನ್ತಿಕಭಕ್ತಿಯೋಗಲಭ್ಯಃ' (ಆತ್ಮಸಿದ್ಧಿ ಪು.೫) ಇತಿ । ಜ್ಞಾನಯೋಗಕರ್ಮಯೋಗಸಂಸ್ಕೃತಾನ್ತಃಕರಣಸ್ಯ ಇತ್ಯರ್ಥಃ ॥

(ಅರ್ಥ)

ಆ ಈ ಪರಬ್ರಹ್ಮವಾಗಿರುವ ಪುರುಷೋತ್ತಮನು, ನಿರತಿಶಯವಾದ ಪುಣ್ಯರಾಶಿಯಿಂದ ಎಲ್ಲಾ ಜನ್ಮಗಳಲ್ಲಿಯೂ ಕೂಡಿಹಾಕಿಕೊಂಡಿದ್ದ ಪಾಪರಾಶಿಯು ಕ್ಷಯವಾಗಲು ಪರಮಪುರುಷನ ಚರಣಕಮಲಕ್ಕೆ ಶರಣುಬಂದದ್ದರಿಂದುಂಟಾದ ಆತನ ಕಡೆಗೆ ಸದ್ಗುರುವಿನ ಉಪದೇಶದಿಂದ ಉಪಬೃಂಹಿತವಾದ ಶಾಸ್ತ್ರದಿಂದ ತತ್ತ್ವದ ನಿಜವನ್ನು ನಿಶ್ಚಯಿಸಿಕೊಳ್ಳುವ ಮೂಲಕವಾಗಿ[1] ದಿನದಿನವೂ ಬೆಳೆಯುತ್ತಿರುವ ಶಮ, ದಮ, ತಪಸ್ಸು , ಶೌಚ, ಕ್ಷಮೆ, ಋಜುಭಾವ, ಭಯಾಭಯ ಸ್ಥಾನಗಳ ವಿವೇಕ,[2] ದಯೆ, ಅಹಿಂಸೆ - ಮುಂತಾದ **ಆತ್ಮಗುಣ**ಗಳಿಂದೊಡಗೂಡಿ ವರ್ಣಾಶ್ರಮಗಳಿಗೆ ಉಚಿತವಾದ ಪರಮಪುರುಷಾರಾಧನರೂಪವಾದ ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡುತ್ತಾ ನಿಷಿದ್ಧ(ಕರ್ಮ)ವನ್ನು ಬಿಟ್ಟಿರುವಾತನಾಗಿ ಪರಮ ಪುರುಷನ ಚರಣಕಮಲದಲ್ಲಿ ತಾನುತನ್ನದೆಂಬುದನ್ನು ನ್ಯಾಸಮಾಡಲಾಗಿ[3] ಅವನ ಭಕ್ತಿಯಿಂದುಂಟಾದ ಅನವರತವಾದ ಸ್ತುತಿ, ಸ್ಮೃತಿ, ನಮಸ್ಕಾರ, ವಂದನ, ಯತನ, ಕೀರ್ತನ, ಗುಣಶ್ರವಣ, (ಗುಣಗಳನ್ನು)ಹೇಳುವದು, ಧ್ಯಾನ, ಅರ್ಚನ, ಪ್ರಣಾಮ-ಮುಂತಾದವುಗಳಿಂದ ಪ್ರೀತನಾದ ಪರಮಕಾರುಣಿಕನಾದ ಪುರುಷೋತ್ತಮನ

---

1. ಧರ್ಮಿಯನ್ನು ಪ್ರಕಾರವನ್ನು ಸರಿಯಾಗಿ ತಿಳಿದುಕೊಂಡು ರಜಸ್ತಮಸ್ಸುಗಳಿಂದಾಗಿರುವ ವಿಪರ್ಯಾಸಗಳನ್ನು ಹೋಗಲಾಡಿಸಿಕೊಂಡು ಎಂದರ್ಥ ; ಪ್ರಕಾರವಿಪರ್ಯಾಸವು ರಜಃಕಾರ್ಯ, ಧರ್ಮಿವಿಪರ್ಯಾಸವು ತಮಃಕಾರ್ಯ- ಎಂದು ಟೀಕೆ.
2. ಭಗವಂತನಲ್ಲಿ ಅಪಚಾರಾದಿಗಳನ್ನು ಮಾಡುವದರಲ್ಲಿ ಭೀತಿಯೂ ಆತನೇ ರಕ್ಷಿಸುವನೆಂಬ ನಿರ್ಭಯವೂ ಉಳ್ಳವನಾಗಿ ಎಂದರ್ಥ.
3. ಇದೇ ಭಗವಂತನಲ್ಲಿ ಭರನ್ಯಾಸಮಾಡುವದೆಂಬುದು.

ಪ್ರಸಾದದಿಂದ ಹೃದಯದ ಅಂಧಕಾರವನ್ನೆಲ್ಲ ನಾಶಗೊಳಿಸಿಕೊಂಡವನಿಗೇ ಮತ್ತೊಂದು ಪ್ರಯೋಜನವನ್ನು (ಬಯಸದೆ) ಅನವರತವೂ ನಿರತಿಶಯವಾಗಿ ಪ್ರಿಯವಾಗಿರುವ ವಿಶದತಮಪ್ರತ್ಯಕ್ಷತ್ವವನ್ನು ಹೊಂದಿದ ಅನುಧ್ಯಾನರೂಪವಾದ ಭಕ್ತಿಯೊಂದರಿಂದಲೇ ಲಭ್ಯನಾಗಿರುತ್ತಾನೆ. ಹೀಗೆಂದು **ಪರಮಗುರುಗಳಾದ ಭಗವದ್ರಾಮುನಾಚಾರ್ಯಪಾದರವರು** 'ಉಭಯ ಪರಿಕರ್ಮಿತವಾದ ಸ್ವಾಂತವುಳ್ಳಾತನಿಗೆ ಐಕಾಂತಿಕವೂ ಆತ್ಯಂತಿಕವೂ ಆದಭಕ್ತಿಯೋಗದಿಂದ ಲಭ್ಯನು' (ಆ.ಸಿ.ಪು.೫)- ಎಂದು ಹೇಳಿರುತ್ತಾರೆ. (ಉಭಯ ಪರಿಕರ್ಮಿತವಾದ ಸ್ವಾಂತವುಳ್ಳವನಿಗೆ ಎಂದರೆ) ಜ್ಞಾನಯೋಗಕರ್ಮಯೋಗಗಳಿಂದ[1] ಸಂಸ್ಕಾರವನ್ನು ಹೊಂದಿದ ಅಂತಃಕರಣವುಳ್ಳಾತನಿಗೆ ಎಂದರ್ಥ.

ಭಕ್ತಿಯೇ ಉಪಾಯವೆಂಬುದಕ್ಕೆ ಪ್ರಮಾಣಗಳು

(ಮೂಲ)

೬೩. ತಥಾ ಚ ಶ್ರುತಿಃ 'ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ । ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ' (ಈ.೧೧) ಇತಿ । ಅತ್ರಾವಿದ್ಯಾಶಬ್ದೇನ ವಿದ್ಯೇತರತ್ ವರ್ಣಾಶ್ರಮಾಚಾರಾದಿ ಪೂರ್ವೋಕ್ತಂ ಕರ್ಮ ಉಚ್ಯತೇ । ವಿದ್ಯಾಶಬ್ದೇನ ಚ ಭಕ್ತಿರೂಪಾಪನ್ನಂ ಧ್ಯಾನಮ್ ಉಚ್ಯತೇ । ಯಥೋಕ್ತಮ್ 'ಇಯಾಜ ಸೋಽಪಿ ಸುಬಹೂನ್ ಯಜ್ಞಾನ್ ಜ್ಞಾನವ್ಯಪಾಶ್ರಯಃ । ಬ್ರಹ್ಮವಿದ್ಯಾಮಧಿಷ್ಠಾಯ ತರ್ತುಂ ಮೃತ್ಯುಮವಿದ್ಯಯಾ ॥' (ವಿ.ಪು. ೬-೬-೧೨) ಇತಿ । 'ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪನ್ಥಾ ಅಯನಾಯ ವಿದ್ಯತೇ' (ತೈ. ಆ. ೩-೧೨-೩೯), 'ಯ ಏವಂ ವಿದುರಮೃತಾಸ್ತೇ ಭವನ್ತಿ' (ತೈ.ನಾ.೩), 'ಬ್ರಹ್ಮವಿದಾಪ್ನೋತಿ ಪರಮ್' (ತೈ. ೨-೧), 'ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ. ೩-೨-೯) ಇತ್ಯಾದಿ । ವೇದನಶಬ್ದೇನ ಧ್ಯಾನಮೇವಾಭಿಹಿತಮ್ । 'ನಿದಿಧ್ಯಾಸಿತವ್ಯಃ' (ಬೃ.೨-೪-೫, ೪-೫-೬) ಇತ್ಯಾದಿನಾ ಐಕಾರ್ಥ್ಯಾತ್ । ತದೇವ ಧ್ಯಾನಂ ಪುನರಪಿ ವಿಶಿನಷ್ಟಿ 'ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯ ಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್' (ಮುಂ. ೩-೨-೩, ಕ.೧-೨-೨೨) ಇತಿ । ಭಕ್ತಿರೂಪಾಪನ್ನಾನುಧ್ಯಾನೇನೈವ ಲಭ್ಯತೇ ನ ಕೇವಲವೇದನಮಾತ್ರೇಣ । 'ನ

---

1. **ಕರ್ಮಯೋಗ**ವೆಂದರೆ ತನ್ನತನ್ನ ವರ್ಣಾಶ್ರಮಗಳಿಗೆ ವಿಹಿತವಾಗಿರುವ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಭಗವಂತನ ಆರಾಧನೆಯೆಂಬ ಭಾವನೆಯಿಂದ ಮಾಡುತ್ತಿರುವದು ; **ಜ್ಞಾನಯೋಗ**ವೆಂದರೆ ಕರ್ಮಯೋಗದಿಂದಲೂ ಯೋಗಾಭ್ಯಾಸದಿಂದಲೂ ತನ್ನ ಆತ್ಮಸ್ವರೂಪವನ್ನು ಕಂಡುಕೊಳ್ಳುವದು.

ಮೇಧಯಾ' ಇತಿ ಕೇವಲಸ್ಯ ನಿಷಿದ್ಧತ್ವಾತ್ । ಏತದುಕ್ತಂ ಭವತಿ । ಯೋಽಯಂ ಮುಮುಕ್ಷುಃ ವೇದಾನ್ತವಿಹಿತವೇದನರೂಪಧ್ಯಾನಾದಿನಿಷ್ಠಃ[1] ಯದಾ ತಸ್ಯ ತಸ್ಮಿನ್ನೇವಾಽನುಧ್ಯಾನೇ ಅನವಧಿಕಾತಿಶಯಾ[2] ಪ್ರೀತಿರ್ಜಾಯತೇ ತದೈವ ತೇನ ಲಭ್ಯತೇ ಪರಮಪುರುಷಃ[3] ಇತಿ । ಯಥೋಕ್ತಂ ಭಗವತಾ 'ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ' (ಗೀ. ೮-೨೨), 'ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ । ಜ್ಞಾತುಂದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ' (ಗೀ.೧೧-೫೪), 'ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ । ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನನ್ತರಮ್' (ಗೀ. ೧೮-೫೫) ಇತಿ । ತದನನ್ತರಂ ಮಾಂ ತತ ಏವ ಭಕ್ತೇ[4]ರ್ವಿಶತೇ ಇತ್ಯರ್ಥಃ । ಭಕ್ತಿರಪಿ ನಿರತಿಶಯಪ್ರಿಯಾ ಅನನ್ಯ ಪ್ರಯೋಜನಸ್ವೇತರ[5]ವೈತೃಷ್ಣ್ಯಾವಹಜ್ಞಾನವಿಶೇಷ ಏವ । ತದ್ಯುಕ್ತ ಏವ ತೇನ ಪರೇಣಾಽಽತ್ಮನಾ ವರಣೀಯೋ ಭವತೀತಿ ತೇನ ಲಭ್ಯತೇ ಇತಿ ಶ್ರುತ್ಯರ್ಥಃ ॥

ಏವಂವಿಧಪರಭಕ್ತಿರೂಪಜ್ಞಾನವಿಶೇಷಸ್ಯೋತ್ಪಾದಕಃ ಪೂರ್ವೋಕ್ತಾಹರಹರುಪಚೀಯಮಾನಜ್ಞಾನಪೂರ್ವಕಕರ್ಮಾನುಗೃಹೀತಭಕ್ತಿಯೋಗ ಏವ । ಯಥೋಕ್ತಂ ಭಗವತಾ ಪರಾಶರೇಣ । 'ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ । ವಿಷ್ಣುರಾರಾಧ್ಯತೇ ಪನ್ಥಾ ನಾನ್ಯಸ್ತತ್ತೋಷಕಾರಕಃ ।' (ವಿ.ಪು.೩-೮-೯) ಇತಿ । ನಿಖಿಲಜಗದುದ್ಧಾರಣಾಯಾವನಿತಲೇಽವತೀರ್ಣಃ ಪರಬ್ರಹ್ಮಭೂತಃ ಪುರುಷೋತ್ತಮಃ ಸ್ವಯಮೇವೈತದುಕ್ತವಾನ್ 'ಸ್ವಕರ್ಮ ನಿರತಃ ಸಿದ್ಧಿಂ ಯಥಾ ವಿನ್ದತಿ ತಚ್ಛೃಣು ॥ ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ । ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥ (ಗೀ. ೧೮-೪೫, ೪೬) ಇತಿ । ಯಥೋದಿತಕ್ರಮಪರಿಣತಭಕ್ತ್ಯೈಕಲಭ್ಯ ಏವ ॥

ಭಗವದ್ಬೋಧಾಯನಟಙ್ಕದ್ರಮಿಡಗುಹಾದೇವಕಪರ್ದಿಭಾರುಚಿಪ್ರಭೃತ್ಯ ವಿಗೀತಶಿಷ್ಟಪರಿಗೃಹೀತಪುರಾತನವೇದವೇದಾನ್ತವ್ಯಾಖ್ಯಾನಸುವ್ಯಕ್ತಾರ್ಥಶ್ರುತಿ ನಿಕರದರ್ಶಿತೋಽಯಂ ಪನ್ಥಾಃ ॥

(ಅರ್ಥ)

ಆದ್ದರಿಂದಲೇ ಶ್ರುತಿಯು (ಹೀಗ್ನುತ್ತಿದೆ) : 'ಯಾವಾತನು ವಿದ್ಯೆಯನ್ನೂ ಅವಿದ್ಯೆಯನ್ನೂ ಆ ಎರಡನ್ನೂ ಒಟ್ಟಿಗೆ ಅರಿತಿರುತ್ತಾನೋ (ಅವನು) ಅವಿದ್ಯೆ

1. 'ಧ್ಯಾನಾದಿವಿಶಿಷ್ಟಃ' ಕಾ॥ 2. 'ನಿರವಧಿಕಾತಿಶಯಾ' ಕಾ॥
3 'ಪರಃ ಪುರುಷಃ' ಕಾ॥ 4. 'ಭಕ್ತಿತೋ' ಕಾ॥
5. ಸಕಲೇತರ.

ಯಿಂದಾದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಪಡೆದುಕೊಳ್ಳುತ್ತಾನೆ (ಈ.೧೧). ಇಲ್ಲಿ **ಅವಿದ್ಯೆ ಎಂಬ ಶಬ್ದದಿಂದ ವಿದ್ಯೆಗಿಂತ ಬೇರೆಯಾಗಿರುವ, ಹಿಂದೆ ಹೇಳಿರುವ ವರ್ಣಾಶ್ರಮಾದಿಗಳ ಕರ್ಮವನ್ನು ತಿಳಿಸಿದೆ ; ವಿದ್ಯಾಶಬ್ದದಿಂದ ಭಕ್ತಿರೂಪವನ್ನು ತಳೆದ ಧ್ಯಾನವನ್ನು ಹೇಳಿದೆ.** ಹೀಗೆಂದು (ಪುರಾಣದಲ್ಲಿ ಹೇಳಿದೆ): 'ಅವನೂ (ಶಾಸ್ತ್ರ)ಜ್ಞಾನವನ್ನು ಆಶ್ರಯಿಸಿ - ಬ್ರಹ್ಮವಿದ್ಯೆಯನ್ನುದ್ದೇಶಿಸಿ ಅವಿದ್ಯೆಯಿಂದ ಮೃತ್ಯುವನ್ನು ದಾಟುವದಕ್ಕಾಗಿ ಅನೇಕ ಯಜ್ಞಗಳನ್ನು ಮಾಡಿದನು' (ವಿ.ಪು.೬-೬-೧೨), 'ಆತನನ್ನು ಹೀಗೆ ಅರಿತುಕೊಂಡವನು ಇಲ್ಲಿ ಅಮೃತನಾಗುತ್ತಾನೆ, (ಆತನನ್ನು) ಪಡೆಯುವದಕ್ಕೆ ಮತ್ತೊಂದು ಹಾದಿಯಿರುವದಿಲ್ಲ' (ತೈ. ಆ.ಪ್ರ.೩-೧೨-೩೯), 'ಯಾರು ಈತನನ್ನು ಅರಿತಿರುವರೋ ಅವರು ಅಮೃತರಾಗುವರು' (ತೈ.ನಾ.೩), 'ಬ್ರಹ್ಮವನ್ನು ಅರಿತುಕೊಂಡವನು ಪರ(ಗತಿಯನ್ನು) ಪಡೆಯುತ್ತಾನೆ' (ತೈ.೨-೧), 'ಯಾವನು ಆ ಪರಮಬ್ರಹ್ಮವನ್ನು ಅರಿತುಕೊಳ್ಳುವನೋ ಅವನು ಬ್ರಹ್ಮವೇ ಆಗುವನು'(ಮುಂ. ೩-೨-೯) ಎಂದು ಮುಂತಾಗಿ(ರುವ ವಾಕ್ಯಗಳಲ್ಲಿ) **ವೇದನ (ಅರಿವು ಎಂಬ) ಶಬ್ದದಿಂದ ಧ್ಯಾನವನ್ನೇ[1] ಹೇಳಿರುತ್ತದೆ ;** ಏಕೆಂದರೆ (ಆಗ) 'ನಿಧಿಧ್ಯಾಸನಮಾಡಬೇಕು' (ಬೃ.೨-೪-೫) ಎಂದು ಮುಂತಾಗಿರುವ (ವಾಕ್ಯಗಳಿಗೂ ಇವುಗಳಿಗೂ) ಒಂದೇ ಅರ್ಥವಾಗುತ್ತದೆ. ಇದೇ **ಧ್ಯಾನವೇ (ಭಕ್ತಿಯೆಂದು ಶ್ರುತಿಯು) ಇನ್ನೂ ವಿಶೇಷವಾಗಿ (ಹೀಗೆಂದು) ತಿಳಿಸುತ್ತಿದೆ :** 'ಈ ಆತ್ಮನು ಪ್ರವಚನದಿಂದ ಲಭ್ಯನಲ್ಲ, ಮೇಧೆಯಿಂದಲೂ (ಲಭ್ಯ)ನಲ್ಲ, ಬಹುವಾಗಿ ಶ್ರವಣ ಮಾಡಿದ್ದರಿಂದಲೂ (ಲಭ್ಯ)ನಲ್ಲ ; ಇವನು ಯಾವನನ್ನು ಆರಿಸಿಕೊಳ್ಳುತ್ತಾನೋ ಅವನಿಗೆ ಸಿಕ್ಕುತ್ತಾನೆ, ಅವನಿಗೇ ಈ ಆತ್ಮನು ತನ್ನ ತನುವನ್ನು ತೋರಿಸಿಕೊಡುತ್ತಾನೆ' (ಮುಂ.೩-೨-೩). **ಭಕ್ತಿರೂಪಾಪನ್ನವಾದ ಅನುಧ್ಯಾನದಿಂದಲೇ ಲಭೀಸುತ್ತಾನೆಯೇ ಹೊರತು ಬರಿಯ ವೇದನಮಾತ್ರದಿಂದ(ಲಭಿಸುವದಿಲ್ಲ) ಎಂದರ್ಥ ;** ಏಕೆಂದರೆ ಮೇಧೆಯಿಂದ (ಸಿಕ್ಕು)ವದಿಲ್ಲ ಎಂದು ಬರಿಯವೇದನವನ್ನು ನಿಷೇಧಿಸಿರುತ್ತದೆ. (ಇಲ್ಲಿ) ಇಷ್ಟನ್ನು ಹೇಳಿದಂತಾಗಿದೆ : **ಈ ಮುಮುಕ್ಷುವು ವೇದಾಂತವಿಹಿತವಾದ ವೇದನರೂಪವಾದ ಧ್ಯಾನಾದಿಗಳಲ್ಲಿ ನಿಷ್ಠನಾಗಿರುತ್ತಾನಷ್ಟೆ, ಅವನಿಗೆ ಯಾವಾಗ ಅನುಧ್ಯಾನದಲ್ಲಿಯೇ ನಿರವಧಿಕಾತಿಶಯವಾದ ಪ್ರೀತಿಯುಂಟಾಗುವದೋ ಆಗಲೇ ಅದರಿಂದ (ಆ) ಪರಮಪುರುಷನು ಲಭ್ಯನಾಗುತ್ತಾನೆ.** ಹೀಗೆಂದು **ಭಗವಂತನು** ಹೇಳಿರುತ್ತಾನೆ ; 'ಪಾರ್ಥನೆ, ಆ ಪರಮಪುರುಷನು ಅನನ್ಯವಾದ ಭಕ್ತಿಯಿಂದಲಾದರೆ ಲಭ್ಯನಾಗಿರುತ್ತಾನೆ' (ಗೀ.೮-೨೨), 'ಪರಂತಪನಾದ ಅರ್ಜುನನೆ, ಈ ರೂಪನಾದ ನಾನು ಭಕ್ತಿಯಿಂದಲೇ ಅರಿತುಕೊಳ್ಳುವದಕ್ಕೂ ತತ್ತ್ವತಃ ಕಾಣುವದಕ್ಕೂ

---

1. ವಸ್ತುಬೋಧಕಜ್ಞಾನವನ್ನಲ್ಲ.

ಪ್ರವೇಶಿಸುವದಕ್ಕೂ ಶಕ್ಯನಾಗಿರುತ್ತೇನೆ' (ಗೀ. ೧೧-೧೪). 'ನಾನು ಯಾವನೋ ಎಷ್ಟು ಮಟ್ಟಿಗೆ ಇರುವವನೋ ಅದನ್ನು ಭಕ್ತಿಯಿಂದಲೇ ಸರಿಯಾಗಿ ತಿಳಿದುಕೊಳ್ಳುವನು; ನನ್ನನ್ನು ಸರಿಯಾಗಿ ತಿಳಿದುಕೊಂಡ ಆ (ಜ್ಞಾನದ) ಅನಂತರದಲ್ಲಿ ಅದರಿಂದ ನನ್ನನ್ನು ಹೊಗುವನು' (ಗೀ. ೧೮-೫೫).[1] ಅದರ ಅನಂತರದಲ್ಲಿ ಅದೇ ಭಕ್ತಿಯಿಂದ ನನ್ನನ್ನು ಹೊಗುವನು ಎಂದರ್ಥ. ಭಕ್ತಿಯೆಂಬುದೂ ನಿರತಿಶಯಪ್ರಿಯವಾಗಿ **ಮತ್ತೊಂದು ಪ್ರಯೋಜನವನ್ನು (ಬಯಸದೆ) ಮಿಕ್ಕೆಲ್ಲವರಲ್ಲಿಯೂ ವೈರಾಗ್ಯವನ್ನುಂಟುಮಾಡುವ ಜ್ಞಾನವಿಶೇಷವೇ** ಆಗಿರುವದರಿಂದ ಆ (ಭಕ್ತಿ)ಯುಕ್ತನೇ ಆ ಪರಮಾತ್ಮನಿಂದ ವರಣೀಯನಾಗುತ್ತಾನಾದ್ದರಿಂದ ಅದರಿಂದ ಲಭ್ಯನಾಗುತ್ತಾನೆ ಎಂದು ಶ್ರುತಿಯ[2] ಅರ್ಥ.

ಈ ವಿಧವಾದ **ಪರಭಕ್ತಿರೂಪವಾದ ಜ್ಞಾನವಿಶೇಷವನ್ನು ಉಂಟುಮಾಡುವದು ಹಿಂದೆ ಹೇಳಿದ ದಿನದಿನವೂ ಹೆಚ್ಚುತ್ತಲಿರುವ ಜ್ಞಾನಪೂರ್ವಕವಾದ ಕರ್ಮದಿಂದನುಗೃಹೀತವಾದ ಭಕ್ತಿಯೋಗವೇ.** ಹೀಗೆಂದು ಭಗವಂತನಾದ **ಪರಾಶರನು** ಹೇಳಿರುತ್ತಾನೆ : 'ವರ್ಣಾಶ್ರಮಾಚಾರವುಳ್ಳ ಪುರುಷನಿಂದ ಪರಮ ಪುರುಷನಾದ ವಿಷ್ಣುವು ಆರಾಧಿತನಾಗುತ್ತಾನೆ ; ಆತನನ್ನು ಸಂತೋಷಪಡಿಸುವ ಮತ್ತೊಂದು ಮಾರ್ಗವಿರುವದಿಲ್ಲ' (ವಿ.ಪು. ೩-೮-೯). ಜಗತ್ತೆಲ್ಲವನ್ನೂ ಉದ್ಧಾರ ಮಾಡುವದಕ್ಕಾಗಿ ಭೂತಲದಲ್ಲಿ ಅವತರಿಸಿದ ಪರಬ್ರಹ್ಮನಾದ ಪುರುಷೋತ್ತಮನು ತಾನೇ ಇದನ್ನು ಹೀಗೆಂದು ಹೇಳಿರುತ್ತಾನೆ ; 'ಸ್ವಕರ್ಮ ನಿರತನಾದವನು ಸಿದ್ಧಿಯನ್ನು ಹೇಗೆ ಪಡೆದುಕೊಳ್ಳುತ್ತಾನೋ ಅದನ್ನು (ಹೇಳುತ್ತೇನೆ), ಕೇಳು. ಯಾವನಿಂದ ಭೂತಗಳ ಪ್ರವೃತ್ತಿಯುಂಟಾಗುವದೋ ಯಾವನಿಂದ ಇದೆಲ್ಲವೂ ವ್ಯಾಪಿಸಲ್ಪಟ್ಟಿರುವದೋ ಆತನನ್ನು ಸ್ವಕರ್ಮದಿಂದ ಅಭ್ಯರ್ಚನೆ ಮಾಡಿದರೆ ಮಾನವನು ಸಿದ್ಧಿಯನ್ನು ಪಡೆದುಕೊಳ್ಳುವನು' (ಗೀ. ೧೮-೪೫, ೪೬). ಆದ್ದರಿಂದ ಮೇಲೆ ಹೇಳಿದ ಕ್ರಮದಿಂದ ಪರಿಣಾಮವನ್ನು ಹೊಂದಿದ ಭಕ್ತಿಯಿಂದಲೇ ಲಭ್ಯನೇ ಆಗಿರುತ್ತಾನೆ.

ಭಗವಂತನಾದ **ಬೋಧಾಯನ, ಟಂಕ, ದ್ರಮಿಡ, ಗುಹಾದೇವ, ಕಪರ್ದಿ, ಭಾರುಚಿ- ಮೊದಲಾದ ಶಿಷ್ಟರು** ಅವಿಗೀತವಾಗಿ[3] **ಪರಿಗ್ರಹಿಸಿದ್ದೂ ಪುರಾತನ**

---

1. ಭಕ್ತಿಯಿಂದ- ಎಂದರೆ ಹಿಂದೆ ಹೇಳಿದ **ಪರಭಕ್ತಿ**ಯಿಂದ. ತಿಳಿದುಕೊಳ್ಳುವನು (ಅಭಿಜಾನಾತಿ) ಎಂದದ್ದು **ಪರಜ್ಞಾನವು;** ಯಾವನೆಂಬುದನ್ನೂ (ಯಶ್ಚ) ಎಂದರೆ ಯಾವ ಸ್ವರೂಪದವನು ಮತ್ತು ಸ್ವಭಾವದವನು ಎಂಬುದನ್ನೂ ಎಂದರ್ಥ. ಎಷ್ಟುಮಟ್ಟನವನೋ (ಯಾವಾನ್) ಎಂದರೆ ಎಷ್ಟು ಗುಣವಿಭೂತಿಗಳುಳ್ಳವನೋ ಎಂದರ್ಥ. ಅದರಿಂದ ಎಂದರೆ **ಪರಮಭಕ್ತಿ**ಯಿಂದ ಸಾಕ್ಷಾತ್ಕಾರದಲ್ಲಿರುವ ಅಭಿನಿವೇಶವೇ **ಪರಭಕ್ತಿ** ; ಸಾಕ್ಷಾತ್ಕಾರವೇ **ಪರಜ್ಞಾನವು** ; ಆಮೇಲೆ ಅನುಭವದಲ್ಲಿರುವ ಅಭಿನಿವೇಶವೇ **ಪರಮಭಕ್ತಿಯು**— ಎಂದು ತಾ॥

2. ಮೇಲೆ ಉದಾಹರಿಸಿರುವ ಮುಂಡಕಶ್ರುತಿಯ.

3. ಒಮ್ಮತದಿಂದ.

(ವಾದ) ವೇದವೇದಾಂತವ್ಯಾಖ್ಯಾನಗಳಿಂದ ಸುವ್ಯಕ್ತವಾಗಿರುವ ಅರ್ಥವುಳ್ಳ ಶ್ರುತಿಸಮೂಹಗಳಿಂದ ತಿಳಿಯಿಸಲ್ಪಟ್ಟದ್ದೂ ಆದದ್ದು, ಈ ಮಾರ್ಗವು.[1]

ಚಾರ್ವಾಕಾದಿಮತಗಳು ವೇದವಿರುದ್ಧವಾದ್ದರಿಂದ ಅಪ್ರಮಾಣ

(ಮೂಲ)

೬೪. ಅನೇನ ಚಾರ್ವಾಕಶಾಕ್ಯೋಲೂಕ್ಯಾಕ್ಷಪಾದಕ್ಷಪಣಕಕಪಿಲ ಪತಞ್ಜಲಿ-ಮತಾನುಸಾರಿಣೋ ವೇದಬಾಹ್ಯಾಃ, ವೇದಾವಲಮ್ಬಿ ಕುದೃಷ್ಟಿಭಿಃ ಸಹ ನಿರಸ್ತಾಃ । ವೇದಾವಲಮ್ಬಿನಾಮಪಿ ಯಥಾವಸ್ಥಿತವಸ್ತುವಿಪರ್ಯಸ್ತದೃಶಾಂ ಬಾಹ್ಯಸಾಮ್ಯಂ ಮನುನೈವೋಕ್ತಮ್ 'ಯಾ ವೇದಬಾಹ್ಯಾಃ ಸ್ಮೃತಯೋ ಯಾಶ್ಚ ಕಾಶ್ಚ ಕುದೃಷ್ಟಯಃ । ಸರ್ವಾಸ್ತಾ ನಿಷ್ಫಲಾಃ ಪ್ರೇತ್ಯ ತಮೋನಿಷ್ಠಾ ಹಿ ತಾಃ ಸ್ಮೃತಾಃ ॥' (ಮನು.೧೨-೯೫), ಇತಿ । ರಜಸ್ತಮೋಭ್ಯಾಮ್ ಅಸ್ಪೃಷ್ಟಮುತ್ತಮಂ ಸತ್ತ್ವಮೇವ ಯೇಷಾಂ ಸ್ವಾಭಾವಿಕೋ ಗುಣಃ, ತೇಷಾಮೇವ ವೇದೈಕರುಚೆರ್[2]ವೇದಾರ್ಥ ಯಾಥಾತ್ಮ್ಯಾವಬೋಧಶ್ಚೇತ್ಯರ್ಥಃ ॥

(ಅರ್ಥ)

ಇದರಿಂದ ಚಾರ್ವಾಕ, ಶಾಕ್ಯ, ಔಲೂಕ್ಯ,[3] ಅಕ್ಷಪಾದ, ಕ್ಷಪಣಕ, ಕಪಿಲ, ಪತಂಜಲಿ- ಇವರ ಮತಗಳನ್ನು ಅನುಸರಿಸುವ ವೇದಬಾಹ್ಯರನ್ನೂ ವೇದವನ್ನು ಆಶ್ರಯಿಸಿರುವ ಕುದೃಷ್ಟಿಗಳೊಡನೆ ತಿರಸ್ಕರಿಸಿದಂತೆ ಆಯಿತು. ವಸ್ತುವು ಇದ್ದದ್ದನ್ನು ಇದ್ದಂತೆ (ತಿಳಿಯದೆ) ತಪ್ಪಾಗಿ ತಿಳಿದುಕೊಂಡಿರುವ ವೇದಾವಲಂಬಿಗಳೂ[4] ವೇದಬಾಹ್ಯರಿಗೆ ಸಮಾನರೆಂದು 'ವೇದಬಾಹ್ಯವಾದ ಯಾವ ಸ್ಮೃತಿಗಳಿರುವವೋ ಮತ್ತು ಯಾವಯಾವ ಕುದೃಷ್ಟಿಗಳಿರುವವೋ ಅವೆಲ್ಲವೂ ನಿಷ್ಫಲವಾಗಿರುವವು ; ಏಕೆಂದರೆ ಅವು ಈ ಲೋಕವನ್ನು ಬಿಟ್ಟು ತೆರಳಿದಮೇಲೆ ತಮೋನಿಷ್ಠಗಳಾಗಿರುವವೆಂದೇ ಬಲ್ಲವರು ಹೇಳುತ್ತಾರೆ' (ಮನು. ೧೨-೯೫) ಎಂದು **ಮನುವೇ** ಹೇಳಿರುತ್ತಾನೆ. ರಜಸ್ತಮಸ್ಸುಗಳ ಸೋಂಕಿಲ್ಲದ ಉತ್ತಮಸತ್ತ್ವವೇ ಯಾರಿಗೆ ಸ್ವಾಭಾವಿಕವಾದ ಗುಣವಾಗಿರುವದೋ ಅವರಿಗೇ ವೇದಮಾತ್ರದಲ್ಲಿಯೇ ಅಭಿರುಚಿಯಿರುತ್ತದೆ, ವೇದಾರ್ಥದ ಯಾಥಾತ್ಮ್ಯದ ತಿಳಿವಳಿಕೆಯೂ ಇರುತ್ತದೆ- ಎಂದರ್ಥ.

---

1. ಉಪಾಯೋಪೇಯಗಳ ವಿಷಯದಲ್ಲಿ ನಾವು ಹೇಳಿರುವದು ಸಂಪ್ರದಾಯಸಿದ್ಧವೂ ಶ್ರುತಿಸಿದ್ಧವೂ ಆಗಿದೆ- ಎಂದು ಅಭಿಪ್ರಾಯ. ಇಲ್ಲಿ ಹೇಳಿರುವ ಬೋಧಾಯನಾದಿಗಳ ವಿಷಯದಲ್ಲಿ ಪೀಠಿಕೆಯನ್ನು ನೋಡಿರಿ. 2. 'ವೈದಿಕೀ ರುಚಿಃ' ಕಾ॥ 3. ಕಣಾದ.
4. ವೇದವನ್ನವಲಂಬಿಸುವ ಶಾಂಕರಭಾಸ್ಕರಾದಿಗಳೂ ಎಂಬ ಅಭಿಪ್ರಾಯವಿರಬಹುದು.

ನಾರಾಯಣನೇ ಪರಬ್ರಹ್ಮ

ಪುರಾಣಗಳ ಪ್ರಾಮಾಣ್ಯದ ನಿರ್ಣಯ

(ಮೂಲ)

೬೫. ಯಥೋಕ್ತಂ ಮಾತ್ಸ್ಯೇ । 'ಸಂಕೀರ್ಣಾಃ ಸಾತ್ತ್ವಿಕಾಶ್ಚೈವ ರಾಜಸಾಸ್ತಾಮಸಾಸ್ತಥಾ ।' (ಮಾ.ಪು. ೨೯೦-೧೩)[1] ಇತಿ । ಕೇಚಿತ್ ಬ್ರಹ್ಮ ಕಲ್ಪಾಃ ಸಂಕೀರ್ಣಾಃ, ಕೇಚಿತ್ ಸತ್ತ್ವಪ್ರಾಯಾಃ, ಕೇಚಿದ್ ರಜಃ ಪ್ರಾಯಾಃ, ಕೇಚಿತ್ತಮಃ ಪ್ರಾಯಾಃ - ಇತಿ ಕಲ್ಪವಿಭಾಗಮ್ ಉಕ್ತ್ವಾ ಸತ್ತ್ವರಜಸ್ತಮೋಮಯಾನಾಂ ತತ್ತ್ವಾನಾಂ ಮಾಹಾತ್ಮ್ಯವರ್ಣನಂ ಚ ತತ್ತತ್ಕಲ್ಪಪ್ರೋಕ್ತ[2]ಪುರಾಣೇಷು ಸತ್ತ್ವಾದಿಗುಣಮಯೇನ ಬ್ರಹ್ಮಣಾ ಕ್ರಿಯತ ಇತಿ ಚೋಕ್ತಮ್ । 'ಯಸ್ಮಿನ್ ಕಲ್ಪೇ ತು ಯತ್ ಪ್ರೋಕ್ತಂ ಪುರಾಣಂ ಬ್ರಹ್ಮಣಾ ಪುರಾ । ತಸ್ಯ ತಸ್ಯ ತು ಮಾಹಾತ್ಮ್ಯಂ ತತ್ಸ್ವರೂಪೇಣ ವರ್ಣ್ಯತೇ ॥' (ಮಾ.ಪು. ೨೯೦-೧೫) ಇತಿ । ವಿಶೇಷತಶ್ಚೋಕ್ತಮ್ 'ಅಗ್ನೇಃ ಶಿವಸ್ಯ ಮಾಹಾತ್ಮ್ಯಂ ತಾಮಸೇಷು ಪ್ರಕೀರ್ತ್ಯತೇ । ರಾಜಸೇಷು ಚ ಮಾಹಾತ್ಮ್ಯಮಧಿಕಂ ಬ್ರಹ್ಮಣೋ ವಿದುಃ[3] ॥ ಸಾತ್ತ್ವಿಕೇಷ್ವಥ[4] ಕಲ್ಪೇಷು ಮಾಹಾತ್ಮ್ಯಮಧಿಕಂ ಹರೇಃ । ತೇಷ್ವೇವ ಯೋಗ ಸಂಸಿದ್ಧಾ ಗಮಿಷ್ಯನ್ತಿ ಪರಾಂ ಗತಿಮ್ । ಸಂಕೀರ್ಣೇಷು ಸರಸ್ವತ್ಯಾಃ ಪಿತೃಣಾಮ್....' (ಮಾ.ಪು. ೨೯೦-೧೫, ೧೬) ಇತ್ಯಾದಿ ಏತದುಕ್ತಂ ಭವತಿ । ಆದಿಕ್ಷೇತ್ರಜ್ಞತ್ವಾದ್ ಬ್ರಹ್ಮಣಸ್ತಸ್ಯಾಪಿ ಕೇಷುಚಿದಹಃಸ್ಸು ಸತ್ತ್ವಮುದ್ರಿಕ್ತಮ್ । ಕೇಷುಚಿದ್ರಜಃ, ಕೇಷುಚಿತ್ತಮಃ । ಯಥೋಕ್ತಂ ಭಗವತಾ 'ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ । ಸತ್ತ್ವಂ ಪ್ರಕೃತಿರ್ಜೈರ್ಮುಕ್ತಂ ಯದೇಭಿಃ ಸ್ಯಾತ್ತ್ರಿಭಿರ್ಗುಣೈಃ ॥' (ಗೀ. ೧೮-೪೦) ಇತಿ । 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಗ್ಂಶ್ಚ ಪ್ರಹಿಣೋತಿ ತಸ್ಮೈ' (ಶ್ವೇ. ೬-೧೮) ಇತಿ ಶ್ರುತೇರ್ಬ್ರಹ್ಮಣೋಽಪಿ ಸೃಜ್ಯತ್ವೇನ ಶಾಸ್ತ್ರವಶ್ಯತ್ವೇನ ಚ ಕ್ಷೇತ್ರಜ್ಞತ್ವಂ ಗಮ್ಯತೇ ॥

ಸತ್ತ್ವಪ್ರಾಯೇಷ್ವಹಃಸ್ಸು ತದಿತರೇಷು ಚ ಯಾನಿ ಪುರಾಣಾನಿ ಬ್ರಹ್ಮಣಾ ಪ್ರೋಕ್ತಾನಿ ತೇಷಾಂ ಪರಸ್ಪರವಿರೋಧೇ ಸತಿ ಸಾತ್ತ್ವಿಕಾಹಃಪ್ರೋಕ್ತಂ ಪುರಾಣಮೇವ

---

1. 'ಅಚ್ಚಿನ ಪುಸ್ತಕದಲ್ಲಿ 'ಸಂಕೀರ್ಣಾಸ್ತಮಸಾಶ್ಚೈವ ರಾಜಸಾಃ ಸಾತ್ತ್ವಿಕಾಸ್ತಥಾ' ಎಂದಿದೆ.
2. 'ಕಲ್ಪೋಕ್ತ' ಕಾ॥
3. ಅಚ್ಚಿನ ಪುಸ್ತಕದಲ್ಲಿ : 'ಅಗ್ನೇಃ ಶಿವಸ್ಯ ಮಾಹಾತ್ಮ್ಯಂ ತಾಮಸೇಷು ದಿವಾಕರೇ । ರಾಜಸೇಷು ಚ ಮಾಹಾತ್ಮ್ಯಮಧಿಕಂ ಬ್ರಹ್ಮಣಃ ಸ್ಮೃತಮ್ ॥' ಎಂದಿದೆ; ಆ ಪಾಠದಲ್ಲಿ 'ದಿವಾಕರೇ' ಎಂಬ ಪದಕ್ಕೆ ಅನ್ವಯವಾಗುವದಿಲ್ಲ.
4. 'ಸಾತ್ತ್ವಿಕೇಷು ಚ' ಕಾ॥
5. ಅಚ್ಚಿನ ಪುಸ್ತಕದಲ್ಲಿ 'ಸಾತ್ತ್ವಿಕೇಷ್ವಧಿಕಂ ತದ್ವದ್ವಿಷ್ಣೋರ್ಮಾಹಾತ್ಮ್ಯಮುತ್ತಮಮ್' ಎಂದಿದೆ.

ಯಥಾರ್ಥಮ್ । ತದ್ವಿರೋಧ್ಯನ್ಯದಯಥಾರ್ಥಮ್ ಇತಿ ಪುರಾಣನಿರ್ಣಯಾಯೈ ವೇದಂ ಸತ್ತ್ವನಿಷ್ಠೇನ ಬ್ರಹ್ಮಣಾ ಅಬಿಹಿತಮಿತಿ ವಿಜ್ಞಾಯತ ಇತಿ । ಸತ್ತ್ವಾದೀನಾಂ ಕಾರ್ಯಂ ಚ ಭಗವತೈವೋಕ್ತಮ್ 'ಸತ್ತ್ವಾತ್ ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ । ಪ್ರಮಾದಮೋಹೌ ತಮಸೋ ಭವತೋಜ್ಞಾನ ಮೇವ ಚ ॥ (ಗೀ. ೧೪-೧೭), 'ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ । ಬನ್ಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಪಾರ್ಥ ಸಾತ್ತ್ವಿಕೀ ॥ ಯಯಾ ಧರ್ಮಮಧರ್ಮಂ ಚ ಕಾರ್ಯಂ ಚಾಕಾರ್ಯಮೇವ ಚ । ಅಯಥಾವತ್ ಪ್ರಜಾನಾತಿ ಬುದ್ಧಿಃ ಸಾ ಪಾರ್ಥ ರಾಜಸೀ ॥ ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾವೃತಾ । ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ ॥ (ಗೀ. ೧೮-೩೦, ೩೧, ೩೨) ಇತಿ । ಸರ್ವಾನ್ ಪುರಾಣಾರ್ಥಾನ್ ಬ್ರಹ್ಮಣಃ ಸಕಾಶಾದಧಿಗಮ್ಯೈವ ಸರ್ವಾಣಿ ಪುರಾಣಾನಿ ಪುರಾಣಕಾರಾಶ್ಚಕ್ರುಃ । ಯಥೋಕ್ತಮ್ 'ಕಥಯಾಮಿ ಯಥಾಪೂರ್ವಂ ದಕ್ಷಾದ್ಯೈರ್ಮುನಿಸತ್ತಮೈಃ । ಪೃಷ್ಟಃ ಪ್ರೋವಾಚ ಭಗವಾನಬ್ಜಯೋನಿಃ ಪಿತಾಮಹಃ' (ವಿ.ಪು.೧-೨-೮) ಇತಿ ॥

(ಅರ್ಥ)

ಹೀಗೆಂದು **ಮಾತ್ಸ್ಯಪುರಾಣ**ದಲ್ಲಿ ಹೇಳಿದೆ ; 'ಸಂಕೀರ್ಣವಾದವುಗಳು, ಸಾತ್ತ್ವಿಕವಾದವುಗಳು, ರಾಜಸವಾದವುಗಳು ಮತ್ತು ತಾಮಸವಾದವುಗಳು' (ಮಾ.ಪು. ೨೯೦-೧೩.)- ಕೆಲವು **ಬ್ರಹ್ಮಕಲ್ಪಗಳು** ಸಂಕೀರ್ಣವಾಗಿರುತ್ತವೆ, ಕೆಲವು ಸತ್ತ್ವಪ್ರಚುರವಾಗಿರುತ್ತವೆ, ಕೆಲವು ರಜಃಪ್ರಚುರವಾಗಿರುತ್ತವೆ ; ಕೆಲವು ತಮಃಪ್ರಚುರವಾಗಿರುತ್ತವೆ- ಎಂದು (ಹೀಗೆ) ಕಲ್ಪಗಳ (ಗುಣಕೃತ)ವಿಭಾಗವನ್ನು ಹೇಳಿ **ಆಯಾ ಕಲ್ಪದಲ್ಲಿ ಹೇಳಿದ ಪುರಾಣಗಳಲ್ಲಿ ಸತ್ತ್ವರಜಸ್ತಮೋಮಯವಾದ ತತ್ತ್ವಗಳ ಮಾಹಾತ್ಮ್ಯವನ್ನು ಸತ್ತ್ವಾದಿಗುಣಮಯನಾದ ಬ್ರಹ್ಮನು ವರ್ಣಿಸುತ್ತಾನೆ ಎಂದೂ ಹೇಳಿರುತ್ತದೆ.** 'ಬ್ರಹ್ಮನು ಹಿಂದೆ ಯಾವ ಕಲ್ಪದಲ್ಲಿ ಯಾವ ಪುರಾಣವನ್ನು ಹೇಳಿದನೋ ಆಯಾ (ತತ್ತ್ವದ) ಮಾಹಾತ್ಮ್ಯವನ್ನು ಆಯಾ ಸ್ವರೂಪದಿಂದ ವರ್ಣಿಸಿರುತ್ತದೆ' (ಮಾ.ಪು. ೨೯೦-೧೫) ಎಂದು (ಹೇಳಿದ ಬಳಿಕ) ವಿಶೇಷ ವಾಗಿಯೂ 'ಅಗ್ನಿಯ ಮತ್ತು ಶಿವನ ಮಾಹಾತ್ಮ್ಯವನ್ನು ತಾಮಸ(ಕಲ್ಪ)ಗಳಲ್ಲಿ ಹೇಳಿ ರುತ್ತದೆ ; ರಾಜಸಗಳಲ್ಲಿ ಬ್ರಹ್ಮನ ಮಾಹಾತ್ಮ್ಯವೇ ಅಧಿಕವಾಗಿದೆಯೆನ್ನುವರು ; ಇನ್ನು ಸಾತ್ತ್ವಿಕಕಲ್ಪಗಳಲ್ಲಿ ಹರಿಯ ಮಾಹಾತ್ಮ್ಯವು ಅಧಿಕವಾಗಿರುತ್ತದೆ. ಆ (ಕಲ್ಪ)ಗಳ ಲ್ಲಿಯೇ (ಬೆರೆತು) ಯೋಗಸಂಸಿದ್ಧರಾಗಿ ಪರಗತಿಯನ್ನು ಪಡೆಯುವರು. ಸಂಕೀರ್ಣ ವಾದ (ಕಲ್ಪ)ಗಳಲ್ಲಿ ಸರಸ್ವತಿಯ, ಪಿತೃಗಳ (ಮಹಾತ್ಮ್ಯವನ್ನೇ)'- (ಮಾ.ಪು.೨೯೦-೧೫, ೧೬) ಎಂದು ಮುಂತಾಗಿ (ಹೇಳಿದೆ). (ಇಲ್ಲಿ) ಇಷ್ಟನ್ನು ಹೇಳಿದಂತಾಗಿದೆ :

ಬ್ರಹ್ಮನು **ಆದಿಕ್ಷೇತ್ರಜ್ಞನಾದ್ದರಿಂದ** ಆವನಿಗೂ ಕೆಲವು ದಿನಗಳಲ್ಲಿ ಸತ್ತ್ವವು ಎದ್ದುಕೊಂಡಿರುತ್ತದೆ. ಕೆಲವು (ದಿನ)ಗಳಲ್ಲಿ ರಜಸ್ಸೂ, ಕೆಲವು (ದಿನ)ಗಳಲ್ಲಿ ತಮಸ್ಸೂ ಎದ್ದುಕೊಂಡಿರುತ್ತದೆ. ಹೀಗೆಂದು ಭಗವಂತನು ಹೇಳಿರುತ್ತಾನೆ : 'ಪೃಥಿವಿಯಲ್ಲಾಗಲಿ ಅಂತರಿಕ್ಷದಲ್ಲಾಗಲಿ ದೇವತೆಗಳಲ್ಲಾಗಲಿ ಪ್ರಕೃತಿಯಿಂದುಂಟಾಗಿರುವ ಈ ಮೂರು ಗುಣಗಳಿಂದ ಮುಕ್ತವಾಗಿರುವದೆಂಬ ಪ್ರಾಣಿ(ಜಾತ)ವೇ ಇರುವದಿಲ್ಲ' (ಗೀ. ೧೮-೪೦), 'ಯಾವಾತನು ಮೊದಲು ಬ್ರಹ್ಮವನ್ನುಂಟುಮಾಡುವನೋ, ಯಾವಾತನು ಅವನಿಗೆ ವೇದಗಳನ್ನು ಕಳುಹಿಸುವನೋ...' (ಶ್ವೇ. ೬-೧೮) ಎಂಬ ಶ್ರುತಿಯ (ಪ್ರಮಾಣ)ದಿಂದ ಬ್ರಹ್ಮನೂ ಸೃಷ್ಟನಾಗಿರುವದರಿಂದಲೂ ಶಾಸ್ತ್ರಕ್ಕೆ ಅಧೀನನಾಗಿರುವದರಿಂದಲೂ ಕ್ಷೇತ್ರಜ್ಞನೆಂದು ಉಕ್ತವಾಗಿರುತ್ತದೆ.

ಸತ್ತ್ವಪ್ರಚುರವಾದ ದಿನಗಳಲ್ಲಿಯೂ ಅದಕ್ಕಿಂತ ಬೇರೆಯಾದ ದಿನಗಳಲ್ಲಿಯೂ ಯಾವ ಯಾವ ಪುರಾಣಗಳು ಬ್ರಹ್ಮನಿಂದ ಉಕ್ತವಾಗಿರುತ್ತವೆಯೋ ಅವುಗಳೊಳಗೆ ಪರಸ್ಪರವಿರೋಧವುಂಟಾದರೆ ಸಾತ್ತ್ವಿಕದಿನಗಳಲ್ಲಿ ಉಕ್ತವಾದ ಪುರಾಣವೇ ಯಥಾರ್ಥವು. ಅದಕ್ಕೆ ವಿರೋಧಿಯಾದ ಬೇರೆಯ (ಪುರಾಣವು) ಅಯಥಾರ್ಥವು ಎಂದು ಪುರಾಣಗಳ (ಪ್ರಾಮಾಣ್ಯ)ನಿರ್ಣಯಕ್ಕಾಗಿಯೇ, ಈ (ವಾಕ್ಯ)ವು ಸತ್ತ್ವನಿಷ್ಠನಾದ ಬ್ರಹ್ಮನಿಂದ ಉಕ್ತವಾಗಿದೆ ಎಂದು ತಿಳಿದುಬರುತ್ತದೆ. ಸತ್ತ್ವಾದಿಗಳ ಕಾರ್ಯವನ್ನು ಭಗವಂತನೇ 'ಸತ್ತ್ವದಿಂದ ಜ್ಞಾನವುಂಟಾಗುತ್ತದೆ, ರಜಸ್ಸಿನಿಂದ ಲೋಭವೇ (ಉಂಟಾಗುತ್ತದೆ), ತಮಸ್ಸಿನಿಂದ ಪ್ರಮಾದಮೋಹಗಳೂ ಅಜ್ಞಾನವೂ ಆಗುತ್ತವೆ' (ಗೀ. ೧೪-೧೭), 'ಪಾರ್ಥನೆ, ಪ್ರವೃತ್ತಿಯನ್ನೂ ನಿವೃತ್ತಿಯನ್ನೂ ಕಾರ್ಯಾಕಾರ್ಯಗಳನ್ನು ಭಯಾಭಯಗಳನ್ನು ಬಂಧವನ್ನೂ ಮೋಕ್ಷವನ್ನೂ ಯಾವದು ಅರಿತಿರುವದೋ ಅದು **ಸಾತ್ತ್ವಿಕಬುದ್ಧಿ ;** ಯಾವದರಿಂದ ಧರ್ಮವನ್ನೂ ಅಧರ್ಮವನ್ನೂ ಕಾರ್ಯವನ್ನೂ ಅಕಾರ್ಯವನ್ನೂ ಅಯಥಾವತ್ತಾಗಿ ತಿಳದಿರುವನೋ ಆ ಬುದ್ಧಿಯು ಎಲೈ ಪಾರ್ಥನೆ, **ರಾಜಸೀಬುದ್ಧಿಯು.** ಅಧರ್ಮವನ್ನು ಧರ್ಮವೆಂದು ಯಾವ ಬುದ್ಧಿಯು ತಮಸ್ಸಿನಿಂದ ಆವೃತವಾಗಿ ತಿಳಿಯುತ್ತಿರುವದೋ ಸರ್ವಾರ್ಥಗಳನ್ನೂ ವಿಪರೀತವಾಗಿ ತಿಳಿಯುತ್ತಿರುವದೋ, ಎಲೈ ಪಾರ್ಥನೆ, ಆ ಬುದ್ಧಿಯು **ತಾಮಸೀಬುದ್ಧಿಯು'** (ಗೀ. ೧೮-೩೦, ೩೧, ೩೨) ಎಂದು ಹೇಳಿರುತ್ತಾನೆ. **ಸರ್ವಪುರಾಣಾರ್ಥಗಳನ್ನೂ ಬ್ರಹ್ಮನಿಂದ ತಿಳಿದುಕೊಂಡೇ ಸರ್ವಪುರಾಣಗಳನ್ನು ಪುರಾಣಕಾರರು ಮಾಡಿದರು.** ಹೀಗೆಂದು 'ಹಿಂದಕ್ಕೆ **ದಕ್ಷನೇ ಮುಂತಾದ ಮುನಿಶ್ರೇಷ್ಠರು** ಕೇಳಲಾಗಿ ಕಮಲಜನ್ಮನಾದ ಪಿತಾಮಹನು ಹೇಗೆ (ಉತ್ತರವನ್ನು) ಹೇಳಿದನೋ ಅದನ್ನು ಹೇಳಿರುತ್ತೇನೆ' (ವಿ.ಪು. ೧-೨-೮) ಎಂದು ಹೇಳಿರುತ್ತದೆ.

ವೇದವಾಕ್ಯಗಳೆಲ್ಲ ನಾರಾಯಣಪರವೇ

(ಮೂಲ)

೬೬. ಅಪೌರುಷೇಯೇಷು ವೇದವಾಕ್ಯೇಷು ಪರಸ್ಪರವಿರುದ್ಧೇಷು ಕಥಮಿತಿ ಚೇತ್, ತಾತ್ಪರ್ಯನಿಶ್ಚಯಾದವಿರೋಧಃ ಪೂರ್ವಮೇವೋಕ್ತಃ । ಯದಪಿ ಚೇದಂ ವಿರುದ್ಧಮಿವ[1] ದೃಶ್ಯತೇ (೧) 'ಪ್ರಾಣಂ ಮನಸಿ ಸಹ ಕರಣೈರ್ನಾದಾನ್ತೇ ಪರಮಾತ್ಮನಿ ಸಂಪ್ರತಿಷ್ಠಾಪ್ಯ ಧ್ಯಾಯಾತೇಶಾನಂ ಪ್ರಧ್ಯಾಯಾತ್ಯೈವಂ[2] ಸರ್ವಮಿದಮ್ । (೨) 'ಬ್ರಹ್ಮವಿಷ್ಣುರುದ್ರೇನ್ದ್ರಾಸ್ತೇ ಸರ್ವೇ ಸಂಪ್ರಸೂಯನ್ತೇ....[3] ನ ಕಾರಣಮ್[4] । ಕಾರಣಂ ತು ಧ್ಯೇಯಃ । ಸರ್ವೈಶ್ವರ್ಯಸಂಪನ್ನಃ ಸರ್ವೇಶ್ವರಃ ಶಮ್ಭುರಾಕಾಶಮಧ್ಯೇ ಧ್ಯೇಯಃ'[5] (ಅ.ಶಿ.೩), (೩) 'ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿದ್ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್ । ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಸ್ತೇನೇದಂ ಪೂರ್ಣಂ ಪುರುಷೇಣ ಸರ್ವಮ್ । ತತೋ ಯದುತ್ತರತರಂ ತದರೂಪಮನಾಮಯಮ್ । ಯ ಏತದ್ವಿದುರಮೃತಾಸ್ತೇ ಭವನ್ತ್ಯಥೇತರೇ ದುಃಖಮೇವಾಪಿ ಯನ್ತಿ ॥ ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶಯಃ । ಸರ್ವವ್ಯಾಪೀ ಚ ಭಗವಾನ್ ತಸ್ಮಾತ್ ಸರ್ವಗತಃ ಶಿವಃ ॥' (ಶ್ವೇ. ೩-೯, ೧೦, ೧೧) (೪) 'ಯದಾ ತಮಸ್ತನ್ನ ದಿವಾ ನ ರಾತ್ರಿರ್ನ ಸನ್ನಚಾಸಚ್ಛಿವ ಏವ ಕೇವಲಃ । ತದಕ್ಷರಂ ತತ್ಸವಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ ।' (ಶ್ವೇ. ೪-೧೮) ಇತ್ಯಾದಿ । 'ನಾರಾಯಣಃ ಪರಂ ಬ್ರಹ್ಮ' ಇತಿ ಚ ಪೂರ್ವಮೇವ ಪ್ರತಿಪಾದಿತಮ್ । ತೇನಾಸ್ಯ ಕಥಮವಿರೋಧಃ ?

ಅತ್ಯಲ್ಪಮೇತತ್ । 'ವೇದವಿತ್ ಪ್ರವರಪ್ರೋಕ್ತವಾಕ್ಯನ್ಯಾಯೋಪಬೃಂಹಿತಾಃ । ವೇದಾಃ ಸಾಙ್ಗಾ ಹರಿಂ ಪ್ರಾಹುರ್ಜಗಜ್ಜನ್ಮಾದಿಕಾರಣಮ್ ।' (?),[6] 'ಜನ್ಮಾದ್ಯಸ್ಯ ಯತಃ' (ವೇ.ಸೂ. ೧-೧-೨), 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ । ಯೇನ ಜಾತಾನಿ ಜೀವನ್ತಿ । ಯತ್ಪ್ರಯನ್ತ್ಯಭಿಸಂವಿಶನ್ತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇತಿ ॥' (ತೈ.೩-೧) ಜಗಜ್ಜನ್ಮಾದಿಕಾರಣಂ ಬ್ರಹ್ಮೇತ್ಯವಗಮ್ಯತೇ ತಚ್ಚ ಜಗತ್ಸೃಷ್ಟಿಪ್ರಲಯ

---

1. 'ವಿರುದ್ಧವತ್' ಕಾ॥
2. 'ಪ್ರಧ್ಯಾಯಿತವ್ಯಮ್' ಎಂಬ ನಿ॥ ಪಾಠವು ತಪ್ಪಿರಬಹುದು.
3. 'ಸರ್ವಾಣಿ ಚೇನ್ದ್ರಿಯಾಣಿ ಸಹ ಭೂತೈಃ' ಬಿಟ್ಟಿರುವ ಭಾಗ.
4. ಇಲ್ಲಿ 'ಕಾರಣಾನಾಂ ಧ್ಯಾತಾ' ಎಂದು ನಿ॥ ಪಾಠದಲ್ಲಿ ಹೆಚ್ಚಾಗಿದೆ.
5. 'ಧ್ಯೇಯಃ' ಎಂಬ ಮಾತು ನಿ॥ ಪಾಠದಲ್ಲಿಲ್ಲ ; ಆನಂದಾಶ್ರಮದಲ್ಲಿ ಮುದ್ರಿತವಾಗಿರುವ ಈ ಹೆಸರಿನ ಉಪನಿಷತ್ತಿನ ಪಾಠವೇ ಬೇರೆಯಾಗಿದೆ. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.
6. ಇದು ಶ್ರೀರಾಮಾನುಜಾಚಾರ್ಯಕೃತಶ್ಲೋಕವೇ ಎಂತ ಕಾಣುತ್ತದೆ.

ಪ್ರಕರಣೇಷ್ವೇವಾವಗನ್ತವ್ಯಮ್ । 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾ ದ್ವಿತೀಯಮ್' (ಛಾಂ. ೭-೨-೧) ಇತಿ ಜಗದುಪಾದಾನತಾಜಗನ್ನಿಮಿತ್ತತಾಜಗ ದನ್ತರ್ಯಾಮಿತಾದಿಮುಖೇನ ಪರಮಕಾರಣಂ ಸಚ್ಛಬ್ದೇನ ಪ್ರತಿಪಾದಿತಮ್[1] । ಅಯಮೇವಾರ್ಥಃ 'ಬ್ರಹ್ಮ ವಾ ಇದಮೇಕ ಏವಾಗ್ರ ಆಸೀತ್' (ಬೃ.೧-೪-೧೦?) ಇತಿ ಶಾಖಾನ್ತರೇ ಬ್ರಹ್ಮಶಬ್ದೇನ ಪ್ರತಿಪಾದಿತಃ । ಅನೇನ ಸಚ್ಛಬ್ದಾಭಿಹಿತಂ ಬ್ರಹ್ಮೇತ್ಯವಗತಮ್ । ಅಯಮೇವಾರ್ಥಃ ಶಾಖಾನ್ತರೇ 'ಆತ್ಮಾ ವಾ ಇದಮೇಕ ಏವಾಗ್ರ ಆಸೀನ್ನಾನ್ಯತ್ಕಿಂಚನ ಮಿಷತ್' (ಐ.೧-೧) ಇತಿ । ತಥಾ ಸದ್ಬ್ರಹ್ಮಶಬ್ದಾಭ್ಯಾಮ್ ಆತ್ಮೈವಾಭಿಹಿತ ಇತ್ಯವಗಮ್ಯತೇ । ತಥಾ ಚ ಶಾಖಾನ್ತರೇ 'ಏಕೋ ಹ ವೈ ನಾರಾಯಣ ಆಸೀನ್ನ ಬ್ರಹ್ಮಾ ನೇಶಾನೋ ನೇಮೇ ದ್ಯಾವಾ ಪೃಥಿವೀ'[2] (ಮಹೋ.೧) ಇತ್ಯಾದಿನಾ ಸದ್ಬ್ರಹ್ಮಾತ್ಮಾದಿಪರಮಕಾರಣವಾಚಿಭಿಃ[3] ಶಬ್ದೈರ್ನಾರಾಯಣ ಏವಾಽಭಿಧೀಯತ[4] ಇತಿ ನಿಶ್ಚೀಯತೇ । 'ಯಮನ್ತಃ ಸಮುದ್ರೇ ಕವಯೋ ವಯನ್ತಿ' (ತೈ.ನಾ.೧) ಇತ್ಯಾದಿ । 'ನೈನಮೂರ್ಧ್ವಂ ನ ತಿರ್ಯಞ್ಚಂ ನ ಮಧ್ಯೇ ಪರಿಜಗ್ರಭತ್ । ನ ತಸ್ಯೇಶೇ ಕಶ್ಚನ ತಸ್ಯ ನಾಮ ಮಹದ್ಯಶಃ । ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ ಕಶ್ಚನೈನಮ್ । ಹೃದಾ ಮನೀಷಾ ಮನಸಾಽಭಿಕ್ಲೃಪ್ತೋ ಯ ಏನಂ ವಿದುರಮೃತಾಸ್ತೇ ಭವನ್ತಿ' (ತೈ.ನಾ. ೧-೨, ೩), ಇತಿ ಸರ್ವಸ್ಮಾತ್ ಪರತ್ವಮಸ್ಯ ಪ್ರತಿಪಾದ್ಯ 'ನ ತಸ್ಯೇಶೇ ಕಶ್ಚನ' (ತೈ.. ನಾ. ೧-೨) ಇತಿ ತಸ್ಮಾತ್ ಪರಂ ಕಿಮಪಿ ನ ವಿದ್ಯತ ಇತಿ ಚ ಪ್ರತಿಷಿದ್ಧ 'ಅದ್ಭ್ಯಃ ಸಂಭೂತೋ ಹಿರಣ್ಯಗರ್ಭ ಇತ್ಯಷ್ಟೌ' (ತೈ.ನಾ.೧-೩) ಇತಿ ತೇನೈಕವಾಕ್ಯತಾಂ ಗಮಯತಿ । ತಚ್ಚ ಮಹಾಪುರುಷಪ್ರಕರಣಮ್ 'ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' (ತೈ. ಆ. ೩-೪೧) ಇತಿ ನಾರಾಯಣ[5] ಏವೇತಿ ದ್ಯೋತಯತಿ । ಅಯಮರ್ಥೋ ನಾರಾಯಣಾನುವಾಕೇ ಪ್ರಪಞ್ಚಿತಃ । 'ಸಹಸ್ರಶೀರ್ಷಂ ದೇವಮ್' (ತೈ.ನಾ.೧೧-೨೫) ಇತ್ಯಾರಭ್ಯ 'ಸ ಬ್ರಹ್ಮಾ ಸ ಶಿವಃ ಸೇನ್ದ್ರಃ ಸೋಽಕ್ಷರಃ ಪರಮ ಸ್ವರಾಟ್' (ತೈ.ನಾ.೧೧-೨೬) ಇತಿ । ಸರ್ವಶಾಖಾಸು ಪರತತ್ತ್ವಪ್ರತಿಪಾದನಪರಾನ್ ಅಕ್ಷರಶಿವಶಮ್ಭುಪರಬ್ರಹ್ಮ ಪರಜ್ಯೋತಿಃಪರತತ್ತ್ವಪರಾಯಣಪರಮಾತ್ಮಾದಿಸರ್ವಶಬ್ದಾನ್ ತತ್ತದ್ಗುಣ ಯೋಗೇನ ನಾರಾಯಣ ಏವ ಪ್ರಯುಜ್ಯ ತದ್ವ್ಯತಿರಿಕ್ತಸ್ಯ ಸಮಸ್ತಸ್ಯ ತದಾಯತ್ತತಾಂ ತದ್ವ್ಯಾಪ್ಯತಾಂ ತದಾಧಾರತಾಂ ತನ್ನಿಯಾಮ್ಯತಾಂ ತಚ್ಛೇಷತಾಂ ತದಾತ್ಮಕತಾಂ ಚ ಪ್ರತಿಪಾದ್ಯ ಬ್ರಹ್ಮಶಿವಯೋರಪೀನ್ದ್ರಾದಿಸಮಾನಾಕಾರತಯಾ ತದ್ವಿಭೂತಿತ್ವಂ ಚ

---

1. 'ಅಭಿಹಿತಂ ಬ್ರಹ್ಮೇತ್ಯವಗತಮ್' ಕಾ॥
2. 'ನ ನಕ್ಷತ್ರಾಣಿ' ಎಂದು ಹೆಚ್ಚಾಗಿ ಕಾ॥
3. 'ಮಾದಿಭಿಃ' ಕಾ॥ 4. 'ಅಭಿಹಿತ' ಕಾ॥
5. 'ನಾರಾಯಣಸ್ಯೈವೇತಿ' ಕಾ॥

ಪ್ರತಿಪಾದಿತಮ್ । ಇದಂ ಚ ವಾಕ್ಯಂ ಕೇವಲಪರತತ್ತ್ವಪ್ರತಿಪಾದನ[1]ಪರಮ್ । ಅನ್ಯತ್ಕಿಞ್ಚಿದಪ್ಯತ್ರ ನ ವಿಧೀಯತೇ । ಅಸ್ಮಿನ್ ವಾಕ್ಯೇ ಪ್ರತಿಪಾದಿತಸ್ಯ ಸರ್ವಸ್ಮಾತ್ ಪರತ್ವೇನಾಽವಸ್ಥಿತಸ್ಯ ಬ್ರಹ್ಮಣೋ ವಾಕ್ಯಾನ್ತರೇಷು 'ಬ್ರಹ್ಮವಿದಾಪ್ನೋತಿ ಪರಮ್' (ತೈ.೧-೧) ಇತ್ಯಾದಿಷು ಉಪಾಸನಾದಿ ವಿಧೀಯತೇ ॥

(ಅರ್ಥ)

(ಶಂಕೆ) :— ಅಪೌರುಷೇಯವಾದವೇದವಾಕ್ಯಗಳು ಪರಸ್ಪರವಿರುದ್ಧವಾಗಿದ್ದರೆ ಹೇಗೆ[2]?

(ಪರಿಹಾರ) :— (ಅವುಗಳಲ್ಲಿ) ತಾತ್ಪರ್ಯವನ್ನು ನಿಶ್ಚಯಿಸುವದರಿಂದ ಅವಿರೋಧ(ವನ್ನು ಗೊತ್ತುಪಡಿಸಬೇಕು ಎಂದು) ಹಿಂದೆಯೇ[3] ಹೇಳಿದೆ.

(ಶಂಕೆ) :— ಇನ್ನು ಇದೂ ವಿರುದ್ಧವಾಗಿರುವಂತೆ ಕಾಣಿಸುತ್ತದೆಯಲ್ಲ! (೧) 'ಪ್ರಾಣವನ್ನು ಮನಸ್ಸಿನಲ್ಲಿ ಕರಣಗಳೊಡನೆ ನಾದಾಂತರದಲ್ಲಿರುವ ಪರಮಾತ್ಮನಲ್ಲಿ ಚೆನ್ನಾಗಿ ನಿಲ್ಲಿಸಿಕೊಂಡು ಧ್ಯಾನಮಾಡಬೇಕು. **ಈಶಾನ**ನನ್ನು ಪ್ರಧ್ಯಾನಮಾಡಬೇಕು. ಹೀಗೆ ಈ ಎಲ್ಲವನ್ನೂ (ಧ್ಯಾನಮಾಡಬೇಕು)' (೨) ಬ್ರಹ್ಮ, **ವಿಷ್ಣು**, ರುದ್ರ, ಇಂದ್ರ- ಇವರು ಎಲ್ಲರೂ ಹುಟ್ಟುತ್ತಾರೆ..... ಕಾರಣವು (ಹುಟ್ಟು)ವದಿಲ್ಲ. ಕಾರಣವನ್ನಾದರೋ ಧ್ಯಾನಮಾಡಬೇಕು ; ಸರ್ವೈಶ್ವರ್ಯಸಂಪನ್ನನೂ ಸರ್ವೇಶ್ವರನೂ ಆಗಿರುವ **ಶಂಭು**ವನ್ನು ಆಕಾಶಮಧ್ಯದಲ್ಲಿ ಧ್ಯಾನಮಾಡಬೇಕು'(ಅ.ಶಿ.೩). (೩) ಯಾವನಿಗಿಂತ ಪರವಾದದ್ದು ಮತ್ತೊಂದು ಯಾವದೊಂದೂ ಇಲ್ಲವೋ ಯಾವನಿಗಿಂತ ಅಣುತರವಾದದ್ದಾಗಲಿ ದೊಡ್ಡದಾದದ್ದಾಗಲಿ ಯಾವದೊಂದೂ ಇರುವದಿಲ್ಲವೋ, ವೃಕ್ಷದಂತೆ ಚಲಿಸದಿರುವ (ಆ) ಒಬ್ಬನೇ ದ್ಯುಲೋಕದಲ್ಲಿ ನಿಂತಿರುವನು ; ಆ ಪುರುಷನಿಂದಲೇ ಇದೆಲ್ಲವೂ ತುಂಬಿರುತ್ತದೆ. ಅದಕ್ಕಿಂತಲೂ ಯಾವದು ಹೆಚ್ಚು ಉತ್ಕೃಷ್ಟವಾಗಿರುವದೋ ಅದು ಅರೂಪವೂ ನಿರ್ದೋಷವೂ ಆಗಿರುತ್ತದೆ ; ಯಾರು ಇದನ್ನು ಅರಿತಿರುವರೋ ಅವರು ಅಮೃತರಾಗುತ್ತಾರೆ, ಇನ್ನುಳಿದವರು ದುಃಖವನ್ನೇ ಹೊಂದುತ್ತಾರೆ. ಎಲ್ಲಾ ಮುಖಗಳೂ ತಲೆಗಳೂ ಕೊರಳುಗಳೂ ಉಳ್ಳವನಾಗಿ, ಸರ್ವಭೂತಗಳ (ಹೃದಯ)ಗುಹೆಯಲ್ಲಿ ಇರುವವನಾಗಿ, ಭಗವಂತನು ಸರ್ವವ್ಯಾಪಿಯೂ ಆಗಿರುತ್ತಾನೆ. ಆದ್ದರಿಂದ ಸರ್ವಗತನು, **ಶಿವನು**' (ಶ್ವೇ.೩-೯, ೧೦, ೧೧) 'ಯಾವಾಗ ತಮಸ್ಸೇ ಇರುವದೋ, ಆಗ ಹಗಲಿರುವದಿಲ್ಲ, ರಾತ್ರಿಯೂ ಇರುವದಿಲ್ಲ, ಸತ್ತೂ ಇಲ್ಲ, ಅಸತ್ತೂ ಇಲ್ಲ ; ಕೇವಲ **ಶಿವನೇ** ; ಅದು ಅಕ್ಷರವು, ಅದು ಸೂರ್ಯನಿಗಿಂತಲೂ ವರಣೀಯವಾದದ್ದು ಅದರಿಂದಲೇ ಪುರಾತನವಾದ

---

1 'ಪ್ರತಿಪಾದನೈಕ' ಎಂಬ ಕಾ॥ ಪಾಠದಲ್ಲಿ ಏಕ ಹೆಚ್ಚು.

2. ಪುರಾಣವಾಕ್ಯಗಳಂತೆ ಅವುಗಳಲ್ಲಿ ಸಾತ್ತ್ವಿಕಾದಿಗುಣಭೇದದಿಂದ ತಾರತಮ್ಯವನ್ನು ಹೇಳುವದಕ್ಕೆ ಬರುವದಲ್ಲವಷ್ಟೆ! - ಎಂದು ಶಂಕೆ.

3. ಖಂ. ೫೮ರಲ್ಲಿ

ಪ್ರಜ್ಞೆಯು ಹೊರಟುಬಂದಿರುತ್ತದೆ' (ಶ್ವೇ. ೪-೧೮) - ಎಂದು ಮುಂತಾಗಿ (ಇರುತ್ತದೆ) ; 'ನಾರಾಯಣನೇ ಪರಬ್ರಹ್ಮವು' ಎಂದು ಹಿಂದೆಯೇ[1] ಹೇಳಿದ್ದಾಗಿದೆ, ಅದಕ್ಕೂ ಈ (ವಾಕ್ಯಜಾತಕ್ಕೂ) ಹೇಗೆ ಅವಿರೋಧ?

(ಪರಿಹಾರ) :— ಇದು ತೀರ ಅಲ್ಪವಾಯಿತು. (ಏಕೆಂದರೆ) :

ವೇದವಿತ್ತಮರಪ್ರೋಕ್ತವಾಕ್ಯನ್ಯಾಯೋಪಬೃಂಹಿತಾಃ ।
ವೇದಾಃ ಸಾಙ್ಗಾ ಹರಿಂ ಪ್ರಾಹುರ್ಜಗಜ್ಜನ್ಮಾದಿಕಾರಣಮ್ ॥

ವೇದವನ್ನು ಬಲ್ಲವರು ಹೇಳಿರುವ ವಾಕ್ಯಗಳಿಂದಲೂ ನ್ಯಾಯಗಳಿಂದಲೂ ಉಪಬೃಂಹಿತವಾಗಿರುವ ಸಾಂಗವಾದ ವೇದಗಳು ಹರಿಯೇ ಜಗಜ್ಜನ್ಮಾದಿಕಾರಣ ನೆಂದು ಹೇಳುತ್ತಿವೆ.

'ಯಾವನಿಂದ ಈ (ಜಗತ್ತಿನ) ಜನ್ಮಾದಿಗಳು ಆಗುವವೋ (ಅದು) ಬ್ರಹ್ಮವು' (ವೇ.ಸೂ.೧-೧-೨), 'ಯಾವದರಿಂದಲೇ ಈ ಭೂತಗಳು ಹುಟ್ಟುವವೋ, ಹುಟ್ಟಿದವು ಯಾವದರಿಂದ ಜೀವಿಸುತ್ತಿರುವವೋ, ಯಾವದರ ಕಡೆಗೆ ಹೋಗಿ (ಯಾವದನ್ನೇ) ಸೇರುವವೋ, ಅದನ್ನು ವಿಜಿಜ್ಞಾಸೆಮಾಡು, ಅದು ಬ್ರಹ್ಮವು' (ತೈ. ೩-೧) ಎಂಬ (ಪ್ರಮಾಣಗಳಿಂದ) **ಜಗಜ್ಜನ್ಮಾದಿಕಾರಣವಾಗಿರುವದು ಬ್ರಹ್ಮವು**- ಎಂದು ನಿಶ್ಚಿತವಾಗುತ್ತದೆ. ಇದನ್ನು ಜಗತ್ಸೃಷ್ಟಿಪ್ರಲಯಪ್ರಕರಣಗಳಲ್ಲಿಯೇ ಗೊತ್ತು ಪಡಿಸಿಕೊಳ್ಳಬೇಕಾಗಿರುತ್ತದೆ. 'ಸೋಽಯ್ಯನೆ, ಇದು ಮೊದಲು ತನಗೆರಡನೆಯದಿಲ್ಲದ ಸತ್ತೇ ಆಗಿತ್ತು' (ಛಾಂ. ೭-೨-೧) ಎಂದು ಜಗದುಪಾದಾನತ್ವ, ಜಗನ್ನಿಮಿತ್ತತ್ವ, ಜಗದಂತರ್ಯಾಮಿತ್ವ- ಮುಂತಾದ ಮೂಲಕವಾಗಿ ಪರಮಕಾರಣವನ್ನು **ಸಚ್ಛಬ್ದ ದಿಂದ ಹೇಳಿರುತ್ತದೆ ;** ಇದೇ ಅರ್ಥವನ್ನೇ ಮತ್ತೊಂದು ಶಾಖೆಯಲ್ಲಿ 'ಇದು ಮೊದಲು ಬ್ರಹ್ಮವೊಂದೇ ಆಗಿತ್ತು' (ಬೃ.೧-೪-೧೦) ಎಂದು **ಬ್ರಹ್ಮಶಬ್ದದಿಂದ ಹೇಳಿರುತ್ತದೆ. ಇದರಿಂದ ಸಚ್ಛಬ್ದದಿಂದ ಹೇಳಿದ್ದು ಬ್ರಹ್ಮವೆಂದು ನಿಶ್ಚಿತವಾಯಿತು.** ಇದೇ ಅರ್ಥವನ್ನೇ ಮತ್ತೊಂದು ಶಾಖೆಯಲ್ಲಿ 'ಇದು ಮೊದಲು **ಆತ್ಮನೊಬ್ಬನೇ** ಆಗಿತ್ತು, ಮತ್ತೊಂದು ಚಲಿಸುವದು ಯಾವದೂ ಇರಲಿಲ್ಲ' (ಐ.೧-೧) ಎಂದು (ಹೇಳಿರುತ್ತದ) ; ಆದ್ದರಿಂದ **ಸದ್ಬ್ರಹ್ಮಶಬ್ದಗಳಿಂದ ಹೇಳಿದ್ದು ಆತ್ಮನೇ ಎಂದು ನಿಶ್ಚಯವಾಯಿತು.** ಮತ್ತು ಶಾಖಾಂತರದಲ್ಲಿ 'ನಾರಾಯಣನೊಬ್ಬನೇ ಇದ್ದನು. **ಬ್ರಹ್ಮನಿರಲಿಲ್ಲ, ಈಶಾನನಿರಲಿಲ್ಲ,** ಈ ದ್ಯಾವಾಪೃಥಿವಿಗಳಿರಲಿಲ್ಲ ನಕ್ಷತ್ರಗಳಿರಲಿಲ್ಲ (ಮಹೋ.೧) ಎಂದು ಮುಂತಾಗಿರುವ (ವಾಕ್ಯ)ದಿಂದ **ಸತ್, ಬ್ರಹ್ಮ, ಆತ್ಮ-** ಮುಂತಾದ ಪರಮಕಾರಣವನ್ನು ಹೇಳುವ ಶಬ್ದಗಳಿಂದ ನಾರಾಯಣನೇ

---

1. ಖಂ. ೩೨, ೫೭ರಲ್ಲಿ

ಉಕ್ತನಾಗಿದಾನೆ ಎಂದು ನಿಶ್ಚಯವಾಗುತ್ತದೆ. 'ಯಾವನನ್ನು ಸಮುದ್ರದ ಒಳಗೆ ಕವಿಗಳು ಅರಿಯುತ್ತಾರೋ' (ತೈ.ನಾ.೧), 'ಈತನನ್ನು ಮೇಲಾಗಲಿ ಅಡ್ಡಡ್ಡಲಾಗಿ ಯಾಗಲಿ ನಡುವೆಯಾಗಲಿ ಹಿಡಿಯುವದಕ್ಕಾಗಲಾರದು ; ಆತನನ್ನು ಯಾರೂ ಆಳುತ್ತಿಲ್ಲ, ಅವನ ಹೆಸರು ಮಹದ್ಯಶಸ್ಸು. ನೋಡುವದಕ್ಕೆ ಈತನಿಗೆ ರೂಪವಿರುವದಿಲ್ಲ, ಈತನನ್ನು ಯಾವನೂ ಕಣ್ಣಿನಿಂದ ನೋಡಲಾರನು ; ಹೃದಯದಿಂದಲೂ, ಬುದ್ಧಿಯಿಂದಲೂ, ಮನಸ್ಸಿನಿಂದಲೂ (ತಿಳಿಯಬರುವನು). ಯಾರು ಈತನನ್ನು ಅರಿಯುವರೋ ಅವರು ಅಮೃತರಾಗುವರು' (ತೈ.ನಾ.೧-೨,೩)- ಎಂದು ಎಲ್ಲಕ್ಕಿಂತಲೂ ಈ (ನಾರಾಯಣನು) ಉತ್ಕೃಷ್ಟನೆಂದು ಪ್ರತಿಪಾದಿಸಿ 'ಇವನನ್ನು ಯಾವನೂ ಆಳುತ್ತಿಲ್ಲ' (ತೈ.ನಾ.೧-೨) ಎಂದು ಇವನಿಗಿಂತ ಹೆಚ್ಚಿನದು ಯಾವದೂ ಇಲ್ಲ ಎಂದು ಅಲ್ಲಗಳೆದು 'ಅದ್ಭ್ಯಃ ಸಂಭೂತಃ, ಹಿರಣ್ಯಗರ್ಭ (ಎಂದು ಎಂಟು ಮಂತ್ರಗಳು).....' (ತೈ.ನಾ.) ಎಂದು ಆ ವಾಕ್ಯಕ್ಕೂ (ಇದಕ್ಕೂ) ಏಕವಾಕ್ಯತೆಯನ್ನು ತಿಳಿಸಿದೆ. ಅದನ್ನು **ಮಹಾಪುರುಷಪ್ರಕರಣವು,** 'ಹ್ರೀಯೂ ಲಕ್ಷ್ಮಿಯೂ ನಿನಗೆ ಪತ್ನಿಯರು' (ತೈ. ಆ. ಪು. ೩-೧೩-೪೧) ಎಂಬ ನಾರಾಯಣನೇ ಎಂದು ತಿಳಿಸಿ ಕೊಡುತ್ತದೆ.[1] ಈ ಅರ್ಥವನ್ನು **ನಾರಾಯಣಾನುವಾಕ**ದಲ್ಲಿ 'ಸಹಸ್ರಶೀರ್ಷನಾದ ದೇವನನ್ನು' ಎಂದು ಆರಂಭಿಸಿ 'ಅವನೇ ಬ್ರಹ್ಮವು, ಅವನೇ ಶಿವನು, ಅವನೇ ಇಂದ್ರನು, ಅವನೇ ಅಕ್ಷರವು, ಪರಮನು, ಸ್ವರಾಜನು' (ತೈ.ನಾ.೧೧-೨೬) ಎಂದು ವಿವರಿಸಲಾಗಿದೆ.

ಸರ್ವಶಾಖೆಗಳಲ್ಲಿಯೂ ಪರತತ್ತ್ವವನ್ನೇ ತಿಳಿಸುವದರಲ್ಲಿ ತಾತ್ಪರ್ಯವುಳ್ಳ ಅಕ್ಷರ, ಶಿವ, ಶಂಭು, ಪರಬ್ರಹ್ಮ, ಪರಜ್ಯೋತಿ, ಪರತತ್ತ್ವ , ಪರಾಯಣ, ಪರಮಾತ್ಮ- ಮುಂತಾದ ಸರ್ವಶಬ್ದಗಳನ್ನೂ ಆಯಾ ಗುಣದ ಸಂಬಂಧದಿಂದ ನಾರಾಯಣನಲ್ಲಿಯೇ ಪ್ರಯೋಗಿಸಿ ಅವನಿಗಿಂತ ವ್ಯತಿರಿಕ್ತವಾದ ಸಮಸ್ತವನ್ನು ಅವನಿಗೆ ಅಧೀನವಾಗಿರುವದೆಂದೂ ಅವನಿಂದಲೇ ನಿಯಾಮ್ಯವಾಗಿರುವದೆಂದೂ ಅವನಿಗೆ ಶೇಷವಾಗಿದೆಯೆಂದೂ ಅವನನ್ನೇ ಆತ್ಮನನ್ನಾಗುಳ್ಳದ್ದಾಗಿದೆಯೆಂದೂ ಪ್ರತಿಪಾದಿಸಿ ಬ್ರಹ್ಮಶಿವರುಗಳು ಕೂಡ ಇಂದ್ರಸಮಾನವಾದ ಆಕಾರವುಳ್ಳವರಾದ್ದರಿಂದ

1. 'ಯಮನ್ತಃ ಸಮುದ್ರೇ' ಎಂಬುದು ಸಮುದ್ರಶಾಯಿಯಾದ ನಾರಾಯಣನನ್ನೇ ಹೇಳುವ ಪ್ರಕರಣವಿದಾಗಿರುವದು. 'ವೇದಾಹಮೇತಂ ಪುರುಷಂ ಮಹಾನ್ತಮ್' ಎಂಬ **ಉತ್ತರನಾರಾಯಣವಾಕ್ಯ**ದಲ್ಲಿ ತಿಳಿಸಿದ ಲಕ್ಷ್ಮೀಪತಿಯಾದ ಮಹಾಪುರುಷನಾದ ನಾರಾಯಣನನ್ನೇ ಇಲ್ಲಿ 'ಸಹಸ್ರಶೀರ್ಷಂ ದೇವಮ್' ಎಂದು ಪ್ರತ್ಯಭಿಜ್ಞೆಯಿಂದ ತಿಳಿಸಿರುವದು. ಈ ಕಾರಣಗಳಿಂದ 'ಅದ್ಭ್ಯಃ ಸಂಭೂತೋ ಹಿರಣ್ಯಗರ್ಭ ಇತ್ಯಷ್ಟೌ' ಎಂಬುದು ನಾರಾಯಣ ಪರವೇ ಎಂದು ನಿಶ್ಚಿತವಾಗುತ್ತದೆ ಎಂದು ಭಾವ. 'ಹಿರಣ್ಯಗರ್ಭಃ ಸಮವರ್ತತಾಗ್ರೇ' ಎಂಬದರಿಂದ ಎಂಟು ಋಕ್ಕುಗಳೂ ನಾರಾಯಣನನ್ನೇ ಹೇಳುತ್ತವೆ ; ಪ್ರತಿಯೊಂದು ಋಕ್ಕಿನ ಕೊನೆಯಲ್ಲಿ 'ಕಸ್ಮೈ ದೇವಾಯ ಹವಿಷಾ ವಿಧೇಮ' ಎಂಬ ಪಲ್ಲವಿಯಿದೆ.

ಅವನ ವಿಭೂತಿಯೇ ಎಂದೂ ಪ್ರತಿಪಾದಿಸಿರುತ್ತದೆ. ಇದಲ್ಲದೆ ಈ ವಾಕ್ಯವು ಕೇವಲ ಪರತತ್ತ್ವವನ್ನು ಪ್ರತಿಪಾದಿಸುವದರಲ್ಲಿ ತಾತ್ಪರ್ಯವುಳ್ಳದ್ದಾಗಿದೆ ; ಬೇರೆ ಇನ್ನಾವದನ್ನೂ ಇಲ್ಲಿ ವಿಧಿಸಿರುವದಿಲ್ಲ.[1] ಈ ವಾಕ್ಯದಲ್ಲಿ ಪ್ರತಿಪಾದಿಸಿರುವ ಎಲ್ಲಕ್ಕಿಂತಲೂ ಹೆಚ್ಚಿನದೆಂದು ಸಿದ್ಧವಾಗಿರುವ ಬ್ರಹ್ಮಕ್ಕೇ 'ಬ್ರಹ್ಮವಿದನು ಪರಮ(ಪುರುಷಾರ್ಥವನ್ನು) ಪಡೆಯುತ್ತಾನೆ' (ತೈ. ೨-೧) ಮುಂತಾದ ಇತರ ವಾಕ್ಯಗಳಲ್ಲಿ ಉಪಾಸನಾದಿಗಳನ್ನೂ ವಿಧಿಸಿರುತ್ತದೆ.[2]

ನಾರಾಯಣೇತರಪರವೆಂದು ತೋರುವ ವಾಕ್ಯಗಳಿಗೆ ಗತಿ

(ಮೂಲ)

೬೭. ಅತಃ (೧) 'ಪ್ರಾಣಂ ಮನಸಿ ಸಹ ಕರಣೈಃ' (ಅ.ಶಿಖಾ.೩) ಇತ್ಯಾದಿವಾಕ್ಯಂ ಸರ್ವಕಾರಣೇ ಪರಮಾತ್ಮನಿ ಕರಣಪ್ರಾಣಾದಿಸರ್ವಂ ವಿಕಾರಜಾತಮ್ ಉಪಸಂಹೃತ್ಯ ತಮೇವ ಪರಮಾತ್ಮಾನಂ ಸರ್ವಸ್ಯೇಶಾನಂ ಧ್ಯಾಯೀತ ಇತಿ ಪರಬ್ರಹ್ಮಭೂತನಾರಾಯಣಸ್ಯೈವ ಧ್ಯಾನಂ ವಿದಧಾತಿ । 'ಪತಿಂ ವಿಶ್ವಸ್ಯ' (ತೈ.ನಾ.೧೩), 'ನ ತಸ್ಯೇಶೇ ಕಶ್ಚನ' (ತೈ.ನಾ.೨) ಇತಿ ತಸ್ಯೈವ ಸರ್ವೇಶಾನತಾ[3] ಪ್ರತಿಪಾದಿತಾ । ಅತ ಏವ (೨) 'ಸರ್ವೈಶ್ವರ್ಯಸಂಪನ್ನಃ ಸರ್ವೇಶ್ವರಃ ಶಮ್ಭುರಾಕಾಶಮಧ್ಯೇ ಧ್ಯೇಯಃ' (ಅ.ಶಿಖಾ.೩) ಇತಿ ನಾರಾಯಣಸ್ಯೈವ ಪರಮಕಾರಣಸ್ಯ ಶಮ್ಭುಶಬ್ದವಾಚ್ಯಸ್ಯ ಧ್ಯಾನಂ ವಿಧೀಯತೇ । 'ಕಶ್ಚಿದ್ಧ್ಯೇಯಃ' (ಅ.ಶಿಖಾ.೧) ಇತ್ಯಾರಭ್ಯ 'ಕಾರಣಂ ತು ಧ್ಯೇಯಃ' (ಅ.ಶಿಖಾ.೩) ಇತಿ ಕಾರ್ಯಸ್ಯ ಅಧ್ಯೇಯತಾಪೂರ್ವಕಕಾರಣೈಕಧ್ಯೇಯತಾಪರತ್ವಾದ್ ವಾಕ್ಯಸ್ಯ । ತಸ್ಯೈವ ನಾರಾಯಣಸ್ಯ ಪರಮಕಾರಣತಾ ಶಮ್ಭುಶಬ್ದವಾಚ್ಯತಾ ಚ ಪರಮಕಾರಣಪ್ರತಿಪಾದನೈಕಪರೇ ನಾರಾಯಣಾನುವಾಕ ಏವ ಪ್ರತಿಪನ್ನಾ ಇತಿ ತದ್ವಿರೋಧ್ಯರ್ಥಾನ್ತರಪರಿಕಲ್ಪನಂ ಕಾರಣಸ್ಯೈವ ಧ್ಯೇಯತ್ವೇನ[4] ವಿಧಿವಾಕ್ಯೇ ನ ಯುಜ್ಯತೇ । ಯದಪಿ (೩) 'ತತೋ ಯದುತ್ತರತರಮ್' (ಶ್ವೇ.೩-೧೦) ಇತ್ಯತ್ರ ಪುರುಷಾದನ್ಯಸ್ಯ ಪರತರತ್ವಂ ಪ್ರತೀಯತ ಇತ್ಯಭ್ಯಧಾಯಿ ತದಪಿ 'ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿದ್ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್' (ಶ್ವೇ.೩-೯) ಯಸ್ಮಾದಪರಮ್ ಯಸ್ಮಾದನ್ಯತ್ ಕಿಂಚಿದಪಿ ಪರಂ ನಾಸ್ತಿ ।

1. ಆದ್ದರಿಂದ ತತ್ಪರವಾದ ಈ ವಾಕ್ಯಕ್ಕೆ ಅನುಗುಣವಾಗಿಯೇ ಮಿಕ್ಕವಾಕ್ಯಗಳಿಗೆ ಅರ್ಥವನ್ನು ಮಾಡುವದು ಯುಕ್ತವು ಎಂದು ಭಾವ. 2. ಆದ್ದರಿಂದ ಈ ವಾಕ್ಯವು ಉಪಾಸನಾವಿಧಿಪರವಲ್ಲ ಎಂದು ಭಾವ. ಕಾರಣವಾಕ್ಯಗಳನ್ನೂ ಪುರುಷಸೂಕ್ತವನ್ನೂ ನಾರಾಯಣಾನುವಾಕವಾಕ್ಯವನ್ನೂ ಇಲ್ಲಿ ಉದಾಹರಿಸಿರುವದು **ಯಾಮುನಾಚಾರ್ಯರ ಆಳವಂದಾರಸ್ತವದಲ್ಲಿರುವ** ಕ್ರಮವನ್ನನುಸರಿಸಿದೆ ಎಂದು ತಾ॥ 'ಉಪಾಸನಾದಿ' ಎಂಬಲ್ಲಿ ಆದಿಶಬ್ದದ ಅರ್ಥವೇನೆಂಬುದು ತಿಳಿಯಲಿಲ್ಲ. 3. 'ಸರ್ವಸ್ಯೇಶಾನತಾ' ಎಂಬ ಕಾ॥ ಪಾಠವು ಬೇಕಿಲ್ಲ.

4. 'ಧ್ಯೇಯತ್ವ ವಿಧಿವಾಕ್ಯೇ' ವಾ॥

ಕೇನಾಪಿ ಪ್ರಕಾರೇಣ ಪುರುಷವ್ಯತಿರಿಕ್ತಸ್ಯ ಪರತ್ವಂ ನಾಸ್ತೀತ್ಯರ್ಥಃ । ಅಣೀಯಸ್ತ್ವಮ್ ಸೂಕ್ಷ್ಮತ್ವಮ್ । ಜ್ಯಾಯಸ್ತ್ವಂ ಸರ್ವೇಶ್ವರತ್ವಮ್ । ಸರ್ವವ್ಯಾಪಿತ್ವಾತ್ ಸರ್ವೇಶ್ವರತ್ವಾತ್ ಅಸ್ಯ ಏತದ್ವ್ಯತಿರಿಕ್ತಸ್ಯ ಕಸ್ಯಾಪ್ಯಣೀಯಸ್ತ್ವಂ ಜ್ಯಾಯಸ್ತ್ವಂ ಚ ನಾಸ್ತೀತ್ಯರ್ಥಃ । 'ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್' (ಶ್ವೇ. ೩-೯) ಇತಿ ಪುರುಷಾದನ್ಯಸ್ಯ ಕಸ್ಯಾಪಿ ಜ್ಯಾಯಸ್ತ್ವಂ ನಿಷಿದ್ಧಮಿತಿ ತಸ್ಮಾದನ್ಯಸ್ಯ ಪರತ್ವಂ ನ ಯುಜ್ಯತ ಇತಿ ಪ್ರತ್ಯುಕ್ತಮ್ । ಕಸ್ತರ್ಹಿ ಅಸ್ಯ ವಾಕ್ಯಸ್ಯಾರ್ಥಃ ? ಅಸ್ಯ ಪ್ರಕರಣಸ್ಯ ಉಪಕ್ರಮೇ 'ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃ ಪನ್ಥಾ ವಿದ್ಯತೇಽಯನಾಯ' (ಶ್ವೇ. ೩-೮) ಇತಿ ಪುರುಷವೇದನಸ್ಯ ಅಮೃತತ್ವಹೇತುತಾಂ[1] ತದ್ವ್ಯತಿರಿಕ್ತಸ್ಯಾಪಥತಾಂ ಚ ಪ್ರತಿಜ್ಞಾಯ 'ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿತ್.... ತೇನೇದಂ ಪೂರ್ಣಂ ಪುರುಷೇಣ ಸರ್ವಮ್' (ಶ್ವೇ. ೩-೯) ಇತ್ಯೇತದನ್ತೇನ ಪುರುಷಸ್ಯ ಸರ್ವಸ್ಮಾತ್ಪರತ್ವಂ ಪ್ರತಿಪಾದಿತಮ್ । ಯತಃ ಪುರುಷತತ್ತ್ವಮೇವೋತ್ತರತರಂ ತತೋ ಯದುತ್ತರತರಂ ಪುರುಷತತ್ತ್ವಂ ತದೇವ ಅರೂಪಮ್ ಅನಾಮಯಮ್ । 'ಯ ಏತದ್ವಿದುರಮೃತಾಸ್ತೇ ಭವನ್ತಿ ಅಥೇತರೇ ದುಃಖಮೇವಾಽಪಿ ಯನ್ತಿ' (ಶ್ವೇ.೩-೧೦) ಇತಿ ಪುರುಷವೇದನಸ್ಯ ಅಮೃತತ್ವಹೇತು-ತ್ವಂ ತದಿತರಸ್ಯ ಚಾಪಥತ್ವಂ ಪ್ರತಿಜ್ಞಾತಂ ಸಹೇತುಕಮುಪಸಂಹೃತಮ್ । ಅನ್ಯಥಾ ಉಪಕ್ರಮಗತಪ್ರತಿಜ್ಞಾಭ್ಯಾಂ ವಿರುಧ್ಯತೇ । ಪುರುಷಸ್ಯೈವ ಶುದ್ಧಿಗುಣಯೋಗೇನ ಶಿವಶಬ್ದಾಭಿಧೇಯತ್ವಂ 'ಶಾಶ್ವತಂ ಶಿವಮಚ್ಯುತಮ್' (ತೈ.ನಾ.೧೩) ಇತ್ಯಾದಿನಾ ಜ್ಞಾತಮೇವ । ಪುರುಷ ಏವ ಶಿವಶಬ್ದಾಭಿಧೇಯ[2] ಇತ್ಯನನ್ತರಮೇವ ಚ ವದತಿ । 'ಮಹಾನ್ ಪ್ರಭುರ್ವೈ ಪುರುಷಃ ಸತ್ತ್ವಸ್ಯೈಷ ಪ್ರವರ್ತಕಃ' (ಶ್ವೇ. ೩-೧೨) ಇತಿ । ಉಕ್ತೇನೈವ ನ್ಯಾಯೇನ 'ನ ಸನ್ನ ಚಾಸಚ್ಛಿವ ಏವ ಕೇವಲಃ' (ಶ್ವೇ. ೪-೧೮) ಇತ್ಯಾದಿ ಸರ್ವಂ ನೇಯಮ್ ॥

(ಅರ್ಥ)

ಆದ್ದರಿಂದ (೧) 'ಪ್ರಾಣವನ್ನು ಮನಸ್ಸಿನಲ್ಲಿ ಕರಣಗಳೊಡನೆ....'[3] (ಅ.ಶಿಖಾ.೩) ಎಂಬಿದೇ ಮುಂತಾದ ವಾಕ್ಯವು ಸರ್ವಕಾರಣವಾದ ಪರಮಾತ್ಮನಲ್ಲಿ ವಿಕಾರಜಾತವಾದ ಕರಣಪ್ರಾಣಾದಿಯೆಲ್ಲವನ್ನೂ ಉಪಸಂಹಾರಮಾಡಿಕೊಂಡು

---

1. 'ಅಮೃತತ್ವೇ ಹೇತುತಾಂ' ಎಂಬ ಕಾ॥ ಪಾಠಕ್ಕಿಂತ ಇದೇ ಮೇಲು.
2. 'ಶಿವಶಬ್ದಾಭಿಹಿತಃ' ಪಾ॥
3. ಹಿಂದೆ (೬೬ರಲ್ಲಿ) ಪೂರ್ವಪಕ್ಷಿಯು ನಾರಾಯಣೇತರಪರವೆಂದು ಉದಾಹರಿಸಿದ್ದ ನಾಲ್ಕು ವಾಕ್ಯಗಳಿಗೂ ನಾರಾಯಣನಲ್ಲಿಯೇ ತಾತ್ಪರ್ಯವೆಂದು ಯಥಾಕ್ರಮವಾಗಿ ಇಲ್ಲಿ ತೋರಿಸಿಕೊಡುತ್ತಾರೆ.

ಎಲ್ಲಕ್ಕೂ 'ಈಶಾನ'ನಾದ ಅದೇ ಪರಮಾತ್ಮನನ್ನು ಧ್ಯಾನಮಾಡಬೇಕು- ಎಂದು ಪರಬ್ರಹ್ಮಭೂತನಾದ ನಾರಾಯಣನ ಧ್ಯಾನವನ್ನೇ ವಿಧಿಸುತ್ತದೆ. 'ಎಲ್ಲಕ್ಕೂ ಪತಿಯಾದ' (ತೈ.ನಾ.೧೩), 'ಅವನನ್ನು ಆಳುವವನು ಯಾರೂ ಇಲ್ಲ' (ತೈ.ನಾ.೨) ಎಂದು ಆತನೇ ಸರ್ವೇಶಾನನೆಂದು ಪ್ರತಿಪಾದಿಸಲಾಗಿದೆ. (೨)ಆದ್ದರಿಂದಲೇ 'ಸರ್ವೈ-ಶ್ವರ್ಯಸಂಪನ್ನನಾದ ಸರ್ವೇಶ್ವರನಾದ ಶಂಭುವನ್ನು ಆಕಾಶಮಧ್ಯದಲ್ಲಿ ಧ್ಯಾನಮಾಡ ಬೇಕು' (ಅ.ಶಿಖಾ.೩) ಎಂದು ಪರಮಕಾರಣನಾದ ಶಂಭುಶಬ್ದವಾಚ್ಯನಾದ ನಾರಾಯಣನ ಧ್ಯಾನವನ್ನೇ ವಿಧಿಸಿರುತ್ತದೆ. ಏಕೆಂದರೆ 'ಮತ್ತು ಯಾವನನ್ನು ಧ್ಯಾನ ಮಾಡಬೇಕು?' (ಅ.ಶಿಖಾ.೧) ಎಂದು ಮೊದಲು ಮಾಡಿ 'ಕಾರಣವನ್ನೇ ಧ್ಯಾನ ಮಾಡಬೇಕು?' (ಅ.ಶಿಖಾ.೩) ಎಂದು ಕಾರ್ಯವನ್ನು ಧ್ಯಾನಮಾಡದೆ ಕಾರಣ ವೊಂದನ್ನೇ ಧ್ಯಾನಿಸಬೇಕೆಂಬುದರಲ್ಲಿಯೇ ಈ ವಾಕ್ಯಕ್ಕೆ ತಾತ್ಪರ್ಯವಿರುತ್ತದೆ. **ಅದೇ ನಾರಾಯಣನಿಗೇ ಪರಮಕಾರಣತ್ವವೂ ಶಂಭು ಶಬ್ದವಾಚ್ಯತ್ವವೂ ಪರಮಕಾರಣ ವನ್ನೂ ಪ್ರತಿಪಾದಿಸುವದರಲ್ಲಿಯೇ ತಾತ್ಪರ್ಯವುಳ್ಳ ನಾರಾಯಣಾನುವಾಕದಲ್ಲಿಯೇ ತಿಳಿದುಬಂದಿರುತ್ತದೆ**ಯಾಗಿ ಅದಕ್ಕೆ ವಿರೋಧಿಯಾದ ಅರ್ಥಾಂತರವನ್ನು ಕಾರಣವೇ ಧ್ಯೇಯವೆಂದು ವಿಧಿಸುವ ವಾಕ್ಯಕ್ಕೆ ಪರಿಕಲ್ಪಿಸುವದು ಯುಕ್ತವಲ್ಲ. (೩) 'ತತೋ ಯದುತ್ತರ ತರಮ್' (ಶ್ವೇ. ೩-೧೦) ಎಂಬಲ್ಲಿ ಪುರುಷನಿಗಿಂತ ಬೇರೆಯವನು ಪರತರನಾಗಿದಾನೆಂದು ತೋರುತ್ತದೆ ಎಂದು ಹೇಳಿದಿರಷ್ಟೆ? ಅಲ್ಲಿಯೂ 'ಯಾವನಿಗಿಂತ ಅಪರವಾದದ್ದು ಯಾವದೂ ಪರವಿಲ್ಲವೋ, ಯಾವನಿಗಿಂತ ಅಣುತರವಾದದ್ದಾಗಲಿ ಹೆಚ್ಚಿನದಾಗಲಿ ಯಾವದೂ ಇಲ್ಲವೋ' (ಶ್ವೇ. ೩-೯) ಯಾವದಕ್ಕಿಂತ ಅಪರವಾದದ್ದು ಎಂದರೆ ಯಾವನಿಗಿಂತ ಅನ್ಯವಾದದ್ದು, ಯಾವದೊಂದೂ (ಅದಕ್ಕಿಂತ) ಪರವಾಗಿರುವದಿಲ್ಲವೋ,[1] ಎಂದರೆ ಯಾವ ಪ್ರಕಾರದಿಂದಲೂ ಪುರುಷನಿಗಿಂತ ಬೇರೆಯಾದದ್ದಕ್ಕೆ ಪರತ್ವವಿರುವದಿಲ್ಲವೋ ಎಂದರ್ಥ. (ಇಲ್ಲಿ) ಅಣುತರವಾದದ್ದು ಎಂದರೆ ಸೂಕ್ಷ್ಮವಾದದ್ದು ; ಹೆಚ್ಚಿನದು ಎಂದರೆ ಸರ್ವೇಶ್ವರತ್ವವು. ಈತನು ಸರ್ವವ್ಯಾಪಿಯಾಗಿ ಸರ್ವೇಶ್ವರನಾಗಿರುವದರಿಂದ ಇವನಿಗಿಂತ ಬೇರೆಯಾದ ಯಾವದಕ್ಕೂ ಅಣೀಯಸ್ತ್ವವಾಗಲಿ ಜ್ಯಾಯಸ್ತ್ವವಾಗಲಿ ಇಲ್ಲ ಎಂದರ್ಥ. (ಇವನಿಗಿಂತ) ಅಣೀಯಸವಾದದ್ದಾಗಲಿ ಜ್ಯಾಯಸವಾದದ್ದಾಗಲಿ ಯಾವದೂ ಇಲ್ಲ- ಎಂದು ಪುರುಷನಿಗಿಂತ ಬೇರೆಯಾದ ಯಾವದಕ್ಕೂ ಜ್ಯಾಯಸ್ತ್ವ ವಿಲ್ಲವೆಂದು ಹೇಳಿರುವದರಿಂದ ಅವನಿಗಿಂತ ಬೇರೆಯಾದವನಿಗೆ ಅವನಿಗಿಂತ ಪರತ್ವವೆಂಬುದು ಸಲ್ಲದು- ಎಂದು ಯುಕ್ತಿಯಿಂದ ಅದಕ್ಕೂ ಪ್ರತ್ಯುತ್ತರವನ್ನು ಹೇಳಿದಂತೆ ಆಗಿದೆ.

---

1. ಅದೇ ಎಲ್ಲಕ್ಕೂ ಹೆಚ್ಚಿನ ತತ್ತ್ವವು ಎಂದು ಅಭಿಪ್ರಾಯ.

(ಪ್ರಶ್ನೆ) :— ಹಾಗಾದರೆ (ತತೋ ಯದುತ್ತರತರಮ್) ಎಂಬೀ ವಾಕ್ಯಕ್ಕೆ ಅರ್ಥವೇನು?

(ಉತ್ತರ) :— ಈ ಪ್ರಕರಣದ ಉಪಕ್ರಮದಲ್ಲಿ 'ಅವನನ್ನೇ ಅರಿತು ಕೊಂಡರೆ ಅತಿಮೃತ್ಯವನ್ನುಹೊಂದುತ್ತಾನೆ. ಸೇರುವದಕ್ಕೆ ಮತ್ತೊಂದು ಹಾದಿಯಿಲ್ಲ' (ಶ್ವೇ.೩-೮) ಎಂದು ಪುರುಷವೇದನವು ಅಮೃತತ್ವಕ್ಕೆ ಹೇತುವೆಂದೂ ಅದಕ್ಕಿಂತ ಬೇರೆಯಾದದ್ದು ಹಾದಿಯಲ್ಲವೆಂದೂ ಹೇಳಿ 'ಯಾವನಿಗಿಂತ ಬೇರೆಯಾದದ್ದು ಯಾವದೂ ಹೆಚ್ಚಿನದಿಲ್ಲವೋ.... ಆ ಪುರುಷನಿಂದ ಇದೆಲ್ಲವೂ ಪೂರ್ಣವಾಗಿರುತ್ತದೆ' (ಶ್ವೇ. ೩-೯) ಎಂಬವರೆಗಿನ (ವಾಕ್ಯದಿಂದ) ಪುರುಷನು ಎಲ್ಲಕ್ಕೂ ಪರನೆಂದು ಪ್ರತಿಪಾದಿಸಿರುತ್ತದೆ. (ಹೀಗೆ) ಪುರುಷತತ್ತ್ವವೇ ಉತ್ತರತರವಷ್ಟೆ? ಆದ್ದರಿಂದ (ಈ) ಉತ್ತರತರವಾದ ಪುರುಷತತ್ತ್ವವಿದೆಯಲ್ಲ, ಅದೇ ಅರೂಪವು ಅನಾಮಯವು. 'ಯಾರು ಇದನ್ನು ಅರಿತುಕೊಳ್ಳುವರೋ ಅವರು ಅಮೃತರಾಗಿರುತ್ತಾರೆ, ಇನ್ನು ಮಿಕ್ಕವರು ದುಃಖವನ್ನೇ ಸೇರುತ್ತಾರೆ' (ಶ್ವೇ.೩-೧೦) ಎಂದು ಪುರುಷವೇದನವು ಅಮೃತತ್ವಹೇತುವೆಂದೂ ಅದಕ್ಕಿಂತ ಬೇರೆಯಾದದ್ದು ಅಪಥವೆಂದೂ ಮೊದಲು ಹೇಳಿದ್ದನ್ನು ಸಹೇತುಕವಾಗಿ ಉಪಸಂಹರಿಸಲಾಗಿದೆ. ಹೀಗಲ್ಲದಿದ್ದರೆ[1] ಉಪಕ್ರಮದಲ್ಲಿ ಹೇಳಿರುವ ಈ (ಎರಡು) ಪ್ರತಿಜ್ಞೆಗಳಿಗೂ (ಈ ವಾಕ್ಯವು) ವಿರುದ್ಧವಾಗುತ್ತದೆ. **ಪುರುಷನೇ ಶುದ್ಧಿಗುಣದ ಸಂಬಂಧದಿಂದ ಶಿವಶಬ್ದಾಭಿಧೇಯನೆಂಬುದು 'ಶಾಶ್ವತನೂ ಶಿವನೂ ಅಚ್ಯುತನೂ'** (ತೈ.ನಾ.೧೩) **ಎಂಬ ವಾಕ್ಯದಿಂದ (ಮೊದಲೇ) ಗೊತ್ತೇ ಆಗಿರುತ್ತದೆ.** ಪುರುಷನೇ ಶಿವಶಬ್ದಾಭಿಧೇಯನೆಂದು (ಈ ವಾಕ್ಯದ) ಮುಂದೆಯೇ (ಶ್ರುತಿಯು) '**ಪುರುಷನು** ಮಹಾಪ್ರಭುವೆಂಬುದು ಪ್ರಸಿದ್ಧವು ; ಈತನು ಸತ್ತ್ವಕ್ಕೆ ಪ್ರವರ್ತಕನು' (ಶ್ವೇ. ೩-೧೨) ಎಂದು ಹೇಳಿರುತ್ತದೆ. (ಈ) ಹೇಳಿದ ನ್ಯಾಯದಿಂದಲೇ (೪) 'ಸತ್ತಲ್ಲ ಅಸತ್ತಲ್ಲ, ಕೇವಲ ಶಿವನೇ' (ಶ್ವೇ. ೪-೮) ಎಂಬಿದೇ ಮುಂತಾದದ್ದೆಲ್ಲವನ್ನೂ ಹೊಂದಿಸಿ ಕೊಳ್ಳಬೇಕು.[2]

'ಯಃ ಪರಃ ಸ ಮಹೇಶ್ವರಃ' ಎಂಬಿದು ನಾರಾಯಣಪರವೇ

(ಮೂಲ)

೬೮. ಕಿಂ ಚ 'ನ ತಸ್ಯೇಶೇ ಕಶ್ಚನ' (ತೈ.ನಾ.೧-೨) ಇತಿ ನಿರಸ್ತ ಸಮಾಭ್ಯಧಿಕಸಂಭಾವನಸ್ಯ ಪುರುಷಸ್ಯ 'ಅಣೋರಣೀಯಾನ್' (ತೈ.ನಾ.೧೦) ಇತ್ಯಸ್ಮಿನ್ನನುವಾಕೇ ವೇದಾದ್ಯನ್ತರೂಪತಯಾ ವೇದಬೀಜಭೂತಪ್ರಣವಸ್ಯ

---

1. ಈ ವಾಕ್ಯವು ನಾರಾಯಣನಿಗಿಂತ ಬೇರೊಂದು ದೇವತೆಯನ್ನು ಹೇಳುತ್ತದೆ ಎಂದರೆ.
2. ಇಲ್ಲಿಯೂ ಶಿವನೆಂದರೆ ನಾರಾಯಣನೇ ಎಂದು ತಿಳಿಯಬೇಕು.

ಪ್ರಕೃತಿಭೂತಾಕಾರವಾಚ್ಯತಯಾ ಮಹೇಶ್ವರತ್ವಂ ಪ್ರತಿಪಾದ್ಯ ದಹರಪುಣ್ಡರೀಕ ಮಧ್ಯಸ್ಥಾಕಾಶಾನ್ತರ್ವರ್ತಿತಯಾ- ಉಪಾಸ್ಯತ್ವಮುಕ್ತಮ್ । ಅಯಮರ್ಥಃ । ಸರ್ವಸ್ಯ ವೇದಜಾತಸ್ಯ ಪ್ರಕೃತಿಃ ಪ್ರಣವ ಉಕ್ತಃ । ಪ್ರಣವಸ್ಯ ಚ ಪ್ರಕೃತಿರಕಾರಃ । ಪ್ರಣವವಿಕಾರೋ ವೇದಃ ಸ್ವಪ್ರಕೃತಿಭೂತೇ ಪ್ರಣವೇ ಲೀನಃ । ಪ್ರಣವೋಽಪಕಾರ ವಿಕಾರಭೂತಃ ಸ್ವಪ್ರಕೃತಾವಕಾರೇ ಲೀನಃ । ತಸ್ಯ ಚ[1] ಪ್ರಣವಪ್ರಕೃತಿಭೂತಸ್ಯಾಕಾರಸ್ಯ ಯಃ ಪರೋ ವಾಚ್ಯಃ ಸ ಏವ ಮಹೇಶ್ವರಃ ಇತಿ । ಸರ್ವವಾಚಕಜಾತಪ್ರಕೃತಿಭೂತಾ ಕಾರವಾಚ್ಯಃ ಸರ್ವವಾಚ್ಯಜಾತಪ್ರಕೃತಿಭೂತನಾರಾಯಣೋ ಯಃ ಸ ಮಹೇಶ್ವರ ಇತ್ಯರ್ಥಃ । ಯಥೋಕ್ತಂ ಭಗವತಾ 'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ । ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಞ್ಜಯ ॥' (ಗೀ.೭-೧೬), 'ಅಕ್ಷರಾಣಾಮಕಾರೋಽಸ್ಮಿ' (ಗೀ. ೧೦-೩೩) ಇತಿ । 'ಅ ಇತಿ ಬ್ರಹ್ಮ' (?) ಇತಿ ಶ್ರುತೇಃ । 'ಅಕಾರೋ ವೈ ಸರ್ವಾ ವಾಕ್' (ಐ.ಆ. ೨-೩-೬) ಇತಿ ಚ । ವಾಚಕಜಾತಸ್ಯ ಅಕಾರಪ್ರಕೃತಿತ್ವಂ ವಾಚ್ಯಜಾತಸ್ಯ ಬ್ರಹ್ಮಪ್ರಕೃತಿತ್ವಂ ಚ ಸುಸ್ಪಷ್ಟಮ್ । ಅತೋ ಬ್ರಹ್ಮಣ ಅಕಾರವಾಚ್ಯತಾ ಪ್ರತಿಪಾದನಾತ್ ಅಕಾರವಾಚ್ಯೋ ನಾರಾಯಣ ಏವ ಮಹೇಶ್ವರ ಇತಿ ಸಿದ್ಧಮ್ । ತಸ್ಯೈವ 'ಸಹಸ್ರಶೀರ್ಷಂ ದೇವಮ್' (ತೈ.ನಾ.೧೧) ಇತಿ ಕೇವಲಪರತತ್ತ್ವ ವಿಶೇಷಪ್ರತಿಪಾದನಪರೇಣ ನಾರಾಯಣಾನುವಾಕೇನ ಸರ್ವಸ್ಮಾತ್ ಪರತ್ವಂ ಪ್ರಪಞ್ಚಿತಮ್ । ಅನೇನಾಽನನ್ಯಪರೇಣ ಪ್ರತಿಪಾದಿತಮೇವ ಪರತತ್ತ್ವಮ್ ಅನ್ಯಪರೇಷು ಸರ್ವೇಷು[2] ವಾಕ್ಯೇಷು ಕೇನಾಽಪಿ ಶಬ್ದೇನ ಪ್ರತೀಯಮಾನಂ ತದೇವ ಇತ್ಯವಗಮ್ಯತೇ ಇತಿ 'ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್' (ವೇ.ಸೂ. ೧-೧-೩೦) ಇತಿ ಸೂತ್ರಕಾರೇಣ ನಿರ್ಣೀತಮ್ । ತದೇತತ್ತರಂ ಬ್ರಹ್ಮ ಕ್ವಚಿತ್ ಬ್ರಹ್ಮಶಿವಾದಿಶಬ್ದಾವಗತಮಿತಿ ಕೇವಲಬ್ರಹ್ಮಶಿವ ಯೋರ್ನ ಪರತತ್ತ್ವಪ್ರಸಙ್ಗಃ[3] । ಅಸ್ಮಿನ್ನನನ್ಯಪರೇಽನುವಾಕೇ ತಯೋರಿನ್ದ್ರಾದಿ ತುಲ್ಯತಯಾ ತದ್ವಿಭೂತಿತ್ವಪ್ರತಿಪಾದನಾತ್ । ಕ್ವಚಿದಾಕಾಶಪ್ರಾಣಾದಿಶಬ್ದೇನ ಪರಂ ಬ್ರಹ್ಮಾಭಿಹಿತಮಿತಿ ಭೂತಾಕಾಶಪ್ರಾಣಾದೇರ್ಯಥಾ ನ ಪರತ್ವಮ್ ॥

(ಅರ್ಥ)

ಮತ್ತು 'ಅವನನ್ನು ಯಾವನೂ ಆಳುವವನಿಲ್ಲ' (ತೈ.ನಾ.೧-೨) ಎಂದು ಸಮನಾಗಲಿ ಅಭ್ಯಧಿಕನಾಗಲಿ ಇರಬಹುದೆಂಬ ಸಂಭಾವನೆಯನ್ನು ತಿರಸ್ಕರಿಸಿದ ಪುರುಷನು ವೇದದ ಆದಿಯೂ ಅಂತವೂ ಆಗಿರುವದಿಂದ ವೇದಕ್ಕೆ ಬೀಜಭೂತವಾಗಿ ರುವ ಪ್ರಣವಕ್ಕೆ ಪ್ರಕೃತಿಯಾಗಿರುವ ಅಕಾರಕ್ಕೆ ವಾಚ್ಯನಾಗಿರುವದರಿಂದ ಮಹೇಶ್ವರನು

1. ಚಕಾರವು ಕಾ॥ ಪಾಠದಲ್ಲಿಲ್ಲ. 2. 'ಸರ್ವವಾಕ್ಯೇಷು' ಕಾ॥
3. 'ಪರತತ್ತ್ವತ್ತ್ವಪ್ರಸಙ್ಗಃ' ಕಾ॥

ಎಂದು ಪ್ರತಿಪಾದಿಸಿ ದಹರಪುಂಡರೀಕದ ನಡುವೆ ಇರುವ **ಆಕಾಶದೊಳಗಿರುತ್ತಾನೆಂದು** ಉಪಾಸನಮಾಡಬೇಕು ಎಂದು 'ಅಣೋರಣೀಯಾನ್' (ತೈ.ನಾ.೧೦) ಎಂಬೀ ಅನುವಾಕದಲ್ಲಿ ಹೇಳಿರುತ್ತದೆ. (ಈ ವಾಕ್ಯಕ್ಕೆ) ಇದು ಅರ್ಥವು : ಸರ್ವವೇದಜಾತಕ್ಕೂ ಪ್ರಕೃತಿಯು ಪ್ರಣವವೆಂದು ಹೇಳಲಾಗಿದೆ; ಪ್ರಣವಕ್ಕೆ ಪ್ರಕೃತಿಯು ಆಕಾರವು. **ಪ್ರಣವವಿಕಾರವಾದ ವೇದವು ತನ್ನ ಪ್ರಕೃತಿಯಾಗಿರುವ ಪ್ರಣವದಲ್ಲಿ ಲಯವಾಗಿ, ಆಕಾರವಿಕಾರಭೂತವಾದ ಪ್ರಣವವೂ ತನ್ನ ಪ್ರಕೃತಿಯಾದ ಆಕಾರದಲ್ಲಿ ಲಯವಾಗಿರುತ್ತದೆ. ಪ್ರಣವದ ಪ್ರಕೃತಿಯಾದ ಆಕಾರಕ್ಕೆ ಯಾವನು ಪರವೋ ಎಂದರೆ ವಾಚ್ಯವೋ ಅವನೇ ಮಹೇಶ್ವರನು ಎಂದರೆ ಸರ್ವವಾಚಕಜಾತಕ್ಕೂ ಪ್ರಕೃತಿಯಾಗಿರುವ ಆಕಾರಕ್ಕೆ ವಾಚ್ಯನಾಗಿರುವ ಸರ್ವವಾಚ್ಯಜಾತಕ್ಕೆ ಪ್ರಕೃತಿಭೂತನಾರಾಯಣನಿದಾನಲ್ಲ, ಅವನೇ ಮಹೇಶ್ವರನು ಎಂದರ್ಥ.** ಹೀಗೆಂದು ಭಗವಂತನು ಹೇಳಿರುತ್ತಾನೆ : 'ನಾನು ಇಡಿಯ ಜಗತ್ತಿಗೆ ಪ್ರಭವವೂ ಪ್ರಲಯವೂ ಆಗಿರುತ್ತೇನೆ, ನನಗಿಂತ ಪರತರವಾದದ್ದು ಮತ್ತೆ ಯಾವದೂ ಇಲ್ಲವಯ್ಯ, ಧನಂಜಯ' (ಗೀ.೭-೧೬), 'ಅಕ್ಷರಗಳಲ್ಲಿ ಅಕಾರವಾಗಿರುವೆನು' (ಗೀ.೧೦-೩೩), 'ಅ ಎಂಬುದು ಬ್ರಹ್ಮವು' (?) ಎಂದೂ 'ಅಕಾರವೇ ಸರ್ವವಾಕ್ಕು' (ಐ.ಆ.೨-೩-೬) ಎಂದೂ ಶ್ರುತಿಯಿರುವದರಿಂದ ವಾಚಕಜಾತವು ಅಕಾರವೆಂಬ ಪ್ರಕೃತಿಯಿಂದಾದದ್ದು, ವಾಚ್ಯಜಾತವು ಬ್ರಹ್ಮಪ್ರಕೃತಿಯಿಂದಾದದ್ದು- ಎಂಬುದು ಸುಸ್ಪಷ್ಟವಾಗಿರುತ್ತದೆ. ಆದ್ದರಿಂದ **ಬ್ರಹ್ಮವು ಅಕಾರವಾಚ್ಯವೆಂದು ಪ್ರತಿಪಾದಿಸಿರುವದರಿಂದ ಅಕಾರವಾಚ್ಯನಾದ ನಾರಾಯಣನೇ ಮಹೇಶ್ವರನು ಎಂದು ಸಿದ್ಧವಾಯಿತು. 'ಸಹಸ್ರಶೀರ್ಷಂ ದೇವಮ್' (ತೈ.ನಾ.೨೫)** ಎಂದು ಕೇವಲ ಪರತತ್ತ್ವವಿಶೇಷವನ್ನೇ ಪ್ರತಿಪಾದಿಸುವದರಲ್ಲಿ ತಾತ್ಪರ್ಯವುಳ್ಳ ನಾರಾಯಣಾನುವಾಕದಿಂದ ಅವನೇ ಎಲ್ಲಕ್ಕಿಂತಲೂ ಪರನೆಂದು ವಿವರಿಸಿರುತ್ತದೆ. **ಈ ಅನನ್ಯಪರವಾದ (ನಾರಾಯಣಾನುವಾಕ)ದಿಂದ ಪ್ರತಿಪಾದಿತವಾದ ಪರತತ್ತ್ವವೇ ಅನ್ಯಪರವಾದ ಎಲ್ಲಾ ವಾಕ್ಯಗಳಲ್ಲಿಯೂ ಯಾವದಾದರೊಂದು ಶಬ್ದದಿಂದ ತಿಳಿದುಬರುವ (ತತ್ತ್ವವು)** ಎಂದು ತಿಳಿಯಬರುತ್ತದೆ ಎಂದು 'ಶಾಸ್ತ್ರದೃಷ್ಟಿಯಿಂದಲೇ ವಾಮದೇವನಂತೆ ಉಪದೇಶವು' (ವೇ. ಸೂ.೧-೧-೩೧)[1] ಎಂದು **ಸೂತ್ರಕಾರನಿಂದ** ನಿರ್ಣೀತವಾಗಿರುತ್ತದೆ. ಆ ಈ **ಪರಬ್ರಹ್ಮವು ಎಲ್ಲಾದರೂ ಒಂದುಕಡೆ ಬ್ರಹ್ಮಶಿವಾದಿ ಶಬ್ದಗಳಿಗೆ (ವಾಚ್ಯವಾಗಿ) ತಿಳಿದುಬಂದರೆ (ಅಷ್ಟುಮಾತ್ರದಿಂದ) ಕೇವಲ**

---

1. ಶಾಸ್ತ್ರದಿಂದ ಜೀವಾತ್ಮಶರೀರಕನು ಪರಮಾತ್ಮನೆಂಬುದನ್ನರಿತುಕೊಂಡು ಜೀವಾತ್ಮ ವಾಚಿಗಳಾದ ಶಬ್ದಗಳೂ ಪರಮಾತ್ಮನಲ್ಲಿಯೇ ಪರ್ಯವಸಿತವಾಗಿರುತ್ತವೆ ಎಂಬ ದೃಷ್ಟಿಯಿಂದ ಆ ಶಬ್ದಗಳಿಂದ ಪರಮಾತ್ಮನನ್ನು ಕರೆದಿದೆ ಎಂದು ಸೂತ್ರವಾಕ್ಯದ ಅಭಿಪ್ರಾಯ.

ಬ್ರಹ್ಮಶಿವರೇ ಪರತತ್ತ್ವವೆಂಬ ಪ್ರಸಂಗವು ಬರಲಾರದು, ಏಕೆಂದರೆ ಈ ಅನನ್ಯಪರವಾದ ಅನುವಾಕದಲ್ಲಿ ಅವರಿಬ್ಬರೂ ಇಂದ್ರಾದಿಸಮಾನರಾಗಿಯೇ ಆ (ಪರಮಾತ್ಮನ) ವಿಭೂತಿಗಳೆಂದು ಪ್ರತಿಪಾದಿಸಿರುತ್ತದೆ. ಎಲ್ಲಿಯೋ ಒಂದೊಂದು ಕಡೆಯಲ್ಲಿ ಆಕಾಶ, ಪ್ರಾಣ- ಮುಂತಾದ ಶಬ್ದಗಳಿಂದ ಪರಬ್ರಹ್ಮವನ್ನು ಹೇಳಿದರೆ ಭೂತಾಕಾಶ, ಪ್ರಾಣ- ಮುಂತಾದವು ಹೇಗೆ ಪರ(ತತ್ತ್ವ)ವಾಗಲಾರವೋ (ಹಾಗೆಯೇ ಇದು).

'ತದನ್ವೇಷ್ಟವ್ಯಮ್' ಎಂಬ ವಾಕ್ಯವೂ ಅನ್ಯಪರವಲ್ಲ

(ಮೂಲ)

೬೯. ಯತ್ಪುನರಿದಮಾಶಙ್ಕಿತಮ್ 'ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಣ್ಡರೀಕಂ ವೇಶ್ಮ ದಹರೋಽಸ್ಮಿನ್ನನ್ತರಾಕಾಶಸ್ತಸ್ಮಿನ್ಯದನ್ತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಮ್' (ಛಾಂ. ೮-೧-೧) ಇತ್ಯತ್ರ ಆಕಾಶಶಬ್ದೇನ ಜಗದುಪಾದಾನಕಾರಣಂ ಪ್ರತಿಪಾದ್ಯ ತದನ್ತರ್ವರ್ತಿನಃ ಕಸ್ಯಚಿತ್ತತ್ತ್ವವಿಶೇಷಸ್ಯ ಅನ್ವೇಷ್ಟವ್ಯತಾ ಪ್ರತಿಪಾದ್ಯತೇ । ಅಸ್ಯಾಽಽಕಾಶಸ್ಯ ನಾಮರೂಪಯೋರ್ನಿರ್ವಾಹಕತ್ವ ಶ್ರವಣಾತ್, ಪುರುಷಸೂಕ್ತೇ ಪುರುಷಸ್ಯ ನಾಮರೂಪಯೋಃ ಕರ್ತೃತ್ವದರ್ಶನಾಚ್ಚ ಆಕಾಶಪರ್ಯಾಯಭೂತಾತ್ ಪುರುಷಾದನ್ಯಸ್ಯ ಅನ್ವೇಷ್ಟವ್ಯತಯಾ ಉಪಾಸ್ಯತ್ವಂ ಪ್ರತೀಯತ ಇತಿ ॥

ಅನಧೀತವೇದಾನಾಮ್ ಅದೃಷ್ಟಶಾಸ್ತ್ರವಿದಾಮ್ ಇದಂ ಚೋದ್ಯಮ್ । ಯತಸ್ತತ್ರ ಶ್ರುತಿರೇವಾಽಸ್ಯ ಪರಿಹಾರಮಾಹ । ವಾಕ್ಯಕಾರಶ್ಚ । 'ದಹರೋಽಸ್ಮಿನ್ನ ನ್ತರಾಕಾಶಃ ಕಿಂ ತದತ್ರ ವಿದ್ಯತೇ ಯದನ್ವೇಷ್ಟವ್ಯಂ ಯದ್ವಾವ ವಿಜಿಜ್ಞಾಸಿತವ್ಯಮ್' (ಛಾಂ.೮-೧-೨) ಇತಿ ಚೋದಿತೇ 'ಯಾವಾನ್ ವಾಽಯಮಾಕಾಶಸ್ತಾವನೇಷೋಽ-ನ್ತರ್ಹೃದಯ ಆಕಾಶಃ' (ಛಾಂ. ೮-೧-೩) ಇತ್ಯಾದಿನಾ ಅಸ್ಯಾಽಽಕಾಶಶಬ್ದವಾಚ್ಯಸ್ಯ ಪರಮಪುರುಷಸ್ಯ ಅನವಧಿಕಮಹತ್ತ್ವಂ ಸಕಲಜಗತ್ಕಾರಣತಯಾ ಸಕಲಜಗದಾಧಾರತ್ವಂ ಚ ಪ್ರತಿಪಾದ್ಯ ತಸ್ಮಿನ್ 'ಕಾಮಾಃ ಸಮಾಹಿತಾಃ' (ಛಾಂ. ೮-೧-೫) ಇತಿ ಅಪಹತಪಾಪ್ಮತ್ವಸತ್ಯಕಾಮಶಬ್ದೇನ ।[1] (?) ಸತ್ಯಸಂಕಲ್ಪತ್ವಪರ್ಯನ್ತ ಗುಣಾಷ್ಟಕಂ ನಿಹಿತಮಿತಿ ಪರಮಪುರುಷವತ್ ಪರಮಪುರುಷಗುಣಾಷ್ಟಕಸ್ಯಾಽಪಿ ಪೃಥಗ್ವಿಜಿಜ್ಞಾಸಿತವ್ಯತಾ ಪ್ರತಿಪಿಪಾದಯಿಷಯಾ 'ತಸ್ಮಿನ್ಯದನ್ತಸ್ತದನ್ವೇಷ್ಟವ್ಯಮ್' (ಛಾಂ. ೮-೧-೧) ಇತ್ಯುಕ್ತಮಿತಿ ಶ್ರುತ್ಯೈವ ಸರ್ವಂ ಪರಿಹೃತಮ್ । ಏತದುಕ್ತಂ ಭವತಿ ।

---

1. 'ಸತ್ಯಕಾಮಶಬ್ದೇನ' ಎಂಬುದು ಹೆಚ್ಚಿಂದು ಕಾಣುತ್ತದೆ; ಅಥವಾ 'ಕಾಮ ಶಬ್ದೇನ' ಎಂದಿರಬೇಕು. ಅನುವಾದವನ್ನು ನೋಡಿ.

'ಕಿಂ ತದತ್ರ ವಿದ್ಯತೇ ಯದನ್ವೇಷ್ಟವ್ಯಮ್' ಇತ್ಯಸ್ಯ ಚೋದ್ಯಸ್ಯ ತಸ್ಮಿನ್[1] ಸರ್ವಸ್ಯ ಜಗತಃ ಸ್ರಷ್ಟೃತ್ವಮ್, ಆಧಾರತ್ವಮ್, ನಿಯನ್ತೃತ್ವಮ್, ಶೇಷಿತ್ವಮ್, ಅಪಹತಪಾಪ್ಮತ್ವಾದಯೋ ಗುಣಾಶ್ಚ ವಿದ್ಯನ್ತ ಇತಿ ಪರಿಹಾರ ಇತಿ । ತಥಾ ಚ ವಾಕ್ಯಕಾರವಚನಮ್ 'ತಸ್ಮಿನ್ನ್ಯದನ್ತ ಇತಿ ಕಾಮವ್ಯಪದೇಶಃ' (ವಾಕ್ಯ.) ಇತಿ ॥

ಕಾಮ್ಯನ್ತ ಇತಿ ಕಾಮಾಃ । ಅಪಹತಪಾಪ್ಮತ್ವಾದಯೋ ಗುಣಾ ಇತ್ಯರ್ಥಃ । ಏತದುಕ್ತಂ ಭವತಿ । ಯದೇತದ್ದಹರಾಕಾಶಶಬ್ದಾಭಿಧೇಯಮ್ ನಿಖಿಲಜಗದುದಯ ವಿಭವಲಯಲೀಲಂ ಪರಂ ಬ್ರಹ್ಮ, ತಸ್ಮಿನ್ ಯದನ್ತರ್ನಿಹಿತಮ್ ಅನವಧಿಕಾತಿ ಶಯಮ್, ಅಪಹತಪಾಪ್ಮತ್ವಾದಿಗುಣಾಷ್ಟಕಮ್, ತದುಭಯಮನ್ವೇಷ್ಟವ್ಯಂ ವಿಜಿಜ್ಞಾಸಿತವ್ಯಮ್ ಇತಿ । ಯಥಾಽಽಹ 'ಅಥ ಯ ಇಹಾಽಽತ್ಮಾನಮನುವಿದ್ಯ ವ್ರಜನ್ತ್ಯೇತಾಂಶ್ಚ ಸತ್ಯಾನ್ ಕಾಮಾಂಸ್ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ' (ಛಾಂ. ೮-೧-೬) ಇತಿ ॥

(ಅರ್ಥ)

ಇನ್ನು 'ಈ ಬ್ರಹ್ಮಪುರದಲ್ಲಿ ದಹರವಾದ ಪುಂಡರೀಕವೇಶ್ಮವಿದೆಯಷ್ಟೆ, ಅದರೊಳಗೆ ದಹರವಾದ ಆಕಾಶವಿದೆಯಷ್ಟೆ? ಅದರೊಳಗೆ ಯಾವದಿದೆಯೋ ಅದನ್ನು ಅನ್ವೇಷಣೆಮಾಡಬೇಕು. ಅದನ್ನೇ ವಿಜಿಜ್ಞಾಸೆಮಾಡಬೇಕು' (ಛಾಂ.೮-೧-೧) ಎಂಬಲ್ಲಿ ಆಕಾಶಶಬ್ದದಿಂದ ಜಗತ್ತಿನ ಉಪಾದಾನಕಾರಣವನ್ನು ಪ್ರತಿಪಾದಿಸಿ ಅದರೊಳಗಿರುವ ಯಾವದೋ ಒಂದು ತತ್ತ್ವವಿಶೇಷವನ್ನು ಅನ್ವೇಷಣ ಮಾಡಬೇಕು ಎಂದು ಪ್ರತಿಪಾದಿಸಿರುತ್ತದೆ. ಈ ಆಕಾಶವು ನಾಮರೂಪಗಳನ್ನು ನಿರ್ವಹಣಮಾಡ ತಕ್ಕದ್ದೆಂದು ಶ್ರುತಿಯಲ್ಲಿರುವದರಿಂದಲೂ **ಪುರುಷಸೂಕ್ತ**ದಲ್ಲಿ ಪುರುಷನು ನಾಮರೂಪಗಳನ್ನು ನಿರ್ವಹಣಮಾಡುವವನೆಂದು ತಿಳಿಸಿರುವದರಿಂದಲೂ ಆಕಾಶಕ್ಕೆ ಪರ್ಯಾಯವಾಗಿರುವ ಪುರುಷನಿಗಿಂತಲೂ ಬೇರೆಯಾದ ಮತ್ತೊಂದೇ ಅನ್ವೇಷಣೆ ಮಾಡಬೇಕಾದದ್ದಾಗಿರುವದರಿಂದ ಉಪಾಸನೆಮಾಡತಕ್ಕದ್ದೆಂದು ಹೇಳಿದಂತೆ ತೋರುತ್ತದೆಯಲ್ಲ!- ಎಂದು ಈ ಆಶಂಕೆಯನ್ನು ಮಾಡಿರುವರಷ್ಟೆ?

ವೇದವನ್ನು ಅಧ್ಯಯನಮಾಡದ ಶಾಸ್ತ್ರಜ್ಞರನ್ನು ಕಾಣದವರ ಆಕ್ಷೇಪವಿದು. ಏಕೆಂದರೆ ಶ್ರುತಿಯೇ ಇದಕ್ಕೆ ಪರಿಹಾರವನ್ನು ಹೇಳಿರುತ್ತದೆ, **ವಾಕ್ಯಕಾರನೂ** (ಹೇಳಿರುತ್ತಾನೆ). 'ಇದರೊಳಗೆ ದಹರವಾದ ಆಕಾಶವಿದೆಯಲ್ಲ, ಅದರಲ್ಲಿ ಅನ್ವೇಷಣ ಮಾಡಬೇಕಾದದ್ದು ಏನು ಇದೆ? ವಿಜಿಜ್ಞಾಸೆಮಾಡಬೇಕಾದದ್ದಾದರೂ ಏನಿದೆ?' ಎಂದು (ಶಿಷ್ಯರು) ಶಂಕೆಮಾಡಲು 'ಈ ಆಕಾಶವು ಎಷ್ಟಿದೆಯೋ ಅಷ್ಟೇ ಈ ಹೃದಯದೊಳಗಿನ ಆಕಾಶವು ಇದೆ' ಎಂದು ಮುಂತಾದ (ವಾಕ್ಯ)ದಿಂದ ಈ

1. 'ಅಸ್ಮಿನ್' ಕಾ॥

ಆಕಾಶಶಬ್ದವಾಚ್ಯನಾದ ಪರಮಪುರುಷನು ಅನವಧಿಕಮಹತ್ತ್ವವುಳ್ಳವನೂ ಸಕಲ ಜಗತ್ತಿಗೂ ಕಾರಣನಾಗಿರುವದರಿಂದ ಸಕಲಜಗತ್ತಿಗೂ ಆಧಾರವೂ ಆಗಿರುತ್ತಾನೆಂದು ಪ್ರತಿಪಾದಿಸಿ 'ಅವನಲ್ಲಿ ಕಾಮಗಳು ಸಮಾಹಿತವಾಗಿರುತ್ತವೆ' ಎಂದು ಅಪಹತಪಾಪ್ಮತ್ವವೇ ಮುಂತಾಗಿ ಸತ್ಯಕಾಮಶಬ್ದದಿಂದ[1] (?) ಸತ್ಯಸಂಕಲ್ಪ ಪರ್ಯಂತವಾದ ಎಂಟು ಗುಣಗಳನ್ನು ವಿಧಿಸಿದೆಯಾದ್ದರಿಂದ ಪರಮಪುರುಷನಂತೆ ಪರಮಪುರುಷನ ಎಂಟು ಗುಣಗಳನ್ನೂ[2] ಬೇರೆಯಾಗಿ ವಿಜಿಜ್ಞಾಸೆಮಾಡಬೇಕೆಂದು ತಿಳಿಸುವದಕ್ಕಾಗಿ ಅದರೊಳಗೆ ಯಾವದಿದೆಯೋ ಅದನ್ನು ಅನ್ವೇಷಣ ಮಾಡಬೇಕು' ಎಂದು ಶ್ರುತಿಯೇ ಎಲ್ಲಾ (ಶಂಕೆ)ಯನ್ನೂ ಪರಿಹರಿಸಿರುತ್ತದೆ. ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ : 'ಇಲ್ಲಿ ಹುಡುಕಬೇಕಾದದ್ದು ಏನಿದೆ?' ಎಂಬ ಆಕ್ಷೇಪಕ್ಕೆ 'ಇದರಲ್ಲಿ ಸರ್ವಜಗತ್ತಿನ ಸ್ರಷ್ಟೃತ್ವ, ಆಧಾರತ್ವ, ನಿಯಂತೃತ್ವ , ಶೇಷಿತ್ವ , ಅಪಹತಪಾಪ್ಮತ್ವಾದಿಗುಣಗಳೂ ಇರುತ್ತವೆ' ಎಂದು ಪರಿಹಾರವು. ಹೀಗೆಂದು **ವಾಕ್ಯಕಾರವಚನವೂ** ಇದೆ: 'ತಸ್ಮಿನ್ ಯದನ್ತಃ (ಅದರೊಳಗಿರುವದಲ್ಲ, ಅದನ್ನು) ಎಂದರೆ ಕಾಮಗಳನ್ನು ಹೇಳಿರುತ್ತದೆ' (ವಾಕ್ಯ).

(ಇಲ್ಲಿ) ಕಾಮಗಳೆಂದರೆ ಕಾಮ್ಯವಾಗಿರುವವುಗಳು (ಎಂದರೆ) ಅಪಹತ ಪಾಪ್ಮತ್ವವೇ ಮುಂತಾದ ಗುಣಗಳು ಎಂದರ್ಥ. ಇಲ್ಲಿ ಇಷ್ಟನ್ನು ಹೇಳಿದಂತಾಗಿರುತ್ತದೆ : ಈ ದಹರಾಕಾಶಶಬ್ದವಾಚ್ಯವಾದ ನಿಖಿಲಜಗತ್ತಿನ ಉದಯವಿಭವಲಯಗಳೆಂಬ ಲೀಲೆಯುಳ್ಳ ಪರಬ್ರಹ್ಮ, ಅದರಲ್ಲಿ ಒಳಗಿದ್ದುಕೊಂಡಿರುವ ಅನವಧಿಕಾತಿಶಯವಾದ ಅಪಹತಪಾಪ್ಮತ್ವವೇ ಮುಂತಾದ ಗುಣಾಷ್ಟಕ- ಇವೆರಡನ್ನೂ ಅನ್ವೇಷಣೆಮಾಡಿ ಜಿಜ್ಞಾಸೆಮಾಡಬೇಕು (ಎಂದು ಅಭಿಪ್ರಾಯ). ಹಾಗೆಂದು (ಶ್ರುತಿ) ಹೇಳಿರುತ್ತದೆ : 'ಇನ್ನು ಯಾರು ಆತ್ಮನನ್ನು (ಅನುವೇದನಮಾಡಿಕೊಂಡು ಹೋಗುವರೋ), ಈ ಸತ್ಯಕಾಮಗಳನ್ನು (ಅನುವೇದನಮಾಡಿಕೊಂಡು ಹೋಗುವರೋ) ಅವರಿಗೆ ಸರ್ವಲೋಕಗಳಲ್ಲಿಯೂ ಕಾಮಚಾರವು ಇರುತ್ತದೆ' (ಛಾ. ೮-೧-೬).

ಅಥರ್ವಶಿಖೋಪನಿಷತ್ತಿನಲ್ಲಿ ವಿಷ್ಣುವನ್ನುಕೂಡ ಕಾರ್ಯಗಳೊಳಗೆ ಸೇರಿಸಿರುವದರ ಅಭಿಪ್ರಾಯ

(ಮೂಲ)

೭೦. ಯಃಪುನಃ ಕಾರಣಸ್ಯೈವ ಧ್ಯೇಯತಾಪ್ರತಿಪಾದನಪರೇ ವಾಕ್ಯೇ ವಿಷ್ಣೋರನನ್ಯಪರವಾಕ್ಯಪ್ರತಿಪಾದಿತಪರತತ್ತ್ವಭೂತಸ್ಯ ಕಾರ್ಯಮಧ್ಯೇ ನಿವೇಶಃ ಸಃ

1. ಇದು 'ಕಾಮಶಬ್ದದಿಂದ' ಎಂದಿದ್ದರೆ ಉತ್ತಮ; ಶ್ರುತಿಯಲ್ಲಿ 'ಕಾಮಾಃ' ಎಂಬ ಮಾತಿನಿಂದ ಈ ಎಂಟು ಗುಣಗಳನ್ನು ಹೇಳಿರುತ್ತದೆ ಎಂದು ಭಾವ.
2. ಅಪಹತಪಾಪ್ಮತ್ವ, ವಿಜರತ್ವ , ವಿಮೃತ್ಯುತ್ವ , ವಿಶೋಕತ್ವ , ವಿಜಿಘತ್ಸತ್ವ , ಅಪಿಪಾಸತ್ತ್ವ , ಸತ್ಯಕಾಮತ್ವ, ಸತ್ಯಸಂಕಲ್ಪತ್ವ- ಎಂಬಿವು.

ಸ್ವಕಾರ್ಯಭೂತತ್ತ್ವಸಙ್ಖ್ಯಾಪೂರಣಂ ಕುರ್ವತಃ ಸ್ವಲೀಲಯಾ ಜಗದುಪಕಾರಾಯ ಸ್ವೇಚ್ಛಾವತಾರ ಇತ್ಯವಗನ್ತವ್ಯಃ । ಯಥಾ ಲೀಲಯಾ ದೇವಸಙ್ಖ್ಯಾಪೂರಣಂ ಕುರ್ವತ ಉಪೇನ್ದ್ರತ್ವಂ ಪರಸ್ಯೈವ । ಯಥಾ ಚ ಸೂರ್ಯವಂಶೋದ್ಭವ ರಾಜಸಙ್ಖ್ಯಾಪೂರಣಂ ಕುರ್ವತಃ ಪರಸ್ಯೈವ ಬ್ರಹ್ಮಣೋ ದಾಶರಥಿರೂಪೇಣ ಸ್ವೇಚ್ಛಾವತಾರಃ । ಯಥಾ ಚ ಸೋಮವಂಶಸಙ್ಖ್ಯಾಪೂರಣಂ ಕುರ್ವತೋ ಭಗವತೋ ಭೂಭಾರಾವತರಣಾಯ ಸ್ವೇಚ್ಛಯಾ ವಸುದೇವಗೃಹೇಽವತಾರಃ । ಸೃಷ್ಟಿಪ್ರಲಯಪ್ರಕರಣೇಷು ನಾರಾಯಣ ಏವ ಪರಮಕಾರಣತಯಾ ಪ್ರತಿಪಾದ್ಯತ ಇತಿ ಪೂರ್ವಮೇವೋಕ್ತಮ್ ॥

(ಅರ್ಥ)

ಇನ್ನು ಕಾರಣವನ್ನೇ ಧ್ಯಾನಮಾಡಬೇಕೆಂಬುದರಲ್ಲಿ ತಾತ್ಪರ್ಯವುಳ್ಳ (ವೇದಾಂತ)ವಾಕ್ಯದಲ್ಲಿ[1] ಅನನ್ಯಪರವಾದ (ನಾರಾಯಣಾನುವಾಕ)ವಾಕ್ಯದಲ್ಲಿ ಪರತತ್ತ್ವವೆಂದು ಪ್ರತಿಪಾದಿಸಿರುವ **(ವಿಷ್ಣುವನ್ನೂ) ಕಾರ್ಯಗಳೊಳಗೆ ಸೇರಿಸಿದೆಯಲ್ಲ[2], ಅದು ತನ್ನಕಾರ್ಯವಾಗಿರುವ ತತ್ತ್ವಗಳ ಸಂಖ್ಯೆಯನ್ನು ಪೂರಣಮಾಡುವ (ನಾರಾಯಣನಿಗೆ) ತನ್ನ ಲೀಲೆಯಿಂದ ಜಗದುಪಕಾರಕ್ಕಾಗಿ ಸ್ವೇಚ್ಛೆಯಿಂದಾದ ಅವತಾರವು[3] ಎಂದು ತಿಳಿಯಬೇಕು.** ಹೇಗೆ ಲೀಲೆಯಿಂದ ದೇವತೆಗಳ ಸಂಖ್ಯೆಯನ್ನು ಪೂರಣಮಾಡುವ ಪರಮಾತ್ಮನಿಗೇ ಉಪೇಂದ್ರತ್ವವೋ, ಹೇಗೆ ಸೂರ್ಯವಂಶೋತ್ಪನ್ನರಾದ ರಾಜರುಗಳ ಸಂಖ್ಯಾಪೂರಣವನ್ನು ಮಾಡುವ ಪರಬ್ರಹ್ಮಕ್ಕೇ ದಾಶರಥಿ ರೂಪದಿಂದ ಸ್ವೇಚ್ಛಾವತಾರವೋ, ಮತ್ತು ಹೇಗೆ ಸೋಮವಂಶಸಂಖ್ಯೆಯ ಪೂರಣವನ್ನು ಮಾಡುವ ಭಗವಂತನಿಗೆ ಭೂಭಾರವನ್ನು ಇಳಿಸುವದಕ್ಕಾಗಿ ವಸುದೇವನ ಮನೆಯಲ್ಲಿ ಸ್ವೇಚ್ಛೆಯಿಂದ (ಕೃಷ್ಣನೆಂಬ ಹೆಸರಿನಿಂದ) ಅವತಾರವೋ (ಹಾಗೆಯೇ ಇದು)[4]. ಸೃಷ್ಟಿ ಪ್ರಲಯಪ್ರಕರಣಗಳಲ್ಲಿ ನಾರಾಯಣನೇ ಪರಮ ಕಾರಣನೆಂದು ಪ್ರತಿಪಾದಿಸಲಾಗಿದೆ ಎಂದು ಹಿಂದೆಯೇ ಹೇಳಿರುತ್ತೇವೆ.

---

1. 'ಕಾರಣಂ ತು ಧ್ಯೇಯಃ' ಎಂಬ **ಅಥರ್ವಶಿಖೋಪನಿಷತ್ತಿನ** ವಾಕ್ಯದಲ್ಲಿ.
2. 'ಬ್ರಹ್ಮವಿಷ್ಣುರುದ್ರೇನ್ದ್ರಾಸ್ತೇ ಸಂಪ್ರಸೂಯನ್ತೇ' ಎಂಬ ವಾಕ್ಯದಲ್ಲಿ.
3. ಕಾರಣರೂಪನಾದ ನಾರಾಯಣನ ರೂಪವಲ್ಲ.
4. ಅವತಾರಗಳೆಲ್ಲ ಕಾರ್ಯರೂಪವಾಗಿ ತೋರಿದರೂ ಸೃಷ್ಟವಲ್ಲ, ಲೀಲೆಯಿಂದ ಜಗದುಪಕಾರಕ್ಕಾಗಿ ಭಗವಂತನು ಸ್ವಾತಂತ್ರ್ಯದಿಂದ ಧರಿಸಿದ ರೂಪಗಳವು - ಎಂಬುದು ಸರ್ವಸಂಮತವಷ್ಟೆ? ಅದರಂತೆಯೇ ಪ್ರಕೃತಶ್ರುತಿಯಲ್ಲಿ ವಿಷ್ಣುವನ್ನು ಕಾರ್ಯದಲ್ಲಿ ಸೇರಿಸಿರುವದನ್ನೂ ಅರಿಯಬೇಕು- ಎಂದು ಅಭಿಪ್ರಾಯ.

ಅಥರ್ವಶಿರಸ್ಸಿನಲ್ಲಿ
ರುದ್ರನು ತಾನು ಸರ್ವೇಶ್ವರನೆಂದುಕೊಂಡಿರುವದಕ್ಕೆ ಗತಿ

(ಮೂಲ)

೭೧. ಯತ್ ಪುನರಥರ್ವಶಿರಸಿ ರುದ್ರೇಣ ಸ್ವಸರ್ವೈಶ್ವರ್ಯಂ ಪ್ರಪಞ್ಚಿತಂ ತತ್ 'ಸೋಽನ್ತರಾದನ್ತರಂ ಪ್ರಾವಿಶತ್' (ಅ.ಶಿರ.೧) ಇತಿ ಪರಮಾತ್ಮಪ್ರವೇಶಾದುಕ್ತಮಿತಿ ಶ್ರುತ್ಯೈವ ವ್ಯಕ್ತಮ್ । 'ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್' (ವೇ.ಸೂ.೧-೧-೩೧) ಇತಿ ಸೂತ್ರಕಾರೇಣ ಏವಮಾದೀನಾಮರ್ಥಃ ಪ್ರತಿಪಾದಿತಃ । ಯಥೋಕ್ತಂ ಪ್ರಹ್ಲಾದೇನಾಽಪಿ । 'ಸರ್ವಗತ್ವಾದನನ್ತಸ್ಯ ಸ ಏವಾಽಹಮವಸ್ಥಿತಃ । ಮತ್ತಃ ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ ॥' (ವಿ.ಪು. ೧-೧೯-೮೫) ಇತ್ಯಾದಿ । ಅತ್ರ 'ಸರ್ವಗತ್ವಾದನನ್ತಸ್ಯ' ಇತಿ ಹೇತುರುಕ್ತಃ । ಶ್ವಶರೀರಭೂತಸ್ಯ ಸರ್ವಸ್ಯ ಚಿದಚಿದ್ವಸ್ತುನಃ ಆತ್ಮತ್ವೇನ ಸರ್ವಗತಃ ಪರಮಾತ್ಮಾ ಇತಿ ಸರ್ವೇ ಶಬ್ದಾಃ ಸರ್ವಶರೀರಂ ಪರಮಾತ್ಮಾನಮೇವ ಅಭಿದಧತಿ ಇತ್ಯುಕ್ತಮ್ । ಅತಃ ಅಹಮಿತಿ ಶಬ್ದಃ ಸ್ವಾತ್ಮ ಪ್ರಕಾರಿಣಂ[1] ಪರಮಾತ್ಮಾನಮೇವಾಚಷ್ಟೇ । ಅತ ಇದಮುಚ್ಯತೇ 'ಆತ್ಮೇತ್ಯೇವ ತು ಗೃಹ್ಣೀಯಾತ್ ಸರ್ವಸ್ಯ ತನ್ನಿಷ್ಪತ್ತೇಃ' (ವಾಕ್ಯ) ಇತ್ಯಾದಿನಾ ಅಹಂಗ್ರಹಣೋಪಾಸನಂ ವಾಕ್ಯಕಾರೇಣ । ಕಾರ್ಯಾವಸ್ಥಃ ಕಾರಣಾವಸ್ಥಶ್ಚ ಸ್ಥೂಲಸೂಕ್ಷ್ಮಚಿದಚಿದ್ವಸ್ತುಶರೀರಃ ಪರಮಾತ್ಮೈವ ಇತಿ ಸರ್ವಸ್ಯ ತನ್ನಿಷ್ಪತ್ತೇರಿತ್ಯುಕ್ತಮ್ । 'ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ' (ವೇ.ಸೂ.೪-೧-೩) ಇತಿ ಸೂತ್ರಕಾರೇಣ ಚ । ಮಹಾಭಾರತೇ ಚ ಬ್ರಹ್ಮರುದ್ರಸಂವಾದೇ ಬ್ರಹ್ಮಾ ರುದ್ರಂ ಪ್ರತ್ಯಾಹಃ 'ತವಾನ್ತರಾತ್ಮಾ ಮಮ ಚ ಯೇ ಚಾನ್ಯೇ ದೇಹಿಸಂಜ್ಞಿತಾಃ[2]' (ಮೋ.ಧ. ೨೫೧-೪) ಇತಿ ರುದ್ರಸ್ಯ ಬ್ರಹ್ಮಣಶ್ಚಾನ್ಯೇಷಾಂ ಚ ದೇಹಿನಾಂ ಪರಮೇಶ್ವರೋ ನಾರಾಯಣ ಅನ್ತರಾತ್ಮತಯಾ ಅವಸ್ಥಿತ ಇತಿ । ತಥಾ ತತ್ರೈವ 'ವಿಷ್ಣುರಾತ್ಮಾ ಭಗವತೋ ಭವಸ್ಯಾಮಿತತೇಜಸಃ । ತಸ್ಮಾದ್ಧನುರ್ಜ್ಯಾಸಂಸ್ಪರ್ಶಂ ಸ ವಿಷೇಹೇ ಮಹೇಶ್ವರಃ ॥' (ಕರ್ಣ. ೨೫-೫೦)[3] (ಇತಿ) ತತ್ರೈವ 'ಏತೌ ದ್ವೌ ವಿಬುಧಶ್ರೇಷ್ಠೌ ಪ್ರಸಾದಕ್ರೋಧಜೌ ಸ್ಮೃತೌ । ತದಾ ದರ್ಶಿತಪನ್ಥಾನೌ ಸೃಷ್ಟಿಸಂಹಾರಕಾರಕೌ ।' (ಮೋ.ಧ. ?)[4] ಇತಿ । ಅನ್ತರಾತ್ಮತಯಾವಸ್ಥಿತನಾರಾಯಣದರ್ಶಿತಪಥೌ[5] ಬ್ರಹ್ಮರುದ್ರೌ ಸೃಷ್ಟಿಸಂಹಾರ ಕಾರ್ಯಕರೌ ಇತ್ಯರ್ಥಃ ॥

---

1. 'ಸ್ವಾತ್ಮಪ್ರಕಾರಪ್ರಕಾರಿಣಮ್' ಕಾ॥ 2. ಅಚ್ಚಿನ ಪುಸ್ತಕದಲ್ಲಿ 'ಮಮಾನ್ತರಾತ್ಮಾ ತವ ಚ' ಎಂದೇ ಇದೆ. 'ದೇಹಿ ಸಂಜ್ಞಿತಾಃ' ಎಂದು ಅಚ್ಚಿನ ಪಾಠ.
3. 'ವಿಷ್ಣುಶ್ಚಾತ್ಮಾ ಭಗವತೋ ಭವಸ್ಯಾಮಿತತೇಜಸಃ । ತಸ್ಮಾದ್ಧನುರ್ಜ್ಯಾಸಂಸ್ಪರ್ಶಂ ನ ವಿಷೇಹುರ್ಹರಸ್ಯ ತೇ ' ॥ ಎಂದು ಬೊ॥ ಪಾಠ.
4. ಈ ವಾಕ್ಯಸ್ಥಾನವು ನಮಗೆ ಸಿಕ್ಕಿಲ್ಲ. 5. 'ಪನ್ಥಾನೌ' ಕಾ॥ ಪಾಠ ಬೇಕಿಲ್ಲ.

ನಿಮಿತ್ತೋಪಾದಾನಯೋಸ್ತು ಭೇದಂ ವದನ್ತೋ ವೇದಬಾಹ್ಯಾ ಏವ ಸ್ಯುಃ । 'ಜನ್ಮಾದ್ಯಸ್ಯ ಯತಃ' (ವೇ.ಸೂ.೧-೧-೨), ಪ್ರಕೃತಿಶ್ಚ 'ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್ ।' (ವೇ.ಸೂ. ೧-೪-೨೩) ಇತ್ಯಾದಿವೇದವಿತ್ಪಣೀತಸೂತ್ರವಿರೋಧಾತ್ । 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾಽದ್ವಿತೀಯಮ್' (ಛಾಂ. ೬-೨-೧)[1], 'ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸೀದ್ಯತೋ ದ್ಯಾವಾ ಪೃಥಿವೀ ನಿಷ್ಟತಕ್ಷುಃ' (ತೈ.ಬ್ರಾ. ೨-೮-೯), 'ಬ್ರಹ್ಮಾಧ್ಯತಿಷ್ಠದ್ಭುವನಾನಿ ಧಾರಯನ್' (ತೈ. ಬ್ರಾ. ೨-೮-೯), 'ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ' (ತೈ.ನಾ.೧-೨), 'ನ ತಸ್ಯೇಶೇ ಕಶ್ಚನ ತಸ್ಯ ನಾಮಮಹದ್ಯಶಃ' (ತೈ.ನಾ.೧-೨), 'ನೇಹ ನಾನಾಸ್ತಿ ಕಿಞ್ಚನ' (ಬೃ.೪-೪-೧೯), 'ಸರ್ವಸ್ಯ ವಶೀ ಸರ್ವಸ್ಯೇಶಾನಃ' (ಬೃ.೪-೪-೨೨), 'ಪುರುಷ ಏವೇದಂ ಸರ್ವಮ್ । ಯದ್ಭೂತಂ ಯಚ್ಚ ಭವ್ಯಮ್ । ಉತಾಮೃತತ್ವಸ್ಯೇಶಾನಃ' (ತೈ.ಆ. ೩-೧೨-೩೨), 'ನಾನ್ಯಃ ಪನ್ಥಾ ಅಯನಾಯ ವಿದ್ಯತೇ' (ತೈ.ಆ.ಪ್ರ.೩-೧೨-೩೮) ಇತ್ಯಾದಿಸರ್ವಶ್ರುತಿಗಣವಿರೋಧಾಚ್ಚ ॥

(ಅರ್ಥ)

ಇನ್ನು **ಅಥರ್ವಶಿರ** ಉಪನಿಷತ್ತಿನಲ್ಲಿ ರುದ್ರನು ತಾನು ಸರ್ವೇಶ್ವರನೆಂದು ವಿಸ್ತಾರವಾಗಿ ಹೇಳಿಕೊಂಡಿದ್ದಾನಷ್ಟೆ? ಅದು 'ಅವನು ಅಂತರಕ್ಕಿಂತಲೂ ಅಂತರವನ್ನು ಪ್ರವೇಶಿಸಿದನು' (ಅ.ಶಿರ.೧) ಎಂದು ಪರಮಾತ್ಮಪ್ರವೇಶದಿಂದ ಹೇಳಿದ್ದು[2] ಎಂದು ಶ್ರುತಿಯಿಂದಲೇ ವ್ಯಕ್ತವಾಗಿರುತ್ತದೆ 'ಶಾಸ್ತ್ರದೃಷ್ಟಿಯಿಂದಲೇ ವಾಮದೇವನಂತೆ (ಈ) ಉಪದೇಶವನ್ನು (ತಿಳಿಯತಕ್ಕದ್ದು)' (ವೇ.ಸೂ.೧-೧-೩೧) ಎಂದು **ಸೂತ್ರಕಾರನು** ಇದೇ ಮುಂತಾದ (ವಾಕ್ಯಗಳ) ಅರ್ಥವನ್ನು ಪ್ರತಿಪಾದಿಸಿರುತ್ತಾನೆ. ಹೀಗೆಂದು **ಪ್ರಹ್ಲಾದನೂ** 'ಅನಂತನು ಸರ್ವಗತನಾಗಿರುವದರಿಂದ ಅವನೇ ನಾನಾಗಿರುತ್ತೇನೆ ; ನನ್ನಿಂದಲೇ ಎಲ್ಲವೂ, ನಾನೇ ಎಲ್ಲವೂ, ಸನಾತನನಾದ ನನ್ನಲ್ಲಿ ಎಲ್ಲವೂ' (ವಿ.ಪು. ೧-೧೯-೮೫) ಎಂದು ಮುಂತಾಗಿ ಹೇಳಿಕೊಂಡಿರುತ್ತಾನೆ. ಇಲ್ಲಿ 'ಅನಂತನು ಸರ್ವಗತನಾಗಿರುವದರಿಂದ' ಎಂದು ಹೇತುವನ್ನು ಹೇಳಿರುತ್ತದೆ. ತನ್ನ ಶರೀರವಾಗಿರುವ ಚಿದಚಿದ್ವಸ್ತುವಿಗೆಲ್ಲಕ್ಕೂ ಆತ್ಮನಾಗಿರುವದರಿಂದ ಪರಮಾತ್ಮನು ಸರ್ವಗತನಾಗಿರುತ್ತಾನಾಗಿ ಸರ್ವಶಬ್ದಗಳೂ ಸರ್ವಶರೀರನಾದ ಪರಮಾತ್ಮನನ್ನೇ ಹೇಳುತ್ತವೆ ಎಂದು ಹಿಂದೆ ಹೇಳಿರುತ್ತೇವೆ. ಆದ್ದರಿಂದ ನಾನು ಎಂಬ ಶಬ್ದವು ತನ್ನ ಆತ್ಮನಿಗೆ ಪ್ರಕಾರಿಯಾದ

---

1. ಇದಾದ ಮೇಲೆ 'ಬ್ರಹ್ಮ ಸ ಐಕ್ಷತ ಬಹು ಸ್ಯಾಂ ಪ್ರಜಾಯೇಯ' ಎಂದು ಕಾ ॥ ಪಾಠದಲ್ಲಿರುವುದು ಬರೆದವರ ಕೃತಪ್ಪಿರಬೇಕು.
2. ತನ್ನೊಳಗೆ ಪ್ರವೇಶಿಸಿರುವ ನಾರಾಯಣನನ್ನೇ 'ನಾನು' ಎಂದು ರುದ್ರನು ಹೇಳಿಕೊಂಡಿರುತ್ತಾನೆ ಎಂದರ್ಥ.

ಪರಮಾತ್ಮನನ್ನೇ ಹೇಳುತ್ತದೆ. ಆದ್ದರಿಂದ 'ಆತ್ಮನೆಂದೇ ಗ್ರಹಿಸಬೇಕು, ಏಕೆಂದರೆ ಎಲ್ಲವೂ ಆತನಿಂದಲೇ ಉಂಟಾಗುತ್ತದೆ' (ವಾಕ್ಯ) ಎಂಬೀ ಅಹಂಗ್ರಹಣೋಪಾಸನೆಯನ್ನು **ವಾಕ್ಯಕಾರನು** ಹೇಳಿರುತ್ತಾನೆ : ಕಾರ್ಯಾವಸ್ಥೆಯಲ್ಲಿಯೂ ಕಾರಣಾವಸ್ಥೆಯಲ್ಲಿಯೂ ಇರುವವನು ಸ್ಥೂಲಸೂಕ್ಷ್ಮಚಿದಚಿದ್ವಸ್ತುಶರೀರಕನಾದ ಪರಮಾತ್ಮನೇ ಆಗಿರುವದರಿಂದ 'ಆತನಿಂದ ಉಂಟಾಗುತ್ತದೆ' ಎಂದಿದೆ. 'ಆತ್ಮನೆಂದೇ ಒಪ್ಪಿರುತ್ತಾರೆ, (ಶಾಸ್ತ್ರಗಳು) ತಿಳಿಸಿಕೊಡುತ್ತಲೂ ಇವೆ' (ವೇ.ಸೂ. ೪-೧-೩) ಎಂದು **ಸೂತ್ರಕಾರನೂ** (ಹೇಳಿರುತ್ತಾನೆ). **ಮಹಾಭಾರತ**ದಲ್ಲಿಯೂ ಬ್ರಹ್ಮರುದ್ರಸಂವಾದದಲ್ಲಿ ಬ್ರಹ್ಮನು ರುದ್ರನನ್ನು ಕುರಿತು 'ನಿನ್ನ ಅಂತರಾತ್ಮನೂ ನನ್ನ ಅಂತರಾತ್ಮನೂ ದೇಹಿಗಳೆನಿಸುವ ಇನ್ನಿತರರ (ಅಂತರಾತ್ಮನೂ ಆಗಿರುತ್ತಾನೆ)' (ಮೋ.ಧ.೩೫-೧-೪) ಎಂದು ಹೇಳಿರುತ್ತದೆ. ರುದ್ರನಿಗೂ ಬ್ರಹ್ಮನಿಗೂ ಮಿಕ್ಕದೇಹಿಗಳಿಗೂ ಪರಮೇಶ್ವರನಾದ ನಾರಾಯಣನೇ ಅಂತರಾತ್ಮನಾಗಿರುತ್ತಾನೆ ಎಂದು (ಅರ್ಥ). ಮತ್ತು ಅಲ್ಲಿಯೇ 'ಭಗವಂತನಾದ ಅಪರಿಮಿತತೇಜಸ್ಕನಾದ ಭವನಿಗೆ ವಿಷ್ಣುವು ಆತ್ಮನು ; ಆದ್ದರಿಂದ ಆ ಮಹೇಶ್ವರನು ಧನುಸ್ಸಿನ ಹೆದೆಯ ಸಂಸ್ಪರ್ಶವನ್ನು ಸಹಿಸಿಕೊಂಡನು'[1] (ಕರ್ಣ. ೩೫-೩೦) ಎಂದಿದೆ. ಅಲ್ಲಿಯೇ 'ಈ ಇಬ್ಬರು ದೇವಶ್ರೇಷ್ಠರು ಪ್ರಸಾದಕೋಪದಿಂದ ಹುಟ್ಟಿದವರೆನಿಸಿಕೊಂಡಿರುತ್ತಾರೆ ; ಆತನು ತೋರಿಸಿದ ಹಾದಿಯಿಂದ ಸೃಷ್ಟಿಸಂಹಾರವನ್ನು ಮಾಡುವವರಾಗಿರುತ್ತಾರೆ' (?) ಎಂದು (ಹೇಳಿದೆ). ಅಂತರಾತ್ಮನಾಗಿರುವ ನಾರಾಯಣನು ತೋರಿಸಿದ ದಾರಿಯಿಂದ ಬ್ರಹ್ಮರುದ್ರರು ಸೃಷ್ಟಿಸಂಹಾರರೂಪವಾದ ಕಾರ್ಯವನ್ನು ಮಾಡುತ್ತಾರೆ ಎಂದರ್ಥ.

ನಿಮಿತ್ತೋಪಾದಾನಗಳಿಗೆ ಭೇದವನ್ನು ಹೇಳುವವರು ವೇದಬಾಹ್ಯರೇ ಆಗಿರುವರು. 'ಈ (ಜಗತ್ತಿನ) ಜನ್ಮಾದಿಗಳು ಯಾವದರಿಂದ ಆಗುವವೋ ಅದು (ಬ್ರಹ್ಮವು)' (ವೇ.ಸೂ. ೧-೧-೨), 'ಪ್ರಕೃತಿಯೂ (ಬ್ರಹ್ಮವೇ), ಏಕೆಂದರೆ (ಹೀಗಾದರೆ) ಪ್ರತಿಜ್ಞಾದೃಷ್ಟಾಂತಗಳಿಗೆ ವಿರೋಧವಾಗುವದಿಲ್ಲ' (ವೇ.ಸೂ.೧-೪-೨೩) ಎಂಬ ವೇದವಿದ(ರಾದ ಬಾದರಾಯಣರಿಂದ) ಪ್ರಣೀತವಾದ **ಸೂತ್ರಕ್ಕೆ** (ಅವರ ಮತವು) **ವಿರುದ್ಧ**ವಾಗಿರುತ್ತದೆ. 'ಸೋಮ್ಯನೆ, ಇದು ತನಗೆರಡನೆಯದಿಲ್ಲದ ಸತ್ತೊಂದೇ ಆಗಿತ್ತು' (ಛಾಂ. ೬-೨-೧), 'ಬ್ರಹ್ಮವೇ ವನವು, ಬ್ರಹ್ಮವೇ ಆ ವೃಕ್ಷವಾಗಿತ್ತು ; ಅದರಿಂದ ದ್ಯಾವಾಪೃಥಿವಿಗಳನ್ನು ಕೆತ್ತಿಮಾಡಿದನು' (ತೈ.ಬ್ರಾ.೨-೮-೯), 'ಭುವನಗಳನ್ನೆಲ್ಲ ಧರಿಸಿರುವ ಬ್ರಹ್ಮವೇ ಅಧಿಷ್ಠಾನವಾಗಿರುತ್ತದೆ' (ತೈ.ಬ್ರಾ. ೨-೮-೯), 'ವಿದ್ಯುತ್ತಿನಂತಿರುವ ಪುರುಷನಿಂದಲೇ ಎಲ್ಲಾ ನಿಮಿಷಗಳು

---

1. 'ಆದ್ದರಿಂದ ಹರನ ಹೆದೆಯ ಸಂಸ್ಪರ್ಶವನ್ನು ಅವರು ಸಹಿಸಲಾಗ ಎಂದು ಅಚ್ಚಿನ ಪುಸ್ತಕ ಪಾಠಕ್ಕೆ ಅರ್ಥ.

ಉಂಟಾದವು' (ತೈ.ನಾ.೧-೨}. 'ಆತನನ್ನು ಆಳುವವನು ಯಾರೂ ಇಲ್ಲ. ಆತನ ಹೆಸರು ಮಹದ್ಯಶಸ್ಸು' (ತೈ.ನಾ.೧-೨). 'ಇಲ್ಲಿ ಒಂದಿಷ್ಟೂ ನಾನಾತ್ವವಿಲ್ಲ' (ಬೃ.೪-೪-೧೯), 'ಎಲ್ಲಕ್ಕೂ ವಶಿಯು, ಎಲ್ಲಕ್ಕೂ ಈಶಾನನು' (ಬೃ.೪-೪-೨೨), 'ಇದೆಲ್ಲವೂ, ಯಾವದು ಭೂತವೋ ಮತ್ತು ಯಾವದು ಭವಿಷ್ಯತ್ತೋ ಅದೆಲ್ಲವೂ ಪುರುಷನೇ, ಮತ್ತು ಅಮೃತತ್ತ್ವಕ್ಕೆ ಈಶಾನನು' (ತೈ. ಆ. ೩-೧೨-೩೨). 'ಸೇರುವದಕ್ಕೆ ಮತ್ತೆ ಯಾವ ಹಾದಿಯೂ ಇರುವದಿಲ್ಲ' (ತೈ. ಆ. ಪ್ರ. ೩-೧೨-೩೮)-ಮುಂತಾದ **ಸರ್ವಶ್ರುತಿಗಣಕ್ಕೂವಿರುದ್ಧ**ವಾಗಿರುತ್ತದೆ.

ಇತಿಹಾಸಪುರಾಣಗಳಲ್ಲಿ ನಾರಾಯಣನೇ ಪರತತ್ತ್ವವೆಂದು ನಿರ್ಣಯಿಸಿದೆ

(ಮೂಲ)

೭೨. ಇತಿಹಾಸಪುರಾಣೇಷು ಚ ಸೃಷ್ಟಿ[1]ಪ್ರಲಯಪ್ರಕರಣಯೋರಿದಮೇವ ಪರತತ್ತ್ವಮ್ ಇತ್ಯವಗಮ್ಯತೇ । ಯಥಾ ಮಹಾಭಾರತೇ 'ಕುತಃ[2] ಸೃಷ್ಟಮಿದಂ ಸರ್ವಂ ಜಗತ್ ಸ್ಥಾವರಜಙ್ಗಮಮ್ । ಪ್ರಲಯೇ ಚ ಕಮಭ್ಯೇತಿ ತನ್ಮೇ ಬ್ರೂಹಿ ಪಿತಾಮಹ ॥' (ಮೋ.ಧ. ೧೮೧-೧೧) ಇತಿ ಪೃಷ್ಟಃ 'ನಾರಾಯಣೋ ಜಗನ್ಮೂರ್ತಿರನನ್ತಾತ್ಮಾ ಸನಾತನಃ' (ಮೋ.ಧ. ೧೮೧[3]) ಇತ್ಯಾದಿ ಚ ವದನ್ 'ಋಷಯಃ ಪಿತರೋ ದೇವಾಃ ಮಹಾಭೂತಾನಿ ಧಾತವಃ । ಜಙ್ಗಮಾಜಙ್ಗಮಂ ಚೇದಂ ಜಗನ್ನಾರಾಯಣೋದ್ಭವಮ್' (ಆನು. ೧೪೯-೧೩೮) ಇತಿ ಚ । ಪ್ರಾಚ್ಯೋದೀಚ್ಯದಾಕ್ಷಿಣಾತ್ಯಪಾಶ್ಚಾತ್ಯಸರ್ವಶಿಷ್ಟೈಃ ಸರ್ವಧರ್ಮಸರ್ವತತ್ತ್ವ ವ್ಯವಸ್ಥಾಯಾಮ್ ಇದಮೇವ ಪರ್ಯಾಪ್ತಮಿತ್ಯವಿಗಾನ[4] ಪರಿಗೃಹೀತಂ ವೈಷ್ಣವಂ ಚ ಪುರಾಣಮ್ । 'ಜನ್ಮಾದ್ಯಸ್ಯ ಯತಃ' (ವೇ.ಸೂ. ೧-೧-೨) ಇತಿ ಜಗಜ್ಜನ್ಮಾದಿ ಕಾರಣಂ ಬ್ರಹ್ಮೇತ್ಯವಗಮ್ಯತೇ । ತತ್ ಜನ್ಮಾದಿಕಾರಣಂ ಕಿಮ್ ಇತಿ ಪ್ರಶ್ನಪೂರ್ವಕಮ್ 'ವಿಷ್ಣೋಃ ಸಕಾಶಾದುದ್ಭೂತಮ್' (ವಿ.ಪು. ೧-೧-೩೧) ಇತ್ಯಾದಿನಾ ಬ್ರಹ್ಮಸ್ವರೂಪವಿಶೇಷಪ್ರತಿಪಾದನೈಕಪರತಯಾ ಪ್ರವೃತ್ತಮ್ ಇತಿ ಸರ್ವಸಂಮತಮ್ ।

---

1. ಇಲ್ಲಿ 'ಸ್ಥಿತಿ' ಎಂದು ಕಾ॥ ಪಾಠವು ಬೇಕಿಲ್ಲ.
2. 'ಕೇನ' ಕಾ॥ ; ಅಚ್ಚಿನ ಭಾರತದಲ್ಲಿ 'ಕುತಃ' ಎಂದೇ ಇದೆ.
3. 'ನಾರಾಯಣೋ ಜಗನ್ಮೂರ್ತಿರನ್ತಾರಾತ್ಮಾ ಸನಾತನಃ । ಕೂಟಸ್ಥೋಽಕ್ಷರ ಅವ್ಯಕ್ತೋ ನಿರ್ದೋಷೋ ವ್ಯಾಪಕಃ ಪ್ರಭುಃ । ಪ್ರಕೃತೇಃ ಪರತೋ ನಿತ್ಯಮಿನ್ದ್ರಿಯೈರಪ್ಯಗೋಚರಃ । ಸಿಸೃಕ್ಷುಃ ಸಹಸ್ರಾಂಶಾದಸೃಜತ್ಪುರುಷಂ ಪ್ರಭುಮ್ ॥' ಈ ಎರಡು ಶ್ಲೋಕಗಳು ಬೊಂ॥ ಮುದ್ರಣದಲ್ಲಿಲ್ಲ ; ಕುಂ. ಮುದ್ರಣದಲ್ಲಿವೆ.
4. ಅವಿಗೀತಪರಿಗೃಹೀತಂ ॥

ತಥಾ ತತ್ರೈವ 'ಪ್ರಕೃತಿರ್ಯಾ ಮಯಾ ಖ್ಯಾತಾ ವ್ಯಕ್ತಾವ್ಯಕ್ತಸ್ವರೂಪಿಣೀ । ಪುರುಷಶ್ಚಾಪ್ಯುಭಾವೇತೌ ಲೀಯೇತೇ ಪರಮಾತ್ಮನಿ । ಪರಮಾತ್ಮಾ ಚ ಸರ್ವೇಷಾಮಾಧಾರಃ ಪರಮೇಶ್ವರಃ । ವಿಷ್ಣುನಾಮಾ ಸ ವೇದೇಷು ವೇದಾನ್ತೇಷು ಚ ಗೀಯತೇ ॥' (ವಿ.ಪು.೬-೪-೩೯, ೪೦) ಇತಿ । ಸರ್ವವೇದವೇದಾನ್ತೇಷು ಸರ್ವೈಃ ಶಬ್ದೈಃ ಪರಮಕಾರಣತಯಾ ಅಯಮೇವ ಗೀಯತೇ ಇತ್ಯರ್ಥಃ ॥

ಯಥಾ ಸರ್ವಾಸು ಶ್ರುತಿಷು ಕೇವಲಪರಬ್ರಹ್ಮಸ್ವರೂಪವಿಶೇಷಪ್ರತಿಪಾದನಾಯೈವ ಪ್ರವೃತ್ತೋ ನಾರಾಯಣಾನುವಾಕಃ, ತಥೇದಂ ವೈಷ್ಣವಂ ಚ ಪುರಾಣಮ್ । 'ಸೋಽಹಮಿಚ್ಛಾಮಿ ಧರ್ಮಜ್ಞ ಶ್ರೋತುಂ ತ್ವತ್ತೋ ಯಥಾ ಜಗತ್ । ಬಭೂವ ಭೂಯಶ್ಚ ಯಥಾ ಮಹಾಭಾಗ ಭವಿಷ್ಯತಿ । ಯನ್ಮಯಂ ಚ ಜಗದ್ ಬ್ರಹ್ಮನ್ ಯತಶ್ಚೈತಚ್ಚರಾಚರಮ್ । ಲೀನಮಾಸೀದ್ ಯಥಾ ಯತ್ರ ಲಯಮೇಷ್ಯತಿ ಯತ್ರ ಚ ।' (ವಿ.ಪು. ೧-೧-೪, ೫) ಇತಿ ಪರಂ ಬ್ರಹ್ಮ ಕಿಮಿತಿ ಪ್ರಕ್ರಮ್ಯ 'ವಿಷ್ಣೋಃ ಸಕಾಶಾದುದ್ಭೂತಂ ಜಗತ್ತತ್ರೈವ ಚ ಸ್ಥಿತಮ್ । ಸ್ಥಿತಿ ಸಂಯಮಕರ್ತಾಽಸೌ ಜಗತೋಽಸ್ಯ ಜಗಚ್ಚ ಸಃ ॥' (ವಿ.ಪು. ೧-೧-೩೧) 'ಪರಃ ಪರಾಣಾಂ ಪರಮಃ ಪರಮಾತ್ಮಾಽತ್ಮಸಂಸ್ಥಿತಃ । ರೂಪವರ್ಣಾದಿನಿರ್ದೇಶವಿಶೇಷಣವಿವರ್ಜಿತಃ । ಅಪಕ್ಷಯವಿನಾಶಾಭ್ಯಾಂ ಪರಿಣಾಮರ್ಧಿಜನ್ಮಭಿಃ । ಸರ್ವತಃ ಶಕ್ಯತೇ ವಕ್ತುಂ ಯಃ ಸದಾಽಸ್ತೀತಿ ಕೇವಲಮ್ ॥ ಸರ್ವತ್ರಾಽಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ । ತತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ ತದ್ಬ್ರಹ್ಮ ಪರಮಂ ನಿತ್ಯಮಜಮಕ್ಷಯಮವ್ಯಯಮ್ । ಏಕಸ್ವರೂಪಂ ಚ ಸದಾ ಹೇಯಾಭಾವಾಚ್ಚ ನಿರ್ಮಲಮ್ ॥ ತದೇವ[1] ಸರ್ವಮೇವೈತದ್ವ್ಯಕ್ತಾವ್ಯಕ್ತ ಸ್ವರೂಪವತ್ । ತಥಾ ಪುರುಷರೂಪೇಣ ಕಾಲರೂಪೇಣ ಚ ಸ್ಥಿತಮ್ ॥' (ವಿ.ಪು. ೧-೨-೧೦....೧೪) 'ಸ ಸರ್ವಭೂತಪ್ರಕೃತಿಂ ವಿಕಾರಾನ್ ಗುಣಾದಿದೋಷಾಂಶ್ಚ ಮುನೇ ವ್ಯತೀತಃ । ಅತೀತಸರ್ವಾವರಣೋಽಖಿಲಾತ್ಮಾ ತೇನಾಸ್ತುತಂ ಯದ್ಭುವನಾನ್ತರಾಲೇ ॥ ಸಮಸ್ತಕಲ್ಯಾಣಗುಣಾತ್ಮಕೋಽಸೌ ಸ್ವಶಕ್ತಿಲೇಶೋದ್ಧೃತಭೂತವರ್ಗಃ । ಇಚ್ಛಾಗೃಹೀತಾಭಿಮತೋರುದೇಹಃ ಸಂಸಾಧಿತಾ ಶೇಷಜಗದ್ಧಿತೋಽಸೌ[2] ॥ ತೇಜೋಬಲೈಶ್ವರ್ಯಮಹಾವಬೋಧಸ್ವೀರ್ಯ[3]ಶಕ್ತ್ಯಾದಿಗುಣೈಕರಾಶಿಃ । ಪರಃ ಪರಾಣಾಂ ಸಕಲಂ ನ ಯತ್ರ ಕ್ಲೇಶಾದಯಃ ಸನ್ತಿ ಪರಾವರೇಶೇ ॥ ಸ ಈಶ್ವರೋ ವ್ಯಷ್ಟಿಸಮಷ್ಟಿರೂಪೋಽವ್ಯಕ್ತಸ್ವರೂಪಃ ಪ್ರಕಟಸ್ವರೂಪಃ । ಸರ್ವೇಶ್ವರಃ ಸರ್ವದೃಕ್ಸರ್ವವೇತ್ತಾ[4] ಸಮಸ್ತಶಕ್ತಿಃ

---

1. 'ಸದೇವ' ಎಂಬ ಕಾ॥ ಪಾಠವು ಸರಿಯಲ್ಲ.
2. 'ಜಗದ್ಧಿತೋ ಯಃ' ಎಂದು ಅಚ್ಚಿನ ಪಾಠ.
3. 'ಸ್ವವೀರ್ಯ' ಎಂಬ ಕಾ॥ಪಾಠವು ಸರಿಯಲ್ಲ.
4. 'ಸರ್ವವಿಚ್ಚ' ಎಂದು ಅಚ್ಚಿನ ಪಾಠ.

ಪರಮೇಶ್ವರಾಖ್ಯಃ । ಸಂಜ್ಞಾಯತೇ[1] ಯೇನ ತದಸ್ತದೋಷಂ ಶುದ್ಧಂ ಪರಂ ನಿರ್ಮಲಮೇಕರೂಪಮ್ ॥ ಸಂದೃಶ್ಯತೇ ವಾಽಪ್ಯಧಿಗಮ್ಯತೇ ವಾ[2] ತಜ್ಜ್ಞಾನಮಜ್ಞಾನಮತೋಽನ್ಯದುಕ್ತಮ್ ॥' (ವಿ.ಪು. ೬-೫-೮೩....೮೭)- ಇತಿ ಪರಬ್ರಹ್ಮ ಸ್ವರೂಪವಿಶೇಷನಿರ್ಣಯಾಯೈವ ಪ್ರವೃತ್ತಮ್ । ಅನ್ಯಾನಿ ಸರ್ವಪುರಾಣಾನ್ಯನ್ಯ ಪರಾಣಿ ಏತದವಿರೋಧೇನ ನೇಯಾನಿ । ಅನ್ಯಪರತ್ವಂ ಚ ತತ್ತದಾರಮ್ಭಪ್ರಕಾರೈರವ ಗಮ್ಯತೇ । ಸರ್ವಾತ್ಮನಾ ವಿರುದ್ಧಾಂಶಸ್ತಾಮಸತ್ವಾತ್ ಅನಾದರಣೀಯಃ ॥

(ಅರ್ಥ)

ಇತಿಹಾಸಪುರಾಣಗಳಲ್ಲಿಯೂ ಸೃಷ್ಟಿಪ್ರಲಯಪ್ರಕರಣದಲ್ಲಿ ಇದೇ ಪರತತ್ತ್ವವೆಂದು ತಿಳಿಯಬರುತ್ತದೆ. ಹೇಗೆಂದರೆ **ಮಹಾಭಾರತ**ದಲ್ಲಿ 'ಪಿತಾಮಹನೆ, ಸ್ಥಾವರಜಂಗಮಾತ್ಮಕವಾದ ಈ ಜಗತ್ತೆಲ್ಲವೂ ಯಾರಿಂದ ಸೃಷ್ಟವಾಗಿರುತ್ತದೆ? ಮತ್ತು ಪ್ರಲಯದಲ್ಲಿ ಯಾರನ್ನು ಸೇರುತ್ತದೆ? ಅದನ್ನು ನಮಗೆ ಹೇಳು' (ಮೋ.ಧ. ೧೮೧-೧೧) ಎಂದು ಕೇಳಲಾಗಿ (ಭೀಷ್ಮನು) 'ನಾರಾಯಣನೇ ಜಗನ್ಮೂರ್ತಿಯು, ಅನಂತಾತ್ಮನು, ಸನಾತನನು' (ಮೋ. ೧೮೧) ಎಂದು ಮುಂತಾಗಿ ಹೇಳುತ್ತಾ 'ಋಷಿಗಳೂ ಪಿತೃಗಳೂ ದೇವತೆಗಳೂ ಮಹಾಭೂತಗಳೂ ಧಾತುಗಳು, ಜಂಗಮಾಜಂಗಮರೂಪವಾದ ಈ ಜಗತ್ತು ನಾರಾಯಣನಿಂದ ಉತ್ಪನ್ನವಾಗಿರುತ್ತದೆ' (ಅನು. ೧೪೯-೧೩೮) ಎಂದು (ಹೇಳಿರುತ್ತಾನೆ), **ಪೂರ್ವ, ಉತ್ತರ, ದಕ್ಷಿಣ, ಪಶ್ಚಿಮ- ಎಲ್ಲಾ ಕಡೆಯ ಶಿಷ್ಟರೂ ಸರ್ವಧರ್ಮಗಳನ್ನೂ ಸರ್ವತತ್ತ್ವಗಳನ್ನೂ ವ್ಯವಸ್ಥೆಗೊಳಿಸುವದಕ್ಕೆ ಇದೊಂದೇ ಶಕ್ತವಾದದ್ದು ಎಂದು ಒಮ್ಮತದಿಂದ ಸ್ವೀಕೃತವಾಗಿರುವ ವೈಷ್ಣವ ಪುರಾಣವೂ ಈ (ಜಗತ್ತಿಗೆ) ಜನ್ಮಾದಿಗಳು ಯಾವದರಿಂದ ಆಗುತ್ತವೆಯೋ (ಅದು ಬ್ರಹ್ಮ) ಎಂಬ ಸೂತ್ರದಲ್ಲಿ ಜಗಜ್ಜನ್ಮಾದಿಕಾರಣವು ಬ್ರಹ್ಮವೆಂದು ಗೊತ್ತಾಗಿದೆಯಲ್ಲ, ಆ ಜನ್ಮಾದಿಗಳಿಗೆ ಕಾರಣವಾದದ್ದು ಯಾವದು?- ಎಂಬ ಪ್ರಶ್ನಪೂರ್ವಕವಾಗಿ 'ವಿಷ್ಣುವಿನಿಂದ ಹುಟ್ಟಿರುತ್ತದೆ....' (ವಿ.ಪು. ೧-೧-೩೧) ಎಂದು ಬ್ರಹ್ಮಸ್ವರೂಪದ ವಿಶೇಷವೊಂದನ್ನೇ ಪ್ರತಿಪಾದಿಸುವದರಲ್ಲಿ ತಾತ್ಪರ್ಯವುಳ್ಳದ್ದಾಗಿ ಹೊರಟಿರುತ್ತದೆಯೆಂಬುದು ಸರ್ವಸಂಮತವಾಗಿರುತ್ತದೆ.** ಮತ್ತು ಅಲ್ಲಿಯೇ 'ನಾನು ಹೇಳಿರುವ ವ್ಯಕ್ತಾವ್ಯಕ್ತಸ್ವರೂಪವುಳ್ಳ ಪ್ರಕೃತಿಯೂ ಮತ್ತು ಪುರುಷನೂ ಈ ಎರಡೂ ಪರಮಾತ್ಮನಲ್ಲಿ ಲಯವಾಗುತ್ತವೆ. ಎಲ್ಲರಿಗೂ ಆಧಾರನಾಗಿರುವ ವಿಷ್ಣುವೆಂಬ ಹೆಸರಿನ ಪರಮೇಶ್ವರನು ವೇದದಲ್ಲಿಯೂ ವೇದಾಂತಗಳಲ್ಲಿಯೂ

---

1. 'ತಜ್ಜ್ಞಾಯತೇ' ಎಂಬ ಪಾಠವನ್ನು ವ್ಯಾಖ್ಯಾನದಲ್ಲಿ ಒಪ್ಪಿದೆ.
2. 'ಸಂದೃಶ್ಯತೇ ವಾಪ್ಯವಗಮ್ಯತೇ' ಎಂದು ಅಚ್ಚಿನ ಪಾಠ.

ಹೇಳಲ್ಪಡುತ್ತಿದಾನೆ' (ವಿ.ಪು. ೬-೪-೩೯, ೪೦) ಎಂದಿದೆ. ಸರ್ವವೇದವೇದಾಂತ ಗಳಲ್ಲಿಯೂ ಎಲ್ಲಾ ಶಬ್ದಗಳಿಂದಲೂ ಇವನೇ ಪರಮಕಾರಣವೆಂದು ಉಕ್ತನಾಗಿರು ತ್ತಾನೆ ಎಂದರ್ಥ.

ಹೇಗೆ ಸರ್ವಶ್ರುತಿಗಳಲ್ಲಿ ಕೇವಲ ಪರಬ್ರಹ್ಮಸ್ವರೂಪವಿಶೇಷವನ್ನು ತಾತ್ಪರ್ಯದಿಂದ ತಿಳಿಸುವದಕ್ಕೇ ನಾರಾಯಣಾನುವಾಕವು ಹೊರಟಿರುತ್ತದೆಯೋ ಹಾಗೆಯೇ ಈ ವೈಷ್ಣವಪುರಾಣವೂ (ಅದನ್ನು ಹೇಳುವದಕ್ಕೇ ಹೊರಟಿರುತ್ತದೆ). 'ಧರ್ಮಜ್ಞನೆ, ಹೇಗೆ ಜಗತ್ತು ಆಯಿತು, ಮಹಾಭಾಗನೆ, ಮತ್ತೆ ಹೇಗೆ ಆಗುವದು ? ಬ್ರಾಹ್ಮಣನೆ, ಜಗತ್ತು ಯನ್ಮಯವಾಗಿರುತ್ತದೆಯೋ, ಈ ಚರಾಚರವು ಏತರಿಂದ (ಬಂದಿರುತ್ತದೆಯೋ) ಯಾವದರಲ್ಲಿ ಹೇಗೆ ಲಯವಾಗಿದ್ದಿತೋ, ಮತ್ತು ಯಾವ ದರಲ್ಲಿ ಮುಂದೆ ಹೇಗೆ ಲಯವಾಗುವದೋ ಅದನ್ನು ಆ ನಾನು ಕೇಳಿ (ತಿಳಿಯ) ಲಿಚ್ಛಿಸುತ್ತೇನೆ' (ವಿ.ಪು.೧-೧-೪, ೫)- ಎಂದು ಪರಬ್ರಹ್ಮವು ಯಾವದು ಎಂಬ (ಪ್ರಶ್ನೆಯಿಂದ) ಉಪಕ್ರಮಮಾಡಿ 'ಜಗತ್ತು ವಿಷ್ಣುವಿನಿಂದ[1] ಉಂಟಾಗಿದೆ, ಅವನ ಲ್ಲಿಯೇ ಇರುತ್ತದೆ, ಈ ಜಗತ್ತಿನ ಸ್ಥಿತಿಸಂಯಮಗಳನ್ನು ಮಾಡುವವನು ಆತನೇ, ಜಗತ್ತೂ ಆತನೇ'[2] (ವಿ.ಪು.೧-೧-೩೧) ; 'ಯಾವನು ಪರರಾದವರೆಲ್ಲರಿಗಿಂತಲೂ ಪರಮಪರನಾಗಿ[3] ಪರಮಾತ್ಮನಾಗಿ,[4] ತನ್ನಲ್ಲಿ ತಾನಿರುವನಾಗಿ[5] ರೂಪವರ್ಣಾದಿ ನಿರ್ದೇಶದ ವಿಶೇಷಣಗಳಿಲ್ಲದವನಾಗಿ, ಅಪಕ್ಷಯವಿನಾಶಗಳಿಂದಲೂ ಪರಿಣಾಮ, ಋದ್ಧಿ, ಜನ್ಮ- ಇವುಗಳು ಯಾವವೂ (ಇಲ್ಲದವನಾಗಿ), 'ಯಾವಾಗಲೂ ಇರುತ್ತಾನೆ' ಎಂದು ಮಾತ್ರ ಹೇಳುವದಕ್ಕೆ ಬರುವವನಾಗಿರುತ್ತಾನೋ[6] ; ಅವನು ಎಲ್ಲೆಲ್ಲಿಯೂ (ಇರುತ್ತಾನೆ), ಎಲ್ಲವೂ ಅವನಲ್ಲಿ ವಾಸಮಾಡಿಕೊಂಡಿರುವದಷ್ಟೆ? ಆದ್ದರಿಂದ **ವಾಸುದೇವ**ನೆಂದು ಬಲ್ಲವರು ಅವನನ್ನು ಕರೆಯುತ್ತಾರೆ. ಅದೇ ಪರಮವೂ ನಿತ್ಯವೂ ಅಜವೂ ಅಕ್ಷಯವೂ ಅವ್ಯಯವೂ ಏಕಸ್ವರೂಪವೂ ಆಗಿದ್ದು ಯಾವಾಗಲೂ ಹೇಯವಾದದ್ದು ಇಲ್ಲವಾದ್ದರಿಂದ ನಿರ್ಮಲವೂ ಆದ **ಬ್ರಹ್ಮವು.**[7] ಅದೇ ಈ ವ್ಯಕ್ತಾವ್ಯಕ್ತಸ್ವರೂಪವಾದ (ಪ್ರಕೃತಿಯು), ಮತ್ತು ಪುರುಷರೂಪದಿಂದಲೂ ಕಾಲರೂಪದಿಂದಲೂ ಇರತಕ್ಕದ್ದು' (ವಿ.ಪು. ೧-೨-೧೦ ರಿಂದ ೧೪).

---

1. 'ವಿಷ್ಣೋಃ ಸಕಾಶಾತ್' ಎಂಬುದರ ಸರಳವಾದ ಅರ್ಥವಿದು ; ಸಂಕಲ್ಪರೂಪ ಜ್ಞಾನದೊಡನಿರುವ ವಿಷ್ಣುವಿನಿಂದ, ವಿಷ್ಣುವಿನ ಶರೀರದ ಒಂದು ಭಾಗದಿಂದ - ಎಂಬರ್ಥಗಳನ್ನು ಟೀಕೆಯಲ್ಲಿ ಕೊಟ್ಟಿದೆ.
2. ಜಗತ್ತೂ ಅವನ **ವಿಭೂತಿಯೇ.**
3. ಇದರಿಂದ ಕಾಲಪರಿಚ್ಛೇದರಹಿತನೆಂದಾಯಿತು.
4. ಇದರಿಂದ ದೇಶಪರಿಚ್ಛೇದರಹಿತನೆಂದಾಯಿತು.
5. ಇದರಿಂದ ವಸ್ತುಪರಿಚ್ಛೇದರಹಿತನೆಂದಾಯಿತು
6. ಇಲ್ಲಿಯವರೆಗೆ ಕಾಲಾಪರಿಚ್ಛೇದ್ಯನೆಂಬುದರ ವಿವರಣೆ, ಇನ್ನು ದೇಶಪರಿಚ್ಛೇದರಹಿತನೆಂಬುದರ ವಿವರ.
7. ಆ ವಾಸುದೇವನೇ ಪರಬ್ರಹ್ಮವು ಎಂದರ್ಥ.

"ಎಲೈ ಮುನಿಯೆ,[1] ಅವನು ಸರ್ವಭೂತಗಳ ಪ್ರಕೃತಿಯನ್ನೂ ವಿಕಾರಗಳನ್ನೂ ಗುಣಾದಿದೋಷಗಳನ್ನೂ[2] ದಾಟಿರುವವನು ; ಸರ್ವಾವರಣವನ್ನೂ[3] ಮೀರಿರುವವನು ; ಅಖಿಲಕ್ಕೂ ಆತ್ಮನು ; ಭುವನದ ನಡುವೆ ಏನೇನಿದೆಯೋ ಅದೆಲ್ಲವೂ ಅವನಿಂದ ವ್ಯಾಪ್ತವಾಗಿರುತ್ತದೆ. ಅವನು ಸಮಸ್ತಕಲ್ಯಾಣಗುಣಗಳುಳ್ಳ ಸ್ವರೂಪವುಳ್ಳವನು, ತನ್ನ ಶಕ್ತಿಲೇಶದಿಂದಲೇ ಭೂತವರ್ಗಗಳನ್ನು ಉದ್ಧಾರಮಾಡುವವನು, ಇಚ್ಛಾಮಾತ್ರದಿಂದ ತನಗೆ ಇಷ್ಟವಾದ ದೇಹವನ್ನು ಧರಿಸುವವನು, ಜಗತ್ತಿಗೆಲ್ಲ ಹಿತವನ್ನು ಸಾಧಿಸಿರುವಾತನವನು ; ತೇಜಸ್ಸು , ಬಲ, ಐಶ್ವರ್ಯ, ಮಹಾಜ್ಞಾನ, ವೀರ್ಯ, ಶಕ್ತಿ- ಮುಂತಾದ ಗುಣಗಳಿಗೆಲ್ಲ ಏಕರಾಶಿಯಾಗಿರುವವನು, ಪರರಿಗಿಂತಲೂ ಪರಮ, ಕ್ಲೇಶವೇ ಮುಂತಾದವು[4] ಯಾವವೂ ಇಲ್ಲದ ಪರಾವರೇಶನು. ಆ ಈಶ್ವರನು ವ್ಯಷ್ಟಿಸಮಷ್ಟಿರೂಪನು ಅವ್ಯಕ್ತರೂಪನು,[5] ಪ್ರಕಟಸ್ವರೂಪನು[6], ಸರ್ವೇಶ್ವರನು, ಸರ್ವದರ್ಶಿಯು, ಸರ್ವವನ್ನೂ ಬಲ್ಲವನು, ಸರ್ವಶಕ್ತನು, ಪರಮೇಶ್ವರನೆಂಬ ಹೆಸರುಳ್ಳವನು, **ಆ (ಪರಬ್ರಹ್ಮವು) ಯಾವದರಿಂದ ತಿಳಿಯಬರುವದೋ ಕಾಣಿಸುವದೋ ಅಥವಾ ಪ್ರಾಪ್ತವಾಗುವದೋ[7] ದೋಷರಹಿತವೂ ಶುದ್ಧವೂ ಪರವೂ ನಿರ್ಮಲವೂ ಏಕರೂಪವೂ ಆಗಿರುವ ಅದೇ ಜ್ಞಾನವು ; ಅದಕ್ಕಿಂತ ಬೇರೆಯಾದದ್ದು ಅಜ್ಞಾನವು"** (ವಿ.ಪು.೬-೫-೮೩ ರಿಂದ ೮೭) - ಎಂದು ಪರಬ್ರಹ್ಮಸ್ವರೂಪವನ್ನು ನಿರ್ಣಯಿಸುವದಕ್ಕೆಂದೇ ಹೊರಟಿರುತ್ತದೆ. ಅನ್ಯಪರವಾಗಿರುವ ಮಿಕ್ಕ ಪುರಾಣಗಳಲ್ಲಿ ಇದಕ್ಕೆ ಅವಿರುದ್ಧವಾಗಿರುವಂತೆಯೇ ಅರ್ಥವನ್ನು ಹೊಂದಿಸಿಕೊಳ್ಳಬೇಕು. **ಅವು ಮತ್ತೊಂದು ವಿಷಯದಲ್ಲಿ ತಾತ್ಪರ್ಯವುಳ್ಳವು ಎಂಬಿದು ಆಯಾ (ಪುರಾಣದ) ಆರಂಭ ಪ್ರಕಾರದಿಂದಲೇ ಗೊತ್ತಾಗುತ್ತದೆ. ಎಲ್ಲಾ ಬಗೆಯಿಂದಲೂ (ಇದಕ್ಕೆ) ವಿರುದ್ಧವೇ ಆಗಿರುವ ಅಂಶವನ್ನು ತಾಮಸ(ಪುರಾಣದ್ದೆಂಬ) ಕಾರಣದಿಂದ ಅನಾದರಮಾಡಬೇಕು.**

---

1. ಇದು ಮೈತ್ರೇಯನಿಗೆ ಪರಾಶರರು ಹೇಳಿದ್ದು.
2. ಸತ್ತ್ವರಜಸ್ತಮೋಗುಣಗಳು, ಅವುಗಳ ಕಾರ್ಯವಾದ ರಾಗದ್ವೇಷಾದುಃಖಾದಿಗಳು- ಇವನ್ನು.
3. ಸರ್ವರಿಗೂ ಆವರಣವಾದ ಜ್ಞಾನಸಂಕೋಚವನ್ನು.
4. ಮುಂತಾದವು ಎಂದರೆ ಕರ್ಮವಿಪಾಕಾಶಯಗಳು. ಯೋ.ಸೂ.
5. ಕಾರ್ಯಕಾರಣಾವಸ್ಥರಾದ ಜೀವರು. 6. ಕಾರ್ಯಕಾರಣಾವಸ್ಥೆಯಲ್ಲಿರುವ ಅಚಿದ್ವಸ್ತು.
7. ಆಗಮಜ್ಞಾನದಿಂದ ತಿಳಿಯಬರುತ್ತದೆ, ಸಾಕ್ಷಾತ್ಕಾರರೂಪವಾದ ಜ್ಞಾನದಿಂದ ಕಾಣಿಸುತ್ತದೆ, ಪರಭಕ್ತಿದೆಶೆಯನ್ನು ಪಡೆದ ಆ ಜ್ಞಾನದಿಂದ ಅಧಿಗತವಾಗುತ್ತದೆ ಎಂದರೆ ಅನುಭೂತವಾಗುತ್ತದೆ- ಎಂದು ವ್ಯಾಖ್ಯಾನ. 'ಅಸ್ತದೋಷಂ ಶುದ್ಧಮ್' ಮುಂತಾದವು ಪರಮಾತ್ಮನಿಗೂ ವಿಶೇಷಣವಾಗಬಹುದಿತ್ತಾದರೂ ಇವನ್ನು ವ್ಯಾಖ್ಯಾನಾನುಸಾರವಾಗಿ ಜ್ಞಾನಕ್ಕೆ ವಿಶೇಷಣವಾಗಿ ಮಾಡಿರುತ್ತದೆ. ಜ್ಞಾನಕ್ಕೆ ಅಸ್ತದೋಷತ್ವವೇ ಮುಂತಾದ ವಿಶೇಷಣಗಳು ಬಂದಿರುವದು ವಿಷಯವಿಶೇಷದಿಂದ- ಎಂದು ಅಲ್ಲಿ ಬರೆದಿದೆ

ವಿಷ್ಣುಪುರಾಣದಲ್ಲಿ ತ್ರಿಮೂರ್ತಿಸಾಮ್ಯವನ್ನು ಹೇಳಿಲ್ಲ

(ಮೂಲ)

೭೩. ನನ್ವಸ್ಮಿನ್ನಪಿ 'ಸೃಷ್ಟಿಸ್ಥಿತ್ಯನ್ತಕರಣೇಂ ಬ್ರಹ್ಮವಿಷ್ಣುಶಿವಾತ್ಮಿಕಾಮ್ । ಸ ಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ ॥' (ವಿ.ಪು.೧-೨-೬೬) ಇತಿ ತ್ರಿಮೂರ್ತಿಸಾಮ್ಯಂ ಪ್ರತೀಯತೇ ॥

ನೈತದೇವಮ್ । 'ಏಕ ಏವ ಜನಾರ್ದನಃ' ಇತಿ ಜನಾರ್ದನಸ್ಯೈವ ಬ್ರಹ್ಮ ಶಿವಾದಿ[1]ಕೃತ್ಸ್ನ ಪ್ರಪಞ್ಚಾತಾದಾತ್ಮ್ಯಂ ವಿಧೀಯತೇ । 'ಜಗಚ್ಚ ಸಃ' (ವಿ.ಪು.೧-೧-೩೧) ಇತಿ ಪೂರ್ವೋಕ್ತಮೇವ ವಿವೃಣೋತಿ । 'ಸ್ರಷ್ಟಾ ಸೃಜತಿ ಚಾತ್ಮಾನಂ ವಿಷ್ಣುಃ ಪಾಲ್ಯಂ ಚ ಪಾತಿ ಚ । ಉಪಸಂಹ್ರಿಯತೇ ಚಾನ್ತೇ ಸಂಹರ್ತಾ ಚ ಸ್ವಯಂ ಪ್ರಭುಃ ॥' (ವಿ.ಪು.೧-೨-೬೭) ಇತಿ ಸ್ರಷ್ಟೃತ್ವೇನಾವಸ್ಥಿತಂ ಬ್ರಹ್ಮಾಣಂ ಸೃಜ್ಯಂ ಚ ಸಂಹರ್ತಾರಂ ಸಂಹಾರ್ಯಂ ಚ ಯುಗಪನ್ನಿರ್ದಿಶ್ಯ ಸರ್ವಸ್ಯ ವಿಷ್ಣುತಾದಾತ್ಮ್ಯೋಪ ದೇಶಾತ್ ಸೃಜ್ಯಸಂಹಾರ್ಯಭೂತಾದ್ ವಸ್ತುನಃ ಸ್ರಷ್ಟೃಸಂಹರ್ತೃರ್ಜನಾರ್ದನ ವಿಭೂತಿತ್ವೇನ ವಿಶೇಷೋ ದೃಶ್ಯತೇ । ಜನಾರ್ದನವಿಷ್ಣುಶಬ್ದಯೋಃ ಪರ್ಯಾಯತ್ವೇನ 'ಬ್ರಹ್ಮವಿಷ್ಣುಶಿವಾತ್ಮಿಕಾಮ್' ಇತಿ ವಿಭೂತಿಮತ ಏವ ಸ್ವೇಚ್ಛಯಾ ಲೀಲಾರ್ಥಂ ವಿಭೂತ್ಯನ್ತರ್ಭಾವ ಉಚ್ಯತೇ । ಯಥೇದಮನನ್ತರಮೇವೋಚ್ಯತೇ । 'ಪೃಥಿವ್ಯಾಪಸ್ತಥಾ ತೇಜೋ ವಾಯುರಾಕಾಶ[2] ಏವ ಚ । ಸರ್ವೇನ್ದ್ರಿಯಾನ್ತಃಕರಣಂ ಪುರುಷಾಖ್ಯಂ ಹಿ ಯಜ್ಜಗತ್ ॥ ಸ ಏವ ಸರ್ವಭೂತಾತ್ಮಾ ವಿಶ್ವರೂಪೋ ಯತೋಽವ್ಯಯಃ । ಸರ್ಗಾದಿಕಂ ತತೋಽಸ್ಯೈವ ಭೂತಸ್ಥಮುಪಕಾರಕಮ್ । ಸ ಏವ ಸೃಜ್ಯಃ ಸ ಚ ಸರ್ಗಕರ್ತಾ ಸ ಏವ ಪಾತ್ಯತ್ತಿ ಚ ಪಾಲ್ಯತೇ ಚ । ಬ್ರಹ್ಮಾದ್ಯವಸ್ಥಾಭಿರಶೇಷಮೂರ್ತಿರ್ವಿಷ್ಣುರ್ವರಿಷ್ಠೋ ವರದೋ ವರೇಣ್ಯಃ ॥' (ವಿ.ಪು. ೧-೨-೬೮-೭೦) ಇತಿ । ಆತ್ರ ಸಾಮಾನಾಧಿಕರಣ್ಯನಿರ್ದಿಷ್ಟಂ ಹೇಯಮಿಶ್ರ ಪ್ರಪಞ್ಚಾತಾದಾತ್ಮ್ಯಂ ನಿರವದ್ಯಸ್ಯ ನಿರ್ವಿಕಾರಸ್ಯ ಸಮಸ್ತಕಲ್ಯಾಣಗುಣಾಕರಸ್ಯ[3] ಬ್ರಹ್ಮಣಃ ಕಥಮುಪಪದ್ಯತ ಇತ್ಯಾಶಙ್ಕ್ಯ 'ಸ ಏವ ಸರ್ವಭೂತಾತ್ಮಾ ವಿಶ್ವರೂಪೋ ಯತೋಽವ್ಯಯಃ' (ವಿ.ಪು.೧-೨-೬೯) ಇತಿ ಸ್ವಯಮೇವೋಪಪಾದಯತಿ । ಸ ಏವ ಸರ್ವೇಶ್ವರೇಶ್ವರಃ ಪರಬ್ರಹ್ಮಭೂತೋ ವಿಷ್ಣುರೇವ, ಸರ್ವಂ ಜಗತ್ ಇತಿ ಪ್ರತಿಜ್ಞಾಯ 'ಸರ್ವಭೂತಾತ್ಮಾ ವಿಶ್ವರೂಪೋ ಯತೋಽವ್ಯಯಃ' ಇತಿ ಹೇತುರುಕ್ತಃ । ಸರ್ವಭೂತಾನಾಮಯಮಾತ್ಮಾ ವಿಶ್ವಶರೀರೋ[4] ಯತೋಽವ್ಯಯಃ ಇತ್ಯರ್ಥಃ ।

---

1. 'ಬ್ರಹ್ಮವಿಷ್ಣುಶಿವಾದಿ' ಕಾ॥; ಆದಿಶಬ್ದದಿಂದಲೇ 'ವಿಷ್ಣು'ವೂ ಸೇರಿದಂತೆ ಎಂದು ಇಲ್ಲಿ ಅದನ್ನು ಬಿಟ್ಟಿರಬಹುದೆಂದು ಕಾಣುತ್ತದೆ.
2. 'ಆಕಾಶಮೇವ' ಕಾ॥
3. 'ಗುಣಾತ್ಮಕಸ್ಯ' ಎಂಬ ಕಾ॥ ಪಾಠ ಸರಿಯಲ್ಲ.
4. 'ವಿಶ್ವರೂಪೋ' ಕಾ॥

ವಕ್ಷ್ಯತಿ ಚ 'ತತ್ಸರ್ವಂ ವೈ ಹರೇಸ್ತನುಃ' (ವಿ.ಪು.೧-೨೨-೩೮) ಇತಿ । ಏತದುಕ್ತಂ ಭವತಿ- ಆಸ್ಯಾವ್ಯಯಸ್ಯಾಪಿ ಪರಸ್ಯ ಬ್ರಹ್ಮಣೋ ವಿಷ್ಣೋರ್ವಿಶ್ವಶರೀರತಯಾ ತಾದಾತ್ಮ್ಯಮವಿರುದ್ಧಮಿತಿ । ಆತ್ಮಶರೀರಯೋಶ್ಚ ಸ್ವಭಾವಾ ವ್ಯವಸ್ಥಿತಾ ಏವ ॥

ಏವಂಭೂತಸ್ಯ ಸರ್ವೇಶ್ವರಸ್ಯ ವಿಷ್ಣೋಃ ಪ್ರಪಞ್ಚಾನ್ತರ್ಭೂತನಿಯಾಮ್ಯ ಕೋಟಿನಿವಿಷ್ಟಬ್ರಹ್ಮಾದಿದೇವತಿರ್ಯಙ್ಮನುಷ್ಯೇಷು ತತ್ತತ್ಸಮಾಶ್ರಯಣೀಯತ್ವಾಯ ಸ್ವೇಚ್ಛಾವತಾರಃ ಪೂರ್ವೋಕ್ತಃ ॥

(ಅರ್ಥ)

(ಆಕ್ಷೇಪ) :— ಈ (ಪುರಾಣ)ದಲ್ಲಿಯೂ 'ಸೃಷ್ಟಿಸ್ಥಿತಿಪ್ರಲಯಗಳನ್ನು ಮಾಡುವ ಬ್ರಹ್ಮವಿಷ್ಣುಶಿವಾತ್ಮಕವಾದ ಹೆಸರನ್ನು ಆ ಜನಾರ್ದನಭಗವಂತನೊಬ್ಬನೇ ಪಡೆಯುತ್ತಾನೆ' (ವಿ.ಪು. ೧-೨-೬೬)ಎಂದು ತ್ರಿಮೂರ್ತಿಗಳ ಸಾಮ್ಯವು ಕಂಡುಬರುತ್ತಿದೆಯಲ್ಲ?

(ಪರಿಹಾರ):— ಇದು ಹೀಗಲ್ಲ. 'ಒಬ್ಬ ಜನಾರ್ದನನೇ' ಎಂದು ಜನಾರ್ದನನಿಗೇ ಬ್ರಹ್ಮಶಿವಾದಿಯಾದ ಇಡಿಯ ಪ್ರಪಂಚದ ತಾದಾತ್ಮ್ಯವನ್ನು (ಇಲ್ಲಿ) ಹೇಳಿರುತ್ತದೆ. 'ಜಗತ್ತೂ ಅವನೇ' (ವಿ.ಪು.೧-೧-೩೧) ಎಂದು ಈ ಮೊದಲೇ ಹೇಳಿರುವದನ್ನೇ (ಇಲ್ಲಿ ಪರಾಶರನು)ವಿವರಿಸುತ್ತಿದಾನೆ : 'ವಿಷ್ಣುವು ಸ್ರಷ್ಟೃವಾಗಿ ತನ್ನನ್ನೇ ಸೃಷ್ಟಿಸುತ್ತಾನೆ ; ಪಾಲ್ಯನಾಗಿ (ತನ್ನನ್ನೇ) ಪಾಲಿಸುತ್ತಾನೆ ; ಮತ್ತು ಕೊನೆಗೆ ಸಂಹರ್ತೃವಾಗಿ ಪ್ರಭುವು ತಾನೇ ಸಂಹೃತನಾಗುತ್ತಾನೆ' (ವಿ.ಪು.೧-೨-೬೭) ಎಂದು **ಸ್ರಷ್ಟೃವಾಗಿರುವ ಬ್ರಹ್ಮನನ್ನೂ ಮತ್ತು ಸೃಜ್ಯವನ್ನೂ ಸಂಹರ್ತೃವಾಗಿರುವ (ಶಿವನನ್ನೂ) ಸಂಹಾರ್ಯವನ್ನೂ ಒಮ್ಮೆಗೇ ನಿರ್ದೇಶಿಸಿ ಎಲ್ಲಕ್ಕೂ ವಿಷ್ಣುತಾದಾತ್ಮ್ಯ ವನ್ನೇ (ಇಲ್ಲಿ) ಹೇಳಿರುವದರಿಂದ ಸೃಜ್ಯವೂ ಸಂಹಾರ್ಯವೂ ಆಗಿರುವ ವಸ್ತುವಿಗಿಂತಲೂ ಸ್ರಷ್ಟೃಸಂಹರ್ತೃಗಳಲ್ಲಿ (ಅವರು) ಜನಾರ್ದನನ ವಿಭೂತಿಗಳೆಂಬ ವಿಶೇಷವು ಕಂಡು ಬರುತ್ತಿದೆ.** ಜನಾರ್ದನವಿಷ್ಣುಶಬ್ದಗಳು ಪರ್ಯಾಯವಾಗಿರುವದ ರಿಂದ 'ಬ್ರಹ್ಮ ವಿಷ್ಣುಶಿವಾತ್ಮಕವಾದ' ಎಂದು ವಿಭೂತಿವಂತನಾದ **(ವಿಷ್ಣುವಿಗೇ) ಸ್ವೇಚ್ಛೆಯಿಂದ ಲೀಲಾರ್ಥವಾಗಿ ವಿಭೂತಿಗಳೊಳಗೆ ಅಂತರ್ಭಾವವನ್ನು ಹೇಳಿರುತ್ತದೆ** (ಎಂದು ತಿಳಿಯಬೇಕು). ಹಾಗೆಂದು ಇದರ ಮುಂದೆಯೇ 'ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಸರ್ವೇಂದ್ರಿಯಗಳು, ಅಂತಃಕರಣಗಳು, ಪುರುಷನು- ಎಂಬ ಜಗತ್ತಿದೆಯಲ್ಲ, ಅದೆಲ್ಲವೂ ಆ ಸರ್ವಭೂತಾತ್ಮನಾದ ವಿಶ್ವರೂಪನೇ, ಏಕೆಂದರೆ ಅವ್ಯಯನಾಗಿರುತ್ತಾನೆ. ಆದ್ದರಿಂದ ಭೂತಗಳಲ್ಲಿರುವ ಸೃಷ್ಟ್ಯಾದಿಗಳು ಅವನಿಗೇ ಉಪಕಾರಕವಾಗಿರುತ್ತವೆ. ಬ್ರಹ್ಮಾದಿಯಾದ ಎಲ್ಲಾ ಮೂರ್ತಿಗಳುಳ್ಳವನೂ ವರದನೂ ವರಿಷ್ಠನೂ ವರೇಣ್ಯನೂ ಆದ ಆ ವಿಷ್ಣುವೇ ಸೃಜ್ಯನು, ಅವನೇ

ಬ್ರಹ್ಮಾದ್ಯವಸ್ಥೆಗಳಿಂದ ಸರ್ಗಕರ್ತೃ, ಅವನೇ ಪಾಲಿಸುತ್ತಾನೆ, ತಿನ್ನುತ್ತಾನೆ, ಮತ್ತು ಪಾಲಿಸಲ್ಪಡುತ್ತಾನೆ' (ವಿ.ಪು.೧-೨-೬೮ ರಿಂದ ೭೦). ಇಲ್ಲಿ ಸಾಮಾನಾಧಿಕರಣ್ಯದಿಂದ ತಿಳಿಸಿರುವ ಹೇಯಮಿಶ್ರವಾದ ಪ್ರಪಂಚದ ತಾದಾತ್ಮ್ಯವು ನಿರವದ್ಯವೂ ನಿರ್ವಿಕಾರವೂ ಸಮಸ್ತಕಲ್ಯಾಣಗುಣಾತ್ಮಕವೂ ಆದ ಬ್ರಹ್ಮಕ್ಕೆ ಹೇಗೆ ಹೊಂದುತ್ತದೆ?- ಎಂಬ ಶಂಕೆಯನ್ನು ತೆಗೆದು 'ಏಕೆಂದರೆ ವಿಶ್ವರೂಪನಾದ ಆತನೇ ಅವ್ಯಯನಾದ ಸರ್ವಭೂತಗಳ ಆತ್ಮನು' (ವಿ.ಪು.೧-೨-೬೯) ಎಂದು ತಾನೇ ಹೊಂದಿಸಿ ಹೇಳಿರುತ್ತಾನೆ. ಆ ಸರ್ವೇಶ್ವರೇಶ್ವರನೇ, ಪರಬ್ರಹ್ಮಭೂತನಾದ ವಿಷ್ಣುವೇ, ಜಗತ್ತೆಲ್ಲವೂ ಎಂದು ಪ್ರತಿಜ್ಞೆಮಾಡಿ, 'ಸರ್ವಭೂತಾತ್ಮನಾದ ವಿಶ್ವರೂಪನು ಅವ್ಯಯನಾಗಿರುವದರಿಂದ' ಎಂದು ಹೇತುವನ್ನು ಹೇಳಿರುತ್ತದೆ. ಇವನು ಸರ್ವಭೂತಗಳಿಗೂ ಆತ್ಮನಾಗಿ ವಿಶ್ವಶರೀರನಾಗಿ ಅವ್ಯಯನಾಗಿರುವದರಿಂದ- ಎಂದರ್ಥ, 'ಅದೆಲ್ಲವೂ ಹರಿಯ ತನುವೇ' (ವಿ.ಪು.೧-೨೨-೩೮) ಎಂದು ಮುಂದೆ ಹೇಳಿಯೂ ಇರುತ್ತಾನೆ. ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ : **ಈ ಪರಬ್ರಹ್ಮವಾದ ವಿಷ್ಣುವು ಅವ್ಯಯನಾದರೂ ವಿಶ್ವಶರೀರನಾಗಿರುವದರಿಂದ ತಾದಾತ್ಮ್ಯವನ್ನು (ಹೇಳಿದ್ದು)** ವಿರುದ್ಧವಲ್ಲ ಎಂದಭಿಪ್ರಾಯ. **ಆತ್ಮಶರೀರಗಳ ಸ್ವಭಾವಗಳು ಗೊತ್ತಾಗಿ (ಬೇರೆಬೇರೆಯಾಗಿಯೇ ಇರುತ್ತವೆ).**[1] ಹೀಗಿರುವ **ಸರ್ವೇಶ್ವರನಾದ ವಿಷ್ಣುವಿಗೆ ಪ್ರಪಂಚಾಂತರ್ಭೂತವಾದ ನಿಯಾಮ್ಯಕೋಟಿಯಲ್ಲಿ ಸೇರಿರುವ ಬ್ರಹ್ಮಾದಿದೇವತೆಗಳು, ತಿರ್ಯಕ್ಕಾಣಿಗಳು, ಮನುಷ್ಯರು- ಇವರಲ್ಲಿ ಅವರವರಿಂದ ಸಮಾಶ್ರಯವನ್ನು ಹೊಂದುವದಕ್ಕಾಗಿ ಸ್ವೇಚ್ಛೆಯಿಂದ ಅವತಾರವಾಗುವದೆಂದು ಹಿಂದೆಯೇ ಹೇಳಲಾಗಿದೆ.**

ಬ್ರಹ್ಮಾದಿಗಳು ಕರ್ಮವಶರು, ಭಗವಂತನು ಸ್ವತಂತ್ರನು

(ಮೂಲ)

೭೪. ತದೇತದ್ ಬ್ರಹ್ಮಾದೀನಾಂ ಭಾವನಾತ್ರಯಾನ್ವಯೇನ ಕರ್ಮವಶ್ಯತ್ವಮ್, ಭಗವತಃ ಪರಬ್ರಹ್ಮಭೂತಸ್ಯ ವಾಸುದೇವಸ್ಯ ನಿಖಿಲಜಗದುಪಕಾರಾಯ ಸ್ವೇಚ್ಛಯಾ ಸ್ವೇನೈವ ರೂಪೇಣ ದೇವಾದಿಷ್ವವತಾರ ಇತಿ ಚ ಷಷ್ಠೇಽಂಶೇ ಶುಭಾಶ್ರಯಪ್ರಕರಣೇ ಸುವ್ಯಕ್ತಮುಕ್ತಮ್ । ಅಸ್ಯ ದೇವಾದಿರೂಪೇಣಾವತಾರೇಷ್ವಪಿ ನ ಪ್ರಾಕೃತೋ ದೇಹ ಇತಿ ಮಹಾಭಾರತೇ 'ನ ಭೂತಸಙ್ಗಸಂಸ್ಥಾನೋ ದೇಹೋಽಸ್ಯ ಪರಮಾತ್ಮನಃ'[2] **(ಮೋ.೨೦೬-೬೦) ಇತಿ ಪ್ರತಿಪಾದಿತಃ । ಶ್ರುತಿಶ್ಚ**

---

1. ಆದ್ದರಿಂದ ಅವುಗಳಲ್ಲಿ ಒಂದರ ಸ್ವಭಾವವು ಇನ್ನೊಂದಕ್ಕೆ ಬರುವಂತಿಲ್ಲ.
2. ಈ ವಾಕ್ಯವು ಉದ್ಯೋಗಪರ್ವದಲ್ಲಿದೆಯೆಂದು ಮದ್ರಾಸಿನಲ್ಲಿ ಅಚ್ಚಾದ ಶ್ರೀಭಾಷ್ಯದ ಟಿಪ್ಪಣಿಯಲ್ಲಿದೆ. ಆ ಪರ್ವದಲ್ಲಿ ನಮಗೆ ಇದು ಸಿಕ್ಕಿಲ್ಲ. ಮೋ.ಧ.ಕುಂ. ಪಾಠದಲ್ಲಿ 'ನ ಭೂತ ಸೃಷ್ಟಿಸಂಸ್ಥಾನಃ' (೨೦೬-೬೦) ಎಂದಿದೆ.

'ಅಜಾಯಮಾನೋ ಬಹುಧಾ ವಿಜಾಯತೇ । ತಸ್ಯ ಧೀರಾಃ ಪರಿಜಾನನ್ತಿ ಯೋನಿಮ್' (ತೈ. ಆ. ಪ್ರ. ೩-೧೩-೩೯) ಇತಿ । ಕರ್ಮವಶ್ಯಾನಾಂ ಬ್ರಹ್ಮಾದೀನಾಮ್ ಅನಿಚ್ಛತಾಮಪಿ ತತ್ತತ್ಕರ್ಮಾನುಗುಣಪ್ರಕೃತಿಪರಿಣಾಮರೂಪಭೂತಸಙ್ಗಸಂಸ್ಥಾನವಿಶೇಷದೇವಾದಿಶರೀರಪ್ರವೇಶರೂಪಂ ಜನ್ಮಾವರ್ಜನೀಯಮ್ । ಅಯಂ ತು ಸರ್ವೇಶ್ವರಃ ಸತ್ಯಸಂಕಲ್ಪೋ ಭಗವಾನ್ ಏವಂಭೂತಶುಭೇತರಜನ್ಮಾಕುರ್ವನ್ನಪಿ ಸ್ವೇಚ್ಛಯಾ ಸ್ವೇನೈವ ನಿರತಿಶಯಕಲ್ಯಾಣರೂಪೇಣ ದೇವಾದಿಷು ಜಗದುಪಕಾರಾಯ ಬಹುಧಾ ಜಾಯತೇ । ತಸ್ಯೈತಸ್ಯ ಶುಭೇತರಜನ್ಮಾಕುರ್ವತೋಽಪಿ ಸ್ವಕಲ್ಯಾಣಗುಣಾನನ್ತ್ಯೇನ ಬಹುಧಾ ಯೋನಿಂ ಬಹುವಿಧಜನ್ಮ ಧೀರಾಃ ದೀಮತಾಮಗ್ರೇಸರಾ ಜಾನನ್ತಿ ಇತ್ಯರ್ಥಃ ॥

ತದೇತನ್ನಿಖಿಲಜಗನ್ನಿಮಿತ್ತೋಪಾದಾನಭೂತಾತ್ 'ಜನ್ಮಾದ್ಯಸ್ಯ ಯತಃ' (ವೇ.ಸೂ.೧-೧-೨), 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್' (ವೇ.ಸೂ. ೧-೪-೨೩) ಇತ್ಯಾದಿಸೂತ್ರೈಃ ಪ್ರತಿಪಾದಿತಾತ್ ಪರಸ್ಮಾತ್ ಬ್ರಹ್ಮಣಃ ಪರಮಪುರುಷಾದನ್ಯಸ್ಯ ಕಸ್ಯಚಿತ್ ಪರತ್ವಮ್ 'ಪರಮತಃ ಸೇತೂನ್ಮಾನಸಂಬನ್ಧಭೇದವ್ಯಪದೇಶೇಭ್ಯಃ' (ವೇ.ಸೂ. ೩-೨-೩೦) ಇತ್ಯಾಶಙ್ಕ್ಯ 'ಸಾಮಾನ್ಯಾತ್ತು' (ವೇ.ಸೂ.೩-೨-೩೧), 'ಬುದ್ಧ್ಯರ್ಥಃ ಪಾದವತ್' (ವೇ.ಸೂ. ೩-೨-೩೨), 'ಸ್ಥಾನವಿಶೇಷಾತ್ ಪ್ರಕಾಶಾದಿವತ್' (ವೇ.ಸೂ. ೩-೨-೩೩), 'ಉಪಪತ್ತೇಶ್ಚ' (ವೇ.ಸೂ.೩-೨-೩೪), 'ತಥಾಽನ್ಯಪ್ರತಿಷೇಧಾತ್' (ವೇ.ಸೂ.೩-೨-೩೫), 'ಅನೇನ ಸರ್ವಗತತ್ವಮಾಯಾಮಶಬ್ದಾದಿಭ್ಯಃ' (ವೇ.ಸೂ. ೩-೨-೩೬) ಇತಿ ಸೂತ್ರಕಾರಃ ಸ್ವಯಮೇವ ನಿರಾಕರೋತಿ ॥

ಮಾನವೇ ಚ ಶಾಸ್ತ್ರೇ 'ಪ್ರಾದುರಾಸೀತ್ ತಮೋನುದಃ' (ಮನು. ೧-೬) 'ಸಿಸೃಕ್ಷುರ್ವಿವಿಧಾಃ ಪ್ರಜಾಃ । ಅಪ ಏವ ಸಸರ್ಜಾದೌ ತಾಸು ವೀರ್ಯ[1]ಮಪಾಸೃಜತ್' (ಮನು.೧-೮), 'ತಸ್ಮಿನ್ಜಜ್ಞೇ ಸ್ವಯಂ ಬ್ರಹ್ಮಾ' (ಮನು.೧-೯) ಇತಿ ಬ್ರಹ್ಮಣೋ ಜನ್ಮಶ್ರವಣಾತ್[2] ಕ್ಷೇತ್ರಜ್ಞತ್ವಮೇವಾವಗಮ್ಯತೇ । ತಥಾ ಚ ಸ್ರಷ್ಟುಃ ಪರಮಪುರುಷಸ್ಯ ತದ್ವಿಸೃಷ್ಟಸ್ಯ ಚ ಬ್ರಹ್ಮಣಃ 'ಅಯನಂ ತಸ್ಯ ತಾಃ ಪೂರ್ವಂ[3] ತೇನ ನಾರಾಯಣಃ ಸ್ಮೃತಃ' (ಮನು.೧-೧೦), 'ತದ್ವಿಸೃಷ್ಟಃ ಸ ಪುರುಷೋ ಲೋಕೇ ಬ್ರಹ್ಮೇತಿ ಕೀರ್ತ್ಯತೇ' (ಮನು.೧-೧೧) ಇತಿ ನಾಮನಿರ್ದೇಶಾಚ್ಚ । ತಥಾ ಚ ವೈಷ್ಣವೇ

---

1. 'ಬೀಜಮ್' ಎಂದು ಮುದ್ರಿತಪುಸ್ತಕದ ಪಾಠ.
2. ಇದರ ಮುಂದೆ 'ತಸ್ಯ' ಎಂದು ಹೆಚ್ಚಾಗಿ ಕಾ॥
3. 'ತಾ ಯದಸ್ಯಾಯನಂ ಪೂರ್ವಮ್' ಎಂದು ಅಚ್ಚಿನ ಪುಸ್ತಕದ ಪಾಠ.

ಪುರಾಣೇ ಹಿರಣ್ಯಗರ್ಭಾದೀನಾಂ ಭಾವನಾತ್ರಯಾಽನ್ವಯಾದಶುದ್ಧತ್ವೇನ ಶುಭಾಶ್ರಯತ್ವಾನರ್ಹತ್ವೋಪಪಾದನಾತ್ ಕ್ಷೇತ್ರಜ್ಞತ್ವಂ ನಿಶ್ಚೀಯತೇ ॥

(ಅರ್ಥ)

(ಪುರಾಣೇತಿಹಾಸಗಳು) : ಬ್ರಹ್ಮಾದಿಗಳು **ಭಾವನಾತ್ರಯದಿಂದೊಡ**ಗೂಡಿರುವದರಿಂದ[1] ಕರ್ಮವಶರಾಗಿರುವರೆಂದೂ,[2] ಪರಬ್ರಹ್ಮವಾಗಿರುವ ವಾಸುದೇವ ಭಗವಂತನು ಅಖಿಲಜಗತ್ತಿಗೂ ಉಪಕಾರವನ್ನೆಸಗುವದಕ್ಕಾಗಿ ಸ್ವೇಚ್ಛೆಯಿಂದ ತನ್ನದೇ ಆದ ರೂಪದಿಂದ ದೇವಾದಿಗಳಲ್ಲಿ ಅವತರಿಸುತ್ತಾನೆಂದೂ[3] (ಹೇಳಿರುವ) ಆ ಈ (ವಿಷಯವು) ಆರನೆಯ ಅಂಶದಲ್ಲಿ **ಶುಭಾಶ್ರಯಪ್ರಕರಣ**ದಲ್ಲಿ[4] ಸುವ್ಯಕ್ತವಾಗಿ ಹೇಳಿರುತ್ತದೆ. ದೇವಾದಿರೂಪದಿಂದ ಅವತರಿಸುವಾಗಲೂ ಇವನಿಗೆ ಪ್ರಾಕೃತದೇಹವಿರುವದಿಲ್ಲ ಎಂದು **ಮಹಾಭಾರತ**ದಲ್ಲಿ 'ಈ ಪರಮಾತ್ಮನ ದೇಹವು ಭೂತಗಳ ಸಂಘದಿಂದಾದ ಸಂಸ್ಥಾನವಲ್ಲ' (ಕುಂ.ಮೋ.ಧ.೨೦೬-೬೦) ಎಂದು ಪ್ರತಿಪಾದಿತವಾಗಿರುತ್ತದೆ. **ಶ್ರುತಿಯು**ಕೂಡ 'ಹುಟ್ಟದೆ ಇರುವವನಾಗಿಯೇ ಬಹುಪ್ರಕಾರದಿಂದ ಹುಟ್ಟುತ್ತಾನೆ; ಆತನ ಯೋನಿಯನ್ನು ಧೀರರು ಅರಿತಿರುವರು' (ತೈ.ಆ.೩-೧೩-೩೯) ಎಂದು (ಹೇಳುತ್ತದೆ). **ಕರ್ಮವಶರಾದ ಬ್ರಹ್ಮಾದಿಗಳಿಗೆ ಇಚ್ಛೆಯಿಲ್ಲದಿದ್ದರೂ ಆಯಾ ಕರ್ಮಕ್ಕೆ ಅನುಗುಣವಾಗಿ ಆಗುವ ಪ್ರಕೃತಿಯ ಪರಿಣಾಮರೂಪವಾದ ಭೂತಸಂಘ ಸಂಸ್ಥಾನವಿಶೇಷಗಳಾದ ದೇವಾದಿಶರೀರವನ್ನು ಹೊಗುವದೆಂಬ ಜನ್ಮವು ಬಿಟ್ಟದ್ದಲ್ಲ;**

---

1. **ಬ್ರಹ್ಮಭಾವನೆ, ಕರ್ಮಭಾವನೆ, ಉಭಯಭಾವನೆ-** ಎಂಬ ಭಾವನಾತ್ರಯದಿಂದೊಡಗೂಡಿದವರು ಎಂದರ್ಥ. ಸನಂದನಾದಿಗಳಲ್ಲಿ **ಬ್ರಹ್ಮಭಾವನೆ,** ದೇವತೆಗಳೇ ಮುಂತಾದ ಸ್ಥಾವರಜಂಗಮಪ್ರಾಣಿಗಳಲ್ಲಿ **ಕರ್ಮಭಾವನೆ,** ಹಿರಣ್ಯಗರ್ಭಾದಿಗಳಲ್ಲಿ **ಉಭಯಭಾವನೆ,** ವಿ.ಪು. ೬-೭-೪೮ ರಿಂದ ೫೧. ಇಲ್ಲಿ ಬ್ರಹ್ಮಭಾವನೆ ಎಂದರೆ ಉಪಾಸನಾರೂಪವಾದ ಜ್ಞಾನವು ಎಂದು **ಟೀಕೆ.**

2. ಹಿರಣ್ಯಗರ್ಭನಿಂದ ಹಿಡಿದು ಪ್ರಧಾನದಿಂದ ವಿಶೇಷಾಂತವಾದದ್ದೆಲ್ಲವೂ-ಭಾವನಾತ್ರಯಾತ್ಮಕವಾದ ಹರಿಯ ರೂಪವು- ಎಂದು ವರ್ಣಿಸಿರುವ (ವಿ.ಪು. ೬-೭-೪೮ ರಿಂದ ೫೯) ಭಾಗದಲ್ಲಿ ಬ್ರಹ್ಮಾದಿಗಳು **ಕರ್ಮವಶ**ರೆಂಬುದನ್ನುತಿಳಿಸಿದೆ.

3. 'ಸಮಸ್ತಾಃ ಶಕ್ತಯಶ್ಚೈತಾಃ' ಎಂಬಲ್ಲಿರುವ 'ಜಗತಾಮುಪಕಾರಾಯ ನ ಸಾ ಕರ್ಮನಿಮಿತ್ತಜಾ'- ಎಂಬವರೆಗಿನ ಗ್ರಂಥಭಾಗದಲ್ಲಿ (ವಿ.ಪು. ೬-೭-೭೦ರಿಂದ ೭೨) ಪರಮಾತ್ಮನ **ಸ್ವೇಚ್ಛಾವತಾರವನ್ನು** ವರ್ಣಿಸಿದೆ.

4. ಖಾಂಡಿಕ್ಯಜನಕನು 'ಶುಭಾಶ್ರಯವು ಯಾವದು?' (ವಿ.ಪು. ೬-೭-೪೬) ಎಂದು ಪ್ರಶ್ನಿಸಿದ್ದಕ್ಕೆ ಕೇಶಿಧ್ವಜನ ಉತ್ತರವಿರುವ ಭಾಗವಿದಾದ್ದರಿಂದ ಇದಕ್ಕೆ **ಶುಭಾಶ್ರಯ ಪ್ರಕರಣ**ವೆಂದು ಹೆಸರು.

ಆದರೆ ಈ ಸರ್ವೇಶ್ವರನೂ ಸತ್ಯಸಂಕಲ್ಪನೂ ಆದ ಭಗವಂತನಾದರೋ ಇಂಥ ಅಶುಭವಾದ ಜನ್ಮವನ್ನು ಕರ್ಮದಿಂದ ಪಡೆಯುವದಿಲ್ಲವಾದರೂ ಸ್ವೇಚ್ಛೆಯಿಂದ ತನ್ನದೇ ಆಗಿರುವ ನಿರತಿಶಯಕಲ್ಯಾಣರೂಪದಿಂದ ದೇವಾದಿಗಳೊಳಗೆ ಜಗತ್ತಿನ ಉಪಕಾರಕ್ಕಾಗಿ ಬಹುಪ್ರಕಾರದಿಂದ ಹುಟ್ಟುತ್ತಿರುತ್ತಾನೆ. ಆ ಇವನಿಗೆ ಅಶುಭವಾದ ಜನ್ಮವನ್ನು (ಕರ್ಮದಿಂದ) ಪಡೆಯದಿದ್ದರೂ ತನ್ನ ಕಲ್ಯಾಣಗುಣಗಳು ಅನಂತವಾಗಿರುವದರಿಂದ 'ಬಹುಧಾ ಯೋನಿಯನ್ನು' ಎಂದರೆ ಬಹುಪ್ರಕಾರವಾದ ಜನ್ಮವಾಗುವದೆಂಬುದನ್ನು ಧೀರರು, ಧೀಮಂತರ ಅಗ್ರೇಸರರು, ಬಲ್ಲರು ಎಂದು (ಶ್ರುತಿಗೆ) ಅರ್ಥ.

(ಸೂತ್ರಕಾರವಚನ) : ಆ ಈ ಅಖಿಲಜಗತ್ತಿಗೂ ನಿಮಿತ್ತವೂ ಉಪಾದಾನವೂ ಆಗಿರುವ, 'ಜನ್ಮಾದ್ಯಸ್ಯಯತಃ' (ಈ ಜಗತ್ತಿನ ಜನ್ಮಾದಿಗಳು ಯಾವದರಿಂದ ಆಗುವವೋ ವೇ.ಸೂ.೧-೧-೨), 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್' (ಪ್ರಕೃತಿಯೂ ಆಗಿರುತ್ತಾನೆ ; ಏಕೆಂದರೆ ಹಾಗೆಂದರೆ ಮಾತ್ರ ಪ್ರತಿಜ್ಞೆ ದೃಷ್ಟಾಂತ-ಇವುಗಳಿಗೆ ಅವಿರೋಧವಾಗುತ್ತದೆ, ವೇ.ಸೂ.೧-೪-೨೩) ಮುಂತಾದ ಸೂತ್ರಗಳಲ್ಲಿ[1] ಪ್ರತಿಪಾದಿತನಾಗಿರುವ, **ಪರಬ್ರಹ್ಮವಾದ ಪರಮಪುರುಷನಿಗಿಂತ ಮತ್ತೆ ಬೇರೆ ಯಾರಿಗೂ ಪರತರತ್ವವಿದೆಯೆಂದು 'ಪರಮತಃ ಸೇತೂನ್ಮಾನಸಂಬನ್ಧಭೇದವ್ಯಪ**

---

1. ಜನ್ಮಸ್ಥಿತಿಲಯಗಳಿಗೆ ಕಾರಣವೆಂದದ್ದರಿಂದ ಪರಬ್ರಹ್ಮವು ಜಗತ್ತಿಗೆ ಉಪಾದಾನವೂ ನಿಮಿತ್ತವೂ ಆಗಿದೆ ಎಂದು ಹೇಳಿದಂತೆ ಆಗಿದೆ ; 'ಪ್ರಕೃತಿಶ್ಚ' ಮುಂತಾದ ಸೂತ್ರಗಳಲ್ಲಿ ಹಾಗೆಂದು ಪ್ರತಿಪಾದಿಸಿಯೂ ಇರುತ್ತದೆ - ಎಂದರ್ಥ. **ಇಲ್ಲಿ ಪರಾಮರ್ಶಿಸಿರುವ ಸೂತ್ರಗಳ ಅಭಿಪ್ರಾಯವೇನೆಂದರೆ** : 'ಯಾವದನ್ನು ಅರಿತರೆ ಎಲ್ಲವನ್ನೂ ಅರಿತಂತಾಗುವದೋ ಆ ಆದೇಶವನ್ನುಕೇಳಿದೆಯೋ?' ಎಂಬ (ಛಾಂ. ೬-೧-೩) ವಾಕ್ಯದಲ್ಲಿ ಪ್ರಶಾಸಕನಾದ ಪರಮಾತ್ಮನನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತಂತೆ ಎಂಬ ಪ್ರತಿಜ್ಞೆಯಿದೆ; ಮಣ್ಣು ಮಣ್ಣಿನ ಕಾರ್ಯ - ಇವುಗಳ ದೃಷ್ಟಾಂತವನ್ನು ಶ್ರುತಿಯಲ್ಲಿ ಹೇಳಿದೆ. ಆದ್ದರಿಂದ ಬ್ರಹ್ಮವು ಉಪಾದಾನವೂ ಆಗಿದೆ (ಸೂ. ೧-೪-೨೩) ; ನಿಮಿತ್ತಕಾರಣವಾದ ಆಲೋಚನಾಕರ್ತೃವಾದ ಸದ್ಬ್ರಹ್ಮವು ಬಹುವಾಗುವೆನು ಎಂದು ಸಂಕಲ್ಪಿಸಿತೆಂದು ಹೇಳಿರುವದರಿಂದ ಆದು ಉಪಾದಾನಕಾರಣವೆಂದಾಗುತ್ತದೆ (ಸೂ. ೧-೪-೨೪) ; ಬ್ರಹ್ಮವೇ ವನವು, ಬ್ರಹ್ಮವೇ ವೃಕ್ಷವು, ಬ್ರಹ್ಮವೇ ಭುವನಗಳಿಗೆ ಅಧಿಷ್ಠಾತೃವಾಗಿದೆ - ಎಂಬ ವಾಕ್ಯದಲ್ಲಿ ನಿಮಿತ್ತೋಪಾದಾನಕಾರಣಗಳೆರಡೂ ಬ್ರಹ್ಮವೇ ಎಂದು ಹೇಳಿದೆ(ಸೂ.೧-೪-೨೫). ಅವನು ಕಾಮಿಸಿದನು ಎಂದುಹೇಳಿರುವ ಬ್ರಹ್ಮವು ತನ್ನನ್ನೇ ರೂಪಾಂತರದಿಂದ ಮಾಡಿಕೊಂಡಿತು ಎಂದು **ತೈತ್ತಿರೀಯಶ್ರುತಿಯಲ್ಲಿ** ಹೇಳಿರುವದರಿಂದ ಉಪಾದಾನಕಾರಣವೂ ಆಗಿದೆ ಎಂದಾಗುತ್ತದೆ(ಸೂ.೧-೪-೨೬) ; ಬ್ರಹ್ಮವು ಪರಿಣಾಮವಾಗುವದೆಂದು ಹೇಳಿರುವದು ಬ್ರಹ್ಮಕ್ಕೆ ದೋಷವನ್ನುಂಟುಮಾಡುವದಿಲ್ಲ (ಸೂ. ೧-೪-೨೭) ; ಬ್ರಹ್ಮವು 'ಭೂತಯೋನಿ' ಎಂದಿರುವದರಿಂದ ಆದು ಉಪಾದಾನವೂ ಆಗಿದೆ (ಸೂ.೧-೪-೨೮).

ದೇಶೇಭ್ಯಃ' (ಈ ಉಭಯಲಿಂಗವಾದ ಬ್ರಹ್ಮಕ್ಕಿಂತ ಪರತರವಾದದ್ದೊಂದಿದೆ ; ಏಕೆಂದರೆ ಸೇತು, ಪರಿಮಿತಿ, ಸಂಬಂಧ, ಭೇದ- ಇವುಗಳನ್ನು ಹೇಳಿರುತ್ತದೆ; ವೇ.ಸೂ.೩-೨-೩೦) ಎಂದು ಶಂಕಿಸಿ 'ಸಾಮಾನ್ಯಾತ್ತು' (ಸೇತುಸಾಮಾನ್ಯದಿಂದ ಸೇತುವೆಂದು ಹೇಳಿರುವದರಿಂದ ಹಾಗಲ್ಲ, ವೇ.ಸೂ.೩-೨-೩೧), 'ಬುದ್ಧ್ಯರ್ಥಃ ಪಾದವತ್' (ಪಾದಕಥನವು ವಾಗಾದಿಪಾದವ್ಯಪದೇಶದಂತೆ ಉಪಾಸನೆಗಾಗಿ ಹೇಳಿದ್ದು, ವೇ.ಸೂ. ೩-೨-೩೨) 'ಸ್ಥಾನವಿಶೇಷಾತ್ ಪ್ರಕಾಶಾದಿವತ್' (ವಾಗಾದಿ ಸ್ಥಾನ ವಿಶೇಷದಿಂದ ಪರಿಮಿತತ್ವವು ಆಗಬಹುದು, ಪ್ರಕಾಶಾದಿಗಳಂತೆಯೇ ಇದು, ವೇ.ಸೂ.೩-೨-೩೩), 'ಉಪಪತ್ತೇಶ್ಚ' (ಪ್ರಾಪ್ಯನಾದ ಪರಮಪುರುಷನಿಗೆ ಅವನೇ ಉಪಾಯನಾಗಬಹುದಾದ್ದರಿಂದ ಪ್ರಾಪ್ಯಪ್ರಾಪಕಸಂಬಂಧವ್ಯಪದೇಶವಾಗಬಹುದು, ವೇ.ಸೂ.೩-೨-೩೪), 'ತಥಾಽನ್ಯಪ್ರತಿಷೇಧಾತ್' (ಅವನಿಗಿಂತಲೂ ಅನ್ಯನು ಪರನಲ್ಲವೆಂದು ಅಲ್ಲಗಳೆದಿರುವದರಿಂದ ಭೇದವ್ಯಪದೇಶವಿಲ್ಲ, ವೇ.ಸೂ.೩-೨-೩೫), 'ಅನೇನ ಸರ್ವಗತತ್ವಮಾಯಾಮಶಬ್ದಾದಿಭ್ಯಃ' (ಈ ಬ್ರಹ್ಮದಿಂದ ಸರ್ವ ಜಗತ್ತು ವ್ಯಾಪ್ತವಾಗಿದೆಯೆಂದು ಆಯಾಮಶಬ್ದವೇ ಮುಂತಾದವುಗಳಿಂದ ಗೊತ್ತಾಗುತ್ತದೆ, ವೇ.ಸೂ.೩-೨-೩೬)[1] ಎಂದು **ಸೂತ್ರಕಾರನು ತಾನೇ ನಿರಾಕರಿಸಿರುತ್ತಾನೆ.**

---

1. **ಇಲ್ಲಿ ಉದಾಹೃತವಾಗಿರುವ ಸೂತ್ರಗಳ ಅಭಿಪ್ರಾಯವೇನೆಂದರೆ** : ಶ್ರುತಿಯಲ್ಲಿ ಬ್ರಹ್ಮವನ್ನು ಸೇತುವೆಂದು ಕರೆದಿರುವದು, ಚತುಷ್ಪಾದಗಳುಳ್ಳದ್ದು ಎಂದು ಮುಂತಾಗಿ ಆಳತೆಯನ್ನು ಹೇಳಿರುವದು, 'ಅಮೃತಕ್ಕೆ ಸೇತು' ಎಂದು ಪ್ರಾಪ್ಯಪ್ರಾಕತ್ವಸಂಬಂಧವನ್ನು ಹೇಳಿರುವದು, ಇದಕ್ಕಿಂತ ಬೇರೆಯಾಗಿ ಪರಾತ್ಪರವಸ್ತುವನ್ನು ಹೇಳಿರುವದು- ಈ ಕಾರಣಗಳಿಂದ ಪರಬ್ರಹ್ಮಕ್ಕಿಂತ ಹೆಚ್ಚಿನ ಪರಾತ್ಪರತತ್ತ್ವವಿದೆ ಎಂದು ಪೂರ್ವಪಕ್ಷ (ಸೂ. ೩-೨-೩೦) ; ಸೇತುವೆಂಬುದು ಒಂದನ್ನೊಂದರೊಡನೆ ಬೆರಕೆಯಾಗದಂತೆ ಮಾಡುವ ಆಣೆಕಟ್ಟಿನ ಹೋಲಿಕೆಯಿಂದ ಚಿದಚಿದ್ವಸ್ತುಗಳನ್ನು ಬೆರಕೆಯಾಗದಂತೆ ಹಿಡಿದಿಟ್ಟುಕೊಂಡಿದೆ ಎಂಬ ಕಾರಣದಿಂದ (ಸೂ. ೩-೨-೩೧) ; ಆಳತೆಯನ್ನು ಹೇಳಿರುವದು 'ವಾಕ್ಪಾದಃ' ಮುಂತಾದ ವಾಕ್ಯಗಳಲ್ಲಿ ಹೇಳಿರುವಂತೆ ಉಪಾಸನೆಗಾಗಿ, ಆದ್ದರಿಂದ ಅದು ಪರಿಚ್ಛಿನ್ನವೆಂದೇನೂ ಆಗುವದಿಲ್ಲ (ಸೂ. ೩-೨-೩೨) ; ಕಿಟಕಿಯೇ ಮುಂತಾದ ಸ್ಥಾನಭೇದಗಳಿಂದ ಪ್ರಕಾಶ, ಆಕಾಶ- ಮುಂತಾದವುಗಳನ್ನು ಪರಿಚ್ಛಿನ್ನವೆಂದು ಎಣಿಸುವಂತೆ, ಬ್ರಹ್ಮವನ್ನು ವಾಗಾದಿಸ್ಥಾನರೂಪವಾದ ಉಪಾಧಿಗಳಿಂದ ಪರಿಚ್ಛಿನ್ನವೆಂದು ಎಣಿಸಬಹುದಾಗಿದೆ (ಸೂ. ೩-೨-೩೩) ; ಪರಮಾತ್ಮನೇ ತನ್ನ ಪ್ರಾಪ್ತಿಗೆ ಉಪಾಯವಾಗಿರಬಹುದಾದ್ದರಿಂದ ಪ್ರಾಪ್ಯಪ್ರಾಪಕಸಂಬಂಧವನ್ನು ಹೇಳಿದ್ದು, ಮತ್ತೊಂದು ಪರತತ್ತ್ವವಿದೆಯೆನ್ನುವದಕ್ಕಲ್ಲ (ಸೂ. ೩-೨-೩೪) ; ಭೇದವನ್ನು ಹೇಳಿರುವ ಕಡೆಯಲ್ಲಿಯೇ ಅದಕ್ಕಿಂತ ಮತ್ತೊಂದು ಪರತತ್ತ್ವವಿಲ್ಲವೆಂದು ಹೇಳಿಬಿಟ್ಟಿದೆ (ಸೂ.೩-೨-೩೫) ; ಅವನಿಂದ ಎಲ್ಲವೂ ಪೂರ್ಣವಾಗಿದೆ- ಎಂದು ಮುಂತಾಗಿ ಶ್ರುತಿವಚನಗಳಿರುವದರಿಂದ ಈ ಬ್ರಹ್ಮಕ್ಕಿಂತ ಪರತರವಾದ ತತ್ತ್ವವಿಲ್ಲವೆಂದು ಗೊತ್ತಾಗುತ್ತದೆ (ಸೂ. ೩-೨-೩೬). ಈ ಸೂತ್ರ ಭಾಗದ ಹೆಚ್ಚಿನ ವಿವರವನ್ನು **ಶ್ರೀಭಾಷ್ಯ** ಮತ್ತು ಅದರ ವ್ಯಾಖ್ಯಾನಗಳಿಂದ ತಿಳಿದುಕೊಳ್ಳಬೇಕು.

ಮಾನವ(ಧರ್ಮ)ಶಾಸ್ತ್ರದಲ್ಲಿಯೂ 'ತಮಸ್ಸನ್ನು ಪ್ರೇರಿಸುವವನಾದ (ಪರಮಾತ್ಮನು) ಆವಿರ್ಭೂತನಾದನು' (ಮನು.೧-೬)[1], 'ನಾನಾಪ್ರಕಾರವಾದ ಪ್ರಜೆಗಳನ್ನು ಸೃಷ್ಟಿಮಾಡಲೆಳಸಿದವನಾಗಿ, ಮೊದಲು ಅಪ್ಪನ್ನೇ ಸೃಷ್ಟಿಸಿದನು, ಅದರಲ್ಲಿ ವೀರ್ಯವನ್ನು ಬಿಟ್ಟನು' (ಮನು.೧-೮), 'ಆ (ಅಂಡ)ದಲ್ಲಿ ಬ್ರಹ್ಮನು ತಾನೇ ಹುಟ್ಟಿದನು' (ಮನು.೧-೯) ಎಂದು ಬ್ರಹ್ಮನಿಗೆ ಜನ್ಮವನ್ನು ಹೇಳಿರುವದರಿಂದ[2] ಅವನು ಕ್ಷೇತ್ರಜ್ಞನೇ ಎಂದು ನಿಶ್ಚಿತವಾಗುತ್ತದೆ. ಆದ್ದರಿಂದಲೇ ಸ್ರಷ್ಟೃವಾದ ಪರಮಪುರುಷನನ್ನೂ ಅವನಿಂದ ವಿಸೃಷ್ಟನಾದ ಬ್ರಹ್ಮನನ್ನೂ 'ಅವನಿಗೆ ಅವು ಮೊದಲು ಅಯನವಾಗಿದ್ದವು, ಆದ್ದರಿಂದ **ನಾರಾಯಣ**ನೆನಿಸಿರುತ್ತಾನೆ' (ಮನು.೧-೧೦), 'ಆ (ಬ್ರಹ್ಮದಿಂದ) ವಿಸೃಷ್ಟನಾದ ಆ ಪುರುಷನು ಲೋಕದಲ್ಲಿ **ಬ್ರಹ್ಮ**ನೆನಿಸಿಕೊಂಡಿರುತ್ತಾನೆ' (ಮನು.೧-೧೧) ಎಂದು ಹೆಸರಿಟ್ಟು ತಿಳಿಸಿರುವದರಿಂದಲೂ (ಅವನು ಕ್ಷೇತ್ರಜ್ಞನೆಂದು ನಿಶ್ಚಯವಾಗುತ್ತದೆ). ಆದ್ದರಿಂದಲೇ ವೈಷ್ಣವಪುರಾಣದಲ್ಲಿ ಹಿರಣ್ಯಗರ್ಭನೇ ಮುಂತಾದ ಭಾವನಾತ್ರಯವು ಅನುಗತವಾಗಿರುವದರಿಂದ ಅಶುದ್ಧರಾಗಿರುವದರಿಂದ ಶುಭಾಶ್ರಯರೆಂಬುದಕ್ಕೆ ತಕ್ಕವರಲ್ಲವೆಂದು ಉಪಪತ್ತಿಯನ್ನು ಹೇಳಿರುವದರಿಂದ (ಅವರು) ಕ್ಷೇತ್ರಜ್ಞರೆಂದೇ ನಿಶ್ಚಯವಾಗಿರುತ್ತದೆ.

ಕರ್ಮದ ಫಲವು ನಾರಾಯಣನಿಂದಲೇ, ಪ್ರಾಭಾಕರರು ಹೇಳುವ ನಿಯೋಗದಿಂದಲ್ಲ

ಸಿದ್ಧವಸ್ತುವನ್ನೂ ಶಬ್ದವು ತಿಳಿಸಬಹುದು

(ಮೂಲ)

೭೫. ಯದಪಿ ಕೈಶ್ಚಿದುಕ್ತಮ್, ಸರ್ವಸ್ಯ ಶಬ್ದಜಾತಸ್ಯ ವಿಧ್ಯರ್ಥವಾದ ಮನ್ತ್ರರೂಪಸ್ಯ ಕಾರ್ಯಾಭಿಧಾಯಿತ್ವೇನೈವ ಪ್ರಾಮಾಣ್ಯಂ ವರ್ಣನೀಯಮ್ । ವ್ಯವಹಾರಾದನ್ಯತ್ರ ಶಬ್ದಸ್ಯ ಬೋಧಕತ್ವಶಕ್ತ್ಯವಧಾರಣಾಸಂಭವಾತ್ ವ್ಯವಹಾರಸ್ಯ ಚ ಕಾರ್ಯಬುದ್ಧಿಮೂಲಕತ್ವಾತ್, ಕಾರ್ಯರೂಪ ಏವ ಶಬ್ದಾರ್ಥಃ[3], ನ ಪರಿನಿಷ್ಪನ್ನೇ ವಸ್ತುನಿ ಶಬ್ದಃ ಪ್ರಮಾಣಮಿತಿ । ಅತ್ರೋಚ್ಯತೇ । ಪ್ರವರ್ತಕ ವಾಕ್ಯವ್ಯವಹಾರ ಏವ ಶಬ್ದಾನಾಮ್ ಅರ್ಥಬೋಧಕತ್ವಶಕ್ತ್ಯವಧಾರಣಂ ಕರ್ತವ್ಯಮಿತಿ ಕಿಮಿಯಂ ರಾಜಾಜ್ಞಾ? ಸಿದ್ಧವಸ್ತುಷು ಶಬ್ದಸ್ಯ ಬೋಧಕತ್ವಶಕ್ತಿ ಗ್ರಹಣಮ್ ಅತ್ಯನ್ತಸುಕರಮ್ ।

---

1. ಇಲ್ಲಿರುವ ಸ್ವಯಂಭೂಶಬ್ದವೂ ನಾರಾಯಣಪರವೆಂದು ಭಾವ.
2. ಇದು ತಾನೇ ಅವತರಿಸಿದನೆಂಬುದಕ್ಕೆ ಅಡ್ಡಿಯಾಗಿರುವದರಿಂದ ಎಂದರ್ಥ.
3. 'ವೇದಾರ್ಥಃ' ಕಾ॥

ತಥಾ ಹಿ । ಕೇನಚಿತ್ ಹಸ್ತಚೇಷ್ಟಾದಿನಾ ಅಪವರಕೇ ದಣ್ಡಃ ಸ್ಥಿತಃ ಇತಿ ದೇವದತ್ತಾಯ ಜ್ಞಾಪಯ ಇತಿ ಪ್ರೇಷಿತಃ ಕಶ್ಚಿತ್ ತಜ್ಜ್ಞಾಪನೇ ಪ್ರವೃತ್ತಃ 'ಅಪವರಕೇ ದಣ್ಡಃ ಸ್ಥಿತಃ' ಇತಿ ಶಬ್ದಂ ಪ್ರಯುಜ್ಯೈ ಮೂಕವತ್ ಹಸ್ತಚೇಷ್ಟಾಮಿಮಾಂ ಜಾನನ್ ಪಾರ್ಶ್ವಸ್ಥೋಽನ್ಯಃ ಪ್ರಾಗವ್ಯುತ್ಪನ್ನೋಽಪಿ ಏತಸ್ಯಾರ್ಥಸ್ಯ ಬೋಧನಾಯ 'ಅಪವರಕೇ ದಣ್ಡಃ ಸ್ಥಿತಃ' ಇತ್ಯಸ್ಯ ಶಬ್ದಸ್ಯ ಪ್ರಯೋಗದರ್ಶನಾತ್ ಅಸ್ಯಾರ್ಥಸ್ಯ ಅಯಂ ಶಬ್ದೋ ಬೋಧಕಃ ಇತಿ ಜಾನಾತೀತಿ ಕಿಮತ್ರ ದುಷ್ಕರಮ್ ? ತಥಾ ಬಾಲಃ 'ತಾತೋಽಯಮ್', 'ಇಯಮಮ್ಬಾ',[1] 'ಅಯಂ ಮಾತುಲಃ', 'ಅಯಂ ಮನುಷ್ಯಃ', 'ಅಯಂ ಮೃಗಃ', 'ಚನ್ದ್ರೋಽಯಮ್', 'ಅಯಂ ಚ ಸರ್ಪಃ' ಇತಿ ಮಾತಾಪಿತೃಪ್ರಭೃತಿಭಿಃ ಶಬ್ದೈಃ ಶನೈಃ ಶನೈರಙ್ಗುಲ್ಯಾ ನಿರ್ದೇಶೇನ ತತ್ರ ತತ್ರ ಬಹುಶಃ ಶಿಕ್ಷಿತಸ್ತೈರೇವ ಶಬ್ದೈಸ್ತೇಷ್ವರ್ಥೇಷು ಸ್ವಾತ್ಮನಶ್ಚ ಬುದ್ಧ್ಯುತ್ಪತ್ತಿಂ ದೃಷ್ಟ್ವಾ ತೇಷ್ವರ್ಥೇಷು ತೇಷಾಂ ಶಬ್ದಾನಾಮ್ ಅಙ್ಗುಲ್ಯಾ ನಿರ್ದೇಶಪೂರ್ವಕಪ್ರಯೋಗಃ ಸಂಬನ್ಧಾನ್ತರಾಭಾವಾತ್ ಸಂಕೇತಯಿತೃಪುರುಷಾಜ್ಞಾನಾಚ್ಚ ಬೋಧಕತ್ವನಿಬನ್ಧನಃ ಇತಿ ಕ್ರಮೇಣ ನಿಶ್ಚಿತ್ಯ, ಪುನರಪ್ಯಸ್ಯ ಶಬ್ದಸ್ಯ ಅಯಮರ್ಥ ಇತಿ ಪೂರ್ವವೃದ್ಧೈಃ ಶಿಕ್ಷಿತಃ ಸರ್ವಶಬ್ದಾನಾಮ್ ಅರ್ಥಮವಗಮ್ಯ ಸ್ವಯಮಪಿ ಸರ್ವಂ ವಾಕ್ಯಜಾತಂ ಪ್ರಯುಜ್ಯೈ । ಏವಮೇವ ಸರ್ವಪದಾನಾಂ ಸ್ವಾರ್ಥಾಭಿಧಾಯಿತ್ವಂ ಸಜ್ಜಾತವಿಶೇಷಾಣಾಂ ಚ ಯಥಾವಸ್ಥಿತಸಂಸರ್ಗವಿಶೇಷಬೋಧಕತ್ವಂ ಚ ಜಾನಾತೀತಿ ಕಾರ್ಯಾರ್ಥ ಏವ ವ್ಯುತ್ಪತ್ತಿರಿತ್ಯಾದಿನಿರ್ಬನ್ಧೋ ನಿರ್ನಿಬನ್ಧನಃ । ಅತಃ ಪರಿನಿಷ್ಪನ್ನೇ ವಸ್ತುನಿ ಶಬ್ದಸ್ಯ ಬೋಧಕತ್ವಶಕ್ಯವಧಾರಣಾತ್ ಸರ್ವಾಣಿ ವೇದಾನ್ತವಾಕ್ಯಾನಿ ಸಕಲಜಗತ್ಕಾರಣಂ ಸರ್ವಕಲ್ಯಾಣಗುಣಾಕರಮ್ ಉಕ್ತಲಕ್ಷಣಂ ಬ್ರಹ್ಮ ಬೋಧಯನ್ತ್ಯೇವ ॥

(ಅರ್ಥ)

ಇನ್ನು **ಕೆಲವರು**[3] ಹೀಗೆನ್ನುತ್ತಾರೆ : ವಿಧಿ, ಅರ್ಥವಾದ, ಮಂತ್ರ[4]- ಈ ರೂಪವಾಗಿರುವ (ವೇದ)ಶಬ್ದಜಾತವೆಲ್ಲವೂ **ಕಾರ್ಯವನ್ನು** ಹೇಳುವದರಿಂದಲೇ ಪ್ರಮಾಣವೆಂದುಹೇಳಬೇಕು. ಏಕೆಂದರೆ ವ್ಯವಹಾರವಿಲ್ಲದೆ ಶಬ್ದಕ್ಕೆ ಬೋಧಕತ್ವ ಶಕ್ತಿಯಿದೆ ಎಂದು ನಿಶ್ಚಯಿಸುವದಕ್ಕೆ ಆಗುವದಿಲ್ಲ ; ವ್ಯವಹಾರವೂ ಕಾರ್ಯಬುದ್ಧಿ

---

1. 'ಇಯಂ ಮಾತಾ' ಕಾ॥ 2. 'ವಾಚಿತ್ವಂ' ಕಾ॥

3. ಕರ್ಮಕ್ಕೆ ಫಲವು ಕಾರ್ಯ, ನಿಯೋಗ, ಅಪೂರ್ವ- ಎಂಬ ಹೆಸರಿನ ಅದೃಷ್ಟತತ್ತ್ವದಿಂದಾಗುತ್ತದೆ ಎಂಬ ಪ್ರಾಭಾಕರರ ಮತವನ್ನು ಇಲ್ಲಿ ಖಂಡಿಸುವದಕ್ಕೆ ಪ್ರಾರಂಭಿಸಿರುವದು **ನಾರಾಯಣನೇ ಕರ್ಮಫಲದಾತೃವೆಂದು ಸ್ಥಾಪಿಸುವದಕ್ಕೆ.**

4. **ವಿಧಿ**ಯೆಂದರೆ ಇದನ್ನು ಮಾಡಬೇಕು- ಎಂದು ಹೇಳುವ ವಾಕ್ಯಗಳು ; **ಅರ್ಥವಾದ**ವೆಂದರೆ ಮಾಡಬೇಕಾದದ್ದನ್ನು ಹೊಗಳುವ ವಾಕ್ಯಗಳು ; **ಮಂತ್ರ**ಗಳೆಂದರೆ ಕರ್ಮಗಳಲ್ಲಿ ಉಚ್ಚರಿಸಬೇಕಾದ ವಾಕ್ಯಗಳು.

ಮೂಲಕವಾಗಿಯೇ (ಆಗುತ್ತದೆ)[1] ಯಾದ್ದರಿಂದ ಶಬ್ದಾರ್ಥವು ಕಾರ್ಯರೂಪ ವಾಗಿಯೇ ಇರುತ್ತದೆ ; (ಇಷ್ಟೇ ಹೊರತು) ಪರಿನಿಷ್ಪನ್ನವಸ್ತುವಿನಲ್ಲಿ[2] ಶಬ್ದವು ಪ್ರಮಾಣವಲ್ಲ.

ಇದಕ್ಕೆ (ನಾವು) ಹೀಗೆಂದು (ಉತ್ತರ) ಹೇಳುತ್ತೇವೆ : ಪ್ರವರ್ತಕವಾಕ್ಯ ವ್ಯವಹಾರದಲ್ಲಿಯೇ ಶಬ್ದಗಳಿಗೆ ಅರ್ಥಬೋಧಕಶಕ್ತಿಯಿದೆ ಎಂಬಿದೇನು ರಾಜಾಜ್ಞೆಯೇನು? **ಸಿದ್ಧವಸ್ತುಗಳಲ್ಲಿ(ಯೂ) ಶಬ್ದಕ್ಕೆ ಬೋಧಕತ್ವಶಕ್ತಿಯಿದೆ** ಎಂದು ತಿಳಿಯುವದು ಅತ್ಯಂತಸುಕರವಾಗಿರುತ್ತದೆ. ಹೇಗೆಂದರೆ, ಕೈಯಲುಗಾಡಿಸುವದೇ ಮುಂತಾದ್ದರಿಂದ 'ಕೋಲು ಕೋಣೆಯಲ್ಲಿದೆ ಎಂದು ದೇವದತ್ತನಿಗೆ ತಿಳಿಸು' ಎಂದು ಯಾರಿಂದಲೋ ಪ್ರೇರಿತನಾದವನೊಬ್ಬನು ಅದನ್ನು ತಿಳಿಸುವದಕ್ಕೆ ಹೊರಟು 'ಕೋಣೆಯಲ್ಲಿ ಕೋಲು ಇದೆ' ಎಂಬ ಶಬ್ದವನ್ನು ಪ್ರಯೋಗಿಸುತ್ತಾನೆ. ಮೂಕನಂತೆ ಈ ಹಸ್ತಚೇಷ್ಟೆಯನ್ನರಿತುಕೊಂಡು ಪಕ್ಕದಲ್ಲಿದ್ದ ಮತ್ತೊಬ್ಬನು ಮೊದಲು ವ್ಯುತ್ಪನ್ನನಲ್ಲದೆ ಇದ್ದರೂ ಈ ವಿಷಯವನ್ನು ತಿಳಿಸಿಕೊಡುವದಕ್ಕಾಗಿ ಕೋಣೆಯಲ್ಲಿ ಕೋಲು ಇದೆ ಎಂಬೀ ಶಬ್ದವನ್ನು ಪ್ರಯೋಗಿಸಿರುವದನ್ನು ಕಂಡು 'ಈ ವಿಷಯವನ್ನು ಈ ಶಬ್ದವು ತಿಳಿಸುತ್ತದೆ' ಎಂದು ತಿಳಿದುಕೊಳ್ಳುತ್ತಾನೆಂಬುದರಲ್ಲಿ ಕಷ್ಟವಾದದ್ದು ಏನಿದೆ[3]? ಇದರಂತೆ ಹುಡುಗನು 'ಅಪ್ಪನಿವನು', 'ಅಮ್ಮನಿವಳು', 'ಇವನು ಮಾವನು', 'ಇವನು ಮನುಷ್ಯನು', 'ಇದು ಮೃಗವು', 'ಇದು ಚಂದ್ರ', 'ಇದು ಹಾವು' ಎಂದು ತಾಯಿ, ತಂದೆ - ಮುಂತಾದ ಶಬ್ದಗಳಿಂದ ಮೆಲ್ಲಮೆಲ್ಲಗೆ ಬೆರಳಿ ನಿಂದ ತೋರಿಸಿ ಅಲ್ಲಲ್ಲಿ ಬಹಳವಾಗಿ ತಿಳಿವಳಿಕೆ ಹೇಳಿದ ಮೇಲೆ ಅದೇ ಶಬ್ದಗಳಿಂದ ಆಯಾ ವಿಷಯಗಳಲ್ಲಿ ತನಗೂ ಬುದ್ಧಿಯು ಉಂಟಾಗುವುದನ್ನು ಕಂಡುಕೊಂಡು, ಆ ಅರ್ಥಗಳಲ್ಲಿ ಆಯಾ ಶಬ್ದಗಳನ್ನು ಬೆರಳಿನಿಂದ ತೋರಿಸಿ ಪ್ರಯೋಗಿಸಿರುವದು, ಮತ್ತೊಂದು ಸಂಬಂಧವಿಲ್ಲವಾದ್ದರಿಂದಲೂ ಆ ಹೆಸರನ್ನಿಟ್ಟು ಸಂಕೇತಮಾಡಿದ ಪುರುಷನು ತಿಳಿಯಬಾರದೆ ಇರುವರಿಂದಲೂ ಬೋಧಕತ್ವನಿಮಿತ್ತವಾದದ್ದು ಎಂದು ಕ್ರಮದಿಂದ ನಿಶ್ಚಯಿಸಿಕೊಂಡು ಮತ್ತೂ ಈ ಶಬ್ದಕ್ಕೆ ಇದು ಅರ್ಥವು ಎಂದು

---

1. ಶಬ್ದಗಳು ತಮ್ಮತಮ್ಮ ಅರ್ಥಗಳನ್ನು ಹೇಗೆ ಹೇಳುತ್ತವೆ ಎಂಬುದನ್ನು ವ್ಯವಹಾರದಿಂದಲೇ ತಿಳಿಯಬೇಕು ; ವ್ಯವಹಾರವು ಒಬ್ಬನು ಮತ್ತೊಬ್ಬನಿಗೆ 'ಇದನ್ನು ಮಾಡು, ಇದನ್ನು ಬಿಡು' ಎಂದು ಹೇಳುವದೇ ಆಗಿದೆ. ಆ ವ್ಯವಹಾರದಿಂದ ಶಬ್ದಗಳ ಅರ್ಥಗಳನ್ನು ಜನರು ಅರಿತುಕೊಳ್ಳುತ್ತಾರೆ. ಹೇಗೆಂದರೆ 'ಹಸುವನ್ನು ಇಲ್ಲಿಗೆ ಬರಮಾಡು, ಕುದುರೆಯನ್ನು ಅಲ್ಲಿ ಕಟ್ಟಿಹಾಕು'- ಎಂದಾಗ ವಾಕ್ಯವನ್ನು ಕೇಳುವವನು ಮಾಡಿದ ಕೆಲಸದಿಂದ ಹಸು, ಕುದುರೆ - ಎಂಬ ಶಬ್ದಗಳಿಗೆ ಅರ್ಥವನ್ನು ತಿಳಿದುಕೊಳ್ಳುತ್ತಾನೆ- ಎಂಬುದು **ಪ್ರಾಭಾಕರನ ಮತ.**
2. ಸಿದ್ಧವಸ್ತುವಿನಲ್ಲಿ ಎಂದರ್ಥ ; ಕರ್ತವ್ಯವನ್ನೇ ವೇದವು ಹೇಳುವದೇ ಹೊರತು ವಸ್ತುವನ್ನು ಪ್ರತಿಪಾದಿಸುವದಿಲ್ಲ ಎಂದು ಅಭಿಪ್ರಾಯ.
3. ಇಲ್ಲಿ ಕಾರ್ಯವನ್ನು ಹೇಳುವ ಶಬ್ದವು ಇಲ್ಲದಿದ್ದರೂ ಶಬ್ದಾರ್ಥಜ್ಞಾನವಿದೆಯಲ್ಲವೆ?

ಹಿರಿಯವರು ಹೇಳಿಕೊಡಲು ಎಲ್ಲಾ ಶಬ್ದಗಳಿಗೂ ಅರ್ಥವನ್ನು ಗೊತ್ತುಮಾಡಿಕೊಂಡು ತಾನೂ ಎಲ್ಲಾ ವಾಕ್ಯಸಮೂಹವನ್ನೂ ಪ್ರಯೋಗಿಸುತ್ತಾನೆ. ಹೀಗೆಯೇ ಸರ್ವಪದಾರ್ಥಗಳಿಗೂ ತಮ್ಮತಮ್ಮ ಅರ್ಥಕ್ಕೆ ವಾಚಕಗಳೆಂದೂ (ಪದ) ಸಂಘಾತ ವಿಶೇಷಗಳು ಹಾಗೆ ಇದ್ದುಕೊಂಡಿರುವ ಆಯಾ ಸಂಸರ್ಗವನ್ನು ತಿಳಿಸಿಕೊಡುವ ಶಕ್ತಿಯಿದೆಯೆಂದೂ ಅರಿತುಕೊಳ್ಳುತ್ತಾರೆ. ಆದ್ದರಿಂದ[1] ಕಾರ್ಯಾರ್ಥದಲ್ಲಿಯೇ (ಶಬ್ದಗಳ) ವ್ಯುತ್ಪತ್ತಿಯಾಗಬೇಕು ಎಂದು ಮುಂತಾಗಿ[2] ನಿರ್ಬಂಧ ಪಡಿಸುವದು ನಿಷ್ಕಾರಣವಾಗಿರುತ್ತದೆ. ಆದ್ದರಿಂದ **ಪರಿನಿಷ್ಪನ್ನವಾದ ವಸ್ತುವಿನಲ್ಲಿಯೂ ಶಬ್ದಕ್ಕೆ ಬೋಧಕಶಕ್ತಿಯಿದೆ ಎಂದು ಗೊತ್ತುಮಾಡಬಹುದಾದ್ದರಿಂದ ವೇದಾಂತವಾಕ್ಯಗಳೆಲ್ಲ ಸಕಲಜಗತ್ಕಾರಣನೂ ಸರ್ವಕಲ್ಯಾಣಗುಣಾಕರನೂ ಆದ ಹಿಂದೆ ಹೇಳಿದ ಲಕ್ಷಣವುಳ್ಳ ಬ್ರಹ್ಮವನ್ನು ತಿಳಿಸಿಯೇಕೊಡುತ್ತವೇ.**[3]

ಕಾರ್ಯಾರ್ಥದಲ್ಲಿಯೇ ಶಬ್ದಕ್ಕೆ ವ್ಯುತ್ಪತ್ತಿ ಎಂದರೂ ದೋಷವಿಲ್ಲ

(ಮೂಲ)

೭೬. ಅಪಿ ಚ ಕಾರ್ಯಾರ್ಥ ಏವ ವ್ಯುತ್ಪತ್ತಿರಸ್ತು । ವೇದಾನ್ತವಾಕ್ಯಾನ್ಯಪಿ ಉಪಾಸನಾವಿಷಯಕಾರ್ಯಾಧಿಕೃತವಿಶೇಷಣಭೂತಫಲತ್ವೇನ ದುಃಖಾಸಂಭಿನ್ನ ದೇಶವಿಶೇಷರೂಪಸ್ವರ್ಗಾದಿವತ್, ರಾತ್ರಿಸತ್ರಪ್ರತಿಷ್ಠಾವತ್,[4] ಅಪಗೋರಣ ಶತಯಾತನಾಸಾಧ್ಯಸಾಧನಭಾವವಚ್ಚ ಕಾರ್ಯೋಪಯೋಗಿತಯೈವ ಸರ್ವಂ ಬೋಧಯನ್ತಿ । ತಥಾ ಹಿ । 'ಬ್ರಹ್ಮವಿದಾಪ್ನೋತಿ ಪರಮ್' (ತೈ. ೨-೧-೧) ಇತ್ಯತ್ರ ಬ್ರಹ್ಮೋಪಾಸನವಿಷಯಕಾರ್ಯಾಧಿಕೃತವಿಶೇಷಣ ಭೂತಫಲತ್ವೇನ ಬ್ರಹ್ಮಪ್ರಾಪ್ತಿಃ ಶ್ರೂಯತೇ । ಪರಪ್ರಾಪ್ತಿಕಾಮೋ ಬ್ರಹ್ಮ ವಿದ್ಯಾದಿತಿ । ಅತ್ರ ಪ್ರಾಪ್ಯತಯಾ ಪ್ರತೀಯಮಾನಂ ಬ್ರಹ್ಮಸ್ವರೂಪಂ ತದ್ವಿಶೇಷಣಂ ಚ ಸರ್ವಂ ಕಾರ್ಯೋಪಯೋಗಿತಯೈವ ಸಿದ್ಧಂ ಭವತಿ । ತದನ್ತರ್ಗತಮೇವ ಜಗತಃ ಸ್ರಷ್ಟೃತ್ವಂ ಸಂಹರ್ತೃತ್ವಮಾಧಾರತ್ವಮ್ ಅನ್ತರಾತ್ಮತ್ವಮ್ ಇತ್ಯಾದ್ಯುಕ್ತಮ್ ಅನುಕ್ತಂ ಚ ಸರ್ವಮ್ ಇತಿ ನ ಕಿಂಚಿದನುಪಪನ್ನಮ್ । ಏವಂ ಚ ಸತಿ ಮನ್ತ್ರಾರ್ಥವಾದಗತಾ ಹಿ ಅವಿರುದ್ಧಾ ಅಪೂರ್ವಾಶ್ಚ ಅರ್ಥಾಃ ಸರ್ವೇ ವಿಧಿಶೇಷ ತಯೈವ ಸಿದ್ಧಾ ಭವನ್ತಿ । ಯಥೋಕ್ತಂ ದ್ರಮಿಡಭಾಷ್ಯೇ 'ಋಣಂ ಹಿ ವೈ ಜಾಯತೇ - ಇತಿ ಶ್ರುತೇಃ' (ಶತ. ಬ್ರಾ.

---

1. ಹೀಗೆ ಕೈಸನ್ನೆಯೇ ಮುಂತಾದವುಗಳ ಮೂಲಕ ಆಡಿದ ಮಾತುಗಳಿಂದಲೂ ಶಬ್ದಾರ್ಥವನ್ನು ತಿಳಿದುಕೊಳ್ಳುತ್ತಾರಾದ್ದರಿಂದ.
2. ಸರ್ವಶಬ್ದಗಳೂ ಕಾರ್ಯಪರವೇ, ವೇದವು ಕಾರ್ಯಪರವೇ- ಎಂದು ನಿರ್ಬಂಧಗಳನ್ನು ಮುಂತಾದ ಎಂಬ ಶಬ್ದದಿಂದ ಗ್ರಹಿಸಬೇಕು.
3. ಕಾರ್ಯರೂಪವಾದ ಅರ್ಥವನ್ನೇ ವೇದವಾಕ್ಯಗಳು ಹೇಳಬೇಕೆಂಬುದೇನೂ ಇಲ್ಲ.
4. 'ಪ್ರತಿಷ್ಠಾದಿವತ್' ಎಂಬ ತೆ॥ ಪಾಠದಲ್ಲಿ 'ಆದಿ' ಹೆಚ್ಚು.

೧-೭-೨-೧) ಇತ್ಯುಪಕ್ರಮ್ಯ 'ಯದ್ಯಪ್ಯವದಾನಸ್ತುತಿಪರಂ ವಾಕ್ಯಮ್, ತಥಾಪಿ ನಾऽಸತಾ ಸ್ತುತಿರುಪಪದ್ಯತೇ' (ದ್ರ.ಭಾ.) ಇತಿ । ಏತದುಕ್ತಂ ಭವತಿ । ಸರ್ವೋ ಹ್ಯರ್ಥವಾದಭಾಗೋ ದೇವತಾರಾಧನಭೂತಯಾಗಾದೇಃ ಸಾಙ್ಗಸ್ಯ ಆರಾಧ್ಯದೇವತಾ ಯಾಶ್ಚ ಅದೃಷ್ಟರೂಪಾನ್ ಗುಣಾನ್ ಸಹಸ್ರಶೋ ವದನ್ ಕರ್ಮಣಿ ಪ್ರಾಶಸ್ತ್ಯಬುದ್ಧಿಮ್ ಉತ್ಪಾದಯತಿ । ತೇಷಾಮ್ ಅಸದ್ಭಾವೇ ಪ್ರಾಶಸ್ತ್ಯಬುದ್ಧಿರೇವ ನ ಸ್ಯಾದಿತಿ ಕರ್ಮಣಿ ಪ್ರಾಶಸ್ತ್ಯಬುದ್ಧ್ಯರ್ಥಂ ಗುಣಸದ್ಭಾವಮೇವ ಬೋಧಯತೀತಿ । ಅನಯೈವ ದಿಶಾ ಸರ್ವೇ ಮನ್ತ್ರಾರ್ಥವಾದಗತಾಹ್ಯರ್ಥಾಃ ಸಿದ್ಧಾಃ ॥

(ಅರ್ಥ)

ಇಲ್ಲಿ ಕಾರ್ಯಾರ್ಥದಲ್ಲಿಯೇ (ಶಬ್ದ)ವ್ಯುತ್ಪತ್ತಿ ಎಂದಾಗಲಿ- ವೇದಾಂತವಾಕ್ಯಗಳೂ ಉಪಾಸನಾವಿಷಯವಾದ ಕಾರ್ಯದಲ್ಲಿ ಅಧಿಕೃತನಾದವನಿಗೆ ವಿಶೇಷಣವಾಗಿರುವ ಫಲವೆಂದು ದುಃಖಮಿಶ್ರವಲ್ಲದ ದೇಶವಿಶೇಷರೂಪವಾದ ಸ್ವರ್ಗವೇ ಮುಂತಾದವುಗಳಂತೆಯೂ[1] ರಾತ್ರಿಸತ್ರಪ್ರತಿಷ್ಠೆಯಂತೆಯೂ[2] ಅಪಗೋರಣಶತಯಾತನೆಗಳಿಗೆ ಸಾಧ್ಯಸಾಧನಭಾವದಂತೆಯೂ[3]- ಕಾರ್ಯಕ್ಕೆ ಉಪಯೋಗಿಯಾಗಿಯೇ ಎಲ್ಲವನ್ನೂ ಬೋಧಿಸುತ್ತವೆ.[4] ಹೇಗೆಂದರೆ 'ಪರಪ್ರಾಪ್ತಿ

---

1. 'ಸ್ವರ್ಗಕಾಮನು ಯಾಗವನ್ನು ಮಾಡಬೇಕು' ಎಂಬಲ್ಲಿ ಯಾಗಾದಿಗಳು ಕಾರ್ಯಕ್ಕೆ ವಿಷಯ ; ಅವುಗಳಿಂದ ಕಾರ್ಯವನ್ನುಂಟುಮಾಡುವ ಅಧಿಕಾರಿಗೆ ಸ್ವರ್ಗವೆಂಬ ಫಲವು ವಿಶೇಷಣವಾಗಿದೆ. ಸ್ವರ್ಗವೆಂಬುದು ಹೀಗೆ ವಿಶೇಷಣವಾಗಿ ವೇದಬೋಧಿತವಾಗಿರುತ್ತದೆ.
2. ರಾತ್ರಿಗಳೆಂದು ಕೆಲವು ಸೋಮಯಾಗಗಳ ಹೆಸರು. 'ಯಾರು ಈ ರಾತ್ರಿಗಳನ್ನು ಮಾಡುತ್ತಾರೋ ಅವರು ಪ್ರತಿಷ್ಠಿತರಾಗುವರು' ಎಂಬ ಶ್ರುತಿವಾಕ್ಯವು ಅರ್ಥವಾದವು. ಇಲ್ಲಿ ಪ್ರತಿಷ್ಠೆಯೆಂಬ ಫಲವನ್ನು ಅಧಿಕಾರಿಯಾದ ನಿಯೋಜ್ಯನಿಗೆ ವಿಶೇಷಣವೆಂದು ಅಂಗೀಕರಿಸಬೇಕೆಂದು ಜೈ ೪-೩-೧೮ರಲ್ಲಿ ನಿರ್ಣಯಿಸಿದೆ.
3. ಬ್ರಾಹ್ಮಣನನ್ನು ಧಿಕ್ಕರಿಸಬಾರದೆನ್ನುವದಕ್ಕೆ ಇಲ್ಲಿ ಅರ್ಥವಾದವಾಕ್ಯದಲ್ಲಿರುವ ಶತಯಾತನೆ ಎಂಬ ಫಲವನ್ನು ಅಧಿಕೃತವಿಶೇಷಣವಾಗಿ ಇಟ್ಟುಕೊಂಡಿದೆ ಎಂದರ್ಥ. ಇದನ್ನು ಮುಂದೆ **ದ್ರಮಿಡಭಾಷ್ಯ**ದಿಂದ ವಿವರಿಸಿದೆ.
4. (೧) 'ದುಃಖಮಿಶ್ರಿತವಲ್ಲದ ದೇಶವಿಶೇಷವು ಸ್ವರ್ಗವು' ಎಂಬ ಅಭಿಪ್ರಾಯವು ಜ್ಯೋತಿಷ್ಟೋಮವನ್ನು ವಿಧಿಸುವ ವಾಕ್ಯದಲ್ಲಿಲ್ಲ ; ಚಳಿ, ಸೆಕೆ, ದುಃಖ- ಮುಂತಾದವು ಸ್ವರ್ಗದಲ್ಲಿಲ್ಲ ಎಂಬ ಬೇರೊಂದು ಅರ್ಥವಾದದಿಂದ ಅದು ತಿಳಿಯಬರುತ್ತದೆ. (೨) ರಾತ್ರಿ ಸತ್ರವಿಧಿವಾಕ್ಯದಲ್ಲಿ ಫಲವನ್ನು ಹೇಳಿಲ್ಲ ; ಅರ್ಥವಾದದಲ್ಲಿ ಹೇಳಿರುವ ಪ್ರತಿಷ್ಠಾಫಲದ ಬಲದಿಂದ ವಿಧಿಶಕ್ತಿಯಿಂದ ಕಲ್ಪಿಸಬೇಕಾಗಿದ್ದ ಸ್ವರ್ಗಫಲವನ್ನು ಬಿಟ್ಟು ಪ್ರತಿಷ್ಠಾಫಲವನ್ನೇ ಇಲ್ಲಿ ಅಂಗೀಕರಿಸಿದೆ. (೩) ಬ್ರಾಹ್ಮಣಾಪಗೋರಣನಿಷೇಧ- ಬ್ರಾಹ್ಮಣನನ್ನು ಧಿಕ್ಕರಿಸಬಾರದೆಂಬ- ವಾಕ್ಯವು ಕಾರ್ಯವಿಧಿಯಲ್ಲದಿದ್ದರೂ ಶತಯಾತನೆ ಎಂಬ ಫಲವನ್ನು ಅರ್ಥವಾದ ಬಲದಿಂದ ಒಪ್ಪಿದೆ. ಇದರಂತೆಯೇ ಇಲ್ಲಿಯೂ ಆಗಬಹುದು ಎಂದು ಅಭಿಪ್ರಾಯ.

ಕಾಮನು ಬ್ರಹ್ಮವನ್ನು ಅರಿಯಬೇಕು' (ತೈ. ೨-೧) ಎಂಬಲ್ಲಿ ಬ್ರಹ್ಮೋಪಾಸನೆಗೆ ವಿಷಯವಾಗಿರುವ ಕಾರ್ಯದಲ್ಲಿ ಅಧಿಕೃತನಾದವನಿಗೆ ವಿಶೇಷಣವಾಗಿರುವ ಫಲ ವಾಗಿ ಪರಪ್ರಾಪ್ತಿಕಾಮನಾದವನು ಬ್ರಹ್ಮವನ್ನು ಅರಿಯಬೇಕು ಎಂದು ಬ್ರಹ್ಮಪ್ರಾಪ್ತಿ ಯನ್ನು ಶ್ರುತಿಯಲ್ಲಿ ಹೇಳಿದೆ. ಇಲ್ಲಿ ಪ್ರಾಪ್ಯವೆಂದು ತೋರುತ್ತಿರುವ ಬ್ರಹ್ಮಸ್ವರೂಪವೂ ಅದಕ್ಕೆ ವಿಶೇಷಣವೂ ಎಲ್ಲವೂ ಕಾರ್ಯಕ್ಕೆ ಉಪಯೋಗಿಯಾಗಿಯೇ ಸಿದ್ಧವಾಗುತ್ತದೆ. ಜಗತ್ತಿಗೆ ಸ್ರಷ್ಟೃತ್ವ , ಸಂಹರ್ತೃತ್ವ , ಆಧಾರತ್ವ , ಅಂತರಾತ್ಮತ್ವ - ಎಂಬಿವೇ ಮುಂತಾಗಿ ಹೇಳಿರುವ ಮತ್ತು ಹೇಳದೆ ಇರುವ ಎಲ್ಲವೂ ಅದರಲ್ಲಿಯೇ ಅಂತರ್ಗತವಾಗಿರುವದರಿಂದ ಯಾವದೂ ಅಯುಕ್ತವಾಗಿಲ್ಲ.[1] ಹೀಗಿರುವದರಿಂದ ಮಂತ್ರಾರ್ಥವಾದಗಳಲ್ಲಿರುವ, ಅವಿರುದ್ಧವಾದ ಅಪೂರ್ವಾರ್ಥಗಳೆಲ್ಲವೂ[2] ವಿಧಿಗೆ ಶೇಷವಾಗಿಯೇ ಸಿದ್ಧವಾಗುತ್ತವೆ.[3] ಹೀಗೆಂದು **ದ್ರಮಿಡಭಾಷ್ಯ**ದಲ್ಲಿ 'ಋಣಂ ಹಿ ವೈ ಜಾಯತೇ' (ಋಣವು ಉಂಟಾಗುತ್ತದೆಯಲ್ಲವೆ? ಶತ.ಬ್ರಾ. ೧-೭-೨-೧) ಎಂದು ಶ್ರುತಿಯಿರುವದರಿಂದ ಎಂದು ಉಪಕ್ರಮಿಸಿ '(ಈ) ವಾಕ್ಯವು ಅವದಾನ

---

1. ಪರ(ಬ್ರಹ್ಮ)ವನ್ನು ಪಡೆಯುತ್ತಾನೆ ಎಂಬ ಫಲಸಂಬಂಧದಿಂದ 'ಬ್ರಹ್ಮವಿದ್' ಎಂಬುದರಲ್ಲಿ ಉಪಾಸನೆಯನ್ನು ವಿಧಿಸಿದೆ ಎಂದು ಕಲ್ಪಿಸಬೇಕು. ಆದ್ದರಿಂದ ಬ್ರಹ್ಮೋಪಾಸನೆಗೆ ವಿಷಯವಾದ ಕಾರ್ಯ(ನಿಯೋಗ, ಅಥವಾ ಅಪೂರ್ವ)ವನ್ನುಂಟುಮಾಡುವದಕ್ಕೆ ಅಧಿಕಾರಿಯಾದವನಿಗೆ ಬ್ರಹ್ಮಪ್ರಾಪ್ತಿಯು ವಿಶೇಷಣವಾಗಿದೆ ; ಪರ(ಬ್ರಹ್ಮ)ಪ್ರಾಪ್ತಿಕಾಮನಾದವನು ಬ್ರಹ್ಮವನ್ನು ಉಪಾಸನೆಮಾಡಬೇಕು- ಎಂದು ಪ್ರಾಪ್ತಿಯು ಉಪಾಸಕನಿಗೆ ವಿಶೇಷಣವಾಗಿರುತ್ತದೆ. ಆ ಪ್ರಾಪ್ತಿಯಲ್ಲಿ ಬ್ರಹ್ಮವು ಸೇರಿಕೊಂಡಿದೆ ; ಆದ್ದರಿಂದ ಕಾರ್ಯಕ್ಕೋಸ್ಕರವೇ ಬ್ರಹ್ಮವೂ ಅದರ ಜಗತ್ಸ್ರಷ್ಟೃತ್ವಾದಿಗಳೂ ಸೇರಿಕೊಂಡಿವೆ. ಹೀಗೆ ಕಾರ್ಯಾರ್ಥವೇ ವೇದಾಂತವಾಕ್ಯಕ್ಕೂ ವ್ಯುತ್ಪತ್ತಿ ಎಂದೊಪ್ಪಿದರೂ ಬ್ರಹ್ಮವೂ ಅದರ ಧರ್ಮಗಳೂ ಸಿದ್ಧವಾಗುತ್ತವೆ ಎಂದು ಅಭಿಪ್ರಾಯ.

2. ಪರಪ್ರಾಪ್ತಿಕಾಮನು ಬ್ರಹ್ಮವನ್ನು ಉಪಾಸನೆಮಾಡಬೇಕು ಎಂದು ಆ ವಿಶೇಷಣದಲ್ಲಿ ಬ್ರಹ್ಮವೂ ಅದರ ವಿಶೇಷಣವೂ ಅಡಕವಾಗಿದೆ. ಅರ್ಥವಾದದಲ್ಲಿರುವ ಫಲವನ್ನು ಅಧಿಕಾರಿಗೆ ವಿಶೇಷಣವಾಗಿಟ್ಟುಕೊಂಡಿದೆ ; ಹೀಗೆಯೇ ಪ್ರಮಾಣಾಂತರದಿಂದ ಸಲ್ಲದ ಪ್ರಮಾಣಾಂತರಾ ಪ್ರಾಪ್ತವಾದದ್ದೆಲ್ಲವೂ ಮಂತ್ರಾರ್ಥವಾದಗಳಿಂದ ಸಿದ್ಧವಾಗುತ್ತದೆ.

3. ಹೀಗಿರುವದರಿಂದ ವಿಧಿಗೆ ಉಪಯುಕ್ತವಾಗುವ ಅರ್ಥಗಳೆಲ್ಲವನ್ನೂ ಒಪ್ಪಬೇಕಾಗಿರುವದರಿಂದ ಪ್ರಮಾಣಾಂತರವಿರುದ್ಧವಲ್ಲದ, ಪ್ರಮಾಣಾಂತರಸಿದ್ಧವೂ ಅಲ್ಲದ ಅರ್ಥಗಳೆಲ್ಲ ಮಂತ್ರಾರ್ಥವಾದಗಳಲ್ಲಿದ್ದರೂ ಕಾರ್ಯಕ್ಕೆ ಶೇಷವಾಗಿಯೇ ಒಪ್ಪಬೇಕು ಎಂದರ್ಥ.

ಸ್ತುತಿಪರವಾದರೂ,[1] ಇಲ್ಲದ್ದರಿಂದ ಸ್ತುತಿಮಾಡುವದು ಆಗಲಾರದು' ಎಂದು ಹೇಳಿರುತ್ತದೆ. (ಇಲ್ಲಿ) ಇಷ್ಟನ್ನು ಹೇಳಿದಂತೆ (ಆಗಿದೆ) : **ಅರ್ಥವಾದದ ಭಾಗ ವೆಲ್ಲವೂ ದೇವತಾರಾಧನವಾಗಿರುವ ಸಾಂಗಯಾಗಾದಿಗಳ ಮತ್ತು ಆರಾಧ್ಯವಾದ ದೇವತೆಯ ಅದೃಷ್ಟವಾದ ಗುಣಗಳನ್ನು ಸಾವಿರಗಟ್ಟಲೆಯಾಗಿ ಹೇಳುತ್ತಾ ಕರ್ಮದಲ್ಲಿ ಪ್ರಾಶಸ್ತ್ಯಬುದ್ಧಿಯನ್ನು ಉಂಟುಮಾಡುತ್ತಿದೆ. ಅವು ಇಲ್ಲದೆ ಇದ್ದರೆ (ಅಲ್ಲಿ) ಪ್ರಶಸ್ತವೆಂಬ ಬುದ್ಧಿಯೇ ಉಂಟಾಗಲಾರದಾದ್ದರಿಂದ ಕರ್ಮದಲ್ಲಿ ಪ್ರಾಶಸ್ತ್ಯ ಬುದ್ಧಿಯುಂಟಾಗುವದಕ್ಕಾಗಿ ಗುಣಗಳು ಇವೆಯೆಂದೇ ತಿಳಿಸುತ್ತದೆ** (ಎಂದು ಹೇಳಿದಂತಾಯಿತು). ಈ ರೀತಿಯಿಂದಲೇ[2] ಮಂತ್ರಗಳು, ಅರ್ಥವಾದಗಳು— ಇವುಗಳಲ್ಲಿರುವ ವಸ್ತುಗಳೆಲ್ಲವೂ ಸಿದ್ಧವಾಗಿರುತ್ತವೆ.

ಕಾರ್ಯವಾಕ್ಯಾರ್ಥವಾದದ ಖಂಡನೆ

ಕಾರ್ಯವು ಇಷ್ಟವಲ್ಲ

(ಮೂಲ)

೭೭. ಅಪಿ ಚ ಕಾರ್ಯವಾಕ್ಯಾರ್ಥವಾದಿಭಿಃ ಕಿಮಿದಂ ಕಾರ್ಯತ್ವಂ ನಾಮೇತಿ ವಕ್ತವ್ಯಮ್ । ಕೃತಿಭಾವಭಾವಿತಾ ಕೃತ್ಯುದ್ದೇಶ್ಯತಾ ಚ[3] ಇತಿ ಚೇತ್ । ಕಿಮಿದಂ ಕೃತ್ಯುದ್ದೇಶ್ಯತ್ವಮ್? ಯದಧಿಕೃತ್ಯ ಕೃತಿವರ್ತತೇ, ತತ್ ಕೃತ್ಯುದ್ದೇಶ್ಯತ್ವಮ್ ಇತಿ ಚೇತ್ । ಪುರುಷವ್ಯಾಪಾರರೂಪಾಯಾಃ ಕೃತೇಃ ಕೋಽಯಮಧಿಕಾರೋ ನಾಮ? ಯತ್ಪ್ರಾಪ್ತೀಚ್ಛಯಾ ಕೃತಿಮುತ್ಪಾದಯತಿ ಪುರುಷಃ, ತತ್ ಕೃತ್ಯುದ್ದೇಶ್ಯತ್ವಮ್ ಇತಿ ಚೇತ್ । ಹನ್ತ ತರ್ಹಿ ಇಷ್ಟತ್ವಮೇವ ಕೃತ್ಯುದ್ದೇಶ್ಯತ್ವಮ್ । ಅಥೈವಂ ಮನುಷ್ಯೇ, ಇಷ್ಟಸ್ಯೈವ ರೂಪದ್ವಯಮಸ್ತಿ । ಇಚ್ಛಾ ವಿಷಯತಯಾ ಸ್ಥಿತಿಃ, ಪುರುಷಪ್ರೇರಕತ್ವಂ ಚ ।

---

1. 'ಋಣಂ ಹ ವೈ ಜಾಯತೇ ಯೋಽಸ್ತಿ । ಸ ಜಾಯಮಾನ ಏವ ದೇವೇಭ್ಯ ಋಷಿಭ್ಯಃ ಪಿತೃಭ್ಯೋ ಮನುಷ್ಯೇಭ್ಯಃ' (ಶತ. ಬ್ರಾ. ೧-೭-೨-೧) ಎಂದು ಪ್ರಾರಂಭಿಸಿ 'ಅಥ ಯದೇವ ವಾಸಯೇತ.... ಸ ಯ ಏತಾನಿ ಸರ್ವಾಣಿ ಕರೋತಿ ಸ ಕೃತಕರ್ಮಾ। ತಸ್ಯ ಸರ್ವ ಮಾಪ್ತಂ ಸರ್ವಂ ಜಿತಮ್' (ಶತ. ಬ್ರಾ. ೧-೭-೨-೫) ಎಂಬವರೆಗಿನ ಮಂತ್ರದಿಂದ ಋಣತ್ರಯವನ್ನು ಹೇಳಿ 'ಸ ಯೇನ ದೇವೇಭ್ಯ ಋಣಂ ಜಾಯತೇ ತದೇನಾಂಸ್ತದವಯತೇ ಯದ್ಯಜತೇ । ಅಥ ಯದಗ್ನೌ ಜುಹೋತಿ ತದೇನಾಂಸ್ತದವದಯತೇ । ತಸ್ಮಾದ್ಯತ್ಕಿಂಚಾಗ್ನೌ ಜುಹ್ವತಿ ತದವದಾನಂ ನಾಮ॥' (ಶತ.ಬ್ರಾ.೧-೭-೨-೬) ಎಂಬ ವಾಕ್ಯದಿಂದ ಅವದಾನವನ್ನು (ದೇವತೆಗಳಿಗಾಗಿ ಮಾಡುವ ಯಾಗಹೋಮಗಳನ್ನು) ವಿಧಿಸಿದೆ. ಆದ್ದರಿಂದ ಋಣತ್ರಯ ಶ್ರುತಿಯು ಅವದಾನಸ್ತುತಿಪರ ಎಂಬುದು ನಿಜವಾದರೂ ಎಂದರ್ಥ.
2. ವಿಧ್ಯಪೇಕ್ಷಿತವಾಗಿ ಅರ್ಥವಸ್ತುಸಿದ್ಧಿಯಾಗುವದೆಂಬ ನ್ಯಾಯದಿಂದಲೂ ಅಸತ್ತಾದ್ದರಿಂದ ಸ್ತುತಿಮಾಡುವದೆಂಬುದು ಹೊಂದುವದಿಲ್ಲವೆಂಬ ನ್ಯಾಯಾದಿಂದಲೂ ಎಂದರ್ಥ.
3. ಕಾ॥ ಪಾಠದಲ್ಲಿ ಚಕಾರವಿಲ್ಲ.

ತತ್ರ ಪ್ರೇರಕತ್ವಾಕಾರಃ ಕೃತ್ಯುದ್ದೇಶ್ಯತ್ವಮ್ ಇತಿ । ಸೋಽಯಂ ಸ್ವಪಕ್ಷಾಭಿನಿವೇಶಕಾರಿತೋ ವೃಥಾ ಶ್ರಮಃ । ತಥಾ ಹಿ । ಇಚ್ಛಾವಿಷಯತಯಾ ಪ್ರತೀತಸ್ಯ ಸ್ವಪ್ರಯತ್ನೋತ್ಪತ್ತಿಮನ್ತರೇಣಾಽಸಿದ್ಧಿರೇವ ಪ್ರೇರಕತ್ವಮ್ । ತತ ಏವ ಪ್ರವೃತ್ತೇಃ । ಇಚ್ಛಾಯಾಂ ಜಾತಾಯಾಮ್ ಇಷ್ಟಸ್ಯ ಸ್ವಪ್ರಯತ್ನೋತ್ಪತ್ತಿ ಮನ್ತರೇಣಾಽಸಿದ್ಧಿಃ ಪ್ರತೀಯತೇ ಚೇತ್ ತತಶ್ಚಿಕೀರ್ಷಾ ಜಾಯತೇ, ತತಃ ಪ್ರವರ್ತತೇ ಪುರುಷಃ ಇತಿ ತತ್ತ್ವವಿದಾಂ ಪ್ರಕ್ರಿಯಾ । ತಸ್ಮಾತ್ ಇಷ್ಟಸ್ಯ ಕೃತ್ಯಧೀನಾಽಽತ್ಮಲಾಭತ್ವಾತಿರೇಕಿಕೃತ್ಯುದ್ದೇಶ್ಯತ್ವಂ ನಾಮ ಕಿಮಪಿ ನ ದೃಶ್ಯತೇ ॥

(ಅರ್ಥ)

ಇದಲ್ಲದೆ ಕಾರ್ಯವೇ ವಾಕ್ಯಾರ್ಥವೆಂಬ ವಾದಿಗಳು ಈ ಕಾರ್ಯವೆಂದರೆ ಯಾವದು?- ಎಂಬುದನ್ನು ಹೇಳಬೇಕಾಗುವದು.[1]

(ಕಾರ್ಯವಾದಿ):— ಕೃತಿಭಾವಭಾವಿಯಾಗಿ ಕೃತ್ಯುದ್ದೇಶವಾಗಿರುವದೇ[2] (ಕಾರ್ಯವು).

(ಸಿದ್ಧಾಂತಿ) :— ಈ ಕೃತ್ಯುದ್ದೇಶ್ಯವೆಂಬುದು ಯಾವದು?

(ಕಾರ್ಯವಾದಿ) :— ಯಾವದನ್ನು ಅಧಿಕರಿಸಿ (=ಯಾವದಕ್ಕಾಗಿ) ಕೃತಿಯು ನಡೆಯುವದೋ ಅದೇ ಕೃತ್ಯುದ್ದೇಶ್ಯವು.

(ಸಿದ್ಧಾಂತಿ) :— ಪುರುಷವ್ಯಾಪಾರರೂಪವಾಗಿರುವ ಕೃತಿಗೆ ಈ ಅಧಿಕಾರವೆಂಬುದಾದರೂ ಯಾವದು?[3]

(ಕಾರ್ಯವಾದಿ) :— ಯಾವದನ್ನು ಪಡೆದುಕೊಳ್ಳುವ ಇಚ್ಛೆಯಿಂದ ಪುರುಷನು ಕೃತಿಯನ್ನುಂಟುಮಾಡುವನು ಅದೇ ಕೃತ್ಯುದ್ದೇಶ್ಯವು.

(ಸಿದ್ಧಾಂತಿ) :— ಹಾಗಾದರೆ ಇಷ್ಟವಾದದ್ದೇ ಕೃತ್ಯುದ್ದೇಶ್ಯವೆಂದಾಯಿತಲ್ಲ![4]

ಇನ್ನು 'ಇಷ್ಟವಾದದ್ದಕ್ಕೇ ಎರಡು ರೂಪಗಳಿರುತ್ತವೆ : ಇಚ್ಛೆಗೆ ವಿಷಯವಾಗಿರುವದೊಂದು, ಪುರುಷನನ್ನು ಪ್ರೇರಿಸುವದು ಮತ್ತೊಂದು ; ಈ (ಎರಡ)ರಲ್ಲಿ

---

1. 'ಕರ್ಮವು ಕೃತಿಸಾಧ್ಯ' ಎಂದರೆ ಪ್ರಯತ್ನಸಾಧ್ಯ ; ಸ್ವರ್ಗಾದಿಗಳು ಇಷ್ಟವಾಗಿವೆ. ಆ ಎರಡನ್ನೂ ಬಿಟ್ಟು ಪೂರ್ವಪಕ್ಷಿಗಳು ಕಾರ್ಯಕ್ಕೆ ಅದೃಷ್ಟವೆಂಬ ಮೂರನೆಯ ಆಕಾರವನ್ನು ಹೇಳುತ್ತಾರೆ. ಅದನ್ನು ಖಂಡಿಸುವದಕ್ಕಾಗಿ ಈ ಪ್ರಶ್ನೆಯನ್ನು ಹಾಕಿದೆ. ತಾ॥
2. ಸಾಧ್ಯವೆಂಬುದನ್ನು ತಿಳಿಸುವದಕ್ಕೆ ಕೃತಿಭಾವಭಾವಿ ಎಂದಿದೆ ; ಅದು ಸ್ವರ್ಗಾದಿಗಳಿಗೂ ಇರುವದರಿಂದ ಅದನ್ನು ಬಿಡುವದಕ್ಕಾಗಿ ಕೃತ್ಯುದ್ದೇಶ್ಯವೆಂದಿದೆ.
3. ಸ್ವಪ್ರಯೋಜನಕ್ಕೆ ಸಾಧನವಾಗಿರುವರಿಂದ ಇದು ನಾನು ಮಾಡತಕ್ಕದ್ದು ಎಂಬ ಬುದ್ಧಿಯೇ ಅಧಿಕಾರವು ; ಪುರುಷವ್ಯಾಪಾರಕ್ಕೆ ಈ ಅಧಿಕಾರವು ಹೇಗೆ ಬಂದೀತು?
4. ಆಗ ಸ್ವರ್ಗಾದಿಗಳಿಗೂ ಈ ಲಕ್ಷಣವು ಹೊಂದುವದಲ್ಲ!

ಪ್ರೇರಕತ್ವಾಕಾರವೇ ಕೃತ್ಯುದ್ದೇಶ್ಯತ್ವವು ಎಂದಿಂತು (ನೀನು) ಭಾವಿಸಿರಬಹುದು.

ಆ ಇದು ಸ್ವಪಕ್ಷದಲ್ಲಿರುವ ಅಭಿಮಾನದಿಂದಾಗಿರುವ ವೃಥಾಶ್ರಮವು. ಹೇಗೆಂದರೆ, ಇಚ್ಛೆಗೆ ವಿಷಯವೆಂದು ತೋರುತ್ತದೆಯಲ್ಲ, (ಅದು) ಸ್ವಪ್ರಯತ್ನವುಂಟಾಗದೆ ಸಿದ್ಧಿಯಾಗದಿರುವದೇ ಪ್ರೇರಕತ್ವವು ; ಏಕೆಂದರೆ ಅದರಿಂದಲೇ ಪ್ರವೃತ್ತಿಯುಂಟಾಗುವದು. (ಇದರ ವಿವರ) : **ಇಚ್ಛೆಯುಂಟಾಗಲಾಗಿ ಇಷ್ಟವಾದದ್ದು ಸ್ವಪ್ರಯತ್ನವು ಉಂಟಾಗದೆ ಸಿದ್ಧಿಯಾಗುವದಿಲ್ಲವೆಂಬುದು ತೋರಿಬಂದರೆ,[1] ಅದರಿಂದ ಮಾಡಬೇಕೆಂಬ ಇಚ್ಛೆಯುಂಟಾಗುತ್ತದೆ, ಆಗ ಪುರುಷನು ಪ್ರವರ್ತಿಸುತ್ತಾನೆ[2]** - ಎಂಬುದು ತತ್ತ್ವಜ್ಞರ ಪ್ರಕ್ರಿಯೆ. ಆದ್ದರಿಂದ ಇಷ್ಟವಾದದ್ದು ಕೃತಿಗೆ ಅಧೀನವಾಗಿಯೇ ಉಂಟಾಗುವದೆಂಬುದನ್ನು ಬಿಟ್ಟರೆ **ಕೃತ್ಯುದ್ದೇಶ್ಯ**ವಾಗಿರುವದೆಂಬುದು ಮತ್ತೆ ಯಾವದೂ ಕಾಣಿಸುವದೇ ಇಲ್ಲವಲ್ಲ!

ಕಾರ್ಯವು ಪುರುಷಾನುಕೂಲವೆಂಬುದೂ ಸರಿಯಲ್ಲ

(ಮೂಲ)

೭೮. ಅಥೋಚ್ಯೇತ । ಇಷ್ಟತಾಹೇತುಶ್ಚ ಪುರುಷಾನುಕೂಲತಾ, ತತ್ಪುರುಷಾನುಕೂಲತ್ವಂ ಕೃತ್ಯುದ್ದೇಶ್ಯತ್ವಮಿತಿ । ನೈವಮ್ । ಪುರುಷಾನುಕೂಲಂ ಸುಖಿಮ್ ಇತ್ಯನರ್ಥಾನ್ತರಮ್ । ತಥಾ ಪುರುಷಪ್ರತಿಕೂಲಂ ದುಃಖಿಪರ್ಯಾಯಮ್ । ಅತಃ ಸುಖಿವ್ಯತಿರಿಕ್ತಸ್ಯ ಕಸ್ಯಾಽಪಿ ಪುರುಷಾನುಕೂಲತ್ವಂ ನ ಸಂಭವತಿ । ನನು ಚ ದುಃಖಿನಿವೃತ್ತೇರಪಿ ಸುಖಿವ್ಯತಿರಿಕ್ತಾಯಾಃ ಪುರುಷಾನುಕೂಲತಾ ದೃಷ್ಟಾ । ನೈತತ್ । ಆತ್ಮಾನುಕೂಲಂ ಸುಖಿಮ್, ಆತ್ಮಪ್ರತಿಕೂಲಂ ದುಃಖಿಮ್ ಇತಿ ಹಿ ಸುಖಿದುಃಖಿಯೋರ್ವಿವೇಕಃ । ತತ್ರ ಆತ್ಮಾನುಕೂಲಂ ಸುಖಿಮ್ ಇಷ್ಟಂ ಭವತಿ, ತತ್ಪ್ರತಿಕೂಲಂ ದುಃಖಿಂ ಚಾಽನಿಷ್ಟಮ್ । ಅತೋ ದುಃಖಿಸಂಯೋಗಸ್ಯ ಅಸಹ್ಯತಯಾ ತನ್ನಿವೃತ್ತಿರಪೀಷ್ಟಾ ಭವತಿ । ತತ ಏವೇಷ್ಟತಾಸಾಮ್ಯಾದನುಕೂಲತಾಭ್ರಮಃ । ತಥಾ ಹಿ । ಪ್ರಕೃತಿಸಂಸೃಷ್ಟಸ್ಯ[3] ಸಂಸಾರಿಣಃ ಪುರುಷಸ್ಯ ಅನುಕೂಲಸಂಯೋಗಃ, ಪ್ರತಿಕೂಲಸಂಯೋಗಃ , ಸ್ವರೂಪೇಣಾಽವಸ್ಥಿತಿಃ - ಇತಿ ಚ ತಿಸ್ರೋಽವಸ್ಥಾಃ । ತತ್ರ ಪ್ರತಿಕೂಲಸಂಬನ್ಧನಿವೃತ್ತಿಃ ಅನುಕೂಲಸಂಬನ್ಧನಿವೃತ್ತಿಶ್ಚ ಸ್ವರೂಪೇಣಾವಸ್ಥಿತಿರೇವ । ತಸ್ಮಾತ್ ಪ್ರತಿಕೂಲಸಂಯೋಗೇ ವರ್ತಮಾನೇ ತನ್ನಿವೃತ್ತಿರೂಪಾ ಸ್ವರೂಪೇಣಾಽವ

---

1. ಇದು ಕೃತಿಸಾಧ್ಯವೆಂಬ ತಿಳಿವಳಿಕೆಯಿದ್ದರೇ ಕರ್ಮದಲ್ಲಿ ತೊಡಗುತ್ತಾನೆಂದರ್ಥ. ಆದ್ದರಿಂದ ಇಷ್ಟಕ್ಕೆ ಇನ್ನೊಂದು ಆಕಾರವಿದೆ ಎಂಬುದು ಸುಳ್ಳು ಎಂದು ಭಾವ.
2. ಆದ್ದರಿಂದ ಪ್ರೇರಕವೆಂಬುದು ಕೃತಿಸಾಧ್ಯದಲ್ಲಿಯೇ ಸೇರಿರುತ್ತದೆ ಎಂದರ್ಥ.
3. 'ಪ್ರಕೃತಿಸಂಸೃಷ್ಟಸಂಸಾರಿಣಃ' ಎಂದು **ಕಾ॥**

ಸ್ಥಿತಿರಪಿ ಇಷ್ಟಾ ಭವತಿ । ತತ್ರೇಷ್ಟತಾ ಸಾಮ್ಯಾದನುಕೂಲತಾಭ್ರಮಃ । ಅತಃ ಸುಖಿಸ್ವರೂಪತ್ವಾತ್ ಅನುಕೂಲತಾಯಾ ನಿಯೋಗಸ್ಯಾನುಕೂಲತಾಂ ವದನ್ತಂ ಪ್ರಾಮಾಣಿಕಾಃ ಪರಿಹಸನ್ತಿ । ಇಷ್ಟಸ್ಯಾರ್ಥವಿಶೇಷಸ್ಯ ನಿರ್ವರ್ತಕತಯೈವ ಹಿ ನಿಯೋಗಸ್ಯ ನಿಯೋಗತ್ವಂ ಸ್ಥಿರತ್ವಮ್ ಅಪೂರ್ವತ್ವಂ ಚ ಪ್ರತೀಯತೇ । 'ಸ್ವರ್ಗಕಾಮೋ ಯಜೇತ' ಇತ್ಯತ್ರ ಕಾರ್ಯಸ್ಯ ಕ್ರಿಯಾತಿರಿಕ್ತತಾ ಸ್ವರ್ಗಕಾಮ ಪದಸಮಭಿವ್ಯಾಹಾರೇಣ ಸ್ವರ್ಗಸಾಧನತ್ವನಿಶ್ಚಯಾದೇವ ಭವತಿ । ನ ಚ ವಾಚ್ಯಮ್, ಯಜೇತೇತ್ಯತ್ರ ಪ್ರಥಮಂ ನಿಯೋಗಃ ಸ್ವಪ್ರಧಾನತಯೈವ ಪ್ರತೀಯತೇ । ಸ್ವರ್ಗಕಾಮಪದಸಮಭಿವ್ಯಾಹಾರಾತ್ ಸ್ವಸಿದ್ಧಯೇ ಸ್ವರ್ಗಸಿದ್ಧ್ಯನುಕೂಲತಾ ಚ ನಿಯೋಗಸ್ಯ ಇತಿ । ಯಜೇತ ಇತಿ ಹಿ ಧಾತ್ವರ್ಥಸ್ಯ ಪುರುಷಪ್ರಯತ್ನಸಾಧ್ಯತೈವ ಪ್ರತೀಯತೇ । ಸ್ವರ್ಗಕಾಮಪದಸಮಭಿವ್ಯಾಹಾರಾದೇವ ಧಾತ್ವರ್ಥಾತಿರೇಕಿಣೋ ನಿಯೋಗತ್ವಂ ಸ್ಥಿರತ್ವಮ್ ಅಪೂರ್ವತ್ವಂ ಚೇತ್ಯಾದಿ ಅವಗಮ್ಯತೇ । ತಚ್ಚ ಸ್ವರ್ಗಸಾಧನತ್ವಪ್ರತೀತಿನಿಬನ್ಧನಮ್ । ಸಮಭಿವ್ಯಾಹೃತಸ್ವರ್ಗಕಾಮಪದಾರ್ಥಾನ್ವಯಯೋಗ್ಯಂ ಸ್ವರ್ಗಸಾಧನಮೇವ ಕಾರ್ಯಂ ಲಿಙಾದಯೋಽಭಿದಧತೀತಿ ಹಿ ಲೋಕವ್ಯುತ್ಪತ್ತಿರಪಿ ತಿರಸ್ಕೃತಾ । ಏತದುಕ್ತಂ ಭವತಿ । ಸಮಭಿವ್ಯಾಹೃತಪದಾನ್ತರ ವಾಚ್ಯಾನ್ವಯಯೋಗ್ಯಮೇವ ಇತರಪದಪ್ರತಿಪಾದ್ಯಮ್ ಇತ್ಯನ್ವಿತಾಭಿಧಾಯಿ ಪದಸಜ್ಞಾತರೂಪವಾಕ್ಯಶ್ರವಣಸಮನನ್ತರಮೇವ ಪ್ರತೀಯತೇ । ತಚ್ಚ ಸ್ವರ್ಗಸಾಧನರೂಪಮ್ । ಅತಃ ಕ್ರಿಯಾವತ್ ಅನನ್ಯಾರ್ಥತಾಽಪಿ ವಿರೋಧಾದೇವ ಪರಿತ್ಯಕ್ತೇತಿ । ಅತ ಏವ ಗಙ್ಗಾಯಾಂ ಘೋಷ ಇತ್ಯಾದೌ ಘೋಷಪ್ರತಿವಾಸಯೋಗ್ಯಾರ್ಥೋಪಸ್ಥಾಪನಪರತ್ವಂ ಗಙ್ಗಾಪದಸ್ಯಾಶ್ರೀಯತೇ । ಪ್ರಥಮಂ ಗಙ್ಗಾಪದೇನ ಗಙ್ಗಾರ್ಥಃ ಸ್ಮೃತ ಇತಿ ಗಙ್ಗಾಪದಾರ್ಥಸ್ಯ ಪೇಯತ್ವಂ[1] ನ ವಾಕ್ಯಾರ್ಥಾನ್ವಯಿ ಭವತಿ । ಏವ ಮತ್ರಾಪಿ ಯಜೇತ ಇತ್ಯೇತಾವನ್ಮಾತ್ರಶ್ರವಣೇ ಕಾರ್ಯಮನನ್ಯಾರ್ಥಂ ಸ್ಮೃತಮಿತಿ ವಾಕ್ಯಾರ್ಥಾನ್ವಯಸಮಯೇ ಕಾರ್ಯಸ್ಯಾನನ್ಯಾರ್ಥತಾ ನಾವತಿಷ್ಠತೇ । ಕಾರ್ಯಾಭಿಧಾಯಿಪದಶ್ರವಣವೇಲಾಯಾಂ ಪ್ರಥಮಂ ಕಾರ್ಯಮನನ್ಯಾರ್ಥಂ ಪ್ರತೀತಮ್ ಇತ್ಯೇತದಪಿ ನ ಸಂಗಚ್ಛತೇ । ವ್ಯುತ್ಪತ್ತಿಕಾಲೇ ಗವಾನಯನಾದಿ ಕ್ರಿಯಾಯಾ ದುಃಖಿರೂಪಾಯಾ ಇಷ್ಟವಿಶೇಷಸಾಧನತಯೈವ ಕಾರ್ಯತಾ ಪ್ರತೀತೇಃ । ಅತೋ ನಿಯೋಗಸ್ಯ ಪುರುಷಾನುಕೂಲತ್ವಂ ಸರ್ವಲೋಕ ವಿರುದ್ಧಮ್ । ನಿಯೋಗಸ್ಯ ಸುಖಿರೂಪಪುರುಷಾನುಕೂಲತಾಂ[2] ವದತಃ ಸ್ವಾನುಭವವಿರೋಧಶ್ಚ । 'ಕಾಮೀರ್ಯಾ ವೃಷ್ಟಿಕಾಮೋ ಯಜೇತ' (?)ಇತ್ಯಾದಿಷು

---

1. 'ಗಙ್ಗಾಪದಾರ್ಥಸ್ಯೈವೋಪೇಯತ್ವಾತ್' ಎಂಬ ಕಾ॥ ಪಾಠ ಸರಿಯಲ್ಲ.
2. 'ಸುಖಿರೂಪಪುರುಷಾನುಕೂಲಸುಖಿರೂಪತಾಮ್' ಎಂಬ ಕಾ॥ ಪಾಠದಲ್ಲಿ ಎರಡನೆಯ 'ಸುಖಿರೂಪ' ಹೆಚ್ಚು.

ಸಿದ್ಧೇಽಪಿ ನಿಯೋಗೇ ವೃಷ್ಟ್ಯಾದಿಸಿದ್ಧನಿಮಿತ್ತಸ್ಯ ವೃಷ್ಟಿವ್ಯತಿರೇಕೇಣ ನಿಯೋಗಸ್ಯ ಅನುಕೂಲತಾ ನಾನುಭೂಯತೇ । ಯದ್ಯಪ್ಯಸ್ಮಿನ್ ಜನ್ಮನಿ ವೃಷ್ಟ್ಯಾದಿ ಸಿದ್ಧೇರನಿಯಮಃ, ತಥಾಪಿ ಅನಿಯಮಾದೇವ ನಿಯೋಗಸಿದ್ಧಿರವಶ್ಯಾಶ್ರಯಣೀಯಾ । ತಸ್ಮಿನ್ ಅನುಕೂಲತಾಪರ್ಯಾಯಸುಖಾನುಭೂತಿರ್ನ ವಿದ್ಯತೇ । ಏವಮ್ ಉಕ್ತರೀತ್ಯಾ ಕೃತಿಸಾಧ್ಯೇಷ್ಟತ್ವಾತಿರೇಕಿಕೃತ್ಯುದ್ದೇಶ್ಯತ್ವಂ ನ ದೃಶ್ಯತೇ[1] ॥

(ಅರ್ಥ)

(ಕಾರ್ಯವಾದಿಯು) ಇನ್ನು ಹೀಗೆ ಹೇಳಬಹುದು : ಇಷ್ಟತ್ವಕ್ಕೆ ಹೇತುವಾದದ್ದು ಪುರುಷನಿಗೆ ಅನುಕೂಲವಾಗಿರುವದರಿಂದ **ಆಪುರುಷಾನುಕೂಲತ್ವವೇ ಕೃತ್ಯುದ್ದೇಶ್ಯತ್ವವೆಂಬುದು.** (ಇದು) ಹಾಗಲ್ಲ ; (ಏಕೆಂದರೆ) ಪುರುಷನಿಗೆ ಅನುಕೂಲವಾಗಿರುವದು ಸುಖವೇ ಹೊರತು (ಸುಖವೆಂಬುದು) ಬೇರೊಂದು ಪದಾರ್ಥವಲ್ಲ ; ಹೀಗೆಯೇ ಪುರುಷನಿಗೆ ಅನನುಕೂಲವಾದದ್ದು ಎಂಬುದೇ ದುಃಖಪರ್ಯಾಯವು. ಆದ್ದರಿಂದ ಸುಖವನ್ನು ಬಿಟ್ಟರೆ ಮತ್ತೆ ಯಾವದೂ ಪುರುಷಾನುಕೂಲವೆಂಬುದು ಹೊಂದುವದಿಲ್ಲ.[2]

(ಕಾರ್ಯವಾದಿ) : ದುಃಖನಿವೃತ್ತಿಯು ಸುಖವ್ಯತಿರಿಕ್ತವಾಗಿದ್ದರೂ (ಅದೂ) ಪುರುಷನಿಗೆ ಅನುಕೂಲವಾಗಿರುವದು ಕಂಡಿದೆಯಲ್ಲ!

(ಸಿದ್ಧಾಂತಿ):— ಇದು ಹೀಗಲ್ಲ. ತನಗೆ ಅನುಕೂಲವಾದದ್ದು ಸುಖವು ತನಗೆ ಪ್ರತಿಕೂಲವಾದದ್ದು ದುಃಖವು - ಎಂದಲ್ಲವೆ, ಸುಖದುಃಖಗಳ ವಿವೇಕವು? ಇವುಗಳಲ್ಲಿ ತನಗೆ ಅನುಕೂಲವಾಗಿರುವ ಸುಖವು ಇಷ್ಟವಾಗಿರುತ್ತದೆ, ತನಗೆ ಪ್ರತಿಕೂಲವಾದ ದುಃಖವು ಅನಿಷ್ಟ(ವಾಗಿರುತ್ತದೆ). ಆದ್ದರಿಂದ ದುಃಖಸಂಬಂಧವು ಸಹಿಸಲಾಗದ್ದಾದ್ದರಿಂದ ಅದರ ನಿವೃತ್ತಿಯೂ ಇಷ್ಟವಾಗುತ್ತದೆ ; ಹಾಗೆ ಇಷ್ಟವಾಗಿರುವದೆಂಬ ಹೋಲಿಕೆಯಿಂದಲೇ (ಅದೂ) ಅನುಕೂಲವೆಂಬ ಭ್ರಮೆ(ಯುಂಟಾಗುತ್ತದೆ). ಹೇಗೆಂದರೆ ಪ್ರಕೃತಿಸಂಸರ್ಗವುಳ್ಳ ಸಂಸಾರಿಪುರುಷನಿಗೆ ಅನುಕೂಲಸಂಬಂಧ, ಪ್ರತಿಕೂಲಸಂಬಂಧ, ಸ್ವರೂಪದಲ್ಲಿರುವದು - ಎಂಬ ಮೂರು ಅವಸ್ಥೆಗಳಿವೆ ; ಅವುಗಳಲ್ಲಿ ಪ್ರತಿಕೂಲಸಂಬಂಧನಿವೃತ್ತಿಯೂ ಅನುಕೂಲಸಂಬಂಧನಿವೃತ್ತಿಯೂ ಸ್ವರೂಪದಲ್ಲಿದ್ದುಕೊಂಡಿರುವದೇ ಆಗಿದೆ. ಆದ್ದರಿಂದ ಪ್ರತಿಕೂಲ ಸಂಬಂಧವು ಇರುತ್ತಿರುವಲ್ಲಿ ಅದರ ನಿವೃತ್ತಿರೂಪವಾಗಿರುವ ಸ್ವರೂಪಾವಸ್ಥಿತಿಯೂ ಇಷ್ಟವಾಗಿರುತ್ತದೆ. ಅಲ್ಲಿ ಇಷ್ಟತ್ವವೆಂಬ ಸಾಮ್ಯವಿರುವದರಿಂದ (ಅದೂ) ಇಷ್ಟವೆಂಬ ಭ್ರಮೆ(ಯುಂಟಾಗುತ್ತದೆ). ಆದ್ದರಿಂದ ಅನುಕೂಲತ್ವವೆಂಬುದು

1. ಇಲ್ಲಿಯೂ 'ನ ವಿದ್ಯತೇ' ಎಂದು ಕಾ॥
2. ಆದ್ದರಿಂದ ಅದು ನೀವು ಹೇಳುವ ಕಾರ್ಯವಾಗಲಾರದು.

ಸುಖರೂಪವಾಗಿರುವದರಿಂದ, ನಿಯೋಗವು ಅನುಕೂಲವೆಂದು ಹೇಳುವ ವಾದಿಯನ್ನು ಕಂಡು ಪ್ರಾಮಾಣಿಕರು ನಗುವರು[1]. ಇಷ್ಟವಾದ ಅರ್ಥವಿಶೇಷವನ್ನು ಉಂಟುಮಾಡುವದರಿಂದಲೇ ಅಲ್ಲವೆ, ನಿಯೋಗವು **ನಿಯೋಗ**ವಾಗಿರುವದು, ಸ್ಥಿರವಾಗಿರುವದು, **ಅಪೂರ್ವ** ಎಂದು[2] ತೋರುತ್ತದೆ? 'ಸ್ವರ್ಗಕಾಮನು ಯಾಗಮಾಡಬೇಕು' (?) ಎಂಬಲ್ಲಿ ಕಾರ್ಯವು ಕ್ರಿಯೆಗಿಂತ ಅತಿರಿಕ್ತವೆಂದು (ಕಲ್ಪಿಸುವದು) ಸ್ವರ್ಗಕಾಮಪದದೊಡನೆ (ಉಚ್ಚರಿಸಿ) ಹೇಳಿರುವದರಿಂದ (ಅದು) ಸ್ವರ್ಗಕ್ಕೆ ಸಾಧನವೆಂದು ನಿಶ್ಚಯವಾಗುವದರಿಂದಲೇ ಆಗಿರುತ್ತದೆ. 'ಯಾಗಮಾಡ ಬೇಕು ಎಂಬಲ್ಲಿ ಮೊದಲು ನಿಯೋಗವು ಸ್ವಪ್ರಧಾನವಾಗಿಯೇ ತೋರುತ್ತದೆ ; (ಅದನ್ನು) ಸ್ವರ್ಗಕಾಮಪದದೊಡನೆ ಉಚ್ಚರಿಸಿರುವದರಿಂದ ತನ್ನ ಸಿದ್ಧಿಗಾಗಿ ನಿಯೋಗವು ಸ್ವರ್ಗಸಿದ್ಧ್ಯನುಕೂಲವೆಂಬುದೂ ತೋರುತ್ತದೆ'[3] ಎಂದೂ ಹೇಳುವದ ಕ್ಕಾಗುವದಿಲ್ಲ. ಏಕೆಂದರೆ 'ಯಾಗಮಾಡಬೇಕು' ಎಂಬಲ್ಲಿ (ಯಜ್) ದಾತುವಿನ ಅರ್ಥವಾದ (ಕ್ರಿಯೆಯು) ಪುರುಷನ ಪ್ರಯತ್ನಕ್ಕೆ ಸಾಧ್ಯವೆಂದೇ ತೋರುತ್ತದೆ ; (ಅದನ್ನು) ಸ್ವರ್ಗಕಾಮಪದದೊಡನೆ ಉಚ್ಚರಿಸುವದರಿಂದಲೇ ಧಾತ್ವರ್ಥಕ್ಕಿಂತ ಬೇರೆಯಾದದ್ದು ನಿಯೋಗವು, ಸ್ಥಿರವು, ಅಪೂರ್ವವು- ಎಂದು ಮುಂತಾಗಿ ಗೊತ್ತಾಗುತ್ತದೆ. ಅದಕ್ಕೆ ಸ್ವರ್ಗಕ್ಕೆ ಸಾಧನವಾಗಿರುವದೆಂಬ ಪ್ರತೀತಿಯೇ ಕಾರಣವು. ಜೊತೆಯಲ್ಲಿ ಹೇಳಿದ ಸ್ವರ್ಗಕಾಮಪದದರ್ಥದಲ್ಲಿ ಅನ್ವಯಕ್ಕೆ ಯೋಗ್ಯವಾದ ಸ್ವರ್ಗಸಾಧನವೇ ಕಾರ್ಯವೆಂದು ಲಿಙಾದಿಗಳು[4] ಹೇಳುತ್ತವೆ. ಆದ್ದರಿಂದ ಲೋಕವ್ಯುತ್ಪತ್ತಿಯನ್ನು ಕೂಡ (ನೀವು) ತಿರಸ್ಕರಿಸಿದಂತೆ (ಆಗಿರುತ್ತದೆ). ಇಲ್ಲಿ (ಇಷ್ಟು) ಹೇಳಿದಂತಾಯಿತು : **ಜೊತೆಯಲ್ಲಿ ಉಚ್ಚರಿಸಿದ ಮತ್ತೊಂದುಪದಕ್ಕೆ ವಾಚ್ಯವಾದ ಅರ್ಥದೊಡನೆ ಅನ್ವಯವಾಗುವದಕ್ಕೆ ತಕ್ಕದ್ದೇ ಇತರಪದದಿಂದ ಪ್ರತಿಪಾದಿಸಲ್ಪಡುತ್ತದೆಯಾದ್ದರಿಂದ ಅನ್ವಿತವಾದದ್ದನ್ನು ಹೇಳುವ ಪದಗಳ ಸಂಘಾತ**

---

1. ಏಕೆಂದರೆ **ನಿಯೋಗವು** ಸುಖವಲ್ಲ.
2. ನಿಯೋಗವಾಗಿರುವದು ಎಂದರೆ ಪ್ರೇರಕವಾಗಿರುವದು, ಸ್ಥಿರವೆಂದರೆ ನಾಶವಾಗದೆ ಇದ್ದುಕೊಂಡಿರುವದು, ಅಪೂರ್ವವೆಂದರೆ ಪ್ರಮಾಣಾಂತರಕ್ಕೆ ಗೋಚರವಲ್ಲದೆ ಇರುವದು. ಕಾರ್ಯಕ್ಕೆ ಈ ಮೂರು ಧರ್ಮಗಳೂ ಇಷ್ಟಾರ್ಥವಾದ ಸ್ವರ್ಗಕ್ಕೆ ಅದು ಸಾಧನವಾಗಿರುವದೆಂಬುದರಿಂದಲೇ ಸಿದ್ಧವಾಗುತ್ತದೆ - ಎಂದರ್ಥ. ಇದರ ವಿವರವು ಮುಂದಿನ ವಾಕ್ಯದಲ್ಲಿದೆ.
3. ಆದ್ದರಿಂದ ನಿಯೋಗವು ಸಿದ್ಧಿಯಾಗುವದಕ್ಕಾಗಿ ನಿಯೋಜ್ಯನು ಸಿದ್ಧಿಯಾಗಬೇಕಾಗಿರುವದ ರಿಂದ ಸ್ವರ್ಗಾದಿಯನ್ನು ಸಾಧ್ಯವಾಗಿ ಮಾಡುತ್ತದೆ. ಭೃತ್ಯಾದಿಗಳಿಗೆ ಇಷ್ಟಪ್ರದನಾದ ರಾಜನಿಗೇ ಪ್ರಾಧಾನ್ಯವಿರುವಂತೆ ಇಷ್ಟವಾದ ಸ್ವರ್ಗವನ್ನು ಕೊಡುವ ನಿಯೋಗಕ್ಕೇ ಪ್ರಾಧಾನ್ಯವಿರುತ್ತದೆ ಎಂದರ್ಥ.
4. ಲಿಙ್, ಲೋಟ್, ತವ್ಯ- ಎಂಬ ವಿಧಿಸೂಚಕಪ್ರತ್ಯಯಗಳು.

ರೂಪವಾದ ವಾಕ್ಯವನ್ನು ಶ್ರವಣಮಾಡಿದ ಕೂಡಲೇ (ಅದೇ) ತಿಳಿಯುತ್ತದೆ; ಆದು (ಇಲ್ಲಿ) ಸ್ವರ್ಗಸಾಧನರೂಪವಾದದ್ದೇ ಆಗಿರುವದರಿಂದ ಕ್ರಿಯೆಯಂತೆಯೇ ಅನನ್ಯಾರ್ಥತ್ವವನ್ನೂ ವಿರುದ್ಧವಾದದ್ದೆಂಬ ಕಾರಣದಿಂದಲೇ ಬಿಡಬೇಕಾಯಿತು.[1] ಆದ್ದರಿಂದಲೇ ಗಂಗೆಯಲ್ಲಿ ಹಳ್ಳಿ- ಮುಂತಾದ (ವಾಕ್ಯ)ದಲ್ಲಿ ಹಳ್ಳಿಯಲ್ಲಿ ವಾಸ ಮಾಡುವದಕ್ಕೆ ಯೋಗ್ಯವೆಂಬ ಅರ್ಥವನ್ನು ನೆನಪುಕೊಡುವದರಲ್ಲಿಯೇ ಗಂಗಾ ಪದಕ್ಕೆ ತಾತ್ಪರ್ಯವೆಂದು ಆಶ್ರಯಿಸುತ್ತಾರೆ. ಮೊದಲು ಗಂಗಾಪದದಿಂದ ಗಂಗೆ ಎಂಬರ್ಥವು ನೆನಪಿಗೆ ಬಂತೆಂಬ ಕಾರಣದಿಂದ ಕುಡಿಯತಕ್ಕ (ನೀರು) ಎಂಬುದು ವಾಕ್ಯಾರ್ಥದಲ್ಲಿ ಅನ್ವಿತವಾಗುವದಿಲ್ಲ. ಆದರಂತೆ ಇಲ್ಲಿಯೂ 'ಯಾಗಮಾಡಬೇಕು' ಎಂದಿಷ್ಟೇ ಕೇಳಿಬರುವಾಗ ಕಾರ್ಯವು ಅನನ್ಯಾರ್ಥವಾಗಿ ನೆನಪಿಗೆ ಬಂದರೂ ವಾಕ್ಯಾರ್ಥದಲ್ಲಿ ಅನ್ವಯವಾಗುವ ಕಾಲದಲ್ಲಿ ಕಾರ್ಯವು ಅನನ್ಯಾರ್ಥವೆಂಬುದು ಇರುವದಿಲ್ಲ. ಕಾರ್ಯವನ್ನು ಹೇಳುವ ಪದವನ್ನು ಕೇಳುವ ಕಾಲದಲ್ಲಿ ಮೊದಲು ಕಾರ್ಯವು ಅನನ್ಯಾರ್ಥವೆಂದು ತೋರುತ್ತದೆ ಎಂಬುದೂ ಹೊಂದುವದಿಲ್ಲ.[2] ಏಕೆಂದರೆ ವ್ಯುತ್ಪತ್ತಿಕಾಲದಲ್ಲಿ ಗೋವನ್ನು ತರುವದೆಂಬ ದುಃಖರೂಪವಾದ ಕ್ರಿಯೆಯು ಇಷ್ಟವಿಶೇಷಕ್ಕೆ (ಆದು) ಸಾಧನವೆಂಬ ಕಾರಣದಿಂದಲೇ ಕಾರ್ಯವಾಗಿ ತೋರುತ್ತದೆ. ಆದ್ದರಿಂದ ನಿಯೋಗವು ಪುರುಷಾನುಕೂಲವೆನ್ನುವದು ಸರ್ವ ಶೋಕ ವಿರುದ್ಧವಾಗಿರುತ್ತದೆ.

ನಿಯೋಗವು ಪುರುಷನಿಗೆ ಅನುಕೂಲವಾಗಿರುವ ಸುಖರೂಪವಾಗಿರುವ ದೆಂದು ಹೇಳುವವನಿಗೆ ಸ್ವಾನುಭವವಿರೋಧವೂ (ಗಂಟುಬೀಳುತ್ತದೆ). ಹೇಗೆಂದರೆ: 'ವೃಷ್ಟಿಕಾಮನು ಕಾರೀರಿಯಿಂದ ಯಾಗಮಾಡಬೇಕು' (?) ಎಂದು ಮುಂತಾಗಿ ರುವ (ವಾಕ್ಯಗಳಲ್ಲಿ) ನಿಯೋಗವು ಸಿದ್ಧವಾದರೂ ವೃಷ್ಟ್ಯಾದಿಗಳಿಗೆ ಕಾರಣವಾಗಿ ರುವ ನಿಯೋಗವು ಅನುಕೂಲವೆಂಬುದು ವೃಷ್ಟಿಯಿಲ್ಲದೆ ಇದ್ದರೆ ಅನುಭವಕ್ಕೆ ಬರುವ ದಿಲ್ಲ. ಈ ಜನ್ಮದಲ್ಲಿ ವೃಷ್ಟ್ಯಾದಿಗಳು ಸಿದ್ಧವಾಗುವದೆಂಬ ನಿಯಮವಿಲ್ಲವೆಂಬುದು ನಿಜ; ಆದರೂ (ಹೀಗೆ) ನಿಯಮವಿಲ್ಲದ್ದರಿಂದಲೇ, ನಿಯೋಗವು ಸಿದ್ಧವಾಯಿತೆಂಬು

---

1. ಯಜ್ ಧಾತುವಿನ ಅರ್ಥವಾದ ಕ್ರಿಯೆಯು ವಾಕ್ಯಾರ್ಥದಲ್ಲಿ ಅನ್ವಯಕ್ಕೆ ತಕ್ಕದ್ದಲ್ಲವೆಂಬ ಕಾರಣದಿಂದ ಅದನ್ನು ಹೇಗೆ ಬಿಡುತ್ತೀರೋ ಹಾಗೆಯೇ ನಿಯೋಗವು ಸ್ವಪ್ರಧಾನವಾಗಿ ಪ್ರಾಪ್ತವಾದರೂ ಆ ಅರ್ಥವೂ ಅನ್ವಯಕ್ಕೆ ಯೋಗ್ಯವಲ್ಲವಾದ್ದರಿಂದ ಅದನ್ನೂ ಬಿಡತಕ್ಕದ್ದು ಎಂದರ್ಥ. 'ಸ್ವರ್ಗವನ್ನು ಬಯಸುವವನು ಅಪೂರ್ವವನ್ನು ಮಾಡಿಕೊಳ್ಳಬೇಕು'- ಎಂಬ ವಾಕ್ಯಕ್ಕೆ ಯಾವ ಅರ್ಥವೂ ಇಲ್ಲವಷ್ಟೆ?- ಎಂದು ಭಾವ.

2. ಕಾರ್ಯವನ್ನು ಹೇಳುವ ಪದವನ್ನು ಕೇಳಿದ ಕಾಲಕ್ಕೆ ಕಾರ್ಯವು ಮತ್ತೊಂದಕ್ಕಾಗಿಲ್ಲದೆ ಸ್ವತಂತ್ರವಾಗಿಯೇ ಕಾರ್ಯವಾಗಿ ತೋರುತ್ತದೆ ಎಂದು ಹಿಂದೆ ಒಪ್ಪಿತ್ತು ; ಈಗ ಆ ಅಂಗೀಕಾರವನ್ನು ಬಿಡುತ್ತಾರೆ.

ದನ್ನು ಅವಶ್ಯವಾಗಿ ಆಶ್ರಯಿಸಬೇಕು; (ಆದರೆ) ಆ (ನಿಯೋಗದಲ್ಲಿ) ಅನುಕೂಲತ್ವಕ್ಕೆ ಪರ್ಯಾಯವಾಗಿರುವ ಸುಖದ ಅನುಭವವು ಇರುವದಿಲ್ಲ.

ಹೀಗೆ ಕೃತಿಸಾಧ್ಯವಾದ ಇಷ್ಟಕ್ಕಿಂತ[1] ವ್ಯತಿರಿಕ್ತವಾಗಿ ಕೃತ್ಯುದ್ದೇಶ್ಯವೆಂಬುದು ಇರುವದಿಲ್ಲ(ವೆಂದಾಯಿತು).

ಕಾರ್ಯವು ಕೃತಿಗೆ ಶೇಷಿ ಎಂಬುದು ಸರಿಯಲ್ಲ

(ಮೂಲ)

೭೯. ಕೃತಿಂ ಪ್ರತಿಶೇಷಿತ್ವಂ ಕೃತ್ಯುದ್ದೇಶ್ಯತ್ವಮ್ ಇತಿ ಚೇತ್ । ಕಿಮಿದಂ ಶೇಷಿತ್ವಂ ಕಿಂ ಚ ಶೇಷತ್ವಮ್ ?-ಇತಿ ವಕ್ತವ್ಯಮ್ । ಕಾರ್ಯಪ್ರತಿಸಂಬನ್ಧಿಶೇಷಃ, ತತ್ಪ್ರತಿಸಂಬನ್ಧಿತ್ವಂ ಶೇಷಿತ್ವಮ್ ಇತಿ ಚೇತ್ । ಏವಂ ತರ್ಹಿ ಕಾರ್ಯತ್ವಮೇವ ಶೇಷಿತ್ವಮ್ ಇತ್ಯುಕ್ತಂ ಭವತಿ । ಕಾರ್ಯತ್ವಮೇವ ಹಿ[2] ವಿಚಾರ್ಯತೇ । ಪರೋದ್ದೇಶ[3] ಪ್ರವೃತ್ತಕೃತಿವ್ಯಾಪ್ಯರ್ಹತ್ವಂ[4] ಶೇಷತ್ವಮ್ ಇತಿ ಚೇತ್ । ಕೋಽಯಂ ಪರೋದ್ದೇಶೋ ನಾಮೇತಿ ? ಅಯಮೇವ ಹಿ ವಿಚಾರ್ಯತೇ । ಉದ್ದೇಶ್ಯತ್ವಂ ನಾಮ ಈಪ್ಸಿತಸಾಧ್ಯತ್ವಮ್ ಇತಿ ಚೇತ್ । ಕಿಮಿಪ್ಸಿತತ್ವಮ್[5]? ಕೃತಿಪ್ರಯೋಜನ ತ್ವಮ್ ಇತಿ ಚೇತ್ । ಪುರುಷಸ್ಯ ಕೃತ್ಯಾರಮ್ಭಪ್ರಯೋಜನ ಮೇವ ಹಿ ಕೃತಿಪ್ರಯೋಜ ನಮ್ । ಸ ಚೇಚ್ಛಾವಿಷಯಃ ಕೃತ್ಯಧೀನಾತ್ಮಲಾಭ ಇತಿ ಪೂರ್ವೋಕ್ತ ಏವ । ಅಯಮೇವ ಹಿ ಸರ್ವತ್ರ ಶೇಷಶೇಷಿಭಾವಃ । ಪರಗತಾತಿಶಯಾಧಾನೇಚ್ಛಯಾ ಉಪಾದೇಯತ್ವಮೇವ ಯಸ್ಯ ಸ್ವರೂಪಮ್ ಸ ಶೇಷಃ । ಪರಃ ಶೇಷೀ । ಫಲೋತ್ಪತ್ತೀಚ್ಛಯಾ ಯಾಗಾದೇಃ, ತತ್ಪ್ರಯತ್ನಸ್ಯ ಚ ಉಪಾದೇಯತ್ವಮ್ । ಯಾಗಾದಿಸಿದ್ಧೀಚ್ಛಯಾ ಅನ್ಯತ್ ಸರ್ವಮ್ ಉಪಾದೇಯಮ್ । ಏವಂ ಗರ್ಭಾದಾಸಾದೀನಾಮಪಿ ಪುರುಷವಿಶೇಷಾತಿಶಯಾಧಾನೇಚ್ಛಯಾ ಉಪಾದೇಯತ್ವಮೇವ ಸ್ವರೂಪಮ್ ॥

ಏವಮ್ ಈಶ್ವರಗತಾತಿಶಯಾಧಾನೇಚ್ಛಯಾ ಉಪಾದೇಯತ್ವಮೇವ ಚೇತನಾಚೇತನಾತ್ಮಕಸ್ಯ ನಿತ್ಯಸ್ಯಾನಿತ್ಯಸ್ಯ ಚ ಸರ್ವಸ್ಯ ವಸ್ತುನಃ ಸ್ವರೂಪಮ್ ಇತಿ ಸರ್ವಮ್ ಈಶ್ವರಶೇಷಭೂತಮ್। ಸರ್ವಸ್ಯ ಚೇಶ್ವರಃ ಶೇಷೀತಿ 'ಸರ್ವಸ್ಯ ವಶೀ ಸರ್ವಸ್ಯೇಶಾನಃ' (ಬೃ.೪-೪-೨೨), 'ಪತಿಂ ವಿಶ್ವಸ್ಯ' (ತೈ.ನಾ.೧೧-೨೫) ಇತ್ಯಾದ್ಯುಕ್ತಮ್ । 'ಕೃತಿಸಾಧ್ಯಂ ಪ್ರಧಾನಂ ಯತ್ತತ್ಕಾರ್ಯಮಭಿಧೀಯತೇ' (?) ಇತ್ಯಯಮರ್ಥಃ ಶ್ರದ್ಧಧಾನೇಷ್ವೇವ ಶೋಭತೇ ॥

---

1. ಸ್ವರ್ಗಾದಿಗಳಿಗಿಂತ. 2. ಈ ಮಾತು ಕಾ॥ ಪಾಠದಲ್ಲಿಲ್ಲ. 3. 'ಪರೋದ್ದೇಶೇನ' ಕಾ॥
4. 'ಅರ್ಹತ್ವಮೇವ' ಕಾ॥ 5. 'ಕಿಮಿದಮಿಪ್ಸಿತತ್ವಮ್' ಕಾ॥

(ಅರ್ಥ)

(ಕಾರ್ಯವಾದಿ) :— **ಕೃತಿಗೆ ಶೇಷಿಯಾದದ್ದೇ ಕೃತ್ಯುದ್ದೇಶ್ಯವು** ಎಂದರೊ?

(ಸಿದ್ಧಾಂತಿ) :— ಈ ಶೇಷಿತ್ವವು ಯಾವದು, ಶೇಷತ್ವವು ಯಾವದು ?- ಎಂಬುದನ್ನು (ನೀವು) ಹೇಳಬೇಕು.

(ಕಾರ್ಯವಾದಿ) :— ಕಾರ್ಯಕ್ಕೆ ಪ್ರತಿಸಂಬಂಧಿಯಾದದ್ದು ಶೇಷವು, ಅದಕ್ಕೆ ಪ್ರತಿಸಂಬಂಧಿಯಾದದ್ದು ಶೇಷಿಯು.

(ಸಿದ್ಧಾಂತಿ) :— ಹೀಗಾದರೆ ಕಾರ್ಯತ್ವವೇ ಶೇಷಿತ್ವವೆಂದಂತಾಯಿತು[1] ! (ಆದರೆ) ಇಲ್ಲಿ ಕಾರ್ಯವೆಂದರೇನೆಂಬುದನ್ನೇ ಅಲ್ಲವೆ, (ನಾವು) ವಿಚಾರಿಸುತ್ತಿರುವದು?

(ಕಾರ್ಯವಾದಿ) :— ಪರೋದ್ದೇಶದಿಂದ ಹೊರಟಿರುವ ಕೃತಿಯ ವ್ಯಾಪ್ತಿಗೆ ಅರ್ಹವಾಗಿರುವದೇ ಶೇಷವು.

(ಸಿದ್ಧಾಂತಿ) :— ಈ ಪರೋದ್ದೇಶವೆಂಬುದು ಯಾವದು? ಇದನ್ನೇ ಅಲ್ಲವೆ, (ನಾವು) ವಿಚಾರಿಸುತ್ತಿರುವದು?

(ಕಾರ್ಯವಾದಿ) :— ಉದ್ದೇಶ್ಯತ್ವವೆಂದೆ ಪಡೆಯುವದಕ್ಕೆ ಇಷ್ಟವಾದದ್ದು ಸಾಧ್ಯವಾಗಿರುವದು.

(ಸಿದ್ಧಾಂತಿ) :— ಇಲ್ಲಿ ಪಡೆಯುವದಕ್ಕೆ ಇಷ್ಟವಾದದ್ದು ಎಂದರೆ ಯಾವದು?

(ಕಾರ್ಯವಾದಿ) :— ಕೃತಿಗೆ ಪ್ರಯೋಜನವಾದದ್ದೇ (ಅದು).

(ಸಿದ್ಧಾಂತಿ) :— ಪುರುಷನಿಗೆ ಕೃತಿಯನ್ನು ಮಾಡುವದಕ್ಕೆ ಪ್ರಯೋಜನವು (ಯಾವದೋ ಅದೇ) ಅಲ್ಲವೆ, ಕೃತಿಪ್ರಯೋಜನವು? (ಅದು) ಇಚ್ಛೆಗೆ ವಿಷಯವಾಗಿರುವದು, ಕೃತಿಗೆ ಅಧೀನವಾಗಿ ಹುಟ್ಟತಕ್ಕದ್ದು ಎಂದು ಮೊದಲೇ ಹೇಳಿದೆ.[2]

ಎಲ್ಲೆಲ್ಲಿಯೂ ಶೇಷಶೇಷಿಭಾವವೆಂದರೆ ಇದೇ ಅಲ್ಲವೆ? (ಯಾವದೆಂದರೆ)[3] **ಮತ್ತೊಂದರಲ್ಲಿ ಅತಿಶಯವನ್ನುಂಟುಮಾಡುವ ಇಚ್ಛೆಯಿಂದ ಉಪಾದೇಯವಾಗಿರುವದೇ ಯಾವದರ ಸ್ವರೂಪವೋ ಅದು ಶೇಷವು,** (ಅ) ಮತ್ತೊಂದು **ಶೇಷಿಯು.**

---

1. ಕಾರ್ಯವೆಂಬುದನ್ನೇನೂ ನೀವು ಗೊತ್ತುಮಾಡಿ ತಿಳಿಸಿದಂತೆ ಆಗಲಿಲ್ಲ.
2. ೧೬೧ನೆಯ ಪುಟವನ್ನು ನೋಡಿ.
3. 'ಶೇಷಃ ಪರಾರ್ಥತ್ವಾತ್' (ಜೈ.ಶಿ.-೧-೨) ಎಂಬ ಸೂತ್ರದ ಅರ್ಥವನ್ನು ಈಗ ಹೇಳುತ್ತಾರೆ.

ಫಲವು ಉಂಟಾಗಲೆಂಬ ಇಚ್ಛೆಯಿಂದ ಯಾಗಾದಿಗಳೂ ಅದರ ಪ್ರಯತ್ನಗಳೂ ಉಪಾದೇಯವಾಗಿರುತ್ತವೆ[1] ; ಯಾಗಾದಿಗಳು ಸಿದ್ಧಿಯಾಗಲೆಂಬ ಇಚ್ಛೆಯಿಂದ ಮಿಕ್ಕದ್ದೆಲ್ಲವೂ ಉಪಾಧೇಯವಾಗಿರುತ್ತದೆ.[2] ಇದರಂತೆ ಗರ್ಭದಾಸನೇ ಮುಂತಾದವುಗಳಿಗೂ[3] ಪುರುಷವಿಶೇಷದಲ್ಲಿ ಅತಿಶಯವನ್ನುಂಟುಮಾಡಬೇಕೆಂಬ ಇಚ್ಛೆಯಿಂದ ಉಪಾದೇಯವಾಗಿರುವದೇ ಸ್ವರೂಪವು. ಇದರಂತೆ **ಈಶ್ವರನಲ್ಲಿ ಅತಿಶಯವನ್ನುಂಟುಮಾಡಬೇಕೆಂಬ ಇಚ್ಛೆಯಿಂದ ಉಪಾದೇಯವಾಗಿರುವದೇ ಚೇತನಾಚೇತನಾತ್ಮಕವಾದ ನಿತ್ಯವಾದ ಮತ್ತು ಅನಿತ್ಯವಾದ ಸರ್ವವಸ್ತುವಿನ ಸ್ವರೂಪವಾಗಿರುವದರಿಂದ ಎಲ್ಲವೂ ಈಶ್ವರನಿಗೆ ಶೇಷವು, ಎಲ್ಲಕ್ಕೂ ಈಶ್ವರನು ಶೇಷಿ** ಎಂದು 'ಎಲ್ಲವನ್ನೂ ವಶದಲ್ಲಿಟ್ಟುಕೊಂಡಿರುವಾತನು, ಎಲ್ಲವನ್ನೂ ಆಳತಕ್ಕವನು' (ಬೃ.೪-೪-೨೨), 'ವಿಶ್ವಕ್ಕೆಲ್ಲ ಪತಿಯು' (ತೈ.ನಾ.೧೧-೫೪) ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿರುತ್ತದೆ. 'ಕೃತಿಸಾಧ್ಯವಾಗಿರುವ ಪ್ರಧಾನ(ವಸ್ತು) ಯಾವದೋ ಅದೇ ಕಾರ್ಯವೆನಿಸುವದು' (?) ಎಂಬೀ ಅರ್ಥವು (ಆ ಸಂಪ್ರದಾಯದಲ್ಲಿ) ಶ್ರದ್ಧೆಯಿರುವವರಲ್ಲಿ ಮಾತ್ರ ಒಪ್ಪುತ್ತದೆ.

ಸ್ವರ್ಗಕಾಮಾದಿಪದಗಳು ನಿಯೋಜ್ಯನನ್ನು ಹೇಳುವವೆಂಬುದು ತಪ್ಪು

(ಮೂಲ)

೮೦. ಅಪಿ ಚ 'ಸ್ವರ್ಗಕಾಮೋ ಯಜೇತ' ಇತ್ಯಾದಿಷು ಲಕಾರವಾಚ್ಯ ಕರ್ತೃವಿಶೇಷಸಮರ್ಪಣಪರಾಣಾಂ ಸ್ವರ್ಗಕಾಮಾದಿಪದಾನಾಂ ನಿಯೋಜ್ಯವಿಶೇಷ ಸಮರ್ಪಣಪರತ್ವಂ ಶಬ್ದಾನುಶಾಸನವಿರುದ್ಧಂ ಕೇನಾವಗಮ್ಯತೇ ? ಸಾಧ್ಯ ಸ್ವರ್ಗವಿಶಿಷ್ಟಸ್ಯ ಅಸ್ವರ್ಗಸಾಧನೇ ಕರ್ತೃತ್ವಾನ್ವಯೋ ನ ಘಟತ ಇತಿ ಚೇತ್

---

1. ಆದ್ದರಿಂದ ಫಲವು ಶೇಷಿ, ಯಾಗಾದಿಗಳು ಶೇಷ.
2. ಆದ್ದರಿಂದ ಅಲ್ಲಿ ಯಾಗಾದಿಯೇ ಶೇಷಿ; ಮಿಕ್ಕದ್ದು ಶೇಷ.
3. ಇಲ್ಲಿ ಗರ್ಭಾಧಾನಾದೀನಾಮಪಿ ಎಂದು ಕಾ॥. ಗರ್ಭದಾಸಾದೀನಾಮಪಿ ಎಂದು ತೆ॥. ಗರ್ಭಾಧಾನವೆಂಬ ಶಾಸ್ತ್ರೋಕ್ತಕರ್ಮವನ್ನು ಮತ್ತೊಬ್ಬಪುರುಷನಲ್ಲಿ ಅತಿಶಯವುಂಟಾಗಲೆಂಬ ಇಚ್ಛೆಯಿಂದ ಮಾಡುತ್ತಾರೆ ; ಆದ್ದರಿಂದ ಅದು **ಶೇಷ** ಎಂದು ಮೊದಲನೆಯ ಪಾಠಕ್ಕೆ ಅರ್ಥವಾಗುತ್ತದೆ ; ಗರ್ಭದಾಸನು ಒಡೆಯನಿಗೆ ಪ್ರಯೋಜನವಾಗಲೆಂಬ ಇಚ್ಛೆಯಿಂದ ಉಪಾದೇಯನಾಗಿರುತ್ತಾನೆ, ಆದ್ದರಿಂದ ಅವನು **ಶೇಷ** ಎಂದು ಎರಡನೆಯ ಪಾಠಕ್ಕೆ ಅಭಿಪ್ರಾಯ. ಟೀಕೆಯಲ್ಲಿ ಯಾವದನ್ನು ಸ್ವೀಕರಿಸಿದೆ - ಎಂಬುದು ಸ್ಪಷ್ಟವಾಗುವದಿಲ್ಲ. ಶಾಬರಭಾಷ್ಯವನ್ನನುಸರಿಸಿ ನಾವು ಗರ್ಭದಾಸನೆಂಬ ಮಾತನ್ನೇ ಅಂಗೀಕರಿಸಿರುತ್ತೇವೆ. ಮುಂತಾದವು ಎಂದರೆ ಎತ್ತು ಮುಂತಾದದ್ದು.

ನಿಯೋಜ್ಯತ್ವಾನ್ವಯೋಽಪಿ ನ ಘಟತ ಇತಿ ಹಿ ಸ್ವರ್ಗಸಾಧನತ್ವನಿಶ್ಚಯಃ । ಸ ತು ಶಾಸ್ತ್ರಸಿದ್ಧೇ ಕರ್ತ್ಯಾನ್ವಯೇ ಸ್ವರ್ಗಸಾಧನತ್ವನಿಶ್ಚಯಃ ಕ್ರಿಯತೇ ಯಥಾ 'ಭೋಕ್ತುಕಾಮೋ ದೇವದತ್ತಗೃಹಂ ಗಚ್ಛೇತ್' ಇತ್ಯುಕ್ತೇ ಭೋಜನಕಾಮಸ್ಯ ದೇವದತ್ತಗೃಹಗಮನೇ ಕರ್ತೃತ್ವಶ್ರವಣಾದೇವ ಪ್ರಾಗಜ್ಞಾತಮಪಿ ಭೋಜನ ಸಾಧನತ್ವಂ ದೇವದತ್ತಗೃಹಗಮನಸ್ಯ ಅವಗಮ್ಯತೇ । ಏವಮತ್ರಾಽಪಿ ಭವತಿ[1] ನ ಕ್ರಿಯಾನ್ತರಂ ಪ್ರತಿ ಕರ್ತೃತಯಾ ಶ್ರುತಸ್ಯ ಕ್ರಿಯಾನ್ತರೇ ಕರ್ತೃತ್ವಕಲಪನಂ ಯುಕ್ತಮ್ । ಯಜೇತ' ಇತಿ ಹಿ ಯಾಗಕರ್ತೃತಯಾ ಶ್ರುತಸ್ಯ ಬುದ್ಧೌ ಕರ್ತೃತ್ವಕಲ್ಪನಂ ಕ್ರಿಯತೇ । ಬುದ್ಧೇಃ[2] ಕರ್ತೃತ್ವಕಲ್ಪನಮೇವ ಹಿ ನಿಯೋಜ್ಯತ್ವಮ್ । ಯಥೋಕ್ತಮ್ 'ನಿಯೋಜ್ಯಃ ಸ ಚ ಕಾರ್ಯಂ ಯಃ ಸ್ವಕೀಯತ್ವೇನ ಬುಧ್ಯತೇ' (?) ಇತಿ ಯಷ್ಟೃತ್ವಾನುಗುಣಂ ತದ್ಬೋದ್ಧೃತ್ವಮ್ ಇತಿ ಚೇತ್ 'ದೇವದತ್ತಃ ಪಚೇತ್' ಇತಿ ಪಾಕ ಕರ್ತೃತಯಾ ಶ್ರುತಸ್ಯ ದೇವದತ್ತಸ್ಯ ಪಾಕಾರ್ಥಗಮನಂ ಪಾಕಾನುಗುಣಮಿತಿ ಗಮನೇ ಕರ್ತೃತ್ವಕಲ್ಪನಂ ನ ಯುಜ್ಯತೇ ॥

(ಅರ್ಥ)

ಇದಲ್ಲದೆ 'ಸ್ವರ್ಗಕಾಮನು ಯಾಗಮಾಡಬೇಕು' ಎಂದು ಮುಂತಾಗಿರುವ (ವಾಕ್ಯ)ಗಳಲ್ಲಿ ಲಕಾರವಾಚ್ಯವಾದ ಆಯಾ ಕರ್ತೃವನ್ನು ಸಮರ್ಪಣಮಾಡುವದರಲ್ಲಿ ತಾತ್ಪರ್ಯವುಳ್ಳ ಸ್ವರ್ಗಕಾಮವೇ ಮುಂತಾದ ಪದಗಳು ಒಬ್ಬಾನೊಬ್ಬ ನಿಯೋಜ್ಯನನ್ನು[4] ತಿಳಿಸುವದರಲ್ಲಿ ತಾತ್ಪರ್ಯವುಳ್ಳವೆಂದು ಶಬ್ದಾನುಶಾಸನಕ್ಕೆ ವಿರುದ್ಧವಾಗಿ ಯಾವ (ಪ್ರಮಾಣ)ದಿಂದ ನಿಶ್ಚಯಿಸಬೇಕು[5]?

(ಕಾರ್ಯವಾದಿ) :– ಸಾಧ್ಯವಾದ ಸ್ವರ್ಗದಿಂದೊಡಗೂಡಿರುವವನಿಗೆ ಸ್ವರ್ಗ

---

1. 'ಭವತೀತಿ' ಕಾ॥ 2. 'ಬುದ್ಧೌ' ಕಾ॥

3. 'ಪಾಕೇ ಕರ್ತೃತಯಾ' ಕಾ॥

4. ಕಾರ್ಯವು ತನ್ನದೆಂಬ ಬುದ್ಧಿಯುಳ್ಳವನು ನಿಯೋಜ್ಯನು, ಅದಕ್ಕೆ ಸಾಧನವಾದ ಕರ್ಮವು ತನ್ನದೆಂಬ ಬುದ್ಧಿಯುಳ್ಳವನು ಅಧಿಕಾರಿಯು, ಅದನ್ನು ಮಾಡುವವನು ಕರ್ತೃ- ಎಂದು ಮೂರು ಅವಸ್ಥೆಗಳುಂಟು. ಇಲ್ಲಿ 'ಯಜೇತ' ಎಂಬುದು ನಿಯೋಜ್ಯಸಾಮಾನ್ಯವನ್ನೂ ಸ್ವರ್ಗಕಾಮಪದವು ನಿಯೋಜ್ಯವಿಶೇಷವನ್ನೂ ತಿಳಿಸುತ್ತದೆ- ಎಂಬುದು ಪ್ರಾಭಾಕರಮತ. ಅದನ್ನು ಇಲ್ಲಿ ಖಂಡಿಸಿದೆ- ಎಂದು ಟೀಕೆ.

5. 'ಯಜೇತ' ಎಂಬಲ್ಲಿರುವ ಆಖ್ಯಾತಪ್ರತ್ಯಯವು ಕರ್ತೃವನ್ನು ಮಾತ್ರ ಹೇಳುತ್ತದೆಯೆಂದು ವೈಯಾಕರಣರು ಹೇಳುತ್ತಾರೆ; 'ನಿಯೋಜ್ಯ'ನೆಂಬರ್ಥವನ್ನು ಯಾವವ್ಯಾಕರಣದ ಆಧಾರದಿಂದ ತಿಳಿಯೋಣ? ಸ್ವರ್ಗಕಾಮನೆಂಬುದು ಕರ್ತೃವು ಯಾರೆಂಬುದನ್ನು ಮಾತ್ರ ಹೇಳುತ್ತದೆ ; ನಿಯೋಜ್ಯವಿಶೇಷನನ್ನಲ್ಲ.

ಸಾಧನವಲ್ಲದ (ಕ್ರಿಯೆ)ಯಲ್ಲಿ ಕರ್ತೃವಾಗಿ ಅನ್ವಯವಾಗುವದೆಂಬುದು ಹೊಂದುವದಿಲ್ಲ(ವಾದ್ದರಿಂದ)[1] ಎಂದರೂ?

(ಸಿದ್ಧಾಂತಿ) :- ನಿಯೋಜ್ಯನಾಗಿ ಅನ್ವಯವಾಗುವದೆಂಬುದೂ (ಅವನಿಗೆ) ಹೊಂದುವದಿಲ್ಲವೆಂಬುದರಿಂದಲ್ಲವೆ, (ಕಾರ್ಯವು) ಸ್ವರ್ಗಸಾಧನವೆಂದು ನಿಶ್ಚಯಿಸುವದು?[2] ಆ ಸ್ವರ್ಗಸಾಧನತ್ವನಿಶ್ಚಯವನ್ನು ಶಾಸ್ತ್ರಸಿದ್ಧವಾದ ಕರ್ತೃತ್ವಾನ್ವಯವನ್ನೊಪ್ಪಿಯೇ ಮಾಡಬಹುದಾಗಿದೆ. ಹೇಗೆಂದರೆ 'ಭೋಜನ ಮಾಡ ಬೇಕೆಂಬ ಕಾಮವುಳ್ಳವನು ದೇವದತ್ತನ ಮನೆಗೆ ಹೋಗಬೇಕು' ಎಂದು ಹೇಳಿದರೆ ಭೋಜನ ಕಾಮನಾದವನಿಗೆ ದೇವದತ್ತನ ಮನೆಗೆ ಹೋಗುವದೆಂಬ ಕ್ರಿಯೆಗೆ ಕರ್ತೃತ್ವವನ್ನು (ಹೇಳಿದ್ದನ್ನು) ಕೇಳಿದ್ದರಿಂದಲೇ ದೇವದತ್ತನ ಮನೆಗೆ ಹೋಗುವದು ಭೋಜನಕ್ಕೆ ಸಾಧನವೆಂಬುದು ಮೊದಲು ತಿಳಿಯದೆ ಇದ್ದರೂ ನಿಶ್ಚಿತವಾಗುತ್ತದೆ. ಇಲ್ಲಿಯೂ ಹಾಗೇ ಆಗಬಹುದಾದ್ದರಿಂದ ಒಂದು ಕ್ರಿಯೆಯಲ್ಲಿ ಕರ್ತೃವಾಗಿ ಶ್ರುತಿಯಲ್ಲಿ ಹೇಳಿದವನು ಮತ್ತೊಂದು ಕ್ರಿಯೆಗೆ[3] ಕರ್ತೃವೆಂದು ಕಲ್ಪಿಸುವದು ಸರಿಯಲ್ಲ. 'ಯಾಗಮಾಡಬೇಕು' ಎಂದು ಯಾಗಕರ್ತೃವಾಗಿ ಶ್ರುತಿಯಲ್ಲಿ ಹೇಳಿರುವವನೇ ಕರ್ತೃವೆಂದಲ್ಲವೆ, ಬುದ್ಧಿಯಲ್ಲಿ ಕಲ್ಪಿಸುವದು? ಬುದ್ಧಿಗೆ ಕರ್ತೃವೆಂದು ಕಲ್ಪಿಸುವದೇ ಅಷ್ಟೆ, ನಿಯೋಜ್ಯತ್ವವೆಂಬುದು? ಹಾಗೆಂದು 'ಯಾವನು ಕಾರ್ಯವನ್ನು ತನ್ನದೆಂದು ತಿಳಿಯುತ್ತಾನೋ ಅವನೇ ನಿಯೋಜ್ಯನು' (?) ಎಂಬಲ್ಲಿ ಹೇಳಲಾಗಿದೆ(ಯಲ್ಲವೆ) ?

(ಕಾರ್ಯವಾದಿ) :— ಆ ಬೋದ್ಧೃತ್ವವು (ತಾನು) ಯಾಗಕರ್ತೃವೆಂಬುದಕ್ಕೆ ಅನುಗುಣವಾಗಿರುತ್ತದೆ.[4]

---

1. ಸಾಧ್ಯವನ್ನು ಬಯಸುತ್ತಿರುವವನನ್ನು ಸಾಧನವಲ್ಲದ್ದರಲ್ಲಿ ನಿಯೋಜಿಸುವದು ಆಗಲಾರದು- ಎಂಬ ನ್ಯಾಯದಿಂದ ಸ್ವರ್ಗಕಾಮನು ಸ್ವರ್ಗಸಾಧನವಲ್ಲದ್ದಕ್ಕೆ ಕರ್ತೃವಾಗಲಾರನಾದ್ದರಿಂದ ಸ್ವರ್ಗಕಾಮನೆಂಬುದು ಕರ್ತೃವಿಶೇಷಣವಾಗಲಾರದು. ಏಕೆಂದರೆ ಕ್ರಿಯೆಯು ಸ್ವರ್ಗಸಾಧನವಲ್ಲ.
2. ಸ್ವರ್ಗವನ್ನು ಬಯಸುವವನಿಗೆ ಸ್ವರ್ಗಕ್ಕೆ ಸಾಧನವಲ್ಲದ್ದರ ವಿಷಯಕ್ಕೆ ನಿಯೋಜ್ಯತ್ವವೂ ಹೊಂದುವದಿಲ್ಲವಾದ್ದರಿಂದ ಸ್ವರ್ಗಕಾಮಪದವು ನಿಯೋಜ್ಯವಿಶೇಷಣವೂ ಆಗಲಾರದು. ಈ ಕಾರಣದಿಂದಲೇ ಕಾರ್ಯವಾದ ನಿಯೋಗವು ಸ್ವರ್ಗಸಾಧನವೆಂದು ನೀವು ಕಲ್ಪಿಸಿರುತ್ತೀರಿ- ಎಂದರ್ಥ.
3. ಯಾಗಕ್ರಿಯೆಗೆ ಕರ್ತೃವೆಂದು ಶ್ರುತಿ ಹೇಳಿರುವಲ್ಲಿ ಕಾರ್ಯವನ್ನು ಸಾಧಿಸುವ ನಿಯೋಜ್ಯನೆಂದುಕಲ್ಪಿಸುವದು ಯುಕ್ತವಲ್ಲ ಎಂದರ್ಥ.
4. ತಾನು ನಿಯೋಜ್ಯನೆಂದು ತಿಳಿಯದವನು ಯಾಗವನ್ನು ಮಾಡುವದಿಲ್ಲವಾಗಿ, ನಿಯೋಜ್ಯತ್ವವು ಯಾಗಕರ್ತೃತ್ವಕ್ಕೆ ಅನುಗುಣವಾಗಿರುವದರಿಂದ ನಿಯೋಜ್ಯತ್ವವನ್ನೇ ಸ್ವರ್ಗಕಾಮಪದವು ಹೇಳುತ್ತದೆ ಎಂದು ಕಲ್ಪಿಸುತ್ತೇವೆ- ಎಂದರ್ಥ.

(ಸಿದ್ಧಾಂತಿ) :— 'ದೇವದತ್ತನು ಅಡಿಗೆಮಾಡಲಿ !' ಎಂದು ಅಡಿಗೆಗೆ ಕರ್ತೃವಾಗಿ ಹೇಳಿರುವ ದೇವದತ್ತನು, ಅಡಿಗೆಗಾಗಿ ಹೋಗುವದೆಂಬುದು ಅಡಿಗೆಗೆ ಅನುಗುಣವಾಗಿರುವದೆಂಬ ಕಾರಣದಿಂದ, ಹೋಗುವದೆಂಬ ಕ್ರಿಯೆಗೆ ಕರ್ತೃವೆಂದು (ವಾಕ್ಯಾರ್ಥವನ್ನು) ಕಲ್ಪಿಸುವುದು ಸರಿಯಾಗಲಾರದು.[1]

ಕರ್ಮಫಲಸಿದ್ಧಿಗಾಗಿ ಅಪೂರ್ವವನ್ನು ಅಂಗೀಕರಿಸಬೇಕಾದದ್ದಿಲ್ಲ, ಏಕೆಂದರೆ ಈಶ್ವರನೇ ಫಲದಾತೃ

(ಮೂಲ)

೮೧. ಕಿಂ ಚ ಲಿಙಾದಿಶಬ್ದವಾಚ್ಯಂ ಸ್ಥಾಯಿರೂಪಂ ಕಿಮಿತ್ಯಪೂರ್ವಮಾಶ್ರಿಯತೇ ? ಸ್ವರ್ಗಕಾಮಪದಸಮಭಿವ್ಯಾಹಾರಾನುಪಪತ್ತೇರಿತಿ ಚೇತ್ ? ಕಾತ್ರಾಽನುಪಪತ್ತಿಃ ? ಸಿಷಾಧಯಿಷಿತಸ್ವರ್ಗೋ ಹಿ ಸ್ವರ್ಗಕಾಮಃ ತಸ್ಯ ಸ್ವರ್ಗಕಾಮಸ್ಯ ಕಾಲಾನ್ತರಭಾವಿಸ್ವರ್ಗಸಿದ್ಧೌ ಕ್ಷಣಭಙ್ಗಿನೀ ಯಾಗಾದಿಕ್ರಿಯಾ ನ ಸಮರ್ಥಾ ಇತಿ ಚೇತ್ । ಅನಾಘ್ರಾತವೇದಸಿದ್ಧಾನ್ತಾನಾಮ್ ಇಯಮನುಪಪತ್ತಿಃ । ಸರ್ವೈಃ ಕರ್ಮಭಿರಾರಾಧಿತಃ ಪರಮೇಶ್ವರೋ ಭಗವನ್ನಾರಾಯಣಃ, ತತ್ತದಿಷ್ಟಂ ಫಲಂ ದದಾತೀತಿ ವೇದವಿದೋ ವದನ್ತಿ । ಯಥಾಹುರ್ವೇದವಿದಗ್ರೇಸರಾ ದ್ರಮಿಡಾಚಾರ್ಯಾಃ 'ಫಲಸಂಬಿಭನ್ತ್ಸಯಾ[2] ಕರ್ಮಭಿರಾತ್ಮಾನಂ ಪಿಪ್ರೀಷನ್ತಿ । ಸ ಪ್ರೀತೋಽಲಂ ಫಲಾಯೇತಿ ಶಾಸ್ತ್ರಮರ್ಯಾದಾ' (ದ್ರ.ಭಾ.) ಇತಿ । ಫಲಸಂಬನ್ಧೇಚ್ಛಯಾ ಕರ್ಮಭಿಃ ಯಾಗದಾನಹೋಮಾದಿಭಿಃ, ಇನ್ದ್ರಾದಿದೇವತಾಮುಖೇನ ತತ್ತದನ್ತರ್ಯಾಮಿರೂಪೇಣಾವಸ್ಥಿತಮ್ ಇನ್ದ್ರಾದಿಶಬ್ದ ವಾಚ್ಯಂ ಪರಮಾತ್ಮಾನಂ ಭಗವನ್ತಂ ವಾಸುದೇವಮ್ ಆರಿರಾಧಯಿಷನ್ತಿ । ಸ ಹಿ ಕರ್ಮಭಿರಾರಾಧಿತಃ ತೇಷಾಮ್ ಇಷ್ಟಾನಿ ಫಲಾನಿ ಪ್ರಯಚ್ಛತೀತ್ಯರ್ಥಃ । ತಥಾ ಚ ಶ್ರುತಿಃ 'ಇಷ್ಟಾಪೂರ್ತಂ ಬಹುಧಾ ಜಾತಂ ಜಾಯಮಾನಂ ವಿಶ್ವಂ ಬಿಭರ್ತಿ ಭುವನಸ್ಯ

---

1. ಕ್ಷಣಿಕವಾದ ಕ್ರಿಯೆಯಿಂದ ಸ್ಥಿರವಾದ ಅಪೂರ್ವವುಂಟಾಗುವದೆಂದು ತಿಳಿದವನೇ ಯಾಗ ಕ್ರಿಯೆಯಲ್ಲಿ ತೊಡಗುವನೆಂದಾದರೂ ವಾಕ್ಯದಲ್ಲಿ ನಿಯೋಜ್ಯನೆಂಬ ತಿಳಿವಳಿಕೆಯನ್ನು ಹೇಳಿದೆ ಎಂದು ಕಲ್ಪಿಸುವದು ಯುಕ್ತವಾಗಲಾರದು. ಹಾಗೆ ಮಾಡಿದರೆ 'ಇವನು ಅಡಿಗೆ ಮಾಡಬೇಕು'-ಎಂಬ ವಾಕ್ಯದಲ್ಲಿ ಹೋಗುವದನ್ನು ಹೇಳಿದೆ ಎಂದೂ ಕಲ್ಪಿಸಬಹುದಾಗುವದು ; ಏಕೆಂದರೆ ಅಡಿಗೆಯ ಮನೆಗೆ ಹೋಗುವದು ಅಡಿಗೆ ಮಾಡುವದಕ್ಕೆ ಅನುಗುಣವಾದ ಕ್ರಿಯೆಯಾಗಿದೆ. ಆದರೆ ಅಷ್ಟುಮಾತ್ರದಿಂದ ಈ ವಾಕ್ಯದಲ್ಲಿ ಹೋಗಬೇಕೆಂದೂ ಹೇಳಿದೆ ಎಂದು ಯಾರೂ ಕಲ್ಪಿಸುವದಿಲ್ಲ. ಆದ್ದರಿಂದ ನಿಯೋಜ್ಯತ್ವವನ್ನು ವಾಕ್ಯದರ್ಥವೆಂದು ಕಲ್ಪಿಸುವದು ಸರಿಯಲ್ಲ ಎಂದರ್ಥ.

2. ಇದರ ಮುಂದೆ 'ಹಿ' ಎಂದು ಹೆಚ್ಚಾಗಿ ಕಾ॥

ನಾಭಿಃ' (ತೈ.ನಾ.೨) ಇತಿ । ಇಷ್ಟಾಪೂರ್ತಮಿತಿ ಸಕಲಶ್ರುತಿಸ್ಮೃತಿಚೋದಿತಂ ಕರ್ಮೋಚ್ಯತೇ । ತದ್ ವಿಶ್ವಂ ಬಿಭರ್ತಿ ಇನ್ದ್ರಾಗ್ನಿ ವರುಣಾದಿಸರ್ವ ದೇವತಾಸಂಬನ್ಧಿತಯಾ ಪ್ರತೀಯಮಾನಮ್ ತತ್ತದನ್ತರಾತ್ಮತಯಾಽವಸ್ಥಿತಃ ಪರಮಪುರುಷಃ ಸ್ವಯಮೇವ ಬಿಭರ್ತಿ ಸ್ವಯಮೇವ ಸ್ವೀಕರೋತಿ । ಭುವನಸ್ಯ ನಾಭಿಃ ಬ್ರಹ್ಮಕ್ಷತ್ರಾದಿಸರ್ವವರ್ಣಾಪೂರ್ಣಸ್ಯ ಭುವನಸ್ಯ ಧಾರಕಃ । ತೈಸ್ತೈಃ ಕರ್ಮಭಿರಾರಾಧಿತಃ ತತ್ತದಿಷ್ಟಫಲಪ್ರದಾನೇನ ಭುವನಾನಾಂ ಧಾರಕ ಇತಿ ನಾಭಿರಿತ್ಯುಕ್ತಮ್ । ಅಗ್ನಿವಾಯುಪ್ರಭೃತಿದೇವತಾನ್ತರಾತ್ಮತಯಾ ತತ್ತಚ್ಛಬ್ದಾಭಿಧೇಯೋಽಯಮೇವೇತ್ಯಾಹ 'ತದೇವಾಗ್ನಿಸ್ತದ್ವಾಯುಸ್ತತ್ಸೂರ್ಯಸ್ತದು ಚನ್ದ್ರಮಾಃ' (ತೈ.ನಾ.೨) ಇತಿ । ಯಥೋಕ್ತಂ ಭಗವತಾ 'ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾಽರ್ಚಿತುಮಿಚ್ಛತಿ । ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ । ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾಽಽರಾಧನಮೀಹತೇ । ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿ ತಾನ್ ॥' (ಗೀ. ೭-೨೧, ೨೨) ಯಾಂ ಯಾಂ ತನುಮ್ ಇನ್ದ್ರಾದಿದೇವತಾವಿಶೇಷಾಃ, ತತ್ತದನ್ತರ್ಯಾಮಿತಯಾಽವಸ್ಥಿತಸ್ಯ ಭಗವತಸ್ತನವಃ, ಶರೀರಾಣೀತ್ಯರ್ಥಃ । 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' (ಗೀ.೯-೨೪) ಇತ್ಯಾದಿ । ಪ್ರಭುರೇವ ಚೇತಿ ಸರ್ವಫಲಾನಾಂ ಪ್ರದಾತಾ ಚ ಇತ್ಯರ್ಥಃ । ಯಥಾ ಚ 'ಯಜ್ಞೈಸ್ತ್ವಮಿಜ್ಯಸೇ ನಿತ್ಯಂ[1] ಸರ್ವದೇವಮಯಾಚ್ಯುತ' (ವಿ.ಪು. ೫-೨೦-೯೭), 'ಯೈಃ ಸ್ವಧರ್ಮಪರೈರ್ನಾಥ ನರೈರಾರಾಧಿತೋ ಭವಾನ್ । ತೇ ತರನ್ತ್ಯಖಿಲಾಮೇತಾಂ ಮಾಯಾಮಾತ್ಮ ವಿಮುಕ್ತಯೇ ॥' (ವಿ.ಪು. ೫-೩೦-೧೬) ಇತಿ ಸೇತಿಹಾಸಪುರಾಣೇಷು ಸರ್ವೇಷ್ವೇವ ವೇದೇಷು ಸರ್ವಾಣಿ ಕರ್ಮಾಣಿ ಸರ್ವೇಶ್ವರಾರಾಧನರೂಪಾಣಿ, ತೈಸ್ತೈಃ ಕರ್ಮಭಿರಾರಾಧಿತಃ ಪುರುಷೋತ್ತಮಸ್ತತ್ತದಿಷ್ಟಫಲಂ ದದಾತೀತಿ ತತ್ರ ತತ್ರ ಪ್ರಪಞ್ಚಿತಮ್ । ಏವಮೇವ ಹಿ ಸರ್ವಜ್ಞಂ ಸರ್ವಶಕ್ತಿಂ ಸರ್ವೇಶ್ವರಂ ಭಗವನ್ತಮ್ ಇನ್ದ್ರಾದಿದೇವತಾನ್ತರ್ಯಾಮಿರೂಪೇಣ ಯಾಗದಾನ ಹೋಮಾದಿ ವೇದೋದಿತಸರ್ವಕರ್ಮಣಾಂ ಭೋಕ್ತಾರಂ ಸರ್ವಫಲಾನಾಂ ಪ್ರದಾತಾರಂ ಚ ಸರ್ವಾಃ ಶ್ರುತಯೋ ವದನ್ತಿ । 'ಚತುರ್ಹೋತಾರೋ ಯತ್ರ ಸಂಪದಂ ಗಚ್ಛನ್ತಿ ದೇವೈಃ' (ತೈ. ಆ. ೩-೧೧-೨೧) ಇತ್ಯಾದ್ಯಾಃ । ಚತುರ್ಹೋತಾರಃ ಯಜ್ಞಾಃ, ಯತ್ರ ಪರಮಾತ್ಮನಿ ದೇವೇಷ್ವನ್ತರ್ಯಾಮಿತಯಾ ಸ್ಥಿತೇ, ದೇವೈಃ ಸಂಪದಂ ಗಚ್ಛನ್ತಿ ದೇವೈಃ ಸಂಬನ್ಧಂ ಗಚ್ಛನ್ತೀತ್ಯರ್ಥಃ । ಅನ್ತರ್ಯಾಮಿರೂಪೇಣಾವಸ್ಥಿತಸ್ಯ ಪರಮಾತ್ಮನಃ ಶರೀರಿತಯಾಽವಸ್ಥಿತಾನಾಮ್ ಇನ್ದ್ರಾದೀನಾಂ ಯಾಗಾದಿಸಂಬನ್ಧಃ ಇತ್ಯುಕ್ತಂ ಭವತಿ । ಯಥೋಕ್ತಂ ಭಗವತಾ । 'ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಮ್' (ಗೀ. ೫-೨೯) ಇತಿ । ತಸ್ಮಾತ್

1. 'ಇಜ್ಯಸೇಽ ಚಿನ್ತ್ಯ' ಎಂದು ಅಚ್ಚಿನ ಪುಸ್ತಕದ ಪಾಠ.

ಅಗ್ನ್ಯಾದಿ[1] ದೇವತಾನ್ತರ್ಯಾಮಿಭೂತಪರಮಪುರುಷಾರಾಧನರೂಪಾಣಿ ಸರ್ವಾಣಿ ಕರ್ಮಾಣಿ ಸ ಏವ ಚಾಭಿಲಷಿತಪ್ರದಾಯಿತಾ[2] ಕಿಮತ್ರಾಪೂರ್ವೇಣ ವ್ಯುತ್ಪತ್ತಿ ಪಥದೂರವರ್ತಿನಾ ವಾಚ್ಯತಯಾ ಅಭ್ಯುಪಗತೇನ ಕಲ್ಪಿತೇನ[3] ವಾ ಪ್ರಯೋಜನಮ್ ? ಏವಂ ಚ ಸತಿ ಲಿಙಾದೇಃ ಕೋಽಯಮರ್ಥಃ ಪರಿಗೃಹೀತೋ ಭವತಿ?[4] ಯಜ ದೇವಪೂಜಾಯಾಮ್ ಇತಿ ದೇವತಾರಾಧನಭೂತಯಾಗಾದೇಃ ಪ್ರಕೃತ್ಯರ್ಥಸ್ಯ ಕರ್ತ್ರವ್ಯಾಪಾರಸಾಧ್ಯತಾಂ ವ್ಯುತ್ಪತ್ತಿಸಿದ್ಧಾಂ ಲಿಙಾದಯೋಽಭಿದಧತೀತಿ ನ ಕಿಂಚಿದನುಪಪನ್ನಮ್ । ಕರ್ತ್ರವಾಚಿನಾಂ ಪ್ರತ್ಯಯಾನಾಂ ಪ್ರಕೃತ್ಯರ್ಥಸ್ಯ ಕರ್ತ್ರವ್ಯಾಪಾರಸಂಬನ್ಧಪ್ರಕಾರೋ ಹಿ ವಾಚ್ಯಃ । ಭೂತವರ್ತಮಾನತಾದಿಮನ್ಯೇ ವದನ್ತಿ । ಲಿಙಾದಯಸ್ತು ಕರ್ತ್ರವ್ಯಾಪಾರಸಾಧ್ಯತಾಂ ವದನ್ತಿ ॥

(ಅರ್ಥ)

(ಪ್ರಶ್ನೆ) :— ಇದಲ್ಲದೆ ಲಿಙಾದಿಶಬ್ದಗಳಿಂದ ಹೇಳುವದು ಸ್ಥಿರರೂಪವಾದ ಅಪೂರ್ವವೆಂದು ಏತಕ್ಕೆ ಆಶ್ರಯಿಸಬೇಕು?

(ಕಾರ್ಯವಾದಿ) :— ಸ್ವರ್ಗಕಾಮಪದದೊಡನೆ ಉಚ್ಚರಿಸಿರುವದು ಉಪಪನ್ನವಾಗುವದಿಲ್ಲವಾದ್ದರಿಂದ (ಆಶ್ರಯಿಸಬೇಕು).

(ಸಿದ್ಧಾಂತಿ) :— ಇಲ್ಲಿ ಅನುಪಪತ್ತಿ ಎಂಬುದು ಯಾವದು?

(ಕಾರ್ಯವಾದಿ) :— ಸ್ವರ್ಗವನ್ನು ಸಾಧಿಸಲಿಚ್ಛಿಸಿರುವವನಲ್ಲವೆ, ಸ್ವರ್ಗಕಾಮನು? ಆ ಸ್ವರ್ಗಕಾಮನಿಗೆ ಕಾಲಾಂತರದಲ್ಲಿ ಆಗುವ ಸ್ವರ್ಗವನ್ನು ಸಾಧಿಸುವದಕ್ಕೆ ಕ್ಷಣದಲ್ಲಿ ನಾಶವಾಗುವ ಯಾಗಾದಿಕ್ರಿಯೆಯು ಶಕ್ತವಲ್ಲ(ವೆಂಬುದೇ ಅನುಪಪತ್ತಿ).

(ಸಿದ್ಧಾಂತಿ) :— ವೇದಸಿದ್ಧಾಂತವನ್ನು ಮೂಸಿಯೂ ನೋಡದವರಿಗೆ ಇದು ಅನುಪಪತ್ತಿ(ಯಾಗಿರಬಹುದು. ಏಕೆಂದರೆ) **ಸರ್ವಕರ್ಮಗಳಿಂದಲೂ ಆರಾಧನೆ ಮಾಡಿದರೆ ಪರಮೇಶ್ವರನಾದ ನಾರಾಯಣಭಗವಂತನು ಅವರವರಿಗೆ ಇಷ್ಟವಾದ ಫಲವನ್ನು ಕೊಡುತ್ತಾನೆಂದು ವೇದವನ್ನು ಬಲ್ಲವರು ಹೇಳುತ್ತಾರೆ.** ಹೀಗೆಂದು ವೇದವನ್ನು ಬಲ್ಲವರಲ್ಲಿ ಅಗ್ರೇಸರರಾದ **ದ್ರಮಿಡಾಚಾರ್ಯರು** ಹೇಳಿರುತ್ತಾರೆ : 'ಫಲಕ್ಕೆ ಸಂಬಂಧಿಸಿಕೊಳ್ಳುವ ಇಚ್ಛೆಯಿಂದ ಕರ್ಮಗಳಿಂದ ಆತ್ಮನನ್ನು ಪ್ರೀತಿಗೊಳಿಸುವದಕ್ಕೆ ಇಚ್ಛಿಸುತ್ತಾರೆ ; ಆತನು ಪ್ರೀತನಾದರೆ ಫಲಕ್ಕೆ ಶಕ್ತನಾಗುತ್ತಾನೆ- ಎಂದು ಶಾಸ್ತ್ರಮರ್ಯಾದೆ' (ದ್ರ.ಭಾ.). ಫಲದ ಸಂಬಂಧವು (ತಮಗೆ) ಆಗಬೇಕೆಂಬ

---

1. 'ಇನ್ದ್ರಾದಿದೇವತಾ' ಕಾ॥
2. 'ಫಲಪ್ರದಾತೇತಿ' ಕಾ॥
3. 'ಕಲ್ಪೇನ' ಕಾ॥
4. 'ಪರಿಗೃಹೀತ ಇತಿ ಚೇತ್' ಕಾ॥

ಇಚ್ಛೆಯಿಂದ ಕರ್ಮಗಳಿಂದ ಎಂದರೆ ಯಾಗದಾನಹೋಮಾದಿಗಳಿಂದ ಇಂದ್ರಾದಿ ದೇವತೆಗಳ ದ್ವಾರದಿಂದ ಅವರವರ ಅಂತರ್ಯಾಮಿರೂಪದಿಂದ ಇದ್ದುಕೊಂಡಿರುವ ಇಂದ್ರಾದಿಶಬ್ದವಾಚ್ಯನಾದ ಪರಮಾತ್ಮನಾದ ವಾಸುದೇವ ಭಗವಂತನನ್ನು ಆರಾಧಿಸುವದಕ್ಕೆ ಬಯಸುತ್ತಾರೆ ; ಏಕೆಂದರೆ ಆತನು ಕರ್ಮಗಳಿಂದ ಆರಾಧಿತನಾಗಿ ಅವರ ಇಷ್ಟವಾದ ಫಲಗಳನ್ನು ಕೊಡುತ್ತಾನೆ ಎಂದರ್ಥ. ಆದ್ದರಿಂದಲೇ ಶ್ರುತಿಯು 'ಬಲುಬಗೆಯಿಂದ ಆಗಿರುವ ಮತ್ತು ಆಗುತ್ತಿರುವ ಎಲ್ಲಾ ಇಷ್ಟಾಪೂರ್ತವನ್ನೂ ಭುವನದ ಆ ನಾಭಿಯು ಧರಿಸಿರುತ್ತದೆ' (ತೈ.ನಾ.೨)- ಎಂದು (ಹೇಳಿರುತ್ತದೆ). (ಇಲ್ಲಿ) ಶ್ರುತಿಸ್ಮೃತಿಗಳಲ್ಲಿ ವಿಹಿತವಾಗಿರುವ ಕರ್ಮವನ್ನೆಲ್ಲ ಇಷ್ಟಾಪೂರ್ತವೆಂದು ಕರೆದಿರುತ್ತದೆ. ಅದೆಲ್ಲವನ್ನೂ ಧರಿಸುತ್ತಾನೆ, ಎಂದರೆ ಇಂದ್ರ, ಅಗ್ನಿ, ವರುಣ-ಮುಂತಾದ ಸರ್ವದೇವತೆಗಳ ಸಂಬಂಧಿಯೆಂದು ತೋರುವ[1] (ಆ ಕರ್ಮವನ್ನು) ಆ(ಯಾ ದೇವತೆಗಳ) ಅಂತರಾತ್ಮನಾಗಿ ಇದ್ದುಕೊಂಡಿರುವ ಪರಮಪುರುಷನು ತಾನೇ ಧರಿಸುತ್ತಾನೆ, ತಾನೇ ಸ್ವೀಕರಿಸುತ್ತಾನೆ- ಎಂದರ್ಥ. ಭುವನದ ನಾಭಿ ಎಂದರೆ ಬ್ರಹ್ಮಕ್ಷತ್ರಾದಿಸರ್ವವರ್ಣಗಳಿಂದ ತುಂಬಿರುವ ಭುವನವನ್ನು ಧಾರಣಮಾಡುತ್ತಿರುವವನು ; ಆಯಾ ಕರ್ಮಗಳಿಂದ ಆರಾಧಿತನಾಗಿ ಅವರವರಿಗೆ ಬೇಕಾದ ಫಲವನ್ನು ಕೊಡುವದರಿಂದ ಭುವನಗಳನ್ನು ಧರಿಸಿರುವವನಾದ್ದರಿಂದ ಅವನನ್ನು 'ನಾಭಿ' (ಗುಂಬ) ಎಂದಿದೆ. **ಅಗ್ನಿ, ವಾಯು- ಮುಂತಾದ ದೇವತೆಗಳ ಅಂತರಾತ್ಮನಾಗಿದ್ದುಕೊಂಡು ಆಯಾ ಶಬ್ದಗಳಿಗೆ ಅಭಿಧೇಯನಾಗಿರುವವನು ಈತನೇ ಎಂದು 'ಅದೇ ಅಗ್ನಿಯು, ಅದೇ ವಾಯು, ಅದೇ ಸೂರ್ಯ ಮತ್ತು ಅದೇ ಚಂದ್ರನು' (ತೈ.ನಾ.೨) ಎಂಬ (ಶ್ರುತಿ) ಹೇಳುತ್ತಿದೆ.** ಭಗವಂತನೂ 'ಯಾವಯಾವ ಭಕ್ತನು ಯಾವ ಯಾವ ತನುವನ್ನು ಶ್ರದ್ಧೆಯಿಂದ ಅರ್ಚಿಸಬೇಕೆಂದು ಇಚ್ಛಿಸುತ್ತಾನೋ ಅವನವನಿಗೆ ಅಚಲವಾದ ಆ ಶ್ರದ್ಧೆಯನ್ನೇ ಉಂಟುಮಾಡುವೆನು ; ಅವನು ಆ ಶ್ರದ್ಧೆಯಿಂದೊಡಗೂಡಿ ಆ (ತನುವಿನ) ಆರಾಧನೆಗೆ ತೊಡಗುತ್ತಾನೆ, ಅದರಿಂದ ನನ್ನಿಂದಲೇ ಕೊಡಲ್ಪಟ್ಟ ಆ ಕಾಮಗಳನ್ನು ಅವನು ಪಡೆದುಕೊಳ್ಳುತ್ತಾನೆ' (ಗೀ. ೭-೨೧, ೨೨) ಎಂದು ಹೇಳಿರುತ್ತಾನೆ. (ಇಲ್ಲಿ) ಯಾವಯಾವ ತನುವನ್ನು ಎಂದರೆ ಇಂದ್ರಾದಿದೇವತಾವಿಶೇಷಗಳು ಆಯಾ (ದೇವತೆಗಳ) ಅಂತರ್ಯಾಮಿಯಾಗಿದ್ದುಕೊಂಡಿರುವ ಭಗವಂತನ ತನುಗಳು, ಶರೀರಗಳು ಎಂದು (ಅರ್ಥ). 'ನಾನೇ ಅಲ್ಲವೆ, ಸರ್ವಯಜ್ಞಗಳಿಗೂ ಭೋಕ್ತೃವೂ ಪ್ರಭುವೂ ಆಗಿರುತ್ತೇನೆ' (ಗೀ. ೯-೨೪) ಎಂದು ಮುಂತಾಗಿ (ಹೇಳಿರುತ್ತಾನೆ). ಇಲ್ಲಿ ಪ್ರಭುವೂ ಎಂದರೆ ಸರ್ವಫಲಗಳನ್ನು ಕೊಡುವವನೂ ಎಂದರ್ಥ. ಮತ್ತು ಹೀಗೆಂದು (ಪುರಾಣದಲ್ಲಿಯೂ ಹೇಳಿದೆ) :

---

1. ಆಯಾ ದೇವತೆಗಳನ್ನುದ್ದೇಶಿಸಿ ಮಾಡುವ ಕರ್ಮವೆಂದು ತೋರುವ.

'ಸರ್ವದೇವಮಯನಾದ ಅಚ್ಯುತನೆ, ನೀನು ಯಾವಾಗಲೂ ಯಜ್ಞಗಳಿಂದ ಪೂಜಿಸಲ್ಪಡುತ್ತಿರುವೆ' (ವಿ.ಪು. ೫-೨೦-೯೭), 'ಸ್ವಧರ್ಮದಲ್ಲಿ ನಿಷ್ಠೆಯುಳ್ಳ ಯಾವ ಮನುಷ್ಯರು ನಿನ್ನನ್ನು ಆರಾಧಿಸುವರೋ ಅವರು ಈ ಮಾಯೆಯೆಲ್ಲವನ್ನೂ ದಾಟಿ ತಮ್ಮ ಮುಕ್ತಿಯನ್ನು ಪಡೆದುಕೊಳ್ಳುವರು' (ವಿ.ಪು. ೫-೩೦-೧೬). **ಇತಿಹಾಸಪುರಾಣಸಹಿತವಾಗಿರುವ ಸರ್ವವೇದಗಳಲ್ಲಿಯೂ ಸರ್ವ ಕರ್ಮಗಳೂ ಸರ್ವೇಶ್ವರನ ಆರಾಧನಾರೂಪಗಳಾಗಿದ್ದು, ಆಯಾ ಕರ್ಮಗಳಿಂದ ಆರಾಧಿಸಲ್ಪಟ್ಟ ಪುರುಷೋತ್ತಮನು ಅವರವರಿಗೆ ಇಷ್ಟವಾದ ಫಲಗಳನ್ನು ಕೊಡುತ್ತಾನೆಂದು ಅಲ್ಲಲ್ಲಿ ವಿಸ್ತಾರವಾಗಿ ಹೇಳಿರುತ್ತದೆ.** ಹೀಗೆಯೇ ಅಲ್ಲವೆ, ಸರ್ವಶಕ್ತಿಗಳುಳ್ಳವನೂ ಸರ್ವಜ್ಞನೂ ಸರ್ವೇಶ್ವರನೂ ಆದ ಭಗವಂತನು ಇಂದ್ರಾದಿದೇವತೆಗಳ ಅಂತರ್ಯಾಮಿಯ ರೂಪದಿಂದ ಯಾಗ, ದಾನ, ಹೋಮ-ಮುಂತಾದ ವೇದೋಕ್ತವಾದ ಸರ್ವಕರ್ಮಗಳ ಭೋಕ್ತೃವೂ ಸರ್ವಫಲಗಳನ್ನೂ ಕೊಡುವವನೂ ಆಗಿರುವನೆಂದು 'ಚತುರ್ಹೋತಾರೋ ಯತ್ರ ಸಂಪದಂ ಗಚ್ಛನ್ತಿ ದೇವೈಃ' (ತೈ. ಆ. ೩-೧೧-೨೦) ಚತುರ್ಹೋತೃಗಳು ದೇವತೆಗಳೊಡನೆ ಸಂಪತ್ತನ್ನು ಹೊಂದುತ್ತಾರೆ- ಮುಂತಾದ (ಶ್ರುತಿಗಳೆಲ್ಲವೂ ಹೇಳುತ್ತಿವೆ). (ಈ ವಾಕ್ಯದಲ್ಲಿ) ಚತುರ್ಹೋತೃಗಳು ಎಂದರೆ ಯಜ್ಞಗಳು ; ಯತ್ರ-ದೇವತೆಗಳಲ್ಲಿ ಅಂತರ್ಯಾಮಿಯಾಗಿರುವ (ಯಾವ) ಪರಮಾತ್ಮನಲ್ಲಿ ಸಂಪದಂ ಗಚ್ಛನ್ತಿ ಎಂದರೆ ಯಜ್ಞಗಳು ದೇವತೆಗಳ ಸಂಬಂಧವನ್ನು ಪಡೆಯುತ್ತವೆ ಎಂದರ್ಥ. **ಅಂತರ್ಯಾಮಿ ರೂಪದಿಂದ ಇದ್ದುಕೊಂಡಿರುವ ಪರಮಾತ್ಮನಿಗೆ ಶರೀರವಾಗಿದ್ದುಕೊಂಡಿರುವ ಇಂದ್ರಾದಿಗಳಿಗೆ ಯಾಗಾದಿಸಂಬಂಧವಾಗುತ್ತದೆ**[1] ಎಂದುಹೇಳಿದಂತೆ ಆಯಿತು. ಹಾಗೆಂದು ಭಗವಂತನು ಹೇಳಿರುತ್ತಾನೆ : 'ಯಜ್ಞತಪಸ್ಸುಗಳ ಭೋಕ್ತೃವೂ ಸರ್ವ ಲೋಕಮಹೇಶ್ವರನೂ (ಆದ ನನ್ನನ್ನು ಅರಿತುಕೊಂಡರೆ ಶಾಂತಿಯನ್ನು ಹೊಂದುವನು)' (ಗೀ. ೫-೨೯). ಆದ್ದರಿಂದ **ಎಲ್ಲ ಕರ್ಮಗಳೂ ಇಂದ್ರಾದಿದೇವತೆಗಳ ಅಂತರಾತ್ಮನಾಗಿರುವ ಪರಮ ಪುರುಷನ ಆರಾಧನಾರೂಪವಾಗಿರುವವು ; ಅವನೇ ಇಷ್ಟಾರ್ಥವನ್ನು ಕೊಡುವನು.** ಹೀಗಿರುವದರಿಂದ ವ್ಯುತ್ಪತ್ತಿಮಾರ್ಗಕ್ಕೆ ದೂರವಾಗಿರುವ ಅಪೂರ್ವವನ್ನು (ಲಿಜಾದಿ)ವಾಚ್ಯವೆಂದು ಅಂಗೀಕರಿಸುವದರಿಂದ ಅಥವಾ ಕಲ್ಪಿಸುವದರಿಂದ ಆಗಬೇಕಾದ ಪ್ರಯೋಜನವೇನು?

(ಪ್ರಶ್ನೆ) :— ಹೀಗೆಂದಾದರೆ ಲಿಜಾದಿಗಳು (ನೀವು) ಸ್ವೀಕರಿಸಿರುವ ಈ ಅರ್ಥವು ಯಾವದೆಂದಾಯಿತು?

---

1. ಅವರು ಪರಮಾತ್ಮನ ಶರೀರವಾಗಿರುವದರಿಂದ ಪರತಂತ್ರರಾಗಿಯೇ ಕರ್ಮಕ್ಕೆ ಸಂಬಂಧಪಟ್ಟಿರುತ್ತಾರೆ ಎಂದರ್ಥ.

(ಉತ್ತರ) :— 'ಯಜ ದೇವಪೂಜಾಯಾಮ್' ಎಂಬ (ಶಬ್ದಾನುಶಾಸನದಿಂದ) ದೇವತಾರಾಧನವಾಗಿರುವ ಯಾಗಾದಿಯೇ (ಯಜೇತ ಎಂಬಲ್ಲಿ) ಪ್ರಕೃತ್ಯರ್ಥವು ; ಅದು ಕರ್ತೃವಿನ ವ್ಯಾಪಾರದಿಂದ ಸಾಧ್ಯವಾಗುತ್ತದೆ ಎಂದು ವ್ಯುತ್ಪತ್ತಿಯಿಂದ ಸಿದ್ಧವಾಗಿರುವದನ್ನೇ ಲಿಜಾದಿಗಳು ಹೇಳುತ್ತವೆಯಾದ್ದರಿಂದ ಇಲ್ಲಿ ಯಾವದೂ ಅಯುಕ್ತವಾಗಿರುವದಿಲ್ಲ. ಕರ್ತೃವಾಚಕಗಳಾದ ಪ್ರತ್ಯಯಗಳಿಗೆ ಪ್ರಕೃತ್ಯರ್ಥವು ಕರ್ತೃವ್ಯಾಪಾರದ ಸಂಬಂಧ(ವನ್ನು ಪಡೆಯುವ) ಪ್ರಕಾರವನ್ನಲ್ಲವೆ, ಹೇಳಬೇಕು? ಮಿಕ್ಕ (ಲಕಾರಗಳು ಕ್ರಿಯೆಗೆ) ಭೂತತ್ವ, ವರ್ತಮಾನತ್ವ-ಮುಂತಾದವುಗಳನ್ನು ಹೇಳುತ್ತವೆ ; ಲಿಜಾದಿಗಳಾದರೋ (ಅದು) ಕರ್ತೃವ್ಯಾಪಾರ ಸಾಧ್ಯವೆಂಬುದನ್ನೇ ಹೇಳುತ್ತವೆ.[1]

ಕಾಮ್ಯನಿಷಿದ್ಧಕರ್ಮಗಳಿಗೆ ಪರಮಾತ್ಮನೇ ಫಲದಾತೃ

(ಮೂಲ)

೮೨. ಅಪಿ ಚ ಕಾಮಿನಃ ಕರ್ತವ್ಯತಯಾ ಕರ್ಮ ವಿಧಾಯ ಕರ್ಮಣೋ ದೇವತಾರಾಧನರೂಪತಾಂ ತದ್ದ್ವಾರೇಣ ಫಲಸಿದ್ಧಿಂ ಚ[2] ತತ್ತತ್ಕರ್ಮವಿಧಿವಾಕ್ಯಾನ್ಯೇವ ವದನ್ತಿ 'ವಾಯವ್ಯಂ ಶ್ವೇತಮಾಲಭೇತ ಭೂತಿಕಾಮೋ ವಾಯುರ್ವೈ ಕ್ಷೇಪಿಷ್ಠಾ ದೇವತಾ ವಾಯುಮೇವ ಸ್ವೇನ ಭಾಗಧೇಯೇನೋಪಧಾವತಿ ಸ ಏವೈನಂ ಭೂತಿಂ ಗಮಯತಿ ।' (ತೈ. ಸಂ. ೨-೧-೧) ಇತ್ಯಾದೀನಿ । ನಾತ್ರ ಫಲಸಿದ್ಧ್ಯನುಪಪತ್ತಿಃ ಕಾಽಪಿ[3] ದೃಶ್ಯತೇ ಇತಿ ಫಲಸಾಧನತ್ವಾವಗತಿರೌಪಾದಾನಿಕೀತ್ಯಪಿ ನ ಸಂಗಚ್ಛತೇ । ವಿಧ್ಯಪೇಕ್ಷಿತಂ ಯಾಗಾದೇಃ ಫಲಸಾಧನತ್ವಪ್ರಕಾರಂ ವಾಕ್ಯಶೇಷ ಏವ ಬೋಧಯತೀತ್ಯರ್ಥಃ[4] । 'ತಸ್ಮಾದ್ಬ್ರಾಹ್ಮಣಾಯ ನಾಪಗುರೇತ' (ತೈ.ಸಂ. ೨-೬-೧೦) ಇತ್ಯತ್ರ ಅಪಗೋರಣನಿಷೇಧವಿಧಿಪರವಾಕ್ಯಶೇಷೇ ಶ್ರೂಯಮಾಣಂ ನಿಷೇಧ್ಯಸ್ಯ ಅಪಗೋರಣಸ್ಯ ಶತಯಾತನಾಸಾಧನತ್ವಂ ನಿಷೇಧವಿಧ್ಯುಪಯೋಗೀತಿ ಹಿ ಸ್ವೀಕ್ರಿಯತೇ । ಅತ್ರ ಪುನಃ ಕಾಮಿನಃ ಕರ್ತವ್ಯತಯಾ ವಿಹಿತಸ್ಯ ಯಾಗಾದೇಃ ಕಾಮ್ಯಸ್ವರ್ಗಾದಿಸಾಧನತ್ವಪ್ರಕಾರಂ ವಾಕ್ಯಶೇಷಾವಗತಮನಾದೃತ್ಯ ಕಿಮಿತ್ಯುಪಾದಾನೇನ ಯಾಗಾದೇಃ ಫಲಸಾಧನತ್ವಂ ಪರಿಕಲ್ಪ್ಯತೇ[5] ?

---

1. ಲಡಾದಿಗಳು ಧಾತ್ವರ್ಥವನ್ನು ಕ್ರಿಯೆಯ ವರ್ತಮಾನತ್ವಾದಿಗಳನ್ನು ಹೇಳುವಂತೆಲಿಜಾದಿಗಳು ಅದೇ ಕ್ರಿಯೆಯು ಕರ್ತೃವ್ಯಾಪಾರಸಾಧ್ಯವೆಂಬುದನ್ನು ತಿಳಿಸುತ್ತವೆ ಎಂದರ್ಥ.
2. 'ತದ್ದ್ವಾರಾ ಫಲಸಂಭವಂ ಚ' ಕಾ॥
3. 'ಕಾಚಿದಪಿ' ಕಾ॥ 4. 'ಇತ್ಯರ್ಥಃ' ಇಲ್ಲಿ ಬೇಕೆ?- ಎಂಬುದು ವಿಚಾರಣೀಯ
5. 'ಪ್ರಕಲ್ಪ್ಯತೇ' ಕಾ॥

'ಹಿರಣ್ಯನಿಧಿಮಪವರಕೇ ನಿಧಾಯ ಯಾಚತೇ ಕೋದ್ರವಾದಿ ಲುಬ್ಧಃ ಕೃಪಣಂ ಜನಮ್' (?) ಇತಿ ಶ್ರೂಯತೇ, ತದೇತದ್ ಯುಷ್ಮಾಸು ದೃಶ್ಯತೇ । ಶತಯಾತನಾ ಸಾಧನತ್ವಮಪಿ ನಾದೃಷ್ಟದ್ವಾರೇಣ ಚೋದಿತಾನ್ಯನುತಿಷ್ಠತಃ ॥

ವಿಹಿತಂ ಕರ್ಮಾಕುರ್ವತ ನಿನ್ದಿತಾನಿ ಚ ಕುರ್ವತಃ ಸರ್ವಾಣಿ ಸುಖಾನಿ ದುಃಖಾನಿ ಚ ಪರಮಪುರುಷಾನುಗ್ರಹನಿಗ್ರಹಾಭ್ಯಾಮೇವ ಭವನ್ತಿ । 'ಏಷ ಹ್ಯೇವಾऽನನ್ದಯಾತಿ' (ತೈ. ೨-೭), 'ಅಥ ಸೋऽಭಯಂ ಗತೋ ಭವತಿ' (ತೈ. ೨-೭), 'ಅಥ ತಸ್ಯ ಭಯಂ ಭವತಿ'(ತೈ. ೨-೭), 'ಭೀಷಾऽಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಭೀಷಾऽಸ್ಮಾದಗ್ನಿಶ್ಚೇನ್ದ್ರಶ್ಚ । ಮೃತ್ಯುರ್ಧಾವತಿ ಪಞ್ಚಮ ಇತಿ' (ತೈ. ೨-೮), 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ[1] ಗಾರ್ಗಿ ಸೂರ್ಯಾಚನ್ದ್ರಮಸೌ ವಿಧೃತೌ ತಿಷ್ಠತಃ' (ಬೃ.೩-೮-೯), 'ಏತಸ್ಯ ವಾऽಕ್ಷರಸ್ಯ ಪ್ರಶಾಸನೇ ಗಾರ್ಗಿ ದದತೋ ಮನುಷ್ಯಾಃ ಪ್ರಶಂಸನ್ತಿ । ಯಜಮಾನಂ ದೇವಾಃ ದರ್ವೀಂ ಪಿತರೋऽನ್ವಾಯತ್ತಾಃ' (ಬೃ.೩-೮-೯) ಇತ್ಯಾದ್ಯನೇಕವಿಧಾಃ ಶ್ರುತಯಃ ಸನ್ತಿ । ಯಥೋಕ್ತಂ ದ್ರಮಿಡಭಾಷ್ಯೇ 'ತಸ್ಯಾಜ್ಞಯಾ ಧಾವತಿ ವಾಯುಃ । ನದ್ಯಃ ಸ್ರವನ್ತಿ । ತೇನ ಚ ಕೃತಸೀಮಾನೋ ಜಲಾಶಯಾಃ ಸಮುದಾ ಇವ ಮೇಷವಿಸರ್ಪಿತಂ ಕುರ್ವನ್ತಿ' (ದ್ರ.ಭಾ.) ಇತಿ । 'ತತ್ಸಜ್ಜಲ್ಪ ನಿಬನ್ಧನಾ ಹೀಮೇ ಲೋಕಾ ನ ಚ್ಯವನ್ತೇ ನ ಸ್ಫುಟನ್ತೇ । ಸ್ವಶಾಸನಾನುವರ್ತಿನಂ ಜ್ಞಾತ್ವಾ ಕಾರುಣ್ಯಾತ್ ಸ ಭಗವಾನ್ ವರ್ಧಯೇತ ವಿದ್ವಾನ್ ಕರ್ಮದಕ್ಷಃ' (ದ್ರ.ಭಾ.) ಇತಿ ಚ । ಪರಮಪುರುಷಯಾಥಾತ್ಮ್ಯಜ್ಞಾನಪೂರ್ವಕಂ[1] ತದುಪಾಸನಾದಿವಿಹಿತಕರ್ಮಾನುಷ್ಠಾಯಿನಃ ತತ್ಪ್ರಸಾದಾತ್ ತತ್ಪ್ರಾಪ್ತಿಪರ್ಯನ್ತಾನಿ ಸುಖಾನಿ ಅಭಯಂ ಚ ಯಥಾಧಿಕಾರಂ ಭವನ್ತಿ । ತಜ್ಜ್ಞಾನಪೂರ್ವಕಂ ತದುಪಾಸನಾದಿವಿಹಿತಂ ಕರ್ಮಾಕುರ್ವತೋ ನಿನ್ದಿತಾನಿ ಚ ಕುರ್ವತಃ, ತನ್ನಿಗ್ರಹಾದೇವ ತದಪ್ರಾಪ್ತಿಪೂರ್ವಕಾಪರಿಮಿತದುಃಖಾನಿ ಭಯಂ ಚ ಭವನ್ತಿ । ಯಥೋಕ್ತಂ ಭಗವತಾ 'ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ' (ಗೀ. ೩-೮) ಇತ್ಯಾದಿನಾ ಕೃತ್ಸ್ನಂ ಕರ್ಮ ಜ್ಞಾನಪೂರ್ವಕಮನುಷ್ಠೇಯಂ ವಿಧಾಯ 'ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯ' (ಗೀ. ೩-೩೦) ಇತಿ ಸರ್ವಸ್ಯ ಕರ್ಮಣಃ ಸ್ವಾರಾಧನತಾಮ್ ಆತ್ಮನಾಂ ಸ್ವನಿಯಾಮ್ಯತಾಂ ಚ ಪ್ರತಿಪಾದ್ಯ 'ಯೇ ಮೇ ಮತಮಿದಂ ನಿತ್ಯಮನುತಿಷ್ಠನ್ತಿ ಮಾನವಾಃ । ಶ್ರದ್ಧಾವನ್ತೋऽನಸೂಯನ್ತೋ ಮುಚ್ಯನ್ತೇ ತೇಽಪಿ ಕರ್ಮಭಿಃ ॥ ಯೇ ತ್ವೇತದಭ್ಯಸೂಯನ್ತೋ ನಾನುತಿಷ್ಠನ್ತಿ ಮೇ ಮತಮ್ । ಸರ್ವಜ್ಞಾನವಿಮೂಢಾಂಸ್ತಾನ್ ವಿದ್ಧಿ ನಷ್ಟಾನಚೇತಸಃ ॥' (ಗೀ. ೩-೩೧, ೩೨) ಇತಿ ಸ್ವಾಜ್ಞಾನುವರ್ತಿನಃ ಪ್ರಶಸ್ಯ ವಿಪರೀತಾನ್ ವಿನಿನ್ದ್ಯ ಪುನರಪಿ

1. 'ಪೂರ್ವಕತದುಪಾಸನಾದಿ' ಕಾ॥

ಸ್ವಾಜ್ಞಾನುಪಾಲನಮ್ ಅಕುರ್ವತಾಮ್ ಆಸುರಪ್ರವೃತ್ತ್ಯನ್ತರ್ಭಾವಮ್ ಅಭಿಧಾಯ ಅಥಮಾ ಗತಿಶ್ಚೋಕ್ತಾ 'ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್, ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು । ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ । ಮಾಮಪ್ರಾಪ್ಯೈವ ಕೌನ್ತೇಯ ತತೋ ಯಾನ್ತ್ಯಧಮಾಂ ಗತಿಮ್ ॥' (ಗೀ. ೧೬-೧೯, ೨೦) ಇತಿ । 'ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ । ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್ ॥' (ಗೀ. ೧೮-೫೬) ಇತಿ ಚ ಸ್ವಾಜ್ಞಾನುವರ್ತಿನಾಂ ಶಾಶ್ವತಂ ಪದಂ ಚೋಕ್ತಮ್ । ಅಶ್ರುತವೇದಾನ್ತಾನಾಂ ಕರ್ಮಣಿ ಅಶ್ರದ್ಧಾ ಮಾ ಭೂದಿತಿ ದೇವತಾಧಿಕರಣೇಽತಿ ವಾದಾಃ ಕೃತಾಃ, ಕರ್ಮಮಾತ್ರೇ ಯಥಾ ಶ್ರದ್ಧಾ ಸ್ಯಾದಿತಿ । ಸರ್ವಮ್ ಏಕಶಾಸ್ತ್ರಮ್ ಇತಿ ವೇದವಿತ್ಸಿದ್ಧಾನ್ತಃ ॥

(ಅರ್ಥ)

ಇದಲ್ಲದೆ ಕಾಮಿಯಾದವನಿಗೆ ಕರ್ತವ್ಯವೆಂದು ಕರ್ಮವನ್ನು ವಿಧಿಸಿ, ಕರ್ಮವು ದೇವತಾರಾಧನರೂಪವೆಂದೂ ಅದರ ಮೂಲಕ ಫಲಸಿದ್ಧಿಯಾಗುವದೆಂದೂ ಆಯಾ ಕರ್ಮವನ್ನು ವಿಧಿಸುವ 'ಭೂತಿಕಾಮನಾದವನು ವಾಯವ್ಯವಾದ ಶ್ವೇತ(ಪಶು) ವನ್ನು ಆಲಂಭಮಾಡಬೇಕು ; ವಾಯುವು ಅತ್ಯಂತ ಕ್ಷಿಪ್ರವಾದ ದೇವತೆಯಷ್ಟೆ? ವಾಯು ವನ್ನೇ ತನ್ನ ಭಾಗದಿಂದ ಸೇವೆಮಾಡಿರುತ್ತಾನೆ, ಆ (ವಾಯುವೇ) ಇವನು ಭೂತಿ ಯನ್ನು ಪಡೆಯುವಂತೆ ಮಾಡುತ್ತದೆ' (ತೈ.ಸಂ.೨-೧-೧) ಮುಂತಾದ ಆಯಾ ಕರ್ಮ ವನ್ನು ವಿಧಿಸುವ ವಾಕ್ಯಗಳೇ[1] ತಿಳಿಸುತ್ತವೆಯಾದ್ದರಿಂದ ಇಲ್ಲಿ ಫಲಸಿದ್ಧಿಯು ಹೊಂದುವದಿಲ್ಲವೆಂಬುದೇನೂ ಇಲ್ಲವೇ ಇಲ್ಲ. (ಕ್ರಿಯೆಯು) ಫಲಸಾಧನವೆಂಬ ನಿಶ್ಚಯವು **ಉಪಾದಾನ**ದಿಂದಾಗಬೇಕೆಂಬುದು[2] ಹೊಂದುಗಡೆಯಾಗುವದಿಲ್ಲ ; ವಿಧ್ಯಪೇಕ್ಷಿತವಾಗಿರುವ, ಯಾಗಾದಿಗಳು ಫಲವನ್ನು ಸಾಧಿಸುವ ಪ್ರಕಾರವನ್ನು, ವಾಕ್ಯಶೇಷವೇ ತಿಳಿಸಿಕೊಡುತ್ತದೆ[3] ಎಂದರ್ಥ. 'ಆದ್ದರಿಂದ ಬ್ರಾಹ್ಮಣನನ್ನು ನಿಂದಿಸಬಾರದು' (ತೈ.ಸಂ.೨-೬-೧೦) ಎಂಬಲ್ಲಿ ನಿಂದೆಯನ್ನು ಮಾಡಬಾರದೆಂದು ವಿಧಿಸುವದರಲ್ಲಿ ತಾತ್ಪರ್ಯವುಳ್ಳ ವಾಕ್ಯದ ಶೇಷದಲ್ಲಿ ನಿಷೇಧ್ಯವಾದ ನಿಂದೆಯು

---

1. ಅರ್ಥವಾದವೂ ವಿಧಿವಾಕ್ಯಕ್ಕೇ ಸೇರಿರುವದರಿಂದ 'ಕರ್ಮವಿಧಿವಾಕ್ಯಗಳೇ ತಿಳಿಸುತ್ತವೆ' ಎಂದಿದೆ.
2. **'ಉಪಾದಾನ**ವೆಂದರೆ ವಿಧ್ಯಾಕ್ಷೇಪದಿಂದಸಿದ್ಧವಾಗುವದು ; ಅಭಿಹಿತವಾದದ್ದರಲ್ಲಿ ಪರ್ಯವಸಾನವಾಗದೆ ಇರುವದು **ಶ್ರುತಾರ್ಥಾಪತ್ತಿ'** ಹೀಗೆ ಆರ್ಥಾಪತ್ತಿ, ಉಪಾದಾನ- ಇವೆರಡಕ್ಕೂ ತಾರತಮ್ಯವಿದೆ. ತಾ॥ ಪ್ರಕೃತದಲ್ಲಿ ವಿಧಿಯಿಂದ ಫಲಸಿದ್ಧಿಯನ್ನು ಕಲ್ಪಿಸುತ್ತಿರುವದರಿಂದ 'ಉಪಾದಾನ' ಶಬ್ದವನ್ನುಪಯೋಗಿಸಿದೆ.
3. ವಾಯುವಿಗೆ ಯಾಗವನ್ನು ಮಾಡಿದ್ದರಿಂದ ವಾಯುವೇ ಫಲವನ್ನು ಕೊಡುತ್ತಾನೆ - ಎಂಬುದು **ವಾಕ್ಯಶೇಷ.**

ಶತಯಾತನೆಗೆ ಸಾಧನವೆಂಬುದು ನಿಷೇಧ ವಿಧಿಗೆ ಉಪಯೋಗಿಯಾಗಿದೆ ಎಂದಲ್ಲವೇ ಸ್ವೀಕರಿಸಿರುವದು? ಇನ್ನು ಇಲ್ಲಿಯಾದರೋ ಕಾಮಿಯಾದವನಿಗೆ ಕರ್ತವ್ಯವೆಂದು ವಿಹಿತವಾಗಿರುವ ಯಾಗಾದಿಯು ಕಾಮ್ಯವಾದ ಸ್ವರ್ಗವೇ ಮುಂತಾದದ್ದಕ್ಕೆ ಸಾಧನವೆಂಬ ಪ್ರಕಾರವು ವಾಕ್ಯಶೇಷದಲ್ಲಿಯೇ ನಿಶ್ಚಿತವಾಗಿದ್ದರೂ ಅದನ್ನು ಬಿಟ್ಟು , ಯಾಗಾದಿಗಳು ಫಲಕ್ಕೆಸಾಧನವೆಂದು ಉಪಾದಾನದಿಂದ ಏತಕ್ಕೆ ಕಲ್ಪಿಸಬೇಕು[1]? 'ಚಿನ್ನದ ನಿಧಿಯನ್ನು ಕೋಣೆಯಲ್ಲಿಟ್ಟುಕೊಂಡು ಅತ್ಯಾಶೆಯವನು ಬರಗು ಮುಂತಾದದ್ದನ್ನು (ಕೊಡೆಂದು) ಜಿಪುಣಮನುಷ್ಯನನ್ನು ಬೇಡಿಕೊಳ್ಳುತ್ತಾನೆ' ಎನ್ನುವರಲ್ಲ, ಆ ಈ (ಗಾದೆಯ ಪ್ರಕಾರವು) ನಿಮ್ಮಗಳಲ್ಲಿ ಕಂಡುಬರುತ್ತಿದೆ.[2] ಶತಯಾತನೆಗೆ (ನಿಂದೆಯು) ಸಾಧನವೆಂಬುದೂ (ನಿಷೇಧಶ್ರುತಿ)ವಿಹಿತವಾದದ್ದನ್ನು ಮಾಡುವವನಿಗೆ **ಅದೃಷ್ಟಮೂಲಕವಲ್ಲ.**[3]

(ಶ್ರುತಿಯಲ್ಲಿ) ಮಾಡಬೇಕೆಂದಿರುವವುಗಳನ್ನು ಅನುಷ್ಠಾನಮಾಡುವವನಿಗೂ ವಿಹಿತಕರ್ಮವನ್ನು ಮಾಡದೆ ನಿಂದಿತ(ಕರ್ಮ)ಗಳನ್ನು ಮಾಡುವವನಿಗೂ (ಆಗುವ) ಎಲ್ಲಾ ಸುಖಗಳೂ ದುಃಖಗಳೂ ಪರಮ ಪುರುಷನ ಅನುಗ್ರಹನಿಗ್ರಹಗಳಿಂದಲೇ ಆಗುತ್ತವೆ. 'ಈತನೇ ಆನಂದಗೊಳಿಸುವನು' (ತೈ. ೨-೭), 'ಇನ್ನು ಅವನು ಅಭಯವನ್ನು ಹೊಂದಿದವನಾಗುತ್ತಾನೆ' (ತೈ.೨-೭), 'ಇನ್ನು ಅವನಿಗೆ ಭಯವುಂಟಾಗುತ್ತದೆ' (ತೈ.೨-೭), 'ಇವನ ಅಂಜಿಕೆಯಿಂದ ವಾಯು ಬೀಸುತ್ತದೆ, ಅಂಜಿಕೆಯಿಂದಲೇ ಸೂರ್ಯನು ಉದಯಿಸುತ್ತಾನೆ, ಈತನ ಅಂಜಿಕೆಯಿಂದಲೇ ಅಗ್ನಿಯೂ ಇಂದ್ರನೂ (ಕೆಲಸ ಮಾಡುತ್ತಾರೆ), ಐದನೆಯವನಾದ ಮೃತ್ಯುವೂ ಓಡುತ್ತಾನೆ' (ತೈ.೨-೮), 'ಗಾರ್ಗಿಯೆ, ಈ ಅಕ್ಷರದ ಪ್ರಶಾಸನದಿಂದಲೇ ಸೂರ್ಯಚಂದ್ರರು ವಿಧೃತರಾಗಿ ನಿಂತಿರುತ್ತಾರೆ' (ಬೃ.೩-೮-೯), 'ಗಾರ್ಗಿಯೇ ಈ ಅಕ್ಷರದ ಪ್ರಶಾಸನದಿಂದಲೇ ದಾನಮಾಡುವವರನ್ನು ಮನುಷ್ಯರು ಹೊಗಳುತ್ತಾರೆ' (ಬೃ.೩-೮-೯), 'ದೇವತೆಗಳು ಯಜಮಾನನನ್ನು, ಪಿತೃಗಳು ದರ್ವೀಹೋಮವನ್ನು, ಅನುಸರಿಸಿಕೊಂಡಿರುವರು' (ಬೃ.೩-೮-೯)- ಇವೇ ಮುಂತಾದ ಅನೇಕ ವಿಧವಾದ ಶ್ರುತಿಗಳು ಇರುತ್ತವೆ. ಹೀಗೆಂದು **ದ್ರಮಿಡಭಾಷ್ಯದಲ್ಲಿ** 'ಅವನ ಆಜ್ಞೆಯಿಂದ ವಾಯು ಬೀಸುತ್ತಿರುವದು, ನದಿಗಳು ಹರಿಯುತ್ತಿರುವವು, ಅವನಿಂದ ಮೇರೆಯು ಗೊತ್ತುಪಡಿಸಲ್ಪಟ್ಟಿರುವ

---

1. ಸ್ವಷ್ಟವಾಗಿ ವಾಕ್ಯವೇ ಯಾಗಕ್ಕೆ ಸ್ವರ್ಗವು ಫಲವೆಂದು ಹೇಳಿರುವಲ್ಲಿ ನಿಯೋಗದಿಂದ ಕಲ್ಪಿಸಬೇಕಾದದ್ದೇಕೆ?
2. ವಾಯುಯಾಗವೇ ಫಲವನ್ನು ಕೊಡುತ್ತದೆ ಎಂಬುದು ಚಿನ್ನದ ನಿಧಿಯಂತೆ ನಿಶ್ಚಿತವಾಗಿದೆ ; ನಿಯೋಗದಿಂದ ಫಲವನ್ನು ಕಲ್ಪಿಸುವದಕ್ಕೆ ಹೋಗುವದು ಕೃಷ್ಣಪ್ರಧಾನ್ಯವನ್ನು ಕೃಪಣನಲ್ಲಿ ಬೇಡುವದಕ್ಕೆ ಸಮಾನ. ಆದ್ದರಿಂದ ಹಾಗೆ ಕಲ್ಪಿಸುವದರ ಅವಶ್ಯಕತೆಯಿಲ್ಲ.
3. ನೀವು ಹೇಳುವ ಅಪೂರ್ವ, ಅಥವಾ ನಿಯೋಗ- ಎಂಬ ಕಾರ್ಯದಿಂದಲ್ಲ.

ಸಮುದ್ರಗಳು ಸಮದವಾಗಿರುವ ಮೇಕೆಗಳಂತೆ ಒಂದರಮೇಲೊಂದುನುಗ್ಗದೆ ಹಿಂಜರಿಯುತ್ತಿರುವವು' ಎಂದೂ 'ಆತನ ಸಂಕಲ್ಪನಿಮಿತ್ತದಿಂದಲೇ ಅಲ್ಲವೆ, ಈ ಲೋಕಗಳು ಜಾರಿಬೀಳದೆ ಇರುವವು, ಸಿಡಿದುಕೊಳ್ಳದೆ ಇರುವವು? ತನ್ನ ಶಾಸನವನ್ನು ಅನುಸರಿಸುತ್ತಿರುವನೆಂಬುದನ್ನರಿತು ಸರ್ವಜ್ಞನೂ ಕರ್ಮದಕ್ಷನೂ ಆದ ಆ ಭಗವಂತನು ಅಭಿವೃದ್ಧಿಗೊಳಿಸುವನು' (ದ್ರ.ಭಾ.) ಎಂದೂ ಹೇಳಿರುತ್ತದೆ. **ಪರಮಪುರುಷನ ಯಾಥಾತ್ಮ್ಯವನ್ನು ಅರಿತು ಕೊಂಡು ಆತನ ಉಪಾಸನೆಯೇ ಮುಂತಾದ ವಿಹಿತಕರ್ಮಗಳನ್ನು ಮಾಡುತ್ತಿರುವವನಿಗೆ ಆ (ಪರಮಾತ್ಮ)ನ ಪ್ರಸಾದದಿಂದ ಪ್ರಾಪ್ತಿಪರ್ಯಂತವಾದ ಸುಖಿಗಳೂ ಅಭಯವೂ ಅಧಿಕಾರಕ್ಕೆ ತಕ್ಕಂತೆ ಆಗುವವು; ಜ್ಞಾನಪೂರ್ವಕವಾಗಿ ಆತನ ಉಪಾಸನೆಯೇ ಮುಂತಾದ ವಿಹಿತಕರ್ಮವನ್ನು ಮಾಡದವನಾಗಿ ನಿಂದಿತಕರ್ಮಗಳನ್ನು ಮಾಡುವವನೂ ಆದವನಿಗೆ ಆತನ ನಿಗ್ರಹದಿಂದಲೇ ಅವನ ಅಪ್ರಾಪ್ತಿ ಪೂರ್ವಕವಾದ ಅಪರಿಮಿತದುಃಖಿಗಳೂ ಭಯವೂ ಆಗುವವು.** ಹೀಗೆಂದು ಭಗವಂತನು ಹೇಳಿರುತ್ತಾನೆ : 'ನಿಯತವಾಗಿ ಕರ್ಮವನ್ನು ಮಾಡು ; ಕರ್ಮವು ಅಕರ್ಮಕ್ಕಿಂತ ಹೆಚ್ಚಿನದಷ್ಟೆ?' (ಗೀ. ೩-೮) ಎಂದು ಮುಂತಾದ (ವಾಕ್ಯ)ದಿಂದ ಕರ್ಮವೆಲ್ಲವನ್ನೂ ಜ್ಞಾನಪೂರ್ವಕವಾಗಿ ಮಾಡತಕ್ಕದ್ದೆಂದು ವಿಧಿಸಿ 'ನನ್ನಲ್ಲಿ ಸರ್ವಕರ್ಮಗಳನ್ನೂ ಸಂನ್ಯಾಸಮಾಡು' (ಗೀ.೩-೩೦) ಎಂದು ಕರ್ಮವೆಲ್ಲವೂ ತನ್ನ ಆರಾಧನೆಯೆಂದೂ ಆತ್ಮರುಗಳು ತನಗೆ ನಿಯಾಮ್ಯರೆಂದೂ ತಿಳಿಸಿಕೊಟ್ಟು 'ಯಾವ ಮನುಷ್ಯರು ನನ್ನೀ ಮತವನ್ನು ಶ್ರದ್ಧಾವಂತರಾಗಿ ಅಸೂಯೆಯಿಲ್ಲದೆ ನಿತ್ಯವೂ ಅನುಷ್ಠಾನ ಮಾಡುತ್ತಿರುವರೋ ಅವರೂ ಕರ್ಮಗಳಿಂದ ಮುಕ್ತರಾಗುವರು. ಆದರೆ ಯಾರು ಈ ನನ್ನ ಮತವನ್ನು ಅಸೂಯೆಯಿಂದ ಮಾಡದೆ ಇರುವರೋ ಆ ಅಚೇತಸರು ಎಲ್ಲಾ ಜ್ಞಾನದಲ್ಲಿಯೂ ವಿಮೂಢರಾಗಿ ನಾಶವಾಗುವರೆಂದೇ ತಿಳಿ' (ಗೀ.೩-೩೧, ೩೨) ಎಂದು ತನ್ನ ಅಪ್ಪಣೆಯನ್ನು ಅನುಸರಿಸುವವರನ್ನು ಹೊಗಳಿ ಹಾಗಿಲ್ಲದವರನ್ನು ನಿಂದಿಸಿ, ಮತ್ತೂ (ಒಮ್ಮೆ) ತನ್ನಪ್ಪಣೆಯನ್ನು ನಡೆಯಿಸದೆ ಇರುವವರು ಆಸುರಪ್ರಕೃತಿಯವರೊಳಗೆ ಅಂತರ್ಭೂತರಾಗಿರುವರೆಂದು ಹೇಳಿ (ಅವರಿಗೆ) ಅಧಮ ಗತಿಯನ್ನು ಹೇಳಿರುತ್ತಾನೆ : (ಹೇಗೆಂದರೆ) 'ಹೀಗೆ ದ್ವೇಷಿಸುತ್ತಿರುವ ಕ್ರೂರವಾದ ಆ ಅಶುಭರಾದ ಮನುಷ್ಯಾಧಮರನ್ನು ಆಸುರಯೋನಿಗಳಲ್ಲಿಯೇ ಎಂದೆಂದಿಗೂ ಹಾಕುತ್ತೇನೆ. ಆಸುರಯೋನಿಯನ್ನು ಪಡೆದ ಮೂಢರು ಜನ್ಮಜನ್ಮದಲ್ಲಿಯೂ ನನ್ನನ್ನು ಪಡೆಯದೆಯೇ, ಎಲೈ ಕೌಂತೇಯನೆ, ಅದರಿಂದ ಅಧಮಗತಿಯನ್ನೇ ಹೊಂದುವರು' (ಗೀ. ೧೬-೧೯, ೨೦), 'ನನ್ನನ್ನು ಆಶ್ರಯಿಸಿಕೊಂಡು ಸರ್ವ ಕರ್ಮಗಳನ್ನು ಮಾಡುತ್ತಿದ್ದರೂ ನನ್ನ ಪ್ರಸಾದದಿಂದ ಶಾಶ್ವತವೂ ಅವ್ಯಯವೂ ಆದ ಸ್ಥಾನವನ್ನು ಹೊಂದುವನು' (ಗೀ. ೧೮-೫೬) ಎಂದು

ತನ್ನ ಆಜ್ಞೆಯನ್ನು ಅನುವರ್ತಿಸುವವರಿಗೆ ಶಾಶ್ವತಸ್ಥಾನವನ್ನು ಹೇಳಿರುತ್ತದೆ. ವೇದಾಂತಶ್ರವಣವನ್ನು ಮಾಡದವರಿಗೆ ಕರ್ಮದಲ್ಲಿ ಅಶ್ರದ್ಧೆಯುಂಟಾಗಬಾರದೆಂದು ದೇವತಾಧಿಕರಣದಲ್ಲಿ ಅತಿವಾದಗಳನ್ನು ಮಾಡಿರುತ್ತದೆ[1] ; ಕರ್ಮ ಮಾತ್ರದಲ್ಲಿಯೇ ಶ್ರದ್ಧೆಯುಂಟಾಗಲಿ ಎಂಬುದೇ (ಅಲ್ಲಿ ಉದ್ದೇಶವು). ಎಲ್ಲವೂ ಏಕಶಾಸ್ತ್ರವೇ ಎಂದು ವೇದವನ್ನು ಬಲ್ಲವರ ಸಿದ್ಧಾಂತವು.[2]

ಪರಮಾತ್ಮನ ನಿತ್ಯವಿಭೂತಿ

(ಮೂಲ)

೮೩. ತಸ್ಯೈತಸ್ಯ ಪರಸ್ಯ ಬ್ರಹ್ಮಣೋ ನಾರಾಯಣಸ್ಯ ಅಪರಿಚ್ಛೇದ್ಯ ಜ್ಞಾನಾನನ್ದಾಮಲತ್ವಸ್ವರೂಪವತ್, ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಃ ಪ್ರಭೃತ್ಯನವಧಿಕಾತಿಶಯಾಸಂಖ್ಯೇಯಕಲ್ಯಾಣಗುಣವತ್, ಸ್ವಸಂಕಲ್ಪಪ್ರವರ್ತ್ಯ ಸ್ವೇತರಸಮಸ್ತಚಿದಚಿದ್ವಸ್ತುಜಾತವತ್, ಸ್ವಾಭಿಮತಸ್ವಾನುರೂಪೈಕರೂಪವಿದ್ಯ ರೂಪತದುಚಿತನಿರತಿಶಯ ಕಲ್ಯಾಣವಿವಿಧಾನನ್ತಭೂಷಣಸ್ವಶಕ್ತಿಸದೃಶಾಪರಿಮಿತಾ ನನ್ತಾಶ್ಚರ್ಯನಾನಾವಿಧಾಯುಧಸ್ವಾಭಿಮತಸ್ವಾನುರೂಪಸ್ವರೂಪರೂಪಗುಣ ವಿಭವೈಶ್ವರ್ಯಶೀಲಾದ್ಯನವಧಿಕಮಹಿಮಮಹಿಷೀ ಸ್ವಾನುರೂಪಕಲ್ಯಾಣಜ್ಞಾನ ಕ್ರಿಯಾದ್ಯಪರಿಮೇಯಗುಣಾನನ್ತಪರಿಜನಪರಿಚ್ಛದಸ್ವೋಚಿತನಿಖಿಲಭೋಗ್ಯ ಭೋಗೋಪಕರಣಾದ್ಯನನ್ತಮಹಾವಿಭವಾವಾಙ್ಮನಸಗೋಚರಸ್ವರೂಪಸ್ವಭಾವ ದಿವ್ಯಸ್ಥಾನಾದಿನಿತ್ಯತಾನಿರವದ್ಯತಾಗೋಚರಾಶ್ಚ ಸಹಸ್ರಶಃ ಶ್ರುತಯಃ ಸನ್ತಿ । 'ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯವರ್ಣಂ ತಮಸಃ ಪರಸ್ತಾತ್' (ತೈ. ಆ. ಪು. ೩-೩-೩೮), 'ಯ ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷಃ- ತಸ್ಯ ಯಥಾ ಕಪ್ಯಾಸಂ ಪುಣ್ಡರೀಕಮೇವಮಕ್ಷಿಣೀ' (ಛಾಂ. ೧-೬-೬, ೭), 'ಸ ಯ ಏಷೋಽನ್ತರ್ಹೃದಯ ಆಕಾಶಃ । ತಸ್ಮಿನ್ನಯಂ ಪುರುಷೋ ಮನೋಮಯಃ । ಅಮೃತೋ ಹಿರಣ್ಮಯಃ' (ತೈ. ೧-೬) ಮನೋಮಯಃ ಇತಿ ಮನಸೈವ ವಿಶುದ್ಧೇನ ಗೃಹ್ಯತೇ ಇತ್ಯರ್ಥಃ । 'ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ' (ತೈ.ನಾ.೨) ವಿದ್ಯುದ್ವರ್ಣಾತ್ ಪುರುಷಾತ್ ಇತ್ಯರ್ಥಃ । 'ನೀಲತೋಯದಮಧ್ಯಸ್ಥಾ

---

1. ಜೈ.ಸೂ. ಭಾ. ೯-೧-೯, ೧೦ ಇವುಗಳಲ್ಲಿ ದೇವತೆಗಳಿಲ್ಲವೆಂಬ ಅತಿವಾದಗಳನ್ನು ಮಾಡಿರುತ್ತದೆ. ಕರ್ಮದಿಂದಲೇ ಫಲವೆಂದು ಅಲ್ಲಿ ಹೇಳಿರುವದು ಕರ್ಮದಲ್ಲಿ ಶ್ರದ್ಧೆಯುಂಟಾಗಲೆಂದೇ ಹೊರತು ನಿಜವಾಗಿ ದೇವತೆಗಳು ಇಲ್ಲವೇಇಲ್ಲವೆಂದು ತಿಳಿಸುವದಕ್ಕಲ್ಲ.
2. ಪೂರ್ವಮೀಮಾಂಸೆ ಮತ್ತು ಉತ್ತರಮೀಮಾಂಸೆ- ಎರಡೂ ಸೇರಿ ಒಂದೇ ಶಾಸ್ತ್ರವು ಎಂಬುದು ಈ ಆಚಾರ್ಯರ ಸಿದ್ಧಾಂತ.

ವಿದ್ಯುಲ್ಲೇಖೇವ ಭಾಸ್ವರಾ' (ತೈ.ನಾ. ೧೩) ಮಧ್ಯಸ್ಥನೀಲತೋಯದಾ ವಿದ್ಯುಲ್ಲೇಖೇವ, ಸೇಯಂ ದಹರಪುಣ್ಡರೀಕಮಧ್ಯಸ್ಥಾಕಾಶವರ್ತಿನೀ ವಹ್ನಿಶಿಖಾ ಸ್ವಾನ್ತರ್ನಿಹಿತನೀಲತೋಯದಾ ಭಪರಮಾತ್ಮಸ್ವರೂಪಾಸ್ವಾನ್ತರ್ನಿಹಿತನೀಲ ತೋಯದಾ ವಿದ್ಯುದಿವಾऽऽಭಾತೀತ್ಯರ್ಥಃ । 'ಮನೋಮಯಃ ಪ್ರಾಣಶರೀರೋ ಭಾರೂಪಃ ಸತ್ಯಸಙ್ಕಲ್ಪ ಆಕಾಶಾತ್ಮಾ ಸರ್ವಕರ್ಮಾ ಸರ್ವಕಾಮಃ ಸರ್ವಗನ್ಧಃ ಸರ್ವರಸಃ ಸರ್ವಮಿದಮಭ್ಯಾತ್ತೋಽವಾಕ್ಯನಾದರಃ' (ಛಾ. ೩-೧೪-೨), 'ಮಾಹಾರಜತಂ[1] ವಾಸಃ' (ಬೃ.೪-೩-೬) ಇತ್ಯಾದ್ಯಾಃ । 'ಅಸ್ಯೇಶಾನಾ ಜಗತೋ ವಿಷ್ಣುಪತ್ನೀ' (ತೈ.ಸ.೪-೪-೧೨-೫), 'ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ'(ತೈ.ಆ.ಪ್ರ. ೩-೩-೪೦), 'ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯನ್ತಿ ಸೂರಯಃ' (ಸು.೬), 'ಕ್ಷಯನ್ತಮಸ್ಯ ರಜಸಃ ಪರಾಕೇ' (ತೈ.ಸಂ. ೨-೨-೧೨), 'ಯದೇಕಮವ್ಯಕ್ತಮನನ್ತ ರೂಪಂ ವಿಶ್ವಂ ಪುರಾಣಂ ತಮಸಃ ಪರಸ್ತಾತ್' (ತೈ.ನಾ.೧), 'ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್' (ತೈ. ೨-೧), 'ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್' (ಋ. ಸಂ. ೧೦-೧೧-೧೨೯), 'ತದೇವ ಭೂತಂ ತದು ಭವ್ಯಮಾ ಇದಂ ತದಕ್ಷರೇ ಪರಮೇ ವ್ಯೋಮನ್' (ತೈ.ನಾ.೧) ಇತ್ಯಾದಿಶ್ರುತಿಶತನಿಶ್ಚಿತೋಽಯಮರ್ಥಃ ॥

'ತದ್ವಿಷ್ಣೋ ಪರಮಂ ಪದಮ್' (ಸು. ೬) ಇತಿ ವಿಷ್ಣೋ ಪರಸ್ಯ ಬ್ರಹ್ಮಣಃ ಪರಮಂ ಪದಂ ಸೂರಯಃ ಸದಾ ಪಶ್ಯನ್ತಿ ಇತಿ ವಚನಾತ್ ಸರ್ವಕಾಲದರ್ಶನವನ್ತಃ ಪರಿಪೂರ್ಣಜ್ಞಾನಾಃ ಕೇಚನ ಸನ್ತೀತಿ ವಿಜ್ಞಾಯತೇ ಯೇ ಸೂರಯಸ್ತೇ ಸದಾ ಪಶ್ಯನ್ತಿ ಇತಿ ವ್ಯಚನವ್ಯಕ್ತಿಃ । ಯೇ ಸದಾ ಪಶ್ಯನ್ತಿ ತೇ ಸೂರಯ ಇತಿ ವಾ । ಉಭಯಪಕ್ಷೇಽಪ್ಯನೇಕವಿಧಾನಂ ನ ಸಂಭವತೀತಿ ಚೇತ್ । ನ । ಅಪ್ರಾಪ್ತತ್ವಾತ್ ಸರ್ವಸ್ಯ ಸರ್ವವಿಶಿಷ್ಟಂ ಪರಮಂ ಸ್ಥಾನಂ ವಿಧೀಯತೇ । ಯಥೋಕ್ತಮ್ 'ತದ್ಗುಣಾಸ್ತು ವಿಧೀಯೇರನ್ನವಿಭಾಗಾದ್ ವಿಧಾನಾರ್ಥೇನ ಚೇದನ್ಯೇನ ಶಿಷ್ಟಾಃ' (ಜೈ. ೧-೪-೯) ಇತಿ । ಯಥಾ 'ಯದಾಗ್ನೇಯೋಽಷ್ಟಾಕಪಾಲಃ' (ತೈ. ಸಂ. ೨-೫-೩-೨) ಇತ್ಯಾದಿಕರ್ಮವಿಧೌ ಕರ್ಮಣೋ ಗುಣಾನಾಂ ಚಾಪ್ರಾಪ್ತತ್ವೇನ ಸರ್ವಗುಣವಿಶಿಷ್ಟಂ ಕರ್ಮ ವಿಧೀಯತೇ, ತಥಾऽತ್ರಾಪಿ ಸೂರಿಭಿಃ ಸದಾ ದೃಶ್ಯತ್ವೇನ ವಿಷ್ಣೋಃ ಪದಂ ಸ್ಥಾನಮಪ್ರಾಪ್ತಂ ಪ್ರತಿಪಾದಯತೀತಿ ನ ಕಶ್ಚಿದ್ವಿರೋಧಃ । ಕರಣಮನ್ತ್ರಾಃ ಕ್ರಿಯಮಾಣಾನುವಾದಿನಃ ಸ್ತೋತ್ರಶಸ್ತ್ರರೂಪಾಃ ಜಪಾದಿಷು ವಿನಿಯುಕ್ತಾಶ್ಚ ಪ್ರಕರಣಪಠಿತಾಶ್ಚಾಪ್ರಕರಣಪಠಿತಾಶ್ಚ ಸ್ವಾರ್ಥಂ ಸರ್ವಂ

---

1. 'ಮಾಹಾರಜತಂ' ಎಂದು ಅಚ್ಚಿನ ಪುಸ್ತಕದಲ್ಲಿ ಪಾಠವಿದೆ; ಆದರೆ ಬೃಹದಾರಣ್ಯಕದ ಈ ಪದವನ್ನು ಶ್ರೀಭಾಷ್ಯದಲ್ಲಿ 'ಮಾಹಾರಜನಂ' ಎಂದೇ ಬರೆದುಕೊಂಡಿದೆ.

ಯಥಾವಸ್ಥಿತಮೇವ ಅಪ್ರಾಪ್ತಮ್ ಅವಿರುದ್ಧಂ ಬ್ರಾಹ್ಮಣವದ್ ಬೋಧಯನ್ತೀತಿ ಹಿ ವೈದಿಕಾಃ । (ಪ್ರಗೀತಮನ್ತ್ರಸಾಧ್ಯಗುಣನಿಷ್ಠಗುಣಾಭಿಧಾನಂ ಸ್ತೋತ್ರಮ್ । ಅಪ್ರಗೀತ ಮನ್ತ್ರಸಾಧ್ಯಗುಣನಿಷ್ಠಗುಣಾಭಿಧಾನಂ ಶಸ್ತ್ರಮ್ ।)[1] ವಿನಿಯುಕ್ತಾರ್ಥಪ್ರಕಾಶಿನಾಂ ಚ ದೇವತಾದಿಷು ಅಪ್ರಾಪ್ತವಿರುದ್ಧಗುಣವಿಶೇಷಪ್ರತಿಪಾದನಂ ವಿನಿಯೋಗಾನುಗುಣಮೇವ ॥

ನೇಯಂ ಶ್ರುತಿರ್ಮುಕ್ತಜನವಿಷಯಾ । ತೇಷಾಂ ಸದಾ ದರ್ಶನಾನುಪಪತ್ತೇಃ । ನಾಪಿ ಮುಕ್ತಪ್ರವಾಹವಿಷಯಾ । 'ಸದಾ ಪಶ್ಯನ್ತಿ' ಇತ್ಯೇಕೈಕಕರ್ತೃವಿಷಯತಯಾ ಶ್ರುತಿಭಙ್ಗಪ್ರಸಙ್ಗಾತ್ । ಮನ್ತ್ರಾರ್ಥವಾದಾವಗತಾ[2] ಹ್ಯರ್ಥಾಃ ಕಾರ್ಯಪರತ್ವೇಽಪಿ ಸಿಧ್ಯನ್ತೀತ್ಯುಕ್ತಮ್ । ಕಿಂ ಪುನಃ ಸಿದ್ಧವಸ್ತ್ವೇವ ತಾತ್ಪರ್ಯೇ ವ್ಯುತ್ಪತ್ತಿಸಿದ್ಧೇ ಇತಿ ಸರ್ವಮುಪಪನ್ನಮ್ ॥

(ಅರ್ಥ)

ಆ ಈ ಪರಬ್ರಹ್ಮವಾದ **ನಾರಾಯಣ**ನಿಗೆ ಅಪರಿಚ್ಛೇದ್ಯವಾದ ಜ್ಞಾನ, ಆನಂದ, ನಿರ್ಮಲತ್ವ ಎಂಬ **ಸ್ವರೂಪ**ದಂತೆಯೂ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು - **ಇವೇ** ಮುಂತಾದ ಅನವಧಿಕಾತಿಶಯವಾದ ಅಸಂಖ್ಯೇಯ **ಕಲ್ಯಾಣಗುಣ**ಗಳಂತೆಯೂ, ತನ್ನ ಸಂಕಲ್ಪದಿಂದ ಪ್ರವರ್ತ್ಯವಾಗಿರುವ ತನಗಿಂತ ಬೇರೆಯಾದ **ಚಿದಚಿದ್ವಸ್ತುಜಾತ**ದಂತೆಯೂ (೧) ತನಗೆ ಅಭಿಮತವೂ ತನಗೆ ಅನುರೂಪವೂ ಏಕರೂಪವೂ ಆಗಿರುವ **ದಿವ್ಯರೂಪ,** (೨) ಅದಕ್ಕೆ ಉಚಿತವಾದ ನಿರತಿಶಯಕಲ್ಯಾಣವಾಗಿರುವ ವಿವಿಧವಾದ **ಅನಂತಭೂಷಣಗಳು,** (೩) ತನ್ನ ಶಕ್ತಿಗೆ ಸಮಾನವಾಗಿರುವ ಅಪರಿಮಿತವಾದ, ಅನಂತವಾದ, ಆಶ್ಚರ್ಯಕರವಾದ ನಾನಾವಿಧವಾದ ಆಯುಧಗಳು, (೪) ತನಗೆ ಅಭಿಮತವೂ ಅನುರೂಪವೂ ಸ್ವರೂಪ, ರೂಪ, ಗುಣ, ವಿಭವ, ಐಶ್ವರ್ಯ, ಶೀಲ- ಇವೇ ಮುಂತಾದ ಅನೇಕ ಮಹಿಮೆಗಳುಳ್ಳ **ಮಹಿಷಿ,** (೫) ತನಗೆ ಅನುರೂಪವಾಗಿರುವ ಕಲ್ಯಾಣವಾದ ಜ್ಞಾನ, ಕ್ರಿಯೆ- ಮುಂತಾದ ಅಪರಿಮೇಯ ಗುಣಗಳುಳ್ಳ ಅನಂತ**ಪರಿಜನ ಪರಿಚ್ಛದ,** (೬) ತನಗೆ ಉಚಿತವಾದ ನಿಖಿಲ ಭೋಗಗಳು, ಭೋಗೋಪಕರಣಗಳು[3] ಮುಂತಾದ ಅನಂತ **ಮಹಾವಿಭವ,**

---

1. ಕಂಸದಲ್ಲಿ ತೋರಿಸಿರುವ ಭಾಗವು ಕಾ॥ ಪಾಠದಲ್ಲಿ ಮಾತ್ರ ಇದೆ ; ತೆ॥ ಪಾಠದಲ್ಲಿ ಕಂಸದೊಳಗಿಟ್ಟಿವೆ. ಕೆಲವು ಪುಸ್ತಕಗಳಲ್ಲಿಲ್ಲ. ಮೂಲಕ್ಕೆ ಸೇರಿತ್ತೋ ಇಲ್ಲವೋ ವಿಚಾರಿಸಬೇಕಾಗಿದೆ.
2. 'ವಾದಗತಾಃ' ತೆ॥
3. 'ಭೋಗಗಳೆಂದರೆ ಹೂಗಂಧ- ಮುಂತಾದವು; ಭೋಗೋಪಕರಣಗಳೆಂದರೆ ಅವಕ್ಕೆ ಬೇಕಾದ ಪಾತ್ರಾದಿಗಳು ; ಪರಿಜನರು ಶೇಷಾಸನಾದಿಗಳು ; ಪರಿಚ್ಛದವೆಂದರೆ ಕಲಾಚಿಕಾದಿಗಳು, ಮುಂತಾದ ಎಂದರೆ ದಿವ್ಯೋದ್ಯಾನಾದಿಗಳು.' ತಾ॥

ವಾಙ್ಮನಸ್ಸುಗಳಿಗೆ ಗೋಚರವಲ್ಲದ **ಸ್ವರೂಪಸ್ವಭಾವಗಳುಳ್ಳ ದಿವ್ಯಸ್ಥಾನವೇ ಮುಂತಾದವುಗಳು ನಿತ್ಯವೂ ನಿರ್ದುಷ್ಟವೂ ಆಗಿರುವವೆಂಬುದನ್ನು ತಿಳಿಸುವ ಸಾವಿರಾರು ಶ್ರುತಿಗಳಿರುತ್ತವೆ.**

'ನಾನು ಈ ಆದಿತ್ಯವರ್ಣನೂ ತಮಸ್ಸಿನ ಆಚೆ ಇರುವವನೂ ಆಗಿರುವ ಮಹಾಪುರುಷನನ್ನು ಬಲ್ಲೆನು' (ತೈ. ಆ. ಪು. ೩-೩-೩೮), 'ಈ ಆದಿತ್ಯನೊಳಗೆ ಹಿರಣ್ಮಯನಾದ ಪುರುಷನಿರುವನಲ್ಲ, ಅವನಿಗೆ ಕಪ್ಯಾಸಪುಂಡರೀಕವು ಹೇಗಿರುವದೋ ಹಾಗೆ ಅಕ್ಷಿಗಳು' (ಛಾಂ.೧-೬-೬, ೭), 'ಈ ಹೃದಯದೊಳಗಿನ ಆಕಾಶವಿದೆಯಲ್ಲ, ಅದರಲ್ಲಿ ಈ ಮನೋಮಯನಾದ, ಅಮೃತನೂ ಹಿರಣ್ಮಯನೂ ಆದ ಪುರುಷನಿರುವನಲ್ಲ...' (ತೈ. ೧-೬)- ಇಲ್ಲಿ ಮನೋಮಯನೆಂದರೆ ವಿಶುದ್ಧವಾದ ಮನಸ್ಸಿನಿಂದಲೇ ಗ್ರಹಿಸಬಹುದಾದ ಎಂದರ್ಥ. 'ಸರ್ವನಿಮಿಷಗಳೂ ವಿದ್ಯುತ್ತಿನಂತಿರುವ ಪುರುಷನಿಂದ ಹುಟ್ಟಿದವು' (ತೈ.ನಾ. ೨)- ಮಿಂಚಿನ ವರ್ಣದ ಪುರುಷನಿಂದ ಎಂದರ್ಥ. 'ನೀಲತೋಯದಮಧ್ಯಸ್ಥವಾದ ವಿದ್ಯುಲ್ಲೇಖೆಯಂತೆ ಭಾಸ್ವರವಾದ' (ತೈ.ನಾ. ೧೩)- ಎಂದರೆ ನಡುವೆ ಇರುವ ನೀಲಮೇಘವುಳ್ಳ ಮಿಂಚಿನ ರೇಖೆಯಂತೆ ಇರುವ ; ಆ ಈ ದಹರಪುಂಡರೀಕದ ನಡುವೆ ಇರುವ ಆಕಾಶದಲ್ಲಿರುವ ಬೆಂಕಿಯ ಜ್ವಾಲೆಯು, ತನ್ನೊಳಗಿರುವ ನೀಲಮೇಘದಂತೆ ಹೊಳೆಯುವ ಪರಮಾತ್ಮ ಸ್ವರೂಪವು, ತನ್ನೊಳಗಿರುವ ನೀಲಮೇಘವುಳ್ಳ ಮಿಂಚಿನಂತೆ ಹೊಳೆಯುತ್ತಿರುವದು ಎಂದರ್ಥ. 'ಮನೋಮಯನು, ಪ್ರಾಣಶರೀರನು, ಭಾರೂಪನು, ಸತ್ಯಕಾಮನು, ಸತ್ಯಸಂಕಲ್ಪನು, ಆಕಾಶಾತ್ಮನು, ಸರ್ವಕರ್ಮನು, ಸರ್ವಕಾಮನು, ಸರ್ವಗಂಧನು, ಸರ್ವರಸನು, ಇದೆಲ್ಲವನ್ನೂ ಸ್ವೀಕರಿಸಿರುವವನು, ಹರಟೆಗಾರನಲ್ಲದವನು, ಏತರಲ್ಲಿಯೂ ಆದರವಿಲ್ಲದವನು' (ಛಾಂ. ೩-೧೪-೨), 'ಮಹಾರಜತವರ್ಣದ[1] ವಸ್ತ್ರವುಳ್ಳವನು' (ಬೃ.೪-೩-೬), ಇವೇ ಮುಂತಾದ (ಶ್ರುತಿಗಳಿವೆ) ; 'ಈ ಜಗತ್ತಿಗೆಲ್ಲ ಒಡೆಯಳಾದವಳು ವಿಷ್ಣುಪತ್ನಿಯು'(ತೈ.ಸಂ.೪-೪-೧೨-೫),'ಹ್ರೀಯೂ ಲಕ್ಷ್ಮಿಯೂ ನಿನ್ನ ಪತ್ನಿಯರು' (ತೈ. ಆ. ೩-೩-೪೦), 'ಆ ವಿಷ್ಣುವಿನ ಪರಮಪದವನ್ನು ಸೂರಿಗಳು ಯಾವಾಗಲೂ ಕಾಣುತ್ತಿರುವರು' (ಸು. ೬), 'ಈ ರಜಸ್ಸಿನ ಆಚೆಗೆ ವಾಸಮಾಡಿಕೊಂಡಿರುವವನಾದ' (ತೈ.ಸಂ.೨-೨-೧೨), 'ಯಾವದು ಒಂದೇ ಆಗಿ ಅವ್ಯಕ್ತವೂ ಅನಂತರೂಪಗಳುಳ್ಳದ್ದೂ, ವಿಶ್ವವೂ, ಪುರಾತನವಾದದ್ದೂ ತಮಸ್ಸಿನ ಆಚೆ ಇರತಕ್ಕದ್ದೂ (ಆಗಿರುವದೋ' ತೈ.ನಾ.೧), '(ಹೃದಯ)ಗುಹೆಯಲ್ಲಿ ಪರಮಾಕಾಶದಲ್ಲಿರುವ

---

1. 'ಮಾಹಾರಜನ' ಎಂಬುದೇ ಉಪನಿಷತ್ತಿನ ಪಾಠ ; ಆದರೆ ಮೂಲದಲ್ಲಿಯೂ ವ್ಯಾಖ್ಯಾನದಲ್ಲಿಯೂ 'ಮಹಾರಜತ'ವೆಂದೇ ಇದೆ. ಉಪನಿಷತ್ತಿನಲ್ಲಿರುವ ಪಾಠಕ್ಕೆ ಅರಿಶಿನ ಬಣ್ಣದ ಎಂದರ್ಥ.

ಯಾವದನ್ನು ಅರಿತುಕೊಳ್ಳುವನೋ' (ತೈ.೨-೧), 'ಇದಕ್ಕೆ ಅಧ್ಯಕ್ಷನಾದ ಯಾವನು ಪರಮವ್ಯೋಮದಲ್ಲಿರುವನೋ' (ಋ.ಸಂ.೧೦-೧೧-೧೨೯), 'ಅದೇ ಭೂತವು, ಅದೇ ಭವಿಷ್ಯತ್ತು, ಮತ್ತು ಈ (ವರ್ತಮಾನಕಾಲದ್ದು) ; ಅದೇ ನಾಶವಿಲ್ಲದ ವ್ಯೋಮದಲ್ಲಿರತಕ್ಕದ್ದು' (ತೈ.ನಾ.೧)- ಇವೇ ಮುಂತಾದ ನೂರಾರು ಶ್ರುತಿಗಳಿಂದ ಈ ಅರ್ಥವು ನಿಶ್ಚಿತವಾಗಿರುತ್ತದೆ.

'ತದ್ವಿಷ್ಣೋಃ ಪರಮಂ ಪದಮ್' (ಆ ವಿಷ್ಣುವಿನ ಪರಮಪದವನ್ನು) ವಿಷ್ಣುವೆಂಬ ಪರಬ್ರಹ್ಮದ ಪರಮಪದವನ್ನು 'ಸೂರಿಗಳು ಯಾವಾಗಲೂ ಕಾಣುತ್ತಿರುತ್ತಾರೆ' ಎಂದು ಹೇಳಿರುವುದರಿಂದ ಸರ್ವಕಾಲದಲ್ಲಿಯೂ ಕಾಣುತ್ತಿರುವ ಪರಿಪೂರ್ಣಜ್ಞಾನವುಳ್ಳವರು ಕೆಲವರು ಇರುತ್ತಾರೆ ಎಂದು ಗೊತ್ತಾಗುತ್ತದೆ. 'ಸೂರಿಗಳಿದಾರಲ್ಲ, ಅವರು ಯಾವಾಗಲೂ ಕಾಣುತ್ತಿರುತ್ತಾರೆ' ಎಂದು (ಈ) ವಚನಕ್ಕೆ ಸಂಬಂಧಮಾಡಿಕೊಳ್ಳಬೇಕು ; ಅಥವಾ 'ಯಾರು ಯಾವಾಗಲೂ ಕಾಣುತ್ತಿರುತ್ತಾರೋ ಅವರೇ ಸೂರಿಗಳು' ಎಂದಾದರೂ (ಮಾಡಿಕೊಳ್ಳಬಹುದು.)

(ಆಕ್ಷೇಪ) :- ಈ ಎರಡು ಪಕ್ಷಗಳಲ್ಲಿಯೂ (ವಾಕ್ಯದಲ್ಲಿ ಅದು ವಿಷ್ಣು ಪದವು, ಮತ್ತು ಸೂರಿಗಳು ಯಾವಾಗಲೂ ಕಾಣುತ್ತಿರುತ್ತಾರೆ ಎಂದು) ಅನೇಕ (ವಿಷಯ ಗಳನ್ನು) ವಿಧಾನ(ಮಾಡಿದಂತಾಗುತ್ತದೆಯಾದ್ದರಿಂದ ಅದು) ಹೊಂದಲಾರದು.[1]

(ಪರಿಹಾರ) :- ಹಾಗಲ್ಲ. ಏಕೆಂದರೆ ಇದು ಯಾವದೂ ಪ್ರಾಪ್ತವಾಗಿಲ್ಲ ವಾದ್ದರಿಂದ (ಈ) ಎಲ್ಲವುಗಳಿಂದಲೂ ಕೂಡಿರುವ ಪರಮಸ್ಥಾನವನ್ನು (ಇಲ್ಲಿ) ವಿಧಾನಮಾಡಿರುತ್ತದೆ- (ಎಂಬುದು ಯುಕ್ತ). ಹೀಗೆಂದು (ಜೈಮಿನಿಗಳಿಂದ) ಉಕ್ತವಾಗಿರುತ್ತದೆ : 'ತದ್ಗುಣಾಸ್ತು ವಿಧೀಯೇರನ್ ಅವಿಭಾಗಾದ್ ವಿಧಾನಾರ್ಥೇ ನ ಚೇದನ್ಯೇನ ಶಿಷ್ಟಾಃ' (ಮತ್ತೊಂದು ವಿಧಿಯಿಂದ ಪ್ರತಿಪಾದಿಸಲ್ಪಡದೆ ಇದ್ದರೆ, ತದ್ಗುಣಗಳು ವಿಧಿಸಲ್ಪಟ್ಟಿರುತ್ತವೆ ಎಂಬುದು ಯುಕ್ತ ; ಏಕೆಂದರೆ ಅವು ಕರ್ಮದಿಂದ ವಿಭಕ್ತವಾಗಿರುವುದಿಲ್ಲ. ಜೈ.ಸೂ.೧-೪-೯) ಹೇಗೆ 'ಆಗ್ನೇಯವು ಅಷ್ಟಾಕಪಾಲ' (ತೈ.ಸಂ.೨-೫-೩-೨) ಎಂದು ಮುಂತಾಗಿರುವ **ಕರ್ಮವಿಧಿಯಲ್ಲಿ ಕರ್ಮವೂ ಕರ್ಮಗುಣಗಳೂ ಅಪ್ರಾಪ್ತವಾಗಿರುವದರಿಂದ ಸರ್ವಗುಣವಿಶಿಷ್ಟವಾದ ಕರ್ಮ ವನ್ನೇ ವಿಧಿಸಿದೆ (ಎಂದು ನಿಶ್ಚಯಿಸಬೇಕೋ) ಹಾಗೆಯೇ ಇಲ್ಲಿಯೂ ವಿಷ್ಣುವಿನ ಪರಮಸ್ಥಾನವು ಸೂರಿಗಳಾದವರಿಗೆ ಯಾವಾಗಲೂ ದೃಶ್ಯವಾಗಿರುವದೆಂಬುದು**

---

1. ಸೂರಿಗಳು ಯಾವಾಗಲೂ ದರ್ಶನಮಾಡುವರು, ಅಥವಾ ದರ್ಶನ ಮಾಡುವವರು ಸೂರಿಗಳು, ಇದು ವಿಷ್ಣುವಿನ ಪರಮಸ್ಥಾನವು- ಎಂದು ಎರಡೆರಡು ಅರ್ಥಗಳನ್ನು ಹೇಳುವದು ಯುಕ್ತವಲ್ಲ. ಏಕೆಂದರೆ ಆಗ ವಾಕ್ಯಭೇದವಾಗುವದು.

ಅಪ್ರಾಪ್ತವಾಗಿರುವದರಿಂದ[1] (ಈ ವಚನವು ಅದನ್ನು) ಪ್ರತಿಪಾದಿಸುತ್ತದೆಯಾಗಿ (ಇಲ್ಲಿ) ಯಾವ ವಿರೋಧವೂ ಇರುವದಿಲ್ಲ. ಕರಣಮಂತ್ರಗಳು[2] ಮಾಡಲ್ಪಡುವದನ್ನು ಅನುವಾದಮಾಡುವ ಮಂತ್ರಗಳು [3] ಸ್ತೋತ್ರಶಸ್ತ್ರರೂಪವಾಗಿರುವವೂ ಜಪಾದಿಗಳಲ್ಲಿ ವಿನಿಯುಕ್ತವಾಗಿ ಪ್ರಕರಣದಲ್ಲಿ ಪಠಿತವಾಗಿರುವವೇ ಆಗಲಿ ಪ್ರಕರಣದಲ್ಲಿ ಪಠಿತವಾಗಿಲ್ಲದವುಗಳೇ ಆಗಲಿ ಬ್ರಾಹ್ಮಣದಂತೆಯೇ ತಮ್ಮ ಅರ್ಥವೆಲ್ಲವನ್ನೂ ಅಪ್ರಾಪ್ತವೂ ಅವಿರುದ್ಧವೂ ಆಗಿದ್ದರೆ ಅದು ಇರುವಂತೆಯೇ ಬೋಧಿಸುತ್ತವೆ- ಎಂದಲ್ಲವೆ, ವೈದಿಕರ ಮತವು ? (ಗಾನ ಮಾಡಲ್ಪಟ್ಟ ಮಂತ್ರಗಳಿಂದ ಸಾಧ್ಯವಾದ ಗುಣಿನಿಷ್ಠಗುಣಾಭಿಧಾನವುಸ್ತೋತ್ರವು, ಗಾನವಿಲ್ಲದ ಮಂತ್ರಗಳಿಂದ ಸಾಧ್ಯವಾದ ಗುಣಿನಿಷ್ಠಗುಣಾಭಿಧಾನವು ಶಸ್ತ್ರವು).[4] ವಿನಿಯುಕ್ತಾರ್ಥವನ್ನು ಪ್ರಕಾಶಮಾಡುವ (ಮಂತ್ರಗಳೂ) ದೇವತೆಗಳೇ ಮುಂತಾದವುಗಳಲ್ಲಿ ಅಪ್ರಾಪ್ತವೂ ಅವಿರುದ್ಧವೂ ಆದ ಗುಣವಿಶೇಷವನ್ನು ಹೇಳುವದು, ವಿನಿಯೋಗಕ್ಕೆ ಅನುಗುಣವಾಗಿಯೇ ಇರುತ್ತದೆ.[5]

ಈ ಶ್ರುತಿಯು ಮುಕ್ತಜನರ ವಿಷಯದ್ದು[6] (ಎನ್ನುವದ)ಕ್ಕಾಗಲಾರದು ; ಏಕೆಂದರೆ ಅವರಿಗೆ ಯಾವಾಗಲೂ (ಆ ಪದವನ್ನು) ನೋಡುವದೆಂಬುದು ಆಗಲಾರದು.[7] (ಇದು) ಮುಕ್ತರ ಪ್ರವಾಹದ ವಿಷಯವು[8] (ಎನ್ನುವದಕ್ಕೂ) ಆಗಲಾರದು ; ಏಕೆಂದರೆ (ಆಗ) 'ಯಾವಾಗಲೂ ಕಾಣುತ್ತಾರೆ' ಎಂಬುದಕ್ಕೆ ಒಬ್ಬೊಬ್ಬರಾಗಿ (ದರ್ಶನ)ಕರ್ತೃಗಳಾಗಿರುವರೆಂಬುದೇ (ವಾಕ್ಯಕ್ಕೆ) ವಿಷಯವಾಗು

---

1. ಮತ್ತೊಂದು ವಚನದಿಂದ ವಿಹಿತವಾಗದೆ ಇರುವದರಿಂದ.
2. ಹೋಮಾದಿಗಳಿಗೆ ಸಾಧನವಾಗಿ ವಿಹಿತವಾಗಿರುವ ಮಂತ್ರಗಳು.
3. ಕರ್ಮವನ್ನು ಅನುವಾದಮಾಡುವ ಮಂತ್ರಗಳು 'ಬರ್ಹಿರ್ದೇವಸದನಂ ದಾಮಿ' (?) - ಮುಂತಾದವುಗಳು. ತಾ॥
4. ಗಾನವಿಶಿಷ್ಟವಾದ ಮಂತ್ರವನ್ನುಚ್ಚರಿಸುವದು ಸ್ತೋತ್ರವು, ಏಕಶ್ರುತಿರೂಪವಾಗಿ ಉಚ್ಚರಿಸುವದು ಶಸ್ತ್ರವು- ಎಂದು ತಾ॥ ಆದ್ದರಿಂದ ಇದು ಮೂಲಕ್ಕೆ ಸೇರಿದ ವಾಕ್ಯವಲ್ಲವೆಂದು ಹೇಳಬೇಕಾಗಿದೆ.
5. 'ಐನ್ದ್ರ್ಯಾ ಗಾರ್ಹಪತ್ಯಮುಪತಿಷ್ಠತೇ' ಇಂದ್ರದೇವತಾಕವಾದ ಮಂತ್ರದಿಂದ ಗಾರ್ಹಪತ್ಯವನ್ನು ಸೇವಿಸಬೇಕು- ಮುಂತಾದವು (ಮತ್ತೊಂದರಲ್ಲಿ ವಿನಿಯೋಗವಾಗಿರುವ) ವಿನಿಯುಕ್ತಾರ್ಥವನ್ನು ಹೇಳುತ್ತವೆ ; ಅಲ್ಲಿಯೂ ಅಪ್ರಾಪ್ತವಾದ (ಸಾಧಕಪ್ರಮಾಣವಿಲ್ಲದ) ಅಬಾಧಿತವಾದ (ಬಾಧಕಪ್ರಮಾಣವಿಲ್ಲದ) ಅರ್ಥವನ್ನು ಹೇಳುವವು ; ಇಲ್ಲಿಯೂ ಗುಣವಿಶೇಷವನ್ನೇ ಪ್ರತಿಪಾದಿಸಲಾಗುತ್ತದೆ. ಈವರೆಗೆ ಹೇಳಿರುವ ಕಡೆಗಳಲ್ಲೆಲ್ಲ ಸ್ವಾರ್ಥದಲ್ಲಿ ತಾತ್ಪರ್ಯವುಂಟು.
6. ಮುಕ್ತಜನರೂ ವಿಷ್ಣುಪದವನ್ನು ಕಾಣುತ್ತಾರೆ.
7. ಏಕೆಂದರೆ ಅವರು ಬದ್ಧರಾಗಿದ್ದಾಗ ಕಾಣುತ್ತಿರಲಿಲ್ಲ.
8. ಮುಕ್ತರಸಾಲು ಇದ್ದೇಇರುವದರಿಂದ ಮುಕ್ತರು ಯಾವಾಗಲೂ ಕಾಣುತ್ತಾರೆ ಎನ್ನಬಹುದಲ್ಲ!- ಎಂದು ಶಂಕೆ.

ವದರಿಂದ ಶ್ರುತಿಗೆ ಭಂಗವಾಗಬೇಕಾಗಿಬರುವದು.[1] ಮಂತ್ರ, ಅರ್ಥವಾದ-ಇವುಗಳಿಂದ ಗೊತ್ತಾಗುವ ಅರ್ಥಗಳು (ವಾಕ್ಯವು) ಕಾರ್ಯಪರವೆಂದರೂ ಸಿದ್ಧವಾಗುತ್ತವೆ ಎಂದು ಹಿಂದೆ ಹೇಳಿರುತ್ತೇವೆ ; ಇನ್ನು ವ್ಯುತ್ಪತ್ತಿಸಿದ್ಧವಾಗಿರುವ ಸಿದ್ಧವಸ್ತುವಿನಲ್ಲಿಯೇ (ವಾಕ್ಯಕ್ಕೆ) ತಾತ್ಪರ್ಯವೆಂದಾದಾಗ ಹೇಳತಕ್ಕದ್ದೇನು ? ಆದ್ದರಿಂದ (ಇದೆ)ಲ್ಲವೂ[2] ಯುಕ್ತವಾಗಿರುತ್ತದೆ.

ಪರಮಪದವೆಂಬ ಸ್ಥಾನವೂ ಇದೆ

(ಮೂಲ)

೮೪. ನನು ಚಾತ್ರ 'ತದ್ವಿಷ್ಣೋಃ ಪರಮಂ ಪದಮ್' (ಸು. ೬, ಋ.ಮಂ. ೧-೫-೨೨-೨೦) ಇತಿ ಪರಸ್ವರೂಪಮೇವ ಪರಮಶಬ್ದೇನಾಽಭಿಧೀಯತೇ । 'ಸಮಸ್ತಹೇಯರಹಿತಂ ವಿಷ್ಣ್ವಾಖ್ಯಂ ಪರಮಂ ಪದಮ್' (ವಿ.ಪು.೧-೨೨-೫೩)[3] ಇತ್ಯಾದಿಷು ಅವ್ಯತಿರೇಕದರ್ಶನಾತ್, ನೈವಮ್ । 'ಕ್ಷಯನ್ತಮಸ್ಯ ರಜಸಃ ಪರಾಕೇ' (ಋ. ೭-೬-೧೦೦-೫ ; ತೈ.ಸಂ. ೨-೨-೧೨), 'ತದಕ್ಷರೇ ಪರಮೇ ವ್ಯೋಮನ್' (ತೈ.ನಾ.೧), 'ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್' (ಋ.೧೦-೧೧-೧೨೯), 'ಯೋ ವೇದ ನಿಹಿತಂ, ಗುಹಾಯಾಂ ಪರಮೇ ವ್ಯೋಮನ್' (ತೈ.೨-೧)-ಇತ್ಯಾದಿಷು ಪರಸ್ಥಾನಸ್ಯೈವ[4] ದರ್ಶನಾತ್[5] । 'ವಿಷ್ಣೋಃ[6] ಪರಮಂ ಪದಮ್' ಇತಿ ವ್ಯತಿರೇಕನಿರ್ದೇಶಾಚ್ಚ । 'ವಿಷ್ಣ್ವಾಖ್ಯಂ ಪರಮಂ ಪದಮ್' ಇತಿ ವಿಶೇಷಣಾತ್ ಅನ್ಯದಪಿ ಪರಮಂ ಪದಂ ವಿದ್ಯತೇ ಇತಿ ತೇನೈವ[7] ಜ್ಞಾಯತೇ । ತದಿದಂ ಪರಸ್ಥಾನಂ ಸೂರಿಭಿಃ ಸದಾ ದೃಶ್ಯತ್ವೇನ ಪ್ರತಿಪಾದ್ಯತೇ ॥

(ಅರ್ಥ)

(ಆಕ್ಷೇಪ) :- ಇಲ್ಲಿ, 'ಆ ವಿಷ್ಣುವಿನ ಪರಮಪದ'ವೆಂದು ಪರ(ಮಾತ್ಮನ) ಸ್ವರೂಪವೇ ಪರಮಪದಶಬ್ದದಿಂದ ಉಕ್ತವಾಗಿರುತ್ತದೆಯಲ್ಲವೆ? ಏಕೆಂದರೆ

---

1. 'ಸೂರಿಗಳು ಯಾವಾಗಲೂ ಕಾಣುತ್ತಾರೆ' ಎಂದು ಸ್ಪಷ್ಟವಾಗಿ ಹೇಳಿರುವಲ್ಲಿ ಒಬ್ಬೊಬ್ಬರೂ ಕಾಣುತ್ತಾರೆ ಎಂದೇ ಪ್ರತೀತವಾಗುತ್ತದೆ.
2. ಇಲ್ಲಿ ನಿತ್ಯಪರವಿಭೂತಿಯನ್ನೇ ಹೇಳಿರುತ್ತದೆ ಎಂಬುದು.
3. 'ಏವಂಪ್ರಕಾರಮಮಲಂ ನಿತ್ಯಂ ವ್ಯಾಪಕಮಕ್ಷಯಮ್' ಎಂದು ಪೂರ್ವಾರ್ಧ.
4. ಕಾ॥ ಪಾಠದಲ್ಲಿ 'ಪರಮ' ಎಂದೇ ಎಲ್ಲಾ ಕಡೆಯಲ್ಲಿಯೂ ಇದೆ. ತಾ॥
5. 'ಪ್ರದರ್ಶನಾತ್' ಕಾ॥
6. 'ತದ್ವಿಷ್ಣೋಃ' ಕಾ॥
7. 'ಚೈತೇನೈವ' ಕಾ॥

'ಸಮಸ್ತಹೇಯ(ಗುಣ)ರಹಿತವಾದ ವಿಷ್ಣುವೆಂಬ ಪರಮಪದವು' (ವಿ.ಪು.೧-೨೨-೫೩) ಮುಂತಾದ (ವಾಕ್ಯ)ಗಳಲ್ಲಿ (ವಿಷ್ಣುವಿಗಿಂತ ಪರಮಪದವು) ವ್ಯತಿರಿಕ್ತವಲ್ಲ ವೆಂದು ಕಂಡುಬರುತ್ತದೆ.[1]

(ಪರಿಹಾರ) :- ಹಾಗಲ್ಲ. 'ಕ್ಷಯನ್ತಮಸ್ಯ ರಜಸಃ ಪರಾಕೇ' (ಈ ರಜಸ್ಸಿನ ಆಚೆಯ ಸ್ಥಾನದಲ್ಲಿ ವಾಸವಾಗಿರುವ, ಋ. ೭-೬-೧೧-೫, ತೈ.ಸಂ. ೨-೨-೧೨), 'ತದಕ್ಷರೇ ಪರಮೇ ವ್ಯೋಮನ್' (ಅದು ನಾಶವಿಲ್ಲದ ಪರಮವ್ಯೋಮದಲ್ಲಿ, ತೈ.ನಾ.೧), 'ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್' (ಯಾವ ಇದರ ಅಧ್ಯಕ್ಷನು ಪರಮವ್ಯೋಮದಲ್ಲಿರುವನೋ, ಋ.೧೦-೧೧-೧೨೯) 'ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್' (ಗುಹೆಯಲ್ಲಿ ಪರಮವ್ಯೋಮದಲ್ಲಿ ಇದೆಯೆಂದು ಯಾವನು ಉಪಾಸನೆಮಾಡುವನೋ, ತೈ. ೨-೧) ಮುಂತಾದ (ವಾಕ್ಯಗಳಲ್ಲಿ) ಪರಮಸ್ಥಾನವನ್ನೇ ಹೇಳಿರುವದರಿಂದಲೂ 'ಆ ವಿಷ್ಣುವಿನ ಪರಮಪದವನ್ನು' ಎಂದು ಬೇರೆಯಾಗಿಯೇ[2] ತಿಳಿಸಿರುವದರಿಂದಲೂ 'ವಿಷ್ಣುವೆಂಬ ಪರಮಪದವು' ಎಂದು ವಿಶೇಷಣವನ್ನು (ಪರಮಪದಕ್ಕೆ ಕೊಟ್ಟಿರು)ವದರಿಂದ ಮತ್ತೊಂದು ಪರಮಪದವು ಇದೆಯೆಂದು ಆ (ವಿಶೇಷಣ)ದಿಂದಲೇ ತಿಳಿದು ಬರುತ್ತದೆ. ಆ ಈ ಪರಮಸ್ಥಾನವು ಸೂರಿಗಳಿಗೆ ಯಾವಾಗಲೂ ದೃಶ್ಯವಾಗಿರುತ್ತದೆ ಎಂದು ಇಲ್ಲಿ ಪ್ರತಿಪಾದಿಸಿರುತ್ತದೆ.

ಪರಮಪದಗಳು ಮೂರು ಇವೆ

(ಮೂಲ)

೮೫. ಏತದುಕ್ತಂ ಭವತಿ । ಕ್ವಚಿತ್ಪರಸ್ಥಾನಂ ಪರಮಪದಶಬ್ದೇನ ಪ್ರತಿಪಾದ್ಯತೇ । ಕ್ವಚಿತ್ ಪ್ರಕೃತಿವಿಯುಕ್ತಾತ್ಮಸ್ವರೂಪಮ್ । ಕ್ವಚಿದ್ಭಗವತ್ಸ್ವರೂಪಮ್ । 'ತದ್ವಿಷ್ಣೋಃ ಪರಮಂ ಪದಮ್'[3] (ಋ.೧-೫-೨೨-೨೦) ಇತಿ ಪರಸ್ಥಾನಮ್ । 'ಸರ್ಗಸ್ಥಿತ್ಯನ್ತ[4]ಕಾಲೇಷು ತ್ರಿಧೈವಂ ಸಂಪ್ರವರ್ತತೇ । ಗುಣ ಪ್ರವೃತ್ತಾ ಪರಮಂ ಪದಂ ತಸ್ಯಾಽಗುಣಂ ಮಹತ್' (ವಿ.ಪು.೧-೨೨-೪೧) ಇತ್ಯತ್ರ ಪ್ರಕೃತಿವಿಯುಕ್ತಾತ್ಮಸ್ವರೂಪಮ್ । 'ಸಮಸ್ತಹೇಯರಹಿತಂ ವಿಷ್ಣ್ವಾಖ್ಯಂ ಪರಮಂ ಪದಮ್' (ವಿ.ಪು.೧-೨೨-೫೩) ಇತ್ಯತ್ರ ಭಗವತ್ಸ್ವರೂಪಮ್ ।

1. ಆದ್ದರಿಂದ ವಿಷ್ಣುವಿಗಿಂತ ಬೇರೆಯಾಗಿ ಪರಮಪದವಿಲ್ಲವೆಂದಾಯಿತಲ್ಲವೆ? - ಎಂದು ಆಕ್ಷೇಪ.
2. ವಿಷ್ಣುವಿನ ಎಂಬ ಷಷ್ಠೀವಿಭಕ್ತಿಯಿಂದ ವಿಷ್ಣು ಬೇರೆ, ಪರಮಪದವು ಬೇರೆ ಎಂದುಹೇಳಿದೆ.
3. ಇಲ್ಲಿ 'ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯನ್ತಿ ಸೂರಯ ಇತಿ ಪರಮಂ ಸ್ಥಾನಮ್' ಎಂದು ಕಾ॥
4. 'ಸೃಷ್ಟಿಸ್ಥಿತ್ಯನ್ತ' ಎಂದು ಅಚ್ಚಿನಪಾಠ.

ತ್ರೀಣ್ಯಪ್ಯೇತಾನಿ ಪರಮಪ್ರಾಪ್ಯತ್ವೇನ ಪರಮಪದಶಬ್ದೇನ ಪ್ರತಿಪಾದ್ಯನ್ತೇ । ಕಥಂ ತ್ರಯಾಣಾಂ ಪರಮಪ್ರಾಪ್ಯತ್ವಮ್ ಇತಿ ಚೇತ್ । ಭಗವತ್ಸ್ವರೂಪಂ ಪರಮ ಪ್ರಾಪ್ಯತ್ವಾದೇವ ಪರಮಂ ಪದಮ್ । ಇತರಯೋರಪಿ ಭಗವತ್ಪ್ರಾಪ್ತಿಗರ್ಭತ್ವಾ ದೇವ ಪರಮಪದತ್ವಮ್ । ಸರ್ವಕರ್ಮ(ಬನ್ಧ)[1] ವಿನಿರ್ಮುಕ್ತಾತ್ಮಸ್ವರೂಪಾ ವಾಪ್ತಿರ್ಭಗವತ್ಪ್ರಾಪ್ತಿಗರ್ಭಾ[2] । 'ತ ಇಮೇ ಸತ್ಯಾಃ ಕಾಮಾಃ ಅನೃತಾಭಿಧಾನಾಃ' (ಛಾಂ. ೮-೩-೨) ಇತಿ ಭಗವತೋ ಗುಣಗಣಸ್ಯ ತಿರೋಧಾಯಕತ್ವೇನ ಅನೃತಶಬ್ದೇನ ಸ್ವಕರ್ಮಣಃ ಪ್ರತಿಪಾದನಾತ್ । ಅನೃತರೂಪತಿರೋಧಾನಂ ಕ್ಷೇತ್ರಜ್ಞಕರ್ಮೇತಿ ಕಥಮವಗಮ್ಯತ ಇತಿ ಚೇತ್ । 'ಅವಿದ್ಯಾ ಕರ್ಮಸಂಜ್ಞಾನ್ಯಾ ತೃತೀಯಾ ಶಕ್ತಿರಿಷ್ಯತೇ । ಯಯಾ ಕ್ಷೇತ್ರಜ್ಞ ಶಕ್ತಿಃ ಸಾ ವೇಷ್ಟಿತಾ ನೃಪ ಸರ್ವಗಾ ॥ ಸಂಸಾರತಾಪಾನಖಿಲಾನವಾಪ್ನೋತ್ಯತಿಸಂತತಾನ್ । ತಯಾ ತಿರೋಹಿತತ್ವಾಚ್ಚ' (ವಿ.ಪು.೬-೭-೬೧, ೬೨, ೬೩) ಇತ್ಯಾದಿವಚನಾತ್ । ಪರಸ್ಥಾನಪ್ರಾಪ್ತಿರಪಿ ಭಗವತ್ಪ್ರಾಪ್ತಿಗರ್ಭೈವೇತಿ ಸುವ್ಯಕ್ತಮ್ । 'ಕ್ಷಯನ್ತಮಸ್ಯ ರಜಸಃ ಪರಾಕೇ' (ಋ. ೭-೬-೧೦೦, ತೈ.ಸಂ.೨-೨-೧೨) ಇತಿ ರಜಃಶಬ್ದೇನ ತ್ರಿಗುಣಾತ್ಮಿಕಾ ಪ್ರಕೃತಿರುಚ್ಯತೇ । ಕೇವಲಸ್ಯ ರಜಸೋಽನವಸ್ಥಾನಾತ್ । ಇಮಾಂ ತ್ರಿಗುಣಾತ್ಮಿಕಾಂ ಪ್ರಕೃತಿಮತಿಕ್ರಮ್ಯ ಸ್ಥಿತೇ ಸ್ಥಾನೇ ಕ್ಷಯನ್ತಂ ವಸನ್ತಮ್ ಇತ್ಯರ್ಥಃ । ಅನೇನ ತ್ರಿಗುಣಾತ್ಮಕಾತ್ ಕ್ಷೇತ್ರಜ್ಞಸ್ಯ ಭೋಗ್ಯಭೂತಾದ್ ವಸ್ತುನಃ ಪರಸ್ತಾತ್ ವಿಷ್ಣೋರ್ವಾಸಸ್ಥಾನಮ್ ಇತಿ ಗಮ್ಯತೇ । 'ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯವರ್ಣಂ ತಮಸಃ ಪರಸ್ತಾತ್' (ತೈ.ಆ.೩-೩-೩೮) ಇತ್ಯತ್ರಾಽಪಿ ತಮಃಶಬ್ದೇನ ಸೈವ ಪ್ರಕೃತಿರುಚ್ಯತೇ । ಕೇವಲಸ್ಯ ತಮಸೋಽನವಸ್ಥಾನಾದೇವ । 'ರಜಸಃ ಪರಾಕೇ ಕ್ಷಯನ್ತಮ್' ಇತ್ಯನೇನೈಕವಾಕ್ಯತ್ವಾತ್ । ತಮಸಃ ಪರಸ್ತಾತ್ ವಸನ್ತಂ ಮಹಾನ್ತಮಾದಿತ್ಯವರ್ಣಂ ಪುರುಷಮಹಂ ವೇದೇತ್ಯಯಮರ್ಥೋಽವಗಮ್ಯತೇ । 'ಸತ್ಯಂ ಜ್ಞಾನಮನನ್ತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್' (ತೈ.೨-೧), 'ತದಕ್ಷರೇ ಪರಮೇ ವ್ಯೋಮನ್' (ತೈ.ನಾ.೧) ಇತಿ ತತ್ಸ್ಥಾನಮ್ ಅವಿಕಾರರೂಪಂ ಪರಮವ್ಯೋಮ ಶಬ್ದಾಭಿಧೇಯಮ್ ಇತಿ ಚ ಗಮ್ಯತೇ । 'ಅಕ್ಷರೇ ಪರಮೇ ವ್ಯೋಮನ್' (ತೈ.ನಾ.೧) ಇತ್ಯಸ್ಯ ಸ್ಥಾನಸ್ಯಾಕ್ಷರತ್ವಶ್ರವಣಾತ್ ಕ್ಷರರೂಪಾದಿತ್ಯಮಣ್ಡಲಾದಯೋ ನ ಪರಮವ್ಯೋಮಶಬ್ದಾಭಿಧೇಯಾಃ । 'ಯತ್ರ ಪೂರ್ವೇ ಸಾಧ್ಯಾಃ ಸನ್ತಿ ದೇವಾಃ' (ತೈ.ಆ.೩-೩-೩೮) 'ಯತ್ರರ್ಷಯಃ ಪ್ರಥಮಜಾ ಯೇ ಪುರಾಣಾಃ' (ತೈ.ಸಂ.೪-೭-೧೩-೨) ಇತ್ಯಾದಿಷು ತ ಏವ ಸೂರಯ ಇತ್ಯವಗಮ್ಯತೇ । 'ತದ್ವಿಪ್ರಾಸೋ ವಿಪನ್ಯವೋ ಜಾಗ್ರವಾಂಸಃ ಸಮಿನ್ಧತೇ । ವಿಷ್ಣೋರ್ಯತ್ಪರಮಂ

---

1. ಇದು ಕಾ॥ ಪಾಠದಲ್ಲಿ ಹೆಚ್ಚಾಗಿದೆ.
2. ಇದರ ಮುಂದಿರುವ ಇತಿ ಎಂಬ ಕಾ॥ ಪಾಠವು ಅನವಶ್ಯ.

ಪದಮ್' (ಋ. ೧-೫-೨೨-೨೧) ಇತ್ಯತ್ರಾಪಿ ವಿಪ್ರಾಸಃ -ಮೇಧಾವಿನೋ ವಿಪನ್ಯವಃ -ಸ್ತುತಿಶೀಲಾಃ ಜಾಗೃವಾಂಸಃ - ಅಸ್ಖಲಿತವಿಜ್ಞಾನಾಃ । ತ ಏವಾಽಸ್ಖಲಿತ ವಿಜ್ಞಾನಾಃ ತದ್ ವಿಷ್ಣೋಃ ಪರಮಂ ಪದಂ ಸದಾ ಸ್ತುವನ್ತಃ ಸಮಿನ್ಧತೇ ಇತ್ಯರ್ಥಃ ॥

(ಅರ್ಥ)

ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ : ಒಂದೊಂದು ಕಡೆಯಲ್ಲಿ **ಪರಮಸ್ಥಾನ**ವನ್ನು ಪರಮಪದಶಬ್ದದಿಂದ ಪ್ರತಿಪಾದಿಸಿರುತ್ತದೆ. ಒಂದೊಂದು ಕಡೆಯಲ್ಲಿ ಪ್ರಕೃತಿ ವಿಯುಕ್ತವಾದ ಆತ್ಮತತ್ತ್ವವನ್ನೂ ಒಂದೊಂದು ಕಡೆಯಲ್ಲಿ ಭಗವತ್ಸ್ವರೂಪವನ್ನೂ (ಪ್ರತಿಪಾದಿಸಿರುತ್ತದೆ. ಹೇಗೆಂದರೆ) : 'ಆ ವಿಷ್ಣುವಿನ ಪರಮಪದವನ್ನು (ಸೂರಿಗಳು ಯಾವಾಗಲೂ ನೋಡುತ್ತಿರುತ್ತಾರೆ)' (ಋ.೧-೫-೨೨-೨೦) ಎಂದು **ಪರಮಸ್ಥಾನ**ವನ್ನು 'ಸೃಷ್ಟಿಸ್ಥಿತ್ಯಂತಕಾಲಗಳಲ್ಲಿ ಗುಣಪ್ರವೃತ್ತಿಯಿಂದ ಆತನ ಅಗುಣವಾದ ಮಹಾ ಪರಮಪದವು ಹೀಗೆ ಮೂರು ವಿಧವಾಗಿ ಇದ್ದುಕೊಂಡಿರುತ್ತದೆ' (ವಿ.ಪು.೧-೨೨-೪೧) ಎಂಬಲ್ಲಿ ಪ್ರಕೃತಿವಿಯುಕ್ತವಾದ **ಆತ್ಮಸ್ವರೂಪ**ವನ್ನು (ಹೇಳಿರುತ್ತದೆ) ; 'ಸಮಸ್ತಹೇಯ(ಗುಣ)ರಹಿತವಾದ ವಿಷ್ಣುವೆಂಬ ಪರಮಪದವು' (ವಿ.ಪು.೧-೨೨-೫೩) ಎಂಬಲ್ಲಿ **ಭಗವತ್ಸ್ವರೂಪ**ವನ್ನು (ಹೇಳಿರುತ್ತದೆ). ಈ **ಮೂರೂ ಪರಮಪ್ರಾಪ್ಯವಾಗಿರುವದರಿಂದ ಪರಮ ಪದಶಬ್ದದಿಂದ ಪ್ರತಿಪಾದಿತವಾಗಿರುತ್ತವೆ.**

(ಆಕ್ಷೇಪ) :- (ಈ) ಮೂರೂ ಪರಮಪ್ರಾಪ್ಯವೆಂಬುದು ಹೇಗೆ (ಸರಿ) ?

(ಪರಿಹಾರ) :- **ಭಗವತ್ಸ್ವರೂಪವು ಪರಮಪ್ರಾಪ್ಯವಾಗಿರುವದರಿಂದಲೇ ಪರಮಪದ(ವೆನಿಸಿರುತ್ತದೆ). ಇನ್ನೆರಡೂ ಭಗವತ್ಪ್ರಾಪ್ತಿ ಗರ್ಭಿತವಾಗಿರುವದ ರಿಂದಲೇ[1] ಪರಮಪದಗಳು.**

(ಹೇಗೆಂದರೆ), ಸರ್ವಕರ್ಮಬಂಧವಿನಿರ್ಮುಕ್ತವಾದ ಆತ್ಮಸ್ವರೂಪಪ್ರಾಪ್ತಿ ಯಲ್ಲಿ ಭಗವತ್ಪ್ರಾಪ್ತಿಯೂ ಸೇರಿರುತ್ತದೆ. 'ಆ ಈ ಸತ್ಯಕಾಮಗಳೂ ಅನೃತಾಪಿಧಾನ ಗಳಾಗಿವೆ' (ಛಾಂ.೮-೩-೨) ಎಂಬಲ್ಲಿ ಭಗವಂತನ ಗುಣಗಣಕ್ಕೆ ಮರೆಯಾಗಿರುವದ ರಿಂದ ಅನೃತಶಬ್ದದಿಂದ ಆತ್ಮಕರ್ಮಗಳನ್ನು ಪ್ರತಿಪಾದಿಸಿರುವದರಿಂದ (ಹೀಗೆನ್ನಬೇಕು).

(ಪ್ರಶ್ನೆ) :- ಇಲ್ಲಿ ಅನೃತರೂಪವಾದ ಮರೆಯು ಕ್ಷೇತ್ರಜ್ಞಕರ್ಮವೇ ಎಂದು ಹೇಗೆ ಗೊತ್ತಾಗುತ್ತದೆ.

(ಉತ್ತರ) :- 'ಕರ್ಮವೆಂಬ ಹೆಸರಿನ ಅವಿದ್ಯೆಯು ಮೂರನೆಯ ಶಕ್ತಿ ಯೆನಿಸುವದು. ನೃಪನೆ, ಅದರಿಂದ ಆ ಸರ್ವಗತನಾದ ಆ ಕ್ಷೇತ್ರಜ್ಞಶಕ್ತಿಯು ಮುಸುಕ ಲ್ಪಟ್ಟಿರುತ್ತದೆಯಾದ್ದರಿಂದ ಎಲ್ಲಾ ಸಂಸಾರತಾಪಗಳನ್ನೂ ಅತಿಸಂತತವಾಗಿ

1. ಭಗವತ್ಪ್ರಾಪ್ತಿಸಹಿತವಾಗಿರುವದರಿಂದಲೇ - ಎಂದು ತಾ॥

ಹೊಂದುತ್ತಿರುತ್ತದೆ. ಮತ್ತು ಅದರಿಂದ ಮರೆಯಾಗಿರುವದರಿಂದಲೇ' (ವಿ.ಪು. ೬-೭-೬೧, ೬೨) - ಎಂದು ಮುಂತಾಗಿ ಹೇಳಿರುವದರಿಂದ[1] (ಹೀಗೆಂದು ನಿಶ್ಚಿತವಾಗುತ್ತದೆ).

(ಇನ್ನು) **ಪರಸ್ಥಾನಪ್ರಾಪ್ತಿಯೂ ಭಗವತ್ಪ್ರಾಪ್ತಿಗರ್ಭಿತವಾಗಿಯೇ (ಪರಮಪದವೆನಿಸುತ್ತದೆ)** ಎಂಬುದು ಸುವ್ಯಕ್ತವು. (ಹೇಗೆಂದರೆ), 'ಕ್ಷಯನ್ತಮಸ್ಯ ರಜಸಃ ಪರಾಕೇ' (ಋ. ೭-೬-೧೦೦-೫ ; ತೈ.ಸಂ.೨-೨-೧೨) ಎಂಬಲ್ಲಿ ರಜಃಶಬ್ದದಿಂದ ತ್ರಿಗುಣಾತ್ಮಕವಾದ ಪ್ರಕೃತಿಯನ್ನು ಹೇಳಿರುತ್ತದೆ ; ಏಕೆಂದರೆ ಬರಿಯ ರಜಸ್ಸು (ತಾನೇ) ಇರುವಂತಿಲ್ಲ.[2] **ಈ ತ್ರಿಗುಣಾತ್ಮಕವಾದ ಪ್ರಕೃತಿಯನ್ನು ಮೀರಿರುವ ಸ್ಥಾನದಲ್ಲಿ ಕ್ಷಯನ್ತಮ್ - ಎಂದರೆ ವಾಸ ಮಾಡುತ್ತಿರುವ ಎಂದರ್ಥ. ಇದರಿಂದ ತ್ರಿಗುಣಾತ್ಮಕವಾಗಿ ಕ್ಷೇತ್ರಜ್ಞನಿಗೆ ಭೋಗ್ಯಭೂತವಾಗಿರುವ ವಸ್ತುವಿನ ಆಚೆಗೆ ವಿಷ್ಣುವಿನ ವಾಸಸ್ಥಾನ(ವಿದೆ) ಎಂದುಗೊತ್ತಾಗುತ್ತದೆ.** 'ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯವರ್ಣಂ ತಮಸಃ ಪರಸ್ತಾತ್' (ಆದಿತ್ಯವರ್ಣನಾಗಿ ತಮಸ್ಸಿನ ಆಚೆಯಿರುವ ಈ ಪುರುಷನನ್ನು ಬಲ್ಲೆನು. ತೈ.ನಾ.೩-೩-೩೮) ಎಂಬಲ್ಲಿಯೂ ತಮಃ ಶಬ್ದದಿಂದ ಅದೇ ಪ್ರಕೃತಿಯನ್ನು ಹೇಳಿದೆ ; ಏಕೆಂದರೆ ಬರಿಯ ತಮಸ್ಸು (ತಾನೊಂದೇ) ಇರಲಾರದಾದ್ದರಿಂದಲೇ.[2] 'ರಜಸ್ಸಿನ ಆಚೆ ಇರುವ' ಎಂಬ ವಾಕ್ಯದೊಡನೆ ಏಕವಾಕ್ಯವಾಗಬೇಕಾಗಿರುವದರಿಂದ ತಮಸ್ಸಿನ ಆಚೆ ವಾಸ ಮಾಡಿಕೊಂಡಿರುವ ಆದಿತ್ಯವರ್ಣನಾದ ಮಹಾಪುರುಷನನ್ನು ನಾನು ಬಲ್ಲೆನು ಎಂದು ಅರ್ಥವೆಂದು ನಿಶ್ಚಯವಾಗುತ್ತದೆ. 'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು, ಗುಹೆಯಲ್ಲಿ ಪರಮವ್ಯೋಮದಲ್ಲಿದೆ ಎಂದು ಯಾವನು ಅರಿತುಕೊಳ್ಳುವನೋ (ತೈ.೨-೧), 'ಅದು ಅಕ್ಷರವಾದ ಪರಮವ್ಯೋಮದಲ್ಲಿರುತ್ತದೆ' (ತೈ.ನಾ.೧) ಎಂದಿರುವದರಿಂದ ಆ ಸ್ಥಾನವು **ಅವಿಕಾರರೂಪ**ವಾಗಿದ್ದು 'ಪರಮವ್ಯೋಮ' ಎಂಬ ಶಬ್ದಕ್ಕೆ ವಾಚ್ಯವಾಗಿದೆ ಎಂದು ಗೊತ್ತಾಗುತ್ತದೆ. 'ಅಕ್ಷರವಾದ ಪರಮವ್ಯೋಮದಲ್ಲಿ' ಎಂದು ಈ ಸ್ಥಾನವು ಅಕ್ಷರವೆಂದಿರುವದರಿಂದ **ಕ್ಷರರೂಪವಾದ ಆದಿತ್ಯಮಂಡಲವೇ ಮುಂತಾದವುಗಳು ಪರಮವ್ಯೋಮ ಶಬ್ದಕ್ಕೆ ವಾಚ್ಯಗಳಲ್ಲ.** 'ಅಲ್ಲಿ ಹಿಂದಿನ ಸಾಧ್ಯ ದೇವತೆಗಳು ಇರುವರು' (ತೈ.ನಾ.೩-೩-೩೮), 'ಅಲ್ಲಿ ಪ್ರಥಮಜರಾದ ಪುರಾಣ ರಾದ ಋಷಿಗಳಿರುವರಲ್ಲ, ಅವರಿರುತ್ತಾರೆ' (ತೈ.ಸಂ.೪-೭-೧೩) ಮುಂತಾದ

---

1. ಇಲ್ಲಿ ಕರ್ಮವು ಕ್ಷೇತ್ರಜ್ಞಶಕ್ತಿಯನ್ನು ಮುಸುಕಿದೆ ಎಂದಿದೆ ; ಆದ್ದರಿಂದ ಅನ್ಯತರೂಪವಾದ ಮರೆಯೆಂದರೂ ಕರ್ಮವೆಂದರೂ ಒಂದೇ ಎಂದಾಯಿತು.
2. ಸತ್ತ್ವರಜಸ್ತಮಸ್ಸುಗಳು ಎಲ್ಲವೂ ಒಟ್ಟಿಗೆಯೇ ಇರುತ್ತವೆ; ಒಂದೊಂದು ಕಡೆಯಲ್ಲಿ ಒಂದೊಂದು ಪ್ರಬಲವಾಗಿರುತ್ತವೆ, ಅಷ್ಟೆ.

(ವಾಕ್ಯ)ಗಳಲ್ಲಿ ಇದೇ ಸೂರಿಗಳನ್ನೇ (ಹೇಳಿದೆ) ಎಂದು ನಿಶ್ಚಿತವಾಗುತ್ತದೆ. 'ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿನ್ಧತೇ ವಿಷ್ಣೋರ್ಯತ್ಪರಮಂ ಪದಮ್' (ಋ.೧-೫-೨೨-೨೩, ಸು.೬) ಎಂಬಲ್ಲಿಯೂ ವಿಪ್ರಾಸಃ - ಮೇಧಾವಿಗಳಾದ, ವಿಪನ್ಯವಃ - ಸ್ತುತಿಶೀಲರಾದ, ಜಾಗೃವಾಂಸಃ - ಅಸ್ಖಲಿತವಿಜ್ಞಾನವುಳ್ಳ ; ಅದೇ ಅಸ್ಖಲಿತವಿಜ್ಞಾನ (ಸೂರಿ)ಗಳೇ ಆ ವಿಷ್ಣುವಿನ ಪರಮಪದವನ್ನು ಯಾವಾಗಲೂ ಹೊಗಳುತ್ತಾ ಬೆಳಗುತ್ತಿರುವರು ಎಂದರ್ಥ.

ಪರಿಜನಸ್ಥಾನಾದಿಗಳು ಬ್ರಹ್ಮದಲ್ಲಿಯೇ ಅಂತರ್ಭೂತವಾಗಿವೆ

(ಮೂಲ)

೮೬. ಏತೇಷಾಂ ಪರಿಜನಸ್ಥಾನಾದೀನಾಂ 'ಸದೇವ ಸೋಮ್ಯೇದಮಗ್ರ ಆಸೀತ್' (ಛಾಂ.೬-೨-೧), ಇತ್ಯತ್ರ ಜ್ಞಾನಬಲೈಶ್ವರ್ಯಾದಿಕಲ್ಯಾಣಗುಣಗಣವತ್, ಪರಬ್ರಹ್ಮಸ್ವರೂಪಾನ್ತರ್ಭೂತತ್ವಾತ್[1] 'ಸದೇವ, ಏಕಮೇವಾದ್ವಿತೀಯಮ್' ಇತಿ ಬ್ರಹ್ಮಾನ್ತರ್ಭಾವೋಽವಗಮ್ಯತೇ । ಏಷಾಮಪಿ ಕಲ್ಯಾಣಗುಣೈಕದೇಶತ್ವಾದೇವ । 'ಸದೇವ ಸೋಮ್ಯೇದಮಗ್ರ ಆಸೀತ್' (ಛಾಂ.೬-೨-೧) ಇತ್ಯತ್ರ ಇದಮ್ ಇತಿ ಶಬ್ದಸ್ಯ ಕರ್ಮವಶ್ಯಭೋಕ್ತೃವರ್ಗಮಿಶ್ರತದ್ಭೋಗ್ಯಭೂತಪ್ರಪಞ್ಚವಿಷಯತ್ವಾಚ್ಚ । 'ಸದಾ ಪಶ್ಯನ್ತಿ ಸೂರಯಃ' (ಋ.೧-೫-೨೨-೨೦, ಸು.೬) ಇತಿ ಸದಾದರ್ಶಿತ್ವೇನ ಚ ತೇಷಾಂ ಕರ್ಮವಶ್ಯಾನನ್ತರ್ಭಾವಾತ್ । 'ಅಪಹತಪಾಪ್ಮಾ' ಇತ್ಯಾದಿ 'ಅಪಿಪಾಸಃ' ಇತ್ಯನ್ತೇನ ಸ್ವ[2]ಲೀಲೋಪಕರಣ ಭೂತತ್ರಿಗುಣಾತ್ಮಕಪ್ರಕೃತಿಪ್ರಾಕೃತತತ್ಸಂಸೃಷ್ಟ ಪುರುಷಗತಂ ಹೇಯಸ್ವಭಾವಂ ಸರ್ವಂ ಪ್ರತಿಷಿಧ್ಯ 'ಸತ್ಯಕಾಮಃ' ಇತ್ಯನ್ತೇನ ಸ್ವಭೋಗ್ಯಭೋಗೋಪಕರಣಜಾತಸ್ಯ ಸರ್ವಸ್ಯ ನಿತ್ಯತಾ[3] ಪ್ರತಿಪಾದಿತಾ । ಸತ್ಯಾಃ ಕಾಮಾಃ ಯಸ್ಯಾಸೌ ಸತ್ಯಕಾಮಃ । ಕಾಮ್ಯನ್ತ ಇತಿ ಕಾಮಾಃ । ತೇನ ಪರೇಣ ಬ್ರಹ್ಮಣಾ ಸ್ವಭೋಗ್ಯ ತದುಪಕರಣಾದಯಃ ಸ್ವಾಭಿಮತಾಃ ಯೇ ಕಾಮ್ಯನ್ತೇ ತೇ ಸತ್ಯಾಃ - ನಿತ್ಯಾ ಇತ್ಯರ್ಥಃ । ಅನ್ಯಸ್ಯ ಲೀಲೋಪಕರಣಸ್ಯಾಪಿ ವಸ್ತುನಃ ಪ್ರಮಾಣಸಂಬನ್ಧ ಯೋಗ್ಯತ್ವೇ ಸತ್ಯಪಿ ವಿಕಾರಾಸ್ಪದತ್ವೇನ ಅಸ್ಥಿರತ್ವಾತ್ । ತದ್ವಿಪರೀತಂ ಸ್ಥಿರತ್ವಮೇಷಾಂ ಸತ್ಯಪದೇನೋಚ್ಯತೇ । 'ಸತ್ಯಸಂಕಲ್ಪಃ' ಇತಿ ಏತೇಷು ಭೋಗ್ಯತದುಪಕರಣಾದಿಷು ನಿತ್ಯೇಷು ನಿರತಿಶಯೇಷು ಅನನ್ತೇಷು ಸತ್ಸ್ವಪಿ, ಅಪೂರ್ವಾಣಾಮ

---

1. 'ಸ್ವರೂಪಾನ್ತರ್ಗತತ್ವಾತ್' ಕಾ ॥
2. 'ಸರ್ವ' ಕಾ॥
3. 'ಸತ್ಯತಾ' ಎಂಬ ಕಾ॥ ಪಾಠಕ್ಕಿಂತ ಇದೇ ಮೇಲೆಂದು ತೋರುತ್ತದೆ.

ಪರಿಮಿತಾನಾಮ್ ಅರ್ಥಾನಾಮಪಿ ಸಙ್ಕಲ್ಪಮಾತ್ರೇಣ ಸಿದ್ಧಿಂ ವದತಿ । ಏಷಾಂ ಚ ಭೋಗೋಪಕರಣಾನಾಂ ಲೀಲೋಪಕರಣಾನಾಂ ಚೇತನಾನಾಮಚೇತನಾನಾಂ ಸ್ಥಿರಾಣಾಮಸ್ಥಿರಾಣಾಂ ಚ ತತ್ಸಂಕಲ್ಪಾಯತ್ತಸ್ವರೂಪಸ್ಥಿತಿಪ್ರವೃತ್ತಿಭೇದಾದಿಸರ್ವಂ ವದತಿ 'ಸತ್ಯಸಂಕಲ್ಪ' ಇತಿ ॥

(ಅರ್ಥ)

ಈ ಪರಿಜನ, ಸ್ಥಾನ- ಮುಂತಾದವಕ್ಕೆ 'ಅದ್ವಿತೀಯವಾದ ಸತ್ತೊಂದೇ ಮೊದಲು ಇತ್ತು' (ಛಾಂ.೬-೨-೧) ಎಂಬಲ್ಲಿ ಜ್ಞಾನ, ಬಲ, ಐಶ್ವರ್ಯ - ಮುಂತಾದ ಕಲ್ಯಾಣಗುಣಗಣದಂತೆ ಪರಬ್ರಹ್ಮ ಸ್ವರೂಪದಲ್ಲಿಯೇ ಅಂತರ್ಗತವಾಗಿರುವದರಿಂದ 'ಅದ್ವಿತೀಯವಾದ ಸತ್ತೇ' ಎಂದು ಬ್ರಹ್ಮಾಂತರ್ಭಾವವನ್ನೇ ಹೇಳಿದೆ ಎಂದು ನಿಶ್ಚಿತವಾಗುತ್ತದೆ ; ಏಕೆಂದರೆ ಇವೂ ಕಲ್ಯಾಣಗುಣಗಳಲ್ಲಿ ಏಕದೇಶವಾಗಿಯೇ ಇರುತ್ತವೆ.[1] 'ಸೋಮ್ಯನೆ, ಇದು ಮೊದಲು ಸತ್ತೇ ಆಗಿತ್ತು' (ಛಾಂ.೬-೨-೧) ಎಂಬಲ್ಲಿ 'ಇದು' ಎಂಬ ಶಬ್ದವು ಕರ್ಮವಶ್ಯಭೋಕ್ತೃವರ್ಗದಲ್ಲಿ ಮಿಶ್ರಿತವಾಗಿರುವ ಆ (ಭೋಕ್ತೃಗಳಿಗೆ) ಭೋಗ್ಯವಾಗಿರುವ ಪ್ರಪಂಚವನ್ನೇ ಹೇಳುತ್ತದೆಯಾದ್ದರಿಂದಲೂ (ಹೀಗೆಂದು ತಿಳಿಯಬೇಕು). ಏಕೆಂದರೆ 'ಸೂರಿಗಳು ಯಾವಾಗಲೂ ಕಾಣುತ್ತಿರುತ್ತಾರೆ' (ಋ.೧-೫-೨೨-೨೦, ಸು.೬) ಎಂದು (ಅವರು) ನಿತ್ಯದರ್ಶಿಗಳಾಗಿರುವ (ರೆಂದು ಹೇಳಿರುವ)ದರಿಂದ ಅವರು ಕರ್ಮವಶ್ಯರಾದ (ಜೀವರು)ಗಳಲ್ಲಿ ಅಂತರ್ಭೂತರಾಗಿರುವದಿಲ್ಲವಾಗಿ (ಹೀಗೆ ನಿಶ್ಚಯವಾಗುತ್ತದೆ).

'ಅಪಹತಪಾಪ್ಮನು' ಎಂಬುದರಿಂದ ಹಿಡಿದು 'ಅಪಿಪಾಸನು' ಎನ್ನುವವರೆಗಿನ (ಗ್ರಂಥ)ದಿಂದ ತನ್ನ ಲೀಲೆಗೆ ಉಪಕರಣವಾಗಿರುವ ತ್ರಿಗುಣಪ್ರಕೃತಿ, ಪ್ರಾಕೃತರಾದ ತತ್ಸಂಬದ್ಧಪುರುಷರು- ಇವರುಗಳಲ್ಲಿರುವ ಹೇಯಸ್ವಭಾವವನ್ನೆಲ್ಲವನ್ನೂ ಅಲ್ಲಗಳೆದು 'ಸತ್ಯಕಾಮಃ' ಎಂಬವರೆಗಿನ ಗ್ರಂಥದಿಂದ ತನಗೆ ಭೋಗ್ಯ ಭೋಗೋಪಕರಣಜಾತವಾದ ಸರ್ವವೂ ನಿತ್ಯವೆಂದು ಪ್ರತಿಪಾದಿಸಲಾಗಿದೆ. ಸತ್ಯಕಾಮನು ಎಂದರೆ ಯಾವನ ಕಾಮಗಳು ಸತ್ಯವಾಗಿರುವವೋ ಅವನು ; ಕಾಮಿಸಲ್ಪಡುವವನಾದ್ದರಿಂದ (ಅವು) ಕಾಮಗಳೆನಿಸುವವು. ಆದ್ದರಿಂದ ಪರಬ್ರಹ್ಮನಾದ (ನಾರಾಯಣನಿಗೆ) ಸ್ವಾಭಿಮತವಾಗಿ ತನಗೆ ಭೋಗ್ಯಗಳೂ ಆ (ಭೋಗ್ಯ)ಗಳಿಗೆ ಉಪಕರಣಗಳೂ ಆದ ಕಾಮಿಸಲ್ಪಡುವ (ವಸ್ತು)ಗಳಿವೆಯಲ್ಲ, ಅವುಗಳು ಸತ್ಯ, ಎಂದರೆ ನಿತ್ಯವಾಗಿರುತ್ತವೆ ಎಂದರ್ಥ. **ಮಿಕ್ಕ ಲೀಲೋಪಕರಣವಾಗಿರುವ ವಸ್ತುವೂ ಪ್ರಮಾಣಸಂಬಂಧಯೋಗ್ಯವಾಗಿರುವದಾದರೂ ವಿಕಾರಕ್ಕೆ**

1. ಬ್ರಹ್ಮದಲ್ಲಿ ಯಾವಾಗಲೂ ಇರುವ ಕಲ್ಯಾಣಗುಣಗಳೊಳಗೇ ಇವೂ ಸೇರಿರುತ್ತವೆ.

ಆಶ್ರಯವಾಗಿರುವದರಿಂದ ಅಸ್ಥಿರವಾಗಿರುವದರಿಂದ, ಆದಕ್ಕೆ ವಿರುದ್ಧವಾಗಿ ಇವು ಸ್ಥಿರವಾಗಿರುವವೆಂಬುದನ್ನು 'ಸತ್ಯ' ಎಂಬ ಪದದಿಂದ ಹೇಳಲಾಗಿರುತ್ತದೆ.[1] 'ಸತ್ಯಸಂಕಲ್ಪನು' ಎಂಬುದು ಈ ಭೋಗ್ಯತದುಪಕರಣವೇ ಮುಂತಾದವುಗಳು ನಿತ್ಯವೂ ನಿರತಿಶಯವಾಗಿಯೂ ಇರತಕ್ಕವೂ ಅನಂತವಾಗಿರುವವೂ ಆದರೂ ಅಪೂರ್ವವಾದ, ಅಪರಿಮಿತವಾದ ಅರ್ಥಗಳು ಕೂಡ (ಈತನ) ಸಂಕಲ್ಪಮಾತ್ರದಿಂದ ಸಿದ್ಧವಾಗುವವು ಎಂಬುದನ್ನು ಹೇಳುತ್ತದೆ. ಚೇತನಾಚೇತನಗಳೂ ಸ್ಥಿರಾಸ್ಥಿರಗಳೂ ಆದ ಈ ಭೋಗೋಪಕರಣಗಳೂ ಲೀಲೋಪಕರಣಗಳೂ ಆತನ ಸಂಕಲ್ಪಕ್ಕೆ ಅಧೀನವಾಗಿಯೇ ಸ್ವರೂಪ, ಸ್ಥಿತಿ, ಪ್ರವೃತ್ತಿ- ಮುಂತಾದವುಗಳುಳ್ಳವಾಗಿರುವವೆಂಬುದನ್ನೂ 'ಸತ್ಯಸಂಕಲ್ಪ'ನೆಂಬ (ವಿಶೇಷಣವು) ಹೇಳುತ್ತದೆ.

ನಿತ್ಯವಿಭೂತಿಯನ್ನು ವರ್ಣಿಸುವ ಇತಿಹಾಸಪುರಾಣಗಳು

(ಮೂಲ)

೮೭. ಇತಿಹಾಸಪುರಾಣಯೋರ್ವೇದೋಪಬೃಂಹಣಯೋಶ್ಚ ಅಯಮರ್ಥ ಉಚ್ಯತೇ । 'ತೌ[2] **ತು ಮೇಧಾವಿನೌ ದೃಷ್ಟ್ವಾ ವೇದೇಷು ಪರಿನಿಷ್ಠಿತೌ । ವೇದೋಪಬೃಂಹಣಾರ್ಥಾಯ ತಾವಗ್ರಾಹಯತ ಪ್ರಭುಃ' (ರಾ. ಬಾಲ ೪-೬) ಇತಿ ವೇದೋಪಬೃಂಹಣತಯಾ ಪ್ರಾರಬ್ಧೇ ಶ್ರೀರಾಮಾಯಣೇ 'ವ್ಯಕ್ತಮೇಷ ಮಹಾಯೋಗೀ ಪರಮಾತ್ಮಾ ಸನಾತನಃ । ಅನಾದಿಮಧ್ಯನಿಧನೋ ಮಹತಃ ಪರಮೋ ಮಹಾನ್ । ತಮಸಃ ಪರಮೋ ಧಾತಾ ಶಙ್ಖಚಕ್ರಗಧಾಧರಃ । ಶ್ರೀವತ್ಸವಕ್ಷಾ ನಿತ್ಯಶ್ರೀರಜಯಃ**[3] **ಶಾಶ್ವತೋ ಧ್ರುವಃ ॥' (ರಾ. ಯುದ್ಧ. ೧೧೪-೧೪, ೧೫), 'ಶರಾ ನಾನಾವಿಧಾಶ್ಚಾಪಿ ಧನುರಾಯತವಿಗ್ರಹಮ್ । ಅನ್ವಗಚ್ಛನ್ಸ್ಮ ಕಾಕುತ್ಸ್ಥಂ ಸರ್ವೇ ಪುರುಷವಿಗ್ರಹಾಃ ॥' (ರಾ. ಉತ್ತರ. ೧೦೯-೭),**[4] **'ವಿವೇಶ ವೈಷ್ಣವಂ ಧಾಮ**[5] **ಸಶರೀರಃ ಸಹಾನುಗಃ ॥'**[6] **(ರಾ. ಉತ್ತರ. ೧೧೦-೧೩)**

---

1. ಅವಿಕಾರಿತ್ವವೆಂಬ ಸತ್ಯತ್ವವು ಅಸ್ಥಿರವಾದ ಪ್ರಪಂಚದಲ್ಲಿರುವದಿಲ್ಲ.
2. 'ಸ ತು' ಎಂದು ಅಚ್ಚಿನ ಪಾಠ.
3. 'ಅನೇಯಃ' ಕಾ॥
4. 'ಶರಾ ನಾನಾವಿಧಾಶ್ಚಾಪಿ ಧನುರಾಯತಮುತ್ತಮಮ್ । ತಥಾಯುಧಾನಿ ತೇ ಸರ್ವೇ ಯಯುಃ ಪುರುಷವಿಗ್ರಹಾಃ ॥' ಎಂದು ಅಚ್ಚಿನ ಪಾಠ.
5. 'ತೇಜಃ' ಕಾ॥
6. 'ವಿವೇಶ ವೈಷ್ಣವಂ ತೇಜಃ ಸಶರೀರಃ ಸಹಾನುಜಃ । ತತೋ ವಿಷ್ಣುಮಯಂ ದೇವಂ ಪೂಜಯನ್ತಿ ಸ್ಮ ದೇವತಾಃ ॥' ಎಂದು ಅಚ್ಚಿನ ಪಾಠ.

ಶ್ರೀಮದ್ವೈಷ್ಣವೇ[1] ಪುರಾಣೇ- 'ಸಮಸ್ತಾಃ ಶಕ್ತಯಶ್ಚೈತಾಃ ನೃಪ ಯತ್ರ ಪ್ರತಿಷ್ಠಿತಾಃ । ತದ್ವಿಶ್ವರೂಪವೈರೂಪ್ಯಂ ರೂಪಮನ್ಯದ್ಧರೇರ್ಮಹತ್ ॥' (ವಿ.ಪು.೬-೭-೭೦), 'ಮೂರ್ತಂ ಬ್ರಹ್ಮ ಮಹಾಭಾಗ ಸರ್ವಬ್ರಹ್ಮಮಯೋ ಹರಿಃ ॥'[2] (ವಿ.ಪು.೧-೨೨-೬೩), 'ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ । ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ ॥' (ವಿ.ಪು.೧-೮-೧೭), 'ದೇವತ್ವೇ ದೇವದೇಹೇಯಂ ಮನುಷ್ಯತ್ವೇ ಚ ಮಾನುಷೀ । ವಿಷ್ಣೋರ್ದೇಹಾನು[3]ರೂಪಾಂ ವೈ ಕರೋತ್ಯೇಷಾಽಽತ್ಮನಸ್ತನುಮ್ ॥' (ವಿ.ಪು.೧-೯-೧೪೫), 'ಏಕಾಸ್ತಿನಃ ಸದಾ ಬ್ರಹ್ಮಧ್ಯಾಯಿನೋ ಯೋಗಿನೋ ಹಿ ಯೇ । ತೇಷಾಂ ತತ್ಪರಮಂ ಸ್ಥಾನಂ ಯದ್ವೈ ಪಶ್ಯನ್ತಿ ಸೂರಯಃ ॥' (ವಿ.ಪು. ೧-೬-೩೯), 'ಕಲಾಮುಹೂರ್ತಾದಿಮಯಶ್ಚ ಕಾಲೋ ನ ಯದ್ವಿಭೂತೇಃ ಪರಿಣಾಮ ಹೇತುಃ ।' (ವಿ.ಪು.೪-೧-೮೪)[4] ಮಹಾಭಾರತೇ ಚ- 'ದಿವ್ಯಂ ಸ್ಥಾನಮಜರಂ ಚಾಪ್ರಮೇಯಂ ದುರ್ವಿಜ್ಞೇಯಂ ಚಾಽಽಗಮೈರ್ಗಮ್ಯಮಾದ್ಯಮ್ ॥ ಗಚ್ಛ ಪ್ರಭೋರಕ್ಷ ಚಾಽಸ್ಮಾನ್ ಪ್ರಪನ್ನಾನ್ ಕಲ್ಪೇ ಕಲ್ಪೇ ಜಾಯಮಾನಃ ಸ್ವಮೂರ್ತ್ಯಾ॥' (?) 'ಕಾಲಃ ಸಂಪಚ್ಯತೇ ತತ್ರ ನ ಕಾಲಸ್ತತ್ರ ವೈ ಪ್ರಭುಃ ॥'[5] (ಮೋ.ಧ. ೧೯೮-೯) ಇತಿ ॥

(ಅರ್ಥ)

ವೇದವನ್ನು ಉಪಬೃಂಹಣಮಾಡುವ ಇತಿಹಾಸಪುರಾಣಗಳಲ್ಲಿಯೂ ಈ ವಿಷಯವನ್ನು ಹೇಳಿದೆ : 'ಆ ಮೇಧಾವಿಗಳಿಬ್ಬರೂ ವೇದದಲ್ಲಿ ನೆಲೆನಿಂತವರೆಂಬುದನ್ನು ಕಂಡು (ಆ) ಪ್ರಭುವು ವೇದವನ್ನು ಉಪಬೃಂಹಣಮಾಡುವದಕ್ಕಾಗಿ ಅವರಿಬ್ಬರಿಗೂ (ಈ ಕಾವ್ಯವನ್ನು) ಕಲಿಸಿದನು'(ರಾ.ಬಾಲ. ೪-೬) ಎಂದು ವೇದೋಪಬೃಂಹಣಕ್ಕಾಗಿ[6] ಪ್ರಾರಂಭವಾಗಿರುವ **ಶ್ರೀರಾಮಾಯಣದಲ್ಲಿ** : 'ಈತನು ಮಹಾಯೋಗಿಯಾದ ಸನಾತನಪರಮಾತ್ಮನೇ ಎಂಬುದು ವ್ಯಕ್ತವಾಗಿರುತ್ತದೆ.

---

1. 'ಶ್ರೀಮತಿ ವೈಷ್ಣವೇ' ಕಾ॥
2. 'ಏವಂ ಪ್ರಕಾರಮಮಲಂ ನಿತ್ಯಂ ವ್ಯಾಪಕಮಕ್ಷಯಮ್' ಎಂಬುದು ಪೂರ್ವಾರ್ಧ.
3. 'ವಿಷ್ಣೋರೇವಾನುರೂಪಾಮ್' ಎಂಬ ಕಾ॥ ಪಾಠವುಸರಿಯಲ್ಲ.
4. 'ಆಜನ್ಮನಾಶಸ್ಯ ಸದೈಕಮೂರ್ತೇರನಾಮರೂಪಸ್ಯ ಸನಾತನಸ್ಯ ॥' ಎಂಬುದು ಉತ್ತರಾರ್ಧ.
5. 'ಕಾಲಃ ಸಂಪದ್ಯತೇ' ಎಂದು ಬೊಂ॥ ಪಾಠ; ಕು॥ ಪಾಠದಲ್ಲಿ(೧೯೬-೯) 'ಸಂಪಚ್ಯತೇ' ಎಂದೇ ಇದೆ. 'ಸ ಕಾಲಸ್ಯ ಪ್ರಭೂ ರಾಜನ್ ಸ್ವರ್ಗಸ್ಯಾಪಿ ತಥೇಶ್ವರಃ' ಎಂದು ಉತ್ತರಾರ್ಧ.
6. ರಾಮಾಯಣವು ಬರಿಯ ವಾಕ್ಯವೆಂದು ತಿಳಿಯಬಾರದು, ಅದು ವೇದಾರ್ಥವನ್ನು ಪಶದೀಕರಿಸುವದಕ್ಕಾಗಿಯೇ ಹೊರಟದ್ದು ಎಂಬುದನ್ನು ತಿಳಿಸುವದಕ್ಕೆ ಈ ಶ್ಲೋಕವನ್ನು ಉದಾಹರಿಸಿದೆ ಎಂದು ಭಾವ.

(ಇವನು) ಆದಿಮಧ್ಯಾಂತಗಳಿಲ್ಲದವನು, ಮಹತ್ತಿಗಿಂತಲೂ ಹೆಚ್ಚಿನ ಮಹಾಂತನು ; ತಮಸ್ಸಿನ ಆಚೆಯಿರುವವನು, ಸೃಷ್ಟಿಸುವವನು, ಶಂಖಚಕ್ರಗದಾಧರನು, ಶ್ರೀವತ್ಸ ಚಿಹ್ನಾಂಕಿತವಾದ ಎದೆಯುಳ್ಳವನು, ನಿತ್ಯಶ್ರೀಯುಕ್ತನು ; ಜಯಿಸಲಶಕ್ಯನು, ಶಾಶ್ವತನು, ಧ್ರುವನು'[1] (ರಾ. ಯುದ್ಧ. ೧೧೪-೧೪, ೧೫) 'ಬಗೆಬಗೆಯ ಬಾಣಗಳೂ ಧನುಸ್ಸೂ ದೀರ್ಘರೂಪನಾದ ಆ ಕಾಕುತ್ಸ್ಥ (ರಾಮ)ನನ್ನು ಎಲ್ಲವೂ ಪುರುಷರೂಪವನ್ನು ಧರಿಸಿ ಹಿಂಬಾಲಿಸಿದವು' (ರಾ. ಉತ್ತರ. ೧೯-೨), 'ಪರಿವಾರಸಮೇತನಾಗಿ ಸಶರೀರನಾಗಿ ವೈಷ್ಣವಧಾಮವನ್ನು ಹೊಕ್ಕನು' (ರಾ. ಉತ್ತರ. ೧೧೦-೧೨) ಎಂದಿದೆ.

ಶ್ರೀಮದ್ವೈಷ್ಣವಪುರಾಣದಲ್ಲಿ : 'ರಾಜನೆ[2] ಈ ಶಕ್ತಿಗಳೆಲ್ಲವೂ ಯಾವನಲ್ಲಿದ್ದು ಕೊಂಡಿರುವವೋ ವಿಶ್ವರೂಪಕ್ಕಿಂತ ವಿಲಕ್ಷಣವಾದ ಆ ಹರಿಯ ಮಹಾರೂಪವು ಮತ್ತೊಂದು' (ವಿ.ಪು.೬-೭-೭೦), 'ಎಲೈ ಮಹಾಭಾಗನೆ[3], ಮೂರ್ತ ಬ್ರಹ್ಮವೆಂದರೆ, ಸರ್ವಬ್ರಹ್ಮಮಯವಾದ[4] ಹರಿಯು' (ವಿ.ಪು.೧-೨೨-೬೩), 'ಈ ಜಗನ್ಮಾತೆಯಾದ ಶ್ರೀಯು ವಿಷ್ಣುವನ್ನು ಬಿಟ್ಟು ಅಗಲದ ನಿತ್ಯಳು ; ದ್ವಿಜೋತ್ತಮನೆ,[5] ವಿಷ್ಣುವು ಹೇಗೆ ಸರ್ವಗತನೋ ಈಕೆಯೂ ಹಾಗೆಯೇ (ಸರ್ವಗತಳು)' (ವಿ.ಪು.೧-೮-೧೭), '(ಆತನು) ದೇವನಾದರೆ ಈಕೆಯು ದೇವದೇಹಿಯಾಗುವಳು, ಮನುಷ್ಯನಾದರೆ ಮನುಷ್ಯ(ದೇಹ)ಳಾಗುವಳು ; (ಈಕೆಯು) ತನ್ನ ಶರೀರವನ್ನು ವಿಷ್ಣುವಿನ ದೇಹಕ್ಕೆ ಅನುಗುಣವಾಗಿ ಮಾಡಿಕೊಳ್ಳುವಳು' (ವಿ.ಪು.೧-೯-೧೪೫). 'ಯಾರು ಏಕಾಂತಿಗಳೋ ಯಾವಾಗಲೂ ಬ್ರಹ್ಮಧ್ಯಾನವನ್ನು ಮಾಡುತ್ತಿರುವವರೂ ಆದ ಯೋಗಿಗಳಾಗಿರುವರೋ, ಅವರಿಗೆ- ಸೂರಿಗಳು (ಯಾವಾಗಲೂ) ನೋಡುತ್ತಿರುವ- ಆ ಪರಮಸ್ಥಾನವು (ದೊರಕುವದು)' (ವಿ.ಪು.೧-೬-೩೯) 'ಕಲಾಮುಹೂರ್ತಾದಿರೂಪವಾಗಿರುವ ಕಾಲವು ಆತನ ವಿಭೂತಿಯು ಪರಿಣಮಿಸುವದಕ್ಕೆ ಕಾರಣವಾಗದು'[6] (ವಿ.ಪು.೪-೧-೮೪)

ಮಹಾಭಾರತದಲ್ಲಿಯೂ : 'ಪ್ರಭುವೆ, ದಿವ್ಯವೂ ಮುಪ್ಪಿಲ್ಲದ್ದೂ

---

1. ಅನಾದಿಮಧ್ಯನಿಧನ ಎಂಬ ಶಬ್ದದಿಂದ ಸ್ವರೂಪನಿತ್ಯತ್ವವನ್ನೂ ಶಾಶ್ವತವೆಂಬಶಬ್ದದಿಂದ ಗುಣವಿಶಿಷ್ಟಾಕಾರದ ನಿತ್ಯತ್ವವನ್ನೂ ಧ್ರುವನೆಂಬ ಶಬ್ದದಿಂದ ವಿಗ್ರಹವಿಶಿಷ್ಟಾಕಾರ ನಿತ್ಯತ್ವವನ್ನೂ ನಿತ್ಯಶ್ರೀ ಎಂಬ ಶಬ್ದದಿಂದ ಪತ್ನಿಯನ್ನೂ ಹೇಳಿದೆ- ಎಂದು ತಾ॥
2. ಖಾಂಡಿಕ್ಯನಿಗೆ ಕೇಶಿಧ್ವಜನು ಹೇಳಿದ ಮಾತಿದು.
3. ಮೈತ್ರೇಯನಿಗೆ ಪರಾಶರರು ಹೇಳಿದ್ದಿದು.
4. ಸರ್ವಜೀವರೂ ಶೇಷವಾಗಿರುವ ಎಂದು ತಾ॥
5. ಮೈತ್ರೇಯನಿಗೆ ಪರಾಶರರು ಹೇಳಿದ್ದಿದು.
6. ಪರಮಸ್ಥಾನವು ನಿತ್ಯವು ಎಂದರ್ಥ.

ಅಪ್ರಮೇಯವೂ ತಿಳಿಯಲಸದಳವೂ ಆಗಮ್ಯೆಕಗಮ್ಯವೂ ಆಗಿರುವ ಆದ್ಯಸ್ಥಾನಕ್ಕೆ ಹೋಗು ; ಮತ್ತು ಕಲ್ಪಕಲ್ಪದಲ್ಲಿಯೂ ಸ್ವಮೂರ್ತಿಯೊಡನೆ ಹುಟ್ಟುವವನಾಗಿ ಪ್ರಪನ್ನರಾದ ನಮ್ಮಗಳನ್ನು ಕಾಪಾಡು.' (?) 'ಆ ಸ್ಥಾನದಲ್ಲಿ ಕಾಲವೇ ಪಾಚಿತವಾಗುವದೇ ಹೊರತು, ಆ (ಸ್ಥಾನದ) ವಿಷಯದಲ್ಲಿ ಕಾಲವು (ಏನು ಮಾಡುವದಕ್ಕೂ) ಶಕ್ತವಲ್ಲ' (ಮೋ. ಧ. ೧೯೮-೯) ಎಂದಿದೆ.

ನಿತ್ಯವಿಭೂತಿ ವಿಷಯಕ್ಕೆ ಸೂತ್ರಕಾರಸಂಮತಿ

(ಮೂಲ)

೮೮. ಪರಸ್ಯ ಬ್ರಹ್ಮಣೋ ರೂಪವತ್ತ್ವಂ ಸೂತ್ರಕಾರಶ್ಚ ವದತಿ 'ಅನ್ಯಸ್ತದ್ಧರ್ಮೋಪದೇಶಾತ್' (ವೇ.ಸೂ.೧-೧-೨೧) ಇತಿ । ಯೋಽಸಾವಾದಿತ್ಯ ಮಣ್ಡಲಾನ್ತರ್ವರ್ತೀ ತಪ್ತಕಾರ್ತಸ್ವರಗಿರಿವರಪ್ರಭಃ, ಸಹಸ್ರಾಂಶುಶತಸಹಸ್ರಕಿರಣಃ, ಗಮ್ಭೀರಾಮ್ಭಃಸಮುದ್ಭೂತಸುಮೃಷ್ಟನಾಲರವಿಕರವಿಕಸಿತಪುಣ್ಡರೀಕದಲಾಮಲಾಯತೇಕ್ಷಣಃ, ಸುಭ್ರೂಲಲಾಟಃ, ಸುನಾಸಃ,[1] ಸುಸ್ಮಿತಾಧರವಿದ್ರುಮಃ, ಸುರುಚಿರಕೋಮಲಗಣ್ಡಃ, ಕಮ್ಬುಗ್ರೀವಃ, ಸಮುನ್ನತಾಂಸವಿಲಮ್ಬಿಚಾರುರೂಪ ದಿವ್ಯಕರ್ಣಕಿಸಲಯಃ, ಪೀನವೃತ್ತಾಯತಭುಜಃ, ಚಾರುತರ[2] ಕರತಲಾನುರಕ್ತಾಙ್ಗುಲೀಭರಲಙ್ಕೃತಃ, ತನುಮಧ್ಯಃ, ವಿಶಾಲವಕ್ಷಸ್ಥಲಃ, ಸಮವಿಭಕ್ತಸರ್ವಾಙ್ಗಃ, ಅನಿರ್ದೇಶ್ಯದಿವ್ಯರೂಪಸಂಹನನಃ, ಸ್ನಿಗ್ಧವರ್ಣಃ, ಪ್ರಬುದ್ಧಪುಣ್ಡರೀಕಚಾರುಚರಣಯುಗಲಃ, ಸ್ವಾನುರೂಪಪೀತಾಮ್ಬರಧರಃ, ಅಮಲಕಿರೀಟಕುಣ್ಡಲಹಾರಕೌಸ್ತುಭಕೇಯೂರಕಟಕನೂಪುರೋದರಬನ್ಧನಾದ್ಯಪರಿಮಿತಾಶ್ಚರ್ಯಾನನ್ತದಿವ್ಯಭೂಷಣಃ, ಶಙ್ಖಚಕ್ರಗದಾಸಿಶಾರ್ಙ್ಗಶ್ರೀವತ್ಸವನಮಾಲಾಲಙ್ಕೃತಃ, ಅನವಧಿಕಾತಿಶಯಸೌನ್ದರ್ಯಹೃತಾಶೇಷಮನೋದೃಷ್ಟಿವೃತ್ತಿಃ, ಲಾವಣ್ಯಾಮೃತಪೂರಿತಾಶೇಷಚರಾಚರಭೂತಜಾತಃ, ಅತ್ಯದ್ಭುತಾಚಿನ್ತ್ಯನಿತ್ಯಯೌವನಃ, ಪುಷ್ಪಹಾಸಸುಕುಮಾರಃ, ಪುಣ್ಯಗನ್ಧವಾಸಿತಾನನ್ತದಿಗನ್ತರಾಲಃ, ತ್ರೈಲೋಕ್ಯಾಕ್ರಮಣಪ್ರವೃತ್ತಗಮ್ಭೀರಭಾವಃ, ಕರುಣಾನುರಾಗಮಧುರಲೋಚನಾವಲೋಕಿತಾಶ್ರಿತವರ್ಗಃ, ಪುರುಷವರೋ ದೃಶ್ಯತೇ[3], ಸ ಚ[4] ನಿಖಿಲಜಗದುದಯವಿಭವಲಯಲೀಲಃ, ನಿರಸ್ತಸಮಸ್ತಹೇಯಃ ಸಮಸ್ತಕಲ್ಯಾಣಗುಣನಿಧಿಃ, ಸ್ವೇತರಸಮಸ್ತವಸ್ತುವಿಲಕ್ಷಣಃ ಪರಮಾತ್ಮಾ ಪರಬ್ರಹ್ಮ ನಾರಾಯಣ ಇತ್ಯವಗಮ್ಯತೇ । 'ತದ್ಧರ್ಮೋಪದೇಶಾತ್' (ವೇ.ಸೂ.೧-೧-೨೧) । 'ಸ ಏಷ ಸರ್ವೇಷಾಂ ಲೋಕಾನಾಮೀಶಃ ಸರ್ವೇಷಾಂ ಕಾಮಾನಾಮ್'[5] (ಛಾಂ.೧-೬-೮ ?)

---

1. 'ಸುವಾಸಾಃ' ತೇ॥ 2. 'ಚಾರುತರಾತಿತಾಮ್ರ' ಕಾ॥
3. 'ದರೀದೃಶ್ಯತೇ' ಕಾ॥ 4. 'ಸ ಚ' ಕಾ॥
5. 'ಲೋಕಾನಾಮೀಷ್ಟೇ' ಕಾ॥ ಇದು ಶ್ರುತಿಯ ಅರ್ಥಮಾತ್ರ.

'ಸ ಏಷ ಸರ್ವೇಭ್ಯಃ ಪಾಪ್ಮಭ್ಯ ಉದಿತಃ' (ಛಾಂ. ೧-೬-೭) ಇತ್ಯಾದಿದರ್ಶನಾತ್ । ತಸ್ಯೈತೇ ಗುಣಾಃ 'ಸರ್ವಸ್ಯ ವಶೀ ಸರ್ವಸ್ಯೇಶಾನಃ' (ಬೃ.ಳ-೪-೨೨), 'ಅಪಹತ ಪಾಪ್ಮಾ ವಿಜರ' ಇತ್ಯಾದಿ 'ಸತ್ಯ ಸಙ್ಕಲ್ಪಃ' ಇತ್ಯನ್ತಮ್ (ಛಾಂ. ೮-೧-೫) 'ವಿಶ್ವತಃ ಪರಮಂ ನಿತ್ಯಂ ವಿಶ್ವಂ ನಾರಾಯಣಂ ಹರಿಮ್' (ತೈ.ನಾ.೧೩) 'ಪತಿಂ ವಿಶ್ವಸ್ಯಾತ್ಮೇಶ್ವರಮ್' (ತೈ.ನಾ.೧೩) ಇತ್ಯಾದಿವಾಕ್ಯಪ್ರತಿಪಾದಿತಾಃ ॥

(ಅರ್ಥ)

ಪರಬ್ರಹ್ಮಕ್ಕೆ ರೂಪವುಂಟೆಂಬುದನ್ನು **ಸೂತ್ರಕಾರನೂ** 'ಅನ್ತಸ್ತದ್ಧರ್ಮೋಪ ದೇಶಾತ್' (ಒಳಗಿರುವವನು ಪರಮಾತ್ಮನೇ, ಏಕೆಂದರೆ ಅವನ ಧರ್ಮವನ್ನು ಉಪದೇಶಿಸಿದೆ. ವೇ.ಸೂ.೧-೧-೨೧) ಎಂದು ಹೇಳಿರುತ್ತಾರೆ.

(ಇದರ ಅಭಿಪ್ರಾಯವೇನೆಂದರೆ), ಈ[1] ಆದಿತ್ಯಮಂಡಲದಲ್ಲಿ ರುವ[2](ಪುರುಷನಿದ್ದಾನಲ್ಲ), ಕರಗಿಸಿದ ಚಿನ್ನದ ಪರ್ವತದ ಪ್ರಭೆಯುಳ್ಳವನೂ ಸೂರ್ಯಶತಸಹಸ್ರದಷ್ಟು ಕಿರಣಗಳುಳ್ಳವನೂ ಆಳವಾದ ನೀರಿನಿಂದ ಹುಟ್ಟಿರುವ ಕೋಮಲನಾಳವುಳ್ಳದ್ದಾಗಿ ಸೂರ್ಯಕಿರಣದಿಂದ ಅರಳಿರುವ ಪುಂಡರೀಕದಲದಂತೆ ಪರಿಶುದ್ಧವಾಗಿರುವ ಅಗಲವಾದ ಕಣ್ಣುಗಳುಳ್ಳವನೂ[3] ಉತ್ತಮವಾದ ಹುಬ್ಬುಹಣೆಗಳುಳ್ಳವನೂ ಉತ್ತಮವಾದ ಮೂಗುಳ್ಳವನೂ ಉತ್ತಮವಾದ ನಸುನಗೆಯ ಹವಳದಂತಿರುವ ಕೆಳದುಟಿಯುಳ್ಳವನೂ, ಅತಿಮನೋಹರವಾದ ನಳನಳಿಸುವ ಕಪೋಲವುಳ್ಳವನೂ, ಶಂಖದಂತಿರುವ ಕತ್ತುಳ್ಳವನೂ, ಎತ್ತರವಾದ ಹೆಗಲಿನವರೆಗೂ ಇಳಿದುಬಂದಿರುವ ಮನೋಹರರೂಪದ ಚಿಗುರಿನಂತಿರುವ ದಿವ್ಯಕರ್ಣಗಳುಳ್ಳವನೂ, ಬೆಳೆದ ದುಂಡಗಿರುವ ನೀಳೋದ್ದಳುಗಳುಳ್ಳವನೂ ಅತಿಮನೋಹರವಾಗಿ ಬಲುಗೆಂಪಾಗಿರುವ ಅಂಗೈಗೆ ತಕ್ಕಂತೆ ಕೆಂಪು ಬಣ್ಣದ ಕೈಬೆರಳುಗಳಿಂದಲಂಕೃತನೂ, ಬಡನಡುವುಳ್ಳವನೂ ಅಗಲವಾದ ಎದೆಯುಳ್ಳವನೂ, ಪ್ರಮಾಣಕ್ಕೆ ತಕ್ಕಂತೆ ವಿಂಗಡಿಸಿಕೊಂಡಿರುವ ಸರ್ವಾವಯವವಗಳುಳ್ಳವನೂ ಹೀಗೆಂದು ಹೇಳುವದಕ್ಕೆ ಬಾರದಿರುವ ದಿವ್ಯರೂಪದಿಂದೊಡಗೂಡಿದವನೂ ಹೊಳೆಯುವ

---

1. ಇಲ್ಲಿ ಈ ಎಂದು ಪ್ರಸಿದ್ಧವಾದ ವಸ್ತುವನ್ನು ಹೇಳುವ ಮಾತನ್ನುಪಯೋಗಿಸಿರುವರಿಂದ ಸಕಲಶ್ರುತಿಗತವಿಶೇಷಣಗಳೂ ವಿವಕ್ಷಿತವೆಂದು ತಿಳಿಸುವದಕ್ಕಾಗಿ ಆಚಾರ್ಯರು ಅನೇಕ ವಿಶೇಷಣಗಳನ್ನು ಕೊಟ್ಟಿದ್ದಾರೆ ಎಂದು ತಾ॥ 2. ಆದಿತ್ಯನೆಂದರೆ ಇಲ್ಲಿ ಮಂಡಲವೇ ಎಂಬುದು ಬೃಹದಾರಣ್ಯಕ ಮತ್ತು ತೈ.ನಾ. ಶ್ರುತಿಗಳಿಂದ ಗೊತ್ತಾಗುತ್ತದೆ ಎಂದು ತಾ॥

3. ಕಪ್ಯಾಸಶಬ್ದಕ್ಕೆ ವಾಕ್ಯಕಾರರು ಕೊಟ್ಟಿರುವ ಮೂರರ್ಥಗಳನ್ನೂ ಇಲ್ಲಿ ವಿಶೇಷಣಗಳಿಂದ ತಿಳಿಸಿದೆ. (೧) ಸೂರ್ಯನಿಂದ ವಿಕಸಿತವಾದ, (೨) ಕಪಿ ಎಂದರೆ ನಾಲವೂ ಅದರಲ್ಲಿರುವ, (೩) ನೀರಿನಲ್ಲಿಯೇ ಇರುವ- ಎಂಬರ್ಥಗಳು ಇಲ್ಲಿ ಯಥಾಕ್ರಮವಾಗಿ ವಿಶೇಷಣಗಳಿಂದ ವಿವಕ್ಷಿತವಾಗಿವೆ ಎಂದು ತಾ॥

ಬಣ್ಣದವನೂ ಪೂರ್ಣವಾಗಿ ಅರಳಿರುವ ಪುಂಡರೀಕದಂತೆ ಮನೋಹರವಾಗಿರುವ ಚರಣಯುಗ್ಮವುಳ್ಳವನೂ ತನಗೆ ತಕ್ಕ ದಿವ್ಯ ಪೀತಾಂಬರವನ್ನು ಧರಿಸಿರುವಾತನೂ, ನಿರ್ಮಲವಾದ ಕಿರೀಟಕುಂಡಲಹಾರ ಕೌಸ್ತುಭ, ಕೇಯೂರ, ಕಟಕ, ಉದರ ಬಂಧನ[1]- ಮುಂತಾದ ಅಪರಿಮಿತಾಶ್ಚರ್ಯವಾದ ಅನಂತಭೂಷಣಗಳುಳ್ಳವನೂ ; ಶಂಖ, ಚಕ್ರ, ಗದಾ, ಕತ್ತಿ. ಧನುಸ್ಸು, ಶ್ರೀವತ್ಸ, ವನಮಾಲೆ- ಇವುಗಳಿಂದ ಅಲಂಕೃತನಾದವನೂ, ಅನವಧಿಕವಾದ ಅತಿಶಯ ಸೌಂದರ್ಯದಿಂದ ಎಲ್ಲರ ಮನೋದೃಷ್ಟಿಗಳನ್ನು ಸೆಳೆದುಕೊಳ್ಳುವವನೂ, ಲಾವಣ್ಯಾಮೃತದಿಂದ ಸ್ಥಾವರ ಜಂಗಮಭೂತಜಾತಗಳನ್ನೆಲ್ಲ ತುಂಬಿರುವಾತನೂ, ಅತ್ಯದ್ಭುತವಾದ ಅಚಿಂತ್ಯವಾದ ನಿತ್ಯಯೌವನವುಳ್ಳವನೂ, ಹೂಗಳ ನಗೆಯಂತೆ ಸುಕುಮಾರನಾಗಿರುವವನೂ, ತನ್ನ ಪುಣ್ಯಗಂಧದಿಂದ ಅನಂತದಿಗಂತರಾಳವನ್ನೆಲ್ಲ ಘಮಘಮಿಸುವಂತೆ ಮಾಡಿರು ವಾತನೂ, ತ್ರೈಲೋಕ್ಯವನ್ನು ವ್ಯಾಪಿಸಿಕೊಳ್ಳುವದಕ್ಕೆ ಹಾತುವರಿಯುತ್ತಿರುವ ಗಾಂಭೀ-ರ್ಯವುಳ್ಳವನೂ, ಕರುಣಾನುರಾಗಗಳಿಂದೊಡಗೂಡಿದ ಮಧುರವಾದ ಕಣ್ಣಿನ ನೋಟದಿಂದ ಆಶ್ರಿತವರ್ಗವನ್ನು ನೋಡುತ್ತಿರುವವನೂ ಆದ (ಆದಿತ್ಯನಲ್ಲಿರುವ) ಪುರುಷವರನು ಕಾಣಬರುತ್ತಿದಾನಷ್ಟೆ? ಆತನು ಇಡಿಯ ಜಗತ್ತಿನ ಸೃಷ್ಟಿಸ್ಥಿತಿ ಲಯಗಳನ್ನು ಮಾಡುವ ಲೀಲೆಯನ್ನು ಮಾಡುವ, ಯಾವ ಹೇಯಗುಣಗಳೂ, ಇಲ್ಲದ, ಸಮಸ್ತಕಲ್ಯಾಣಗುಣನಿಧಿಯಾದ, ತನಗಿಂತ ಬೇರೆಯಾದ ಸಮಸ್ತ ವಸ್ತುಗಳಿಗಿಂತಲೂ ವಿಲಕ್ಷಣನಾದ ಪರಮಾತ್ಮನೂ ಪರಬ್ರಹ್ಮವೂ ಆಗಿರುವ **ನಾರಾಯಣನೇ** ಎಂದು ನಿಶ್ಚಯಿಸಬೇಕಾಗಿದೆ.

ಏಕೆಂದರೆ 'ಆತನ ಧರ್ಮಗಳನ್ನು (ಇಲ್ಲಿ) ಉಪದೇಶಿಸಿರುತ್ತದೆ' (ವೇ. ಸೂ. ೧-೧-೨೧). (ಹೇಗೆಂದರೆ) 'ಆ ಇವನು ಎಲ್ಲಾ ಲೋಕಗಳಿಗೂ ಒಡೆಯನು, ಎಲ್ಲಾ ಕಾಮಗಳಿಗೂ (ಒಡೆಯನು),'[2] 'ಆ ಇವನು ಎಲ್ಲಾ ಪಾಪಗಳನ್ನೂ ಬಿಟ್ಟಿದ್ದವನು' (ಛಾಂ.೧-೬-೭) ಎಂದು ಮುಂತಾಗಿ (ಉಪದೇಶಮಾಡಿರುವದು) ಕಂಡುಬರುತ್ತದೆ. ಆತನಿಗೆ ಇವು ಗುಣಗಳು : 'ಎಲ್ಲವನ್ನೂ ವಶದಲ್ಲಿಟ್ಟುಕೊಂಡಿರುವ ವನು, ಎಲ್ಲವನ್ನೂ ಆಳುತ್ತಿರುವವನು' (ಬೃ.೪-೪-೨೨) , 'ಅಪಹತಪಾಪ್ಮನು, ಮುಪ್ಪಿಲ್ಲದವನು ಎಂದು ಮುಂತಾಗಿ ಸತ್ಯಸಂಕಲ್ಪನು' (ಛಾಂ.೮-೧-೫) ಎಂಬವರೆಗಿನ (ಗುಣಗಳುಳ್ಳವನು), 'ವಿಶ್ವಕ್ಕೆಲ್ಲ ಪರಮನಾದವನು, ನಿತ್ಯನಾಗಿರುವವನು. ವಿಶ್ವ(ರೂಪ)ದವನು, ನಾರಾಯಣನು, ಹರಿಯು' (ತೈ.ನಾ.೧೩), 'ವಿಶ್ವಕ್ಕೆ ಪತಿಯು, ಆತ್ಮರುಗಳಿಗೆ ಈಶ್ವರನು' (ತೈ.ನಾ.೧೩)- ಎಂದು ಮುಂತಾದ ವಾಕ್ಯಗಳಲ್ಲಿ ಪ್ರತಿಪಾದಿತವಾಗಿರುವ (ಗುಣಗಳೆಲ್ಲವೂ ಅವನವು).

1. ಉಡಿದಾರ. 2. ಇದು ಛಾಂ. ೧-೬-೮, ೧-೭-೭ ಇವುಗಳ ಅರ್ಥ.

ಪರಮಾತ್ಮರೂಪದ ವಿಷಯಕ್ಕೆ ವಾಕ್ಯಕಾರ ದ್ರಮಿಡಭಾಷ್ಯಕಾರರ ಸಂಮತಿ

(ಮೂಲ)

೮೯. ವಾಕ್ಯಕಾರಶ್ಚೈತತ್ ಸುಸ್ಪಷ್ಟಮಾಹ ।[1] 'ಹಿರಣ್ಮಯಃ ಪುರುಷೋ ದೃಶ್ಯತ ಇತಿ ಪ್ರಾಜ್ಞಃ ಸರ್ವಾನ್ತರಃ ಸ್ಯಾತ್ । ಲೋಕಕಾಮೇಶೋಪದೇಶಾತ್ । ತಥೋದಯಾತ್ ಪಾಪ್ಮಾನಾಮ್'(ವಾಕ್ಯ.) ಇತ್ಯಾದಿನಾ । ತಸ್ಯ ಚ ರೂಪಸ್ಯ ಅನಿತ್ಯತಾದಿ ವಾಕ್ಯಕಾರೇಣೈವ ಪ್ರತಿಷಿದ್ಧಮ್ । 'ಸ್ಯಾದ್ರೂಪಂ ಕೃತಕಮನುಗ್ರಹಾರ್ಥಂ, ತಚ್ಚೇತಸಾಮ್ । ಐಶ್ವರ್ಯಾತ್' (ವಾಕ್ಯ.) ಇತಿ ಉಪಾಸಿತುರನುಗ್ರಹಾರ್ಥಃ ಪರಮಪುರುಷಸ್ಯ ರೂಪಸಂಗ್ರಹ ಇತಿ ಪೂರ್ವಪಕ್ಷಂ ಕೃತ್ವಾ 'ರೂಪಂ ವಾಽತೀನ್ದ್ರಿಯಮನ್ತಃಕರಣಪ್ರತ್ಯಕ್ಷನಿರ್ದೇಶಾತ್' (ವಾಕ್ಯ.) ಇತಿ ಯಥಾ ಜ್ಞಾನಾದಯಃ ಪರಸ್ಯ ಬ್ರಹ್ಮಣಃ ಸ್ವರೂಪತಯಾ ನಿರ್ದೇಶಾತ್ ಸ್ವರೂಪಭೂತಾ ಗುಣಾಃ, ತಥಾ ಇದಮಪಿ ರೂಪಂ ಶ್ರುತ್ಯಾಸ್ವರೂಪತಯಾ ನಿರ್ದೇಶಾತ್ ಸ್ವರೂಪಭೂತಮ್ ಇತ್ಯರ್ಥಃ । ಭಾಷ್ಯಕಾರೇಣೈತದ್ ವ್ಯಾಖ್ಯಾತಮ್ । 'ಅಜ್ಞಸ್ಯೈವ[2] ವಿಶ್ವಸೃಜೋ ರೂಪಮ್ । ತತ್ತು ನ ಚಕ್ಷುಷಾ ಗ್ರಾಹ್ಯಮ್ । ಮನಸಾ ತ್ವಕಲುಷೇಣ ಸಾಧನಾನ್ತರವತಾ ಗೃಹ್ಯತೇ 'ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ' 'ಮನಸಾ[3] ತು ವಿಶುದ್ಧೇನ' (ಮುಂ. ೩-೧-೮) ಇತಿ ಶ್ರುತೇಃ । ನ ಹಿ ಅರೂಪಾಯಾ ದೇವತಾಯಾ ರೂಪಮುಪದಿಶ್ಯತೇ ಯಥಾಭೂತವಾದಿ ಹಿ ಶಾಸ್ತ್ರಮ್ । 'ಮಾಹಾರಜನಂ[4] ವಾಸಃ' (ಬೃ.೪-೩-೬), 'ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯವರ್ಣಂ ತಮಸಃ ಪರಸ್ತಾತ್'(ತೈ.ಆ.೩-೧೨-೩೮) ಇತಿ ಪ್ರಕರಣಾನ್ತರನಿರ್ದೇಶಾಚ್ಚ ಸಾಕ್ಷಿಣಃ' (ದ್ರ.ಭಾ.) ಇತ್ಯಾದಿನಾ । 'ಹಿರಣ್ಮಯ ಇತಿ ರೂಪಸಾಮಾನ್ಯಾತ್ । ಚನ್ದ್ರಮುಖವತ'[5] (ವಾಕ್ಯ.) । 'ನ ಮಯಡತ್ರ ವಿಕಾರಮಾದಾಯ ಪ್ರಯುಜ್ಯತೇ । ಅನಾರಭ್ಯತ್ವಾದಾತ್ಮನಃ' (ದ್ರ.ಭಾ.) ಇತಿ ॥

---

1. 'ವಾಕ್ಯಕಾರಶ್ಚೈತತ್ ಸರ್ವಮಾಹ' ಕಾ॥
2. ಈ ವಾಕ್ಯಕ್ಕಿಂತ ಮುಂಚೆ 'ನ ವಾ ಮಾಯಾಮಾತ್ರಮ್' ಎಂಬ ವಾಕ್ಯವೊಂದು ವೇದಾಂತಸಾರ (ವೇ.ಸೂ.೧-೧-೨೧)ರಲ್ಲಿದೆ.
3. 'ಜ್ಞಾನಪ್ರಸಾದೇನ ವಿಶುದ್ಧಸತ್ತ್ವಸ್ತತಸ್ತುತಂ ಪಶ್ಯತಿ ನಿಷ್ಕಲಂ ಧ್ಯಾಯಮಾನಃ' ಎಂಬ ವಾಕ್ಯದ ಅರ್ಥವಿದು.
4. 'ಮಹಾರಜತಂ' 'ಮಾಹಾರಜತಂ' ಎಂದು ಎರಡು ಬಗೆಯ ಪಾಠವು ಸಿಕ್ಕುತ್ತದೆ ; 'ಮಾಹಾರಜನಮ್'' ಎಂಬ ಪಾಠವನ್ನೇ **ಶ್ರೀಭಾಷ್ಯ**ದಲ್ಲಿ ಸ್ವೀಕರಿಸಿದೆ.
5. ಇದು ವಾಕ್ಯಕಾರರದೆಂದು ತಾ॥ ; ವೇದಾಂತಸಾರದಲ್ಲಿ ಹೀಗೆಂದು ಉದಾಹರಿಸಿಯೂ ಇದೆ.

(ಅರ್ಥ)

ವಾಕ್ಯಕಾರನು ಇದನ್ನು ಸುಸ್ಪಷ್ಟವಾಗಿ ಹೇಳಿಯೂ ಇರುತ್ತಾನೆ : 'ಹಿರಣ್ಮಯಃ ಪುರುಷೋ ದೃಶ್ಯತೇ' ಎಂದು ಹೇಳಿರುವದು ಪ್ರಾಜ್ಞನಾದ ಸರ್ವಾಂತರನೇ ಆಗಿರಬೇಕು ; ಏಕೆಂದರೆ ಲೋಕಕಾಮಗಳಿಗೆ ಈಶನು ಎಂದು (ಇಲ್ಲಿ) ಉಪದೇಶ ಮಾಡಿರುತ್ತದೆ, ಮತ್ತು ಪಾಪಗಳನ್ನು ಮೀರಿರುತ್ತಾನೆ (ಎಂದೂ ಹೇಳಿರುತ್ತದೆ). ಆ (ರೂಪವು) ಅನಿತ್ಯವು ಎಂದು ಮುಂತಾದ (ಅಭಿಪ್ರಾಯವನ್ನು) 'ಆತನಲ್ಲಿ ಚಿತ್ತವುಳ್ಳವರಿಗೆ ಅನುಗ್ರಹವನ್ನು ಮಾಡುವದಕ್ಕಾಗಿ ಐಶ್ವರ್ಯ(ಯೋಗ)ದಿಂದ ಕೃತಕವಾಗಿ (ಮಾಡಿಕೊಂಡದ್ದು ಇರಬಹುದು)' (ವಾಕ್ಯ) ಎಂಬ (ವಾಕ್ಯದಲ್ಲಿ) ಉಪಾಸನೆ ಮಾಡುವವನಿಗೆ ಅನುಗ್ರಹವನ್ನು ಮಾಡುವದಕ್ಕಾಗಿ ಪರಮ ಪುರುಷನು ರೂಪವನ್ನು ತೆಗೆದುಕೊಳ್ಳುತ್ತಾನೆ[1] ಎಂದು ಪೂರ್ವಪಕ್ಷವನ್ನು ಮಾಡಿ 'ಅಥವಾ (ಆ) ರೂಪವು ಅತೀಂದ್ರಿಯವು ; ಏಕೆಂದರೆ ಅದು ಅಂತಃಕರಣಪ್ರತ್ಯಕ್ಷವೆಂದು ತಿಳಿಸಿರುತ್ತದೆ' (ವಾಕ್ಯ.) ಎಂದು **ವಾಕ್ಯಕಾರನೇ** ಅಲ್ಲಗಳೆದಿರುತ್ತಾನೆ. ಹೇಗೆ ಜ್ಞಾನಾದಿಗಳನ್ನು ಪರಬ್ರಹ್ಮದ ಸ್ವರೂಪವೆಂದು (ಶ್ರುತಿಯಲ್ಲಿ) ಹೇಳಿರುವದರಿಂದ (ಅದರ) ಸ್ವರೂಪವೇ ಆಗಿರುವ ಗುಣಗಳೋ ಹಾಗೆಯೇ ಈ ರೂಪವನ್ನು ಶ್ರುತಿಯಲ್ಲಿ ಸ್ವರೂಪವೆಂದು ಹೇಳಿರುವದರಿಂದ ಈ (ಗುಣವೂ) ಸ್ವರೂಪವೇ ಆಗಿರುತ್ತದೆ ಎಂದರ್ಥ.

ಭಾಷ್ಯಕಾರನು ಈ (ವಾಕ್ಯವನ್ನು) ''ವಿಶ್ವಸೃಷ್ಟಿಕರ್ತನ ರೂಪವು ಮುಖ್ಯವಾದದ್ದೇ[2] ; ಅದಾದರೆ ಚಕ್ಷುಸ್ಸಿನಿಂದ ಗ್ರಾಹ್ಯವಲ್ಲ ; ಏಕೆಂದರೆ ಕಲ್ಮಷವಿಲ್ಲದ ಮನಸ್ಸಿನಿಂದ ಮಾತ್ರವೇ ಸಾಧನಾಂತರವುಳ್ಳವನಿಗೆ ಕಾಣುತ್ತಾನೆ. ಏಕೆಂದರೆ ಕಣ್ಣಿಗೆ ಸಿಕ್ಕುವದಿಲ್ಲ, ವಾಕ್ಕಿಗೂ (ಸಿಕ್ಕುವ) ದಿಲ್ಲ ; ಆದರೆ ವಿಶುದ್ಧವಾದ ಮನಸ್ಸಿನಿಂದ' (ಮುಂ.೩-೧-೮) ಎಂದು ಶ್ರುತಿಯಿರುತ್ತದೆ. **ರೂಪರಹಿತವಾದ ದೇವತೆಗೆ ರೂಪವನ್ನು (ಇಲ್ಲಿ) ಉಪದೇಶಿಸಿದೆ ಎಂದು ಹೇಳುವದಕ್ಕಿಲ್ಲವಷ್ಟೆ? ಏಕೆಂದರೆ ಶಾಸ್ತ್ರವು ಇದ್ದದ್ದನ್ನು ಇದ್ದಂತೆ ಹೇಳುತ್ತದೆ.** 'ಅರಿಶಿನಬಣ್ಣದ ಬಟ್ಟೆ'(ಬೃ.೪-೩-೬), 'ಈ ಆದಿತ್ಯವರ್ಣನಾಗಿ ತಮನಸ್ಸಿಗೆ ಆಚೆಯಿರುವ ಈ ಮಹಾಪುರುಷನನ್ನು ನಾನು ಬಲ್ಲೆನು' (ತೈ.ಆ. ೩-೧೨-೩೮) ಎಂದು ಮುಂತಾಗಿ ಪ್ರಕರಣಾಂತರದಲ್ಲಿ ಸಾಕ್ಷಿಯಾದ (ಆತ್ಮನನ್ನು)[3]

---

1. ಹೀಗೆಂದು ಶಂಕರಭಾಷ್ಯದಲ್ಲಿ (ಸೂ. ಭಾ. ೧-೧-೨೦) ಇದೆ.
2. ಸ್ವಾಭಾವಿಕವೇ ಆದದ್ದು ಎಂದರ್ಥ.
3. 'ಸಾಕ್ಷಿಣಃ' ಎಂಬ ಪದಕ್ಕೆ ಅರ್ಥವೇನೆಂಬುದು ಟೀಕೆಯಿಂದ ಗೊತ್ತಾಗುವದಿಲ್ಲ. ನಾವು ಪರಮಾತ್ಮನೆಂಬರ್ಥವನ್ನು ಕಲ್ಪಿಸಿ ಅನುವಾದಮಾಡಿರುತ್ತೇವೆ. ಆನಂದಾ ಪ್ರೆಸ್ ಮುದ್ರಿತ ವೇದಾಂತಸಾರದಲ್ಲಿ 'ಪ್ರಕರಣಾನ್ತರನಿರ್ದೇಶಾತ್' ಎಂಬಲ್ಲಿಗೆ ಭಾಷ್ಯವಾಕ್ಯವನ್ನು ಮುಗಿಸಿ 'ಸಾಕ್ಷಿಣಃ' ಇತಿ ಎಂದು ಮುಂದಿನ ವಾಕ್ಯಕ್ಕೆ ಸಂಬಂಧಿಸಿದೆ, ಅದರ ತೆ॥ಪಾಠದಲ್ಲಿಯೂ ಹೀಗಯೇ ಇದೆ. ಅದು ಹೊಂದುವಂತೆ ಕಾಣುವದಿಲ್ಲ.

ನಿರ್ದೇಶ ಮಾಡಿರುವದರಿಂದಲೂ'' (ದ್ರ.ಭಾ) ಎಂದು ಮುಂತಾದ ವಾಕ್ಯದಿಂದ (ಈ ವಾಕ್ಯಕ್ಕೆ) ವ್ಯಾಖ್ಯಾನಮಾಡಿರುತ್ತಾರೆ. 'ಹಿರಣ್ಮಯನು ಎಂದು ಹೇಳಿರುವದು ಚಂದ್ರಮುಖಿ' ಎಂಬಂತೆ ಬಣ್ಣದ ಹೋಲಿಕೆಯಿಂದ ಎಂದು **(ವಾಕ್ಯಕಾರರು** ಹೇಳುತ್ತಾರೆ). 'ಇಲ್ಲಿ ಮಯಟ್ತ್ವತ್ಯಯವನ್ನು ವಿಕಾರವೆಂಬರ್ಥವನ್ನಿಟ್ಟುಕೊಂಡು ಪ್ರಯೋಗಿಸಿರುವದಿಲ್ಲ. ಏಕೆಂದರೆ ಆತ್ಮನು (ಹೊಸದಾಗಿ) ಉಂಟುಮಾಡಿಕೊಳ್ಳತಕ್ಕ ಕಾರ್ಯವಲ್ಲ' ಎಂದು ದ್ರಮಿಡ**ಭಾಷ್ಯಕಾರರು** (ವಿವರಿಸಿರುತ್ತಾರೆ).

ವಾಕ್ಯಕಾರಭಾಷ್ಯಕಾರರುಗಳು ಹೇಳಿರುವದು ಪತ್ನೀಪರಿಜನಾದಿಗಳಿಗೂ ಉಪಲಕ್ಷಣ

(ಮೂಲ)

೯೦. ಯಥಾ ಜ್ಞಾನಾದಿಕಲ್ಯಾಣಗುಣಾನನ್ತ್ಯನಿರ್ದೇಶಾತ್ ಅಪರಿಮಿತ ಕಲ್ಯಾಣಗುಣವಿಶಿಷ್ಟಂ ಪರಂ ಬ್ರಹ್ಮೇತ್ಯವಗಮ್ಯತೇ, ಏವಮ್ 'ಆದಿತ್ಯವರ್ಣಂ ಪುರುಷಮ್' (ತೈ.ಆ.೩-೧೨)[1] ಇತ್ಯಾದಿನಿರ್ದೇಶಾತ್ ಸ್ವಾಭಿಮತಸ್ವಾನುರೂಪ ಕಲ್ಯಾಣತಮರೂಪಃ ಪರಬ್ರಹ್ಮಭೂತಃ ಪುರುಷೋತ್ತಮೋ ನಾರಾಯಣ ಇತಿ ಜ್ಞಾಯತೇ । ತಥಾ 'ಅಸ್ಯೇಶಾನಾ'[2] (?), 'ಹ್ರೀಶ್ಚತೇ ಲಕ್ಷ್ಮೀಶ್ಚ' (ತೈ. ಆ. ಪ್ರ. ೩-೧೩), 'ಸದಾ ಪಶ್ಯನ್ತಿ ಸೂರಯಃ' (ಸು.೬ ; ಋ. ೧-೫-೨೨-೨೦) 'ತಮಸಃ ಪರಸ್ತಾತ್' (ತೈ.ಆ.೩-೧೩), 'ಕ್ಷಯನ್ತಮಸ್ಯ ರಜಸಃ ಪರಾಕೇ' (ತೈ.ಸಂ.೨-೨-೧೨), ಇತ್ಯಾದಿನಾ ಪತ್ನೀ ಪರಿಜನಸ್ಥಾನಾದೀನಾಂ ನಿರ್ದೇಶಾದೇವ ತಥೈವ ಸನ್ತ್ಯೇತ್ಯವಗಮ್ಯತೇ । ಯಥಾऽऽಹ ಭಾಷ್ಯಕಾರಃ 'ಯಥಾಭೂತವಾದಿ ಹಿ ಶಾಸ್ತ್ರಮ್' (ದ್ರ.ಭಾ.) ಇತಿ ॥

(ಅರ್ಥ)

ಹೀಗೆ ಅನಂತಜ್ಞಾನಾದಿಕಲ್ಯಾಣಗುಣಗಳಿವೆಯೆಂದು (ಶ್ರುತಿಗಳು) ಹೇಳುವದರಿಂದ ಪರಬ್ರಹ್ಮವು ಅಪರಿಮಿತಕಲ್ಯಾಣಗುಣವಿಶಿಷ್ಟವೆಂದು ಗೊತ್ತಾಗುತ್ತದೆಯೋ, ಹಾಗೆಯೇ 'ಆದಿತ್ಯವರ್ಣನಾದ ಪುರುಷನು' (ತೈ.ಆ.ಪು.೩-೧೨) ಎಂದು ಮುಂತಾಗಿ ಹೇಳಿರುವದರಿಂದ ಪರಬ್ರಹ್ಮಭೂತನಾದ ಪುರುಷೋತ್ತಮ ನಾರಾಯಣನು[3] ತನಗೆ ಅಭಿಮತವಾಗಿ ತನಗೆ ಅನುರೂಪವಾಗಿರುವ ಕಲ್ಯಾಣತಮವಾದ ರೂಪವುಳ್ಳವನು

---

1. ''ವೇದಾಹಮೇತಂ ಪುರುಷಂ ಮಹಾನ್ತಮ್ ಆದಿತ್ಯವರ್ಣಮ್'' ಎಂಬುದರ ಅಭಿಪ್ರಾಯವಿದು.
2. ''ಜಗತೋ ವಿಷ್ಣುಪತ್ನೀ'' ಎಂದು ಹೆಚ್ಚಾಗಿ ಕಾ॥
3. ಇಲ್ಲಿ ಪುರುಷನೆಂಬ ಮಾತಿನಿಂದ ಪುರುಷೋತ್ತಮನನ್ನು ಸೂಚಿಸಿದೆ. ಅವನೇ ಪರಬ್ರಹ್ಮವೆಂದು ಹೇಳಿ ನಾರಾಯಣನೇ ಆ ಪರಬ್ರಹ್ಮವೆಂದು ವಿಶೇಷವಾಚಕದಿಂದ ತಿಳಿಸಿದೆ ಎಂದು ತಾ॥

ಎಂದು ಗೊತ್ತಾಗುತ್ತದೆ. ಹೀಗೆಯೆ 'ಈ (ಜಗತ್ತ)ನ್ನು ಆಳುವ (ವಿಷ್ಣುಪತ್ನಿ)' (?), 'ಹ್ರೀಯೂ ಲಕ್ಷ್ಮಿಯೂ ನಿನ್ನ ಪತ್ನಿಯರು' (ತೈ.ಆ.೩-೧೩), 'ಸೂರಿಗಳು ಯಾವಾಗೂಲ ನೋಡುತ್ತಿರುತ್ತಾರೆ' (ಸು.೬ ; ಋ. ೧-೫-೨೨-೨೦), 'ತಮಸ್ಸಿಗಿಂತ ಆಚೆಯಿರುವ' (ತೈ.ಆ.೩-೧೩), 'ಈ ರಜಸ್ಸಿನ ಆಚೆ ವಾಸಮಾಡಿಕ್ಕೊಂಡಿರುವ' (ತೈ.ಸಂ.೨-೨-೧೨) ಮುಂತಾದ (ಶ್ರುತಿವಾಕ್ಯ)ದಿಂದ ಪತ್ನಿ, ಪರಿಜನ, ಸ್ಥಾನ-ಮುಂತಾದವನ್ನು ತಿಳಿಸಿರುವದರಿಂದಲೇ (ಅವೂ) ಹಾಗೆಯೇ ಇವೆಯೆಂದು ಗೊತ್ತಾಗುತ್ತದೆ. ಹಾಗೆಂದು (ದ್ರಮಿಡ) **ಭಾಷ್ಯಕಾರರು** 'ಶಾಸ್ತ್ರವು ಇದ್ದದ್ದನ್ನು ಇದ್ದಂತೆ ತಿಳಿಸುತ್ತದೆಯಷ್ಟೆ?' (ದ್ರ. ಭಾ.) ಎಂದು ಹೇಳಿರುತ್ತಾರೆ.

ನಿತ್ಯವಿಭೂತಿವಿಚಾರದ ಉಪಸಂಹಾರ

(ಮೂಲ)

೯೧. ಏತದುಕ್ತಂ ಭವತಿ । ಯಥಾ 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) ಇತಿ ನಿರ್ದೇಶಾತ್ ಪರಮಾತ್ಮಸ್ವರೂಪಂ ಸಮಸ್ತಹೇಯಪ್ರತ್ಯನೀಕಾನವಧಿಕಾನನ್ದೈಕತಾನತಯಾ ಪರಿಚ್ಛೇದ್ಯತಯಾ ಚ ಸಕಲೇತರವಿಲಕ್ಷಣಮ್, ತಥಾ 'ಯಃ ಸರ್ವಜ್ಞಃ ಸರ್ವವಿತ್' (ಮುಂ.೧-೧-೯, ೨-೨-೭), 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (ಶ್ವೇ. ೬-೮), 'ತಮೇವ ಭಾನ್ತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಮುಂ.೨-೨-೧೦, ಕಾ.೨-೨-೧೫) ಇತ್ಯಾದಿನಿರ್ದೇಶಾತ್ ನಿರತಿಶಯಾಸಙ್ಖ್ಯೇಯಾಶ್ಚ ಗುಣಾಃ ಸಕಲೇತರವಿಲಕ್ಷಣಾಃ । ತಥಾ 'ಆದಿತ್ಯವರ್ಣಂ' (ತೈ.ಆ.೩-೧೨) ಇತ್ಯಾದಿನಿರ್ದೇಶಾತ್ ರೂಪಪರಿಜನಸ್ಥಾನಾದಯಶ್ಚ ಸಕಲೇತರವಿಲಕ್ಷಣಾಃ ಸ್ವಾಸಾಧಾರಣಾ ಅನಿರ್ದೇಶ್ಯಸ್ವರೂಪಸ್ವಭಾವಾ ಇತಿ ॥

(ಅರ್ಥ)

(ಇಲ್ಲಿ) ಇಷ್ಟನ್ನುಹೇಳಿದಂತಾಗಿದೆ : 'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' (ತೈ.೨-೧) ಎಂದು ತಿಳಿಸಿರುವದರಿಂದ **ಪರಮಾತ್ಮಸ್ವರೂಪವು** ಸಮಸ್ತ ಹೇಯ(ಗುಣ)ಗಳಿಗೂ ವಿರುದ್ಧವಾದ ಅನವಧಿಕವಾದ ಆನಂದೈಕಸ್ವಭಾವವಾಗಿರುವದರಿಂದಲೂ ಅಪರಿಚ್ಛೇದ್ಯವಾಗಿರುವದರಿಂದಲೂ ಹೇಗೆ ಸಕಲೇತರ (ಪದಾರ್ಥ)ಗಳಿಗಿಂತಲೂ ವಿಲಕ್ಷಣವಾಗಿರುತ್ತದೆಯೋ, ಹಾಗೆಯೇ 'ಯಾವನು ಸರ್ವಜ್ಞನೋ ಸರ್ವವಿದನೋ' (ಮುಂ.೧-೧-೯, ೨-೨-೭), 'ಈತನ ಪರಶಕ್ತಿಯು ವಿವಿಧವಾಗಿಯೇ ಇದೆಯೆಂದೂ ಕೇಳಬರುತ್ತಿದೆ, ಸ್ವಾಭಾವಿಕವಾದ ಜ್ಞಾನಬಲ ಕ್ರಿಯೆಯೂ (ಕೇಳಬರುತ್ತಿದೆ)' (ಶ್ವೇ. ೬-೮) 'ಬೆಳಗುತ್ತಿರುವ ಆತನನ್ನೇ ಅನುಸರಿಸಿ

ಎಲ್ಲವೂ ಬೆಳಗುತ್ತಿದೆ, ಆತನ ಬೆಳಕಿನಿಂದಲೇ ಇದೆಲ್ಲವೂ ವಿಧವಿಧವಾಗಿ ಬೆಳಗುತ್ತಿದೆ' (ಮುಂ.೨-೨-೧೦, ಕಾ.೨-೨-೧೫) ಎಂದು ಮುಂತಾಗಿ ತಿಳಿಸಿರುವದರಿಂದ ಮಿಗಿಲಿಲ್ಲದ ಲೆಕ್ಕವಿಲ್ಲದ **ಗುಣಗಳೂ** ಮಿಕ್ಕೆಲ್ಲದಕ್ಕಿಂತಲೂ ವಿಲಕ್ಷಣವಾದ ಹಾಗೂ 'ಆದಿತ್ಯವರ್ಣನಾದ (ಪುರುಷನನ್ನು)' (ತೈ.ಆ.ಪು.೩-೧೨) ಎಂದು ಮುಂತಾಗಿ ತಿಳಿಸಿರುವದರಿಂದ **ರೂಪ, ಪರಿಜನ, ಸ್ಥಾನ-** ಮುಂತಾದವುಗಳೂ ತನಗಿಂತ ಬೇರೆಯಾದದ್ದೆಲ್ಲಕ್ಕಿಂತಲೂ ವಿಲಕ್ಷಣವಾಗಿ, ತನಗೇ ಅಸಾಧಾರಣವಾಗಿ, ಹೀಗೆಂದು ತಿಳಿಯಹೇಳಲಳವಲ್ಲದ ಸ್ವರೂಪಸ್ವಭಾವದವುಗಳೂ (ಇರುತ್ತವೆ).

ನಾರಾಯಣಸ್ವರೂಪಾದಿಗಳು ವೇದಪ್ರಮಾಣಸಿದ್ಧ

ವೇದಗಳು ಅಪೌರುಷೇಯ

(ಮೂಲ)

೯೨. ವೇದಾಃ ಪ್ರಮಾಣಂ ಚೇತ್, ವಿಧ್ಯರ್ಥವಾದಮನ್ತ್ರಗತಂ ಸರ್ವಮಪೂರ್ವಮ್ ಅವಿರುದ್ಧಮರ್ಥಜಾತಂ ಯಥಾವಸ್ಥಿತಮೇವ ಬೋಧಯನ್ತಿ । ಪ್ರಾಮಾಣ್ಯಞ್ಚ ವೇದಾನಾಮ್ 'ಔತ್ಪತ್ತಿಕಸ್ತು ಶಬ್ದಸ್ಯಾರ್ಥೇನ ಸಂಬನ್ಧಃ' (ಜೈ.ಸೂ.೧-೧-೭) ಇತ್ಯುಕ್ತಮ್ । ಯಥಾ ಅಗ್ನಿಜಲಾದೀನಾಮ್ ಔಷ್ಣ್ಯಾದಿಶಕ್ತಿಯೋಗಃ ಸ್ವಾಭಾವಿಕಃ, ಯಥಾ ಚ ಚಕ್ಷುರಾದೀನಾಮ್ ಇನ್ದ್ರಿಯಾಣಾಂ ಬುದ್ಧಿವಿಶೇಷಜನನಶಕ್ತಿಃ ಸ್ವಾಭಾವಿಕೀ, ತಥಾ ಶಬ್ದಸ್ಯಾಪಿ ಬೋಧಕತ್ವಶಕ್ತಿಃ ಸ್ವಾಭಾವಿಕೀ । ನ ಚ ಹಸ್ತಚೇಷ್ಟಾದಿವತ್ ಸಙ್ಕೇತಮೂಲಂ ಶಬ್ದಸ್ಯ ಬೋಧಕತ್ವಮಿತಿ ವಕ್ತುಂ ಶಕ್ಯಮ್ । ಅನಾದ್ಯನುಸಂಧಾನಾವಿಚ್ಛೇದೇಽಪಿ ಸಙ್ಕೇತಯಿತೃಪುರುಷಾಜ್ಞಾನಾತ್ । ಯಾನಿ ಸಙ್ಕೇತಮೂಲಾನಿ ತಾನಿಸರ್ವಾಣಿ ಸಾಕ್ಷಾದ್ವಾ ಪರಂಪರಯಾ ವಾ ಜ್ಞಾಯನ್ತೇ । ನ ಚ ದೇವದತ್ತಾದಿಶಬ್ದವತ್ ಕಲ್ಪಯಿತುಂ ಯುಕ್ತಮ್ । ತೇಷು ಚ ಸಾಕ್ಷಾದ್ವಾ ಪರಂಪರಯಾ ವಾ ಸಙ್ಕೇತೋ ಜ್ಞಾಯತೇ । ಗವಾದಿಶಬ್ದಾನಾಂ ತು ಅನಾದ್ಯನುಸಂಧಾನಾವಿಚ್ಛೇದೇಽಪಿ ಸಙ್ಕೇತಯಿತ್ರಜ್ಞಾನಾದೇವ[1] ಬೋಧಕಶಕ್ತಿಃ ಸ್ವಾಭಾವಿಕೀ । ಅತಃ ಅಗ್ನ್ಯಾದೀನಾಮ್ ಔಷ್ಣ್ಯಾದಿಶಕ್ತಿವತ್,[2] ಇನ್ದ್ರಿಯಾಣಾಂ ಬೋಧಕತ್ವಶಕ್ತಿವಚ್ಚ ಶಬ್ದಸ್ಯಾಪಿ ಬೋಧಕತ್ವಶಕ್ತಿರಾಶ್ರಯಣೀಯಾ । ನನು ಚ, ಇನ್ದ್ರಿಯವತ್ ಶಬ್ದಸ್ಯಾಪಿ ಬೋಧಕತ್ವಂ ಸ್ವಾಭಾವಿಕಂ[3] ಸಂಬನ್ಧಗ್ರಹಣಂ ಬೋಧಕತ್ವಾಯ ಕಿಮಿತ್ಯಪೇಕ್ಷತೇ ? ಲಿಙ್ಗವತ್ ಇತ್ಯುಚ್ಯತೇ । ಯಥಾ ಜ್ಞಾತಸಂಬನ್ಧನಿಯಮಂ ಧೂಮಾದಿ ಅಗ್ನ್ಯಾದಿವಿಜ್ಞಾನಜನಕಮ್, ತಥಾ ಜ್ಞಾತಸಂಬನ್ಧನಿಯಮಃ

1. 'ಸಂಕೇತಾಜ್ಞಾನಾದೇವ' ಎಂಬ ತೆ॥ ಪಾಠಕ್ಕಿಂತ ಈ ಕಾ॥ ಪಾಠವೇ ಮೇಲು.
2. 'ದಾಹಕತ್ವಾದಿಶಕ್ತಿವತ್' ಕಾ॥ 3. 'ಚೇತ್' ಎಂದು ತೆ॥ ಪಾಠದಲ್ಲಿ ಕಂಸದಲ್ಲಿ ಸೇರಿಸಿದೆ.

ಶಬ್ದೋಽಪ್ಯರ್ಥವಿಶೇಷಬುದ್ಧಿಜನಕಃ । ಏವಂ ತರ್ಹಿ ಶಬ್ದೋಽಪಿ ಅರ್ಥವಿಶೇಷಸ್ಯ ಲಿಙ್ಗಮಿತಿ ಅನುಮಾನಮೇವ ಸ್ಯಾತ್ । ನೈವಮ್ । ಶಬ್ದಾರ್ಥಯೋಃ ಸಂಬನ್ಧೋ ಬೋಧ್ಯಬೋಧಕಭಾವ ಏವ । ಧೂಮಾದೀನಾಂ ತು ಸಂಬನ್ಧಾನ್ತರಮ್ ಇತಿ ತಸ್ಯ ಸಂಬನ್ಧಸ್ಯ ಜ್ಞಾನದ್ವಾರೇಣ ಬುದ್ಧಿಜನಕತ್ವಮಿತಿ ವಿಶೇಷಃ । ಏವಂ ಗೃಹೀತಸಂಬನ್ಧಸ್ಯ ಬೋಧಕತ್ವದರ್ಶನಾತ್ ಅನಾದ್[1]ನುಸಂಧಾನಾವಿಚ್ಛೇದೇಽಪಿ ಸಙ್ಕೇತಾಜ್ಞಾನಾತ್ ಬೋಧಕತ್ವಶಕ್ತಿರೇವೇತಿ ನಿಶ್ಚೀಯತೇ । ಏವಂ ಬೋಧಕಾನಾಂ ಪದಸಂಘಾತಾನಾಂ ಸಂಸರ್ಗವಿಶೇಷಬೋಧಕತ್ವೇನ ವಾಕ್ಯಶಬ್ದಾಭಿಧೇಯಾನಾಮ್ ಉಚ್ಚಾರಣಕ್ರಮೋ ಯತ್ರ ಪುರುಷಬುದ್ಧಿಪೂರ್ವಕಃ, ತೇ ಪೌರುಷೇಯಾಃ ಶಬ್ದಾ ಇತ್ಯುಚ್ಯನ್ತೇ । ಯತ್ರ ತು[2] ತದುಚ್ಚಾರಣಕ್ರಮಃ । ಪೂರ್ವಪೂರ್ವೋಚ್ಚಾರಣಕ್ರಮಜನಿತಸಂಸ್ಕಾರ ಪೂರ್ವಕಃ ಸರ್ವದಾ ಅಪೌರುಷೇಯಾಃ, ತೇ ಚ ವೇದಾ ಇತ್ಯುಚ್ಯನ್ತೇ । ಏತದೇವ ವೇದಾನಾಮಪೌರುಷೇಯತ್ವಂ ನಿತ್ಯತ್ವಂ ಚ ಯತ್ ಪೂರ್ವಪೂರ್ವೋಚ್ಚಾರಣ ಕ್ರಮಜನಿತಸಂಸ್ಕಾರೇಣ ತಮೇವ ಕ್ರಮವಿಶೇಷಂ ಸ್ಮೃತ್ವಾ ತೇನೈವ ಕ್ರಮೇಣೋಚ್ಚಾರ್ಯಮಾಣತ್ವಮ್ । ತೇ ಚ ಆನುಪೂರ್ವೀವಿಶೇಷೇಣಸಂಸ್ಥಿತಾ ಅಕ್ಷರರಾಶಯೋ ವೇದಾಃ ಋಗ್ಯಜುಃ ಸಾಮಾಥರ್ವಭೇದಭಿನ್ನಾ ಅನನ್ತಶಾಖಾ ವರ್ತನ್ತೇ । ತೇ ಚ ವಿದ್ಯರ್ಥವಾದ ಮನ್ತ್ರರೂಪಾ ವೇದಾಃ ಪರಬ್ರಹ್ಮಭೂತ ನಾರಾಯಣಸ್ವರೂಪಂ ತದಾರಾಧನ ಪ್ರಕಾರಮ್, ಆರಾಧಿತಾತ್ ಫಲವಿಶೇಷಂ ಚ ಬೋಧಯನ್ತಿ । ಪರಮಪುರುಷವತ್ ತತ್ಸ್ವರೂಪತದಾರಾಧನತತ್ಫಲಜ್ಞಾಪಕ ವೇದಾಖ್ಯಶಬ್ದಜಾತಂ ನಿತ್ಯಮೇವ ॥

(ಅರ್ಥ)

ವೇದಗಳು ಪ್ರಮಾಣವೆಂದರೆ[3] ವಿಧಿಗಳು, ಅರ್ಥವಾದಗಳು, ಮಂತ್ರಗಳು- ಇವುಗಳಲ್ಲಿರುವ ಅಪೂರ್ವವಾದ,[4] ಅವಿರುದ್ಧವಾದ[5], ಅರ್ಥಜಾತವೆಲ್ಲವನ್ನೂ (ಅವು) ಇದ್ದದ್ದು ಇದ್ದಂತೆಯೇ ಬೋಧಿಸುತ್ತವೆ[6] (ಎಂದು ಒಪ್ಪಬೇಕು). ವೇದಗಳು ಪ್ರಮಾಣವು ; 'ಶಬ್ದಕ್ಕೆ ಅರ್ಥದೊಡನೆ ಇರುವ ಸಂಬಂಧವು ಸ್ವಾಭಾವಿಕ

---

1. ತೆ॥ ಪಾಠದಲ್ಲಿ "ಅನಾದಿ" ಎಂಬ ಮಾತಿಲ್ಲ. 2. 'ಯತ್ರ ತೂಚ್ಚಾರಣ' ತೆ॥
3. ವೇದಗಳು ಪ್ರಮಾಣವೆಂದು ಆಸ್ತಿಕರೆಲ್ಲರೂ ಒಪ್ಪಿರುವದರಿಂದ ಎಂದೇ ಅರ್ಥ ; ವೇದಪ್ರಾಮಾಣ್ಯವಿಷಯಕ್ಕೆ ಸಂಶಯವನ್ನೇನೂ ಇಲ್ಲಿ ಸೂಚಿಸಿಲ್ಲ.
4. ಪ್ರಮಾಣಾಂತರಗೋಚರವಲ್ಲದ.
5. ಪ್ರಮಾಣಾಂತರಕ್ಕೆ ವಿರುದ್ಧವಾಗದ.
6. ಅರ್ಥವಾದಾದಿಗಳಿಗೆ ತಮ್ಮ ಅರ್ಥದಲ್ಲಿ ಪ್ರಾಮಾಣ್ಯವಿಲ್ಲ ಎಂಬ ಮೀಮಾಂಸಕರ ಮತವು ಸರಿಯಲ್ಲ ಎಂದು ಭಾವ.

ವಾಗಿರುತ್ತದೆ' (ಜೈ.ಸೂ.೧-೧-೭) ಎಂಬಲ್ಲಿ ಹೇಳಿರುತ್ತದೆ. **ಹೇಗೆ ಬೆಂಕಿ, ನೀರು-ಮುಂತಾದವುಗಳಿಗೆ ಬಿಸಿ[1], ತಂಪು ಮುಂತಾದ ಶಕ್ತಿಗಳ ಸಂಬಂಧವು ಸ್ವಾಭಾವಿಕವಾಗಿರುತ್ತದೆಯೋ, ಮತ್ತು ಹೇಗೆ ಚಕ್ಷುಸ್ಸೇ ಮುಂತಾದ ಇಂದ್ರಿಯಗಳಿಗೆ ಆಯಾ (ರೂಪಾದಿ)ಬುದ್ಧಿವಿಶೇಷವನ್ನು ಉಂಟುಮಾಡುವ ಶಕ್ತಿಯು ಸ್ವಾಭಾವಿಕವಾಗಿರುತ್ತದೆಯೋ,[2] ಹಾಗೆ ಶಬ್ದಕ್ಕೂ (ಪದಾರ್ಥವನ್ನು) ತಿಳಿಸುವ ಶಕ್ತಿಯು ಸ್ವಾಭಾವಿಕವಾಗಿರುತ್ತದೆ.**

ಕೈಸನ್ನೆಯೇ ಮುಂತಾದವುಗಳಂತೆ ಶಬ್ದವು (ಪದಾರ್ಥವನ್ನು) ಬೋಧಿಸುವದು ಸಂಕೇತನಿಮಿತ್ತದಿಂದ ಎಂದು ಹೇಳುವದಕ್ಕೆ ಆಗುವದಿಲ್ಲ[3] ; ಏಕೆಂದರೆ ಅನಾದಿಯಾಗಿ (ಶಬ್ದಾರ್ಥಗಳ ಸಂಬಂಧದ) ಅನುಸಂಧಾನವು ಕಡಿವಡೆಯದೆ ಇದ್ದುಕೊಂಡಿದ್ದರೂ (ಹಾಗೆ) ಸಂಕೇತವನ್ನು ಮಾಡಿದ ಪುರುಷನ ಅರಿವು ಇರುವದಿಲ್ಲ.[4] ಎಲ್ಲೆಲ್ಲಿ ಸಂಕೇತಮೂಲಕತ್ವವಿರುವದೋ ಅಲ್ಲೆಲ್ಲ ನೇರಾಗಿ ಅಥವಾ ಪರಂಪರೆಯಿಂದ ಹಾಗೆಂದು ತಿಳಿದುಬರುತ್ತಿರುತ್ತವೆ.[5] 'ದೇವದತ್ತ' ಮುಂತಾದ ಶಬ್ದಗಳಂತೆ (ಇವೂ ಸಂಕೇತಮೂಲಕ)ವೆಂದು ಕಲ್ಪಿಸುವದೂ ಯುಕ್ತವಾಗುವದಿಲ್ಲ.[6] (ಏಕೆಂದರೆ) ಅವುಗಳ ವಿಷಯದಲ್ಲಿ ನೇರಾಗಿಯೋ ಪರಂಪರೆಯಿಂದಲೋ ಸಂಕೇತ (ವೆಂಬುದು) ತಿಳಿದುಬರುತ್ತದೆ ; ಆದರೆ ಗೋವು ಮುಂತಾದ ಶಬ್ದಗಳು ಅನಾದಿಯಾದ ಅನುಸಂಧಾನವು ಕಡಿವಡೆಯದೆ ಇರುತ್ತಿದ್ದರೂ ಸಂಕೇತವನ್ನು ಮಾಡಿದವನು (ಇವನೆಂದು) ತಿಳಿಯದೆ ಇರುವದರಿಂದಲೇ[7] (ಶಬ್ದಗಳ) ಬೋಧಕತ್ವಶಕ್ತಿಯು ಸ್ವಾಭಾವಿಕವೇ ಎಂದಾಯಿತು. ಆದ್ದರಿಂದ ಬೆಂಕಿ ಮುಂತಾದವುಗಳಿಗೆ ಬಿಸಿಯೇ

---

1. 'ಸುಡುವುದು ಮುಂತಾದ' ಎಂದು ಕಾ॥ ಪಾಠಕ್ಕೆ ಅರ್ಥ.
2. ಬೆಂಕಿ ಮುಂತಾದವುಗಳಿಗೆ ಬಿಸಿ ಮುಂತಾದದ್ದು ಸ್ವಾಭಾವಿಕವಾಗಿವೆಯಾದರೂ ಬೆಂಕಿ ಮುಂತಾದವುಗಳೇನೂ ಬೋಧಕವಲ್ಲವಲ್ಲ !- ಎಂಬ ಶಂಕೆ ಬಂದೀತೆಂದು ಈ ಉದಾಹರಣೆಯನ್ನು ಕೊಟ್ಟಿದೆ.
3. ನೈಯಾಯಿಕರು ಶಬ್ದಗಳು ಈಶ್ವರನ ಇಚ್ಛೆಯಿಂದಾದ ಸಂಕೇತದಿಂದ ಆಯಾ ಅರ್ಥವನ್ನು ತಿಳಿಸುತ್ತವೆ ಎನ್ನುತ್ತಾರೆ ; ಅದನ್ನು ಇಲ್ಲಿ ತಳ್ಳಿ ಹಾಕಿದೆ.
4. ಶಬ್ದದಿಂದ ಅರ್ಥವು ತಿಳಿದುಬಂದಮಾತ್ರದಿಂದ ಅದು ಸಂಕೇತಮೂಲಕವೆಂದಾಗುವದಿಲ್ಲ ; ಸಂಕೇತಮಾಡಿದವನು ಇಂಥವನೆಂಬ ಜ್ಞಾನವು ಬೇಕು, ಅದು ಪ್ರಕೃತದಲ್ಲಿಲ್ಲ.
5. ಇಂಥವನು ಇದಕ್ಕೆ ಈ ಹೆಸರನ್ನಿಟ್ಟನು ಎಂದು ತಾವೇ ನೇರಾಗಿ ತಿಳಿದಿರುತ್ತದೆ, ಅಥವಾ ಪರಂಪರೆಯಿಂದ ಮತ್ತೊಬ್ಬರ ಮೂಲಕ ತಿಳಿದುಬಂದಿರುತ್ತದೆ.
6. ದೇವದತ್ತನು ಎಂದು ತಂದೆಯು ಮಗನಿಗೆ ಹೆಸರಿಡುವದು ಕಂಡಿದೆ ; ಇದರಂತೆ ಶಬ್ದಗಳೆಲ್ಲವೂ ದೇವದತ್ತಾದಿಶಬ್ದಗಳಂತೆ ಸಂಕೇತಮೂಲಕವೆಂದು ಊಹಿಸಬಹುದು ಎಂಬುದೂ ಸರಿಯಲ್ಲ.
7. 'ಸಂಕೇತಾಜ್ಞಾನಾತ್' ಎಂಬ ಪಾಠಕ್ಕೆ ಇದು ಸಂಕೇತವೆಂದು ತಿಳಿಯದ್ದರಿಂದಲೇ ಎಂದರ್ಥ. ಸಂಕೇತಮಾಡಿದವನ ಅರಿವು ಬೇಕೆಂದು ಮೇಲೆಯೇ ಹೇಳಿರುವದನ್ನು ಲಕ್ಷಿಸಿರಿ.

ಮುಂತಾದ ಶಕ್ತಿಗಳಿರುವಂತೆಯೂ ಇಂದ್ರಿಯಗಳಿಗೆ ಬೋಧಕತ್ವಶಕ್ತಿಯಿರುವಂತೆಯೂ ಶಬ್ದಕ್ಕೂ ಬೋಧಕಶಕ್ತಿಯಿದೆಯೆಂದು ಒಪ್ಪಬೇಕು.

(ಆಕ್ಷೇಪ) :- ಇಂದ್ರಿಯಗಳಂತೆ ಶಬ್ದಕ್ಕೂ ಬೋಧಕತ್ವವು ಸ್ವಾಭಾವಿಕವಾದರೆ(ಅದು ಪದಾರ್ಥವನ್ನು) ಬೋಧಿಸುವದಕ್ಕೆ ಸಂಬಂಧಗ್ರಹಣವನ್ನು ಏತಕ್ಕೆ ಅಪೇಕ್ಷಿಸುತ್ತದೆ ?[1]

(ಪರಿಹಾರ) :- (ಅನುಮಾನದಲ್ಲಿ) ಲಿಂಗಕ್ಕೆ ಹೇಗೆ (ಅಪೇಕ್ಷೆಯಿರುತ್ತದೆಯೋ ಹಾಗೆಯೇ ಇಲ್ಲಿ) ಎಂದು (ಇದಕ್ಕೆ) ಉತ್ತರಹೇಳುತ್ತೇವೆ. (ಇದರ ವಿವರ) : ಹೊಗೆಯೇ ಮುಂತಾದ (ಲಿಂಗವು) ಹೇಗೆ ಜ್ಞಾತಸಂಬಂಧವುಳ್ಳದ್ದಾಗಿಯೇ[2] ಅಗ್ನ್ಯಾದಿಗಳ ಜ್ಞಾನವನ್ನುಂಟುಮಾಡುತ್ತದೆಯೋ, ಹಾಗೆಯೇ ಶಬ್ದವೂ ಸಂಬಂಧಗ್ರಹಣವುಳ್ಳ ಶಬ್ದವೇ ಆಯಾ ಪದಾರ್ಥದ ಜ್ಞಾನವನ್ನುಂಟು ಮಾಡುತ್ತದೆ.[3]

(ಆಕ್ಷೇಪ) :- ಹಾಗಾದರೆ ಶಬ್ದವೂ ಆಯಾ ಪದಾರ್ಥಕ್ಕೆ ಲಿಂಗವೇ ಆಯಿತಾಗಿ (ಅದೂ) ಅನುಮಿತಿಗೆ ಕರಣವೆಂದೇ ಆಗುವದಲ್ಲ !

(ಪರಿಹಾರ) :- ಹಾಗಲ್ಲ. (ಏಕೆಂದರೆ) ಶಬ್ದಾರ್ಥಗಳಿಗೆ ಇರುವ ಸಂಬಂಧವು ಬೋಧ್ಯಬೋಧಕಭಾವವೇ[4] (ಆಗಿದೆ) ; ಧೂಮಾದಿಗಳಿಗಾದರೋ (ಅಗ್ನ್ಯಾದಿ)ಗಳೊಡನೆ ಬೇರೊಂದು ತೆರನಾದ ಸಂಬಂಧವಿದೆ.[5] ಆದ್ದರಿಂದ ಆ ಸಂಬಂಧದ ಜ್ಞಾನದ ಮೂಲಕವಾಗಿ (ಅವು ಆ ಅಗ್ನ್ಯಾದಿಗಳ) ಅರಿವನ್ನುಂಟು ಮಾಡುತ್ತಿವೆ ಎಂಬ ವಿಶೇಷವಿದೆ.

---

1. ಇಂದ್ರಿಯಗಳು ನೇರಾಗಿ ವಿಷಯವನ್ನು ಬೋಧಿಸುತ್ತವೆ; ಆದರೆ ಶಬ್ದವು ಈ ಶಬ್ದಕ್ಕೆ ಇದು ಅರ್ಥ ಎಂಬ ಶಬ್ದಾರ್ಥಸಂಬಂಧವನ್ನು ಅರಿತವನಿಗೇ ತನ್ನ ವಿಷಯವನ್ನು ಬೋಧಿಸುತ್ತದೆಯಲ್ಲ !- ಹೀಗೆ ತಾರತಮ್ಯವಿರುವದರಿಂದ ಅದಕ್ಕೆ ಸ್ವಾಭಾವಿಕ ಬೋಧಕ ಶಕ್ತಿಯಿಲ್ಲವೆಂದು ಹೇಳಬೇಕಲ್ಲವೇ?
2. ಹೊಗೆಯು ತಾನಿದ್ದಂತೆಯೇ ಬೆಂಕಿಯ ಅರಿವನ್ನುಂಟುಮಾಡುವದಿಲ್ಲ ; ಹೊಗೆಯಿದ್ದಲ್ಲಿ ಬೆಂಕಿಯಿರುವದು- ಎಂಬ ಸಂಬಂಧಜ್ಞಾನವಿದ್ದವನಿಗೇ ಆ ಜ್ಞಾನವನ್ನುಂಟು ಮಾಡುತ್ತದೆ. ಅದರಂತೆ ಶಬ್ದವೂ ಸಂಬಂಧಗ್ರಹಣವನ್ನಪೇಕ್ಷಿಸಿ ಬೋಧಿಸಬಹುದಾಗಿದೆ ಎಂದಭಿಪ್ರಾಯ.
3. ಬೋಧಕವಾಗಿರುವದು ನೇರಾಗಿಯೇ ಬೋಧಿಸಬೇಕು. ಸಂಬಂಧಾಪೇಕ್ಷವಾಗಿ ಬೋಧಿಸಕೂಡದು ಎಂಬ ನಿಯಮವೇನೂ ಇಲ್ಲ ಎಂದರ್ಥ.
4. ಬೋಧ್ಯಬೋಧಕಭಾವಕ್ಕಿಂತ ಬೇರೆಯಾದ ಸಂಬಂಧವನ್ನು ಅಪೇಕ್ಷಿಸುವದಿಲ್ಲ ; ಇದು ಶಬ್ದವಾದ್ದರಿಂದ ಅರ್ಥವಿರಬೇಕು ಎಂಬ ರೀತಿಯಿಂದಲೇನೂ ಅದು ಬೋಧಿಸುವದಿಲ್ಲ.
5. ಹೊಗೆ ಜನ್ಯ, ಬೆಂಕಿ ಜನಕ ; ಹೊಗೆ ವ್ಯಾಪ್ಯ, ಬೆಂಕಿ ವ್ಯಾಪಕ- ಹೀಗೆ ಬೋಧ್ಯ ಬೋಧಕಭಾವ ವ್ಯತಿರಿಕ್ತಸಂಬಂಧವೂ ಅಲ್ಲಿದೆ.

ಹೀಗೆ ಸಂಬಂಧಗ್ರಹಣವಾದ (ಬಳಿಕ ಶಬ್ದಕ್ಕೆ) ಬೋಧಕತ್ವವಿರುವದು ಕಂಡುಬರುವದರಿಂದಲೂ ಅನಾದಿಯಾದ (ಶಬ್ದಾರ್ಥಗಳ ಬೋಧ್ಯಬೋಧಕತ್ವದ) ಅನುಸಂಧಾನವು ಕಡಿವಡಿಯದೆ ಇದ್ದರೂ (ಯಾರಾದರೂ ಅದನ್ನು) ಸಂಕೇತ (ಮಾಡಿರುವರೆಂಬುದು) ತಿಳಿಯಬರದೆ ಇರುವದರಿಂದಲೂ (ಶಬ್ದಕ್ಕೆ ಸ್ವಾಭಾವಿಕವಾದ) ಬೋಧಕತ್ವಶಕ್ತಿಯೇ (ಇದೆ) ಎಂದು ನಿಶ್ಚಯವಾಗುತ್ತದೆ.

ಹೀಗೆ ಬೋಧಕವಾಗಿರುವ ಪದಗಳ ಸಂಘಾತಗಳು ಆಯಾ ಸಂಸರ್ಗವನ್ನು ತಿಳಿಯಪಡಿಸುವದರಿಂದ ವಾಕ್ಯವೆಂಬ ಶಬ್ದಕ್ಕೆ ವಿಷಯವಾಗಿರುತ್ತವೆ.[1] (ಅವುಗಳ) **ಉಚ್ಚಾರಣಕ್ರಮವು ಎಲ್ಲಿ ಪುರುಷಬುದ್ಧಿಪೂರ್ವಕವಾಗಿರುವದೋ ಅವು ಪೌರುಷೇಯಶಬ್ದಗಳು ಎನಿಸುವವು ; ಆದರೆ ಎಲ್ಲಿ (ಆ) ಉಚ್ಚಾರಣ ಕ್ರಮವು ಹಿಂದುಹಿಂದಿನ ಉಚ್ಚಾರಣಕ್ರಮದಿಂದಾದ ಸಂಸ್ಕಾರದಿಂದಾಗಿರುವದೋ (ಅವು) ಯಾವಾಗಲೂ ಅಪೌರುಷೇಯವಾಗಿರುವವು, ಮತ್ತು ಅವು ವೇದಗಳು ಎನಿಸುವವು. ಹಿಂದುಹಿಂದಿನ ಉಚ್ಚಾರಣ ಕ್ರಮದಿಂದುಂಟಾದ ಸಂಸ್ಕಾರದಿಂದ ಅದೇ ಕ್ರಮವನ್ನು ಸ್ಮರಿಸಿಕೊಂಡು ಅದೇ ಕ್ರಮದಿಂದ ಉಚ್ಚರಿಸಲ್ಪಡುವದೆಂಬಿದೇ[2] ವೇದಗಳು ಅಪೌರುಷೇಯನಿತ್ಯವು ಎಂಬುದು.** ಗೊತ್ತಾದ ಒಂದು ಅನುಕ್ರಮದಿಂದ ಇದ್ದುಕೊಂಡಿರುವ ಅಕ್ಷರರಾಶಿಗಳಾದ ಆ ವೇದಗಳು ಋಕ್ಕು, ಯಜುಸ್ಸು, ಸಾಮ, ಅಥರ್ವ- ಎಂಬ ಭೇದಗಳುಳ್ಳವಾಗಿ (ಒಂದೊಂದೂ) ಅನಂತಶಾಖೆಗಳುಳ್ಳವಾಗಿರುತ್ತವೆ **ವಿಧಿ, ಅರ್ಥವಾದ, ಮಂತ್ರ[3] -ಎಂಬ ರೂಪದಲ್ಲಿರುವ ಆ ವೇದಗಳು ಪರಬ್ರಹ್ಮವಾಗಿರುವ ನಾರಾಯಣನ ಸ್ವರೂಪವನ್ನೂ ಅವನ ಆರಾಧನಪ್ರಕಾರವನ್ನೂ ಆರಾಧನೆಮಾಡಿದ್ದರಿಂದಾಗುವ ವಿಶಿಷ್ಟವಾದ ಫಲವನ್ನೂ ಬೋಧಿಸುತ್ತವೆ ; ಪರಮಪುರುಷನಂತೆಯೇ ಅವನ ಸ್ವರೂಪ, ಅವನ ಆರಾಧನ, ಆ (ಆರಾಧನೆಯ) ಫಲ- ಇವುಗಳನ್ನು ತಿಳಿಸಿಕೊಡುವ ವೇದವೆಂಬ ಹೆಸರಿನ ಶಬ್ದಜಾತವೂ ನಿತ್ಯವೇ[4] (ಆಗಿರುತ್ತದೆ).**

---

1. ಪದಾರ್ಥಗಳ ಸಂಸರ್ಗವನ್ನು ಬೋಧಿಸುವದರಿಂದ ವಾಕ್ಯವೆನಿಸುವವು ಎಂದರ್ಥ.
2. ಪದನಿತ್ಯತ್ವವೇ ಆಗಲಿ ವರ್ಣನಿತ್ಯತ್ವವೇ ಆಗಲಿ, ಅಪೌರುಷೇಯತ್ವಕ್ಕೆ ಕಾರಣವಲ್ಲ ಎಂದರ್ಥ. ತಾ॥
3. ವಿಧಿಭಾಗವು ಮಾತ್ರ ಅಪೌರುಷೇಯ ಎಂಬುದಿಲ್ಲ ಎಂದರ್ಥ.
4. ಪ್ರತಿಪಾದ್ಯ ಪ್ರತಿಪಾದಕ- ಎಂಬೆರಡೂ ಅನಾದಿಯೇ. ಸಿದ್ಧವಸ್ತುವನ್ನು ತಿಳಿಸುವ ಮಾತ್ರದಿಂದ ವೇದಗಳ ಅನಾದಿತ್ವವು ಹೋಗುವದಿಲ್ಲ- ಎಂದರ್ಥ. ತಾ॥

ಇತಿಹಾಸಪುರಾಣಾದಿಗಳೂ ವೇದಾನುಸಾರಿಯಾಗಿರುವದರಿಂದ ಪ್ರಮಾಣ

(ಮೂಲ)

೯೩. ವೇದಾನಾಮನನ್ತತ್ವಾತ್, ದುರವಗಾಹತ್ವಾಚ್ಚ ಪರಮಪುರುಷ ನಿಯುಕ್ತಾಃ ಪರಮರ್ಷಯಃ ಕಲ್ಪೇ ಕಲ್ಪೇ ನಿಖಿಲಜಗದುಪಕಾರಾರ್ಥಂ ವೇದಾರ್ಥಂ ಸ್ಮೃತ್ವಾ ವಿಧ್ಯರ್ಥವಾದಮನ್ತ್ರಮೂಲಾನಿ ಧರ್ಮಶಾಸ್ತ್ರಾಣಿ, ಇತಿಹಾಸಪುರಾಣಾನಿ ಚ ಚಕ್ರುಃ ॥

(ಅರ್ಥ)

ವೇದಗಳು ಅನಂತವಾಗಿರುವದರಿಂದಲೂ ತಿಳಿಯುವದಕ್ಕೆ ಕಷ್ಟವಾಗಿರುವದರಿಂದಲೂ ಪರಮಪುರುಷನಿಂದ ನಿಯುಕ್ತರಾದ ಪರಮರ್ಷಿಗಳು ಕಲ್ಪಕಲ್ಪದಲ್ಲಿಯೂ ಇಡಿಯ ಜಗತ್ತಿಗೆ ಉಪಕಾರವಾಗಲೆಂದು ವೇದಾರ್ಥವನ್ನು ಸ್ಮರಣೆಗೆ ತಂದುಕೊಂಡು ವಿಧಿ, ಅರ್ಥವಾದ, ಮಂತ್ರ- ಇವುಗಳ ಆಧಾರದಿಂದ **ಧರ್ಮಶಾಸ್ತ್ರಗಳನ್ನೂ ಇತಿಹಾಸಪುರಾಣಗಳನ್ನೂ**[1] ಮಾಡಿದರು.

ಲೌಕಿಕಶಬ್ದಗಳು ವೇದದಿಂದಲೇ ಬಂದಿವೆ

(ಮೂಲ)

೯೪. ಲೌಕಿಕಾಶ್ಚ ಶಬ್ದಾ ವೇದರಾಶೇರುದ್ಧೃತ್ಯೈವ ತತ್ತದರ್ಥವಿಶೇಷ ನಾಮತಯಾ ಪೂರ್ವವತ್ಪ್ರಯುಕ್ತಾಃ ಪಾರಮ್ಪರ್ಯೇಣ (ಚ)[2] ಪ್ರಯುಜ್ಯನ್ತೇ । ನನು ಚ ವೈದಿಕಾ ಏವ ಸರ್ವೇ ವಾಚಕಾಃ ಶಬ್ದಾಶ್ಚೇತ್ 'ಛನ್ದಸ್ಯೇವಮ್', 'ಭಾಷಾಯಾಮೇವಮ್'- ಇತಿ ಲಕ್ಷಣಭೇದಃ ಕಥಮುಪಪದ್ಯತೇ ? ಉಚ್ಯತೇ । ತೇಷಾಮೇವ ಶಬ್ದಾನಾಂ ತಸ್ಯಾಮೇವಾಽನುಪೂರ್ವ್ಯಾಂ ವರ್ತಮಾನಾನಾಂ ತಥೈವ ಪ್ರಯೋಗಃ । ಅನ್ಯತ್ರ ಪ್ರಯುಜ್ಯಮಾನಾನಾಮ್ ಅನ್ಯಥಾ ಇತಿ ನ ಕಶ್ಚಿದ್ದೋಷಃ ॥

(ಅರ್ಥ)

ಲೌಕಿಕಶಬ್ದಗಳನ್ನು ವೇದರಾಶಿಯಿಂದಲೇ ಎತ್ತಿಯೇ ಆಯಾ ಪದಾರ್ಥಕ್ಕೆ ಹೊಸದಾಗಿ ಮುನ್ನಿನಂತೆಯೇ ಪ್ರಯೋಗಿಸುತ್ತಿರುತ್ತಾರೆ, ಪರಂಪರೆಯಿಂದಲೂ ಪ್ರಯೋಗಿಸುತ್ತಾ ಬಂದಿರುತ್ತಾರೆ.

(ಆಕ್ಷೇಪ) :- ವಾಚಕಶಬ್ದಗಳೆಲ್ಲವೂ ವೈದಿಕವೇ ಆಗಿದ್ದರೆ, 'ವೇದದಲ್ಲಿ ಹೀಗೆ', 'ಭಾಷೆಯಲ್ಲಿ ಹೀಗೆ' ಎಂದು (ವ್ಯಾಕರಣದಲ್ಲಿ) ಬೇರೆಬೇರೆಯ ಲಕ್ಷಣವನ್ನು ಹೇಳಿರುವದು ಹೇಗೆ ಹೊಂದುತ್ತದೆ ?

---

1. ಆದ್ದರಿಂದ ಅವೂ ಪ್ರಮಾಣವೇ. 2. ಕಾ॥ ಪಾಠದಲ್ಲಿ 'ಚ' ಇಲ್ಲ.

(ಪರಿಹಾರ) :- ಹೇಳುತ್ತೇವೆ. ಅದೇ ಶಬ್ದಗಳಿಗೆ ಅದೇ ಆನುಪೂರ್ವಿಯಲ್ಲಿ ರುವಂತೆ ಹಾಗೆಯೇ (ವೇದದಲ್ಲಿ) ಪ್ರಯೋಗಮಾಡಲಾಗಿರುತ್ತದೆ. ಮತ್ತೊಂದು (ಆನುಪೂರ್ವಿಯಲ್ಲಿ) ಪ್ರಯುಕ್ತವಾದರೆ (ಭಾಷೆಯಲ್ಲಿ) ಮತ್ತೊಂದು ರೀತಿಯಿಂದ ಪ್ರಯೋಗಮಾಡುತ್ತಾರೆ. ಆದ್ದರಿಂದ (ಇಲ್ಲಿ) ಯಾವ ದೋಷವೂ ಇಲ್ಲ.

ಉಪಸಂಹಾರ

ಪ್ರಕರಣದಲ್ಲಿ ಹೇಳಿದ ಸಿದ್ಧವಸ್ತುವಿಷಯದ ಸಂಗ್ರಹ ಬ್ರಹ್ಮದ ಸ್ವರೂಪಾದಿಗಳು

(ಮೂಲ)

೯೫. ಏವಮ್ ಇತಿಹಾಸಪುರಾಣಧರ್ಮಶಾಸ್ತ್ರೋಪಬೃಂಹಿತಸಾಙ್ಗವೇದ ವೇದ್ಯಃ ಪರಬ್ರಹ್ಮಭೂತೋ ನಾರಾಯಣಃ, ನಿಖಿಲಹೇಯಪ್ರತ್ಯನೀಕಃ, ಸಕಲೇತರ ವಿಲಕ್ಷಣಃ, ಅಪರಿಚ್ಛಿನ್ನಜ್ಞಾನಾನನ್ದೈಕಸ್ವರೂಪಃ, ಸ್ವಾಭಾವಿಕಾನವಧಿಕಾತಿ ಶಯಾಸಙ್ಖ್ಯೇಯಕಲ್ಯಾಣಗುಣಗಣಾಕರಃ, ಸ್ವಸಙ್ಕಲ್ಪಾನುವಿಧಾಯಿಸ್ವರೂಪ ಸ್ಥಿತಿಪ್ರವೃತ್ತಿಭೇದಚಿದಚಿದ್ವಸ್ತು ಜಾತಃ, ಅಪರಿಚ್ಛೇದ್ಯಸ್ವರೂಪಸ್ವಭಾವಾನನ್ತ ಮಹಾವಿಭೂತಿಃ, ನಾನಾವಿಧಾನನ್ತಚೇತನಾಚೇತನಾತ್ಮಕಪ್ರಪಞ್ಚಲೀಲೋಪಕರಣ ಇತಿ ಪ್ರತಿಪಾದಿತಮ್ । 'ಸರ್ವಂ ಖಲ್ವಿದಂ ಬ್ರಹ್ಮ' (ಛಾಂ. ೩-೧೪-೧), 'ಐತದಾತ್ಮ್ಯಮಿದಂ ಸರ್ವಮ್.... ತತ್ತ್ವಮಸಿ ಶ್ವೇತಕೇತೋ' (ಛಾಂ.೬-೮-೭.... ೬-೧೬-೩), 'ಏತಮೇಕೇ ವದನ್ತ್ಯಗ್ನಿಂ ಮರುತೋಽನ್ಯೇ[1] ಪ್ರಜಾಪತಿಮ್ ; ಇನ್ದ್ರಮೇಕೇ ಪರೇ ಪ್ರಾಣಮಪರೇ ಬ್ರಹ್ಮ ಶಾಶ್ವತಮ್' (ಮನು.೧೨-೧೨೩), 'ಜ್ಯೋತೀಂಷಿ ಶುಕ್ರಾಣಿ ಚ ಯಾನಿ ಲೋಕೇ ತ್ರಯೋ ಲೋಕಾ ಲೋಕಪಾಲಾ ಸ್ತಥಾ ಚ । ತ್ರಯೋಽಗ್ನಯಶ್ಚಾಹುತಯಶ್ಚ ಪಞ್ಚ ಸರ್ವೇ ದೇವಾ ದೇವಕೀಪುತ್ರ ಏವ ॥' (ಮ.ಭಾ. ?), 'ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಙ್ಕಾರಃ ಪರಂತಪಃ ॥' (ರಾ.ಯುದ್ಧ. ೧೨೦-೨೦), 'ಋತಧಾಮಾ ವಸುಃ ಪೂರ್ವೋವಸೂನಾಂ ತ್ವಂ ಪ್ರಜಾಪತಿಃ' (ರಾ. ?),[2] 'ಜಗತ್ಸರ್ವಂ ಶರೀರಂ ತೇ ಸ್ಥೈರ್ಯಂ ತೇ ವಸುಧಾತಲಮ್ । ಅಗ್ನಿಃ ಕೋಪಃ ಪ್ರಸಾದಸ್ತೇ ಸೋಮಃ ಶ್ರೀವತ್ಸಲಕ್ಷಣಃ ॥' (ರಾ.ಯುದ್ಧ. ೧೨೦-೨೬), 'ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ । ನದ್ಯಃ ಸಮುದ್ರಾಶ್ಚ ಸ ಏವ ಸರ್ವಂ ಯದಸ್ತಿ ಯನ್ನಾಸ್ತಿ

---

1. 'ಮನುಮನ್ಯೇ' ಎಂದು ಅಚ್ಚಿನ ಪಾಠ.
2. ಈ ಶ್ಲೋಕವು ನಮಗೆ ರಾಮಾಯಣದಲ್ಲಿ ಸಿಕ್ಕಿಲ್ಲ.

ಚ ವಿಪ್ರವರ್ಯ ॥' (ವಿ.ಪು. ೨-೧೨-೩೮) ಇತ್ಯಾದಿಸಾಮಾನಾಧಿಕರಣ್ಯ ಪ್ರಯೋಗೇಷು ಸರ್ವೈಃ ಶಬ್ದೈಃ ಸರ್ವಶರೀರ ತಯಾ ಸರ್ವಪ್ರಕಾರಂ ಬ್ರಹ್ಮೈವಾಭಿಧೀಯತ ಇತಿ ಚೋಕ್ತಮ್ ॥

(ಅರ್ಥ)

ಹೀಗೆ, ಇತಿಹಾಸ, ಪುರಾಣಗಳು, ಧರ್ಮಶಾಸ್ತ್ರಗಳು- ಇವುಗಳಿಂದ ಉಪಬೃಂಹಿತವಾಗಿರುವ ಸಾಂಗವೇದದಿಂದ ತಿಳಿಯಬರುವ ಪರಬ್ರಹ್ಮಭೂತವಾದ ನಾರಾಯಣನು, ನಿಖಿಲಹೇಯಗಳಿಗೂ ವಿರುದ್ಧ(ವಾದ ಸ್ವಭಾವದವನೂ), ಸಕಲೇತರ ವಸ್ತುಗಳಿಗಿಂತಲೂ ವಿಲಕ್ಷಣನೂ, ಅಪರಿಚ್ಛಿನ್ನಜ್ಞಾನಾನನ್ದೈಕಸ್ವರೂಪನೂ, ಸ್ವಾಭಾವಿಕವಾದ ಅನವಧಿಕವಾದ ಅತಿಶಯವುಳ್ಳ ಲೆಕ್ಕವಿಲ್ಲದಷ್ಟು ಕಲ್ಯಾಣಗುಣಗಣಗಳಿಗೆ ಗನಿಯಂತಿರುವವನೂ[1], ತನ್ನ ಸಂಕಲ್ಪವನ್ನನುಸರಿಸಿರುವ ಸ್ವರೂಪ, ಸ್ಥಿತಿ, ಪ್ರವೃತ್ತಿ, ಭೇದ- ಇವುಗಳುಳ್ಳ ಚಿದಚಿದ್ವಸ್ತುಜಾತವುಳ್ಳವನೂ[2], ಅಪರಿಚ್ಛೇದ್ಯವಾದ ಸ್ವರೂಪವೂ ಸ್ವಭಾವವೂ ಇರುವ ಅನಂತವಾದ ಮಹಾವಿಭೂತಿಯುಳ್ಳವನು,[3] ಬಗೆಬಗೆಯ ಅನಂತವಾದ ಚೇತನಾಚೇತನ ರೂಪವಾದ ಪ್ರಪಂಚವೆಂಬ ಲೀಲೋಪಕರಣವುಳ್ಳವನು[4] ಎಂದು ಪ್ರತಿಪಾದಿಸಲಾಯಿತು.

'ಇದೆಲ್ಲವೂ ಬ್ರಹ್ಮವೇ'[5] (ಛಾಂ.೩-೧೪-೧), 'ಇದೆಲ್ಲವೂ ಈತನನ್ನು ಆತ್ಮನಾಗಿ ಉಳ್ಳದ್ದು.... ಶ್ವೇತಕೇತುವೆ, ಅದೇ ನೀನಾಗಿರುವೆ' (ಛಾಂ.೬-೮-೭.... ೬-೧೬-೩), 'ಈತನನ್ನು ಕೆಲವು (ವೇದಗಳು) ಅಗ್ನಿಯೆನ್ನುವವು, ಮರುತರೆಂದು ಕೆಲವು, ಪ್ರಜಾಪತಿಯೆಂದು ಮತ್ತೆ ಕೆಲವು ; ಇಂದ್ರನೆಂದು ಕೆಲವು, ಪ್ರಾಣನೆಂದು ಕೆಲವು, ಮತ್ತೆ ಕೆಲವು ಶಾಶ್ವತವಾದ ಬ್ರಹ್ಮವೆಂದು (ಎನ್ನುತ್ತಿರುವವು)' (ಮನು.೧೨-೧೨೩), 'ಲೋಕದಲ್ಲಿ ಶುದ್ಧವಾದ ಜ್ಯೋತಿಗಳುಂಟಲ್ಲ, ಅವು ; ಮೂರು ಲೋಕಗಳು, ಲೋಕಪಾಲರು, ಮತ್ತು ವೇದತ್ರಯವು ; ಮೂರು ಅಗ್ನಿಗಳು, ಐದು ಆಹುತಿಗಳು, ಸರ್ವದೇವತೆಗಳು- (ಇವೆಲ್ಲವೂ) ದೇವಕೀಪುತ್ರನೇ', (ಮ.ಭಾ.?), 'ನೀನೇ ಯಜ್ಞವು, ನೀನೇ ವಷಟ್ಕಾರವು, ನೀನೇ ಓಂಕಾರವು, ಶತ್ರುತಾಪನನೂ ನೀನೇ' (ರಾ.ಯುದ್ಧ. ೧೨೦-೨೦), 'ವಸುಗಳೊಳಗೆ ಋತಧಾಮನೆಂಬ ಹಿಂದಿನ

---

1. ದೋಷರಾಹಿತ್ಯ, ಕಲ್ಯಾಣಗುಣಾಕರತ್ವ- ಎಂಬ ಎರಡು ವಿಧವಾದ ಲಕ್ಷಣವುಳ್ಳವನೂ ಎಂದರ್ಥ. ಶ್ರೀ. ಭಾ. ೩-೨-೨೦ನ್ನು ನೋಡಿ.
2. ಇದು ಪರಮಾತ್ಮನ ವಿಭೂತಿಯ ವರ್ಣನೆ.
3. ಮಹಾವಿಭೂತಿಯೆಂದರೆ ಭೋಗ್ಯವಿಭೂತಿಯು ; ಇಲ್ಲಿಯವರೆಗೆ ಪರಮಾತ್ಮನ **ನಿತ್ಯವಿಭೂತಿ**ಯನ್ನು ಹೇಳಿದೆ. 4. ಇದು ಪರಮಾತ್ಮನ **ಲೀಲಾವಿಭೂತಿ**ಯ ವರ್ಣನೆ.
5. ಈವರೆಗೆ ಪರಬ್ರಹ್ಮವು ಸರ್ವವಿಲಕ್ಷಣವಾಗಿದೆ ಎಂದು ಹೇಳಲಾಯಿತು. ಇನ್ನು ಮುಂದೆ ಐಕ್ಯಶ್ರುತಿಯ ಗತಿಯೇನು?- ಎಂಬುದನ್ನು ಹೇಳುತ್ತಾರೆ.

ವಸುವು ನೀನೇ, ನೀನೇ ಪ್ರಜಾಪತಿಯು' (ರಾ. ?), 'ಜಗತ್ತೆಲ್ಲವೂ ನಿನ್ನ ಶರೀರವು, ಭೂತಲವು ನಿನ್ನ ಸ್ಥೈರ್ಯವು, ಅಗ್ನಿಯು (ನಿನ್ನ) ಕೋಪವು, ಸೋಮನು ನಿನ್ನ ಪ್ರಸಾದವು, ಶ್ರೀವತ್ಸಾಂಕನು (ನೀನು)' (ರಾ.ಯುದ್ಧ. ೧೨೦-೨೬), 'ಜ್ಯೋತಿಗಳು ವಿಷ್ಣುವು, ಭುವನಗಳೂ ವಿಷ್ಣುವೇ, ವನಗಳು ವಿಷ್ಣುವು, ಬೆಟ್ಟಗಳು ವಿಷ್ಣುವು, ದಿಕ್ಕುಗಳು, ನದಿಗಳು, ಸಮುದ್ರಗಳು, (ವಿಷ್ಣುವು). ವಿಪ್ರವರ್ಯನೆ,[1] ಯಾವದು ಇದೆಯೊ, ಯಾವದು ಇಲ್ಲವೋ, ಅದೆಲ್ಲವೂ ಆತನೇ' (ವಿ.೨-೧೨-೩೮) ಎಂದು ಮುಂತಾಗಿರುವ ಸಾಮಾನಾಧಿಕರಣ್ಯಪ್ರಯೋಗಗಳಲ್ಲಿ ಸರ್ವವೂ (ತನ್ನ) ಶರೀರವಾಗಿರುವದರಿಂದ ಸರ್ವವನ್ನೂ ಪ್ರಕಾರವಾಗಿವುಳ್ಳ ಬ್ರಹ್ಮವನ್ನೇ ಸರ್ವಶಬ್ದಗಳಿಂದಲೂ ಹೇಳಲಾಗಿರುತ್ತದೆ- ಎಂದೂ ಹೇಳಿದ್ದಾಯಿತು.

ಬ್ರಹ್ಮದ ಸರ್ವಪ್ರಕಾರಕತ್ವ

(ಮೂಲ)

೯೬. ಸತ್ಯಸಙ್ಕಲ್ಪಂ ಪರಂ ಬ್ರಹ್ಮ ಸ್ವಯಮೇವ ಬಹುಪ್ರಕಾರಂ ಸ್ಯಾಮಿತಿ ಸಂಕಲ್ಪ್ಯ ಅಚಿತ್ಸಮಷ್ಟಿರೂಪಂ ಮಹಾಭೂತಸೂಕ್ಷ್ಮಂ ವಸ್ತು, ಭೋಕ್ತೃವರ್ಗ ಸಮೂಹಂ ಚ ಸ್ವಸ್ಮಿನ್ ಪ್ರಲೀನಂ ಸ್ವಯಮೇವ ವಿಭಜ್ಯ ತಸ್ಮಾದ್ ಭೂತ ಸೂಕ್ಷ್ಮದ್ವಸ್ತುನೋ ಮಹಾಭೂತಾನಿ ಸೃಷ್ಟ್ವಾ, ತೇಷು ಚ ಭೋಕ್ತೃವರ್ಗ ಮಾತ್ಮತಯಾ ಪ್ರವೇಶ್ಯ, ತೈಶ್ಚಿದಧಿಷ್ಠಿತೈರ್ಮಹಾಭೂತೈರನ್ಯೋನ್ಯಸಂಸೃಷ್ಟೈಃ ಕೃತ್ಸ್ನಂ ಜಗದ್ವಿಧಾಯ, ಸ್ವಯಮಪಿ ಸರ್ವಸ್ಯಾತ್ಮತಯಾ ಪ್ರವಿಶ್ಯ ಪರಮಾತ್ಮತ್ವೇನಾವಸ್ಥಿತಂ ಸರ್ವಶರೀರಂ ಬಹುಪ್ರಕಾರಮವತಿಷ್ಠತೇ । ಯದಿದಂ ಮಹಾಭೂತಸೂಕ್ಷ್ಮಂ ವಸ್ತು ತದೇವ ಪ್ರಕೃತಿಶಬ್ದೇನಾಭಿಧೀಯತೇ । ಭೋಕ್ತೃವರ್ಗಸಮೂಹ ಏವ ಪುರುಷ ಶಬ್ದೇನೋಚ್ಯತೇ । ತೌ ಚ ಪ್ರಕೃತಿಪುರುಷೌ ಪರಮಾತ್ಮಶರೀರತಯಾ ಪರಮಾತ್ಮ ಪ್ರಕಾರಭೂತೌ । ತತ್ಕಾರಃ ಪರಮಾತ್ಮೈವ ಪ್ರಕೃತಿ ಪುರುಷಶಬ್ದಾಭಿಧೇಯಃ । 'ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯೇತಿ । .... ತತ್ಸೃಷ್ಟ್ವಾ । ತದೇವಾನು ಪ್ರಾವಿಶತ್ । ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್ । ನಿರುಕ್ತಂ ಚಾನಿರುಕ್ತಂ ಚ । ನಿಲಯನಂ ಚಾನಿಲಯನಂ ಚ । ವಿಜ್ಞಾನಂ ಚಾವಿಜ್ಞಾನಂ ಚ । ಸತ್ಯಂ ಚಾನೃತಂ ಸತ್ಯಮಭವತ್ ॥' (ತೈ.೨-೬) ಇತಿ ಪೂರ್ವೋಕ್ತಂ ಸರ್ವಮನಯೈವ ಶ್ರುತ್ಯಾ ವ್ಯಕ್ತಮ್ ॥

(ಅರ್ಥ)

ಸತ್ಯಸಂಕಲ್ಪವುಳ್ಳ ಪರಬ್ರಹ್ಮವು ತಾನೇ ಬ್ರಹ್ಮಪ್ರಕಾರವುಳ್ಳದ್ದಾಗುವೆನು ಎಂದು ಸಂಕಲ್ಪಿಸಿ, ಅಚಿತ್ಸಮಷ್ಟಿರೂಪವಾದ ಮಹಾಭೂತಗಳ ಸೂಕ್ಷ್ಮವಾದ ವಸ್ತುವನ್ನೂ

1. ಮೈತ್ರೇಯನಿಗೆ ಪರಾಶರರು ಇದನ್ನು ಹೇಳಿದ್ದಾರೆ.

ಭೋಕ್ತೃವರ್ಗಸಮೂಹವನ್ನೂ[1] ತನ್ನಲ್ಲಿ ಲಯವಾಗಿದ್ದದ್ದನ್ನು ತಾನೇ ವಿಂಗಡಿಸಿ, ಆ ಭೂತಸೂಕ್ಷ್ಮವಾದ ವಸ್ತುವಿನಿಂದ ಮಹಾಭೂತಗಳನ್ನುಸೃಷ್ಟಿಸಿ, ಅವುಗಳಲ್ಲಿ ಭೋಕ್ತೃವರ್ಗವನ್ನು ಆತ್ಮರಾಗಿ ಒಳಹೊಗಿಸಿ[2], ಆ ಚಿದದಧಿಷ್ಠಿತವಾದ[3] ಮಹಾಭೂತಗಳು ಒಂದಕ್ಕೊಂದು ಸಂಬದ್ಧವಾಗಲಾಗಿ[4] ಅವುಗಳಿಂದ ಜಗತ್ತೆಲ್ಲವನ್ನೂ ಉಂಟುಮಾಡಿ, ತಾನೂ ಎಲ್ಲಕ್ಕೂ ಆತ್ಮನಾಗಿ ಒಳಹೊಕ್ಕು[5] ಪರಮಾತ್ಮನಾಗಿದ್ದುಕೊಂಡು ಸರ್ವಶರೀರವುಳ್ಳದ್ದೂ ಬಹುಪ್ರಕಾರವೂ ಆಗಿರುತ್ತದೆ. ಆ ಮಹಾಭೂತಸೂಕ್ಷ್ಮವಾದ ಈ ವಸ್ತುವಿದೆಯಲ್ಲ, ಅದನ್ನೇ (ಇಲ್ಲಿ) **ಪ್ರಕೃತಿ**ಶಬ್ದದಿಂದ ಹೇಳಿದೆ, ಭೋಕ್ತೃವರ್ಗಸಮೂಹವನ್ನು **ಪುರುಷ**ಶಬ್ದದಿಂದ ಹೇಳಿದೆ. ಆ **ಪ್ರಕೃತಿಪುರುಷರುಗಳು ಪರಮಾತ್ಮನ ಶರೀರವಾಗಿರುವದರಿಂದ ಪರಮಾತ್ಮನ ಪ್ರಕಾರವಾಗಿರುತ್ತಾರೆ ; ಅವರನ್ನು ಪ್ರಕಾರವಾಗಿ ಉಳ್ಳ ಪರಮಾತ್ಮನೇ ಪ್ರಕೃತಿ, ಪುರುಷ- ಎಂಬ ಶಬ್ದಗಳಿಗೆ ವಾಚ್ಯನು.**

'ಅವನು ಬಹುವಾಗುವೆನು ಹುಟ್ಟುವೆನು ಎಂದು ಇಚ್ಛಿಸಿದನು. ಅದನ್ನು ಸೃಷ್ಟಿಸಿ ಅದನ್ನೇ ಒಳಹೊಕ್ಕನು, ಅದನ್ನು ಒಳಹೊಕ್ಕು ಸತ್ತೂ ತ್ಯತ್ತೂ ಆದನು. ನಿರುಕ್ತವೂ ಅನಿರುಕ್ತವೂ, ನಿಲಯನವೂ ಅನಿಲಯನವೂ, ವಿಜ್ಞಾನವೂ ಅವಿಜ್ಞಾನವೂ (ಆದನು). ಸತ್ಯವಾದ ಆತನೇ ಸತ್ಯವೂ ಅನೃತವೂ ಆದನು' (ತೈ.೨-೬) ಎಂಬೀ ಶ್ರುತಿಯಿಂದಲೇ ಮೇಲೆ ಹೇಳಿದ್ದೆಲ್ಲವೂ ವ್ಯಕ್ತವಾಗಿರುತ್ತದೆ.

ಉಪಾಯವಿಷಯದ ಸಂಗ್ರಹ

ಪರಭಕ್ತಿಯೇ ಬ್ರಹ್ಮಪ್ರಾಪ್ತ್ಯುಪಾಯ

(ಮೂಲ)

೯೭. ಬ್ರಹ್ಮಪ್ರಾಪ್ತ್ಯುಪಾಯಶ್ಚ ಶಾಸ್ತ್ರಾಧಿಗತತತ್ತ್ವಜ್ಞಾನಪೂರ್ವಕ
ಸ್ವಕರ್ಮಾನುಗೃಹೀತಭಕ್ತಿನಿಷ್ಠಾ ಸಾಧ್ಯಾನವಧಿಕಾತಿಶಯಪ್ರಿಯವಿಶದತಮ

---

1. 'ಯತಃ ಪ್ರಧಾನಪುರುಷೌ ಯತಶ್ಚೈತಚ್ಚರಾಚರಮ್ । ಕಾರಣಂ ಸಕಲಸ್ಯಾಸ್ಯ ಸ ನೋ ವಿಷ್ಣುಃ ಪ್ರಸೀದತು' (ವಿ.ಪು.೧-೧೭-೩೦) ಎಂಬ ಪ್ರಹ್ಲಾದವಚನದಲ್ಲಿ ಪ್ರಧಾನ ವೆಂದರೆ ಅಚಿತ್ಸಮಷ್ಟಿ, ಪುರುಷನೆಂದರೆ ಜೀವಸಮಷ್ಟಿ- ಎಂದು ತಾ॥ ಇದನ್ನು ಮೂಲದಲ್ಲಿಯೇ ಮುಂದೆ ವಿವರಿಸಿದೆ.
2. ಇದು ಜೀವರ ಪಾರವಶ್ಯವನ್ನು ತಿಳಿಸುವ ವಿಶೇಷಣ. ಜೀವರುಗಳಿಗೆ ಅಚಿತ್ಸಂಸರ್ಗವು ಅನಾದಿಯಾಗಿರುವದರಿಂದ ಇಲ್ಲಿ ಸಂಸರ್ಗವನ್ನು ಹೇಳಿಲ್ಲ ; ಆ 'ಆತ್ಮರಾಗಿ' ಎಂದರೆ ವ್ಯಷ್ಟಿದೇಹಾಭಿಮಾನಿಗಳಾಗಿ ಎಂಬುದನ್ನು ಮುಖ್ಯವಾಗಿ ಹೇಳಿದೆ ಎಂದು ತಾ॥
3. ಚಿತ್ಸಂಬದ್ಧವಾದ ಎಂದರ್ಥ. 4. ಪಂಚೀಕೃತವಾಗಲಾಗಿ.
5. ಅಂತರ್ಯಾಮಿಯು ಸ್ವತಂತ್ರನಾದ್ದರಿಂದ ತಾನೇ ಒಳಹೊಗುತ್ತಾನೆ.

ಪ್ರತ್ಯಕ್ಷತಾಪನ್ನಾನುಧ್ಯಾನರೂಪಪರಭಕ್ತಿರೇವೇತ್ಯುಕ್ತಮ್ । ಭಕ್ತಿಶಬ್ದಶ್ಚ ಪ್ರೀತಿ ವಿಶೇಷೇ ವರ್ತತೇ । ಪ್ರೀತಿಶ್ಚ ಜ್ಞಾನವಿಶೇಷ ಏವ । ನನು ಚ ಸುಖಂ ಪ್ರೀತಿ ರಿತ್ಯನರ್ಥಾನ್ತರಮ್ । ಸುಖಂ ಚ ಜ್ಞಾನವಿಶೇಷಸಾಧ್ಯಂ ಪದಾರ್ಥಾನ್ತರಮಿತಿ ಲೌಕಿಕಾಃ । ನೈವಮ್, ಯೇನ ಜ್ಞಾನವಿಶೇಷೇಣ ತತ್ ಸಾಧ್ಯಮಿತ್ಯುಚ್ಯತೇ ಸ ಏವ[1] ಜ್ಞಾನವಿಶೇಷಃ ಸುಖಮ್ । ಏತದುಕ್ತಂ ಭವತಿ । ವಿಷಯಜ್ಞಾನಾನಿ ಸುಖ ದುಃಖಮಧ್ಯಸ್ಥಸಾಧಾರಣಾನಿ । ತಾನಿ ಚ ವಿಷಯಾಧೀನವಿಶೇಷಾಣಿ ತಥಾ ಭವನ್ತಿ । ಯೇನ ಚ ವಿಷಯವಿಶೇಷೇಣ ವಿಶೇಷಿತಂ ಜ್ಞಾನಂ ಸುಖಿಸ್ಯ ಜನಕಮಿತ್ಯಭಿಮತಮ್, ತದ್ವಿಷಯಜ್ಞಾನಮೇವ ಸುಖಮ್ । ತದತಿರೇಕಪದಾರ್ಥಾನ್ತರಂ ನೋಪಲಭ್ಯತೇ । ತೇನೈವ ಸುಖಿತ್ವವ್ಯವಹಾರೋಪಪತ್ತೇಶ್ಚ । ಏವಂವಿಧಸುಖರೂಪಜ್ಞಾನಸ್ಯ ವಿಶೇಷಕತ್ವಮ್ ಬ್ರಹ್ಮವ್ಯತಿರಿಕ್ತಸ್ಯ ವಸ್ತುನಃ ಸಾತಿಶಯಮ್ ಅಸ್ಥಿರಂ ಚ । ಬ್ರಹ್ಮಣಸ್ತು ಅನವಧಿಕಾತಿಶಯಂ ಸ್ಥಿರಂ ಚೇತಿ 'ಆನನ್ದೋ ಬ್ರಹ್ಮ' ಇತ್ಯುಚ್ಯತೇ । ವಿಷಯಾಯತ್ತತ್ವಾತ್ ಜ್ಞಾನಸ್ಯ ಸುಖರೂಪತಾಯಾ[2] ಬ್ರಹ್ಮೈವ ಸುಖಮ್ । ತದಿದಮಾಹ 'ರಸೋ ವೈ ಸಃ । ರಸಂ ಹ್ಯೇವಾಯಂ ಲಬ್ಧ್ವಾಽನನ್ದೀ ಭವತಿ' (ತೈ.೨-೭) ಇತಿ । ಬ್ರಹ್ಮೈವ ಸುಖಮಿತಿ ಬ್ರಹ್ಮ ಲಬ್ಧ್ವಾ ಸುಖೀ ಭವತೀತ್ಯರ್ಥಃ । ಪರಮಪುರುಷಃ ಸ್ವೇನೈವ ಸ್ವಯಮನವಧಿಕಾತಿಶಯಸುಖಃ ಸನ್ ಪರಸ್ಯಾಪಿ ಸುಖಂ ಭವತಿ ಸುಖರೂಪತ್ವಾ ವಿಶೇಷಾತ್ । ಬ್ರಹ್ಮ ಯಸ್ಯ ಜ್ಞಾನವಿಷಯೋ ಭವತಿ ಸ ಸುಖೀ ಭವತೀತ್ಯರ್ಥಃ । ತದೇವಂ ಪರಸ್ಯ ಬ್ರಹ್ಮಣೋಽನವಧಿಕಾತಿಶಯಾಸಙ್ಖ್ಯೇಯ ಕಲ್ಯಾಣಗುಣಾಕರಸ್ಯ ನಿರವದ್ಯಸ್ಯ , ಅನನ್ತಮಹಾವಿಭೂತೇಃ , ಅನವಧಿಕಾತಿಶಯ ಸೌಶೀಲ್ಯ ವಾತ್ಸಲ್ಯಸೌನ್ದರ್ಯಜಲಧೇಃ ಸರ್ವಶೇಷಿತ್ವಾತ್, ಆತ್ಮನಃ ಶೇಷತ್ವಾತ್, ಪ್ರತಿಸಂಬನ್ಧಿತಯಾ ಅನುಸಂಧೀಯಮಾನಮ್ ಅನವಧಿಕಾತಿಶಯಪ್ರೀತಿವಿಷಯಂ ಸತ್ ಪರಂ ಬ್ರಹ್ಮೈವ ಏನಮಾತ್ಮಾನಂ ಪ್ರಾಪಯತೀತಿ ॥

(ಅರ್ಥ)

ಬ್ರಹ್ಮಪ್ರಾಪ್ತಿಗೆ ಉಪಾಯವು ಶಾಸ್ತ್ರದಿಂದ ಪಡೆದುಕೊಂಡಿರುವ ತತ್ತ್ವಜ್ಞಾನಪೂರ್ವಕವಾಗಿ ಸ್ವಕರ್ಮದಿಂದನುಗೃಹೀತವಾದ ಭಕ್ತಿನಿಷ್ಪೆಯನ್ನು[3] (ಮಾಡುವದರಿಂದ) ಸಾಧಿಸಿಕೊಳ್ಳಬೇಕಾಗಿರುವ ಅನವಧಿಕಾತಿಶಯಪ್ರಿಯವಾಗಿ

---

1. 'ಸ ವಿಷ' ಕಾ॥
2. 'ಸುಖರೂಪತಯಾ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
3. ಭಕ್ತಿನಿಷ್ಪೆ ಎಂದರೆ ಭಕ್ತಿಯೋಗದ ಅಭ್ಯಾಸ.

ರುವ, ವಿಶದತಮಪ್ರತ್ಯಕ್ಷತ್ವವನ್ನೇ ಪಡೆದಿರುವಧ್ಯಾನರೂಪವಾದ ಪರಭಕ್ತಿಯೇ[1] - ಎಂದು ಹೇಳಿರುತ್ತೇವೆ. ಭಕ್ತಿ ಎಂಬ ಶಬ್ದವು ಒಂದಾನೊಂದು ಪ್ರೀತಿಯನ್ನು ಹೇಳುತ್ತದೆ ; ಪ್ರೀತಿಯೆಂಬುದೂ ಒಂದು ಬಗೆಯ ಜ್ಞಾನವೇ.[2]

(ಆಕ್ಷೇಪ) :- ಸುಖ, ಪ್ರೀತಿ- ಎಂಬಿವೆರಡೂ ಒಂದೇ ಪದಾರ್ಥವು. ಸುಖವೋ ಒಂದಾನೊಂದು ಬಗೆಯ ಜ್ಞಾನದಿಂದ ಸಾಧಿಸಿಕೊಳ್ಳಬೇಕಾದ ಮತ್ತೊಂದು ಪದಾರ್ಥವು- ಎಂದು ಲೋಕದ ಜನರು (ತಿಳಿದಿರುತ್ತಾರಲ್ಲ)[3] !

(ಪರಿಹಾರ) :- ಹಾಗಲ್ಲ. ಯಾವ ಜ್ಞಾನವಿಶೇಷದಿಂದ ಆ (ಸುಖವು) ಸಾಧ್ಯವು ಎನ್ನುತ್ತಾರೋ, ಆ ಜ್ಞಾನವಿಶೇಷವೇ ಸುಖವು. ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ : ವಿಷಯಜ್ಞಾನಗಳು ಸುಖ, ದುಃಖ, (ಸುಖದುಃಖಗಳೆರಡೂ ಅಲ್ಲದ) ನಡುವಿನ ಭಾವ- ಇವೆಲ್ಲಕ್ಕೂ ಸಮಾನವಾಗಿರುತ್ತವೆ. ಆ (ಸುಖಾದಿಗಳು) ವಿಷಯಕ್ಕಧೀನವಾಗಿ (ಆಗುವ) ವಿಶೇಷದಿಂದ ಹಾಗೆ ಆಗಿರುತ್ತವೆ.[4] ಯಾವ ಗೊತ್ತಾದ ಒಂದು ವಿಷಯದಿಂದ ವಿಶೇಷಿತವಾದ ಜ್ಞಾನವು ಸುಖವನ್ನುಂಟುಮಾಡುವದು ಎಂದು (ಜನರು) ತಿಳಿಯುತ್ತಾರೋ, ಆ ವಿಷಯಜ್ಞಾನವೇ ಸುಖವು. ಆ (ಜ್ಞಾನ)ಕ್ಕಿಂತ ಬೇರೆಯಾಗಿರುವ (ಸುಖವೆಂಬ) ಮತ್ತೊಂದು ಪದಾರ್ಥವು ಕಾಣಬರುವದೇ ಇಲ್ಲ. ಸುಖಿಯು ಎಂಬ ವ್ಯವಹಾರವು ಆ (ಜ್ಞಾನದಿಂದಲೇ) ಹೊಂದುವದರಿಂದಲೂ (ಅದೇ ಸುಖವು ಎನ್ನಬೇಕು).

ಈ ಬಗೆಯ ಸುಖರೂಪವಾದ ಜ್ಞಾನಕ್ಕೆ ವಿಶೇಷಕವಾಗಿರುವದೆಂಬುದು ಬ್ರಹ್ಮವ್ಯತಿರಿಕ್ತವಾದ ವಸ್ತುವಿಗೆ ಸಾತಿಶಯವಾಗಿರುತ್ತವೆ, ಅಸ್ಥಿರವೂ ಆಗಿರುತ್ತದೆ[5] ; ಬ್ರಹ್ಮದ (ವಿಶೇಷಕತ್ವವೋ) ಎಂದರೆ ಅನವಧಿಕಾತಿಶಯವಾಗಿಯೂ ಸ್ಥಿರವಾಗಿಯೂ ಇರುತ್ತದೆ. ಆದ್ದರಿಂದ 'ಬ್ರಹ್ಮವು ಆನಂದವು' (ತೈ.೩-೬) ಎನ್ನುತ್ತಾರೆ. **ಜ್ಞಾನಕ್ಕೆ ಸುಖರೂಪತ್ವ(ವುಂಟಾಗುವದು) ವಿಷಯಕ್ಕೆ ಅಧೀನವಾಗಿರುವದರಿಂದ, ಬ್ರಹ್ಮವೇ ಸುಖವು.**[6] ಆ ಇದನ್ನು (ಶ್ರುತಿಯು) 'ಆತನು ರಸವಷ್ಟೆ? ರಸವನ್ನೇ ಪಡೆದಲ್ಲವೆ,

---

1. ಅತ್ಯಂತಪ್ರಿಯವಾಗಿರುವ ಧ್ಯಾನವು, ಸಾಕ್ಷಾತ್ಕಾರರೂಪವಾದ ಧ್ಯಾನವು, ಪರಭಕ್ತಿಯು. ಇದು ಬ್ರಹ್ಮಪ್ರಾಪ್ತಿಯ ಪೂರ್ವಾವಸ್ಥೆ ಎಂದು ತಾ॥ 2. ಅನುರಾಗರೂಪವಾದ ಜ್ಞಾನವೇ ಪ್ರೀತಿ.
3. ಜ್ಞಾನದಿಂದ ಸುಖವನ್ನನುಭವಿಸುತ್ತಾರೆ ; ಹೀಗಿರುವಲ್ಲಿ ಜ್ಞಾನವೇ ಸುಖವೆಂಬುದು ಹೇಗೆ ಸರಿ?
4. ಒಂದಾನೊಂದು ವಿಷಯದಿಂದಾಗುವ ಜ್ಞಾನವು ಸುಖಿ, ಮತ್ತೊಂದರಿಂದ ದುಃಖಿ- ಹೀಗಿರುತ್ತದೆ ಎಂದರ್ಥ. 5. ವಿಷಯವು ತನಗಿಂತ ಮಿಗಿಲುಳ್ಳದ್ದು, ಅಸ್ಥಿರ ; ಆದ್ದರಿಂದ ಅದರಿಂದಾದ ಸುಖವೂ ಸಾತಿಶಯ, ಅಸ್ಥಿರ.
6. ವಿಷಯವು ಸುಖಿಸ್ವರೂಪವಲ್ಲದ್ದರಿಂದ ಅದರ ಜ್ಞಾನವು ಸುಖರೂಪವಾಗಲಾರದು ; ಏಕೆಂದರೆ ಜ್ಞಾನಕ್ಕೆ ಸುಖದುಃಖಾದಿರೂಪಗಳು ವಿಷಯದಿಂದಲೇ ಬರುತ್ತವೆ.

ಇವನು ಆನಂದಿಯಾಗುತ್ತಾನೆ?' (ತೈ.೨-೩)ಎಂದುಹೇಳುತ್ತದೆ. ಬ್ರಹ್ಮವೇ ಸುಖವಾದ್ದರಿಂದ ಬ್ರಹ್ಮವನ್ನು ಪಡೆದುಕೊಂಡರೆಸುಖಿಯಾಗುತ್ತಾನೆ ಎಂದರ್ಥ. ಪರಮಪುರುಷನು ತನ್ನಿಂದತಾನೇ[1] ಅನವಧಿಕಾತಿಶಯಸುಖವುಳ್ಳವನಾಗಿದ್ದು ಮತ್ತೊಬ್ಬನಿಗೂ ಸುಖವಾಗಿರುತ್ತಾನೆ ; ಏಕೆಂದರೆ (ಅವನ) ಸುಖಸ್ವರೂಪದಲ್ಲಿ (ಯಾವ) ವಿಶೇಷವೂ ಇರುವದಿಲ್ಲ.[2] ಬ್ರಹ್ಮವು ಯಾವನ ಜ್ಞಾನಕ್ಕೆ ವಿಷಯವಾಗಿರುವದೋ ಅವನು ಸುಖಿಯಾಗುತ್ತಾನೆ ಎಂದು (ಶ್ರುತಿಯ) ಅರ್ಥ.

ಅಂತೂ ಹೀಗೆ ಅನವಧಿಕಾತಿಶಯವಾದ ಲೆಕ್ಕವಿಲ್ಲದ ಕಲ್ಯಾಣಗುಣಗಳಿಗೆ ಆಕರನಾಗಿ ನಿರ್ದೋಷನಾಗಿ ಅನಂತವಾದ ಮಹಾವಿಭೂತಿಯುಳ್ಳ ಅನವಧಿಕಾತಿಶಯವಾದ ಸೌಶೀಲ್ಯ, ವಾತ್ಸಲ್ಯ, ಸೌಂದರ್ಯ- ಇವುಗಳ ಸಾಗರದಂತಿರುವ ಪರಬ್ರಹ್ಮವು ಎಲ್ಲಕ್ಕೂ **ಶೇಷಿ**ಯಾಗಿರುವದರಿಂದಲೂ ಆತ್ಮನು **ಶೇಷ**ನಾಗಿರುವದರಿಂದಲೂ (ಆ ಪರಮಾತ್ಮನು ತನಗೆ) **ಪ್ರತಿಸಂಬನ್ಧಿಯೆಂದು[3] ಅನುಸಂಧಾನಮಾಡುತ್ತಿದ್ದರೆ, ಅನವಧಿಕಾತಿಶಯವಾದ ಪ್ರೀತಿಗೆ ವಿಷಯವಾಗಿ[4] (ಆ) ಪರಬ್ರಹ್ಮವೇ ಇವನು ತನ್ನನ್ನು ಪಡೆದುಕೊಳ್ಳುವಂತೆ ಮಾಡುತ್ತದೆ.[5]**

ಶೇಷತ್ವದ ಬಗ್ಗೆ ಆಕ್ಷೇಪಸಮಾಧಾನಗಳು

ಪರವಶವಾದದ್ದು ದುಃಖವೆಂಬುದು ದೇಹಾಭಿಮಾನಿಗಳ ವಿಷಯ

(ಮೂಲ)

೯೮. ನನು ಚ ಅತ್ಯನ್ತಶೇಷತೈವ ಆತ್ಮನೋಽನವಧಿಕಾತಿಶಯಂ ಸುಖಮ್ ಇತ್ಯುಕ್ತಂ ಭವತಿ । ತದೇತತ್ ಸರ್ವಲೋಕವಿರುದ್ಧಮ್ । ತಥಾ ಹಿ । ಸರ್ವೇಷಾಮೇವ ಚೇತನಾನಾಂ ಸ್ವಾತನ್ತ್ರ್ಯಮೇವ ಇಷ್ಟತಮಂ ದೃಶ್ಯತೇ, ಪಾರತನ್ತ್ರ್ಯಂ ದುಃಖಕರಮ್ । ಸ್ಮೃತಿಶ್ಚ । 'ಸರ್ವಂ ಪರವಶಂ ದುಃಖಂ ಸರ್ವಮಾತ್ಮವಶಂ ಸುಖಮ್' (ಮನು.೪-೧೬೦), ತಥಾ ಚ 'ಸೇವಾ ಶ್ವವೃತ್ತಿರಾಖ್ಯಾತಾ ತಸ್ಮಾತ್ತಾಂ

---

1. ವಿಷಯವು ಪರಭೋಗ್ಯವಾಗಿರುತ್ತದೆ , ಸ್ವಭೋಗ್ಯವಲ್ಲ ; ಹಾಗೆ ಬ್ರಹ್ಮವೂ ಸ್ವಭೋಗ್ಯವಲ್ಲ- ಎಂಬ ಶಂಕೆಗೆ ಪರಿಹಾರವಿದು.
2. ಯಾರ ಜ್ಞಾನಕ್ಕೆ ಬ್ರಹ್ಮವು ವಿಷಯವಾಗುವದೋ ಅವರಿಗೆ ಸುಖವಾಗುತ್ತದೆ ; ಆದ್ದರಿಂದ ತನ್ನ ಜ್ಞಾನಕ್ಕೆ ವಿಷಯವಾದಾಗ ತನಗೂ ಸುಖವಾಗಿರುತ್ತದೆ.
3. ನಾನು ಶೇಷನು, ಪರಮಾತ್ಮನು ಶೇಷಿಯು- ಹೀಗೆ ತನಗೆ ಆತನು ನಿತ್ಯಪ್ರತಿಸಂಬಂಧವುಳ್ಳವನೆಂದು.
4. ಪ್ರೀತಿರೂಪವಾದ ಜ್ಞಾನಕ್ಕೆ ವಿಷಯವಾಗಿ.
5. 'ಆತ್ಮಭಾವಂ ನಯತ್ಯೇನಂ ತದ್ಬ್ರಹ್ಮ ಧ್ಯಾಯಿನಂ ಮುನಿಮ್ । ಪಿಕಾರ್ಯಮಾತ್ಮನಃ ಶಕ್ತ್ಯಾ ಲೋಹಮಾಕರ್ಷಕೋ ಯಥಾ' (ವಿ.ಪು.೬-೭-೩೦) ಈ ಶ್ಲೋಕದ ಸೂಚನೆ ಇಲ್ಲಿದೆ.

ಪರಿವರ್ಜಯೇತ್' (ಮನು.೪-೬) ಇತಿ । ತದಿದಮ್ [1] ಅನಧಿಗತದೇಹಾತಿರಿಕ್ತಾತ್ಮ-ಸ್ವರೂಪಾಣಾಂ ಶರೀರಾತ್ಮಾಭಿಮಾನವಿಜೃಮ್ಭಿತಮ್ । ತಥಾ ಹಿ । ಶರೀರಂ ಹಿ ಮನುಷ್ಯತ್ವಾದಿಜಾತಿಗುಣಾಶ್ರಯಪಿಣ್ಡಭೂತಂ ಸ್ವತನ್ತ್ರಂ ಪ್ರತೀಯತೇ । ತಸ್ಮಿನ್ನೇವ ಅಹಮಿತಿ ಸಂಸಾರಿಣಾಂ ಪ್ರತೀತಿಃ । ಆತ್ಮಾಭಿಮಾನೋ ಯಾದೃಶಸ್ತದನುಗುಣ್ಯೇವ ಪುರುಷಾರ್ಥಪ್ರತೀತಿಃ । ಸಿಂಹವ್ಯಾಘ್ರವರಾಹಮನುಷ್ಯಯಕ್ಷರಕ್ಷಃಪಿಶಾಚದೇವ-ದಾನವಸ್ತ್ರೀಪುಂಸ್ಯವಸ್ಥಿತಾತ್ಮಾಭಿಮಾನಾನಾಂ ಸುಖಾನಿ ವ್ಯವಸ್ಥಿತಾನಿ । ತಾನಿ ಚ ಪರಸ್ಪರವಿರುದ್ಧಾನಿ । ತಸ್ಮಾತ್ ಆತ್ಮಾಭಿಮಾನಾನುಗುಣ ಪುರುಷಾರ್ಥವ್ಯವಸ್ಥಯಾ ಸರ್ವಂ ಸಮಾಹಿತಮ್ ॥

(ಅರ್ಥ)

(ಆಕ್ಷೇಪ) :- ಅತ್ಯಂತವಾಗಿ ಶೇಷನಾಗಿರುವದೇ ಆತ್ಮನಿಗೆ ಅನವಧಿಕಾತಿಶಯವಾದ ಸುಖವು ಎಂದು (ನೀವು) ಹೇಳಿದಂತೆ ಆಯಿತು. ಆ ಇದು ಸರ್ವಲೋಕಾ(ನುಭವಕ್ಕೂ) ವಿರುದ್ಧವಾಗಿರುತ್ತದೆ. ಹೇಗೆಂದರೆ ಸರ್ವಚೇತನರಿಗೂ ಸ್ವಾತಂತ್ರ್ಯವೇ ಇಷ್ಟತಮವಾಗಿ ಕಾಣುತ್ತದೆ, ಪಾರತಂತ್ರ್ಯವು ದುಃಖಿತರ(ವಾಗಿರುತ್ತದೆ). ಸ್ಮೃತಿಯೂ 'ಪರವಶವಾದದ್ದೆಲ್ಲವೂ ದುಃಖವು, ತನ್ನ ವಶದಲ್ಲಿರುವದೆಲ್ಲವೂ ಸುಖವು' (ಮನು.೪-೧೬೦) (ಎಂದೂ) ಮತ್ತು 'ಸೇವೆಯೆಂಬುದು ನಾಯಿಯ ವೃತ್ತಿಯು, ಆದ್ದರಿಂದ ಅದನ್ನು ಬಿಟ್ಟುಬಿಡಬೇಕು' (ಮನು.೪-೬) ಎಂದು (ಹೇಳುತ್ತದೆಯಲ್ಲ) !

(ಸಮಾಧಾನ) :- ಆ ಇದು ದೇಹಾತಿರಿಕ್ತವಾದ ಆತ್ಮಸ್ವರೂಪವನ್ನು ಅರಿತುಕೊಳ್ಳದಿರುವವರಿಗಿರುವ ಶರೀರವೇ ತಾನೆಂಬ ಅಭಿಮಾನದ ಫಲವು. ಹೇಗೆಂದರೆ, ಶರೀರವೆಂಬುದು ಮನುಷ್ಯತ್ವವೇ ಮುಂತಾದ ಜಾತಿಗುಣಗಳಿಗೆ ಆಶ್ರಯವಾಗಿರುವ ರಾಶಿಯಾಗಿದ್ದು ಸ್ವತಂತ್ರ(ವಾಗಿರುವಂತೆ) ತೋರುತ್ತಿರುತ್ತದೆ ; ಅದರಲ್ಲಿಯೇ 'ನಾನು' ಎಂಬ ಪ್ರತೀತಿಯು ಸಂಸಾರಿಗಳಿಗೆ (ಇರುತ್ತದೆ). ಆತ್ಮಾಭಿಮಾನವು ಯಾವ ಬಗೆಯದ್ದಾಗಿರುವದೋ ಪುರುಷಾರ್ಥದ ಪ್ರತೀತಿಯೂ ಅದಕ್ಕೆ ತಕ್ಕಂತೆಯೇ (ಆಗುತ್ತಿರುವದು). ಸಿಂಹ, ಹುಲಿ, ಕಾಡುಹಂದಿ, ಮನುಷ್ಯ, ಯಕ್ಷ, ರಾಕ್ಷಸ, ಪಿಶಾಚ, ದೇವ, ದಾನವ, ಸ್ತ್ರೀ, ಪುರುಷ- ಎಂದು ಬೇರೆಬೇರೆಯಾದ ಆತ್ಮಾಭಿಮಾನವುಳ್ಳವರಿಗೆ ಸುಖಗಳೂ ಬೇರೆಬೇರೆಯಾಗಿರುತ್ತವೆ. ಅವು ಒಂದಕ್ಕೊಂದು ವಿರುದ್ಧವೂ ಆಗಿರುತ್ತವೆ. ಆದ್ದರಿಂದ ಆತ್ಮಾಭಿಮಾನಕ್ಕೆ ತಕ್ಕಂತೆ ಪುರುಷಾರ್ಥವು ಬೇರೆಬೇರೆಯಾಗಿರುವದರಿಂದ (ಈ) ಎಲ್ಲಾ (ಆಕ್ಷೇಪಗಳಿಗೂ)

---

1. 'ತದೇತತ್' ಕಾ।

ಸಮಾಧಾನವನ್ನು ಹೇಳಿದಂತೆ ಆಯಿತು.[1]

ಸ್ವಾತಂತ್ರ್ಯಬುದ್ಧಿಯು ವಿಪರೀತಜ್ಞಾನದ ಫಲ

(ಮೂಲ)

೯೯. ಆತ್ಮಸ್ವರೂಪಂ ತು ದೇವಾದಿದೇಹವಿಲಕ್ಷಣಂ ಜ್ಞಾನೈಕಾಕಾರಮ್ । ತಚ್ಚ ಪರಶೇಷತೈಕರೂಪಮ್ । ಯಥಾವಸ್ಥಿತಾತ್ಮಾಭಿಮಾನೇ ತದನುಗುಣೈವ ಪುರುಷಾರ್ಥಪ್ರತೀತಿಃ । 'ಆತ್ಮಾ ಜ್ಞಾನಮಯೋಽಮಲಃ' (ವಿ.ಪು.೬-೭-೨೨) ಇತಿ ಸ್ಮೃತೇರ್ಜ್ಞಾನೈಕಾಕಾರತಾ[2] ಪ್ರತಿಪನ್ನಾ । 'ಪತಿಂ ವಿಶ್ವಸ್ಯ' (ತೈ.ನಾ.೧೩) ಇತ್ಯಾದಿಶ್ರುತಿಗಣೈಃ ಪರಮಾತ್ಮಶೇಷತೈಕಾಕಾರತಾ ಚ ಪ್ರತಿಪಾದಿತಾ[3] । ಅತಃ ಸಿಂಹವ್ಯಾಘ್ರಾದಿಶರೀರಾತ್ಮಾಭಿಮಾನವತ್ ಸ್ವತನ್ತ್ರಾಭಿಮಾನೋಽಪಿ ಕರ್ಮಕೃತವಿಪರೀತಾತ್ಮಜ್ಞಾನರೂಪೋ ವೇದಿತವ್ಯಃ ॥

(ಅರ್ಥ)

ಆತ್ಮಸ್ವರೂಪವಾದರೋ ದೇವಾದಿದೇಹಗಳಿಗಿಂತ ವಿಲಕ್ಷಣವಾಗಿದೆ ; (ಅದಕ್ಕೆ) ಜ್ಞಾನವೆಂಬುದೊಂದೇ ಆಕಾರವಾಗಿದೆ. ಪರಮಾತ್ಮನಿಗೆ ಶೇಷವಾಗಿರುವದೇ ಅದರ ಸ್ವರೂಪವು. ನಿಜವಾಗಿರುವಂತೆ ಆತ್ಮ(ಸ್ವರೂಪ)ದಲ್ಲಿ (ನಾನೆಂಬ) ಅಭಿಮಾನವಿದ್ದರೆ ಅದಕ್ಕನುಗುಣವಾಗಿಯೇ ಪುರುಷಾರ್ಥದ ಪ್ರತೀತಿಯಾಗುವದು.[4] 'ಆತ್ಮನು ಜ್ಞಾನಮಯನು, ನಿರ್ಮಲನು' (ವಿ.ಪು.೬-೭-೨೨) ಎಂಬ ಸ್ಮೃತಿಯಿಂದ (ಆತ್ಮನಿಗೆ) ಜ್ಞಾನವೇ ಮುಖ್ಯಾಕಾರವೆಂದು ತಿಳಿದುಬಂದಿರುತ್ತದೆ ; 'ವಿಶ್ವಕ್ಕೆ ಪತಿಯಾದ' (ತೈ.ನಾ.೧೧-೨೫) ಮುಂತಾದ ಶ್ರುತಿಗಣಗಳು ಪರಾತ್ಮನಿಗೆ ಶೇಷತ್ವವೇ (ಇವನಿಗೆ) ಗೊತ್ತಾದ ಆಕಾರವೆಂಬುದನ್ನೂ ತಿಳಿಸುತ್ತವೆ. ಆದ್ದರಿಂದ ಸಿಂಹ, ಹುಲಿ-ಮುಂತಾದ ಶರೀರಗಳೇ ತಾನೆಂಬ ಅಭಿಮಾನದಂತೆ (ತಾನು) ಸ್ವತಂತ್ರನೆಂಬ ಅಭಿಮಾನವು ಕರ್ಮದಿಂದಾದ ತಪ್ಪು ತಿಳಿವಿನ ಆತ್ಮಜ್ಞಾನರೂಪವಾದದ್ದೇ ಎಂದು ತಿಳಿಯಬೇಕು.[5]

---

1. ಸಿಂಹಾದಿಶರೀರವೇ ತಾನೆಂಬ ಅಭಿಮಾನವಿದ್ದರೆ ಅದಕ್ಕೆ ಬೇಕಾದದ್ದೇ ಸುಖವೆಂದು ತೋರುವದು ಸ್ವಾಭಾವಿಕ.
2. ಇದಾದಮೇಲೆ 'ಪುರುಷಾರ್ಥತಾ' ಎಂದು ಹೆಚ್ಚಾಗಿ ಕಾ॥
3. 'ಪ್ರತೀತಾ' ಕಾ॥ 4. ನಿಜವಾದ ಆತ್ಮಸ್ವರೂಪದಲ್ಲಿ ತಾನೆಂಬ ಅರಿವು ಇದ್ದರೆ, ಪರಮಾತ್ಮನ ಶೇಷನಾಗಿರುವದರಿಂದಲೇ ನಮಗೆ ಸುಖ ಎಂದು ತೋರುವದು.
5. ಆದ್ದರಿಂದ ನಾನು ಸ್ವತಂತ್ರನು ಎಂದಾಗಿ ತಪ್ಪಾಗಿ ತಿಳಿದುಕೊಂಡವನಿಗೆ ಮಾತ್ರ ಪರವಶನಾಗಿರುವದು ದುಃಖವೆಂದು ತೋರುತ್ತದೆಯೇ ಹೊರತು ಪರತಂತ್ರನಾಗಿರುವದರಿಂದಲ್ಲ ಎಂದರ್ಥ. ತಾ॥

ಭಗವತ್ಪಾರತಂತ್ರ್ಯವು ಸುಖಿವೇ

(ಮೂಲ)

೧೦೦. ಅತಃ ಕರ್ಮಕೃತಮೇವ ಪರಮಪುರುಷವ್ಯತಿರಿಕ್ತವಿಷಯಾಣಾಂ ಸುಖಿತ್ವಮ್ । ಅತ ಏವ ತೇಷಾಮಲ್ಪತ್ವಮ್ ಅಸ್ಥಿರತ್ವಂ ಚ । ಪರಮ ಪುರುಷಸ್ಯೈವ ಸ್ವತ ಏವ ಸುಖಿತ್ವಮ್ । ಅತಸ್ತದೇವ ಸ್ಥಿರಮ್, ಅನವಧಿಕಾತಿಶಯಂ ಚ । 'ಕಂ ಬ್ರಹ್ಮ ಖಂ ಬ್ರಹ್ಮ' (ಛಾಂ.೪-೧೦-೪), 'ಆನನ್ದೋ ಬ್ರಹ್ಮ' (ತೈ.೩-೬), 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ.೨-೧) ಇತಿ ಶ್ರುತೇಃ । ಬ್ರಹ್ಮವ್ಯತಿರಿಕ್ತಸ್ಯ ಕೃತ್ಸ್ನಸ್ಯ ವಸ್ತುನಃ ಸ್ವರೂಪೇಣ ಸುಖಿತ್ವಾಭಾವಃ ಕರ್ಮಕೃತತ್ವೇನ ಚ ಸ್ಥಿರತ್ವಂ ಭಗವತಾ ಪರಾಶರೇಣೋಕ್ತಮ್ ।[1] 'ನರಕ ಸ್ವರ್ಗಸಂಜ್ಞೇ ವೈ ಪಾಪಪುಣ್ಯೇ ದ್ವಿಜೋತ್ತಮ । ವಸ್ತ್ವೇಕಮೇವ ದುಃಖಾಯ ಸುಖಾಯೇಷ್ಯಾಗಮಾಯ ಚ । ಕೋಪಾಯ ಚ ಯತಸ್ತಸ್ಮಾದ್ವಸ್ತು ವಸ್ತ್ವಾತ್ಮ ಕಂ ಕುತಃ' (ವಿ.ಪು. ೨-೬-೪೪, ೪೫) ಸುಖದುಃಖಾದ್ಯೇಕಾನ್ತರೂಪೇಣ ವಸ್ತುನೋ ವಸ್ತುತ್ವಂ ಕುತಃ ? ತದೇಕಾನ್ತತಾ ಪುಣ್ಯಾಪಾಪಕೃತಾ ಇತ್ಯರ್ಥಃ । ಏವಮನೇಕಪುರುಷಾಪೇಕ್ಷಯಾ ಕಸ್ಯಚಿತ್ ಸುಖಿಮೇವ ಕಸ್ಯಚಿದ್ದುಃಖಿಂ ಭವತಿ ಇತ್ಯನವಸ್ಥಾಂ[2] ಪ್ರತಿಪಾದ್ಯ, ಏಕಸ್ಮಿನ್ನಪಿ ಪುರುಷೇ ನ ವ್ಯವಸ್ಥಿತಮಿತ್ಯಾಹ । 'ತದೇವ ಪ್ರೀತಯೇ ಭೂತ್ವಾ ಪುನರ್ದುಃಖಾಯ ಜಾಯತೇ । ತದೇವ ಕೋಪಾಯ ಯತಃ ಪ್ರಸಾದಾಯ ಚ ಜಾಯತೇ । ತಸ್ಮಾದ್ದುಃಖಾತ್ಮಕಂ ನಾಸ್ತಿ ನ ಚ ಕಿಂಚಿತ್ಸುಖಾತ್ಮಕಮ್'[3]। (ವಿ.ಪು.೨-೬-೪೬, ೪೭) ಇತಿ । ಸುಖದುಃಖಾತ್ಮಕತ್ವಂ ಸರ್ವಸ್ಯ ವಸ್ತುನಃ ಕರ್ಮಕೃತಂ ನ ವಸ್ತುಸ್ವರೂಪ ಕೃತಮ್ । ಅತಃ ಕರ್ಮಾವಸಾನೇ ತದಪ್ಯೇತೀತ್ಯರ್ಥಃ ॥

(ಅರ್ಥ)

ಆದ್ದರಿಂದ ಪರಮಪುರುಷವ್ಯತಿರಿಕ್ತವಾಗಿರುವ ವಿಷಯಗಳು ಸುಖಿಕರವಾಗಿರುವದು ಕರ್ಮಕೃತವೇ ; ಆದ್ದರಿಂದಲೇ[4] ಆ (ಸುಖಿಗಳು) ಅಲ್ಪವೂ ಅಸ್ಥಿರವೂ ಆಗಿರುತ್ತವೆ. ಪರಮಪುರುಷನೊಬ್ಬನೇ ತಾನೇ ಸುಖಿವಾಗಿರುತ್ತಾನೆ ; ಆದ್ದರಿಂದ ಆ (ಸುಖಿವೇ) ಸ್ಥಿರವೂ ಅನವಧಿಕಾತಿಶಯವೂ ಆಗಿರುತ್ತದೆ. 'ಬ್ರಹ್ಮವು ಸುಖಿವು, ಬ್ರಹ್ಮವು ಆಕಾಶವು' (ಛಾಂ.೪-೧೦-೫), 'ಬ್ರಹ್ಮವು ಆನಂದವು' (ತೈ. ೩-೬) 'ಬ್ರಹ್ಮವು ಸತ್ಯವೂ, ಜ್ಞಾನವೂ, ಅನಂತವೂ' (ತೈ.ಆ.೨-೧) ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ).

---

1. 'ಮನಃ ಪ್ರೀತಿಕರಃ ಸ್ವರ್ಗೋ ನರಕಸ್ತದ್ವಿಪರ್ಯಯಃ ।' ಎಂದು ಪೂರ್ವಾರ್ಧ.
2. 'ವ್ಯವಸ್ಥಾಮ್' ಎಂಬ ಕಾ॥ ಪಾಠವು ಸರಿಯಲ್ಲ ; 'ಇತ್ಯವ್ಯವಸ್ಥಾಮ್' ಎಂದು ಬೇಕಾದರೆ ಇರಬಹುದು.
3. 'ಮನಸಃ ಪರಿಣಾಮೋಽಯಂ ಸುಖದುಃಖಾದಿಲಕ್ಷಣಃ ॥' ಎಂದು ಉತ್ತರಾರ್ಧ.
4. ಕರ್ಮಕೃತವಾದ್ದರಿಂದಲೇ.

ಬ್ರಹ್ಮವ್ಯತಿರಿಕ್ತವಾದ ವಸ್ತುವು ಯಾವದೂ ಸ್ವರೂಪದಿಂದ ಸುಖವಲ್ಲ, ಕರ್ಮ ಕೃತವಾಗಿರುವದರಿಂದ (ಆ ಸುಖವು) ಅಸ್ಥಿರವು- ಎಂಬುದನ್ನು ಭಗವಂತನಾದ **ಪರಾಶರನು** ಹೇಳಿರುತ್ತಾನೆ. 'ದ್ವಿಜೋತ್ತಮನೆ,[1] ಪಾಪಪುಣ್ಯಗಳಿಗೆ ನರಕ, ಸ್ವರ್ಗ- ಎಂಬ ಹೆಸರು. ಒಂದೇ ವಸ್ತುವೇ ದುಃಖಕ್ಕೂ ಸುಖಕ್ಕೂ ಹೊಟ್ಟೇಕಿಚ್ಚು ಬರುವ ದಕ್ಕೂ, ಸಿಟ್ಟಿಗೂ ಕಾರಣವಾಗಿರುವದಲ್ಲವೆ? ಹೀಗಿರುವದರಿಂದ ವಸ್ತು ವಸ್ತ್ವಾತ್ಮಕ ವಾಗಿರುವದೆಲ್ಲಿ ಬಂತು ?' (ವಿ.ಪು. ೨-೬-೪೪, ೪೫), ಸುಖ ದುಃಖಾದಿಯಾದ ಒಂದೇ ರೂಪದಿಂದ ವಸ್ತುವು ವಸ್ತುವಾಗಿರುವದೆಲ್ಲಿ ಬಂತು ? ಅದು ಒಂದೇ ರೂಪವಾಗಿ ತೋರುವದು ಪುಣ್ಯಪಾಪಗಳಿಂದಾದದ್ದು- ಎಂದರ್ಥ.

ಹೀಗೆ ಅನೇಕಪುರುಷರ ದೃಷ್ಟಿಯಿಂದ ಒಬ್ಬರಿಗೆ ಸುಖವಾಗಿರುವದೇ ಮತ್ತೊಬ್ಬನಿಗೆ ದುಃಖವಾಗಿರುತ್ತದೆ- ಎಂಬ ಅನವಸ್ಥೆಯನ್ನು ತಿಳಿಸಿ, ಒಬ್ಬ ಪುರುಷ ನಲ್ಲಿಯೂ (ಅದು) ಒಂದೇ ರೂಪದಲ್ಲಿರುವದಿಲ್ಲವೆಂಬುದನ್ನು (ಪರಾಶರರು ಹೀಗೆ) ಹೇಳಿರುತ್ತಾರೆ : 'ಅದೇ ಪ್ರೀತಿಗೆ ಕಾರಣವಾಗಿದ್ದು ಮತ್ತೊಮ್ಮೆ ದುಃಖಕ್ಕೆ ಕಾರಣವಾಗುತ್ತದೆ ; ಅದೇ ಕೋಪಕ್ಕೆ ಕಾರಣವಾಗಿದ್ದು ಮತ್ತೊಮ್ಮೆ ಪ್ರಸನ್ನತೆಗೂ ಕಾರಣವಾಗುತ್ತದೆಯಲ್ಲವೆ? ಆದ್ದರಿಂದ ದುಃಖಾತ್ಮಕವೇ ಎಂಬುದಿಲ್ಲ, ಸುಖಾತ್ಮಕವೇ ಎಂಬುದೂ ಯಾವದೊಂದೂ ಇಲ್ಲ .' (ವಿ.ಪು. ೨-೬-೪೬, ೪೭). ಸುಖದುಃಖಾತ್ಮಕವಾಗಿರುವದೆಂಬುದು ವಸ್ತುವಿಗೆಲ್ಲಕ್ಕೂ ಕರ್ಮಕೃತವಾಗಿರುವದೇ ಹೊರತು ವಸ್ತುವಿನ ಸ್ವರೂಪದಿಂದಾದದ್ದಲ್ಲ. ಆದ್ದರಿಂದ ಕರ್ಮವು ಮುಗಿಯಲು ಅದು ಹೋಗಿಬಿಡುತ್ತದೆ ಎಂದರ್ಥ.

ಇತರ ಸೇವೆಯು ದುಃಖ, ಪರಮಪುರುಷನ ಸೇವೆಯು ಸುಖ

(ಮೂಲ)

೧೦೧. ಯತ್ತು 'ಸರ್ವಂ ಪರವಶಂ ದುಃಖಮ್' (ಮನು.೪-೧೬೦) ಇತ್ಯುಕ್ತಮ್, ತತ್ ಪರಮಪುರುಷವ್ಯತಿರಿಕ್ತಾಂ ಪರಸ್ಪರಶೇಷಿಭಾವಾಭಾವಾತ್ ತದ್ವ್ಯತಿರಿಕ್ತಂ ಪ್ರತಿ ಶೇಷತಾ ದುಃಖಮೇವೇತ್ಯುಕ್ತಮ್ । 'ಸೇವಾಶ್ವವೃತ್ತಿ ರಾಖ್ಯಾತಾ'(ಮನು.೪-೬) ಇತ್ಯತ್ರಾಪಿ ಅಸೇವ್ಯಸೇವಾ ಶ್ವವೃತ್ತಿರೇವೇತ್ಯುಕ್ತಮ್ । 'ಸ ಹ್ಯಾಶ್ರಮ್ಯೈಃ ಸದೋಪಾಸ್ಯಃ ಸಮಸ್ತೈರೇಕ ಏವ ತು' (?) ಇತಿ ಸರ್ವೈರಾತ್ಮಯಾಥಾತ್ಮ್ಯವಿದ್ಭಿಃ ಸೇವ್ಯಃ ಪುರುಷೋತ್ತಮ ಏಕ ಏವ । ಯಥೋಕ್ತಂ

---

1. ಮೈತ್ರೇಯನಿಗೆ ಪರಾಶರರು ಹೇಳಿದ ಮಾತಿದು.

ಭಗವತಾ 'ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ । ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮ ಭೂಯಾಯ ಕಲ್ಪತೇ ॥' (ಗೀ. ೧೪-೨೬) ಇತಿ ॥

(ಅರ್ಥ)

ಇನ್ನು 'ಪರವಶವಾದದ್ದೆಲ್ಲವೂ ದುಃಖವು' (ಮನು.೪-೧೦) ಎಂದಿದೆಯಲ್ಲ, ಅದು ಪರಮಪುರುಷನಿಗಿಂತ ಬೇರೆಯಾದವರಲ್ಲಿ ಒಬ್ಬರಿಗೊಬ್ಬರಿಗೆ ಶೇಷಶೇಷಿ ಭಾವವು ಇಲ್ಲದಿರುವದರಿಂದ[1] ಆ (ಭಗವಂತ)ನಿಗಿಂತ ಬೇರೆಯಾದವನ ವಿಷಯಕ್ಕೆ ಶೇಷನಾಗಿರುವದು ದುಃಖವೇ ಎಂಬ (ಅಭಿಪ್ರಾಯದಿಂದ) ಹೇಳಿದ್ದು. 'ಸೇವೆಯು ನಾಯಿಯ ವೃತ್ತಿಯೆನಿಸುವದು' (ಮನು.೪-೬) ಎಂಬಲ್ಲಿಯೂ ಅಸೇವ್ಯರಾದವರ ಸೇವೆಯು ನಾಯಿಯ ವೃತ್ತಿಯೇ ಎಂದು ಹೇಳಲಾಗಿದೆ. 'ಎಲ್ಲಾ ಆಶ್ರಮಿಗಳಿಂದಲೂ ಯಾವಾಗಲೂ ಆತನೊಬ್ಬನೇ ಸೇವ್ಯನಾದವನು' (?) ಎಂದು ಹೇಳಿರುವದರಿಂದ ಆತ್ಮಯಾಥಾತ್ಮ್ಯವನ್ನರಿತವರೆಲ್ಲರಿಗೂ ಸೇವ್ಯನಾದವನು ಪುರುಷೋತ್ತಮನೊಬ್ಬನೇ. ಹಾಗೆಂದು **ಭಗವಂತನು** ಹೇಳಿರುತ್ತಾನೆ : 'ಮತ್ತು ನನ್ನನ್ನು ಯಾವನು ಅವ್ಯಭಿಚರಿತವಾದ ಭಕ್ತಿಯೋಗದಿಂದ ಸೇವಿಸುತ್ತಿರುತ್ತಾನೋ ಅವನು ಈ ಗುಣಗಳನ್ನು ಪೂರ ದಾಟಿ ಬ್ರಹ್ಮಭಾವಕ್ಕೆ ತಕ್ಕವನಾಗುವನು'[2] (ಗೀ. ೧೪-೨೬).

ಭಕ್ತಿರೂಪಸೇವೆಯನ್ನೇ ಶ್ರುತಿಯಲ್ಲಿ ವೇದನವೆಂದು ಕರೆದಿದೆ

(ಮೂಲ)

೧೦೨. ಇಯಮೇವ ಚ ಭಕ್ತಿರೂಪಾ ಸೇವಾ 'ಬ್ರಹ್ಮವಿದಾಪ್ನೋತಿ ಪರಮ್' (ತೈ.೨-೧), 'ತಮೇವ ವಿದ್ವಾನಮೃತ ಇಹ ಭವತಿ' (ತೈ.ಆ.ಪ್ರ.೩-೧೨), 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ.೩-೨-೯) ಇತ್ಯಾದಿಷು ವೇದನಶಬ್ದೇನಾಭಿಧೀಯತೇ ಇತ್ಯುಕ್ತಮ್ । 'ಯಮೇವೈಷ ವೃಣುತೇ ತೇನ ಲಭ್ಯಃ' (ಮುಂ.೩-೨-೩) ಇತಿ ವಿಶೇಷಣಾತ್ । ಯಮೈವೇಷ ವೃಣುತೇ ಭಗವತಾ ವರಣೀಯತ್ವಂ ಪ್ರತೀಯತೇ । ವರಣೀಯಶ್ಚ ಪ್ರಿಯತಮಃ । ಯಸ್ಯ ಭಗವತಿ ಅನವಧಿಕಾತಿಶಯಾ ಪ್ರೀತಿರ್ಜಾಯತೇ ಸ ಏವ ಭಗವತಃ ಪ್ರಿಯತಮಃ । ತದುಕ್ತಂ ಭಗವತೈವ 'ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ' (ಗೀ.೭-೧೭) ಇತಿ । ತಸ್ಮಾತ್ ಪರಭಕ್ತಿರೂಪಾಪನ್ನಮೇವ ವೇದನಂ ತತ್ತ್ವತೋ ಭಗವತ್ಪ್ರಾಪ್ತಿಸಾಧನಮ್ ।

---

1. ಸ್ವಾಭಾವಿಕವಾದ ಶೇಷಶೇಷಿಭಾವವಿಲ್ಲದ್ದರಿಂದ ಎಂದರ್ಥ. ತಾ॥
2. ಅಮೃತವೂ ಅವ್ಯಯವೂ ಆದ ಆತ್ಮಸ್ವರೂಪವನ್ನು ಕಂಡುಕೊಳ್ಳುವನು.
3. 'ಭಗವದಾದರಣೀಯತ್ವಂ' ಎಂಬ ತೆ॥ ಪಾಠಕ್ಕಿಂತ ಇದೇ ಮೇಲು.
4. 'ಭಗವತಾ' ಕಾ॥

ಯಥೋಕ್ತಂ ಭಗವದ್ದ್ವೈಪಾಯನೇನ[1] ಮೋಕ್ಷಧರ್ಮೇ ಸರ್ವೋಪನಿಷದ್ವ್ಯಾಖ್ಯಾನ ರೂಪಕಮ್- 'ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ ಕಶ್ಚನೈನಮ್ । ಭಕ್ತ್ಯಾ ಚ ಧೃತ್ಯಾ ಚ ಸಮಾಹಿತಾತ್ಮಾ ಜ್ಞಾನಸ್ವರೂಪಂ ಪರಿಪಶ್ಯತೀಹ ।' (ಮೋ.ಧ.ಕುಂ.೨೨೯-೬೮, ೬೯) ಧೃತ್ಯಾ ಸಮಾಹಿತಾತ್ಮಾ ಭಕ್ತ್ಯಾ ಪುರುಷೋತ್ತಮಂ ಪಶ್ಯತಿ ಸಾಕ್ಷಾತ್ಕರೋತಿ, ಪ್ರಾಪ್ನೋತೀತ್ಯರ್ಥಃ । 'ಭಕ್ತ್ಯಾ ತ್ವನನ್ಯಯಾ ಶಕ್ಯಃ' (ಗೀ.೧೧-೫೪) ಇತ್ಯನೇನೈಕಾರ್ಥ್ಯಾತ್ । ಭಕ್ತಿಶ್ಚ ಜ್ಞಾನವಿಶೇಷ ಏವೇತಿ ಸರ್ವಮುಪಪನ್ನಮ್ ॥

(ಅರ್ಥ)

ಈ ಭಕ್ತಿರೂಪವಾದ ಸೇವೆಯೇ[2] 'ಬ್ರಹ್ಮವಿದನು ಪರ(ಗತಿಯನ್ನು) ಪಡೆದುಕೊಳ್ಳುತ್ತಾನೆ' (ತೈ.೨-೧), 'ಆತನನ್ನು ಹಾಗೆ ಅರಿತುಕೊಂಡವನು (ವಿದ್ವಾನ್) ಇಲ್ಲಿ ಅಮೃತನಾಗುತ್ತಾನೆ' (ತೈ.ಆ.೩-೧೨), 'ಬ್ರಹ್ಮವನ್ನು ಅರಿತುಕೊಳ್ಳುತ್ತಾನಾದರೆ (ವೇದ)ಬ್ರಹ್ಮವೇ ಆಗುತ್ತಾನೆ' (ಮುಂ.೩-೨-೯)- ಮುಂತಾದ ಶ್ರುತಿಗಳಲ್ಲಿ ವೇದನಶಬ್ದದಿಂದ ಹೇಳಲ್ಪಟ್ಟಿದೆಯೆಂದು ತಿಳಿಸಿರುತ್ತೇವೆ. 'ಈತನು ಯಾರನ್ನು ವರಿಸುವನೋ ಅವನಿಗೇ ಲಭಿಸುವನು' (ಮುಂ.೩-೨-೯) ಎಂಬ ವಿಶೇಷಣವನ್ನು ಕೊಟ್ಟಿರುವದರಿಂದ (ಇಲ್ಲಿ) 'ಯಾವನನ್ನು ಈತನು ವರಿಸುವನೋ' ಎಂಬುದರಿಂದ ಭಗವಂತನಿಗೆ ವರಣೀಯನಾಗಿರಬೇಕೆಂದು ತೋರುತ್ತದೆ. ಪ್ರಿಯತಮನಾದವನೇ ವರಣೀಯನಾಗುವನು. ಯಾವನಿಗೆ ಭಗವಂತನಲ್ಲಿ ಅನವಧಿಕಾತಿಶಯವಾದ ಪ್ರೀತಿಯುಂಟಾಗಿರುವದೋ ಅವನೇ ಭಗವಂತನಿಗೆ ಪ್ರಿಯತಮನು. ಹಾಗೆಂದು ಭಗವಂತನೇ ಹೇಳಿರುತ್ತಾನೆ : 'ಜ್ಞಾನಿಗೆ ನಾನು ಅತಿಯಾಗಿ ಪ್ರಿಯವಾಗಿರುವೆನಷ್ಟೆ? ಅವನೂ ನನಗೆ ಪ್ರಿಯನು' (ಗೀ.೭-೧೭). **ಆದ್ದರಿಂದ ಪರಭಕ್ತಿಯ ರೂಪವನ್ನು ಪಡೆದ ವೇದನವೇ ನಿಜವಾಗಿ ಭಗವತ್ಪ್ರಾಪ್ತಿಗೆ ಸಾಧನವು.** ಹೀಗೆಂದು ಭಗವಂತನಾದ **ದ್ವೈಪಾಯನನು ಮೋಕ್ಷಧರ್ಮದಲ್ಲಿ** ಸರ್ವೋಪನಿಷದ್ವ್ಯಾಖ್ಯಾನರೂಪವಾಗಿ ಹೇಳಿರುತ್ತಾನೆ : 'ಈತನ ರೂಪವು ನೋಟಕ್ಕೆ (ಸಿಕ್ಕುವಂತೆ) ಇರುವದಿಲ್ಲ, ಚಕ್ಷುಸ್ಸಿನಿಂದ ಯಾವನೂ ಈತನನ್ನು ಕಾಣಲಾರನು. ಭಕ್ತಿಯಿಂದಲೂ ಧೃತಿಯಿಂದಲೂ ಅಂತಃಕರಣವನ್ನು ಸಮಾಧಾನಗೊಳಿಸಿಕೊಂಡವನು ಜ್ಞಾನಸ್ವರೂಪನಾದ

---

1. 'ಭಗವತಾ ದ್ವೈಪಾಯನೇನ' ಕಾ॥

2. 'ಭಜ ಇತ್ಯೇಷ ಧಾತುರ್ವೈ ಸೇವಾಯಾಂ ಪರಿಕೀರ್ತಿತಃ । ತಸ್ಮಾತ್ ಸೇವಾ ಬುಧೈಃ ಪ್ರೋಕ್ತಾ ಭಕ್ತಿಶಬ್ದೇನ ಭೂಯಸೀ ॥' ಎಂದು ಭಗವದ್ಬೌಧಾಯನವಚನವಿದೆ; 'ಸೇವಾ, ಭಕ್ತಿ, ಉಪಾಸ್ತಿಃ' - ಎಂದು ನಿಘಂಟು. ತಾ॥

(ಆತನನ್ನು) ಇಲ್ಲಿ ಕಾಣುವನು' (ಮೋ.ಧ.೨೨೯- ೬೮, ೬೯), ಧೃತಿಯಿಂದ[1] ಸಮಾಹಿತಾತ್ಮನಾದವನು ಭಕ್ತಿಯಿಂದ ಪುರುಷೋತ್ತಮನನ್ನು ಕಾಣುವನು, ಸಾಕ್ಷಾತ್ಕರಿಸಿಕೊಳ್ಳುವನು, ಪಡೆದುಕೊಳ್ಳುವನು- ಎಂದರ್ಥ. ಏಕೆಂದರೆ '(ಹೀಗಾದರೆ) ಅನನ್ಯವಾದ ಭಕ್ತಿಯಿಂದಲಾದರೆ (ಕಾಣುವದಕ್ಕೆ) ಶಕ್ಯನು' (ಗೀ.೧೧-೫೪) ಎಂಬೀ ವಾಕ್ಯಕ್ಕೆ ಹೊಂದುಗಡೆಯಾಗುತ್ತದೆ. ಭಕ್ತಿಯೆಂಬುದು ಜ್ಞಾನವಿಶೇಷವೇ[2] ಆದ್ದರಿಂದ ಎಲ್ಲವೂ ಹೊಂದಿಕೊಳ್ಳುತ್ತದೆ.

ಸಮಾಪ್ತಿಶ್ಲೋಕ

ಸಾರಾಸಾರವಿವೇಕಜ್ಞಾ ಗರೀಯಾಂಸೋ ವಿಮತ್ಸರಾಃ ।
ಪ್ರಮಾಣತನ್ತ್ರಾಃ ಸನ್ತೀತಿ ಕೃತೋ ವೇದಾರ್ಥಸಂಗ್ರಹಃ ॥

(ಅರ್ಥ)

ಸಾರಾಸಾರಗಳನ್ನು ವಿಂಗಡಿಸಿ ತಿಳಿದುಕೊಳ್ಳಬಲ್ಲವರೂ ದೊಡ್ಡವರೂ[3] ಮಾತ್ಸರ್ಯರಹಿತರೂ ಪ್ರಮಾಣಕ್ಕೆ ಅಧೀನರೂ[4] ಆದವರು ಇದಾರೆಂದು ಭಾವಿಸಿಕೊಂಡು (ಈ) **ವೇದಾರ್ಥಸಂಗ್ರಹ**ವನ್ನು ರಚಿಸಲಾಗಿದೆ.

ಇತಿ ಶ್ರೀಭಗವದ್ರಾಮಾನುಜಾಚಾರ್ಯವಿರಚಿತೋ ವೇದಾರ್ಥಸಂಗ್ರಹಃ ಸಮಾಪ್ತಃ

ಇಂತು ಶ್ರೀ ಭಗವದ್ರಾಮಾನುಜಾಚಾರ್ಯರಿಂದ ವಿರಚಿತವಾದ
ವೇದಾರ್ಥಸಂಗ್ರಹವು ಸಮಾಪ್ತವಾಯಿತು.



1. ಇದು ಶಮದಮಾದಿಗಳಿಗೂ ಉಪಲಕ್ಷಣ. ತಾ॥
2. ಭಕ್ತಿಯೆಂದರೆ ಪ್ರೀತಿಯು, ಪ್ರೀತಿಯೆಂಬುದು ಜ್ಞಾನಕ್ಕಿಂತ ಬೇರೆಯಲ್ಲ, ಭಕ್ತಿಯೆಂಬುದು ಜ್ಞಾನವಿಶೇಷವೇ ; ಆದ್ದರಿಂದ ಅದನ್ನು ವೇದನಾದಿಶಬ್ದಗಳಿಂದ ಕರೆದಿದೆ ಎಂಬುದು ಹೊಂದುತ್ತದೆ.
3. ಅನೇಕ ಶಾಸ್ತ್ರಗಳನ್ನು ತಿಳಿದವರೂ.
4. ಪ್ರಮಾಣಗಳನ್ನು ತಮ್ಮ ಇಚ್ಛೆಗೆ ಅನುಸಾರವಾಗಿ ಜಗ್ಗುವವರಲ್ಲ.

ಪ್ರಮಾಣವಚನಗಳ ಅಕ್ಷರಾನುಕ್ರಮಣಿಕೆ

ಓದುಗರಿಗೆ : ಈ ಅನುಕ್ರಮಣಿಕೆಯಲ್ಲಿ ಪ್ರಮಾಣಗಳ ಆಕರಗ್ರಂಥಗಳ ಸ್ಥಾನಸೂಚಕಸಂಖ್ಯೆಗಳನ್ನು ಪರಿಶೀಲಿಸಿ ಬರೆದಿದೆ. ಪುಟಸಂಖ್ಯೆಗಳಲ್ಲಿ ಬೇರೆ ಸಂಖ್ಯೆಯಿದ್ದರೆ ಇದರಂತೆ ದಯವಿಟ್ಟು ತಿದ್ದಿಕೊಳ್ಳಬೇಕು.

ಅ ಇತಿ ಬ್ರಹ್ಮ (?) ೧೩೩
ಆಕಾರೋ ವೈ ಸರ್ವಾ ವಾಕ್ (ಐ.ಆ.೨-೩-೬), ೧೩೩
ಅಕ್ಷರಾಣಾಮಕಾರೋಽಸ್ಮಿ (ಗೀ.೧೦-೩೩), ೧೩೩
ಅಗ್ನೇಃ ಶಿವಸ್ಯ ಮಾಹಾತ್ಮ್ಯಮ್ (ಮಾ.ಪು.೨೯೦-೧೪,೧೫), ೧೨೧
ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಮ್ (ಶ್ವೇ.೪-೫), ೮೭
ಅಜಾಯಮಾನೋ ಬಹುಧಾ (ತೈ.ಆ.೩-೧೩), ೧೫೦
ಅಜ್ಞಸ್ಯೈವ ವಿಶ್ವಸೃಜೋ ರೂಪಮ್ (ದ್ರ.ಭಾ.), ೨೦೧
ಅಣೋರಣೀಯಾನ್ (ತೈ.ನಾ.೧೨), ೧೩೨
ಅಥ ತಸ್ಯ ಭಯಂ ಭವತಿ (ತೈ.೨-೭), ೧೭೮
ಅಥ ನಾಮಧೇಯಮ್ (ಬೃ.೨-೩-೬), ೪೫
ಅಥ[1] ಯ ಇಹಾಽಽತ್ಮಾನಮ್ (ಛಾಂ.೮-೧-೬), ೧೩೬
ಅಥ ಯದಿದಮಸ್ಮಿನ್ (ಛಾಂ. ೮-೧-೧), ೧೩೫
ಅಥ ಸೋಽಭಯಂ ಗತೋ ಭವತಿ (ತೈ. ೨-೭), ೧೭೮
ಅಥಾತ ಆದೇಶೋ ನೇತಿ ನೇತಿ (ಬೃ.೨-೩-೬) ೪೫
ಅದ್ಭ್ಯಃ ಸಂಭೂತೋ (ತೈ.ನಾ.೩), ೧೨೫
ಅಧಿಕಾರೋಽನುಪಾಯತ್ವಾತ್ (ಪರಾಶರಭಟ್ಟಾಚಾರ್ಯರು), ೬೧
ಅನೇನ ಜೀವೇನಾಽಽತ್ಮನಾ (ಛಾಂ.೬-೩-೨), ೨೨, ೭೯
ಅನೇನ ಸರ್ವಗತತ್ವಂ (ವೇ.ಸೂ.೩-೨-೩೬), ೧೫೦
ಅನ್ತಃ ಪ್ರವಿಷ್ಟಃ ಶಾಸ್ತಾ (ತೈ.ಆ.೩-೧೧), ೨೦,೭೯, ೧೦೪
ಅನ್ತಸ್ತದ್ಧರ್ಮೋಪದೇಶಾತ್ (ವೇ.ಸೂ.೧-೧-೨೧), ೧೯೮
ಅಪ ಏವ ಸಸರ್ಜಾದೌ (ಮನು. ೧-೮), ೧೫೦
ಅಪಕ್ಷಯವಿನಾಶಾಭ್ಯಾಂ (ವಿ.ಪು.೧-೨-೧೧), ೧೪೩
ಅಪಹತಪಾಪ್ಮಾ (ಛಾಂ. ೮-೧-೫, ೮-೭-೧), ೯, ೧೦೩, ೧೯೩, ೧೯೯
ಅಪಿಪಾಸಃ (ಛಾಂ. ೮-೧-೫,೮-೭-೧), ೧೯೩
ಅಯನಂ ತಸ್ಯ ತಾಃ ಪೂರ್ವಮ್ (ಮನು.೧-೧೦), ೧೫೦
ಅಯಮಾತ್ಮಾ ಬ್ರಹ್ಮ (ಬೃ.೨-೫-೧೯), ೩
ಅವಿದ್ಯಾ ಕರ್ಮಸಂಜ್ಞಾನ್ಯಾ (ವಿ.ಪು.೬-೭-೬೧, ೬೨), ೫೩, ೧೯೦
ಅವ್ಯಕ್ತಾದಿ ವಿಶೇಷಾನ್ತಂ (ಮೋ.ಧ.ಕುಂ.೨೦೬-೫೮), ೪೯
ಅಸದೇವೇದಮಗ್ರ ಆಸೀತ್ (ಛಾಂ.೬-೨-೧), ೪೧
ಅಸ್ಮಾನ್ಮಾಯಿ ಸೃಜತೇ (ಶ್ವೇ. ೪-೯) ೮೭
ಅಸ್ಯೇಶಾನಾ ಜಗತೋ ವಿಷ್ಣುಪತ್ನೀ (ತೈ.ಸ. ೪-೪-೧೨-೫) ೧೮೩, ೨೦೩
ಅಹಂ ಹಿ ಸರ್ವಯಜ್ಞಾನಾಮ್ (ಗೀ. ೯-೨೪) ೧೭೩
ಅಹಂ ಕೃತ್ಸ್ನಸ್ಯ ಜಗತಃ (ಗೀ. ೭-೬), ೧೩೩
ಅಹಮಾತ್ಮಾ ಗುಡಾಕೇಶ (ಗೀ. ೧೦-೨೦) ೮೦
ಆತ್ಮಾ ಜ್ಞಾನಮಯೋಽಮಲಃ (ವಿ.ಪು.೬-೭-೨೨), ೨೧೯
ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ (ಐ.೧-೧), ೧೨೫
ಆತ್ಮೇತಿ ತೂಪಗಚ್ಛನ್ತಿ (ವೇ.ಸೂ.೪-೧-೩), ೧೩೯
ಆತ್ಮೇತ್ಯೇವ ತು ಗೃಹ್ಣೀಯಾತ್ (ವಾಕ್ಯ), ೧೩೯
ಆದಿತ್ಯವರ್ಣಮ್ (ತೈ.ಆ.೩-೧೨),೨೦೩, ೨೦೪

1. 'ತದ್ಯ ಇಹಾತ್ಮಾಽಽನಮ್' ಎಂದು ಅಚ್ಚಿನ ಪಾಠ.

ಆನನ್ದೋ ಬ್ರಹ್ಮ (ತೈ. ೩-೬), ೪೪, ೨೨೦
ಆಸುರೀಂ ಯೋನಿಮಾಪನ್ನಾ (ಗೀ. ೧೬-೨೦), ೧೭೯
ಇಯಾಜ ಸೋಽಪಿ ಸುಬಹೂನ್ (ವಿ.ಪು. ೬-೬-೧೨), ೧೧೬
ಇಷ್ಟಾಪೂರ್ತಂ ಬಹುಧಾ ಜಾತಮ್ (ತೈ.ನಾ.೨), ೧೭೨
ಇಹೈವ ತೈರ್ಜಿತಃ ಸರ್ಗೋ (ಗೀ. ೫-೧೯), ೯೭
ಉಪಪತ್ತೇಶ್ಚ (ವೇ.ಸೂ.೩-೨-೩೪), ೧೫೦
ಉಭಯಪರಿಕರ್ಮಿತ... (ಆ.ಸಿ.ಪು.೫), ೧೧೫
ಋಣಂ ಹ ವೈ ಜಾಯತೇ (ಶತ.ಬ್ರಾ.೧-೭-೨-೧), ೧೫೮
ಋತಧಾಮಾ ವಸುಃ ಪೂರ್ವಃ (ರಾ.ಯುದ್ಧ. ೧೧೭-೭), ೨೧೧
ಋಷಯಃ ಪಿತರೋ ದೇವಾಃ (ಮ.ಭಾ.ಆನು.೧೪೯-೧೩೮), ೧೪೨
ಏಕತ್ವೇ ಸತಿ ನಾನಾತ್ವಂ (?), ೧೦೦
ಏಕಃ ಸನ್ ಬಹುಧಾ (ತೈ.ಆ.೩-೧೧), ೧೦೪
ಏಕಮೇವ (ಛಾಂ. ೬-೨-೧), ೧೨
ಏಕಾನ್ತಿನಃ ಸದಾ (ವಿ.ಪು.೧-೬-೩೯), ೧೯೬
ಏಕೋ ದೇವೋ ಬಹುಧಾ (ತೈ. ಆ. ೩-೧೪), ೯೩
ಏಕೋ ಹ ವೈ ನಾರಾಯಣ (ಮಹೋ.೧), ೧೨೫
ಏತಸ್ಯ ವಾ ಅಕ್ಷರಸ್ಯ (ಬೃ.೩-೮-೯), ೧೨, ೧೭೮
ಏತೇ ವೈ ನಿರಯಾಸ್ತಾತ (ಮೋ.ಧ. ೧೯೮-೧೧), ೪೯
ಏತೌ ದ್ವಾ ವಿಬುಧಶ್ರೇಷ್ಠೌ (ಮೋ.ಧ. ?), ೧೩೯
ಏನಮೇಕೇ ವದನ್ತ್ಯಗ್ನಿಮ್ (ಮನು. ೧೨-೧೨೩), ೯೩, ೨೧೧
ಏವಂಪ್ರಕಾರಮಮಲಂ (ವಿ.ಪು.೧-೨೨-೫೩), ೫೦
ಏವಮೇಷ ಮಹಾಶಬ್ದೋ[1] (ವಿ.ಪು.೬-೫-೭೬), ೪೯
ಏಷ ಏವ ಸಾಧು ಕರ್ಮ (ಕೌ.೩-೯) ೧೧೨
ಏಷ ತ ಆತ್ಮಾ (ಬೃ.೩-೭-೩, ೩-೭-೨೩), ೧೦೪
ಏಷ ಸರ್ವಭೂತಾನ್ತರಾತ್ಮಾ (ಮುಂ.೨-೧-೪), ೩
ಏಷ ಹ್ಯೇವಾನನ್ದಯಾತಿ (ತೈ.೨-೭), ೧೭೮
ಐತದಾತ್ಮ್ಯಮಿದಮ್ (ಛಾಂ. ೬-೮-೭... ೬-೧೬-೩ರವರೆಗೆ), ೧೯, ೧೦೩, ೨೧೧
ಔತ್ಪತ್ತಿ ಕಸ್ತು (ಜೈ.ಸೂ.೧-೧-೫) ೨೦೫
ಕಂ ಬ್ರಹ್ಮ ಖಂ ಬ್ರಹ್ಮ (ಛಾಂ. ೪-೧೦-೪) ೨೨೦
ಕತಂ ನು ಭಗವಃ ಸ (ಛಾಂ. ೬-೧-೩) ೧೪
ಕಥಮಸತಃ ಸಜ್ಜಾಯೇತ (ಛಾಂ. ೬-೨-೨) ೪೧
ಕಥಯಾಮಿ ಯಥಾ ಪೂರ್ವಂ (ವಿ.ಪು.೧-೨-೮) ೧೨೨
ಕಲಾಮುಹೂರ್ತಾದಿಮಯಶ್ಚ (ವಿ.ಪು.೪-೧-೮೪) ೫೦, ೧೯೬
ಕಶ್ಚ ಧ್ಯೇಯಃ (ಅ.ಶಿಖಾ. ೩) ೧೨೯
ಕಾರೀರ್ಯಾ ವೃಷ್ಟಿ ಕಾಮೋ ಯಜೇತ (?) ೧೬೩
ಕಾರ್ಯಾಣಾಂ ಕಾರಣಂ ಪೂರ್ವಂ (ಜಿತಂ ತೇ. ೪-೭),[2] ೯೩
ಕಾಲಃ ಸಂಪಚ್ಯತೇ ತತ್ರ (ಮೋ.ಧ. ೧೯೮-೯),[3] ೪೯, ೧೯೬
ಕಿಂ ತದತ್ರ ವಿದ್ಯತೇ (ಛಾಂ. ೮-೧-೨), ೧೩೬
ಕಿಂ ಸ್ವಿದ್ವನಮ್... ಬ್ರಹ್ಮ ವನಂ (ತೈ. ಬ್ರಾ. ೨-೮-೯-೭೬, ೭೭), ೩೮
ಕುತಸ್ತು ಖಲು ಸೋಮ್ಯೈವಂ ಸ್ಯಾತ್ (ಛಾಂ. ೬-೨-೨), ೪೧
ಕುತಃ ಸೃಷ್ಟಮಿದಂ (ಮೋ.ಧ. ಕುಂ. ೧೮೦-೧) ೧೪೨
ಕೃತಿಸಾಧ್ಯಂ ಪ್ರಧಾನಂ ಯತ್ (?), ೧೬೭
ಕೃಷ್ಣ ಏವ ಹಿ ಲೋಕಾನಾಂ (ಮ.ಭಾ. ಸಭಾ. ೩೮-೨೩), ೪೯
ಕ್ರೀಡತೋ ಬಾಲಕಸ್ಯೇವ (ವಿ.ಪು. ೧-೨-೧೮) ೫೦
ಕ್ಷಯನ್ತಮಸ್ಯ ರಜಸಃ ಪರಾಕೇ (ತೈ.ಸಂ. ೨-೨-೧೨, ಋ. ೭-೬-೧೦೦-೫), ೧೮೩, ೧೮೮, ೧೯೦, ೨೦೩
ಕ್ಷೇತ್ರಜ್ಞಸ್ಯೇಶ್ವರಜ್ಞಾನಾತ್ (ಯಾ.ಸ್ಮೃ.?) ೫೦

1. 'ಮಹಾಞ್ಶಬ್ದೋ' ಅಚ್ಚಿನ ಪಾಠ.
2. ಈ ಗ್ರಂಥದ ವಿಷಯಕ್ಕೆ ಪೀಠಿಕೆಯನ್ನು ನೋಡಿ.
3. 'ಕಾಲಂ ಸ ಪಚತೇ ತತ್ರ' ಎಂದು ಮುದ್ರಿತಪುಸ್ತಕಗಳ ಪಾಠವು ಭಾರತದಲ್ಲಿಲ್ಲ.

ಗೌರನಾದ್ಯನ್ತವತೀ ಸಾ (ಮಂ.೫) ೮೭
ಚತುರ್ಹೋತಾರೋ ಯತ್ರ
(ತೈ.ಆ.೩-೧೧), ೧೭೩
ಜಗಚ್ಚಸಃ (ವಿ.ಪು.೧-೧-೩೧), ೧೪೭
ಜಗತ್ಸರ್ವಂ ಶರೀರಂ ತೇ
(ರಾ. ಯುದ್ಧ. ೧೨೦-೨೬), ೮೦
ಜಗದೇತನ್ಮಹಾಶ್ಚರ್ಯಂ (ವಿ.ಪು.೫-೧೯-೭), ೧೦೦
ಜನ್ಮಾದ್ಯಸ್ಯ ಯತಃ (ವೇ.ಸೂ.೧-೧-೨), ೧೨೪, ೧೪೦, ೧೪೨, ೧೫೦
ಜ್ಞಾಜ್ಞೌ ದ್ವಾವಜಾವೀಶಾನೀಶೌ (ಶ್ವೇ.೧-೯), ೮೦
ಜ್ಞಾನಶಕ್ತಿಬಲೈಶ್ವರ್ಯ(ವಿ.ಪು. ೬-೫-೭೯), ೪೯
ಜ್ಯೋತೀಂಷಿ ವಿಷ್ಣುಃ (ವಿ.ಪು.೨-೧೨-೩೮),.೨೧೧.
ಜ್ಯೋತೀಂಷಿ ಶುಕ್ರಾಣಿ ಚ (?), ೨೧೧
ತ ಇಮೇ ಸತ್ಯಾಃ ಕಾಮಾಃ (ಛಾಂ.೮-೩-೧), ೧೯೦
ತತೋ ಯದುತ್ತರತರಂ
(ಶ್ವೇ.೩-೧೦), ೧೨೪ ೧೨೯
ತತ್ತ್ವಮಸಿ (ಛಾಂ. ೬-೮-೭)
೬, ೧೯, ೧೦೮, ೧೧೦
ತತ್ರ ಪೂಜ್ಯಪದಾರ್ಥೋಕ್ತಿ
(ವಿ.ಪು.೬-೫-೭೭), ೪೯
ತತ್ಸತ್ಯಮ್ (ಛಾಂ. ೬-೮-೭) ೨೫
ತತ್ಸರ್ವಂ ವೈ ಹರೇಸ್ತನುಃ
(ವಿ.ಪು.೧-೨೨-೩೮), ೧೪೮
ತತ್ಸೃಷ್ಟ್ವಾ ತದೇವಾನುಪ್ರಾವಿಶತ್
(ತೈ.೨-೬), ೭೯
ತಥಾನ್ಯಪ್ರತಿಷೇಧಾತ್
(ವೇ.ಸೂ.೩-೨-೩೫), ೧೫೦
ತದಕ್ಷರೇ ಪರಮೇ ವ್ಯೋಮನ್
(ತೈ.ನಾ.೧), ೧೮೮, ೧೯೦
ತದೇವ ಪ್ರೀತಯೇ ಭೂತ್ವಾ
(ವಿ.ಪು.೨-೬-೪೬, ೪೭), ೨೨೦
ತದೇವ ಭೂತಂ ತದು ಭವ್ಯಮಾ
(ತೈನಾ.೧), ೧೮೩
ತದೇವ ಸರ್ವಮೇವೈತತ್
(ವಿ.ಪು.೧-೨-೧೪), ೧೪೩
ತದೇವಾಗ್ನಿಸ್ತದ್ವಾಯು (ತೈ.ನಾ.೨), ೧೭೩
ತದೈಕ್ಷತ ಬಹು ಸ್ಯಾಂ (ಛಾಂ. ೬-೨-೩),
೯, ೧೭, ೨೦, ೩೦
ತದ್ಗುಣಸಾರತ್ವಾತ್ತು (ವೇ.ಸೂ. ೨-೩-೨೯),೨೬
ತದ್ಗುಣಾಸ್ತು ವಿಧೀಯೇರನ್
(ಜೈ.ಸೂ.೧-೪-೯), ೧೮೩
ತದ್ಧರ್ಮೋಪದೇಶಾತ್
(ವೇ.ಸೂ.೧-೧-೨೧), ೧೯೮
ತದ್ಬ್ರಹ್ಮ ಪರಮಂ ನಿತ್ಯಂ
(ವಿ.ಪು.೧-೨-೧೩) ೧೪೩
ತದ್ವಿಪ್ರಾಸೋ ವಿಪನ್ಯವೋ
(ಋ.೧-೫-೨೨-೨೧) ೧೯೧, ೧೯೧
ತದ್ವಿಷ್ಣೋಃ ಪರಮಂ ಪದಂ
(ಸು.೬ ಋ.೧-೫-೨೨-೨೦)
೧೮೩, ೧೮೮, ೧೮೯
ತದ್ವಿಸೃಷ್ಟಃ ಸ ಪುರುಷಃ (ಮನು.೧-೧೧), ೧೫೦
ತಮಸಃ ಪರಮೋ ಧಾತಾ
(ರಾ.ಯುದ್ಧ. ೧೧೪-೧೫), ೧೯೫
ತಮಸಃ ಪರಸ್ತಾತ್ (ತೈ.ಆ.೩-೧೩), ೨೦೩
ತಮಾದೇಶಮಪ್ರಾಕ್ಷ್ಯೇ (ಛಾಂ.೬-೧-೩)೧೬
ತಮೀಶ್ವರಾಣಾಂ ಪರಮಂ (ಶ್ವೇ.೬-೭), ೧೦೪
ತಮೇತಂ ವೇದಾನುವಚನೇನ
(ಬೃ.೪-೪-೨೨), ೩
ತಮೇವಂ ವಿದ್ವಾನ್ (ತೈ.ಆ.೩-೧೨),
೩, ೧೧೬, ೨೨೨
ತಮೇವ ಭಾನ್ತಮ್
(ಮುಂ.೨-೨-೧೦, ಕಾ.೨-೨-೧೫), ೨೨೪
ತಮೇವ ವಿದಿತ್ವಾ (ಶ್ವೇ. ೩-೮), ೧೫೦, ೧೫೯
(ಮೋ.ಧ. ೨೫೧-೫), ೧೩೯
ತಯಾ ತಿರೋಹಿತತ್ವಾಚ್ಚ
(ವಿ.ಪು.೬-೭-೬೩), ೫೩, ೧೯೦
ತವಾನ್ತರಾತ್ಮಾ ಮಮ ಚ
ತಸ್ಮಾದ್ಬ್ರಾಹ್ಮಣಾಯ ನಾಪಗುರೇತ
(ತೈ.ಸಂ.೨-೬-೧೦), ೧೭೭
ತಸ್ಮಿನ್[1] ಕಾಮಾಃ ಸಮಾಹಿತಾಃ
(ಛಾಂ.೮-೧-೫), ೧೩೫
ತಸ್ಮಿನ್ ಜಜ್ಞೇ ಸ್ವಯಂ ಬ್ರಹ್ಮಾ
(ಮನು.೧-೯), ೧೫೦

1. ಅಚ್ಚಾಗಿರುವ ವೇ.ಸಂ. ಪುಸ್ತಕಗಳಲ್ಲೆಲ್ಲ 'ತಸ್ಮಿನ್' ಎಂದಿದೆ; ಉಪನಿಷತ್ತಿನಲ್ಲಿ 'ಅಸ್ಮಿನ್' ಎಂದಿದೆ.

ತಸ್ಮಿನ್ಯದನ್ತ ಇತಿ (ವಾಕ್ಯ.), ೧೩೬
ತಸ್ಮಿನ್ಯದನ್ತಸ್ತತ (ಛಾಂ. ೮-೧-೧), ೧೨೫
ತಸ್ಯ ತಾವದೇವ ಚಿರಂ (ಛಾಂ. ೬-೧೪-೨), ೧೦೮
ತಸ್ಯಾಜ್ಞಯಾ ಧಾವತಿ (ದ್ರ. ಭಾ.), ೧೭೮
ತಾನಹಂ ದ್ವಿಷತಃ ಕ್ರೂರಾನ್
(ಗೀ.೧೬-೧೯, ೨೦), ೧೭೯
ತೇಜೋಬಲೈಶ್ವರ್ಯ
(ವಿ.ಪು.೬-೫-೮೫), ೧೪೩
ತೇಷಾಂ ಸತತಯುಕ್ತಾನಾಂ (ಗೀ.೧೦-೧೦),
೧೧೩
ತೇಷಾಮೇವಾನುಕಮ್ಪಾರ್ಥಂ (ಗೀ.೧೦-೧೧),
೧೧೩
ತೈಜಸಾನೀನ್ದ್ರಿಯಾಣ್ಯಾಹುಃ
(ವಿ.ಪು.೧-೨-೪೬, ೪೭), ೬೮
ತೌ ತು[1] ಮೇಧಾವಿನೌ ದೃಷ್ಟ್ವಾ
(ರಾ.ಬಾಲ.೪-೬), ೧೯೫
ತ್ವಂ ಯಜ್ಞಸ್ತ್ವಂ ವಷಟ್ಕಾರಃ
(ರಾ. ಯುದ್ಧ. ೧೨೦-೨೦), ೨೧೧
ದಹರೋಽಸ್ಮಿನ್ನನ್ತರಾಕಾಶಃ(ಛಾಂ.೮-೧-೨),೧೩೫
ದಿವ್ಯಂ ಸ್ವಾನಮಜರಂ (ಮ. ಭಾ ?) ೧೯೬
ದೇವತ್ವೇ ದೇವದೇಹೇಯಂ
(ವಿ.ಪು.೧-೯-೧೪೫), ೧೯೬
ದೈವೀ ಹ್ಯೇಷಾ ಗುಣಮಯಿಾ
(ಗೀ. ೭-೧೪), ೯೮
ದ್ವಾವಿಮೌ ಪುರುಷೌ... ಉತ್ತಮಃ
(ಗೀ. ೧೫-೧೬, ೧೭), ೪೯
ದ್ವಾ ಸುಪರ್ಣಾ ಸಯುಜಾ
(ಮುಂ.೩-೧-೧, ಶ್ವೇ. ೪-೬), ೭೯
ದ್ವೇ ವಾವ ಬ್ರಹ್ಮಣೋ ರೂಪೇ (ಬೃ.೨-೩-೧),
೪೫
ನ ಕರ್ಮಾವಿಭಾಗಾದಿತಿ ಚೇತ್
(ವೇ.ಸೂ.೨-೧-೩೫), ೮೭
ನ ಚಕ್ಷುಷಾ ಗೃಹ್ಯತೇ (ಮುಂ.೩-೧-೮), ೨೦೧
ನ ತದಸ್ತಿ ಪೃಥಿವ್ಯಾಂ (ಗೀ.೧೮-೪೦), ೧೨೧
ನ ತಸ್ಯೇಶೇ ಕಶ್ಚನ (ತೈ.ನಾ.೨), ೧೨೫, ೧೨೯
ನತಾಃ ಸ್ಮ ಸರ್ವವಚಸಾಂ
(ವಿ.ಪು.೧-೧೪-೨೩), ೯೩
ನ ಭೂತಸಂಘಸಂಸ್ಥಾನೋ
(ಮೋ. ಧ. ಕುಂ.೨೦೬-೬೦), ೧೪೯
ನ ಮಯಿಡತ್ರ (ದ್ರ. ಭಾ.), ೨೦೧
ನರಕಸ್ವರ್ಗಸಂಜ್ಞೇ ವೈ
(ವಿ.ಪು.೨-೬-೪೪, ೪೫), ೨೨೦
ನ ಸಂದೃಶೇ ತಿಷ್ಠತಿ
(ಮೋ. ಧ. ಕುಂ.೨೨೯-೬೮, ೨೨೩
ನ ಸನ್ನ ಚಾಸಚ್ಚಿವ ಏವ
(ಶ್ವೇ. ೪-೧೮), ೧೨೪, ೧೩೦
ನಾತ್ಮಾ ಶ್ರುತೇರ್ನಿತ್ಯತ್ವಾಚ್ಚ
(ವೇ.ಸೂ.೨-೩-೧೮), ೮೭
ನಾನ್ಯಃ ಪನ್ಥಾ ಅಯನಾಯ
(ತೈ. ಆ.೩-೧೨-೧೭), ೯೮, ೧೪೦
ನಾಮ ರೂಪಂ ಚ ಭೂತಾನಾಂ
(ವಿ.ಪು.೧-೫-೬೪), ೨೩
ನಾಮರೂಪೇ ವ್ಯಾಕರವಾಣಿ
(ಛಾಂ. ೬-೩-೨) ೨೨
ನಾಯಮಾತ್ಮಾ ಪ್ರವಚನೇನ
(ಮುಂ.೩-೨-೩, ಕಾ.೧-೨-೨೩), ೧೧೬
ನಾರಾಯಣೋ ಜಗನ್ಮೂರ್ತಿಃ
(ಮೋ. ಧ. ಕುಂ.೧೮೦-೧೧, ೧೨), ೧೪೨
ನಿತ್ಯೋ ನಿತ್ಯಾನಾಂ (ಶ್ವೇ. ೬-೧೩), ೭೯
ನಿತ್ಯೈವೈಷಾ ಜಗನ್ಮಾತಾ
(ವಿ.ಪು.೧-೮-೧೭), ೧೯೬
ನಿದಿಧ್ಯಾಸಿತವ್ಯಃ(ಬೃ.೨-೪-೫, ೪-೫-೬), ೧೧೬
ನಿಯತಂ ಕುರು ಕರ್ಮತ್ವಂ (ಗೀ.೩-೮), ೧೭೮
ನಿಯೋಜ್ಯಃ ಸ ಚ (?), ೧೭೦
ನಿರಞ್ಜನಮ್ (ಶ್ವೇ.೬-೧೯), ೧೧
ನಿರವದ್ಯಮ್ ನಿರಞ್ಜನಮ್ (ಶ್ವೇ.೬-೧೯),೧೦೩
ನಿರ್ಗುಣಮ್ (ಶ್ವೇ.೬-೧೧? ಮಂ.೨), ೧೦೩
ನಿರ್ವಾಣಮಯ ಏವಾಯಂ
(ವಿ.ಪು.೬-೭-೨೨), ೯೭
ನಿರ್ವಿಕಾರಮ್ (?) ೧೦೩
ನಿಷ್ಕಲಂ ನಿಷ್ಕ್ರಿಯಂ (ಶ್ವೇ.೬-೧೯),೧೧, ೧೦೩
ನೀಲತೋಯದಮಧ್ಯಸ್ಥಾ(ತೈ.ನಾ. ೧೩),೧೮೩
ನೇಹ ನಾನಾಸ್ತಿ ಕಿಞ್ಚನ (ಕಾ. ೨-೧-೧೧),
(ಬೃ.೪-೪-೧೯), ೪೬, ೧೦೩
ನೈನಮೂರ್ಧ್ವಂ ನ (ತೈ.ನಾ.೧), ೧೨೫

1. ಆಚ್ಚಿನ ರಾಮಾಯಣದಲ್ಲಿ 'ಸ ತು' ಎಂದಿದೆ.

ಪತಿಂ ವಿಶ್ವಸ್ಯಾತ್ಮೇಶ್ವರಮ್ (ತೈ.ನಾ.೧೩.) ೧೦೪, ೧೨೯, ೧೬೭, ೧೯೯, ೨೧೯
ಪರಃ ಪರಾಣಾಮ್ (ವಿ.ಪು.೧-೨-೧೦...೧೪), ೧೪೩
ಪರಮತಃ ಸೇತೂನ್ಮಾನ (ವೇ.ಸೂ.೩-೨-೩೦), ೧೫೦
ಪರಾಸ್ಯ ಶಕ್ತಿಃ (ಶ್ವೇ. ೬-೮), ೨೬, ೨೦೪
ಪುರುಷಃ ಸ ಪರಃ ಪಾರ್ಥ (ಗೀ. ೮-೨೨),೧೧೭
ಪುರುಷ ಏವೇದಂ (ತೈ.ಆ.೩-೧೨), ೧೪೦
ಪೂಃ ಪ್ರಾಣಿನಃ ಸರ್ವ ಏವ (ಆ.ಧ. ೧-೨೨-೪), ೫೦
ಪೃಥಗಾತ್ಮಾನಂ ಪ್ರೇರಿತಾರಂ ಚ (ಶ್ವೇ. ೧-೬), ೭೯, ೧೦೪,೧೦೮
ಪೃಥಿವ್ಯಾಪಸ್ತಥಾ (ವಿ.ಪು.೧-೨-೬೮...೭೦), ೧೪೭
ಪ್ರಕೃತಿಂ ಪುರುಷಂ ಚೈವ (ಗೀ.೧೩-೧೯), ೮೭
ಪ್ರಕೃತಿಂ ಸ್ವಾಮವಷ್ಟಭ್ಯ (ಗೀ. ೯-೮), ೮೭
ಪ್ರಕೃತಿರ್ಯಾ ಮಯಾಽಽಖ್ಯಾತಾ (ವಿ.ಪು.೬-೪-೩೯, ೪೦), ೧೪೩
ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್ (ವೇ.ಸೂ.೧-೪-೨೩), ೮೬, ೧೪೦, ೧೫೦
ಪ್ರಕೃತ್ಯೈತಾವತ್ತ್ವಹಿ(ವೇ.ಸೂ.೩-೨-೨೧), ೪೫
ಪ್ರಕ್ಷಾಲನಾದ್ಧಿ ಪಙ್ಕಸ್ಯ (ಮ.ಭಾ.ವನ.೨-೪೯), ೪೫
ಪ್ರಜಾಪತಿರಕಾಮಯತ (ತೈ.ಬ್ರಾ.೨-೨-೧), ೧೦೪
ಪ್ರಧಾನಕ್ಷೇತ್ರಜ್ಞಪತಿಃ (ಶ್ವೇ.೬-೧೬), ೭೯
ಪ್ರಧಾನಪುಂಸೋರಜಯೋಃ (ವಿ.ಪು.೧-೯-೩೭), ೯೧
ಪ್ರವೃತ್ತಿಂ ಚ ನಿವೃತ್ತಿಂ ಚ (ಗೀ.೧೮-೩೦, ೩೧, ೩೨), ೧೨೨
ಪ್ರಶಾಸಿತಾರಂ ಸರ್ವೇಷಾಮ್ (ಮನು.೧೨-೧೨೨), ೧೨, ೫೦
ಪ್ರಾಣಂ ಮನಸಿ ಸಹ (ಆ.ಶಿಖಾ.),೧೨೪, ೧೨೯
ಪ್ರಾದುರಾಸೀತ್ತಮೋನುದಃ (ಮನು.೧-೬), ೧೫೦
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಂ (ಗೀ.೭-೧೭), ೨೨೩
ಫಲಸಂಬಭಿನ್ತ್ಸಯಾ (ದ್ರ.ಭಾ.), ೧೭೨
ಬಹು ಸ್ಯಾಂ ಪ್ರಜಾಯೇಯ (ಛಾಂ. ೬-೨-೩), ೮೩
ಬುದ್ಧ್ಯರ್ಥಃ ಪಾದವತ್ (ವೇ.ಸೂ.೩-೨-೩೨), ೧೫೦
ಬ್ರಹ್ಮ ವನಂ ಬ್ರಹ್ಮ (ತೈ.ಬ್ರಾ.೨-೮-೯), ೩೮, ೧೪೦
ಬ್ರಹ್ಮ ವಾ ಇದಮ್ (ಬೃ.೧-೪-೧೦?), ೧೨೫
ಬ್ರಹ್ಮವಿದಾಪ್ನೋತಿ ಪರಂ (ತೈ.೨-೧), ೩, ೧೧೬, ೧೨೬, ೧೫೭, ೨೨೨
ಬ್ರಹ್ಮವಿಷ್ಣುರುದ್ರೇನ್ದ್ರಾಃ(ಆ.ಶಿಖಾ. ೩), ೧೨೪
ಬ್ರಹ್ಮವಿಷ್ಣುಶಿವಾತ್ಮಿಕಾಮ್ (ವಿ.ಪು.೧-೨-೬೬), ೧೪೭
ಬ್ರಹ್ಮ ವೇದ ಬ್ರಹ್ಮೈವ (ಮುಂ.೩-೨-೯), ೨೨೨
ಬ್ರಹ್ಮಾದ್ಯತಿಷ್ಮದ್ಭುವನಾನಿ (ತೈ. ಬ್ರಾ. ೨-೮-೯), ೧೪೦
ಭಕ್ತ್ಯಾ ಚ ಧೃತ್ಯಾ ಚ (ಮೋ.ಧ.ಕುಂ.೨೨೯-೬೯), ೨೨೩
ಭಕ್ತ್ಯಾತ್ವನನ್ಯಯಾ ಪಾರ್ಥ(ಗೀ.೧೧-೫೪), ೨೨೩
ಭಕ್ತ್ಯಾ ಮಾಮಭಿಜಾನಾತಿ(ಗೀ.೧೮-೫೫), ೧೧೭
ಭಗವಾಂಸ್ತ್ವೇವ ಮೇ (ಛಾಂ. ೬-೧-೭), ೧೬
ಭಿನ್ನಪ್ರವೃತ್ತಿನಿಮಿತ್ತಾನಾಂ (ಪಾ.ಭಾ.?), ೨೮
ಭೀಷಾಸ್ಮಾದ್ವಾತಃ ಪವತೇ (ತೈ. ೨-೮), ೧೭೮
ಭೂಮಿರಾಪೋಽನಲೋ (ಗೀ. ೭-೪, ೫), ೮೭
ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ (ಶ್ವೇ.೧-೧೨), ೭೯, ೧೦೪, ೧೦೮
ಭೋಕ್ತಾರಂ ಯಜ್ಞತಪಸಾಂ (ಗೀ.೫-೨೯), ೧೭೩
ಮನೋಮಯಃ ಪ್ರಾಣಶರೀರೋ (ಛಾಂ.೩-೧೪-೨), ೧೮೩
ಮಯಾ ತತಮಿದಂ ಸರ್ವಂ (ಗೀ.೯-೪-೫), ೯೯
ಮಯಾಧ್ಯಕ್ಷೇಣ ಪ್ರಕೃತಿಃ (ಗೀ.೯-೧೦), ೮೭
ಮಯಿ ಸರ್ವಾಣಿ ಕರ್ಮಾಣಿ (ಗೀ.೩-೩೦), ೧೭೮
ಮಹಾನ್ ಪ್ರಭುರ್ವೈ (ಶ್ವೇ.೩-೧೨), ೧೩೦
ಮಾಯಾಂ ತು ಪ್ರಕೃತಿಂ ವಿದ್ಯಾತ್ (ಶ್ವೇ.೪-೧೦), ೮೭
ಮಾಹಾರಜನಂ ವಾಸಃ (ಬೃ.೨-೩-೬), ೧೮೩

ಮಾಂ ಚ ಯೋಽವ್ಯಭಿಚಾರೇಣ
(ಗೀ.೧೪-೨೬), ೨೨೨
ಮೂರ್ತಂ ಬ್ರಹ್ಮ ಮಹಾಭಾಗ
(ವಿ.ಪು.೧-೨೨-೬೩), ೧೯೬
ಯ ಆತ್ಮನಿ ತಿಷ್ಠನ್ನಾತ್ಮನೋ
(ಬೃ.ಮಾ.೩-೭-೩೦), ೩, ೨೦, ೭೯
ಯ ಏತದ್ವಿದುರಮೃತಾಸ್ತೇ (ಶ್ವೇ.೩-೧೦),೧೩೦
ಯ ಏನಂ ವಿದುರಮೃತಾಸ್ತೇ (ತೈ.ನಾ.೩), ೧೧೬
ಯ ಏಷೋಽನ್ತರಾದಿತ್ಯೇ
(ಛಾಂ.೧-೬-೬, ೭), ೧೮೨
ಯಃ ಪೃಥಿವೀಮನ್ತರೇ (ಸು.೭-೧), ೭೯
ಯಃ ಪೃಥಿವ್ಯಾಂ ತಿಷ್ಠನ್ (ಬೃ.೩-೭-೩), ೭೯
ಯಜ ದೇವಪೂಜಾಯಾಮ್ (ಧಾ.ಪಾ.), ೧೭೪
ಯಜ್ಜ್ಞೈಸ್ತ್ವಮಿಜ್ಯಸೇ
(ವಿ.ಪು.೫-೨೦-೯೭), ೧೭೩
ಯತೋ ವಾ ಇಮಾನಿ (ತೈ.೩-೧) ೧೨೪
ಯತ್ಕಿಞ್ಚಿತ್ಸ್ತ್ರಜ್ಯತೇ (ವಿ.ಪು.೧-೨೨-೩೮), ೮೦
ಯತ್ರರ್ಷಯಃ ಪ್ರಥಮಜಾ
(ತೈ.ಸಂ.೪-೭-೧೩-೨), ೧೯೦
ಯತ್ರ ತ್ವಸ್ಯ ಸರ್ವಮ್ (ಬೃ.೪-೫-೧೫), ೧೦೩
ಯತ್ರ ಪೂರ್ವೇ ಸಾಧ್ಯಾಃ
(ತೈ.ಆ.೩-೧೨-೧೮), ೧೯೦
ಯಥಾಭೂತವಾದಿ ಹಿ ಶಾಸ್ತ್ರಮ್
(ದ್ರ.ಭಾ.), ೨೦೩
ಯಥಾ ಸೋಮ್ಯೈಕೇನ (ಛಾಂ.೬-೧-೪), ೧೫
ಯದಾಗ್ನೇಯೋಽಷ್ಟಾಕಪಾಲಃ
(ತೈ.ಸಂ.೨-೫-೩-೨), ೧೮೩
ಯದಾ ತಮಸ್ತನ್ನ (ಶ್ವೇ.೪-೧೮), ೧೨೪
ಯದೇಕಮವ್ಯಕ್ತಮನನ್ತರೂಪಂ
(ತೈ.ನಾ.೧), ೧೮೩
ಯದ್ಯಪಿ ಸಚ್ಚಿತ್ತೋ (ದ್ರ.ಭಾ.) ೧೧೦
ಯದ್ಯಪ್ಯವದಾನಸ್ತುತಿಃ (ದ್ರ.ಭಾ.) ೧೫೮
ಯಮನ್ತಃ ಸಮುದ್ರೇ (ತೈ.ನಾ.) ೧೨೫
ಯಮೇವೈಷ ವೃಣುತೇ (ಮುಂ.೩-೨-೩) ೨೨೨
ಯಸ್ಮಾತ್ಪರಂ ನಾಪರಮಸ್ತಿ...
(ಶ್ವೇ.೩-೯), ೧೨೪, ೧೩೦
ಯಸ್ಮಿನ್ ಕಲ್ಪೇಷು ಯತ್ಪ್ರೋಕ್ತಂ
(ಮಾ.ಪು.೨೯೦-೧೫), ೧೨೧
ಯಸ್ಯ ಪೃಥಿವೀ ಶರೀರಮ್ (ಸು.೭), ೧೦೪
ಯಸ್ಯಾತ್ಮಾ ಶರೀರಂ
(ಬೃ.ಮಾ.೩-೭-೩೦), ೧೭, ೧೦೪
ಯಸ್ಯಾವ್ಯಕ್ತಂ ಶರೀರಮ್ (ಸು.೭) ೧೦೪
ಯಃ ಸರ್ವಜ್ಞಃ ಸರ್ವವಿತ್ (ಮುಂ.೧-೧-೯, ೨-೨-೬), ೨೬, ೧೦೩, ೨೦೪
ಯಾವದಾತ್ಮಭಾವಿತ್ವಾಚ್ಚ
(ವೇ.ಸೂ.೨-೩-೩೦), ೨೬
ಯಾವಾನ್ವಾ ಅಯಮಾಕಾಶಃ
(ಛಾಂ.೮-೧-೩), ೧೩೫
ಯಾ ವೇದಬಾಹ್ಯಾಃ ಸ್ಮೃತಯಃ
(ಮನು.೧೨-೯೫), ೧೨೦
ಯುಕ್ತಂ ತದ್ಗುಣಕೋಪಾಸನಮ್ (ವಾಕ್ಯ.) ೧೧೦
ಯೇ ತ್ವೇತದಭ್ಯಸೂಯನ್ತೋ
(ಗೀ.೩-೩೨), ೧೭೮
ಯೇ ಮೇ ಮತಮಿದಂ(ಗೀ.೩-೩೧), ೧೭೮
ಯೇನಾಶ್ರುತಂ ಶ್ರುತಂ (ಛಾಂ.೬-೧-೩), ೩೬
ಯೇ ಯಜನ್ತಿ ಪಿತೄನ್ (?), ೯೪
ಯೈಃ ಸ್ವಧರ್ಮಪರೈರ್ನಾರ್ಥ
(ವಿ.ಪು.೫-೩೦-೧೬), ೧೭೩
ಯೋ ಅಸ್ಯಾಧ್ಯಕ್ಷಃ ಪರಮೇ
(ಋಗ್ವೇ.ಸಂ.೧೦-೧೧,೧೨೯), ೧೮೩, ೧೮೮
ಯೋಽಕ್ಷರಮನ್ತರೇ (ಸು.೭-೧), ೭೯
ಯೋ ಬ್ರಹ್ಮಾಣಂ ವಿದಧಾತಿ
(ಶ್ವೇ.೬-೧೮), ೧೨೧
ಯೋ ಮಾಮಜಮನಾದಿಂ ಚ
(ಗೀ.೧೦-೩), ೪೯
ಯೋ ಮೃತ್ಯುಮನ್ತರೇ (ಸು.೭-೧), ೭೯
ಯೋ ಯೋ ಯಾಂ ಯಾಂ
(ಗೀ. ೭-೨೧, ೨೨), ೧೭೩
ಯೋ ವೇದ ನಿಹಿತಂ (ತೈ.೨-೧), ೧೮೩, ೧೮೮
ರಸೋ ವೈ ಸಃ (ತೈ.೨-೭), ೨೧೫
ರೂಪಂ ವಾಽತೀನ್ದ್ರಿಯಂ (ವಾಕ್ಯ.) ೨೦೧
ವರ್ಣಾಶ್ರಮಾಚಾರವತಾ
(ವಿ.ಪು.೩-೮-೯), ೧೧೭
ವಾಚಾರಮ್ಭಣಂ ವಿಕಾರೋ
(ಛಾಂ.೬-೧-೪), ೩೫
ವಾಯವ್ಯಂ ಶ್ವೇತಮಾಲಭೇತ
(ತೈ.ಸಂ.೨-೧-೧), ೧೭೭

ವಿಜ್ಞಾತಾರಮರೇ ಕೇನ (ಬೃ.೨-೪-೧೪), ೨೬
ವಿಜ್ಞಾನಮಾನನ್ದಮ್ (ಬೃ.೩-೯-೨೮-೭), ೧೧, ೧೦೩
ವಿದ್ಯಾಂ ಚಾವಿದ್ಯಾಂ ಚ (ಈ.೧೧), ೧೧೬
ವಿದ್ಯಾವಿನಯಸಂಪನ್ನೇ (ಗೀ.೫-೧೮), ೯೭
ವಿವೇಶ ವೈಷ್ಣವಂ ಧಾಮ (ರಾ.ಉತ್ತರ ೧೧೦-೧೩), ೧೯೫
ವಿಶ್ವತಃ ಪರಮಂ ನಿತ್ಯಂ (ತೈ.ನಾ.೧೩), ೧೯೯
ವಿಷ್ಟಭ್ಯಾಹಮಿದಂ ಕೃತ್ಸ್ನಮ್ (ಗೀ.೧೦-೪೨), ೯೯
ವಿಷ್ಣುರಾತ್ಮಾ ಭಗವತಃ (ಮಹಾ.ಕರ್ಣ. ೨೫-೫೦), ೧೩೯
ವಿಷ್ಣೋಃ ಪರಮಮ್ (ಸು.೬), ೧೮೮
ವಿಷ್ಣೋ ಸಕಾಶಾದುದ್ಭೂತಂ (ವಿ.ಪು.೧-೧-೩೧), ೧೪೨, ೧೪೩
ವಿಷ್ಣ್ವಾಖ್ಯಂ ಪರಮಂ (ವಿ.ಪು.೧-೧-೩೧), ೧೪೨, ೧೪೩
ವೇದವಿತ್ಪರಪ್ರೋಕ್ತ (?), ೧೨೪
ವೇದಾಹಮೇತಂ ಪುರುಷಂ (ತೈ.ಆ.೩-೩-೩೮), ೧೮೨, ೧೯೦
ವೇದೈಶ್ಚ ಸರ್ವೈರಹಮೇವ (ಗೀ.೧೫-೧೫), ೯೩
ವೈಷಮ್ಯನೈರ್ಘೃಣ್ಯೇ ನ (ವೇ.ಸೂ.೨-೧-೩೪), ೮೭
ವ್ಯಕ್ತಮೇಷ ಮಹಾಯೋಗೀ (ರಾ.ಯುದ್ಧ. ೧೧೪-೧೪), ೧೯೫
ವ್ಯಕ್ತಂ ವಿಷ್ಣುಸ್ತಥಾವ್ಯಕ್ತಂ (ವಿ.ಪು.೧-೨-೧೮). ೮೭
ಶಕ್ತಯಃ ಸರ್ವಭಾವಾನಾಂ (ವಿ.ಪು.೧-೩-೨, ೩), ೧೦೦
ಶರಾ ನಾನಾವಿಧಾಶ್ಚಾಪಿ (ರಾ.ಉತ್ತರ.೧೦೯-೭), ೧೯೫
ಶಾಶ್ವತಂ ಶಿವಮಚ್ಯುತಮ್ (ತೈ.ನಾ.೧೩), ೧೩೦
ಶಾಸ್ತ್ರದೃಷ್ಟ್ಯಾ ತೂಪದೇಶೋ (ವೇ.ಸೂ.೧-೧-೩೦), ೧೩೩, ೧೩೯
ಶುದ್ಧೇ ಮಹಾವಿಭೂತ್ಯಾಖ್ಯೇ (ವಿ.ಪು. ೬-೫-೭), ೪೯
ಸ ಈಶ್ವರೋ ವ್ಯಷ್ಟಿಸಮಷ್ಟಿ (ವಿ.ಪು.೬-೫-೭೨), ೧೪೩
ಸ ಏವ ಕ್ಷೋಭಕೋ (ವಿ.ಪು.೧-೨-೩೧), ೮೮
ಸ ಏವ ಸರ್ವಭೂತಾತ್ಮಾ (ವಿ.ಪು.೧-೨-೬೯), ೧೪೭
ಸ ಏವ ಸೃಜ್ಯಃ (ವಿ.ಪು.೧-೨-೭೦), ೧೪೭
ಸ ಏಷ ಸರ್ವೇಭ್ಯಃ (ಛಾಂ. ೧-೬-೭), ೧೯೯
ಸ ಏಷ ಸರ್ವೇಷಾಂ (ಛಾಂ. ೧-೬-೮ರ ಅರ್ಥ) ೧೯೮
ಸಂಸಾರತಾಪಾನಖಿಲಾನ್ (ವಿ.ಪು.೬-೭-೬೨), ೧೯೦
ಸಂಕೀರ್ಣಃ ಸಾತ್ತ್ವಿಕಾಶ್ಚೈವ (ಮಾ.ಪು.೨೯೦-೧೩), ೧೨೧
ಸಂಕೀರ್ಣೇಷು ಸರಸ್ವತ್ಯಾಃ (ಮಾ.ಪು.೨೯೦-೧೪). ೧೨೧
ಸಂಜ್ಞಾಯತೇ ಯೇನ(ವಿ.ಪು.೬-೫-೮೭), ೧೪೪
ಸತ್ತ್ವಾತ್ಸಂಜಾಯತೇ ಜ್ಞಾನಂ (ಗೀ.೧೪-೧೭), ೧೨೨
ಸತ್ಯಂ ಚಾನೃತಂ ಚ (ತೈ.೨-೬), ೭೯
ಸತ್ಯಂ ಜ್ಞಾನಮನನ್ತಮ್ (ತೈ.೨-೧), ೧೦, ೪೪, ೧೯೦, ೨೦೪, ೨೨೦
ಸತ್ಯಕಾಮಃ (ಛಾಂ.೮-೧-೫), ೧೯೩
ಸತ್ಯಸಂಕಲ್ಪಃ (ಛಾಂ.೮-೧-೫), ೧೯೩, ೧೯೪, ೧೯೯
ಸದಾ ಪಶ್ಯನ್ತಿ ಸೂರಯಃ (ಋ.೧-೫-೨೨-೨೦, ಸು.೬), ೧೮೩, ೧೮೪, ೧೯೩, ೨೦೩
ಸದೇವ ಸೋಮ್ಯೇದಮಗ್ರ (ಛಾಂ.೬-೨-೧), ೧೦, ೧೬, ೩೮, ೧೨೫, ೧೪೦, ೧೯೩
ಸನ್ಮೂಲಾಃ ಸೋಮ್ಯೇಮಾಃ (ಛಾಂ.೬-೮-೪), ೯, ೧೯
ಸ ಬ್ರಹ್ಮಾ ಸ ಶಿವಃ (ತೈ.ನಾ.೧೩), ೧೨೫
ಸಮಸ್ತಹೇಯರಹಿತಂ (ವಿ.ಪು.೧-೨೨-೫೩), ೧೮೮, ೧೮೯
ಸಮಸ್ತಾಃ ಶಕ್ತಯಶ್ಚೈತಾಃ (ವಿ.ಪು.೬-೭-೭೦), ೧೯೬
ಸ ಯ ಏಷೋಽನ್ತರ್ಹೃದಯ (ತೈ.೧-೬), ೧೮೨
ಸ ಯೋ ಹ ವೈ ತತ್ಪರಮಂ (ಮುಂ.೩-೨-೯), ೧೧೬
ಸರ್ಗಸ್ಥಿತ್ಯನ್ತಕಾಲೇಷು (ವಿ.ಪು.೧-೨೨-೪೧), ೧೮೯

ಸರ್ವಕರ್ಮಾಣ್ಯಪಿ ಸದಾ (ಗೀ.೧೮-೫೬), ೧೭೯
ಸರ್ವಂ ಖಲ್ವಿದಂ ಬ್ರಹ್ಮ
(ಛಾಂ.೩-೧೪-೧), ೧೦೩, ೨೧೧
ಸರ್ವಂ ಪರವಶಂ ದುಃಖಂ (ಮನು.೪-೧೬೦), ೨೧೮, ೨೨೧
ಸರ್ವಗತ್ವಾದನನ್ತಸ್ಯ (ವಿ.ಪು.೧-೧೯,೮೫),೧೩೯
ಸರ್ವತ್ರಾಸೌ ಸಮಸ್ತಂ ಚ
(ವಿ.ಪು.೧-೨-೧೨), ೧೪೩
ಸರ್ವಸ್ಯ ಚಾಹಂ ಹೃದಿ (ಗೀ.೧೫-೧೫), ೮೦
ಸರ್ವಸ್ಯ ವಶೀ ಸರ್ವಸ್ಯೇಶಾನಃ
(ಬೃ.೪-೪-೨೨), ೪೬, ೧೦೪, ೧೪೦, ೧೬೭, ೧೯೯
ಸರ್ವಾಣಿ ರೂಪಾಣಿ (ತೈ.ಆ.೩-೧೨), ೧೦೩
ಸರ್ವಾನನಶಿರೋಗ್ರೀವಃ (ಶ್ವೇ.೩-೧೧), ೧೨೪
ಸರ್ವೇ ನಿಮೇಷಾ ಜಜ್ಞಿರೇ (ತೈ.ನಾ.೨), ೧೦೩, ೧೪೦, ೧೮೩
ಸರ್ವೇ ವೇದಾ ಯತ್ಪದಮ್
(ಕಾ.೧-೨-೧೫), ೯೩
ಸರ್ವೇ ವೇದಾ ಯತ್ಕೈಕಂ (ತೈ.ಆ.೩-೧೧), ೯೩
ಸರ್ವೇಷಾಂ ತು ಸ ನಾಮಾನಿ
(ಮನು.೧-೨೧), ೨೩
ಸರ್ವೈಶ್ವರ್ಯಸಂಪನ್ನಃ (ಆ.ಶಿಖಾ.೩), ೧೨೯
ಸ ಸರ್ವಭೂತಪ್ರಕೃತಿಮ್
(ವಿ.ಪು.೬-೫-೮೩.... ೮೭), ೧೪೩
ಸಹಸ್ರಶೀರ್ಷಂ ದೇವಂ (ತೈ.ನಾ.೧೩), ೧೨೫, ೧೩೩
ಸಹೈವ ಸನ್ತಂ (ತೈ.ಆ.೩-೧೧), ೯೩
ಸ ಹ್ಯಾಶ್ರಮ್ಯೈಃ ಸದೋಪಾಸ್ಯಃ (?) ೨೨೧
ಸಾತ್ತ್ವಿಕೇಷ್ವಥ ಕಲ್ಪೇಷು
(ಮಾ.ಪು.೨೯೦-೧೬), ೧೨೧
ಸಾಮಾನ್ಯಾತ್ತು (ವೇ.ಸೂ.೩-೨-೩೧), ೧೫೦
ಸಿಸೃಕ್ಷುರ್ವಿವಿಧಾಃ (ಮನು.೧-೮), ೧೫೦
ಸೂರ್ಯಾಚನ್ದ್ರಮಸೌ ಧಾತಾ
(ಋ.೧೦-೧೨-೧೯೦-೩), ೨೩
ಸೃಷ್ಟಿಸ್ಥಿತ್ಯನ್ತಕರಣೀಮ್ (ವಿ.ಪು.೧-೨-೬೬),೧೪೭
ಸೇವಾ ಶ್ವವೃತ್ತಿರಾಖ್ಯಾತಾ
(ಮನು.೪-೬). ೨೧೮, ೨೨೧
ಸೋಽಕಾಮಯತ (ತೈ.೨-೬), ೨೧೩
ಸೋಽನ್ತರಾದನ್ತರಂ (ಆ.ಶಿರ.೧), ೧೩೯
ಸೋಽಹಮಿಚ್ಛಾಮಿ ಧರ್ಮಜ್ಞ
(ವಿ.ಪು.೧-೧-೪, ೫), ೧೪೩
ಸ್ತಬ್ಧೋಽಸ್ಯುತ ತಮಾದೇಶಮ್
(ಛಾಂ.೬-೧-೩), ೧೨
ಸ್ಥಾನವಿಶೇಷಾತ್ಖಕಾಶಾದಿವತ್
(ವೇ.ಸೂ.೩-೨-೩೩), ೧೫೦
ಸ್ಯಾದ್ಯೂಪಂ ಕೃತಕಂ (ವಾಕ್ಯ) ೨೦೧
ಸ್ರಷ್ಟಾ ಸೃಜತಿ ಚಾಽಽತ್ಮಾನಂ
(ವಿ.ಪು.೧-೨-೬೭), ೧೪೭
ಸ್ವಕರ್ಮನಿರತಃ ಸಿದ್ಧಿಂ
(ಗೀ.೧೮-೪೫, ೪೬), ೧೧೭
ಸ್ವರ್ಗಕಾಮೋ ಯಜೇತ (?) ೧೬೩, ೧೬೯
ಹನ್ತಾಹಮಿಮಾಸ್ತಿಸ್ರಃ (ಛಾಂ.೬-೩-೨), ೧೭
ಹಿರಣ್ಮಯಃ ಪುರುಷೋ (ವಾಕ್ಯ.) ೨೦೧
ಹಿರಣ್ಮಯ ಇತಿ (ವಾಕ್ಯ.) ೨೦೧
ಹಿರಣ್ಯನಿಧಿಮಪವರಕೇ (?) ೧೭೭
ಹ್ರೀಶ್ಚ ತೇ ಲಕ್ಷ್ಮೀಶ್ಚ
(ತೈ.ಆ. ೩-೧೩), ೧೨೫, ೧೮೩, ೨೦೩

ಕೇವಲ ಶ್ರುತಿವಾಕ್ಯಗಳಿಂದ ಮಾತ್ರವಲ್ಲದೆ, ತರ್ಕಬದ್ಧವಾದ ರೀತಿಯಲ್ಲಿ ವಿಚಾರಮಂಡನೆಯಿಂದ ತಮ್ಮ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳುವ ಮಾರ್ಗ ಶ್ರೀರಾಮಾನುಜರದು. ವಿಪುಲವಾದ ಗ್ರಂಥರಾಶಿಯನ್ನು ಬೆಳೆಸದಿದ್ದರೂ, ನವಮಣಿಗಳಂತೆ ಶೋಭಿಸುವ ತಮ್ಮ ಒಂಭತ್ತು ಗ್ರಂಥಗಳಿಂದ ಅವರು ಹಿರಿಯ ಆಚಾರ್ಯಸ್ಥಾನವನ್ನು ಅಲಂಕರಿಸಿದ್ದಾರೆ. ಪ್ರೌಢವಾಗಿರುವ ಈ ಗ್ರಂಥಗಳಲ್ಲಿ **ಶ್ರೀಭಾಷ್ಯ** ಮುಖ್ಯವಾದದ್ದು. ಇದರ ಹೊರ ರೂಪರೇಖೆಗಳನ್ನು ಹೇಳುವದು **'ವೇದಾರ್ಥಸಂಗ್ರಹ'** ; **'ವೇದಾಂತಸಾರ'**, **'ವೇದಾಂತದೀಪ'**ಗಳು ಸಂಕ್ಷಿಪ್ತವಾಗಿ ಭಾಷ್ಯದ ವಿಷಯವನ್ನು ನಿರೂಪಿಸುತ್ತವೆ. 'ಶ್ರೀಭಾಷ್ಯ'ಕ್ಕೆ ಈ ಮೂರೂ ಗ್ರಂಥಗಳು ಪೂರಕಗಳು ; ಈ ಮೂರರ ಜೊತೆ ಶ್ರೀಭಾಷ್ಯವೂ ಸೇರಿದಂತೆ ನಾಲ್ಕೂ ಗ್ರಂಥಗಳು ಉಪನಿಷತ್ತುಗಳನ್ನು ವಿವರಿಸುತ್ತವೆ. ಇವುಗಳೊಡನೆ ಗೀತಾಭಾಷ್ಯ., ಗದ್ಯತ್ರಯಗಳು (ಮೂರು) ನಿತ್ಯಗ್ರಂಥ, ಈ ಐದು ಸೇರಿದಂತೆ ಒಂಭತ್ತು ಗ್ರಂಥಗಳೇ ಆ ನವಮಣಿಗಳು.

ಕೃಪೆ : ಶ್ರೀಶ್ರೀರಂಗಪ್ರಿಯಸ್ವಾಮಿಜಿ.

ಆಧ್ಯಾತ್ಮಪ್ರಕಾಶ ಕಾರ್ಯಾಲಯದಿಂದ ಪ್ರಕಟಿತವಾದ ಶ್ರೀರಾಮಾನುಜಾಚಾರ್ಯರವರ ಗ್ರಂಥಗಳು

ಶ್ರೀಭಾಷ್ಯಮ್ (ಜಿಜ್ಞಾಸಾಧಿಕರಣ, 'ವೇದಾಂತದೀಪ' ಸಹಿತ)

ಶ್ರೀರಾಮಾನುಜಾಚಾರ್ಯರವರು ಅನುಗ್ರಹಿಸಿರುವ ಬ್ರಹ್ಮಸೂತ್ರಭಾಷ್ಯದ ಮೊದಲನೆಯ ಸೂತ್ರ, ಭಾಷ್ಯ, ಅನುವಾದ, ಟಿಪ್ಪಣಿಗಳ ಸಮೇತವಾಗಿದೆ, ಬಹಳ ಮಟ್ಟಿಗೆ ವಿಶಿಷ್ಟಾದ್ವೈತ ಸಿದ್ಧಾಂತವನ್ನು ವರಿಚಯಿಸುತ್ತದೆ. ಶ್ರೀಭಾಷ್ಯದ ಸಾರವನ್ನೆಲ್ಲ ಇದೊಂದೇ ಅಧಿಕರಣದಲ್ಲಿ ಸಂಗ್ರಹಿಸಿದೆ. **ಒಂದನೆಯ ಮುದ್ರಣ 1970, ಪು.ಡೆಮ್ಮಿ 398**

ವೇದಾರ್ಥ ಸಂಗ್ರಹ .

ಒಟ್ಟು ದಶೋಪನಿಷತ್ತುಗಳ ತಾತ್ಪರ್ಯ, ಟಿಪ್ಪಣಿಯ ಭಾಗದ ಗ್ರಂಥದಲ್ಲಿ ಶ್ರೀ ಸುದರ್ಶನ ಸೂರಿಗಳ 'ತಾತ್ಪರ್ಯದೀಪಿಕಾ' ವ್ಯಾಖ್ಯಾನದ ಬಹಳ ವಿಷಯಗಳನ್ನು ಸಂಗ್ರಹಿಸಿದೆ.

ಇದು ಈಗ ನಿಮ್ಮ ಕೈಯಲ್ಲಿದೆ. **ಎರಡನೆಯ ಮುದ್ರಣ 2005, ಪು. ಡೆಮ್ಮಿ 260**

ವೇದಾಂತಸಾರ :

ಬ್ರಹ್ಮಸೂತ್ರ ವ್ಯಾಖ್ಯಾನ, 1ನೇ ಅಧ್ಯಾಯ, 1-2 ಪಾದಗಳು ಮಾತ್ರ. ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿದ್ದಂತೆ ಬ್ರಹ್ಮಸೂತ್ರಗಳ ಅರ್ಥವನ್ನು ತಿಳಿಯಲು ಉಪಯುಕ್ತವಾಗಿದೆ.

ಎರಡನೆಯ ಮುದ್ರಣ 2001, ಪು. 84.

ಶ್ರೀಶ್ರೀಗಳವರ ವಿದ್ವತ್‌ಪೂರ್ಣವಾದ ಅನುವಾದ, ಪೀಠಿಕೆಗಳು ಈ ಎಲ್ಲ ಗ್ರಂಥಗಳ ಶೋಭೆಯನ್ನು ಹೆಚ್ಚಿಸಿವೆ.

ಪ್ರ.ಕಾ. ಹೊಳೆನರಸೀಪುರ - 573211 ಅ.ಪ್ರ.ಕಾ. ಬೆಂಗಳೂರು - 560 028
ದೂ. 08175-272820 ದೂ. [illegible]

ಸಂಸ್ಥಾಪಕರ ಸ್ಮರಣೆ

ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯ

ಸರ್ವದಾ ಸ್ಮರಣೀಯರಾದ ಶ್ರೀಶಂಕರಭಗವತ್ಪಾದರದು. ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರು -ವೈ. ಸುಬ್ಬರಾಯರು, ಜನನ 5-1-1880) ಶ್ರೀಶಂಕರರ ವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯ ಭಾಷ್ಯಗಳಿಗೆ ಹತ್ತಿದ್ದ ಕಳೆಯನ್ನು ಮುತ್ತಿದ್ದ ಧೂಳನ್ನು ತೊಡೆದು, ಶಾಂಕರವೇದಾಂತದ ನೈಜ ತಿರುಳನ್ನು ಕಂಡುಕೊಂಡರು. ಶಾಂಕರ ವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಪ್ರತಿಪಾದಕರಾದರು, 'ಅಭಿನವ ಶಂಕರ' ರಾದರು.

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96 ನೇ ವಯಸ್ಸಿನವರೆಗೂ ವೇದಾಂತ ಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು, 'ಪುರುಷ ಸರಸ್ವತಿ' ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರ ಜಿಜ್ಞಾಸುಗಳಿಗೆ ಒಂದು ವರವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರ ಸಂಪರ್ಕ, ಅಧ್ಯಾತ್ಮ ಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀ ಗೋಂದಾವಲಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳು ಶ್ರೀ ಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀ ಮಹಾಸ್ವಾಮಿಗಳವರಿಂದ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾ ಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

1937 ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರ ವೇದಾಂತಕ್ಕೆ ಅರ್ಪಿಸಿಕೊಂಡರು. 1948 ರಲ್ಲಿ ಸಂನ್ಯಾಸ ಸ್ವೀಕಾರ ಮಾಡಿದರು. ಶುದ್ಧ ತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾ ಪ್ರಸಾರಕೇಂದ್ರವಾಗಿದೆ.

ಪೂಜ್ಯರು 1975 ನೇ ಆಗಸ್ಟ್ 5 ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೇನರಸೀಪುರದಲ್ಲಿದೆ. ಇಂದಿಗೂ ಚೈತನ್ಯ ಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥

ಶ್ರೀಗಳವರಿಗೆ ಹೃತ್ಪೂರ್ವಕ ನಮನಗಳು